ಕನ್ನಡಿಗರ ಜ್ಞಾನದೀಪಿಕಾ

ಗ್ರಂಥಮಾಲಾ—ಒಂದು

(ಶ್ರೀ ನವಭಾರತ ಆಶ್ರಮ ಗೌರೀಬಿದನೂರು - ಆಶ್ರಯದಲ್ಲಿ)

# ಶ್ರೇಷ್ಠ ಧರ್ಮಗಳ ಪವಿತ್ರ ಗ್ರಂಥಗಳು ಮತ್ತು ಆಧ್ಯಾತ್ಮ-ನೈತಿಕ ಉಪದೇಶಗಳು



ಲೇಖಕರು ಮತ್ತು ಪ್ರಕಾಶಕರು :

**ಎಂ. ವಿ. ನಾರಾಯಣ ಅಯ್ಯಂಗಾರ್**

ಮೈಸೂರು ವಿದ್ಯಾಭ್ಯಾಸ ಇಲಾಖೆಯ ನಿವೃತ್ತ ಡೆಪ್ಯುಟಿ ಡೈರೆಕ್ಟರ್

ಮತ್ತು ಅಧ್ಯಕ್ಷರು

ಶ್ರೀ ನವಭಾರತ ಆಶ್ರಮ ಗೌರೀಬಿದನೂರು

ಶ್ರೀ ಜನಾರ್ದನ ಪ್ರೆಸ್, ಬೆಂಗಳೂರು—2.

**ಕನ್ನಡಿಗರ ಜ್ಞಾನದೀಪಿಕಾ**

**ಗ್ರಂಥಮಾಲಾ—ಒಂದು**

**(ಶ್ರೀ ನವಭಾರತ ಆಶ್ರಮ ಗೌರೀಬಿದನೂರು - ಆಶ್ರಯದಲ್ಲಿ)**

# ಶ್ರೇಷ್ಠಧರ್ಮಗಳ ಪವಿತ್ರ ಗ್ರಂಥಗಳು ಮತ್ತು ಅಧ್ಯಾತ್ಮ-ನೈತಿಕ ಉಪದೇಶಗಳು

ಪುಷ್ಪ ಒಂದು—ಶಾಸ್ತ್ರೀಯ ಹಿಂದೂಮತದ ಸಂದೇಶಗಳು.
(ಮಾಲೆಗಳು : 3, 2, 4, 6, 7, 8—15)

ಪುಷ್ಪ ಎರಡು—ವೇದಗಳು ಮತ್ತು ಭಕ್ತರ ಭಗವದನುಭವ.
(ಮಾಲೆಗಳು : 5, 16, 9, 10, 11, 12)

ಪುಷ್ಪ ಮೂರು—ಮತಗ್ರಂಥಗಳ ಮಹತ್ವ—ಇಸ್ಲಾಂ ಮತ
ಮತ್ತು ಕ್ರೈಸ್ತ ಮತ.
(ಮಾಲೆಗಳು : 13, 14, 1, 17, 18, 19, 20)

ಲೇಖಕರು ಮತ್ತು ಪ್ರಕಾಶಕರು :

**ಎಂ. ಎ. ನಾರಾಯಣ ಐಯ್ಯಂಗಾರ್**

ಮೈಸೂರು ವಿದ್ಯಾಭ್ಯಾಸ ಇಲಾಖಾ ನಿವೃತ್ತ ಡೆಪ್ಯುಟಿ ಡೈರೆಕ್ಟರ್
ಮತ್ತು ಅಧ್ಯಕ್ಷರು
ಶ್ರೀ ನವಭಾರತ ಆಶ್ರಮ ಗೌರೀಬಿದನೂರು

ಮೊದಲನೆಯ ಮುದ್ರಣ: ೧೯೫೩

೫೦೦ ಪ್ರತಿಗಳು

ಇದರ ಸರ್ವ ಸ್ವಾಮ್ಯವೂ ಪ್ರಕಾಶಕರದು

ಈ ಪುಸ್ತಕದಲ್ಲಿ ಕೆಲವು ಮುದ್ರಣ ತಪ್ಪುಗಳಿವೆ ;
ಅವನ್ನು ತಿದ್ದಿಕೊಳ್ಳಬೇಕಾಗಿ ಪ್ರಾರ್ಥನೆ.

ಬೆಲೆ : ಒಂದು ರೂಪಾಯಿ ಹನ್ನೆರಡು ಆಣೆ
(ರೂ. 1-12-0)

ಮುದ್ರಕರು :
ಶ್ರೀ ಎಂ. ರಾಮರಾವ್
ಪ್ರೊಪ್ರೈಟರ್, ವಾಣೀವಿಲಾಸ ಪ್ರೆಸ್, ಸಿಟಿ ಮಾರ್ಕೆಟ್, ಬೆಂಗಳೂರು.

# An Appeal

## Sri Nava Bharat Asram, Gowribidanur.

The Heads of all Educational Institutions in the Mysore State are requested to kindly encourage the Spiritual and Moral Propagandic Work of the Asram by placing orders for (1) The Kannada Book "ಕ್ರೈಸ್ತ ಧರ್ಮಗಳ ಪವಿತ್ರ ಗ್ರಂಥಗಳ ಮತ್ತು ಆಧ್ಯಾತ್ಮ-ನೈತಿಕ ಉಪದೇಶಗಳು" containing all the twenty bulletins of "ಕನ್ನಡಿಗರ ಜ್ಞಾನ ದೀಪಿಕಾ" Published in the Year 1955-56–being encouraged by D.P.I'S. Memo No. P.B. 49-S2-5117-100/53-54 dated 7th May 1955 despatched by his office to all Heads of Educational Institutions and Educational Officers of the State (Price Re. 1—12—0—Postage extra) and (2) the Monthly Magazene "ಕನ್ನಡಿಗರ ಜ್ಞಾನ ದೀಪಿಕಾ ಮಾಸಪತ್ರಿಕೆ" which will be Published from the School Year June 1957 to May 1958 as per Mysore D.P.I.'s Memo No. T.3. 2112-37/56-57 dated 3rd August 1956 for the use of their Reading Rooms. (Annual Subscription Re. 1–8—0 including Postage.)

Memo No. T.3 2113-37/56-57 dated 3rd August 1957 of the Office of the Director of Public Instruction in Mysore Bangalore—issued to all Deputy-Directors and District Educational officers of the State.

"The Heads of all High and Middle Schools in the State are directed to Subscribe for the magazene "Kannadigara Gnana Dipika" which will be Published in 12 issues every year, for the Reading Rooms of their Institutions out of the Library and Reading Room Funds.

*Place of availability*—The Editor, Nava Bharat Asram Office: No. 2 B. Appajappa Agrahar, Chamarajpet Bangalore City.

*Subscription*—Re. 1—8—0 per annum for one copy and Rs. 3—12—0 per annum for three copies (including Postage).

(Sd.) *M. R. Ramaiah*, For Director.

*M. A. Narayana Iyengar*

Retired D D P I, President of the Asram and Editor of the Magazene.

# ಮುನ್ನುಡಿ

ಗೌರೀಬಿದನೂರು ಆಚಾರ್ಯ ಪ್ರೌಢಪಾಠಶಾಲೆಯ ವಿದ್ಯಾರ್ಥಿಗಳ ಅಧ್ಯಾತ್ಮ-ನೈತಿಕ ಶಿಕ್ಷಣಕ್ಕಾಗಿ ಕ್ರಿ. ಶ. 1951ನೇ ಇಸವಿಯಲ್ಲಿ ಪಾಠಶಾಲೆಗೆ ಒಂದು ಮೈಲಿ ದೂರದಲ್ಲಿರುವ ತೋಪಿನಲ್ಲಿ ಶ್ರೀ ನವಭಾರತ ಆಶ್ರಮವು ಸ್ಥಾಪಿಸಲ್ಪಟ್ಟಿತು. ಇತರ ಪಾಠಶಾಲೆಗಳಲ್ಲೂ ಹಳ್ಳಿಗಳಲ್ಲೂ ಕೂಡ ಅಧ್ಯಾತ್ಮ-ನೈತಿಕ ಶಿಕ್ಷಣ ಪ್ರಚಾರಕಾರ್ಯ ನಡೆಸಲು ಸಹಾಯ ಮಾಡುವುದಕ್ಕಾಗಿ, 1955ನೇ ಜುಲೈ ತಿಂಗಳಿಂದ 1956 ಜೂನ್ ತಿಂಗಳವರೆಗೆ ಒಟ್ಟು ಇಪ್ಪತ್ತು ಮಾಲೆಗಳನ್ನು ಈ ಆಶ್ರಮದ ಆಶ್ರಯದಲ್ಲಿ "ಕನ್ನಡಿಗರ ಜ್ಞಾನ ದೀಪಿಕಾ" ಎಂಬ ಶಿರೋನಾಮೆಯಲ್ಲಿ ನಾವು ಪ್ರಕಟಿಸಿದ್ದೇವೆ. ವಿದ್ಯಾಸಂಸ್ಥೆಗಳ, ವಯಸ್ಕರ ಶಿಕ್ಷಣಸಮಿತಿಯವರ ಮತ್ತು ಗ್ರಾಮಪಂಚಾಯತಿಗಳ ಪುಸ್ತಕಭಂಡಾರಗಳಲ್ಲಿ ಉಪಯೋಗಿಸಲು ಅನುಕೂಲವಾಗುವ ಹಾಗೆ ಈಗ ಈ ಇಪ್ಪತ್ತು ಮಾಲೆಗಳನ್ನು ಬೈಂಡ್ ಮಾಡಿಸಿ "**ಶ್ರೇಷ್ಠ ಧರ್ಮಗಳ ಪವಿತ್ರ ಗ್ರಂಥಗಳು ಮತ್ತು ಅಧ್ಯಾತ್ಮ-ನೈತಿಕ ಉಪದೇಶಗಳು**" ಎಂಬ ಗ್ರಂಥವನ್ನಾಗಿ ಪ್ರಕಟಿಸಿದ್ದೇವೆ. ಈ ಗ್ರಂಥದಲ್ಲಿ (೧) **ರಾಷ್ಟ್ರೀಯ ಹಿಂದೂಮತದ ಸಂದೇಶಗಳು.** (೨) **ವೇದಗಳು ಮತ್ತು ಭಕ್ತರ ಭಗವದನುಭವ** ಮತ್ತು (೩) "**ಪವಿತ್ರ ಗ್ರಂಥಗಳ ಮಹತ್ವ-ಇಸ್ಲಾಂಮತ ಮತ್ತು ಕ್ರೈಸ್ತಮತ**" ಎಂಬ ಮೂರು ಪುಸ್ತಕಗಳಿವೆ.

ಮೈಸೂರು ದೇಶದ ವಿದ್ಯಾಭ್ಯಾಸ ಇಲಾಖೆಯ ಡೈರೆಕ್ಟರವರು ತಮ್ಮ P.B. No. 49—82—3117—100/53-54 dated 7th may 1955 ಆಜ್ಞೆಯಲ್ಲಿ ಮೈಸೂರು ದೇಶದ ಹೈಸ್ಕೂಲು, ಮಿಡಲ್ ಸ್ಕೂಲು, ಟ್ರೈನಿಂಗ್ ಕಾಲೇಜು ಇವುಗಳ ಮುಖ್ಯೋಪಾಧ್ಯಾಯರುಗಳಿಗೂ ಮತ್ತು ಉಪಾಧ್ಯಾಯರ ಸಂಘಗಳ ಕಾರ್ಯದರ್ಶಿಗಳಿಗೂ ಗೌರೀಬಿದನೂರ ಶ್ರೀ ನವಭಾರತ ಆಶ್ರಮದ ಆಶ್ರಯದಲ್ಲಿ 1955ನೇ ಜುಲೈಯಿಂದ 1956ನೇ ಜೂನ್‌ವರೆಗೆ ಪ್ರಕಟವಾಗುವ "ಕನ್ನಡಿಗರ ಜ್ಞಾನದೀಪಿಕೆ"ಯ ಇಪ್ಪತ್ತು ಮಾಲೆಗಳನ್ನೂ ತಮ್ಮ ರೀಡಿಂಗ್ ರೂಮುಗಳಿಗೆ ಎರಡೂ ಕಾಲು ರೂಪಾಯಿ ಬೆಲೆ ಕೊಟ್ಟು ತರಿಸಿಕೊಳ್ಳಬಹುದೆಂದು ಅಪ್ಪಣೆ ಮಾಡಿರುವುದಕ್ಕಾಗಿ ನಾವು ನಮ್ಮ ಕೃತಜ್ಞತೆಯನ್ನು ಅವರಿಗೆ ಸಮರ್ಪಿಸುತ್ತೇವೆ. ಬೆಂಗಳೂರು ಓರಿಯಂಟಲ್ ಪವರ್ ಪ್ರೆಸ್ ಪ್ರೊಪ್ರೈಟರ್ ಆದ ಶ್ರೀ ಜಿ. ಶ್ರೀನಿವಾಸನ್‌ರವರು ಈ ಮಾಲೆಗಳನ್ನು ಅಚ್ಚು ಹಾಕಿಸಲು ನೂರು ರೂಪಾಯಿಗಳನ್ನು ಆಶ್ರಮಕ್ಕೆ ದಾನಮಾಡಿದ್ದಕ್ಕಾಗಿ ಅವರಿಗೂ ನಮ್ಮ ವಂದನೆಗಳು. ಈ ಪುಸ್ತಕದ ಹಸ್ತಪ್ರತಿಯನ್ನು ಓದಿ ಭಾಷೆಯನ್ನು ಪರಿಷ್ಕರಿಸಿದ ಮೌಂಟ್ ಕಾರ್ಮೆಲ್ ಕಾಲೇಜಿನ ಅಧ್ಯಾಪಕರಾದ ಶ್ರೀಮತಿ ಎಂ. ಎ. ಸಿಂಗಮ್ಮ ಎಂ.ಎ. ರವರಿಗೆ ನಮ್ಮ ಧನ್ಯವಾದಗಳು.

ಅಪ್ಪಾಜಪ್ಪ ಅಗ್ರಹಾರ
ಚಾಮರಾಜಪೇಟೆ, ಬೆಂಗಳೂರು
ಫೆಬ್ರವರಿ 1957

ಎಂ. ಎ. ನಾರಾಯಣ ಅಯ್ಯಂಗಾರ್
ಲೇಖಕರು, ಸಂಪಾದಕರು ಮತ್ತು ಪ್ರಕಾಶಕರು.

# ಪುಸ್ತಕ ಒಂದು-ರಾಷ್ಟ್ರೀಯ ಹಿಂದೂ ಮತದ ಸಂದೇಶಗಳು

ವಿಷಯ ಕ್ರಮ


| | | ಪುಟ |
|---|---|---|
| | **ಮಾಲೆ ಮೂರು—ರಾಷ್ಟ್ರೀಯ ಹಿಂದೂ ಮತವು ಆಧುನಿಕ ಭಾರತಕ್ಕೂ ಮತ್ತು ಲೋಕಕ್ಕೂ ಹೇಗೆ ಕಲ್ಯಾಣವನ್ನುಂಟುಮಾಡಿದೆ.** | |
| 1 | ರಾಷ್ಟ್ರೀಯ ಹಿಂದೂ ಮತವೆಂದರೇನು ? | 1-2 |
| 2 | ರಾಷ್ಟ್ರೀಯ ಹಿಂದೂ ಮತವು ಭಾರತೀಯ ಸಂಸ್ಕೃತಿಗೆ ಗೌರವವನ್ನು ತಂದಿದೆ. | 3-4 |
| 3 | ಹಿಂದೂ ಮತದ ಮೇಲೆ ಮಾಡಿರುವ ಆಕ್ಷೇಪಣೆಗಳು ನಿಜವಲ್ಲ. | 4-5-6 |
| 4 | ರಾಷ್ಟ್ರೀಯ ಹಿಂದೂ ಮತವು ಭಾರತ ಜನಾಂಗದಲ್ಲಿ ಒಗ್ಗಟ್ಟನ್ನುಂಟುಮಾಡಿದೆ. | 6-7 |
| 5 | ರಾಷ್ಟ್ರೀಯ ಹಿಂದೂ ಮತವು ಲೋಕಕ್ಕೆ ಕಲ್ಯಾಣವನ್ನುಂಟುಮಾಡಿದೆ. | 7-8 |
| | **ಮಾಲೆ ಎರಡು—ಮನುಷ್ಯನು ಜಗತ್ತನ್ನೂ ಭಗವಂತನನ್ನೂ ಹೇಗೆ ತಿಳಿಯಬಲ್ಲನು ? (ಪ್ರಮಾಣಗಳ ಸ್ವರೂಪ)** | |
| 6 | ಪ್ರತ್ಯಕ್ಷ ಪ್ರಮಾಣ. | 2-3 |
| 7 | ಅನುಮಾನ ಪ್ರಮಾಣ. | 3-4-5 |
| 8 | ಲೌಕಿಕ ಶಬ್ದ ಪ್ರಮಾಣ. | 5-6 |
| 9 | ವೈದಿಕ ಶಬ್ದ ಪ್ರಮಾಣ. | 6-7 |
| 10 | ಭಾರತೀಯರ ವೈದಿಕ ಪ್ರಮಾಣವಾದ ಮುಖ್ಯ ಪವಿತ್ರ ಗ್ರಂಥಗಳು. | 7-8 |
| | **ಮಾಲೆ ನಾಲ್ಕು—ಸಕಲ ಅಸತ್ ಪದಾರ್ಥಗಳಲ್ಲಿ ಸತ್‌ಸ್ವರೂಪವು ತುಂಬಿರುವುದು** | |
| 11 | ಅಸತ್-ಸತ್ ಎಂದರೇನು ? | 1-2-3 |
| 12 | ನಿರ್ಜೀವ ಪದಾರ್ಥಗಳಲ್ಲಿ ಸತ್-ಅಸತ್ ಯಾವುದು ? | 3-4 |
| 13 | ಸಜೀವ ಪದಾರ್ಥಗಳಲ್ಲಿ ಸತ್-ಅಸತ್ ಯಾವುದು ? | 5-6 |
| 14 | ಮನುಷ್ಯನ ಅಂತಃಕರಣದ ವೃತ್ತಿಗಳಲ್ಲಿ ಸತ್-ಅಸತ್ ಯಾವುದು ? | 6-7 |
| 15 | "ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್" ಎಂಬುದೇ ಋಷಿಗಳ ಕೊನೆಯ ತೀರ್ಮಾನ. | 7-8 |
| | **ಮಾಲೆ ಆರು—ಪುರಾತನ ಕಾಲದಿಂದ ಭಾರತೀಯರು ಅಂಗೀಕರಿಸಿರುವ ಪುರುಷಾರ್ಥಗಳು.** | |
| 16 | ಶಿಕ್ಷಣವನ್ನು ಪಡೆಯುವ ಬಾಲಕನು ಪ್ರಪಂಚವನ್ನು ಹೆಚ್ಚು ಹೆಚ್ಚಾಗಿ ತಿಳಿದು ಅನುಭವಿಸುವನು. | 1 |
| 17 | ಅರ್ಥ ಪುರುಷಾರ್ಥದ ಗುಣಾವಗುಣಗಳು. | 2 |
| 18 | ಕಾಮ ಪುರುಷಾರ್ಥದ ಗುಣಾವ ಗುಣಗಳು. | 3 |

19 ಧರ್ಮ ಪುರುಷಾರ್ಥದಲ್ಲಿ–ಕಾಮ್ಯಕರ್ಮ ಪುರುಷಾರ್ಥ. 4-5

20 ಧರ್ಮ ಪುರುಷಾರ್ಥದಲ್ಲಿ-ಲೋಕ ಕಲ್ಯಾಣ ಪುರುಷಾರ್ಥ. 5-6

21 ಧರ್ಮ ಪುರುಷಾರ್ಥಕ್ಕಿಂತ ಮೋಕ್ಷ ಪುರುಷಾರ್ಥವು ಮೇಲಾದದ್ದು. 6-7

22 ಮುಮುಕ್ಷುವಿನ ಪ್ರತಿಜ್ಞೆ ಮತ್ತು ಮನನ. 8

ಪಾಠ ಏಳು—ಪ್ರಾಚೀನ ಗುರುಕುಲ ಧ್ಯೇಯಗಳು; ಅವನ್ನು ಇಂದಿನ
ಶಿಕ್ಷಣದಲ್ಲಿ ಹೇಗೆ ತರುವುದು?

23 ಗುರುವೇ ಮುಖ್ಯ. 1-2

24 ವೃತ್ತಿ ಶಿಕ್ಷಣದ ಆವಶ್ಯಕತೆ. 2-3

25 ವಿದ್ಯಾರ್ಥಿಯು ಪರಿಪೂರ್ಣ ಜ್ಞಾನವನ್ನು ಪಡೆಯುತ್ತಿದ್ದನು. 3-4

26 ಅನುಭವಜ್ಞಾನಕ್ಕೆ ಹೆಚ್ಚು ಬೆಲೆಕೊಟ್ಟರು. 4-5

27 ಐದು ಅಂತಸ್ತಿನ ಗುರುಕುಲಗಳು. 5-6

28 ಒಂದು ಉಪನಿಷದ್ವಾಕ್ಯ. 6

29 ಗುರುಕುಲದ ಧ್ಯೇಯಗಳನ್ನು ಇಂದಿನ ಶಿಕ್ಷಣ ಕ್ರಮದಲ್ಲಿ
ಹೇಗೆ ತರಬಹುದು? 7-8

ಪಾಠ ಎಂಟು—ಸ್ವತಂತ್ರ ಭಾರತದಲ್ಲಿ ಬ್ರಹ್ಮಚರ್ಯ ಶಿಕ್ಷಣ ಅಗತ್ಯ.

30 ಪಂಡಿತ ಜವಹರಲಾಲ್ ನೆಹ್ರೂರವರು ನವಭಾರತದ
ಅಭ್ಯುದಯಕ್ಕೆ ಕೊಟ್ಟಿರುವ ಸಲಹೆಗಳು. 1-2-3

31 ವಿದ್ಯಾರ್ಥಿಗಳು ಯುವಕರು ಬ್ರಹ್ಮಚರ್ಯ ಶಿಕ್ಷಣವನ್ನು
ಪಡೆಯಲೇ ಬೇಕು. 4

32 ಬ್ರಹ್ಮಚರ್ಯವೆಂದರೇನು? 5-6

33 ಬ್ರಹ್ಮಚರ್ಯ ಶಿಕ್ಷಣದ ಅಂತಸ್ತುಗಳು. 6-7

34 ಶಾಲೆಗಳಲ್ಲಿ ಬ್ರಹ್ಮಚರ್ಯ ಶಿಕ್ಷಣವನ್ನು ಕೊಡಲು ಸಲಹೆಗಳು. 7-8

ಪಾಠ ಒಂಬತ್ತು—ಮನುಷ್ಯನೇ? ನೀನು ಅಮರನು; ಧೀರನಾಗಿ ಪವಿತ್ರ
ಜೀವನವನ್ನು ನಡೆಸು.

35 ಪಂಡಿತರು ಅಥವಾ ಜ್ಞಾನಿಗಳು ಯಾರು?
ಅರ್ಜುನನು ಜ್ಞಾನಿಯೇ? 1-2-3

36 "ನಾನು, ನೀನು, ಈ ರಾಜರುಗಳು" ಅವರ ನಿಜಸ್ವರೂಪವೇನು? 3-4

37 ಈ ಜನ್ಮದಲ್ಲಿ ದೇಹದಲ್ಲಿ ಅವಸ್ಥೆಗಳುಂಟಾಗುವ ಹಾಗೆ,
ಸತ್ತ ಮೇಲೆಯೂ ಪುನರ್ಜನ್ಮವುಂಟು. 5-6

38 ಜ್ಞಾನಿಯು ಧೀರನು ಎಂಬುದು ಏಕೆ ಮತ್ತು ಹೇಗೆ? 6-7

39 ಶೀತೋಷ್ಣ ಸುಖ ದುಃಖಗಳನ್ನು ಹೇಗೆ
ಮತ್ತು ಏಕೆ ಜಯಿಸಬೇಕು? 7-8

# ಶ್ರೀ ನವಭಾರತ ಆಶ್ರಮ
# ಗೌರಿಬಿದನೂರು

ವಿದ್ಯಾರ್ಥಿಗಳ ಆಧ್ಯಾತ್ಮ ಮತ್ತು ನೈತಿಕ ಶಿಕ್ಷಣ ಕಾರ್ಯಕ್ರಮಕ್ಕಾಗಿ ಕೆಳಗಿನ ವಿಷಯವನ್ನು ಕುರಿತು ವಿದ್ವಾಂಸರು ದಯವಿಟ್ಟು ಉಪನ್ಯಾಸ ಮಾಡಬೇಕಾಗಿ ಪ್ರಾರ್ಥನೆ.

**ಕನ್ನಡಿಗರ ಜ್ಞಾನ ದೀಪಿಕಾ-ಮಾಲೆ ಎರಡು.**

**ಜುಲೈ ೧೯೫೫**

ಲೇಖಕರು :- ಶ್ರೀ ಎಂ. ಎ. ನಾರಾಯಣ ಅಯ್ಯಂಗಾರ್
ರಿಟೈರ್ಡ್ ಡೆಪ್ಯುಟಿ ಡೈರೆಕ್ಟರ್

## ಮನುಷ್ಯನು ಜಗತ್ತನ್ನೂ ಭಗವಂತನನ್ನೂ ಹೇಗೆ ತಿಳಿಯಬಲ್ಲನು ?

### ( ಪ್ರಮಾಣಗಳ ಸ್ವರೂಪ )

ಮಗುವು ಶೈಶವಾವಸ್ಥೆಯಲ್ಲಿದ್ದು ಕ್ರಮೇಣ ಬಾಲಕನಾಗಿ ಯುವಕನಾಗಿ ಮಧ್ಯವಯಸ್ಕನಾಗಿ ಬೆಳೆದು ಬುದ್ಧಿವಂತನಾದ ಮನುಷ್ಯನಾಗುತ್ತಾನೆ. ಶೈಶವಾವಸ್ಥೆಯಲ್ಲಿ ಆರಂಭಿಸಿ ಯೌವನಾವಸ್ಥೆ ಮುಗಿಯುವವರೆಗೂ ಉತ್ತಮ ಶಿಕ್ಷಣವನ್ನು ಪಡೆಯುತ್ತಲೇ ಇದ್ದರೆ ಬಾಲಕನು ಈ ಜಗತ್ತಿನ ಸ್ವರೂಪವನ್ನೂ ಮತ್ತು ಅದರ ಕಟ್ಟಳೆಗಳನ್ನೂ ಕ್ರಮೇಣ ಹೆಚ್ಚು ಹೆಚ್ಚಾಗಿ ತಿಳಿಯುತ್ತಾನೆ. ಆದರೆ ಚಿಕ್ಕವಯಸ್ಸಿನಲ್ಲಿ ಉತ್ತಮ ಶಿಕ್ಷಣವನ್ನು ಪಡೆಯದ ಮನುಷ್ಯನು ದೊಡ್ಡವನಾದಾಗ್ಯೂ ಜಗತ್ತಿನ ವಿಧವಿಧ ಕಟ್ಟಳೆಗಳನ್ನು ಅರಿಯಲಾರನು. ಅಂದಮೇಲೆ ಅದರ ನಿಜಸ್ವರೂಪವನ್ನೂ ಭಗವಂತನ ಸ್ವರೂಪವನ್ನೂ ಅರಿಯಲು ಸಮರ್ಥನಾಗುವನೆ? ಒಂದು ವರ್ಷದೊಳಗಿರುವ ಮಗುವಿಗೆ ಇಂದ್ರಿಯಗಳೇ ಬೆಳೆದಿರುವುದಿಲ್ಲ; ಜ್ಞಾನಶಕ್ತಿಯು ಅನುದ್ಭೂತವಾಗಿಯೇ ಇರುವುದು. ಆದರೆ ತಾನು ವಾಸ ಮಾಡುವ ಮತ್ತು ಅನುಭವಿಸುತ್ತಿರುವ ಈ ಜಗತ್ತಿನಲ್ಲಿ ಹೊಸಹೊಸ ಅನುಭವಗಳನ್ನು ಪಡೆಯುತ್ತಿದ್ದರೆ ಮತ್ತು ತನ್ನ ಇಂದ್ರಿಯ ಮನಸ್ಸುಗಳಿಗೆ ಶಿಕ್ಷಣವನ್ನು ಕೊಡುತ್ತಿದ್ದರೆ ಆ ಮಗುವು ಬಾಲಕನಾಗಿ ಕ್ರಮೇಣ ಇದೇ ಜಗತ್ತಿನ ಕಟ್ಟಳೆಗಳನ್ನೂ ನಿಜ ಸ್ವರೂಪವನ್ನೂ ತಿಳಿಯುತ್ತಾನೆ. ಜೀವಿಗಳಲ್ಲೆಲ್ಲಾ ಮನುಷ್ಯನಿಗೆ ಮಾತ್ರ ಈ ಶಕ್ತಿಯಿದೆ. ಇನ್ನು ಯಾವುದರ ಸಹಾಯದಿಂದ ಯಾವ ಕ್ರಮದಲ್ಲಿ ಬಾಲಕನು ಇವುಗಳನ್ನು ತಿಳಿಯುತ್ತಾನೆ ಎಂಬುದನ್ನು ಅರಿಯೋಣ.

## ಪ್ರತ್ಯಕ್ಷ ಪ್ರಮಾಣ

ಬಾಲಕನು ಮೊದಲು ತನ್ನ ಇಂದ್ರಿಯಗಳ ಶಕ್ತಿಗಳನ್ನು ವೃದ್ಧಿ ಪಡಿಸಿ ಅವುಗಳನ್ನು ಜಗತ್ತಿನ ಕಡೆಗೆ ತಿರುಗಿಸಿದರೆ ಜಗತ್ತು ಇಂದ್ರಿಯವೂ ಒಟ್ಟಾಗಿ ಸೇರಿ ಅವನಿಗೆ ಜಗತ್ತಿನ ಪದಾರ್ಥಗಳ ಜ್ಞಾನವುಂಟಾಗುತ್ತದೆ. ಇಂದ್ರಿಯಗಳು ಜಗತ್ತಿನಲ್ಲಿರುವ ಪದಾರ್ಥಗಳು ಇವುಗಳ ಸಂಬಂಧದಿಂದ ಹುಟ್ಟುವ ತಿಳುವಳಿಕೆಗೆ ನಮ್ಮ ಪ್ರಾಜ್ಞರು ಪ್ರತ್ಯಕ್ಷ ಪ್ರಮಾಣವೆಂದು ಹೆಸರು ಕೊಟ್ಟಿರುವರು. ಈ ಪ್ರತ್ಯಕ್ಷ ಪ್ರಮಾಣವು ಐದು ತೆರನಾಗಿರುವುದು. ಕಣ್ಣನ್ನು ತೆರೆದು ಒಂದು ವಸ್ತುವನ್ನು ನೋಡಲು ಈ ವಸ್ತು ಕರಿಯದು ಇದು ಬಿಳಿಯದು ಎಂದೂ, ಇದು ಚೌಕವಾಗಿದೆ ಇದು ಚಕ್ರಾಕಾರವಾಗಿದೆಯೆಂದೂ, ಇದು ಸಣ್ಣನಾಗಿದೆ ಇದು ದಪ್ಪನಾಗಿದೆ ಎಂದೂ ಇದೇ ಮೊದಲಾಗಿ ಹುಟ್ಟುವ ತಿಳುವಳಿಕೆಯು ಚಾಕ್ಷುಷ ಪ್ರತ್ಯಕ್ಷವೆನ್ನಿಸಿಕೊಳ್ಳುವುದು. ಕಿವಿಯೆಂಬ ಇಂದ್ರಿಯದ ಶಕ್ತಿಯನ್ನು ವೃದ್ಧಿಪಡಿಸಿದರೆ ಪ್ರಪಂಚದಲ್ಲಿರುವ ಶಬ್ದಗಳ ಸ್ವರೂಪವನ್ನೂ ಇದು ಈ ವಿಧವಾದ ಧ್ವನಿಯೆಂದೂ, ಇದು ಈ ವಿಧವಾದ ಅಕ್ಷರವೆಂದೂ ಮತ್ತು ಇದು ಈ ಬಗೆಯಾದ ಮಾತೆಂದೂ ಬಾಲಕನು ತಿಳಿಯುವನು. ಈ ವಿಧವಾಗಿ ಹುಟ್ಟುವ ತಿಳುವಳಿಕೆಯು ಶ್ರಾವಣ ಪ್ರತ್ಯಕ್ಷವೆನ್ನಿಸಿಕೊಳ್ಳುವುದು. ನಾಲಿಗೆಯೆಂಬ ಇಂದ್ರಿಯಕ್ಕೆ ವಿವಿಧ ಆಹಾರಗಳು ಸಂಯೋಗವಾದರೆ ಇದು ಮಧುರ, ಇದು ಹುಳಿ, ಇದು ಕಾರ, ಇದು ಉಪ್ಪು, ಇದು ಕಹಿ, ಇದು ಸಿಹಿ ಎಂದು ಮುಂತಾಗಿ ಹುಟ್ಟುವ ತಿಳಿವು ಜಿಹ್ವಾ ಪ್ರತ್ಯಕ್ಷವೆನ್ನಿಸಿಕೊಳ್ಳುವುದು. ಹೀಗೆಯೇ ಮೂಗೆಂಬ ಇಂದ್ರಿಯಕ್ಕೆ ಅನೇಕ ವಿಧವಾದ ಗಂಧಗಳಿಗೂ ಸಂಬಂಧ ಉಂಟಾದರೆ ಇದು ಸುವಾಸನೆ ಇದು ದುರ್ವಾಸನೆ ಎಂಬುವೇ ಮೊದಲಾಗಿ ಹುಟ್ಟುವ ತಿಳುವಳಿಕೆಯು ಘ್ರಾಣ ಪ್ರತ್ಯಕ್ಷವೆನ್ನಿಸಿಕೊಳ್ಳುವುದು. ಕೊನೆಯದಾಗಿ ವಿವಿಧ ಪದಾರ್ಥಗಳು ಬಾಲಕನ ಶರೀರದ ಚರ್ಮವನ್ನು ಸೋಕಿದರೆ ಇದು ಕಾವಿನಿಂದ ಕೂಡಿದ್ದು, ಇದು ತಣ್ಣಗಿರುವುದು, ಇದು ಮೃದುವಾದುದು, ಇದು ಕಠಿಣವಾದುದು, ಇದು ಹಗುರವಾದುದು, ಇದು ಭಾರವಾದುದು ಎಂಬಿವೇ ಮೊದಲಾಗಿ ಹುಟ್ಟುವ ತಿಳುವಳಿಕೆಯು ಸ್ಪಾರ್ಶನ ಪ್ರತ್ಯಕ್ಷವೆನ್ನಿಸಿಕೊಳ್ಳುವುದು. ಈ ಪ್ರಕಾರದಲ್ಲಿ ಪ್ರತ್ಯಕ್ಷ ಪ್ರಮಾಣವು ಚಾಕ್ಷುಷ ಪ್ರತ್ಯಕ್ಷವೆಂದೂ, ಶ್ರಾವಣ ಪ್ರತ್ಯಕ್ಷವೆಂದೂ, ಜಿಹ್ವಾ ಪ್ರತ್ಯಕ್ಷವೆಂದೂ, ಘ್ರಾಣ ಪ್ರತ್ಯಕ್ಷವೆಂದೂ ಮತ್ತು ಸ್ಪಾರ್ಶನ ಪ್ರತ್ಯಕ್ಷವೆಂದೂ ಐದು ತೆರನಾಗಿರುವುದು. ಇವುಗಳೆಲ್ಲವನ್ನೂ ಒಟ್ಟಾಗಿ ಸೇರಿಸಿ ನಮ್ಮ ದಾರ್ಶನಿಕರು ಬಾಹ್ಯ ಪ್ರತ್ಯಕ್ಷಗಳೆಂದು ಕರೆದಿರುವರು.

ಇವುಗಳಲ್ಲದೆ ನಮ್ಮ ಮನಸ್ಸಿನಲ್ಲಿ ತೋರಿಬರುವ ಆಂತರ ಪ್ರತ್ಯಕ್ಷಗಳೂ ಇರುವುವು. ಕಾಮ ಕ್ರೋಧ ಭಯ ಶೋಕ ಮೊದಲಾದ ಚಿತ್ತವೃತ್ತಿಗಳೂ ವಿಧವಿಧವಾದ ಅನೇಕ ಆಸೆಗಳೂ ಬಾಹ್ಯ ಪ್ರತ್ಯಕ್ಷದಲ್ಲಿ ನೋಡಿದ ಪದಾರ್ಥಗಳ ಮಾನಸಿಕ ಚಿತ್ರಗಳೂ ಬುದ್ಧಿಗೆ ಸಂಬಂಧಪಟ್ಟ ಆಲೋಚನೆಗಳೂ ಕನಸಿನ ನೋಟಗಳೂ ಇದ್ದು

ಯೆಂಬ ಅಭಾವ ಚಿತ್ತವೃತ್ತಿಯೂ ಇವೆಲ್ಲವೂ ಪ್ರತಿಯೊಬ್ಬನ ಒಳಗಿನ ಮನಸ್ಸಿನಲ್ಲಿ ಅವನಿಗೆ ಸಾಕ್ಷಾತ್ತಾಗಿ ಅನುಭವಕ್ಕೆ ಬರುತ್ತವೆ ಇಷ್ಟೇ ಅಲ್ಲ; ಪ್ರತಿಯೊಬ್ಬನೂ ತನ್ನ ಮನಸ್ಸಿನಲ್ಲಿ ಭಾವಿಸಿದರೆ ತನಗೆ ಈಗ ಸುಖವಾಗಿದೆಯೆಂದೂ, ತನಗೆ ಈಗ ದುಃಖವಾಗಿದೆಯೆಂದೂ ತಿಳಿಯುತ್ತದೆ. ಇವೆಲ್ಲವನ್ನೂ ಒಟ್ಟಾಗಿ ಸೇರಿಸಿ ಭಾರತೀಯ ದಾರ್ಶನಿಕರು ಇವನ್ನು ಆಂತರ ಪ್ರತ್ಯಕ್ಷವೆಂದೂ ಅಥವ ಮಾನಸಿಕ ಪ್ರತ್ಯಕ್ಷವೆಂದೂ ಕರೆದಿರುವರು. ಮೇಲೆ ವಿವರಿಸಿರುವ ಬಾಹ್ಯ ಪ್ರತ್ಯಕ್ಷಗಳೂ ಮತ್ತು ಆಂತರ ಪ್ರತ್ಯಕ್ಷಗಳೂ ಎಲ್ಲ ಮನುಷ್ಯರ ಅನುಭವದಲ್ಲಿರುವುದರಿಂದ ಅವುಗಳೆಲ್ಲವೂ ಸಾಧಾರಣವಾದ ಪ್ರತ್ಯಕ್ಷಗಳಾಗಿವೆ.

ವಿದ್ಯಾವಂತನಾದ ಯುವಕನು ಮೇಲೆ ವಿವರಿಸಿದ ಪ್ರತ್ಯಕ್ಷಗಳು ಮಾತ್ರವಲ್ಲದೆ ಅನೇಕ ವಿಶೇಷವಾದ ಅಸಾಧಾರಣ ಪ್ರತ್ಯಕ್ಷಗಳನ್ನೂ ಕೂಡ ಉತ್ತಮ ಶಿಕ್ಷಣದಿಂದ ಕ್ರಮೇಣ ಪಡೆಯುವನು. ಅನೇಕ ಸೊಗಸಾದ ಚಿತ್ರಗಳನ್ನು ನೋಡಿ ತನ್ಮೂಲಕ ಜಗತ್ತಿನ ಕಟ್ಟಳೆಗಳನ್ನೂ ಸೌಂದರ್ಯಗಳನ್ನೂ ನಿಜ ಸ್ವರೂಪವನ್ನೂ ಚೆನ್ನಾಗಿ ತಿಳಿಯುವನು. ಸಿನೀಮಾ ಮಂದಿರಗಳಿಗೆ ಆಗಾಗ್ಗೆ ಹೋಗಿ ಅಲ್ಲಿಯ ಮಾತನಾಡುವ ಚಲನಚಿತ್ರಗಳನ್ನೂ ನೋಡುತ್ತಾ ತಾನು ಇಲ್ಲಿಯವರೆಗೆ ಸಾಧಾರಣವಾಗಿ ಪ್ರತ್ಯಕ್ಷಿಸದೇ ಇರುವ ಹೊಸ ಪ್ರತ್ಯಕ್ಷ ಅನುಭವಗಳನ್ನು ಪಡೆಯುವನಲ್ಲವೆ? ಇಷ್ಟೇ ಅಲ್ಲ; ವಿದ್ಯಾರ್ಥಿಯು ತನ್ನ ಕಾಲೇಜಿನಲ್ಲಿ ಟೆಲಿಸ್ಕೋಪ್, ಮೈಕ್ರಾಸ್ಕೋಪ್ ಮುಂತಾದ ಯಂತ್ರಗಳ ಸಹಾಯದಿಂದ ಅತಿ ದೂರದಲ್ಲಿದ್ದು ಸಾಧಾರಣವಾಗಿ ಕಾಣದ ಪದಾರ್ಥಗಳನ್ನೂ ಮತ್ತು ಸಾಧಾರಣವಾಗಿ ಕಣ್ಣಿಗೆ ಕಾಣದ ಅತಿ ಸೂಕ್ಷ್ಮ ಪದಾರ್ಥಗಳನ್ನೂ ತಿಳಿಯುವನು. ಟೆಲಿಸ್ಕೋಪಿನ ಸಹಾಯದಿಂದ ಸಾಧಾರಣ ಕಣ್ಣಿಗೆ ಕಾಣದ ನಕ್ಷತ್ರಗಳನ್ನು ಕಾಣಬಹುದು; ಮೈಕ್ರಾಸ್ಕೋಪಿನ ಸಹಾಯದಿಂದ ಕಾಲರಾ, ಪ್ಲೇಗ್, ಮಲೇರಿಯಾ, ಟೈಫಾಯಿಡ್ ಮುಂತಾದ ಅತಿ ಸೂಕ್ಷ್ಮ ಕ್ರಿಮಿಗಳನ್ನು ನೋಡಬಹುದು ಮತ್ತು ಎಕ್ಸ್-ರೇ (X-Ray) ಸಹಾಯದಿಂದ ಶರೀರದೊಳಗಿರುವ ಹೃದಯ, ನಾಳಗಳು, ಶ್ವಾಸಕೋಶಗಳು ಮತ್ತು ಇವುಗಳ ಚಲನೆಗಳು ಇವೆಲ್ಲವನ್ನೂ ಪ್ರತ್ಯಕ್ಷಿಸಬಹುದು. ಇವುಗಳೆಲ್ಲವನ್ನೂ ಒಟ್ಟಾಗಿ ಸೇರಿಸಿ ಅಸಾಧಾರಣವಾದ ಪ್ರತ್ಯಕ್ಷವೆಂದು ಕರೆಯಬಹುದು. ಹೀಗೆ ಮನುಷ್ಯನು ಸಾಧಾರಣ ಮತ್ತು ಅಸಾಧಾರಣ ಪ್ರತ್ಯಕ್ಷಗಳ ಮೂಲಕವಾಗಿ ಜಗತ್ತಿನ ಕಟ್ಟಳೆಗಳನ್ನೂ ಅದರ ಪದಾರ್ಥಗಳ ಸಾಮಾನ್ಯ ಸ್ವರೂಪವನ್ನೂ ತಿಳಿಯುವನು.

## ಅನುಮಾನ ಪ್ರಮಾಣ

ಅನಂತವಾದ ಜಗತ್ತಿನ ಎಲ್ಲಾ ಪದಾರ್ಥಗಳನ್ನೂ, ಶಕ್ತಿಗಳನ್ನೂ, ಕಟ್ಟಳೆಗಳನ್ನೂ ಮತ್ತು ಅದರ ಸಂಪೂರ್ಣ ಸ್ವರೂಪವನ್ನೂ ಮನುಷ್ಯರು ಮೇಲೆ ವಿವರಿಸಿದ ಬಾಹ್ಯ, ಆಂತರ, ಸಾಧಾರಣ, ಅಸಾಧಾರಣ ಪ್ರತ್ಯಕ್ಷಗಳಿಂದ ಮಾತ್ರ ತಿಳಿಯಲು

ಸಾಧ್ಯವೆ ? ಇಲ್ಲ – ಎಂದಿಗೂ ಇಲ್ಲ. ಇವುಗಳ ಸಹಾಯದಿಂದ ಮೇಲೆ ತೋರಿಬರುವ ಅಲ್ಪ ಸ್ವಲ್ಪ ಕಟ್ಟಳೆಗಳನ್ನು ಮಾತ್ರ ತಿಳಿಯಲು ಸಾಧ್ಯವು ; ಅಷ್ಟೆ. ಆದುದರಿಂದ ಜಗತ್ತಿನ ಕಟ್ಟಳೆಗಳನ್ನೂ ಸಂಪೂರ್ಣ ಸ್ವರೂಪವನ್ನೂ ಇನ್ನೂ ಹೆಚ್ಚಾಗಿ ತಿಳಿಯಬೇಕಾದರೆ ಯುವಕನು ಅನುಮಾನ ಪ್ರಮಾಣವಿಚಾರದಲ್ಲಿ ಉತ್ತಮ ಶಿಕ್ಷಣ ಪಡೆಯಬೇಕಾಗುತ್ತದೆ. ಹಾಗಾದರೆ ಅನುಮಾನ ಪ್ರಮಾಣದ ಸ್ವರೂಪವನ್ನು ತಿಳಿಯಲು ಪ್ರಯತ್ನಿಸೋಣ.

ಒಂದು ವಸ್ತುವನ್ನು ಬಿಟ್ಟು ಇನ್ನೊಂದು ವಸ್ತುವು ಯಾವಾಗಲೂ ಇರುವುದಿಲ್ಲವೆಂಬುದನ್ನು ಪ್ರತ್ಯಕ್ಷಪ್ರಮಾಣದಿಂದ ತಿಳಿದು, ಒಬ್ಬನು ಯಾವಾಗಲಾದರೂ ಅವುಗಳಲ್ಲಿ ಒಂದು ವಸ್ತುವನ್ನು ಮಾತ್ರ ಪ್ರತ್ಯಕ್ಷಿಸಿದರೆ, ಅದರ ಜೊತೆಯಲ್ಲಿಯೇ ಇನ್ನೊಂದು ವಸ್ತುವು ಇದ್ದೇ ಇರಬೇಕೆಂಬ ಮನಸ್ಸಿನ ತೀರ್ಮಾನವೇ ಅನುಮಾನ ಪ್ರಮಾಣವು. ತನ್ನ ಒಂದು ಅನುಭವವನ್ನು ಆಲೋಚಿಸಿ, ತಾನು ಪಡೆಯದಿರುವ ಅದೇ ರೀತಿಯ ಇನ್ನೊಂದು ಹೊಸ ಅನುಭವವು ಇರಬಹುದೆಂದು ಮನಸ್ಸಿನಲ್ಲಿ ತೀರ್ಮಾನಿಸುವುದು ಅನುಮಾನ ಪ್ರಮಾಣದಲ್ಲಿ ಒಂದು ಒಳಭಾಗವಾಗಿ 'ಉಪಮಾನ' ವೆಂದು ಕರೆಯಲ್ಪಟ್ಟಿರುವುದು. ಅನುಮಾನ ಪ್ರಮಾಣದ ಸಂಪೂರ್ಣ ಸ್ವರೂಪವನ್ನು ಈ ಲೇಖನದಲ್ಲಿ ತಿಳಿಯಪಡಿಸುವುದು ಅಸಾಧ್ಯವಾದ ಕೆಲಸ. ವಿದ್ಯಾರ್ಥಿಯು ಇದರ ವಿಚಾರವನ್ನು ಚೆನ್ನಾಗಿ ತಿಳಿಯಬೇಕಾದರೆ ಭಾರತೀಯ ತರ್ಕಶಾಸ್ತ್ರವನ್ನೂ, ಪಾಶ್ಚಾತ್ಯ ವೈಜ್ಞಾನಿಕರ ಲಾಜಿಕ್ [ Logic ] ಶಾಸ್ತ್ರವನ್ನೂ ಕಲಿಯಬೇಕು. ಆದಾಗ್ಯೂ ಅನುಮಾನ ಪ್ರಮಾಣದ ಸ್ವರೂಪವನ್ನು ವಿದ್ಯಾರ್ಥಿಯು ಸ್ವಲ್ಪಮಟ್ಟಿಗೆ ತಿಳಿಯುವುದಕ್ಕಾಗಿ ಕೆಳಗೆ ಕೆಲವು ಉದಾಹರಣೆಗಳನ್ನು ವಿವರಿಸುವೆವು.

ಬೆಂಕಿಯನ್ನು ಬಿಟ್ಟು ಹೊಗೆ ಇರುವುದೇ ಇಲ್ಲವೆಂಬ ನಿಯಮವನ್ನು ಅಡಿಗೆ ಮನೆಯಲ್ಲಿ ಪ್ರತ್ಯಕ್ಷ ಪ್ರಮಾಣದಿಂದ ನಿಶ್ಚಯವಾಗಿ ತಿಳಿದು ಬೆಟ್ಟ ಮೊದಲಾದ ಮತ್ತೊಂದು ಕಡೆಯಲ್ಲಿ ಒಬ್ಬ ಮನುಷ್ಯನು ಹೊಗೆಯನ್ನು ಮಾತ್ರ ಕಂಡರೆ ಆಗ ಅಲ್ಲಿ ಬೆಟ್ಟದೊಳಗೆ ಬೆಂಕಿಯೂ ಕೂಡ ಇದ್ದೇ ಇರಬೇಕೆಂದು ಊಹಿಸುತ್ತಾನಲ್ಲವೆ ? ಹಾಲನ್ನು ಕಾಯಿಸಿ ಅದಕ್ಕೆ ಸ್ವಲ್ಪ ಮಜ್ಜಿಗೆಯನ್ನು ಸೇರಿಸಿದರೆ ಎಲ್ಲವೂ ಮಾರನೇ ದಿವಸ ಬೆಳಗ್ಗೆ ಘಟ್ಟಿಯಾದ ಮೊಸರಾಗುತ್ತದೆಂಬುದನ್ನು ಪ್ರತ್ಯಕ್ಷ ಪ್ರಮಾಣದಿಂದ ತಿಳಿದ ಬಾಲಕನು ಒಂದು ದಿವಸ ಬೆಳಗ್ಗೆ ಘಟ್ಟಿಯಾದ ಮೊಸರನ್ನು ಮಾತ್ರ ನೋಡಿ ಹಿಂದಿನ ದಿವಸ ರಾತ್ರಿ ಕಾಯಿಸಿದ ಹಾಲಿತ್ತೆಂದೂ, ಅದಕ್ಕೆ ರಾತ್ರಿಯೇ ಸ್ವಲ್ಪ ಮಜ್ಜಿಗೆ ಸೇರಿಸಿರಬೇಕೆಂದೂ ಊಹಿಸುತ್ತಾನೆ. ಸೂರ್ಯನು ಪ್ರತಿನಿತ್ಯವೂ ಬೆಳಗ್ಗೆ ಪೂರ್ವದಿಕ್ಕಿನಲ್ಲಿ ಉದಯಿಸುತ್ತಾನೆಂಬುದನ್ನು ಪ್ರತ್ಯಕ್ಷ ಪ್ರಮಾಣದಿಂದ ಅನುಭವಿಸಿ, ಅವನು ಮಾರನೇ ದಿವಸದಿಂದ ಹಿಡಿದು ಮುಂದೆಯೂ ಪ್ರತಿನಿತ್ಯವೂ ಪೂರ್ವದಿಕ್ಕಿನಲ್ಲಿ ಉದಯಿಸುತ್ತಾನೆಂದು ಊಹಿಸಬಹುದಲ್ಲವೆ ? ಕುಂಬಾರನು ಮಣ್ಣಿನಿಂದ ಮಡಕೆಗಳನ್ನು ನಿರ್ಮಿಸುತ್ತ

ದನ್ನು ಕಂಡು ಆ ಅನುಭವದ ಆಧಾರದ ಮೇಲೆ ಒಬ್ಬ ಜಗತ್ತನ್ನು ಭಗವಂತನು ಶಕ್ತಿಯಿಂದ ಸೃಷ್ಟಿಸುತ್ತಾನೆಂದು ತೀರ್ಮಾನಿಸುವುದು ಉಪಮಾನ ಪ್ರಮಾಣಕ್ಕೆ ಉದಾಹರಣೆಯು. ಹಾಗೆಯೇ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಪ್ರೀತಿಸುತ್ತಾರೆ ಎಂಬುದನ್ನು ಅನುಭವದಲ್ಲಿ ತಿಳಿದು ದೇವರೂ ಕೂಡ ಅವನ ಮಕ್ಕಳಾದ ಮನುಷ್ಯರೆಲ್ಲರನ್ನೂ ಪ್ರೀತಿಸಿ ಪೋಷಿಸಲು ಸಿದ್ಧನಾಗಿರುವನೆಂಬುದನ್ನು ಊಹಿಸಬಹುದಲ್ಲವೆ? ಅನೇಕರು ಒಂದು ಮಂತ್ರವನ್ನು ಜಪಿಸಿ ತಮ್ಮ ಇಷ್ಟಾರ್ಥಗಳನ್ನು ಪಡೆದರೆಂಬ ಅನುಭವಗಳಿಂದ ಆ ಮಂತ್ರವನ್ನು ಕ್ರಮವಾಗಿ ಜಪಿಸಿದವರಿಗೆಲ್ಲಾ ಅವರವರ ಇಷ್ಟಾರ್ಥಗಳು ಮುಂದೆಯೂ ಸಿದ್ಧಿಸುತ್ತವೆ ಎಂಬುದಾಗಿ ಸಾಧಾರಣ ಜನರು ಊಹಿಸಿ ನಂಬುತ್ತಾರೆ.

## ಲೌಕಿಕ ಶಬ್ದ ಪ್ರಮಾಣ

ತನ್ನ ಪ್ರತ್ಯಕ್ಷ ಮತ್ತು ಅನುಮಾನ ಪ್ರಮಾಣಗಳಿಂದ ಮಾತ್ರ ಒಬ್ಬನು ಜಗತ್ತಿನ ಎಲ್ಲಾ ಪದಾರ್ಥಗಳನ್ನೂ, ಶಕ್ತಿಗಳನ್ನೂ ಮತ್ತು ಸಂಪೂರ್ಣ ಸ್ವರೂಪವನ್ನೂ ತಿಳಿಯಬಲ್ಲನೆ? ಎಂಬ ಪ್ರಶ್ನೆಯನ್ನು ಪುನಃ ನಾವು ಕೇಳಬೇಕಾಗುತ್ತದೆ. ಇಲ್ಲ; ಎಂದಿಗೂ ಇಲ್ಲ. ಏಕೆಂದರೆ ಒಬ್ಬ ಮನುಷ್ಯನ ಪ್ರತ್ಯಕ್ಷಾನುಮಾನ ಅನುಭವಗಳು ಮಾತ್ರ ಸ್ವಲ್ಪವೇ ಆಗಿ ಏಕದೇಶಮಾತ್ರವಾಗಿರುತ್ತವೆ. ಆದುದರಿಂದ ಪ್ರತಿಯೊಬ್ಬ ಮನುಷ್ಯನೂ ಇತರ ಮನುಷ್ಯರ ಅಂದರೆ ತನಗಿಂತಲೂ ಅಧಿಕವಾದ ಅನುಭವವನ್ನು ಪಡೆದಿರುವವರ ಮಾತುಗಳನ್ನು ಕೇಳಿ, ಅವುಗಳ ಅರ್ಥವನ್ನು ತಿಳಿದು, ಅವರು ಹೇಳುವ ವಿಚಾರಗಳು ತನ್ನ ಪ್ರತ್ಯಕ್ಷಕ್ಕೆ ಬಾರದಿದ್ದರೂ ಮತ್ತು ಅನುಮಾನಕ್ಕೆ ಎಟುಕದಿದ್ದರೂ ಅವನ್ನು ನಂಬಿ ನಡೆಯಬೇಕಾಗುತ್ತದೆ. ಆದರೆ ತನಗೆ ಉಪದೇಶಮಾಡುವವರು "ಆಪ್ತ"ರಾಗಿರಬೇಕು; ಅಂದರೆ ಸುಳ್ಳು ಹೇಳುವವರಾಗಿರಕೂಡದು, ಪ್ರೀತಿಯಿಂದ ಕೇಳುವವರ ಹಿತಕ್ಕಾಗಿ ಅವರು ಹೇಳಬೇಕು ಮತ್ತು ಅವರು ನಿಜವಾಗಿ ಹೆಚ್ಚಿನ ಅನುಭವವನ್ನು ಪಡೆದಿರಬೇಕು. ಹೀಗೆ ಆಪ್ತರಿಂದ ಉಪದೇಶಪಡೆದು ಜಗತ್ತಿನ ವಿಚಾರಗಳನ್ನೂ ಜಗತ್ತಿನಲ್ಲಿ ಆನಂದವನ್ನುಂಟುಮಾಡುವ ಘಟನಾಚರಣೆಗಳನ್ನೂ ತಿಳಿದುಕೊಳ್ಳುವುದಕ್ಕೆ "ಶಬ್ದಪ್ರಮಾಣ" ವೆಂದು ಹೆಸರು. "ಶಬ್ದ ಪ್ರಮಾಣಮೆನೆ ಇರ್ದುದನ್ ಇರ್ದಂತೆ ತಿಳಿಪುವ ಆಪ್ತರ ನುಡಿ" ಎಂದು ಒಬ್ಬ ಕವಿಯು ಹೇಳಿರುವನು. ಈ ಶಬ್ದ ಪ್ರಮಾಣವು ಲೌಕಿಕವೆಂದೂ, ವೈದಿಕವೆಂದೂ ಎರಡು ರೀತಿಯಾಗಿರುವುದು. ಲೌಕಿಕ ಶಬ್ದ ಪ್ರಮಾಣವೆಂಬುದು ಲೋಕದ ಆಪ್ತರು ನುಡಿಯುವ ನುಡಿ. ವೈದಿಕ ಪ್ರಮಾಣವೆಂಬುದು ವೇದವೇ ಮೊದಲಾದ ಅನೇಕ ವಿದ್ಯೆಗಳು ಅಥವ ಶಾಸ್ತ್ರಗಳು.

ಬಾಲಕನಿಗೆ ಅವನ ಚಿಕ್ಕವಯಸ್ಸಿನಲ್ಲಿ ತಂದೆತಾಯಿಗಳೂ, ಬಂಧುಗಳೂ, ಉಪಾಧ್ಯಾಯರೂ ಅವನ ಅನುಭವಕ್ಕೆ ಬಾರದಿರುವ ತಾವು ಅನುಭವಿಸಿರುವ ವಿಷಯಗಳನ್ನು ತಿಳಿಯ ಪಡಿಸಿದರೆ ಅವು ಬಾಲಕನಿಗೆ ಲೌಕಿಕ ಶಬ್ದ ಪ್ರಮಾಣವಾಗುತ್ತವೆ. ಹಾಗೆಯೇ ವಿದೇಶ್ಯಾದಿ ದೇಶಗಳಲ್ಲಿ ಸಂಚಾರ ಮಾಡಿರುವ ನನ್ನ ಸ್ನೇಹಿತನು ಅಲ್ಲಿ ಸಂಚಾರ ಮಾಡದಿರುವ ನನಗೆ ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಜರ್ಮನಿ, ಅಮೇರಿಕಾ

ದೇಶಗಳ ವಿಚಾರಗಳನ್ನು ತಿಳಿಯಪಡಿಸಿದರೆ ಅದು ನನಗೆ ಲೌಕಿಕ ಶಬ್ದ ಪ್ರಮಾಣವು. ಚರಿತ್ರ ಶಾಸ್ತ್ರಜ್ಞರು ಶಾಸನಗಳೇ ಮೊದಲಾದ ಆಧಾರಗಳಿಂದ ಪೂರ್ವಕಾಲದಲ್ಲಿ ನಡೆದ ವೃತ್ತಾಂತಗಳನ್ನು ನಮಗೆ ತಿಳಿಯಪಡಿಸಿದರೆ ಆ ವಿಚಾರಗಳನ್ನು ತಿಳಿದು ನಂಬುವುದೂ ಲೌಕಿಕ ಶಬ್ದ ಪ್ರಮಾಣದಿಂದಲೇ. ಇವೆಲ್ಲಕ್ಕಿಂತಲೂ ಮಿಗಿಲಾಗಿ ವೈಜ್ಞಾನಿಕರು ಟೆಲಿಸ್ಕೋಪ್, ಮೈಕ್ರಾಸ್ಕೋಪ್, ಎಕ್ಸ್‌ರೇ ಮೊದಲಾದ ಯಂತ್ರಗಳ ಸಹಾಯಗಳಿಂದ ಹೊಸ ಹೊಸ ಪ್ರತ್ಯಕ್ಷಾನುಮಾನ ಅನುಭವಗಳನ್ನು ತಾವು ಪಡೆದು ಪ್ರೌಢವಿದ್ಯಾರ್ಥಿಗಳಿಗೆ ತಿಳಿಯಪಡಿಸಿದರೆ ಅದರಿಂದುಂಟಾಗುವ ತಿಳಿವಳಿಕೆಯೂ ಲೌಕಿಕ ಶಬ್ದ ಪ್ರಮಾಣದಿಂದುಂಟಾಯಿತೆಂದು ಹೇಳಬೇಕಾಗುತ್ತದೆಯಲ್ಲವೆ? ವಿದ್ಯಾವಂತರಾದ ನಾವು ತಿಳಿದಿರುವ ಜ್ಞಾನರಾಶಿಯಲ್ಲಿ ಹೆಚ್ಚಿನ ಭಾಗವು ಲೌಕಿಕ ಶಬ್ದ ಪ್ರಮಾಣದಿಂದ ಹುಟ್ಟಿದೆ ಎಂದು ಹೇಳಿದರೆ ಏನೂ ಆಶ್ಚರ್ಯವಿಲ್ಲ.

## ವೈದಿಕ ಶಬ್ದಪ್ರಮಾಣ

ಭಾರತೀಯರು ಪೂರ್ವಕಾಲದಿಂದಲೂ ಲೌಕಿಕ ಶಬ್ದಪ್ರಮಾಣಕ್ಕೆ ಮಾತ್ರವೇ ಬೆಲೆಕೊಡಲಿಲ್ಲ; ಅದಕ್ಕಿಂತ ಹೆಚ್ಚಾಗಿ ವೈದಿಕ ಶಬ್ದ ಪ್ರಮಾಣಕ್ಕೆ ಬೆಲೆ ಕೊಟ್ಟರು. ಕಾರಣವೇನು? ಎಲ್ಲಾ ಬುದ್ಧಿವಂತರಾದ ಮನುಷ್ಯರಹಾಗೆ ನಮ್ಮ ಪ್ರಾಚೀನರಾದ ಋಷಿಗಳು ಚಟುವಟಿಕೆಯಾದ ಇಂದ್ರಿಯಗಳನ್ನೂ, ತೀಕ್ಷ್ಣವಾದ ಮನಸ್ಸನ್ನೂ, ವಿವೇಕದಿಂದ ಕೂಡಿದ ಬುದ್ಧಿಯನ್ನೂ ಪಡೆದಿದ್ದರು. ಆದರೆ ಸಾಮಾನ್ಯ ಜನರು ಪಡೆಯದೇ ಇರುವ ದಿವ್ಯ ಚಕ್ಷುಸ್ಸು ಅಥವಾ ಯೋಗ ಪ್ರತ್ಯಕ್ಷ ಅಥವಾ ದಿವ್ಯಜ್ಞಾನ ಎಂಬ ಅದ್ಭುತ ಶಕ್ತಿಯಿಂದ ಕೂಡಿದ ದಿವ್ಯ ಅಂತರಿಂದ್ರಿಯವನ್ನೂ ಕೂಡ ಹೊಂದಿ ತನ್ಮೂಲಕ ಆತ್ಮನನ್ನೂ ಭಗವಂತನ ಸ್ವರೂಪ ರೂಪ ಗುಣ ವಿಭೂತಿಗಳನ್ನೂ ಜಗತ್ತಿನ ಸೂಕ್ಷ್ಮ ಶಕ್ತಿಗಳನ್ನೂ ಸಾಕ್ಷಾತ್ಕರಿಸುತ್ತಿದ್ದರೆಂದು ಪ್ರತೀತಿ ಇದೆ. ಯೋಗ ಪ್ರತ್ಯಕ್ಷ ಅಥವ ದಿವ್ಯ ಚಕ್ಷುಸ್ಸು ಎಂಬ ಅಂತರಿಂದ್ರಿಯವು ಪ್ರತಿಯೊಬ್ಬ ಮನುಷ್ಯನಲ್ಲಿಯೂ ಅನುದ್ಭೂತವಾಗಿದೆಯೆಂದೂ ಕೆಲವು ಯೋಗ ಸಾಧನಗಳಿಂದಲೂ ಮತ್ತು ಭಗವಂತನ ಕೃಪೆಯಿಂದಲೂ ಈ ಅಂತರಿಂದ್ರಿಯವು ವ್ಯಕ್ತವಾಗುತ್ತದೆಂದೂ, ಹಾಗೆ ವ್ಯಕ್ತವಾದಾಗ ಆ ಮಾನವನೇ ಋಷಿಗೆ ಸಮಾನನಾದ ಮಹಾತ್ಮನಾಗುತ್ತಾನೆಂದೂ ಉಪನಿಷತ್ತುಗಳಲ್ಲಿ ನಿಸ್ಸಂದೇಹವಾಗಿ ಉಪದೇಶಮಾಡಲ್ಪಟ್ಟಿದೆ. ಮತ್ತು ಭಗವದ್ಗೀತೆಯಲ್ಲಿಯೂ ಕೂಡ ಈ ವಿಚಾರವನ್ನು ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸಿದ್ದಾನೆ.

ಬಹಳ ಪುರಾತನ ಕಾಲದ ಋಷಿಗಳು ತಮ್ಮ ಯೋಗಧ್ಯಾನ ಕಾಲದಲ್ಲಿ ಶಾಂತ ಚಿತ್ತರಾಗಿದ್ದಾಗ ದಿವ್ಯ ಶಬ್ದರಾಶಿಗಳನ್ನು ತಮ್ಮ ಒಳಗಿನ ದಿವ್ಯ ಕಿವಿಯಲ್ಲಿ ಕೇಳಿದರು. ಈ ಶಬ್ದ ರಾಶಿಗಳೇ "ಶ್ರುತಿ" ಯೆಂದು ಕರೆಯಲ್ಪಡುವ ಅಪೌರುಷೇಯವಾದ ನಾಲ್ಕು ವೇದಗಳು. ಕಾಲಕ್ರಮೇಣ ಅನೇಕ ಋಷಿಗಳೂ, ಮಹಾತ್ಮರೂ, ಆಚಾರ್ಯರುಗಳ ದಿವ್ಯ ಚಕ್ಷುಸ್ಸು ಅಥವ ಯೋಗಜನ್ಯ ಜ್ಞಾನವನ್ನು ತಾವೂ ಪಡೆದು ವೇದಗಳಲ್ಲಿರುವ ವಿಷಯಗಳನ್ನು ತಾವೂ ಅನುಭವಿಸಿ ಮಾನವರ ಮತ್ತು ಸಮಾಜದ ಕ್ಷೇಮಕ್ಕೂ ಶ್ರೇಯಸ್ಸಿಗೂ ಅನೇಕ ಉಪದೇಶಗಳನ್ನು ಮಾಡಿರುವರು. ಇವರಿಂದ ಉಂಟಾಗುವ

ವಿದ್ಯೆಗಳಿಗೆ ಅಥವ ಶಾಸ್ತ್ರಗಳಿಗೆ "ಪೌರುಷೇಯ ಶಾಸ್ತ್ರಗಳು" ಎಂದು ಹೆಸರಿಟ್ಟಿರುವರು. ಹೀಗೆ ಅಪೌರುಷೇಯವಾದ ವೇದಗಳೂ ಮತ್ತು ಅವುಗಳಿಂದ ಹುಟ್ಟಿರುವ ಪೌರುಷೇಯ ಶಾಸ್ತ್ರಗಳೂ ಇವೆಲ್ಲವೂ ಒಟ್ಟು ಸೇರಿ "ವೈದಿಕ ಶಬ್ದ ಪ್ರಮಾಣ" ವೆಂದು ಕರೆಯಲ್ಪಟ್ಟಿರುವುವು. ಪ್ರತ್ಯಕ್ಷ ಅನುಮಾನ ಲೌಕಿಕಶಬ್ದ ಪ್ರಮಾಣಗಳಿಗೆ ಅನುಕೂಲವಾಗಿ ಅಂದರೆ ಅವುಗಳಿಂದುಂಟಾಗುವ ತಿಳುವಳಿಕೆಗಳಿಗೆ ವಿರೋಧವಿಲ್ಲದೆ ಅವುಗಳಿಂದ ಅರಿಯಲಾಗದ ವಿಷಯಗಳನ್ನು ಭಾರತೀಯರ ವೈದಿಕ ಶಬ್ದ ಪ್ರಮಾಣವು ತಿಳಿಯಪಡಿಸುತ್ತದೆ. ಇವುಗಳನ್ನು ದಿವ್ಯ ಚಕ್ಷುಸ್ಸನ್ನು ಪಡೆದವರೆಲ್ಲರೂ ಅನುಭವಿಸುತ್ತಾರೆ.

## ಭಾರತೀಯರ ವೈದಿಕ ಪ್ರಮಾಣವಾದ ಮುಖ್ಯ ಪವಿತ್ರ ಗ್ರಂಥಗಳು.

ಈ ವೈದಿಕಶಬ್ದ ಪ್ರಮಾಣವೆಂಬ ಅಪೌರುಷೇಯ ಮತ್ತು ಪೌರುಷೇಯಶಾಸ್ತ್ರಗಳೇ ಪುರಾತನ ಭಾರತೀಯರ ಪವಿತ್ರಗ್ರಂಥಗಳು. ಇವು ಶ್ರುತಿಯಿಂದಲೂ ಅನೇಕ ಮಹಾತ್ಮರ ಉಪದೇಶಗಳಿಂದಲೂ ಹುಟ್ಟಿರುವುದರಿಂದ ಅನೇಕವಾಗಿವೆ. ಇತರ ಮತಗಳ ಪವಿತ್ರ ಗ್ರಂಥಗಳಹಾಗೆ ಒಬ್ಬ ಮಹಾತ್ಮನಿಂದ ಮಾತ್ರ ಬೋಧಿಸಲ್ಪಟ್ಟ ಉಪದೇಶಗಳು ಮಾತ್ರವೇ ಅಲ್ಲ. ಭಾರತೀಯ ವೈದಿಕ ಪ್ರಮಾಣವು ವಿಶಾಲವಾಗಿ ಬೆಳೆದು ಅನೇಕ ವಿದ್ಯೆಗಳಾಗಿಯೂ ಶಾಸ್ತ್ರಗಳಾಗಿಯೂ ಇರುವುದು. ಹಾಗಾದರೆ ಭಾರತೀಯರ ವೈದಿಕ ಶಬ್ದಪ್ರಮಾಣ ಅಥವ ಮುಖ್ಯ ಪವಿತ್ರ ಗ್ರಂಥಗಳಾವುವು? ಅವುಗಳೇ—೧) ಮಂತ್ರ ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳಿಂದ ಕೂಡಿದ ನಾಲ್ಕು ವೇದಗಳು ೨) ಆರುವೇದಾಂಗಗಳು ೩) ಜೈನ ಬೌದ್ಧ ದರ್ಶನಗಳನ್ನು ಒಳಗೊಂಡ ಅಷ್ಟದರ್ಶನಗಳು ೪) ಅನೇಕ ವ್ಯಾಖ್ಯಾನಗಳಿಂದ ಕೂಡಿರುವ ಬ್ರಹ್ಮಸೂತ್ರವು ೫) ಅನೇಕ ವ್ಯಾಖ್ಯಾನಗಳಿಂದ ಕೂಡಿದ ಭಗವದ್ಗೀತೆಯು ೬) ಅನೇಕ ಸ್ಮೃತಿಗಳು ೭) ರಾಮಾಯಣ ಮಹಾಭಾರತಗಳೆಂಬ ಇತಿಹಾಸಗಳು ೮) ಪುರಾಣಗಳು ೯) ಆಗಮಗಳು, ತಂತ್ರಗಳು ೧೦) ಉಪವೇದಗಳು ೧೧) ಸುಭಾಷಿತಗಳು ೧೨) ಬೇರೆ ಬೇರೆ ಭಾಷೆಗಳಲ್ಲಿರುವ ಭಕ್ತರ ಗಾನಗಳು. ಇವುಗಳಲ್ಲಿ ಋಗ್ ಯಜುಃ ಸಾಮ, ಅಥರ್ವಣಗಳು ಎಂಬ ನಾಲ್ಕು ವೇದಗಳು ಪೂರ್ವ ಭಾಗದಲ್ಲಿ ಧರ್ಮ ಅರ್ಥ ಕಾಮ ಎಂಬ ತ್ರಿವರ್ಗಕ್ಕೆ ಸಾಧನವಾದ ಕರ್ಮವನ್ನು ಹೇಳುತ್ತವೆ, ಉತ್ತರ ಭಾಗದಲ್ಲಿ ಬ್ರಹ್ಮನ, ಭಗವಂತನ, ಆತ್ಮನ ಸ್ವರೂಪ ರೂಪಗುಣ ವಿಭವಾದಿಗಳನ್ನು ಹೇಳಿ ಮೋಕ್ಷೋಪಾಯವನ್ನು ತೋರಿಸುತ್ತವೆ. ವೇದಾಂಗಗಳಲ್ಲಿ ಶಿಕ್ಷೆಯೆಂಬುದು ಸ್ವರ ವರ್ಣ ಮಾತ್ರಾದಿಗಳನ್ನು ನಿರೂಪಿಸುತ್ತದೆ. ವ್ಯಾಕರಣವೆಂಬುದು ಪ್ರಕೃತಿ ಪ್ರತ್ಯಯಾದಿ ಮುಖದಿಂದ ಅರ್ಥವನ್ನು ಹೇಳುವ ಪದಗಳನ್ನು ನಿರೂಪಿಸುವುದು. ಛಂದಸ್ಸೆಂಬುದು ಗಾಯತ್ರಿ ತ್ರಿಷ್ಟುಪ್ ಅನುಷ್ಟುಪ್ ಮೊದಲಾದ ಛಂದೋಲಕ್ಷಣವನ್ನು ನಿರೂಪಿಸುವುದು. ಕಲ್ಪಸೂತ್ರವೆಂಬುದು ವೇದೋಕ್ತ ಕರ್ಮ ಪ್ರಯೋಗವನ್ನು ನಿರೂಪಿಸುವುದು. ಜ್ಯೋತಿಷವೆಂಬುದು ಕರ್ಮಾಚರಣಕ್ಕೆ ಕಾಲವನ್ನು ನಿರೂಪಿಸುವುದು. ದರ್ಶನಗಳಲ್ಲಿ ತರ್ಕವೆಂಬುದು ವೇದಾರ್ಥಗಳನ್ನು ಯುಕ್ತಿಗಳಿಂದ ಅಂದರೆ ಅನುಮಾನ ಪ್ರಮಾಣದಿಂದ ತಿಳಿಯ ಪಡಿಸುತ್ತದೆ. ಮೀಮಾಂಸೆಯೆಂಬುದು ವೇದಾರ್ಥಗಳನ್ನು ಪೂರ್ವಪಕ್ಷ

ಸಿದ್ಧಾಂತ ರೂಪದಲ್ಲಿ ವಿಚಾರಿಸಿ ನಿಶ್ಚಯಿಸುತ್ತದೆ. ಸಾಂಖ್ಯದರ್ಶನವು ಪಂಚವಿಂಶತಿ ತತ್ತ್ವಗಳ ಅಂದರೆ ಆತ್ಮಾ, ಪ್ರಕೃತಿ, ಮಹತ್ತು, ಅಹಂಕಾರ, ಮನಸ್ಸು, ಪಂಚ ಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಪಂಚತನ್ಮಾತ್ರೆಗಳು ಮತ್ತು ಪಂಚಮಹಾಭೂತಗಳು ಎಂಬ ಇಪ್ಪತ್ತೈದು ತತ್ತ್ವಗಳ ಸ್ವರೂಪವನ್ನು ವಿವರಿಸುವುದು. ಯೋಗ ದರ್ಶನವೆಂಬುದು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣೆ ಮತ್ತು ಸಮಾಧಿ ಎಂಬ ಯೋಗಾಭ್ಯಾಸದ ಮೆಟ್ಟಿಲುಗಳನ್ನು ತಿಳಿಸುವುದಕ್ಕಾಗಿ ಹುಟ್ಟಿರುವದು. ಬ್ರಹ್ಮಸೂತ್ರವು ಬ್ರಹ್ಮಸ್ವರೂಪವನ್ನೂ ಮೋಕ್ಷೋಪಾಯವನ್ನೂ ಉಪನಿಷದ್ವಾಕ್ಯಗಳ ಆಧಾರದಿಂದಲೂ, ಅನುಮಾನ ಪ್ರಮಾಣದಿಂದಲೂ ನಿಶ್ಚಯಿಸುತ್ತದೆ. ಭಗವದ್ಗೀತೆಯು ರಾಜಯೋಗ, ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗ, ಪ್ರಪತ್ತಿಯೋಗಗಳ ಅಭ್ಯಾಸಗಳ ಕ್ರಮಗಳನ್ನು ಹೃದಯಂಗಮವಾಗಿ ವಿವರಿಸುತ್ತದೆ. ಸ್ಮೃತಿಗಳು ಅಥವಾ ಧರ್ಮಶಾಸ್ತ್ರಗಳು ವರ್ಣಾಶ್ರಮ ಧರ್ಮಗಳನ್ನೂ, ನಿತ್ಯ ನೈಮಿತ್ತಿಕಾದಿ ಕರ್ಮಗಳನ್ನೂ, ಆಚಾರ ವ್ಯವಹಾರಗಳನ್ನೂ, ಪ್ರಾಯಶ್ಚಿತ್ತಾದಿಗಳನ್ನೂ ವಿವರಿಸುತ್ತವೆ. ಇತಿಹಾಸ ಪುರಾಣಗಳು ಜಗತ್ಸೃಷ್ಟಿ ಸಂಹಾರಗಳನ್ನೂ, ರಾಮಕೃಷ್ಣಾದ್ಯವತಾರಗಳ ಮಹಿಮೆಗಳನ್ನೂ ಲೌಕಿಕ ಪಾರಲೌಕಿಕ ಧರ್ಮಗಳನ್ನೂ ಕಥೆಗಳ ಮೂಲಕ ಜನರಿಗೆ ಬೋಧಿಸುತ್ತವೆ. ದೇವಾಲಯಗಳಲ್ಲೂ, ಗೃಹಗಳಲ್ಲೂ ನಡೆಸಬೇಕಾದ ಪೂಜಾದಿ ಕ್ರಮಗಳನ್ನೂ ಆಗಮಗಳು ಸೂಚಿಸುತ್ತವೆ. ತಂತ್ರಗಳಲ್ಲಿ ಪಾತಃಸ್ತವವೆಂಬುವ ಧರ್ಮಾರ್ಥಕಾಮಗಳೆಂಬ ತ್ರಿವರ್ಗ ಫಲಸಾಧನವಾದ ಅನೇಕ ದೇವತೆಗಳ ಉಪಾಸನ ಪ್ರಕಾರಗಳನ್ನೂ ತಿಳಿಸುವುದು. ಪಾಂಚರಾತ್ರವೆಂಬುದು ವೇದಾಂತತತ್ತ್ವ ವಿಷಯವಾದ ಭಗವದುಪಾಸನಾ ನಿರೂಪಣಾರ್ಥವಾಗಿ ಹುಟ್ಟಿರುವುದು. ಉಪವೇದಗಳಲ್ಲಿ ಆಯುರ್ವೇದವು ವ್ಯಾಧಿ ನಿಧಾನ ಚಿಕಿತ್ಸೆಗಳನ್ನು ನಿರೂಪಿಸುತ್ತದೆ. ಧನುರ್ವೇದವೆಂಬುದು ಅಸ್ತ್ರ, ಶಸ್ತ್ರ, ಪ್ರಯೋಗ, ಉಪಸಂಹಾರಗಳನ್ನು ತಿಳಿಸುತ್ತದೆ. ಗಾಂಧರ್ವವೆಂಬುದು ನೃತ್ಯ ಗೀತ ವಾದ್ಯಾದಿಗಳನ್ನು ವಿವರಿಸುತ್ತದೆ. ಅರ್ಥಶಾಸ್ತ್ರವೆಂಬುದು ವ್ಯವಸಾಯ, ಪಶುಪಾಲನ, ಕೈಗಾರಿಕೆ, ವ್ಯಾಪಾರ, ಪ್ರವಾಸಾನುಕೂಲ್ಯ ಮೊದಲಾದ ಧಾರ್ಮಿಕ ವೃತ್ತಿಗಳನ್ನೂ, ಸಂಪಾದಿಸಿದ ಐಶ್ವರ್ಯವನ್ನು ಧರ್ಮಮಾರ್ಗದಲ್ಲಿ ಉಪಯೋಗಿಸುವ ಮಾರ್ಗಗಳನ್ನೂ ಮತ್ತು ಪ್ರಜಾ ಪರಿಪಾಲನಾದಿ ರಾಜ ನೀತಿಗಳನ್ನೂ ಬೋಧಿಸುತ್ತದೆ. ಕಾಳಿದಾಸಾದಿ ಮಹಾಕವಿಗಳು ಲೋಕಹಿತಾರ್ಥವಾಗಿ ಸಾಹಿತ್ಯರೂಪದಲ್ಲಿ ವಿವರಿಸಿರುವ ನೀತಿಯುತ ರಸಭರಿತವಾದ ವಾಕ್ಯಗಳ ಸಮೂಹವೇ ಸುಭಾಷಿತಗಳು. ಇವುಗಳಲ್ಲದೆ ಕನ್ನಡದಲ್ಲೂ, ತಮಿಳಿನಲ್ಲೂ, ತೆಲುಗಿನಲ್ಲೂ, ಮರಾಠಿಯಲ್ಲೂ, ಹಿಂದಿಯಲ್ಲೂ, ಬಂಗಾಳಿ ಭಾಷೆಯಲ್ಲೂ, ಸರ್ವಜ್ಞ, ಪುರಂದರ ದಾಸ, ನಮ್ಮಾಳ್ವಾರ್, ಸಂಬಂದಾರ್, ತ್ಯಾಗರಾಜರು, ಪೋತನ, ಜ್ಞಾನದೇವ್, ತುಕಾರಾಮ್, ತುಳಸೀದಾಸ್, ಮೀರಾಬಾಯಿ, ರವೀಂದ್ರನಾಥ ಠಾಕೂರರು, ಮೊದಲಾದ ಭಕ್ತರುಗಳು ತಮ್ಮ ದಿವ್ಯ ಸಂದೇಶಗಳನ್ನು ಉತ್ತಮ ಗಾನಗಳಲ್ಲಿ ಪ್ರಕಾಶ ಪಡಿಸಿರುವರು. ಹೀಗೆ ಭಾರತೀಯ ಶಬ್ದ ಪ್ರಮಾಣವೆಂಬ ಪವಿತ್ರಗ್ರಂಥಗಳು ಅನೇಕವಾಗಿಯೂ ಸಾರವತ್ತಾಗಿಯೂ ಇವೆ.

ಶ್ರೀ ನವಭಾರತ ಆಶ್ರಮ ಗೌರಿಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

## (ಮಾಲಿಕೆ—ನಾಲ್ಕು)

## ಸಕಲ ಅಸತ್ ಪದಾರ್ಥಗಳಲ್ಲಿ ಸತ್ ಸ್ವರೂಪವು ತುಂಬಿರುವುದು.

( ಈಶಾವಾಸ್ಯ ಮಿದಂ ಸರ್ವಂ ಯತ್ಕಿಂಚ ಜಗತ್ಯಾಂಜಗತ್ )

### ಅಸತ್—ಸತ್ ಎಂದರೇನು.

ವಿದ್ಯಾರ್ಥಿಯು ತನ್ನ ವಿಹಾರ ಯಾತ್ರೆಯಲ್ಲಿ ಒಂದು ಬೆಟ್ಟದ ಮೇಲೆ ನಿಲುಗಿದ್ದು ಬೆಳಿಗ್ಗೆ ಸೂರ್ಯೋದಯವಾದೊಡನೆಯೇ ಏನನ್ನು ನೋಡುವನು? ವಿಧವಿಧವಾದ ಅನಂತಾನಂತ ಸಣ್ಣ ಮತ್ತು ದೊಡ್ಡ ಪದಾರ್ಥಗಳನ್ನು ಎಲ್ಲೆಲ್ಲಿಯೂ ನೋಡಿ ಅನುಭವಿಸುವನು ಮತ್ತು ತಾನು ಎಲ್ಲಾ ಕಡೆಗಳಲ್ಲಿಯೂ ಅನುಭವಿಸುವ ಪದಾರ್ಥಗಳ ರಾಶಿಯನ್ನು ಒಟ್ಟಾಗಿ ಸೇರಿಸಿ ಆ ಸಂಪೂರ್ಣ ಅನುಭವವನ್ನು ಒಟ್ಟು ಜಗತ್ತೆಂದು ತಿಳಿಯುವನು. ಆದರೆ ಈ ಒಟ್ಟು ಜಗತ್ತಿನಲ್ಲಿಯೂ ಮತ್ತು ಪ್ರತಿಯೊಂದು ಪದಾರ್ಥದಲ್ಲಿಯೂ ದಿನ ದಿನಕ್ಕೂ, ವಾರ ವಾರಕ್ಕೂ, ತಿಂಗಳು ತಿಂಗಳಿಗೆ ಅಥವ ವರುಷ ವರುಷಕ್ಕೆ ಬದಲಾವಣೆಗಳಾಗುತ್ತಿರುವವನ್ನು ನೋಡುವನು. ಇಷ್ಟೇ ಅಲ್ಲ; ಪ್ರತಿಯೊಂದು ಪದಾರ್ಥದಲ್ಲಿಯೂ ಅವನು ಅದರ ಸಂಪೂರ್ಣ ಸ್ವರೂಪವನ್ನು ಅರಿಯಲಾರನು. ಏಕೆಂದರೆ ಅವನು ತನ್ನ ಇಂದ್ರಿಯ ಮನಸ್ಸು ಬುದ್ಧಿಗಳಿಗೆ ಎಷ್ಟು ಮಾತ್ರ ಶಕ್ತಿ ಇರುವುದೋ ಅಷ್ಟು ಮಾತ್ರ ಪದಾರ್ಥಗಳ ಸ್ವರೂಪವನ್ನು ಅರಿಯಬಹುದೇ ಹೊರತು ಅದಕ್ಕಿಂತ ಹೆಚ್ಚಾಗಿ ತಿಳಿಯುವುದಕ್ಕಾಗುವುದಿಲ್ಲ. ಪದಾರ್ಥದ ಇರುವಿಕೆಯ ನಿಜ ಸ್ವರೂಪವೂ ಶಕ್ತಿ ಗುಣಗಳೂ ಎಲ್ಲವೂ ಅವನ ಇಂದ್ರಿಯ ಮನ ಬುದ್ಧಿಗಳಿಗೆ ಗೋಚರವಾಗದಷ್ಟು ಗುಪ್ತವಾಗಿವೆ. ಪದಾರ್ಥಗಳ ಹೊರಗಿನ ರೂಪ ಗಾತ್ರಾದಿಗಳನ್ನು ಮತ್ತು ಗುಣಗಳನ್ನೂ ಮಾತ್ರ ಮಾನವನು ತನ್ನ ಇಂದ್ರಿಯ ಮನ ಬುದ್ಧಿಗಳಿಂದ ಗ್ರಹಿಸಬಲ್ಲನೇ ಹೊರತು, ಅವರ ಅಪರಿಮಿತವಾದ ಶಾಶ್ವತವಾದ ಇರುವಿಕೆಯ ನಿಜ ಸ್ವರೂಪ ಶಕ್ತಿ ಗುಣಗಳನ್ನು ಅರಿಯಲಾರನು. ಇನ್ನೊಂದು ವಿಷಯವನ್ನು ಇಲ್ಲಿ ಆಲೋಚಿಸಬೇಕಾಗುತ್ತದೆ. ವಿದ್ಯಾರ್ಥಿಯು ಅನುಭವಿಸುವ

ಪದಾರ್ಥಗಳು ಅವನು ಹೊರಗೆ ಕಾಣುವ ರೂಪಾದಿಗಳು ಮಾತ್ರವಲ್ಲ; ಏಕೆಂದರೆ ಅವನ ಮನಸ್ಸಿನಲ್ಲಿಯೇ ಉತ್ಪತ್ತಿಯಾಗುವ ಮತ್ತು ಹೊರಗಡೆ ಇಲ್ಲದ ಅನೇಕ ಚಿತ್ತ ವೃತ್ತಿಗಳ ರೂಪಗಳೂ ಭಾವನೆಗಳೂ ಕೂಡ ಅವನು ಅನುಭವಿಸುವ ಪದಾರ್ಥಗಳಲ್ಲಿ ಮಿಳಿತವಾಗುವುವು. ಆದುದರಿಂದ ಅವನು ಅನುಭವಿಸುವ ಪದಾರ್ಥದಲ್ಲಿ ಯಾವ ಶಕ್ತಿಗುಣಗಳು ಹೊರಗೆ ಇವೆ ಮತ್ತು ಯಾವ ಶಕ್ತಿ ಗುಣಗಳು ತನ್ನ ಮನಸ್ಸಿನಲ್ಲಿ ಉದ್ಭವವಾಗಿ ಪದಾರ್ಥದ ಅನುಭವದಲ್ಲಿ ಮಿಳಿತವಾಗಿವೆ ಎಂಬುದನ್ನು ಅವನು ವಿಭಾಗಿಸಲಾರನು. ಉದಾಹರಣೆಗಾಗಿ, ಒಂದು ಬೆಟ್ಟದ ಅನುಭವವನ್ನು ತೆಗೆದುಕೊಳ್ಳೋಣ. ಬೆಟ್ಟವೆಂಬ ಹೊರಗಿನ ಪದಾರ್ಥದ ಸ್ವರೂಪದಲ್ಲಿ ಕೆಲವು ಅಂಶಗಳನ್ನು ಮಾತ್ರ ನಾನು ನನ್ನ ಮನಸ್ಸು ಮತ್ತು ಇಂದ್ರಿಯಗಳ ಮೂಲಕ ತಿಳಿಯಬಲ್ಲೆನು; ಆದರೆ ಅದರ ಸಂಪೂರ್ಣ ನಿಜಸ್ವರೂಪ ಗುಣಶಕ್ತಿಗಳನ್ನು ತಿಳಿಯಲಾಗುವುದಿಲ್ಲ. ಇನ್ನೇನು, ಈಗ ನಾವು ಪಡೆಯುತ್ತಿರುವ ಬೆಟ್ಟದ ಅನುಭವದಲ್ಲಿ ನನ್ನ ಮನಸ್ಸಿನಲ್ಲಿಯೇ ಉತ್ಪತ್ತಿಯಾಗುವ ಅದರ ಉದ್ದ, ಅಗಲ, ಎತ್ತರ, ಆಕಾರ, ಕಾಲ, ದೇಶ ಮೊದಲಾದ ಅನೇಕ ಭಾವನೆಗಳೂ ಸೇರಿವೆ ಎಂಬುದನ್ನು ಜರ್ಮನೀ ದೇಶದ ಇಮ್ಮ್ಯಾನ್ಯುಯಲ್ ಕಾಂಟ್ (Immanuel Kant) ಎಂಬ ತತ್ವ ಶಾಸ್ತ್ರಜ್ಞನು ವಿಶದವಾಗಿ ವಿವರಿಸಿರುವನು. ಆದುದರಿಂದಲೇ ಒಂದು ಬೆಟ್ಟದ ಸ್ವರೂಪವನ್ನು ಒಂದು ಪಕ್ಷಿಯು ತಿಳಿಯುವುದಕ್ಕೂ, ಒಂದು ಮಗುವು ತಿಳಿಯುವುದಕ್ಕೂ, ಒಬ್ಬ ಹಳ್ಳಿಯವನು ತಿಳಿಯುವುದಕ್ಕೂ ಮತ್ತು ಒಬ್ಬ ವಿದ್ಯಾರ್ಥಿಯು ತಿಳಿಯುವುದಕ್ಕೂ ವ್ಯತ್ಯಾಸಗಳಿವೆ. ನನ್ನ ಬೆಟ್ಟದ ಅನುಭವವೇ ಮೊದಲು ಅಸಂಪೂರ್ಣ. ಈ ಅನುಭವದಲ್ಲಿ ನನ್ನ ಮನಸ್ಸು ಅಥವ ಅಂತಃಕರಣದಲ್ಲಿಯೇ ಉಂಟಾಗುವ ಭಾವನೆಗಳನ್ನು ಕಳೆದರೆ ಕೊನೆಗೆ ಬೆಟ್ಟದ ನಿಜಸ್ವರೂಪವೇನೆಂಬುದು ನನಗೆ ಗೊತ್ತಾಗುವುದೇ ಇಲ್ಲ.

ಹೀಗೆ ವಿಚಾರಮಾಡಿದುದರಿಂದ ನಾವು ತೀರ್ಮಾನಿಸುವುದೇನು ? ಮನುಷ್ಯನು ಅನುಭವಿಸುವ ಬೆಟ್ಟದಲ್ಲಿ ಎರಡು ಸ್ವರೂಪಗಳಿವೆ; ಇಂದ್ರಿಯ ಮನಸ್ಸುಗಳ ಮೂಲಕ ಅವನಿಗೆ ಗೋಚರವಾಗುವ ಅದರ ಸ್ವರೂಪ ಗುಣ ಶಕ್ತಿಗಳು ಒಂದು; ಮತ್ತು ಅವನ ಇಂದ್ರಿಯ ಮನಸ್ಸು ಬುದ್ಧಿಗಳಿಗೆ ಎಟುಕದ ಅದರ ನಿಜವಾದ ಸಂಪೂರ್ಣವಾದ ಸ್ವರೂಪ ಗುಣ ಶಕ್ತಿಗಳು ಇನ್ನೊಂದು. ಹೀಗೆಯೇ ವಿದ್ಯಾರ್ಥಿಯು ಅನುಭವಿಸುವ ಸಣ್ಣ ಮತ್ತು ದೊಡ್ಡ ಎಲ್ಲಾ ಪದಾರ್ಥಗಳಿಗೂ ಈ ಎರಡು ವಿಧವಾದ ಸ್ವರೂಪಗಳಿವೆ. ಮನುಷ್ಯನು ತನ್ನ ಇಂದ್ರಿಯ ಮನ ಬುದ್ಧಿಗಳಿಂದ ತಿಳಿಯುವ ಪದಾರ್ಥಗಳ ಸ್ವರೂಪ ಶಕ್ತಿ ಗುಣಗಳಿಗೆ ಅವುಗಳ ವ್ಯಕ್ತಸ್ವರೂಪವೆಂದೂ ಮತ್ತು ಮನುಷ್ಯನ ಇಂದ್ರಿಯ ಮನ ಬುದ್ಧಿಯಿಂದ ತಿಳಿಯಲಾಗದ ಅವುಗಳ ನಿಜಸ್ವರೂಪ ಶಕ್ತಿ ಗುಣಗಳಿಗೆ ಅವುಗಳ ಅವ್ಯಕ್ತಸ್ವರೂಪವೆಂದೂ ಭಾರತೀಯ ದಾರ್ಶನಿಕರು ಕರೆದಿರುವರು. ಈ ವ್ಯಕ್ತ ಸ್ವರೂಪವನ್ನೇ ಜ್ಞಾನಿಗಳಾದ ಋಷಿಗಳು ಉಪನಿಷತ್ತು

ಗಳನ್ನು **ಅಸತ್** ಪದಾರ್ಥಗಳೆಂದೂ ಮತ್ತು ಅವರ ಅವ್ಯಕ್ತ ಸ್ವರೂಪ ಗುಣಶಕ್ತಿಗಳ ತಿಳುವಳಿಕೆಯನ್ನೇ **ಸತ್** ಸ್ವರೂಪವೆಂದೂ ಹೆಸರಿಟ್ಟಿರುವರು. ಅದರೆ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡ ಭಕ್ತರುಗಳು **ವ್ಯಕ್ತ** ಸ್ವರೂಪಾದಿಗಳನ್ನು ಪದಾರ್ಥಗಳ **ದೇಹಗಳೆಂದೂ**, ಅವುಗಳ ಅವ್ಯಕ್ತ ಸ್ವರೂಪಾದಿಗಳ ತಿಳುವಳನ್ನು ಪರಮಾತ್ಮನ **ಅಂತರ್ಯಾಮಿ ಸ್ವರೂಪವೆಂದೂ** ಉಪದೇಶ ಮಾಡಿರುವರು. **ಅವ್ಯಕ್ತ ಸ್ವರೂಪ, ಸತ್ ಸ್ವರೂಪ ಪರಮಾತ್ಮನ ಅಂತರ್ಯಾಮಿ ಸ್ವರೂಪ** ಎಂಬಿವುಗಳು ಪರ್ಯಾಯ ಪದಗಳು. ಹಾಗೆಯೇ, **ವ್ಯಕ್ತ ಸ್ವರೂಪ, ಅಸತ್ ಸ್ವರೂಪ, ದೇಹಗಳ ಸ್ವರೂಪ** ಎಂಬಿವೂ ಕೂಡ ಪರ್ಯಾಯ ಪದಗಳು. ಇನ್ನು ಪ್ರತಿಯೊಂದು ಪದಾರ್ಥದ ಅಸತ್, ದೇಹ ಅಥವ ವ್ಯಕ್ತಸ್ವರೂಪವು ಹೇಗೆ ಸದಾ ಪರಿಣಾಮಗಳನ್ನು ಹೊಂದುತ್ತಿರುವುದೆಂಬುದನ್ನು ಮತ್ತು ಅದರ ಸತ್‌ಸ್ವರೂಪ, ಪರಮಾತ್ಮ ಅಂತರ್ಯಾಮಿ ಸ್ವರೂಪ ಅಥವಾ ಅವ್ಯಕ್ತ ಸ್ವರೂಪವು ಹೇಗೆ ಅನಂತವಾಗಿ ನಾಶರಹಿತವಾಗಿ ಇರುವುದು ಎಂಬ ಗಹನವಾದ ವಿಚಾರವನ್ನು, ಕೆಲವು ಉದಾಹರಣೆಗಳಿಂದ ತಿಳಿಯಲು ಪ್ರಯತ್ನಿಸೋಣ.

## ನಿರ್ಜೀವ ಪದಾರ್ಥಗಳ ಉದಾಹರಣೆಗಳು.

ಆಧುನಿಕ ಖಗೋಳ ವಿಜ್ಞಾನವು (Astronomy) ಅಂತರಿಕ್ಷದಲ್ಲಿ ಪ್ರಕಾಶಿಸುತ್ತಿರುವ ಅದ್ಭುತ ಗೋಳಗಳ ವಿಚಾರಗಳನ್ನು ತಿಳಿಯಪಡಿಸುತ್ತದೆ. ಸಾಧಾರಣವಾಗಿ ನಮ್ಮ ಕಣ್ಣುಗಳಿಗೆ ನೂರಾರು ನಕ್ಷತ್ರಗಳೂ, ಸೂರ್ಯನೂ, ಗ್ರಹಗಳೂ, ಚಂದ್ರನೂ ಮಾತ್ರ ಆಕಾಶದಲ್ಲಿರುವ ಹಾಗೆ ಕಾಣುವುದಲ್ಲವೆ? ಆದರೆ ವೈಜ್ಞಾನಿಕರು ದೂರದರ್ಶಿನಿ (Telescope) ಮೊದಲಾದ ಯಂತ್ರಗಳ ಸಹಾಯದಿಂದ ಇನ್ನೂ ಲಕ್ಷಾಂತರ ನಕ್ಷತ್ರಗಳು ಇರುವುವೆಂದೂ, ಪ್ರತಿಯೊಂದು ನಕ್ಷತ್ರವೂ ಸೂರ್ಯನಿಗಿಂತಲೂ ದೊಡ್ಡದೆಂದೂ, ಸೂರ್ಯನು ನಕ್ಷತ್ರಗಳಲ್ಲಿ ಅತಿ ಚಿಕ್ಕ ನಕ್ಷತ್ರವೆಂದೂ, ಭೂಮಿಯೂ ಕೂಡ ಸೂರ್ಯನನ್ನು ಸುತ್ತುತ್ತಿರುವ ಗ್ರಹವೆಂದೂ, ಚಂದ್ರನು ಭೂಮಿಯನ್ನು ಸುತ್ತುತ್ತಿರುವ ಒಂದು ಉಪಗ್ರಹವೆಂದೂ ಕಂಡು ಹಿಡಿದಿರುವರು. ಈ ವಿಚಾರಗಳೆಲ್ಲವೂ ನಕ್ಷತ್ರಾದಿಗಳ ವ್ಯಕ್ತ ಅಥವಾ ಇಂದ್ರಿಯ ಮನ ಬುದ್ಧಿಗಳಿಗೆ ಗೋಚರವಾಗುವ ಸ್ವರೂಪಕ್ಕೆ ಒಳಪಟ್ಟವು. ಆದರೆ ಯಾವ ಮಹಾ **ಇರುವಿಕೆಯ** (Existence) ಶಕ್ತಿಯಿಂದ ಅನಂತ ಆಕಾಶವು ಉಂಟಾಯಿತು? ಅದರಲ್ಲಿ ಲಕ್ಷಾಂತರ ನಕ್ಷತ್ರಗಳು ಉಂಟಾದುವು? ಕೆಲವು ನಕ್ಷತ್ರಗಳನ್ನು ಕೇಂದ್ರಗಳನ್ನಾಗಿ ಮಾಡಿಕೊಂಡು ಮಿಕ್ಕ ನಕ್ಷತ್ರಗಳು ಏಕೆ ಅವನ್ನು ಸುತ್ತುತ್ತವೆ? ಗ್ರಹಗಳೂ ಅವುಗಳಲ್ಲಿ ಭೂಮಿಯೂ ಒಂದಾಗಿ ಏಕೆ ಸದಾ ಸೂರ್ಯನನ್ನು ಸುತ್ತುತ್ತವೆ? ಒಟ್ಟಿನಲ್ಲಿ ಖಗೋಳದಲ್ಲಿರುವ ಲಕ್ಷಾಂತರ ಗೋಳಗಳು ಯಾವ ಅದೃಶ್ಯ ಅನಂತ ಸ್ವರೂಪದ ಪ್ರೇರೇಪಣೆಯಿಂದ ಒಂದಕ್ಕೊಂದು ಸಾಮರಸ್ಯದಿಂದ ಸುತ್ತುತ್ತಲೇ ಇವೆ? ಎಂಬೀ

ವಿಚಾರಗಳೂ; ಮತ್ತು ನಕ್ಷತ್ರಾದಿಗಳ ಇಂದ್ರಿಯ ಮನ ಬುದ್ಧಿ ಅತೀತವಾದ ನಿಜ ಸ್ವರೂಪವೇನು? ಎಂಬ ವಿಚಾರವೂ ಈ ನಕ್ಷತ್ರಾದಿಗಳ ಅವ್ಯಕ್ತ, ಸತ್ ಅಥವಾ ಅಂತರ್ಯಾಮಿ ಸ್ವರೂಪಕ್ಕೆ ಸಂಬಂಧಪಟ್ಟವು.

ಭೂಗೋಳ ಶಾಸ್ತ್ರವು (Geography) ಭೂಮಿಯಲ್ಲಿ ಬಹು ಭಾಗವು ಸಮುದ್ರವೆಂದೂ, ಮಿಕ್ಕ ಭಾಗವು ನೆಲಭಾಗವೆಂದೂ, ನೆಲಭಾಗದಲ್ಲಿ ಐದಾರು ಖಂಡಗಳಿವೆಯೆಂದೂ, ಪ್ರತಿಯೊಂದು ಖಂಡದಲ್ಲಿಯೂ ದೇಶ, ಬೆಟ್ಟ, ಮೈದಾನ, ಸರೋವರ, ನದಿ, ಕಾಡುಗಳು, ಸಸ್ಯಾದಿಗಳು, ಮಳೆ ಗಾಳಿಯ ವೈಶಿಷ್ಟ್ಯಗಳು ಇವೆಯೆಂದೂ ತಿಳಿಯಪಡಿಸುತ್ತದೆ. ಈ ವಿಚಾರಗಳೆಲ್ಲವೂ ಭೂಮಿಯ ವ್ಯಕ್ತ ಅಥವ ಶರೀರದ ಸ್ವರೂಪಕ್ಕೆ ಅಂದರೆ ಪರಿಣಾಮಗಳನ್ನು ಹೊಂದುವ ಅಸತ್ ಸ್ವರೂಪಕ್ಕೆ ಒಳಪಟ್ಟವೆ. ಆದರೆ ಯಾವ ಅನಂತ ಮಹಾ ಇಪಾಪಿಕೆಯ ಶಕ್ತಿಯಿಂದ ಈ ಭೂಮಿಯು ಉದ್ಭವಿಸಿ ಇದು ತನ್ನನ್ನು ತಾನೇ ಸುತ್ತುತ್ತಾ ಸೂರ್ಯನನ್ನು ಸುತ್ತುತ್ತದೆ? ಮತ್ತು ಇದರಲ್ಲಿ ಸಜೀವ ನಿರ್ಜೀವ ಪದಾರ್ಥಗಳೂ, ಚೇತನಾಚೇತನ ಪದಾರ್ಥಗಳೂ ತಾವಾಗಿಯೇ ಬೆಳೆಯುತ್ತವೆ? ಎಂಬ ವಿಚಾರಗಳೂ ಮತ್ತು ಇಂದ್ರಿಯ ಮನ ಬುದ್ಧಿಗಳಿಗೆ ಅತೀತವಾದ ಭೂಮಿಯ ನಿಜ ಸ್ವರೂಪವಾವುದು? ಎಂಬ ವಿಚಾರವೂ ಈ ಭೂಮಿಯ ಅವ್ಯಕ್ತ, ಸತ್ ಅಥವಾ ಅಂತರ್ಯಾಮಿಯ ಸ್ವರೂಪಕ್ಕೆ ಸಂಬಂಧಪಟ್ಟದ್ದೆಂದು ತಿಳಿಯಬೇಕು.

ಪದಾರ್ಥಗಳು ಅತಿ ಸೂಕ್ಷ್ಮವಾದ ಅಣುಗಳ ಮತ್ತು ಶಕ್ತಿಗಳ ಸಂಯೋಗದಿಂದ ಉಂಟಾಗುವುವೆಂಬುದನ್ನೂ ಮತ್ತು ಆ ಪದಾರ್ಥಗಳ ನಮ್ಮ ಇಂದ್ರಿಯ ಮನ ಬುದ್ಧಿಗಳಿಗೆ ಗೋಚರವಾಗುವ ಸ್ವರೂಪ, ರೂಪ ಗುಣಾದಿಗಳನ್ನೂ ರಸಾಯನ ವಿಜ್ಞಾನವೂ (Chemistry) ಭೌತ ವಿಜ್ಞಾನವೂ (Physics) ತಿಳಿಯಪಡಿಸುತ್ತವೆ. ಈ ವಿಚಾರಗಳೆಲ್ಲವೂ ಅಣುಗಳ ಮತ್ತು ಪದಾರ್ಥಗಳ ವ್ಯಕ್ತ ಸ್ವರೂಪಕ್ಕೆ ಸಂಬಂಧಪಟ್ಟವು. ಆದರೆ ಯಾವ ಮಹಾಶಕ್ತಿಯು ಅಣುವಿನಲ್ಲಿ ಪ್ರೋಟಾನ್ ಮತ್ತು ಎಲೆಕ್ಟ್ರಾನುಗಳನ್ನು ಉಂಟುಮಾಡುತ್ತದೆ? ಸೂರ್ಯನನ್ನು ಗ್ರಹಗಳು ಸುತ್ತುವ ಹಾಗೆ ಆ ಅವ್ಯಕ್ತ ಸ್ವರೂಪವು ಹೇಗೆ ಇವುಗಳಲ್ಲಿ ಒಂದನ್ನು ಇನ್ನು ಮಿಕ್ಕವುಗಳು ಸುತ್ತುವ ಹಾಗೆ ಮಾಡಿ ಅಣುವಿನಲ್ಲಿ ವಿಶೇಷವಾದ ಕಾರ್ಯಗಳನ್ನುಂಟು ಮಾಡುವ ಶಕ್ತಿಯನ್ನು ಕೊಡುತ್ತದೆ? ಮತ್ತು ಅಣುಗಳ ಸಂಯೋಗದಿಂದುಂಟಾಗುವ ಸಮಿತಿಯುಳ್ಳ ಮಡಕೆ ಮೊದಲಾದ ಪದಾರ್ಥಗಳಲ್ಲಿ ಗಾತ್ರ, ಭಾರ, ರೂಪ, ರಸ, ಶಬ್ದ, ಇತರ ಪದಾರ್ಥಗಳನ್ನು ಸೆಳೆಯುವ ಶಕ್ತಿ ಮೊದಲಾದ ಗುಣಗಳನ್ನು ಅದು ಹೇಗೆ ಉಂಟು ಮಾಡುತ್ತದೆ? ಎಂಬೀ ವಿಚಾರಗಳೂ ಮತ್ತು ಅಣುವಿನ ಪದಾರ್ಥಗಳ ಇಂದ್ರಿಯ ಮನ ಬುದ್ಧಿಗಳಿಗೆ ಅತೀತವಾದ ನಿಜ ಸ್ವರೂಪವಾವುದು ಎಂಬ ವಿಚಾರವೂ ಈ ಅಣುವಿನ ಮತ್ತು ಪದಾರ್ಥದ ಅವ್ಯಕ್ತ, ಸತ್, ಅಥವ ಅಂತರ್ಯಾಮಿ ಸ್ವರೂಪಕ್ಕೆ ಸಂಬಂಧಪಟ್ಟವು.

## ೫

## ಸಜೀವ ಪದಾರ್ಥಗಳ ಉದಾಹರಣೆಗಳು

ಒಂದು ಬೀಜವನ್ನು ಪರೀಕ್ಷಿಸೋಣ. ಸಸ್ಯವಿಜ್ಞಾನವು (Botany) ಅದರ ಗಾತ್ರ, ತೂಕ, ಭಾರ, ರೂಪ, ರಸ, ಗಂಧ, ಮೊದಲಾದ ಪರಿಣಾಮಗಳಿಂದ ಕೂಡಿದ ಅದರ ವ್ಯಕ್ತ ಸ್ವರೂಪವನ್ನು ತಿಳಿಯಪಡಿಸುತ್ತದೆ. ಅದನ್ನು ನೆಲದಲ್ಲಿ ಬಿತ್ತಿ ನೀರನ್ನು ಹಾಕಿದರೆ ಅದರ ರೂಪ ನಾಶವಾಗಿ ದೊಡ್ಡ ವೃಕ್ಷವಾಗುತ್ತದೆ; ಆ ವೃಕ್ಷದಲ್ಲಿ ಅದೇ ಮಾದರಿಯ ಸಹಸ್ರಾರು ಬೀಜಗಳಾಗುತ್ತವೆ; ಪುನಃ ಒಂದೊಂದು ಬೀಜವೂ ಒಂದೊಂದು ವೃಕ್ಷವಾಗುತ್ತದೆ. ಪುನಃ ಪ್ರತಿಯೊಂದು ವೃಕ್ಷದಲ್ಲಿಯೂ ಒಂದೇ ಮಾದರಿಯ ಸಹಸ್ರಾರು ಬೀಜಗಳುಂಟಾಗುತ್ತವೆ ಎಂಬೀ ವಿಚಾರಗಳನ್ನು ತಿಳಿಯುವುದೂ ಕೂಡ ಬೀಜದ ಅಸತ್ ಅಥವ ವ್ಯಕ್ತ ಸ್ವರೂಪಕ್ಕೆ ಸಂಬಂಧ ಪಡುವುದು. ಆದರೆ ಬೀಜಗಳಲ್ಲಿ ಇಂಥಾ ಅದ್ಭುತ ಪರಿಣಾಮಗಳನ್ನು ಶಾಶ್ವತವಾಗಿ ಉಂಟು ಮಾಡುತ್ತಿರುವ ಅನಂತ ಮಹಾ ಸ್ವರೂಪದ ಶಕ್ತಿ ಯಾವುದು? ಎಂಬ ವಿಚಾರವೂ ಮತ್ತು ಈ ಬೀಜ ವೃಕ್ಷಗಳ ಇಂದ್ರಿಯ ಮನ ಬುದ್ಧಿಗಳಿಗೆ ಅತೀತವಾದ ನಿಜಸ್ವರೂಪವೇನು ಎಂಬುದೂ ಈ ಬೀಜ ವೃಕ್ಷಗಳ ಅವ್ಯಕ್ತ ಅಥವ ಸತ್‌ಸ್ವರೂಪಕ್ಕೆ ಒಳಪಟ್ಟ ವಿಷಯಗಳು. ಈ ಅನಂತವಾದ ಸ್ವರೂಪವೇ ಶಾಶ್ವತವಾಗಿ ಬೀಜಗಳಲ್ಲಿದ್ದು ಹೊಸ ಹೊಸ ಬೀಜಗಳನ್ನೂ ವೃಕ್ಷಗಳನ್ನೂ ಸೃಷ್ಟಿಸುತ್ತದೆ ಮತ್ತು ಬೀಜಗಳ ವೃಕ್ಷಗಳ ರೂಪಗಳು ನಾಶವಾದಾಗ್ಯೂ ತಾನು ಮಾತ್ರ ಯಾವಾಗಲೂ ಇರುತ್ತದೆ.

ಜೀವ ವಿಜ್ಞಾನದಲ್ಲಿ (Zoology) ವಿವರಿಸಿರುವ ಒಂದು ಸಣ್ಣ ಜೀವದ್ರವ್ಯವನ್ನು ಪರೀಕ್ಷಿಸೋಣ. ಅದು ಕ್ರಮೇಣ ಪರಿಣಾಮವಾದದಲ್ಲಿ ತಿಳಿಯಪಡಿಸಿರುವ ಹಾಗೆ ವಿವಿಧ ಪ್ರಾಣಿಗಳಾಗಿಯೂ ಮತ್ತು ಕೊನೆಯಲ್ಲಿ ಮನುಷ್ಯರಾಗಿಯೂ ಬೆಳೆಯುತ್ತದೆಯಲ್ಲವೆ? ಈ ವಿಚಾರಗಳನ್ನು ತಿಳಿಯುವುದು ಪ್ರಾಣಿಗಳ ವ್ಯಕ್ತ ಸ್ವರೂಪಕ್ಕೆ ಸಂಬಂಧಪಡುತ್ತದೆ. ಆದರೆ ಯಾವ ಅದ್ಭುತ ಸ್ವರೂಪದ ಆಧಾರದಿಂದ ಒಂದು ಸಣ್ಣ ಜೀವದ್ರವ್ಯವನ್ನು ಅನೇಕ ಭಾಗವಾಗಿ ಕತ್ತರಿಸಿದರೆ ಪ್ರತಿಯೊಂದು ಭಾಗದಲ್ಲಿಯೊಂದು ಸಣ್ಣ ಜೀವದ್ರವ್ಯವುಂಟಾಗುವುದು ಮತ್ತು ಒಂದು ಜೀವದ್ರವ್ಯದಿಂದ ಅನೇಕ ಜೀವದ್ರವ್ಯಗಳು ಹುಟ್ಟುವುವು? ಎಂಬ ವಿಚಾರಗಳೂ ಮತ್ತು ಈ ಸಣ್ಣ ದೊಡ್ಡ ಜೀವ ದ್ರವ್ಯಗಳ ಇಂದ್ರಿಯ ಮನ ಬುದ್ಧಿಗಳಿಗೆ ಅತೀತವಾದ ಸ್ವರೂಪವೇನು? ಎಂಬ ವಿಚಾರವೂ ಈ ಜೀವ ದ್ರವ್ಯಗಳ ಅವ್ಯಕ್ತ ಅಥವ ಸತ್‌ಸ್ವರೂಪಕ್ಕೆ ಸಂಬಂಧಪಟ್ಟವು. ಹಾಗೆಯೇ ಯಾವ ಮಹಾ ಶಕ್ತಿಯಿಂದ ಗರ್ಭದಲ್ಲಿ ಶಿಶುವು ಬೆಳೆಯುವದು, ಅದು ಮಗುವಾಗಿ ಹುಟ್ಟುವುದು, ಆ ಮಗುವು ಕ್ರಮೇಣ ಬಾಲ್ಯಾವಸ್ಥೆ, ಕೌಮಾರಾವಸ್ಥೆ, ಯೌವನಾವಸ್ಥೆ, ಮಧ್ಯ ವಯಸ್ಸಿನ ಅವಸ್ಥೆ ವಾರ್ಧಿಕ್ಯಾವಸ್ಥೆಗಳನ್ನು ತಾನಾಗಿಯೇ ಪಡೆಯುವದು? ಎಂಬ ಶರೀರವಿಜ್ಞಾನಕ್ಕೆ (Physiology) ಸಂಬಂಧಪಟ್ಟ ವಿಚಾರಗಳು ಮತ್ತು ಆ ಅವಸ್ಥೆಗಳಲ್ಲೆಲ್ಲಾ ಇಂದ್ರಿಯ ಮನ ಬುದ್ಧಿಗಳಿಗೆ ಅತೀತವಾದ ವ್ಯಕ್ತಿಯ ನಿಜ ಸ್ವರೂಪ

ನಾವ್ಯಾವು? ಎಂಬ ವಿಚಾರವೂ ಮನುಷ್ಯನ ಅವ್ಯಕ್ತ ಅಥವ ಸತ್‌ಸ್ವರೂಪಕ್ಕೆ ಸಂಬಂಧಪಟ್ಟವು. ಇಷ್ಟೇ ಅಲ್ಲ; ಪ್ರತಿಯೊಂದು ಪ್ರಾಣಿಯೂ ಪಕ್ಷಿಯೂ ಮುಖ್ಯವಾಗಿ ಮನುಷ್ಯನ ಶರೀರದೊಳಗೂ ಹೊರಗೂ ಇರುವ ಸಹಸ್ರಾರು ಅಂಗಗಳು ಕ್ರಮತಪ್ಪದೇ ಸಾಮರಸ್ಯದಿಂದ ಸದಾಕಾಲದಲ್ಲಿಯೂ ಆಶ್ಚರ್ಯವನ್ನುಂಟುಮಾಡುವ ಹಾಗೆ ಕಾರ್ಯಗಳನ್ನು ನಡೆಸುತ್ತಿರುವುದು ಯಾವ ಮಹಾಶಕ್ತಿಯಿಂದ? ಇದೂ ಅವ್ಯಕ್ತನಾದ ಪರಮಾತ್ಮನ ಅಂತರ್ಯಾಮಿ ಶಕ್ತಿಯೇ ಆಗಿರುತ್ತದೆ.

## ಮನುಷ್ಯನ ಅಂತಃಕರಣಕ್ಕೆ ಅನ್ವಯಿಸುವ ಉದಾಹರಣೆಗಳು.

ಮನುಷ್ಯನ ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ ಇವುಗಳನ್ನು ಒಟ್ಟಾಗಿ ಸೇರಿಸಿ ಅವನ್ನು ಅವನ ಅಂತಃಕರಣವೆಂದು ಕರೆಯುತ್ತೇವೆ. ಎಚ್ಚರದಲ್ಲಿ ನಮ್ಮ ಅಂತಃಕರಣವು ಸದಾ ಕಾರ್ಯಮಾಡುತ್ತಲೇ ಇರುತ್ತದೆಯಲ್ಲವೆ? ನಮ್ಮ ಮನಸ್ಸಿನಲ್ಲಿ ಕಾಮ, ಕ್ರೋಧ, ಭಯ, ಮಾತ್ಸರ್ಯ, ಆಸೆಗಳು ಮೊದಲಾದ ಅಲೆಗಳು ಅಥವ ವೃತ್ತಿಗಳು ಸದಾಕಾಲದಲ್ಲಿಯೂ ಒಂದಾದಮೇಲೊಂದು ಬರುತ್ತಾ ನಮಗೆ ಸುಖ ದುಃಖಾದಿಗಳನ್ನೂ ಜ್ಞಾನ ವಿಕಾಸವನ್ನೂ ಉಂಟುಮಾಡುವುವು. ಈ ವಿಚಾರಗಳನ್ನು ತಿಳಿಯಪಡಿಸುವ ಮನಶ್ಶಾಸ್ತ್ರವು (Psychology) ಅಂತಃಕರಣದ ವ್ಯಕ್ತ ಅಥವ ಅಸತ್ ಸ್ವರೂಪವನ್ನು ತಿಳಿಯಪಡಿಸುತ್ತದೆ. ಆದರೆ ಯಾವ ಮಹಾ ಅಂತರ್ಯಾಮಿ ಸ್ವರೂಪವು ಕಣ್ಣಿಗೆ ನೋಡುವ ಶಕ್ತಿಯನ್ನೂ, ಕಿವಿಗೆ ಕೇಳುವ ಗುಣವನ್ನೂ, ತ್ವಗಿಂದ್ರಿಯಕ್ಕೆ ಮುಟ್ಟುವ ಯೋಗ್ಯತೆಯನ್ನೂ, ರಸನೇಂದ್ರಿಯಕ್ಕೆ ರುಚಿಯನ್ನು ತಿಳಿಯುವ ಸ್ವಭಾವವನ್ನೂ, ಘ್ರಾಣೇಂದ್ರಿಯಕ್ಕೆ ಮೂಸಿನೋಡಿ ವಾಸನೆಯನ್ನು ತಿಳಿಯುವ ಶಕ್ತಿಯನ್ನೂ, ಮನಸ್ಸಿಗೆ ಒಟ್ಟು ಪದಾರ್ಥಗಳ ಅರಿವನ್ನುಂಟುಮಾಡಿ ಸುಖ ದುಃಖಗಳನ್ನು ಅನುಭವಿಸುವ ಗುಣವನ್ನೂ ಮತ್ತು ಬುದ್ಧಿಗೆ ಆಲೋಚನೆಗಳನ್ನು ಮಾಡುವ ಸ್ವಭಾವವನ್ನೂ ಕೊಡುತ್ತದೆ? ಎಂಬ ವಿಚಾರವು ಅಂತಃಕರಣದ ಅವ್ಯಕ್ತ ಅಥವ ಸತ್‌ಸ್ವರೂಪಕ್ಕೆ ಸಂಬಂಧಪಡುತ್ತದೆ. ಯಾವ ಮಹಾ ಸಾಕ್ಷಿಸ್ವರೂಪನಿಗೆ ಎಚ್ಚರದ ಅನುಭವವೂ, ಕನಸಿನ ಅನುಭವವೂ, ನಿದ್ರೆಯ ಅನುಭವವೂ, ಮೂರ್ಛೆಯ ಅನುಭವವೂ, ಸಮಾಧಿಜ್ಞಾನಾನುಭವವೂ ಉಂಟಾಗುತ್ತದೆಯೋ ಅವನ ವಿಚಾರವನ್ನು ತಿಳಿಯುವುದೂ ಕೂಡ ಅಂತಃಕರಣದ ಅವ್ಯಕ್ತ ಸ್ವರೂಪಕ್ಕೆ ಒಳಪಡುತ್ತವೆ. ಯಾವ ಪರಬ್ರಹ್ಮನ ಸಂಕಲ್ಪದಿಂದ ಜಗತ್ತಿನಲ್ಲಿರುವ ಕೋಟ್ಯಾನು ಕೋಟಿ ಸೃಷ್ಟಿಗಳಲ್ಲೂ ಚಲನೆಗಳಲ್ಲೂ ಒಂದಕ್ಕೊಂದು ಸಾಮರಸ್ಯವಿರುವುದೋ ಮತ್ತು ಯಾವ ಪರಮಾತ್ಮನ ಭಾವನೆಗಳಿಂದ ಜಗತ್ತಿನ ಎಲ್ಲಾ ಕಡೆಗಳಲ್ಲೂ ಪದಾರ್ಥಗಳಲ್ಲೂ ಸೌಂದರ್ಯವು ಕಂಡು ಬರುವುದೋ ಆ ಆದಿಕಾರಣದ ಅದ್ಭುತ ಇರುವಿಕೆಯೇ ಜಗತ್ತಿನ ಅವ್ಯಕ್ತ ಅಥವ ಸತ್‌ಸ್ವರೂಪವು. ಕೊನೆಯದಾಗಿ ಯಾವ

ಯಾವ ಅದ್ಭುತ ಅನಂತಶಕ್ತಿಯಿಂದ ಕಲ್ಪಕಲ್ಪಗಳಲ್ಲಿಯೂ ಒಟ್ಟು ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳು ಉಂಟಾಗುತ್ತಲೇ ಇರುವವೋ ಆ ಅನಂತ ಚಿಚ್ಛಕ್ತಿಯೇ ಒಟ್ಟು ಜಗತ್ತಿನ ಅವ್ಯಕ್ತ ಸ್ವರೂಪ, ಸತ್ ಸ್ವರೂಪ ಅಥವ ಪರಮಾತ್ಮ ಸ್ವರೂಪ. ಪದಾರ್ಥಗಳ ವ್ಯಕ್ತ ಸ್ವರೂಪಗಳು ಪರಿಣಾಮಗಳನ್ನು ಹೊಂದುತ್ತಲೇ ಇರುವುವು; ಆದರೆ ಅವುಗಳ ಅವ್ಯಕ್ತ ಸ್ವರೂಪ ಶಕ್ತಿ ಗುಣಗಳ ತಿರುಳು ಮಾತ್ರ ಪರಿಣಾಮವನ್ನು ಹೊಂದದೆ ಶಾಶ್ವತವಾಗಿದ್ದು ಅವುಗಳಲ್ಲಿ ವಿವಿಧ ಸ್ಥೂಲ ಶಕ್ತಿಗಳನ್ನೂ ಪರಿಣಾಮಗಳನ್ನೂ ಉಂಟುಮಾಡುತ್ತದೆ. "ನಾನು-ನೀನು-ಇವನು-ಅವನು" ಎಂದು ಹೇಳಿಕೊಳ್ಳುವ ಮನುಷ್ಯ ಶರೀರಗಳೂ ಕೂಡ ಸದಾ ಬದಲಾವಣೆಗಳನ್ನು ಪಡೆಯುತ್ತಾ ಅವುಗಳ ಅತ್ಮನಾದ, ಅವ್ಯಕ್ತನಾದ, ಸತ್ ಶಕ್ತಿಯ ವ್ಯಕ್ತ ಸ್ವರೂಪಗಳಾಗಿರುತ್ತವೆ.

## ಋಷಿಗಳ ಕೊನೆಯ ತೀರ್ಮಾನ

ಇಲ್ಲಿಯವರೆವಿಗೆ ನಾವು ಉದಾಹರಣೆಗಳ ಮೂಲಕ ಮಾತ್ರ ಒಟ್ಟು ಪ್ರಪಂಚದ ಮತ್ತು ಅದರ ಪದಾರ್ಥಗಳ ವ್ಯಕ್ತ ಸ್ವರೂಪಗಳನ್ನೂ ಮತ್ತು ಅವುಗಳೊಳಗೆ ಅಂತರ್ಯಾಮಿಯಾಗಿ ಅವ್ಯಕ್ತವಾಗಿ ಸತ್ ಸ್ವರೂಪವು ಇರುವುದೆಂಬುದನ್ನು ಊಹಿಸಿ ಸ್ವಲ್ಪ ಮಟ್ಟಿಗೆ ಈ ವಿಚಾರವನ್ನು ತಿಳಿಯಪಡಿಸಲು ಪ್ರಯತ್ನಿಸಿದ್ದೇವೆ. ಆದರೆ ಪುರಾತನ ಕಾಲದಲ್ಲಿದ್ದ ಭಾರತೀಯ ಋಷಿಗಳಾದರೋ ತಮ್ಮ ತಪಸ್ಸಿನ ಪ್ರಭಾವದಿಂದಲೂ, ಯೋಗಾಭ್ಯಾಸದ ಶಕ್ತಿಯಿಂದಲೂ ಮತ್ತು ಭಗವಂತನ ಅನುಗ್ರಹದಿಂದಲೂ ದಿವ್ಯ ಚಕ್ಷುಸ್ಸನ್ನು ಅಥವ ಸಮಾಧಿ ಜ್ಞಾನವನ್ನು ಪಡೆದು ತನ್ಮೂಲಕ ಜಗತ್ತಿನಲ್ಲೂ ಮತ್ತು ಸಕಲ ಪದಾರ್ಥಗಳಲ್ಲೂ ಇರುವ ಅವ್ಯಕ್ತ ಸತ್ ಅಥವ ಪರಮಾತ್ಮ ಅಂತರ್ಯಾಮಿ ಸ್ವರೂಪವನ್ನು ತಮ್ಮ ದೇಹೇಂದ್ರಿಯ ಮನ ಬುದ್ಧಿಗಳ ಸಹಾಯವಿಲ್ಲದೆಯೇ ನೇರವಾಗಿ ಸಾಕ್ಷಾತ್ಕರಿಸಿಕೊಂಡಿದ್ದರು. ಆದುದರಿಂದ ಉಪನಿಷತ್ತುಗಳಲ್ಲಿ ಉಪದೇಶ ಮಾಡಿರುವ "ಅಹಂಬ್ರಹ್ಮಾಸ್ಮಿ", "ತತ್ವಮಸಿ" "ಸರ್ವಂ ಖಲ್ವಿದಂಬ್ರಹ್ಮ" ಎಂಬ ಮಹಾ ವಾಕ್ಯಗಳ ಅರ್ಥವನ್ನು ಸಾಕ್ಷಾತ್ತಾಗಿ ಅನುಭವಿಸಿ, ಶಾಶ್ವತವಾದ ಮಹದಾನಂದವನ್ನು ಹೊಂದಿ, ಲೋಕದ ಜನರೆಲ್ಲರೂ ಇದೇ ಮಹದಾನಂದವನ್ನು ಅನುಭವಿಸಲಿ ಎಂಬ ವಿಶಾಲ ಹೃದಯದಿಂದ ಅವರಿಗೆ ಪ್ರತಿಯೊಂದು ಪದಾರ್ಥದಲ್ಲಿಯೂ ಪರಿಣಾಮಕಾರಿಯಾದ ವ್ಯಕ್ತ, ಅಸತ್ ಅಥವ ದೇಹ ಸ್ವರೂಪವಿದೆಯೆಂದೂ ಮತ್ತು ಅದರೊಳಗೆ ಅವ್ಯಕ್ತ, ಸತ್ ಅಥವ ಅಂತರ್ಯಾಮಿ ಪರಮಾತ್ಮ ಸ್ವರೂಪವು ತುಂಬಿದೆಯೆಂದೂ ಪ್ರೀತಿಯಿಂದ ಬೋಧಿಸಿರುವರು. ಮಹಾತ್ಮಾಗಾಂಧಿಯವರಿಂದ ವಿಶೇಷವಾಗಿ ಗೌರವಿಸಲ್ಪಟ್ಟ ಈಶಾವಾಸ್ಯ ಉಪನಿಷತ್ತಿನ ಮೊದಲನೆಯ ಮಂತ್ರದ ಮೊದಲನೆಯ ವಾಕ್ಯದ ಅರ್ಥವನ್ನು ತಿಳಿದು ಅದರ ಅಭಿಪ್ರಾಯವನ್ನು ಮನನಮಾಡೋಣ.

**" ಈಶಾವಾಸ್ಯಮಿದಂ ಸರ್ವಂ ಯತ್ಕಿಂಚಜಗತ್ಯಾಂ ಜಗತ್ "**

೬ ಜಗತ್ಯಾಂ-ಒಟ್ಟು ಜಗತ್ತಿನಲ್ಲಿಯೂ ಅಂದರೆಲ್ಲಾ ಲೋಕಗಳಲ್ಲಿಯೂ; ಜಗತ್-ಪರಿಣಾಮವನ್ನು ಹೊಂದತಕ್ಕ ಅಂದರೆ ಬೇರೆಬೇರೆ ಅವಸ್ಥೆಗಳನ್ನು ಪಡೆಯುತಕ್ಕ;

ಯತ್ಕಿಂಚಿತ್ ಒಂದೂ ಉಳಿಯದೇ; ಇದಂ ಸರ್ವಂ– ಈ ಚೇತನಾ ಚೇತನಗಳೆಲ್ಲವೂ ; ಈಶಾ–ಒಡೆಯನಾದ ಪರಮಾತ್ಮನಿಂದ ; ವಾಸ್ಯಂ–ವ್ಯಾಪಿಸಲ್ಪಟ್ಟಿದೆ. ಈ ವಾಕ್ಯದ ಅಭಿಪ್ರಾಯವೇನು ? ಮೈದಾನಗಳು, ನದಿಗಳು, ಕೆರೆಗಳು, ಬೆಟ್ಟಗಳು, ಸಮುದ್ರವು, ಆಕಾಶವು, ಮೇಘಗಳು, ಚಂದ್ರಗ್ರಹ ಸೂರ್ಯ ನಕ್ಷತ್ರಾದಿಗಳು, ಕಣ್ಣಿಗೆ ಕಾಣದ ಪರ ಲೋಕಗಳು– ಇವೆಲ್ಲವೂ ಒಟ್ಟು ಸೇರಿ ಜಗತ್ತೆಂದು ಕರೆಯಲ್ಪಡುತ್ತದೆ. ಇವೆಲ್ಲವೂ ಯಾವಾಗಲೂ ಬದಲಾಯಿಸುತ್ತಿವೆ ಮತ್ತು ಚಲಿಸುತ್ತಿವೆ. ಈ ಒಟ್ಟು ಜಗತ್ತು ಯಾವುದೋ ಒಂದು ಕಾಲದಲ್ಲಿ ಆರಂಭವಾಗಿ, ಸೂಕ್ಷ್ಮವಾಗಿ ಬೆಳೆಯುತ್ತಾ, ಸ್ಥೂಲ ರೂಪದಲ್ಲಿಯೂ ಪರಿಣಾಮಗಳನ್ನು ಪಡೆದು, ಪುನಃ ಸೂಕ್ಷ್ಮರೂಪವನ್ನು ತಾಳಿ ಕ್ಷಯಿಸುತ್ತಾ ಕೊನೆಗೆ ಮುಂದೆ ಯಾವುದೋ ಒಂದು ಕಾಲದಲ್ಲಿ ಲಯವಾಗುತ್ತದೆ. ಇಂಥಾ ಜಗತ್ತಿನಲ್ಲಿ ಅನೇಕ ಸಹಸ್ರ ಜಾತಿಗಳಿಂದ ಕೂಡಿದ ಕೋಟಿಕೋಟಿ ಪದಾರ್ಥಗಳು ಸೃಷ್ಟಿಯೂ ಅವಕಾಶವನ್ನು ಪಡೆದ ಎಲ್ಲಾ ಕಡೆಯಲ್ಲಿಯೂ ಅನೇಕ ಕೋಟಿ ವರುಷಗಳ ಹಿಂದಿನಿಂದ ಇದುವರೆಗೆ ಉಂಟಾಗುತ್ತಾ ನಾಶವಾಗುತ್ತಿವೆ. "ಇದಂ ಸರ್ವಂ" ಎಂದು ಹೇಳುವ ಹಾಗೆ ಈಗಲೂ ನಾವೆಲ್ಲರೂ ಅವುಗಳನ್ನು ಅನುಭವಿಸುತ್ತಿದ್ದೇವಲ್ಲವೆ ! ಸಾಧಾರಣ ಮಾನವರಾದ ನಮಗೆ ಗೊತ್ತಿರುವುದು ಇಷ್ಟೇ; ಆದರೆ ನಮ್ಮ ಭಾರತ ದೇಶದ ಋಷಿಗಳೂ ಮತ್ತು ಪ್ರಪಂಚದ ಇತರ ಮಹಾತ್ಮರುಗಳು ಸತ್ಯಸ್ವರೂಪವನ್ನು ಸಾಕ್ಷಾತ್ಕರಿಸಿ ಬೋಧಿಸಿರುವ ಉಪದೇಶವೇನು ? ಎಲ್ಲಾ ಕಾಲದಲ್ಲಿಯೂ ಇದ್ದ ಮತ್ತು ಈಗಲೂ ಎಲ್ಲಾ ಸ್ಥಳಗಳಲ್ಲಿಯೂ ಇರುವ ಒಟ್ಟು ಜಗತ್ತಿನಲ್ಲಿಯೂ ಮತ್ತು ಅದರಲ್ಲಿರುವ ಪ್ರತಿಯೊಂದು ವಸ್ತುವಿನಲ್ಲಿಯೂ ಪರಮಾತ್ಮನಾದ ಈಶನು ವಾಸಮಾಡುತ್ತಿರುವನು. ಅಂದರೇನು ? ಈ ಜಗತ್ತು ಎಷ್ಟು ಕಾಲದಿಂದ ಇದೆಯೋ ಮತ್ತು ಮುಂದೆ ಇರುತ್ತದೆಯೋ ಅಷ್ಟು ಕಾಲವೂ ಅದರಲ್ಲಿ ಪರಮಾತ್ಮನು ಇದ್ದನು ಮತ್ತು ಇರುವನು. ಜಗತ್ತು ಎಷ್ಟು ದೊಡ್ಡದಾಗಿರುವುದೋ ಪರಮಾತ್ಮನು ಅಷ್ಟು ದೊಡ್ಡವನಾಗಿ ಅದರಲ್ಲಿರುವನು ಮತ್ತು ಅತ್ಯಂತ ಸಣ್ಣದಾಗಿರುವ ಪರಮಾಣುವಿನಲ್ಲಿಯೂ ಪ್ರವೇಶಮಾಡಿರುವನು. ಪದಾರ್ಥಗಳು ಯಾವಯಾವ ಅವಸ್ಥೆಯನ್ನು ಪಡೆದಾಗ್ಯೂ ಅವುಗಳೆಲ್ಲದರಲ್ಲಿಯೂ ಅವನೂ ಕೂಡ ಜೊತೆಯಲ್ಲಿಯೇ ಇರುವನು ಎಂಬುದನ್ನು ವಿದ್ಯಾರ್ಥಿಯು ತಿಳಿಯಬೇಕು. ಹೀಗೆ ಜೀವದಿಂದ ಕೂಡಿದ ಮತ್ತು ಜೀವವಿಲ್ಲದ ಅಥವ ಚೈತನ್ಯದಿಂದ ಕೂಡಿದ ಮತ್ತು ಚೈತನ್ಯವಿಲ್ಲದ ಪ್ರತಿಯೊಂದು ವಸ್ತುವಿನಲ್ಲಿಯೂ ಪರಮಾತ್ಮನಾದ ಈಶನು ವಾಸಮಾಡುವನು ಎಂದು ಋಷಿಯು ಈ ಉಪನಿಷತ್ ವಾಕ್ಯದಲ್ಲಿ ಬೋಧಿಸಿರುವುದರಿಂದ ಇಂಥಾ ಪದಾರ್ಥದ ಸಾರವಾದ, ನಿಜವಾದ, ಮುಖ್ಯವಾದ ಅಂಶವು ಪರಮಾತ್ಮನಾಯಿತು; ಅದರ ಜಡವಾದ, ಶಾಶ್ವತವಲ್ಲದ ಅಥವ ಮುಖ್ಯವಲ್ಲದ ಅಂಶವು ಪದಾರ್ಥದ ಪ್ರಾಕೃತಿಕ ನಾಮರೂಪಾದಿಗಳಾಗುತ್ತವೆ.

ನಾಷನಲ್ ಪ್ರೆಸ್, ನ್ಯೂ ಮಾರ್ಕೆಟ್, ಬೆಂಗಳೂರು ೨.

# ಶ್ರೀ ನವಭಾರತ ಆಶ್ರಮ
### ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

## (ಮಾಲೆ—ಆರು)

## ಪುರಾತನ ಕಾಲದಿಂದ ಭಾರತೀಯರು ಅಂಗೀಕರಿಸಿರುವ ಪುರುಷಾರ್ಥಗಳು.

ಈ ಭೂಮಿಯ ಮೇಲೆ ವಾಸವಾಗಿರುವ ಮನುಷ್ಯರಲ್ಲಿ ಬಹಳ ಜನರು ಈ ಪ್ರಪಂಚದಲ್ಲಿ ನಡೆಯುತ್ತಿರುವ ಮೇಲಾದ ಅದ್ಭುತ ವ್ಯಾಪಾರಗಳನ್ನು ನೋಡುವುದೂ ಇಲ್ಲ; ನೋಡಿದರೂ ಆಶ್ಚರ್ಯಪಡದೆಯೂ ಆನಂದಪಡದೆಯೂ ಇರುವರು. ಕಾರಣವೇನು? ಬಹುಮಂದಿ ಉತ್ತಮ ಶಿಕ್ಷಣವನ್ನು ಪಡೆಯದೆ ಅಜ್ಞಾನಿಗಳಾಗಿರುವರು ಮತ್ತು ಉತ್ತಮ ಧ್ಯೇಯಗಳನ್ನು ಸಾಧಿಸಲು ಸ್ಥಿರವಾದ ಪ್ರಯತ್ನಗಳನ್ನು ಮಾಡುವುದಿಲ್ಲ. ಚಿಕ್ಕ ವಯಸ್ಸಿನಿಂದಲೂ ಉತ್ತಮ ಶಿಕ್ಷಣವನ್ನು ಪಡೆಯುತ್ತಾ ಉದಾತ್ತ ಧ್ಯೇಯಗಳನ್ನು ಬೆಳೆಸುತ್ತಾ ಇರುವ ಪಂಡಿತನಿಗೆ ಮಾತ್ರ ಈ ಪ್ರಪಂಚವು ಆಶ್ಚರ್ಯಜನಕವಾಗಿಯೂ ಆನಂದದಾಯಕವಾಗಿಯೂ ಇರುವುದು. ಮನುಷ್ಯನು ಎಷ್ಟೆಷ್ಟು ಶಿಕ್ಷಣವನ್ನು ಪಡೆಯುತ್ತಾನೆಯೋ ಅಷ್ಟಷ್ಟು ಅವನಿಗೆ ಪ್ರಪಂಚವು ತನ್ನ ವಿಚಿತ್ರ ಸೃಷ್ಟಿಯನ್ನು ತೋರಿಸುವುದು. ಜ್ಞಾನಶೂನ್ಯವಾದ ಮೃಗಗಳಿಗೂ, ಅಶಿಕ್ಷಿತನಾದ ಮಾನವನಿಗೂ ಪ್ರಪಂಚವು ಅಲ್ಪವಾಗಿ ತೋರಬಹುದು. ಆದರೆ ವಿದ್ಯೆಯಲ್ಲಿ ನಿಸ್ಸೀಮನಾದ ಪಂಡಿತನಿಗೆ ಇದೇ ಪ್ರಪಂಚವು ಅದ್ಭುತ ವ್ಯಾಪಾರಗಳನ್ನು ಒಳಗೊಂಡ, ರಹಸ್ಯ ಗರ್ಭಿತವಾದ, ಬುದ್ಧಿಗೆ ನಿಲುಕದ ತತ್ವಗಳಿಂದ ಕೂಡಿದ ಪರಮಾರ್ಥ ಸತ್ಯಸ್ವರೂಪವಾಗಿ ಗೋಚರವಾಗುವುದು. ಪ್ರೇಕ್ಷಕನು ನಾಟಕದಲ್ಲಿ ಅಂಕವಾದ ಮೇಲೆ ಅಂಕವನ್ನು ನೋಡುವ ಹಾಗೆ, ಶಿಕ್ಷಣವನ್ನು ಹೊಂದುತ್ತಿರುವ ಮನುಷ್ಯನು ಈ ಪ್ರಪಂಚವೆಂಬ ನಾಟಕದಲ್ಲಿ ಹೊಸ ಹೊಸದಾದ ವಿಚಿತ್ರ ಸೃಷ್ಟಿಗಳನ್ನು ನೋಡುತ್ತಾ ಮೇಲು ಮೇಲಿನ ಪುರುಷಾರ್ಥಗಳನ್ನು ತನ್ನ ಹೃದಯದಲ್ಲಿ ಬೆಳೆಸುತ್ತಾ, ಅವುಗಳನ್ನು ಹೊಂದುವ ಪ್ರಯತ್ನಗಳಲ್ಲಿ ನಿರತನಾಗಿ ತನ್ನೊಳಗೆ ಉಂಟಾಗುವ ಸುಖದುಃಖಗಳನ್ನು ಅನುಭವಿಸುವನು. ಹಾಗೆ ಶಿಕ್ಷಣವನ್ನು ಪಡೆಯುತ್ತಿರುವ ಮಾನವನ ಹೃದಯದಲ್ಲಿ ಬೆಳೆಯುವ ಪುರುಷಾರ್ಥಗಳನ್ನು ಪುರಾತನ ಭಾರತೀಯರು ಹೇಗೆ ವಿಂಗಡಿಸಿರುವರು ಎಂಬುದನ್ನು ಅರಿಯೋಣ.

## ಅರ್ಥಪುರುಷಾರ್ಥ

ವಿದ್ಯಾಭ್ಯಾಸದ ಆರಂಭದಲ್ಲಿ ಬಾಲಕನಿಗೆ ವಿಧವಿಧವಾದ ಬಾಹ್ಯ ಪದಾರ್ಥಗಳ ಸ್ವರೂಪವನ್ನು ತಿಳಿಯುವುದರಲ್ಲಿ ವಿಶೇಷ ಆಸಕ್ತಿ ಹುಟ್ಟುವುದು. ಮೊದಲು ತಾನು ವಾಸಮಾಡುವ ಮನೆಯೂ, ಅದರೊಳಗಿರುವ ಸುಖಸಾಮಗ್ರಿಗಳೂ, ತನ್ನ ಸುತ್ತಮುತ್ತಲಿರುವ ಮೃಗಪಕ್ಷಿ ಮುಂತಾದವುಗಳೂ ಅವನಿಗೆ ಕಂಡುಬರುವುವು. ತನ್ನ ಗ್ರಾಮವನ್ನು ಬಿಟ್ಟು ಪಟ್ಟಣಗಳಿಗೆ ಹೋದಾಗ ವಿಸ್ತಾರವಾದ ರಾಜಬೀದಿಗಳೂ, ಅಂಗಡಿಗಳೂ, ಭೋಗ್ಯವಸ್ತುಗಳೂ, ಅಂತಸ್ತಿನ ಮನೆಗಳೂ, ರೈಲುಗಳೂ, ಮೋಟಾರುಗಳೂ, ಅಲಂಕಾರಗಳೂ, ವಿದ್ಯುಚ್ಛಕ್ತಿ ದೀಪಗಳೂ, ಗಿರಣಿಗಳೂ, ವಿನೋದವಾದ ಆಟಗಳೂ ಇವನ ಮನಸ್ಸನ್ನು ಸೆಳೆಯುವುವು. ಈ ಪದಾರ್ಥಗಳನ್ನು ಜೀವನಕ್ಕೆ ಆಧಾರವಾದ ಧಾರಕ ವಸ್ತುಗಳು, ವೃತ್ತಿಗಳಿಗೆ ಅನುಗುಣವಾದ ಪೋಷಕ ವಸ್ತುಗಳು, ಸುಖಗಳನ್ನುಂಟುಮಾಡುವ ಭೋಗ್ಯವಸ್ತುಗಳು ಮತ್ತು ವಿವಿಧ ಭೋಗಗಳನ್ನು ಅನುಭವಿಸಲು ಸಹಾಯಮಾಡುವ ವಿಲಾಸ ವಸ್ತುಗಳು ಎಂದು ವಿಂಗಡಿಸುವನು. ಈ ಕಾಲದಲ್ಲಿ ಅವನು ಅರ್ಥಪುರುಷಾರ್ಥವನ್ನು ಪಡೆದಿರುವನೆಂದು ಹೇಳಬಹುದು. ಅಂದರೇನು, ತಾನು ಹಣವನ್ನು ಯಾವ ವಿಧದಲ್ಲಾದರೂ ಸಂಪಾದಿಸಿ ಕೂಡಿಸಬೇಕು ಮತ್ತು ಅದರ ಮೂಲಕ ವಿಧವಿಧವಾದ ಭೋಗ್ಯವಿಲಾಸ ವಸ್ತುಗಳನ್ನು ಪಡೆದು ಅವುಗಳೆಲ್ಲವನ್ನೂ ಅನುಭವಿಸಬೇಕು ಎಂಬ ಆತುರ ಅವನಲ್ಲಿ ಉಂಟಾಗುತ್ತದೆ ಮತ್ತು ಅವನು ಅದೇ ಪ್ರಯತ್ನದಲ್ಲಿರುತ್ತಾ ವಿಷಯ ಚಪಲನಾಗಿ ಕಾಲವನ್ನು ಕಳೆಯುತ್ತಾನೆ.

ಆದರೆ ಈ ಅರ್ಥಪುರುಷಾರ್ಥವು ದುಃಖದೊಡನೆ ಮಿಶ್ರವಾಗಿರುವುದು. ಅದನ್ನು ಹೊಂದಲು ಮೊದಲು ಹಣವನ್ನು ಸಂಪಾದಿಸಬೇಕು; ಹಣ ಸಂಪಾದಿಸುವುದಕ್ಕೆ ಬೆಳಗ್ಗಿನಿಂದ ಸಾಯಂಕಾಲದವರೆಗೂ ದುಡಿಯಬೇಕು. ನೂರರಲ್ಲಿ ತೊಂಭತ್ತೈದು ಜನರಿಗೆ ದುಡಿದರೂ ಧಾರಕ ಪೋಷಕ ವಸ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಬೇಕಾದಷ್ಟು ಹಣ ಸಿಕ್ಕುವುದಿಲ್ಲ. ಅದೃಷ್ಟದಿಂದ ಅಧಿಕ ಹಣ ಸಂಪಾದಿಸಿದರೂ ಅದರಿಂದ ಪಡೆಯುವ ಬಹುವಾದ ಸುಖಗಳು ಸ್ವಲ್ಪಕಾಲ ಮಾತ್ರ ಇರತಕ್ಕವುಗಳು. ಒಂದು ದಿವಸ ಊಟ ಮಾಡಿದರೆ ಹೊಟ್ಟೆಯ ಹಸಿವು ಅಡಗುವುದಿಲ್ಲ; ಪ್ರತಿನಿತ್ಯವೂ ಹಸಿವುಂಟಾಗುವುದರಿಂದ ಪ್ರತಿನಿತ್ಯವೂ ಊಟ ಮಾಡಬೇಕು. ಹೀಗೆಯೇ ಇತರ ವಿಷಯ ಚಾಪಲ್ಯಗಳೂ ಪ್ರತಿನಿತ್ಯವೂ ಉಂಟಾಗುತ್ತಿರುವುದರಿಂದ ಅವುಗಳನ್ನು ಅಡಿಗಡಿಗೆ ತೀರಿಸಿಕೊಳ್ಳಬೇಕು. ಅದೂ ಅಲ್ಲದೆ ಇಂದ್ರಿಯ ಸುಖವು ದುಃಖ ಮಿಶ್ರವಾದುದು. ಅಧಿಕವಾಗಿ ತಿಂಡಿಯನ್ನು ತಿಂದರೆ ಹೊಟ್ಟೆನೋವು ಉಂಟಾಗುವುದು; ಮತ್ತು ಇಂದ್ರಿಯ ಸುಖಗಳನ್ನು ಅನುಭವಿಸಿದಹಾಗೆಲ್ಲಾ ಅವು ನಮ್ಮನ್ನು ಇನ್ನೂ ಬಲಾತ್ಕರಿಸಿ ಅವುಗಳ ಗುಲಾಮರನ್ನಾಗಿ ಮಾಡಿಕೊಳ್ಳುತ್ತವೆ.

# 3

## ಕಾಮಪುರುಷಾರ್ಥ

ಕೆಲವು ಕಾಲದ ಮೇಲೆ ಶಿಕ್ಷಣವನ್ನು ಪಡೆಯುತ್ತಿರುವ ಬಾಲಕನು ಯುವಕನಾಗಿ ಈ ಬಾಹ್ಯಪದಾರ್ಥ ಜ್ಞಾನದಲ್ಲಿ ತೃಪ್ತನಾಗದೆ ಮೇಲೆ ಮೇಲೆ ವಿಚಾರ ಮಾಡಲು ತೊಡಗುವನು. ಆಗ ಇನ್ನೊಂದು ಅದ್ಭುತವಾದ ಪ್ರಪಂಚದ ಅನುಭವವು ತಾನಾಗಿಯೇ ಅವನನ್ನು ಆಕರ್ಷಿಸುವುದು. ತನ್ನ ಅಂತಃಕರಣದಲ್ಲಿಯೇ ಉತ್ಪತ್ತಿಯಾಗುತ್ತಿರುವ ಚಿತ್ತ ವೃತ್ತಿ ರೂಪವಾದ ಆಂತರ ಪ್ರಪಂಚವನ್ನು ಅರಿಯಲು ಆರಂಭಿಸುವನು. ಇಂದ್ರಿಯಗಳ ವ್ಯಾಪಾರಗಳನ್ನು ನೋಡಿ ಭ್ರಮಿಸಿ ಹೋಗುವನು; ಜ್ಞಾನೇಂದ್ರಿಯಗಳು ಕಾರ್ಯ ಮಾಡುತ್ತಲೇ ಇರುವುವು! ಕಣ್ಣುಗಳನ್ನು ಮುಚ್ಚಿದರೆ ಪ್ರಪಂಚವೇ ಅಂಧಕಾರದಲ್ಲಿ ಮುಳುಗುವ ಹಾಗೆ ಆಗುವುದು; ಅವುಗಳನ್ನು ತೆರೆದೊಡನೆಯೇ ಜ್ಯೋತಿಸ್ಸಿನ ಸಹಾಯದಿಂದ ವಸ್ತುಗಳ ನಾನಾವಿಧ ರೂಪಗಳೂ, ಬಣ್ಣಗಳೂ, ಕೊನೆ ಮೊದಲಿಲ್ಲದ ಆಕಾಶವೂ, ನಕ್ಷತ್ರಗಳೂ ಗೋಚರವಾಗುವುವು. ಕಿವಿಗಳು ಮೃಗ ಪಕ್ಷಿ ಮೊದಲಾಗಿ ಮನುಷ್ಯ ಪರ್ಯಂತ ಪ್ರಾಣಿಗಳ ವಿಧವಿಧವಾದ ವಿಚಿತ್ರ ಧ್ವನಿಗಳನ್ನೂ, ಸಿಡಿಲು ಬಿರುಗಾಳಿ ಮೊದಲಾದ ಭೂತಗಳ ವ್ಯಾಪಾರಗಳಲ್ಲುಂಟಾಗುವ ಭಯಂಕರವಾದ ಶಬ್ದಗಳನ್ನೂ ಕೇಳುವುವು. ಮೂಗು ವಾಸನೆಗಳನ್ನೂ, ನಾಲಿಗೆಯು ಆರು ವಿಧವಾದ ರಸಗಳನ್ನೂ ಅವುಗಳ ಸಮ್ಮೇಳದ ಸೊಗಸನ್ನೂ, ಚರ್ಮವು ಸ್ಪರ್ಶ ಭೇದಗಳನ್ನೂ ತೋರಿಸುವುವು. ಇಂತಹ ಸಾಮರ್ಥ್ಯವುಳ್ಳ ಜ್ಞಾನೇಂದ್ರಿಯಗಳೂ ಮತ್ತು ಕರ್ಮೇಂದ್ರಿಯಗಳೂ ಕೂಡ ಮನಸ್ಸೆಂಬ ಅಂತರಿಂದ್ರಿಯದ ಆಜ್ಞೆಯ ಮೇರೆಯೇ ಕೆಲಸಗಳನ್ನು ನಡೆಸುವುವು. ಮನಸ್ಸು ಕೂಡ ವಿಶ್ರಾಂತಿಯಿಲ್ಲದೆ ಸದಾ ಕಾರ್ಯವನ್ನು ಮಾಡುತ್ತಲೇ ಇರುವುದು. ಪ್ರಾತಃಕಾಲದಿಂದ ಮಲಗುವವರೆಗೂ ಆಸೆಗಳು ಒಂದರ ಮೇಲೊಂದು ಪ್ರವಾಹ ರೂಪವಾಗಿ ಬರುತ್ತಲೇ ಇರುವುವು. ಇಷ್ಟೇ ಅಲ್ಲ; ಮಕ್ಕಳ ಮೇಲೆಯೂ, ಬಂಧುಗಳ ಮೇಲೆಯೂ ಮನುಷ್ಯನಿಗೆ ಪ್ರೀತಿಯು ಸದಾ ಉಂಟಾಗುತ್ತಿರುವುದು. ಆ ನಿಮಿತ್ತವಾಗಿ ಕೋಪತಾಪಗಳೂ, ಈರ್ಷ್ಯೋದ್ವೇಗಗಳೂ, ಅಹಂಕಾರ ಮಾತ್ಸರ್ಯಗಳೂ ಇವೇ ಮೊದಲಾದ ಅನೇಕ ಚಿತ್ತ ವೃತ್ತಿಗಳು ಅವನ ಮನಸ್ಸನ್ನು ಬಲವಾಗಿ ಆಕ್ರಮಿಸಿಕೊಳ್ಳುವುವು. ಈ ಪ್ರಕಾರದಲ್ಲಿ ಬುದ್ಧಿ ಮನಸ್ಸು ಇಂದ್ರಿಯಗಳೆಂಬ ಆಂತರ ಪ್ರಪಂಚವನ್ನು ಅಧಿಕವಾಗಿ ತಿಳಿಯುತ್ತಾ ಯುವಕನು ಕಾಮಪುರುಷಾರ್ಥದಲ್ಲಿ ಆಸಕ್ತಿಯುಳ್ಳವನಾಗುವನು. ಹಿಂದೆ ಬಾಹ್ಯ ಪ್ರಪಂಚದಲ್ಲಿಯೇ ಮಗ್ನನಾಗಿದ್ದಾಗ ಅರ್ಥಪುರುಷಾರ್ಥವನ್ನು ಎಷ್ಟುಮಟ್ಟಿಗೆ ಪ್ರೀತಿಸಿದ್ದನೋ ಅದಕ್ಕಿಂತ ಅಧಿಕವಾಗಿ ಈಗ ಅವನು ಕಾಮ ಪುರುಷಾರ್ಥದಲ್ಲಿ ತ್ವರೆಯನ್ನು ತೋರಿಸುವನು. ಈ ಸ್ಥಿತಿಯಲ್ಲಿ ಒಂದು ವೇಳೆ ಸಾಹಿತ್ಯ ವಿಜ್ಞಾನ ತತ್ವಶಾಸ್ತ್ರಾದಿಗಳನ್ನು ಓದುವುದು, ಇನ್ನೊಂದು ವೇಳೆ ಸಂಗೀತ ನಾಟಕಾದಿ ಕಲೆಗಳಲ್ಲಿ ಅನ್ವಯಿಸುವುದು, ಮತ್ತೊಂದು ವೇಳೆ ಪತ್ನಿಯಲ್ಲಿ ಸುಖಸಲ್ಲಾಪಗಳೊಡನೆ

ಕ್ರೀಡಿಸುವುದು, ಮಗದೊಂದು ವೇಳೆ ಮಕ್ಕಳು ಅಣ್ಣ ತಮ್ಮಂದಿರು ಅಕ್ಕತಂಗಿಯರೇ ಮೊದಲಾದ ಬಂಧುಗಳ ಸಹವಾಸದಲ್ಲಿ ಸುಖ ಪಡುವುದು— ಇವೇ ಮೊದಲಾದ ಅಂತಃಕರಣದ ಸುಖಗಳಲ್ಲಿಯೇ ಯುವಕನು ಕಾಲಕಳೆಯುವನು. ಹೀಗಿರುವುದರಿಂದ ಆತನಲ್ಲಿ ಕಾಮ ಪುರುಷಾರ್ಥವು ಪ್ರಧಾನವಾಗಿ ಕಂಡುಬಂದು ಅರ್ಥಪುರುಷಾರ್ಥದಲ್ಲಿ ಸ್ವಲ್ಪ ಅರುಚಿಯುಂಟಾಗುವುದು ಏನೂ ಆಶ್ಚರ್ಯವಲ್ಲ.

ಕಾಮಪುರುಷಾರ್ಥವು ಅರ್ಥಪುರುಷಾರ್ಥಕ್ಕಿಂತ ಉತ್ತಮವಾದುದು; ಏಕೆಂದರೆ ಮೇಲೆ ವಿವರಿಸಿದ ಅರ್ಥಪುರುಷಾರ್ಥದ ದೋಷಗಳು ಕಾಮ ಪುರುಷಾರ್ಥದಲ್ಲಿ ಕಂಡುಬರುವುದಿಲ್ಲ. ಮನಸ್ಸಿನಲ್ಲಿಯೇ ಬೆಳೆಸಬಹುದಾದ ಕಾಮ ಪುರುಷಾರ್ಥಕ್ಕೆ ಸಂಬಂಧಪಟ್ಟ ಚಿತ್ತವೃತ್ತಿಗಳು ಬಡವನಿಗೂ ಹಣಗಾರನಿಗೂ ಸಮವಾಗಿರುವುವು. ಒಬ್ಬ ದೊರೆಯು ಸಂಗೀತದಿಂದಲೂ, ಸಾಹಿತ್ಯ ಪಠನದಿಂದಲೂ ಮತ್ತು ಪತ್ನೀ ಪುತ್ರರಿಂದಲೂ ಎಷ್ಟು ಸುಖ ಪಡುತ್ತಾನೆಯೋ ಅಷ್ಟು ಸುಖವನ್ನು ಒಬ್ಬ ಭಿಕ್ಷುಕನೂ ಕೂಡ ಮನಸ್ಸು ಮಾಡಿದರೆ ಪಡೆಯಬಹುದಲ್ಲವೆ? ಈ ಬುದ್ಧಿ ಸುಖವು ಅಷ್ಟು ದುಃಖ ಮಿಶ್ರವಾಗಿಲ್ಲ ಮತ್ತು ದೀರ್ಘಕಾಲ ಅನುಭವಿಸಲು ಯೋಗ್ಯವಾಗಿರುವುದು. ಆದರೆ ಈ ಕಾಮ ಪುರುಷಾರ್ಥದಲ್ಲಿಯೂ ಕೆಲವು ಕೊರತೆಗಳಿರುವುವು. ಸಾಹಿತ್ಯಗಳನ್ನೂ, ಕಲೆಗಳನ್ನೂ ಕಲಿಯುವುದೇ ಕಷ್ಟವಾಗಿರುವುದರಿಂದ ಅನೇಕರು ಈ ಸಂತೋಷವನ್ನು ಅನುಭವಿಸಲಾರರು. ಬಡತನದಲ್ಲಿರುವವನು ಬೆಳಗ್ಗಿನಿಂದ ಸಾಯಂಕಾಲದವರೆಗೆ ತನ್ನ ಮತ್ತು ಕುಟುಂಬದವರ ಹೊಟ್ಟೆಪಾಡಿಗೆ ದುಡಿಯಬೇಕಾಗಿರುವುದರಿಂದ ಅವನಿಗೆ ಕಾಮ ಪುರುಷಾರ್ಥವನ್ನು ಅನುಭವಿಸಲು ಪುರಸತ್ತು ಅವಕಾಶವೂ ಇರುವುದಿಲ್ಲ. ಮೇಲೂ ಕಾಮಪುರುಷಾರ್ಥವೂ ಕೂಡ ದುಃಖ ಮಿಶ್ರವಾಗಿರುವುದು. ಪತ್ನೀ ಪುತ್ರರು ಸಾಯಬಹುದಾದುದರಿಂದ ಅವರ ವಿಯೋಗದಿಂದ ದುಃಖ ಉಂಟಾಗುವುದು ಅಥವ ನಮ್ಮ ಬಂಧುಗಳಿಗೆ ಬಡತನ, ರೋಗ, ಜಗಳಗಳೆಂದುಂಟಾಗುವ ಕಷ್ಟಗಳು ಒದಗಿದರೆ ನಮಗೂ ಕಷ್ಟವಾಗಿ ತೋರುವುದು. ಇದೂ ಅಲ್ಲದೆ ಈ ಕಾಮ ಪುರುಷಾರ್ಥವನ್ನು ಒಬ್ಬನು ತಾನು ಜೀವಿಸಿರುವ ಸ್ವಲ್ಪ ಕಾಲದಲ್ಲಿ ಅನುಭವಿಸಬಹುದೇ ಹೊರತು ಅದು ನಿರಂತರವಾದ ಮತ್ತು ನಿರ್ಮಲವಾದ ಆನಂದವನ್ನುಂಟುಮಾಡುವುದಿಲ್ಲ.

## ಧರ್ಮಪುರುಷಾರ್ಥ

ಯುವಕನ ಪ್ರಪಂಚದ ಅನುಭವಕ್ಕೆ ಕಾಮ ಪುರುಷಾರ್ಥವೇ ಎಲ್ಲೆಯಾಗಿರುವುದಿಲ್ಲ. ಅವನು ಮಧ್ಯ ವಯಸ್ಕನಾಗಿ ಇನ್ನೂ ಅಧಿಕವಾಗಿ ಮತಗ್ರಂಥಗಳ ಮತ್ತು ಸಾಮಾಜಿಕ ಶಾಸ್ತ್ರಗಳ ವಿದ್ಯಾಭ್ಯಾಸಗಳನ್ನು ಪಡೆದರೆ ಪ್ರಪಂಚದ ಮತ್ತೊಂದು ಭಾಗದ ಆಶ್ಚರ್ಯಜನಕವಾದ ವ್ಯಾಪಾರಗಳನ್ನು ತಿಳಿಯುವನು. ಮನುಷ್ಯರ ಸುಖ ದುಃಖಗಳಿಗೆ ಅದೃಷ್ಟವೇ ಕಾರಣವೆಂದೂ, ಈ ಅದೃಷ್ಟವು ಕಣ್ಣಿಗೆ ಕಾಣದಿರುವ

ದಿವ್ಯ ಶಕ್ತಿಗಳ ಅಥವ ದೇವತೆಗಳ ಪ್ರಸಾದವೆಂದೂ, ಆ ಪ್ರಸಾದವನ್ನು ಪಡೆಯುವುದಕ್ಕಾಗಿ ಯಜ್ಞ ಯಾಗಾದಿ ವೈದಿಕ ಕರ್ಮಗಳು, ದೇವಾಲಯ ಮೊದಲಾದುವುಗಳಲ್ಲಿ ಮಾಡುವ ಪೂಜೆಗಳು, ಹಬ್ಬ ಹರಿದಿನಗಳ ಆಚರಣೆಗಳು, ಉಪನಯನಾದಿ ಷೋಡಶ ಸಂಸ್ಕಾರಗಳು, ಯಜ್ಞ ದಾನ ತಪಸ್ಸುಗಳು ಇವೇ ಮೊದಲಾದ ಮತ ಸಂಬಂಧವಾದ ಧರ್ಮಗಳನ್ನು ಅನುಷ್ಠಿಸಬೇಕೆಂದೂ ಅವನು ತನ್ನ ಮತ ಗ್ರಂಥಗಳಿಂದ ತಿಳಿಯುವನು. ಹೀಗೆ ಅಲೌಕಿಕ ಸಾಧನಗಳಿಂದ ಐಹಿಕ ಆಮುಷ್ಮಿಕ ಸುಖಗಳನ್ನು, ಅಂದರೆ ಈ ಪ್ರಪಂಚದಲ್ಲಿ ಮತ್ತು ಕಾಲವಾದ ಮೇಲೆ ಪರಲೋಕಗಳಲ್ಲಿ ಶ್ರೇಯಸ್ಸನ್ನು ಪಡೆಯುವುದಕ್ಕಾಗಿ ಅವನು ವಿಶೇಷ ಕಾಲವನ್ನು ದೇವತಾ ಪ್ರಾರ್ಥನೆಗಳಲ್ಲಿಯೂ ಪೂಜೆಗಳಲ್ಲಿಯೂ ಕಳೆಯುವನು. ಈ ವಿಧವಾದ ಹೃದಯದ ಭಾವನೆಗಳಿಗೆ ಮತ್ತು ಶರೀರ ಪ್ರಯತ್ನಗಳಿಗೆ ಧರ್ಮ ಪುರುಷಾರ್ಥದಲ್ಲಿ ಒಂದು ಮುಖ್ಯ ಭಾಗವಾದ "ಕಾಮ್ಯಕರ್ಮ ಪುರುಷಾರ್ಥ" ವೆಂದು ನಾಮಧೇಯವನ್ನಿಟ್ಟಿರುವರು.

ಮನುಷ್ಯನು ಸಜಾತಿಯವರೊಡನೆ ಸೇರಿ ದೊಡ್ಡ ದೊಡ್ಡ ಸಮಾಜವನ್ನು ಕಟ್ಟಿಕೊಂಡು ಮಹತ್ತಾದ ಕಾರ್ಯಗಳನ್ನು ಮಾಡುತ್ತಿರುವುದನ್ನು ಸಮಾಜ ಶಾಸ್ತ್ರಗಳನ್ನು ಓದಿ ತಿಳಿಯುವನು. ಅನುಕೂಲ್ಯ ನಿಮಿತ್ತವಾಗಿ ಏರ್ಪಡಿಸಿರುವ ಸ್ತ್ರೀಪುರುಷರ ಮದುವೆಯೆಂಬ ಕಟ್ಟನ್ನೂ, ಅದರಿಂದ ಅಲ್ಲಲ್ಲಿ ಕುಟುಂಬ ಕುಟುಂಬಗಳಾಗಿ ಮನುಷ್ಯರು ಬೇರೆ ಬೇರೆ ಮನೆಗಳಲ್ಲಿ ವಾಸ ಮಾಡುವುದನ್ನೂ, ಅನೇಕ ಕುಟುಂಬಗಳ ಸಂಘದಿಂದ ಹಳ್ಳಿಗಳು ಉತ್ಪತ್ತಿಯಾಗಿರುವುದನ್ನೂ, ಅನೇಕ ಹಳ್ಳಿಗಳು ಸೇರಿ ಪಟ್ಟಣಗಳೂ ಪ್ರಾಂತ್ಯಗಳೂ ದೇಶಗಳೂ ಚಕ್ರಾಧಿಪತ್ಯಗಳೂ ಉಂಟಾಗಿರುವುದನ್ನೂ, ಇವುಗಳಲ್ಲಿ ವಾಸಮಾಡುವ ಜನಗಳಲ್ಲಿ ಉಂಟಾಗಬಹುದಾದ ಕಲಹಗಳನ್ನು ತಪ್ಪಿಸಿ ಅವರಿಗೆ ಅನುಕೂಲಗಳನ್ನು ಕಲ್ಪಿಸುವ ಸರ್ಕಾರಗಳು ಏರ್ಪಾಡಾಗಿರುವುದನ್ನೂ, ಆ ಸರ್ಕಾರಗಳ ನ್ಯಾಯ ನಿಬಂಧನೆ ನ್ಯಾಯ ತೀರ್ಮಾನ ಶಿಕ್ಷಣೆಯೇ ಮೊದಲಾದ ಒಳ ವಿಭಾಗಗಳನ್ನೂ, ಪ್ರಜಾ ಕ್ಷೇಮವನ್ನುಂಟುಮಾಡುವುದಕ್ಕಾಗಿ ಆರ್ಥಿಕ ಸಾಮಾಜಿಕ ರಾಜಕೀಯವೇ ಮೊದಲಾದ ಅನೇಕ ಸಂಸ್ಥೆಗಳ ಏರ್ಪಾಡುಗಳನ್ನೂ ಅನುಭವಿಸಿ ಸಂತೋಷ ಪಡುವನು. ಮೇಲೂ, ಒಂದು ಪ್ರಾಣಿಯ ಹಿತಕರ ವ್ಯಾಪಾರಗಳು ಮತ್ತೊಂದರ ವ್ಯಾಪಾರಗಳಿಗೆ ಹಿಂಸೆಕರವಾದರೆ ಎಲ್ಲವೂ ನಾಶವಾಗುವುದೆಂಬ ಗುಟ್ಟನ್ನು ತಿಳಿದು ಸ್ವಾರ್ಥಭಾವನೆಗಳನ್ನು ತೊರೆದೂಡಿ ಪರಾರ್ಥ ಭಾವನೆಗಳನ್ನು ಬೆಳೆಸಿ ಸಮಾಜ ಧರ್ಮಗಳನ್ನು ಅರಿತು ತಾನು ಸೇರಿರುವ ಪರಂಪರೆಯಾದ ಸಮಾಜಗಳ ಸೇವೆಯಲ್ಲಿ ನಿರತನಾಗುವನು. ಈ ವಿಧವಾದ ಹೃದಯದ ಭಾವನೆಗಳಿಗೂ ಮತ್ತು ಶರೀರದ ಪ್ರಯತ್ನಗಳಿಗೂ ಧರ್ಮ ಪುರುಷಾರ್ಥದಲ್ಲಿ ಇನ್ನೊಂದು ಮುಖ್ಯ ಭಾಗವಾದ "ಲೋಕ ಕಲ್ಯಾಣ ಪುರುಷಾರ್ಥ" ವೆಂಬ ಹೆಸರನ್ನಿಟ್ಟಿರುವರು.

ಹೀಗೆ ಕಾಮ್ಯ ಕರ್ಮ ಪುರುಷಾರ್ಥವನ್ನೂ ಮತ್ತು ಲೋಕ ಕಲ್ಯಾಣ ಪುರುಷಾರ್ಥವನ್ನೂ ಒಟ್ಟುಗೂಡಿಸಿರುವ ಧರ್ಮ ಪುರುಷಾರ್ಥದಲ್ಲಿ ತ್ವರೆಯನ್ನು ಪಡೆದು ಗೃಹಸ್ಥಾಶ್ರಮಿಯಾಗಿರುವ ಮಧ್ಯವಯಸ್ಕನು ತನ್ನ ಕುಟುಂಬಕ್ಕೂ, ಹಳ್ಳಿಗೂ, ಪ್ರಾಂತ್ಯಕ್ಕೂ, ದೇಶಕ್ಕೂ, ಚಕ್ರಾಧಿಪತ್ಯಕ್ಕೂ, ಒಟ್ಟು ಮನುಷ್ಯ ಸಮಾಜಕ್ಕೂ, ಅಷ್ಟೇಕೆ, ಪ್ರಾಣಿಗಳಿಗೂ ಶ್ರೇಯಸ್ಸನ್ನುಂಟುಮಾಡುವುದಕ್ಕಾಗಿ ಲೌಕಿಕ ಸಾಧನಗಳಾದ ಸಮಾಜ ಸೇವಾರೂಪವಾದ ಮನುಷ್ಯ ಪ್ರಯತ್ನಗಳನ್ನೂ ಮತ್ತು ಅಲೌಕಿಕ ಸಾಧನಗಳಾದ ದೇವತಾದಿಗಳ ಪೂಜೆಗಳನ್ನೂ ಮಾಡುತ್ತಲೇ ಇರುವನು. ಅವನು ಋಷಿ ಯಜ್ಞ, ದೇವ ಯಜ್ಞ, ಪಿತೃ ಯಜ್ಞ, ಮನುಷ್ಯ ಯಜ್ಞ, ಭೂತ ಯಜ್ಞ ಎಂಬ ಪಂಚ ಮಹಾಯಜ್ಞಗಳನ್ನು ಸದಾ ಮಾಡುತ್ತ ತೃಪ್ತನಾಗಿರುವನು. ಈ ಕಾಲದಲ್ಲಿ ಕಾಮ ಪುರುಷಾರ್ಥವೂ ಮತ್ತು ಅರ್ಥ ಪುರುಷಾರ್ಥವೂ ಮಾತ್ರ ಅವನ ಮನಸ್ಸನ್ನು ಆಕರ್ಷಿಸಲಾರವು. ಧರ್ಮ ಪುರುಷಾರ್ಥವೇ ಪ್ರಧಾನವಾಗಿ ಅರ್ಥ ಕಾಮ ಪುರುಷಾರ್ಥಗಳು ಅಂಗವಾಗುವುವು; ಅವನು ಈಗ ಸದಾ ಧಾರ್ಮಿಕ ನಡತೆಯಲ್ಲಿಯೇ ಮಗ್ನನಾಗುವುದರಿಂದ, ಕಾಮ ಪುರುಷಾರ್ಥದಲ್ಲಿ ಉದಾಸೀನತೆಯನ್ನು ತೋರಿಸುವ ಸ್ವಭಾವವನ್ನು ಪಡೆಯುವನು.

ಧರ್ಮ ಪುರುಷಾರ್ಥವು ಕಾಮ ಪುರುಷಾರ್ಥಕ್ಕಿಂತ ಉತ್ತಮವಾದುದು. ಸಾಮಾಜಿಕರೆಲ್ಲರೂ ಒಗ್ಗಟ್ಟಾಗಿ ಸೇರಿ ಒಬ್ಬರಿಗೊಬ್ಬರು ಒಟ್ಟು ಹಳ್ಳಿಯವರ ಕ್ಷೇಮಕ್ಕಾಗಿ ಸಹಾಯ ಮಾಡುವುದಕ್ಕಾಗಿಯೇ ಪುರಾತನ ಭಾರತೀಯರು ಆ ಕಾಲದಲ್ಲಿ ಶುದ್ಧವಾಗಿದ್ದ ವರ್ಣಾಶ್ರಮ ಧರ್ಮವನ್ನು ಏರ್ಪಡಿಸಿದರು. ವ್ಯಕ್ತಿಗಳ ವಿಭಜನಾಕ್ರಮದಿಂದ ಹಳ್ಳಿಯಲ್ಲಿ ಉತ್ಪನ್ನವಾದ ಧಾರಕ, ಪೋಷಕ ಮತ್ತು ಭೋಗ್ಯ ವಸ್ತುಗಳು ಹಳ್ಳಿಯವರೆಲ್ಲರಿಗೂ ಸಮಾನ್ಯವಾಗಿ ಉಪಯೋಗವಾಗುತ್ತಿದ್ದವು. ದೇವತಾ ಪೂಜೆಗಳ ವಿಸರ್ಜಣುಗಳಿಂದ ಹಳ್ಳಿಯವರಿಗೆ ಉಂಟಾಗಬಹುದಾದ ಆಧಿದೈವಿಕ ಮತ್ತು ಆಧಿಭೌತಿಕ ಕಷ್ಟಗಳು ಪರಿಹಾರವಾಗುವುದೆಂದು ನಂಬಿದ್ದರು. ಇನ್ನೇನು, ಧರ್ಮವನು ಅನುಷ್ಠಿಸುವುದರಿಂದ ಅರ್ಥ ಕಾಮ ಪುರುಷಾರ್ಥಗಳೂ ಕೂಡ ಅಪಾಯ ರಹಿತವಾಗಿ ಲಭಿಸುವುವು. ಆದರೆ ಧರ್ಮ ಪುರುಷಾರ್ಥವೂ ಕೂಡ ಶಾಶ್ವತವಾದ ಮತ್ತು ದೋಷರಹಿತವಾದ ಸುಖವನ್ನು ಕೊಡುತ್ತದೆಂದು ತಿಳಿಯಕೂಡದು. ಏಕೆಂದರೆ, ಎಷ್ಟು ಧರ್ಮಗಳನು ಅನುಷ್ಠಿಸಿದಾಗ್ಯೂ ಆಸೆಗಳು ಒಂದರಮೇಲೊಂದು ಉಂಟಾಗುತ್ತಿರುವುದರಿಂದ ಅವುಗಳನ್ನು ಸಂಪೂರ್ಣವಾಗಿ ತೃಪ್ತಿಪಡಿಸುವುದಕ್ಕಾಗುವುದಿಲ್ಲ. ಪ್ರಪಂಚದ ನಿಜ ಸ್ಥಿತಿಯೂ ಕಾರಣವೂ ಗೊತ್ತಾಗುವುದಿಲ್ಲ; ಅಂದರೆ ನಿತ್ಯಾನಿತ್ಯ ವಿವೇಕ ಜ್ಞಾನವು ಉಂಟಾಗುವುದಿಲ್ಲ; ರೋಗಾದಿಗಳೂ ಅವುಗಳಿಂದುಂಟಾಗುವ ಕಷ್ಟ ಪರಂಪರೆಗಳೂ ಹೋಗುವುದಿಲ್ಲ. ನಮಗೂ ನಮಗೆ ಸೇರಿದವರಿಗೂ ಸಾವು ತಪ್ಪುವುದಿಲ್ಲ; ಆದರಿಂದುಂಟಾ

ಗುವ ಶೋಕವೂ ಭಯವೂ ಇದ್ದೇ ಇರುವುದು. ವಯಸ್ಸಾದ ಮೇಲೆ ಉಂಟಾಗುವ ಶಾರೀರಿಕ ಮತ್ತು ಮಾನಸಿಕ ಬಾಧೆಗಳು ಬಂದೇ ಬರುವುವು. ಅರ್ಥ, ಕಾಮ ಮತ್ತು ಧರ್ಮ ಎಂಬ ಮೂರು ಪುರುಷಾರ್ಥಗಳಲ್ಲಿಯೂ "ನಾನು ಶರೀರ ಮತ್ತು ಮನಸ್ಸು" ಎಂಬ ಅಹಂಕಾರವು ತಲೆದೋರಿರುವುದರಿಂದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ, ಭಯ ಮತ್ತು ಶೋಕ ಎಂಬ ಅರಿಷಡ್ವರ್ಗಗಳು ಸಂಪೂರ್ಣವಾಗಿ ನಾಶವಾಗುವುದಿಲ್ಲ. ಆದುದರಿಂದ ಮನುಷ್ಯನಿಗೆ ಶಾಂತಿಯುಂಟಾಗುವುದಿಲ್ಲ. ಶಾಂತಿಯಿಲ್ಲದ ಮೇಲೆ ನಿರಂತರವಾದ ಮತ್ತು ದೋಷರಹಿತವಾದ ಸಂತೋಷವು ಹೇಗೆತಾನೇ ಉಂಟಾದೀತು? ಹೀಗಿರುವಲ್ಲಿ ಧರ್ಮಪುರುಷಾರ್ಥವೇ ಅತ್ಯುತ್ತಮ ಪುರುಷಾರ್ಥವೆಂದು ಹೇಳುವುದಕ್ಕಾಗುವುದಿಲ್ಲ.

## ಮೋಕ್ಷ ಪುರುಷಾರ್ಥ

ಮಧ್ಯವಯಸ್ಸಿನಲ್ಲಿರುವವನು ಕ್ರಮೇಣ ವೃದ್ಧಾಪ್ಯವನ್ನು ಪಡೆಯುವನು; ಆಗ ಇನ್ನೂ ವಿಶೇಷ ಸಂಸ್ಕಾರಗಳನ್ನು ಹೊಂದಲು ಬ್ರಹ್ಮಸೂತ್ರದಲ್ಲಿ "ಅಥಾತೋ ಬ್ರಹ್ಮ ಜಿಜ್ಞಾಸಾ" ಎಂದು ಆರಂಭಿಸಿರುವ ಹಾಗೆ ದರ್ಶನಗಳನ್ನೂ ವೇದಾಂತ ಶಾಸ್ತ್ರಗಳನ್ನೂ ಅಧ್ಯಯನ ಮಾಡಲು ಆರಂಭಿಸುವನು. ಅವುಗಳ ಪಠನದಿಂದ ಪ್ರಪಂಚದ ಅತ್ಯಂತ ಸಾರವಾದ ಮತ್ತು ಪರಮ ಗುಹ್ಯವಾದ ತತ್ವವನ್ನು ತಿಳಿಯುವನು. ಜಗತ್ತಿನಲ್ಲಿರುವ ವಸ್ತುಗಳೆಲ್ಲವೂ ಆತ್ಮಮಯವಾಗಿವೆಯೆಂದೂ ಪರಮಾತ್ಮಾಧೀನವಾಗಿವೆಯೆಂದೂ ತಿಳಿಯುವನು. ಪ್ರತಿಯೊಂದು ಚೇತನ ವಸ್ತುವೂ ಆತ್ಮ ಮತ್ತು ಶರೀರ ಇವುಗಳ ಸಂಯೋಗದಿಂದ ಉಂಟಾದದ್ದೆಂದು ತೀರ್ಮಾನಿಸುವನು. ಪ್ರತಿಯೊಂದು ಜೀವಿಯೂ ತನ್ನ ನಿಜಸ್ವರೂಪದಲ್ಲಿ ಸಚ್ಚಿದಾನಂದ ಸ್ವರೂಪಿಯೆಂದು ಭಾವಿಸುವನು; ಆದರೆ ಅದು ಈಗ ಅಜ್ಞಾನದಿಂದ ದೇಹಾಭಿಮಾನವನ್ನಿಟ್ಟುಕೊಂಡು ಸುಖ ದುಃಖಗಳನ್ನು ಆರೋಪಿಸಿಕೊಂಡು ಪ್ರಪಂಚದಲ್ಲಿ ಅಲೆದಾಡುತ್ತಿರುವದನ್ನು ಕಾಣುವನು. ಈ ಪ್ರಕಾರವಾದ ವೇದಾಂತ ಜ್ಞಾನವು ಅವನ ಹೃದಯದಲ್ಲಿ ಜ್ವಲಿಸಲಾರಂಭಿಸಿದರೆ ಅವನಿಗೆ ಮೊದಲು ಕಂಡ ಸಾಧಾರಣವಾದ ಪ್ರಪಂಚವೇ ಈಗ ಅದ್ಭುತ ಪ್ರಪಂಚವಾಗಿ ಕಂಡುಬರುವುದು. ಸೌಂದರ್ಯದಿಂದ ಕೂಡಿರುವ ಬೆಟ್ಟಗಳಲ್ಲಿಯೂ, ಜುಳುಜುಳನೆ ಹರಿಯುತ್ತಿರುವ ನದಿಗಳಲ್ಲೂ, ಮೇಲಿಂದ ಕೆಳಕ್ಕೆ ಧುಮುಕುವ ಜಲಪಾತಗಳಲ್ಲೂ, ಮೇಲೆ ಮೇಲೆ ಉಕ್ಕಿಬರುವ ಭಯಂಕರವಾದ ಸಮುದ್ರದ ಅಲೆಗಳಲ್ಲಿಯೂ, ಗಂಭೀರವಾದ ಅದರ ಮಧ್ಯಭಾಗದಲ್ಲಿಯೂ, ಕ್ರೂರ ಮೃಗಗಳಿಂದ ಕೂಡಿರುವ ನಿಬಿಡವಾದ ಕಾಡುಗಳಲ್ಲಿಯೂ, ಆಕಾಶ ಭೂಮಿಗಳನ್ನಾವರಿಸಿ ಧಾರೆ ಧಾರೆಯಾಗಿ ಮಳೆ ಸುರಿಸುವ ಮೇಘಗಳಲ್ಲಿಯೂ, ಮಹಾ ಆಕಾಶವೆಂಬ ಅಂತರಾಳದಲ್ಲಿ ಪ್ರಕಾಶಿಸುತ್ತಿರುವ ಚಂದ್ರ ಸೂರ್ಯ ನಕ್ಷತ್ರಾದಿಗಳಲ್ಲಿಯೂ ದೊಡ್ಡ ದೊಡ್ಡ ನಗರಗಳಲ್ಲಿರುವ ಜನಗಳ, ಗಾಡಿಗಳ, ಮೋಟಾರುಗಳ ಓಡಾಟಗಳಲ್ಲಿಯೂ ಎಲ್ಲೆಲ್ಲಿಯೂ ಪರಮಾತ್ಮನಿರುವನೆಂಬುದನ್ನು ಮನನಮಾಡುತ್ತಲೇ ಇರುವನು. ಇಂಥಾ ಪ್ರಪಂಚದ

ಅದ್ಭುತ ಸ್ವರೂಪವನ್ನು ಮನುಷ್ಯನು ದೈವ ಕೃಪೆಯಿಂದ ಅನುಭವಿಸಲು ಅರ್ಹನಾದರೆ ಅವನಿಗೆ ಕೂಡಲೇ ಮೋಕ್ಷ ಪುರುಷಾರ್ಥದಲ್ಲಿ ತ್ವರೆಯುಂಟಾಗುವುದು. ಆಗ ಅವನಲ್ಲಿ ಧರ್ಮಾರ್ಥ ಕಾಮ ಪುರುಷಾರ್ಥಗಳನ್ನು ಮೀರಿ ಆತ್ಮ ಪರಮಾತ್ಮ ಸಾಕ್ಷಾತ್ಕಾರಗಳನ್ನು ಎಂದಿಗೆ ಪಡೆಯಬಹುದೆಂಬ ಉತ್ಕಟ ಆಸೆಯೇ ಪ್ರಧಾನವಾಗುವದು. ಅವನು ಈ ಸ್ಥಿತಿಯಲ್ಲಿ ಕೆಳಗೆ ಹೇಳುವ ರೀತಿಯಲ್ಲಿ ಕೆಲಸಗಳನ್ನು ಮಾಡುತ್ತಿರುವಾಗಲೂ, ವಿಶ್ರಾಂತಿ ಕಾಲದಲ್ಲಿಯೂ ಮನನ ಮಾಡುವನು. " ನಾನು ಈ ದೇಹೇಂದ್ರಿಯ ಮನಸ್ಸುಗಳಲ್ಲಿ ಒಂದೂ ಅಲ್ಲ; ಆದರೆ ಸಚ್ಚಿದಾನಂದ ಸ್ವರೂಪನಾದ ಆತ್ಮನು, ನನಗೆ ಹುಟ್ಟುವಿಕೆ ಇಲ್ಲ, ಸಾವಿಲ್ಲ. ನಾನು ಶಾಶ್ವತನು. ನಿರ್ವಿಕಾರನು. ಈ ದೇಹಾದಿಗಳ ಅಭಿಮಾನವೇ ನನ್ನನ್ನು ಶರೀರವೆಂಬ ಜೈಲಿನಲ್ಲಿ ನಿರ್ಬಂಧಿಸಿ, ನನಗೆ ಅಜ್ಞಾನವನ್ನುಂಟು ಮಾಡಿ ನನ್ನ ನಿಜ ಸ್ವರೂಪವನ್ನೇ ಮರೆಸಿ, ನನಗೆ ಜನ್ಮ ಮೃತ್ಯು ಶೀತ ಉಷ್ಣ ಸುಖ ದುಃಖಾದಿಗಳ ಅನುಭವಗಳನ್ನುಂಟುಮಾಡಿದೆ. ನಾನೇ ಆನಂದ ಸ್ವರೂಪನಾದ್ದರಿಂದ ನನ್ನ ಸುಖಕ್ಕೆ ಈ ಪ್ರಕೃತಿಯೇ ಕಾರಣವಲ್ಲ. ಪ್ರಕೃತಿಯ ಮೇಲಿರುವ ಅಭಿಮಾನವೇ ಈ ವಿಚಿತ್ರ ಸೃಷ್ಟಿಯ ಗುಣಾವಗುಣಗಳನ್ನು ನಾನು ಅನುಭವಿಸುವ ಹಾಗೆ ತೋರಿಸುತ್ತದೆ. ಈ ಪ್ರಪಂಚದ ಕಾರಣ ವಸ್ತುವು ಅನಂತ ಸ್ವರೂಪನಾದ ಪರಮಾತ್ಮನು. ಅವನೇ ಈಗ ನಿಜವಾಗಿ ನನ್ನನ್ನು ನಿಯಮಿಸುವವನು; ಅವನೇ ನನ್ನ ಸ್ವಾಮಿ, ಅವನೇ ನನ್ನ ಅಂತರ್ಯಾಮಿ. ಅವನೇ ನನ್ನ ಜೀವ; ಅವನೇ ನನ್ನ ಸತ್ತೆ, ಅವನೇ ನನ್ನ ಆಧಾರ; ಇನ್ನೇನು, ' ಅವನೇ ನಾನು ' ಎಂದು ಹೇಳುವಷ್ಟು ನನ್ನ ಸ್ವರೂಪಕ್ಕೂ ಅವನ ಸ್ವರೂಪಕ್ಕೂ ಐಕ್ಯತೆ ಇರುವುದು; ಪ್ರಕೃತಿ ವ್ಯಾಮೋಹದಿಂದ ನನ್ನ ನಿಜಸ್ವರೂಪವನ್ನೂ ಅವನನ್ನೂ ಮರೆತೆನು; ಇನ್ನು ಮೇಲಾದರೂ ನಾನು ನಿಜವಾಗಿ ಯಾರೆಂಬುದನ್ನು ತಿಳಿದು ಆ ಪರಮಾತ್ಮನನ್ನು ಸೇರುವೆನು ಅಥವ ಅವನಲ್ಲಿ ಐಕ್ಯನಾಗುವೆನು. ಈ ಉತ್ತಮ ಜ್ಞಾನವನ್ನು ಪಡೆಯಬೇಕಾದ ಯೋಗ ಸಾಧನೆಗಳಲ್ಲಿ ನಿರತನಾಗುವೆನು. ಈ ಉಪಾಯಗಳಿಗೆ ವಿರೋಧವಾಗದ ರೀತಿಯಲ್ಲಿ ಅರ್ಥ ಪುರುಷಾರ್ಥವನ್ನೂ, ಕಾಮ ಪುರುಷಾರ್ಥವನ್ನೂ, ಧರ್ಮ ಪುರುಷಾರ್ಥವನ್ನೂ, ಕೈಗೊಳ್ಳುವೆನು; ವಿರೋಧವಾದವುಗಳನ್ನು ಎಷ್ಟು ಕಷ್ಟವಾದಾಗ್ಯೂ ಎದೆಗೆಡದೆ ತ್ಯಜಿಸುವೆನು. ಸರ್ವ ಪ್ರಯತ್ನವನ್ನು ಮಾಡಿ ಈ ಆತ್ಮ ಪರಮಾತ್ಮ ಲಾಭವನ್ನು ಹೊಂದುವೆನು." ಇದೇ ಮುಮುಕ್ಷುವಿನ, ಅಂದರೆ ಮೋಕ್ಷ ಪುರುಷಾರ್ಥವನ್ನು ಹೊಂದಿದವನ ಪ್ರತಿಜ್ಞೆ; ಈ ದೃಢ ಸಂಕಲ್ಪವು ಎಷ್ಟೆಷ್ಟು ಕೈಗೂಡುವುದೋ ಅಷ್ಟಷ್ಟು ಶಾಂತಿಯುಂಟಾಗುವುದು; ಅಷ್ಟಷ್ಟು ಆಸೆಗಳೂ, ಅದರಿಂದುಂಟಾಗುವ ಮೇಲೆ ಹೇಳಿದ ಕಷ್ಟ ಪರಂಪರೆಗಳೂ ಕ್ರಮೇಣ ಕಡಿಮೆಯಾಗಿ ನಿರತಿಶಯವಾದ ನಿರ್ಮಲವಾದ ಶಾಶ್ವತವಾದ ಆತ್ಮಾನಂದವೂ ಮತ್ತು ಭಗವದಾನಂದವೂ ಕೈಗೂಡುವುದು. ಹೀಗಿರುವಲ್ಲಿ ಮೋಕ್ಷ ಪುರುಷಾರ್ಥವು ಮಿಕ್ಕ ಎಲ್ಲಾ ಪುರುಷಾರ್ಥಗಳಿಗಿಂತ ಮೇಲಾದದ್ದೆಂದು ಹೇಳುವುದು ಸಹಜವಲ್ಲವೆ? ನೀವೇ ಯೋಚಿಸಿ ತೀರ್ಮಾನ ಮಾಡಿ...

ಶ್ರೀ ನವಭಾರತ ಆಶ್ರಮ

ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

## (ಮಾಲೆ ಏಳು)

## ಪ್ರಾಚೀನ ಗುರುಕುಲ ಧ್ಯೇಯಗಳು; ಅವನ್ನು ಇಂದಿನ ಶಿಕ್ಷಣಕ್ರಮದಲ್ಲಿ ಹೇಗೆ ತರುವುದು?

### ಗುರುವೇ ಮುಖ್ಯ

ಪುರಾತನ ಕಾಲದಲ್ಲಿ ಭಾರತದ ವಿದ್ಯಾಭ್ಯಾಸಕ್ರಮವು ಹೇಗಿತ್ತು? ಗುರುಗಳು ರಾಜರುಗಳ ಸಹಾಯದಿಂದ ಗುರುಕುಲಗಳನ್ನು ತಾವು ವಾಸಮಾಡುವ ಆಶ್ರಮಗಳಲ್ಲಿಯೇ ಆರಂಭಿಸುತ್ತಿದ್ದರು. ಆಗ ವಿದ್ಯಾರ್ಥಿಯು ಬಹುಮಟ್ಟಿಗೆ ಒಬ್ಬ ಪ್ರಧಾನ ಗುರುವಿನ ಆಶ್ರಯದಲ್ಲಿಯೇ ತನ್ನ ಸಂಪೂರ್ಣ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದನು. ಅವನಿಗೆ ಮೊದಲು ಉಪನಯನವಾಗಬೇಕು. ಅಂದರೆ ಅವನು ಗುರುವಿನ ಹತ್ತಿರ ಸೇರುವ ಯೋಗ್ಯತೆಯನ್ನು ಪಡೆಯಬೇಕು. ವಿದ್ಯಾರ್ಥಿಗಳು ಗುರುವಿನೊಡನೆಯೇ ಸದಾಕಾಲದಲ್ಲಿಯೂ ಇರಬೇಕಾದುದರಿಂದ ಅವನು ವಾಸ ಮಾಡುವ ಸ್ಥಳದಲ್ಲೇ ಇರಬೇಕಾಗಿತ್ತು; ಆದುದರಿಂದಲೇ ಈ ವಿಧವಾದ ಸಂಸ್ಥೆಗೆ ಗುರುಕುಲವೆಂದು ಹೆಸರಿತ್ತು. ಗುರುಕುಲಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಅಧಿಕವಾಗಿದ್ದರೆ ಪ್ರಧಾನ ಗುರುವು ಹಿಂದೆ ತನ್ನಲ್ಲಿ ವಿದ್ಯೆಯನ್ನು ಕಲಿತು ತನ್ನಲ್ಲಿ ಹೆಚ್ಚಾದ ಪ್ರೀತಿಯನ್ನೂ ಗೌರವವನ್ನೂ ತೋರಿಸುತ್ತಿದ್ದ ಶಿಷ್ಯರುಗಳನ್ನೇ ಸಹಾಯಕ ಗುರುಗಳಾಗಿ ನಿಯಮಿಸುತ್ತಿದ್ದನು. ಆದುದರಿಂದ ಸಹಾಯಕ ಗುರುಗಳು ಪ್ರಧಾನ ಗುರುವಿನಲ್ಲಿ ಭಕ್ತಿಯನ್ನಿಟ್ಟು ಅವನು ನಿಯಮಿಸಿದ ಕಾರ್ಯಗಳನ್ನು ಭಗವಂತನ ಸೇವೆ ಎಂದು ಭಾವಿಸಿ ಆಸಕ್ತಿಯಿಂದ ನಡೆಸುತ್ತಿದ್ದರು. ಮುಖ್ಯವಾಗಿ ಗುರುಗಳೂ ವಿದ್ಯಾರ್ಥಿಗಳೂ ಒಟ್ಟಾಗಿ ವಾಸಮಾಡುತ್ತಿದ್ದುದರಿಂದ ವಿದ್ಯಾರ್ಥಿಗಳಿಗೆ ಎಲ್ಲಾ ಗುರುಗಳಲ್ಲಿ, ಮುಖ್ಯವಾಗಿ ಪ್ರಧಾನ ಗುರುವಿನಲ್ಲಿ ಶ್ರದ್ಧೆ ವಿನಯ ಭಕ್ತಿಗಳಿದ್ದವು ಮತ್ತು ಅವರು ಪ್ರತಿ ದಿವಸವೂ ಇಪ್ಪತ್ತುನಾಲ್ಕು ಘಂಟೆಗಳ ಕಾಲವೂ ಎಲ್ಲಾ ವಿಧಗಳಲ್ಲಿಯೂ ಉತ್ತಮ ಶಿಕ್ಷಣವನ್ನು ಪಡೆಯುತ್ತಿದ್ದರು. ಒಟ್ಟಿನಲ್ಲಿ ಆ ಕಾಲದಲ್ಲಿ ವಿದ್ಯಾರ್ಥಿಗಳಿಗೂ ತಂದೆತಾಯಿಗಳಿಗೂ ಬಾರೆಗಳ ಮೇಲಿನ ಪ್ರೀತಿಗಿಂತ ಗುರುಗಳ ಮೇಲೆ ಅಧಿಕವಾದ ಭಕ್ತಿ ಮತ್ತು ಮರ್ಯಾದೆ ಇತ್ತು. ಪ್ರಧಾನ ಗುರುವೇ ಅಥವ ಆಚಾರ್ಯನೇ ಶಿಷ್ಯರುಗಳಿಗೆ ಉತ್ತಮವಾದ ಮತ್ತು

ಸಂಪೂರ್ಣವಾದ ವಿದ್ಯೆಯನ್ನು ಕಲಿಸುವ ಹೊಣೆಯನ್ನು ಹೊತ್ತಿದ್ದನು; ಶಿಷ್ಯರೂ ಕೂಡ ತಮ್ಮ ಗುರುಗಳಿಂದ ಉತ್ತಮ ಶಿಕ್ಷಣವನ್ನು ಪಡೆದು ಪರಿಪೂರ್ಣಾವಸ್ಥೆಯನ್ನು ಮುಟ್ಟಬೇಕೆಂಬ ಆತುರವನ್ನು ಪಡೆದಿದ್ದರು. ಆದುದರಿಂದ ಅವರು ಬೆಳಗಿನಜಾವವೇ ಎದ್ದು ರಾತ್ರಿ ಮಲಗುವವರೆಗೂ ಗುರುಗಳ ಸಹವಾಸವನ್ನು ಪಡೆದು ಗುರುಗಳ ಉಪದೇಶದ ಪ್ರಕಾರ ಬ್ರಹ್ಮಚರ್ಯ ವ್ರತವನ್ನು ಕೈಗೊಂಡು ಕಾಮ ಕ್ರೋಧ ಲೋಭ ಮೋಹ ಮದಮಾತ್ಸರ್ಯವೆಂಬ ಅರಿಷಡ್ವರ್ಗಗಳನ್ನು ಜಯಿಸಲು ಪ್ರಯತ್ನಿಸುತ್ತಾ ತಮ್ಮ ಗುರುಗಳಲ್ಲಿರುವ ಉತ್ತಮವಾದ ಆತ್ಮಗುಣಗಳನ್ನು ದಿನಚರಿಯಲ್ಲಿ ಅಭ್ಯಾಸ ಮಾಡುತ್ತಿದ್ದರು. ಪೂರ್ವಕಾಲದ ಗುರುಕುಲದಲ್ಲಿ ಪ್ರಧಾನ ಗುರುವಿಗೂ ಸಹಾಯಕ ಗುರುಗಳಿಗೂ ವಿದ್ಯಾರ್ಥಿಗಳಿಗೂ ಶಿಕ್ಷಣ ಕ್ರಮದಲ್ಲಿ ಒಂದೇ ಧ್ಯೇಯವಿದ್ದುದಲ್ಲದೆ, ಅವರಲ್ಲಿ ಒಬ್ಬೊಬ್ಬರಿಗೆ ನಿಕಟ ಸಂಬಂಧವೂ ಅನುಕೂಲ ಭಾವನೆಗಳೂ ಪ್ರೀತಿಯೂ ಐಕಮತ್ಯವೂ ಪೂಜ್ಯ ಮನೋಭಾವನೆಯೂ ಇದ್ದವು.

## ವೃತ್ತಿ ಶಿಕ್ಷಣ

ಬ್ರಿಟಿಷರಿಂದ ಸ್ಥಾಪಿಸಲ್ಪಟ್ಟಿರುವ ಶಿಕ್ಷಣ ಕ್ರಮದಿಂದ ಕಳೆದ ನೂರು ವರುಷಗಳಿಂದಲೂ ವಿದ್ಯಾರ್ಥಿಗಳು ಪ್ರಾಥಮಿಕ, ಮಾಧ್ಯಮಿಕ, ಪ್ರೌಢ, ಕಾಲೇಜು ವಿದ್ಯಾಸಂಸ್ಥೆಗಳಲ್ಲಿ ಹೆಚ್ಚಾಗಿ ಬೌದ್ಧಿಕ ಶಿಕ್ಷಣವನ್ನು ಪಡೆದು, ಆಯಾ ಅಂತಸ್ತಿನ ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದಿ ದೊಡ್ಡವರಾದ ಮೇಲೆ ತಮ್ಮ ತಮ್ಮ ಬುದ್ಧಿಶಕ್ತಿಯ ಯೋಗ್ಯತೆಗೆ ಅನುಗುಣವಾಗಿ ಸರ್ಕಾರದಲ್ಲೂ ಮತ್ತು ಖಾಸಗಿ ಸಂಸ್ಥೆಗಳಲ್ಲೂ ನೌಕರಿಯನ್ನು ಪಡೆಯುತ್ತಿರುವರು ಅಥವ ವಕೀಲಿ, ಡಾಕ್ಟರ್, ಇಂಜನೀಯರ್ ಮೊದಲಾದ ಉದ್ಯೋಗಗಳಲ್ಲಿ ಹಣ ಸಂಪಾದಿಸುತ್ತಿರುವರು. ಆದರೆ ಬಹು ಮಂದಿ ಪ್ರೌಢಶಾಲೆಗಳಲ್ಲಿ ಶಿಕ್ಷಣವನ್ನು ಮುಗಿಸಿದವರು ಮತ್ತು ಅನೇಕ ಪದವೀಧರರು ತಮ್ಮ ಜೀವನವನ್ನು ಸುಖವಾಗಿ ನಡೆಸುವುದಕ್ಕೆ ಅನುಕೂಲವಾದ ಉದ್ಯೋಗಗಳನ್ನು ಪಡೆಯಲಾರದೆ ಸಂಕಟಪಡುತ್ತಿರುವರು. ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ವಿದ್ಯಾರ್ಥಿಯು ಮುಂದೆ ಸ್ವಾವಲಂಬನದಿಂದ ತನ್ನ ಕುಟುಂಬದವರ ಜೀವನವನ್ನು ಉತ್ತಮವಾಗಿ ನಡೆಸಲು ಸಹಾಯ ಮಾಡುವ ವ್ಯವಸಾಯ, ಕೈಗಾರಿಕೆ, ವ್ಯಾಪಾರಾದಿ ಶಿಕ್ಷಣಗಳ ಏರ್ಪಾಡುಗಳು ಇಲ್ಲದಿರುವುದೇ ಈಗಿನ ನಿರುದ್ಯೋಗದ ಸಮಸ್ಯೆಗೆ ಕಾರಣವಾಗಿದೆ. ಆದರೆ ಪೂರ್ವಕಾಲದ ಶಿಕ್ಷಣ ಕ್ರಮದಲ್ಲಿ ಈ ದುರವಸ್ಥೆಗೆ ಸ್ವಲ್ಪವೂ ಅವಕಾಶವಿರಲಿಲ್ಲ; ಏಕೆಂದರೆ ವಿದ್ಯಾರ್ಥಿಯು ತನ್ನ ಚಿಕ್ಕವಯಸ್ಸಿನಿಂದಲೂ ಮನೆಯಲ್ಲೂ ಗುರುಕುಲದಲ್ಲೂ ತಾನು ಹುಟ್ಟಿ ಬೆಳೆದಿರುವ ವಂಶದಲ್ಲಿ ಪೂರ್ವಕಾಲದಿಂದಲೂ ನಡೆದು ಬರುತ್ತಿರುವ ಕಸಬುಗಳನ್ನು ಮಾತಾಪಿತೃಗಳಿಂದಲೂ ಗುರುಗಳಿಂದಲೂ ಕಲಿಯುತ್ತಿದ್ದನು. ಪ್ರತಿಯೊಬ್ಬನೂ ಮುಂದೆ ತನ್ನ ಸಂಸಾರ ಜೀವನವನ್ನು

ಕಷ್ಟವಿಲ್ಲದೆ ತೃಪ್ತಿಯಿಂದ ನಡೆಸಲು ಅನುಕೂಲವಾದ ವೃತ್ತಿ ಶಿಕ್ಷಣವನ್ನು ಮೊದಲು ಪಡೆಯಲೇಬೇಕು ಎಂಬುದೇ ಭಾರತೀಯ ಗುರುಕುಲ ಶಿಕ್ಷಣದ ಮೊದಲನೆಯ ಧ್ಯೇಯ.

## ಪರಿಪೂರ್ಣ ಜ್ಞಾನ

ನಮ್ಮ ಪ್ರೌಢ ಪಾಠಶಾಲೆಗಳಲ್ಲಿ ಈಗ ವಿದ್ಯಾರ್ಥಿಯು ಕೆಲವು ಪಠ್ಯಪುಸ್ತಕಗಳನ್ನು ಮಾತ್ರ ವ್ಯಾಸಂಗ ಮಾಡಿ ವಿದ್ಯೆಯನ್ನು ಕಲಿಯುವನು. ಮಾತೃಭಾಷೆಯಾದ ಕನ್ನಡ ರಾಷ್ಟ್ರಭಾಷೆಯಾದ ಹಿಂದಿ ಮತ್ತು ಅಂತರರಾಷ್ಟ್ರೀಯ ಭಾಷೆಯಾದ ಇಂಗ್ಲೀಷು ಇವುಗಳನ್ನು ಕಲಿಯುವನು; ಸ್ವಲ್ಪ ಮಂದಿ ಮಾತ್ರ ದೇವಭಾಷೆಯಾದ ಸಂಸ್ಕೃತದ ಪರಿಚಯ ಮಾಡಿಕೊಳ್ಳುವರು. ಇದರ ಮೇಲೆ ತನ್ನ ಜ್ಞಾನವಿಕಾಸಕ್ಕಾಗಿ ಅಂಕಗಣಿತ, ಬೀಜಗಣಿತ, ರೇಖಾಗಣಿತ, ಚರಿತ್ರೆ, ಭೂಗೋಳಶಾಸ್ತ್ರ, ಪೌರನೀತಿ, ಭೌತವಿಜ್ಞಾನ, ರಸಾಯನವಿಜ್ಞಾನ, ಜೀವವಿಜ್ಞಾನ, ಸಸ್ಯವಿಜ್ಞಾನ, ಪ್ರಾಣಿವಿಜ್ಞಾನ ಇವುಗಳ ವಿಚಾರವಾಗಿ ಉಪಾಧ್ಯಾಯರ ಹತ್ತಿರ ಪಾಠ ಹೇಳಿಸಿಕೊಳ್ಳುವನು. ಪ್ರೌಢಶಾಲೆಯ ಕೊನೆಯ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದ ಮೇಲೆ ವಿದ್ಯಾರ್ಥಿಯು ಕಾಲೇಜಿಗೆ ಸೇರಿ ಮೇಲಿನ ಭಾಷೆಗಳಲ್ಲಿ ಇನ್ನೂ ವಿಶೇಷವಾದ ಪ್ರತಿಭೆಯನ್ನು ಪಡೆಯುವನು. ಅದರ ಮಿಕ್ಕ ಶಾಸ್ತ್ರಗಳಲ್ಲಿ ಕೆಲವನ್ನು ಮಾತ್ರ ಆರಿಸಿಕೊಂಡು ಅವುಗಳಲ್ಲಿ ಪ್ರೌಢ ವ್ಯಾಸಂಗ ಮಾಡಿ ಪಾಂಡಿತ್ಯವನ್ನು ಪಡೆಯುವನು. ಒಟ್ಟಿನಲ್ಲಿ ಈಗಿನ ವಿದ್ಯಾಭ್ಯಾಸ ಕ್ರಮದ ಪ್ರಕಾರ ಪ್ರತಿಯೊಬ್ಬ ವಿದ್ಯಾರ್ಥಿಯೂ ಭಾಷಾಜ್ಞಾನವನ್ನು ಪಡೆದು ಯಾವುದಾದರೂ ಒಂದೆರಡು ಶಾಸ್ತ್ರಗಳಲ್ಲಿ ಮಾತ್ರ ಪ್ರವೀಣನಾಗುವನು. ಅಂದರೇನು, ಜಗತ್ತಿನ ಕೆಲವು ಅಂಶಗಳಿಗೆ ಅಥವ ಭಾಗಗಳಿಗೆ ಸಂಬಂಧಪಟ್ಟ ಪರಿವರ್ತನೆಗಳನ್ನೂ, ಚಲನೆಗಳನ್ನೂ, ಕಾರ್ಯಕಾರಣ ರೂಪವಾದ ಕಟ್ಟಳೆಗಳನ್ನೂ ಮತ್ತು ಈ ಕಟ್ಟಳೆಗಳನ್ನು ಮಾನವನು ಉಪಯೋಗಿಸುವ ವಿಧಾನಗಳನ್ನೂ ಮಾತ್ರ ತಿಳಿಯುವನು. ಇದರಿಂದ ಇವನಿಗೆ ಜಗತ್ತಿನ ಅಲ್ಪಸ್ವಲ್ಪ ತಿಳುವಳಿಕೆಯುಂಟಾಗುತ್ತದೆ; ಅಷ್ಟೆ. ಅವನಲ್ಲಿ ಅಡಗಿರುವ ಎಲ್ಲಾ ಅನುದ್ಭೂತ ಶಕ್ತಿಗಳ ಆವಿರ್ಭಾವವುಂಟಾಗುವುದಿಲ್ಲ ಮತ್ತು ಆ ಕಾರಣದಿಂದ ಜಗತ್ತಿನ ಪರಿಪೂರ್ಣ ಜ್ಞಾನವುಂಟಾಗುವುದಿಲ್ಲ.

ಈಗಿನ ವಿದ್ಯಾರ್ಥಿಗಳು ಭೂಗೋಳಶಾಸ್ತ್ರ, ಚರಿತ್ರೆ ಮುಂತಾದ ಒಂದೆರಡು ವಿಷಯಗಳನ್ನು ತಿಳಿದುಕೊಂಡು ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದರೆ ತೃಪ್ತರಾಗುತ್ತಾರೆ. ಆದರೆ ಹಿಂದಿನ ಕಾಲದ ಗುರುಕುಲದ ಪ್ರೌಢದಶೆಯ ವಿದ್ಯಾರ್ಥಿಗಳು ಒಟ್ಟು ಜಗತ್ತಿನಲ್ಲಿರುವ ವ್ಯಕ್ತಿಗಳ ಮತ್ತು ಪದಾರ್ಥಗಳ ಸ್ವರೂಪರೂಪಗುಣವಿಭವಗಳನ್ನು ತಿಳಿಯಬೇಕೆಂದೂ ಮತ್ತು ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣನಾದ ಭಗವಂತನ ಅರಿವನ್ನು ಪಡೆಯಬೇಕೆಂದೂ ವಿಶೇಷವಾದ ಆಶೆಯನ್ನೂ ಉತ್ಸಾಹ

ವನ್ನು ಪಡೆದಿದ್ದರು. ಆದುದರಿಂದ ಪೂರ್ವಕಾಲದ ಗುರುಕುಲಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಪಂಚದ ಒಂದೆರಡು ಭಾಗ ಅಥವ ಅಂಶಗಳ ಜ್ಞಾನವನ್ನುಂಟುಮಾಡುವುದು ಮಾತ್ರ ಶಿಕ್ಷಣ ಧ್ಯೇಯವಾಗಿರಲಿಲ್ಲ; ಅವರಿಗೆ ಅವಶ್ಯವಿದ್ದಷ್ಟುಮಟ್ಟಿಗೆ ಜಗತ್ತಿನ ಪರಿಪೂರ್ಣ ಜ್ಞಾನವನ್ನು ವೃದ್ಧಿಪಡಿಸುತ್ತಿದ್ದರು. ಅಂದರೇನು, ಭಾಷಾಜ್ಞಾನ, ವೃತ್ತಿಶಿಕ್ಷಣ ಇವೆರಡನ್ನು ಬಿಟ್ಟರೆ ಗುರುಕುಲದ ಮಿಕ್ಕ ಶಿಕ್ಷಣ ಕ್ರಮಗಳೆಲ್ಲಾ ವಿದ್ಯಾರ್ಥಿಗೆ ಪರಿಪೂರ್ಣ ಜ್ಞಾನವನ್ನುಂಟುಮಾಡುತ್ತಿದ್ದವು; ಅವನಲ್ಲಿ ಹುದುಗಿರುವ ಅನುದ್ಭೂತ ಶಕ್ತಿಗಳನ್ನೆಲ್ಲಾ ವಿಕಾಸ ಮಾಡುತ್ತಿದ್ದವು. ತಾನು ವಾಸಮಾಡುವ ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಲಯಗಳಿಗೆ ಸಂಬಂಧಪಟ್ಟ ಪರಿಣಾಮಗಳ ಸ್ವರೂಪವೇನು, ಮನುಷ್ಯನ ಸ್ವರೂಪವೇನು, ಎಲ್ಲವನ್ನೂ ಸಾಕ್ಷಾತ್ಕರಿಸುತ್ತಿರುವ ತನ್ನ ಸ್ವರೂಪವೇನು, ಜಗತ್ತಿಗೂ ತನಗೂ ಕಾರಣನಾದ ಬ್ರಹ್ಮನ ಅಥವ ಸತ್ಯದ ಸ್ವರೂಪವೇನು, ತನಗೂ ಜಗತ್ತಿಗೂ ಬ್ರಹ್ಮನಿಗೂ ಇರುವ ಸಂಬಂಧವೇನು ಮತ್ತು ತಾನು ಪರಿಪೂರ್ಣ ವ್ಯಕ್ತಿಯಾಗಲು ಮಾರ್ಗವೇನು ಎಂಬಿವೇ ಮೊದಲಾದ ವಿಚಾರಗಳಲ್ಲಿ ವಿದ್ಯಾರ್ಥಿಯು ತನ್ನ ಮನಸ್ಸಿನ ಅಂತಸ್ತು ಅಥವ ಶಕ್ತಿಗೆ ಅನುಗುಣವಾಗಿ ವಿಶ್ವಸನೀಯವಾದ ತಿಳಿಯಾದ ಜ್ಞಾನವನ್ನು ಪಡೆಯಲು ಪ್ರಯತ್ನಿಸುತ್ತಿದ್ದನು.

## ಅನುಭವಜ್ಞಾನದ ಅವಶ್ಯಕತೆ

ಒಂದು ವಿಷಯದಲ್ಲಿ ಅನುಭವಜ್ಞಾನವಿಲ್ಲದ ಬರಿಯ ಬುದ್ಧಿಜ್ಞಾನ ಮಾತ್ರ ಸಂಪೂರ್ಣ ಜ್ಞಾನವಾಗುವುದಿಲ್ಲ ಮತ್ತು ಫಲಕಾರಿಯಾಗುವುದಿಲ್ಲ. ಸಿಂಹವಿದೆಯೆಂದು ಪಠ್ಯಪುಸ್ತಕದಲ್ಲಿ ಓದಬಹುದು ಅಥವ ಉಪಾಧ್ಯಾಯರು ಹೇಳಿದ್ದನ್ನು ಕೇಳಬಹುದು; ಅದರಿಂದ ಸಿಂಹದ ನಿಜವಾದ ಜ್ಞಾನವುಂಟಾಗುವುದಿಲ್ಲ. ಆದರೆ ಆ ಸಿಂಹವನ್ನು ಚಲನಚಿತ್ರದಲ್ಲಿ ನೋಡಿ ಅದರ ಧ್ವನಿಯನ್ನು ಕೇಳಿದರೆ ಸ್ವಲ್ಪ ಅನುಭವ ಜ್ಞಾನವುಂಟಾಗುತ್ತದೆ. ಆಮೇಲೆ ಅದನ್ನು ಮೃಗಶಾಲೆಯಲ್ಲೋ ಕಾಡಿನಲ್ಲೋ ನೋಡಿದರೆ ಆಗ ಅವನಿಗೆ ಸಿಂಹದ ಸಂಪೂರ್ಣ ಅನುಭವ ಜ್ಞಾನವುಂಟಾಗುವುದಿಲ್ಲವೆ? ಈಗಿನ ವಿದ್ಯಾರ್ಥಿಗಳು ಭೌತವಿಜ್ಞಾನ, ಜೀವವಿಜ್ಞಾನ, ರಾಜನೀತಿ, ಪ್ರಪಂಚದ ಚರಿತ್ರೆ ಮೊದಲಾದ ಶಾಸ್ತ್ರಗಳಲ್ಲಿರುವ ವಿಷಯಗಳನ್ನು ಪಠ್ಯಪುಸ್ತಕಗಳಲ್ಲಿ ಓದುತ್ತಾರೆ, ಅವುಗಳ ವಿಚಾರದಲ್ಲಿ ಉಪಾಧ್ಯಾಯರ ಹತ್ತಿರ ಉಪನ್ಯಾಸ ಕೇಳುತ್ತಾರೆ, ಆ ಅಭಿಪ್ರಾಯಗಳನ್ನು ಕಂಠಪಾಠ ಮಾಡುತ್ತಾರೆ ಮತ್ತು ಪರೀಕ್ಷೆಗಳಲ್ಲಿ ಕೆಲವು ವಿಷಯಗಳ ಮೇಲಿನ ಪ್ರಶ್ನೆಗಳಿಗೆ ಉತ್ತರ ಬರೆಯುತ್ತಾರೆ. ಈ ವಿಧವಾದ ಶಿಕ್ಷಣದಿಂದ ಮಾನವನ ಜ್ಞಾನಶಕ್ತಿರೂಪದ ಬುದ್ಧಿಜ್ಞಾನವು ಬೆಳೆಯುತ್ತದೆಯೇ ವಿನಾ ಅವನಿಗೆ ತಾನು ತಿಳಿಯಬೇಕಾದ ಪ್ರಪಂಚಭಾಗದ ಅನುಭವ ಜ್ಞಾನವುಂಟಾಗುವುದಿಲ್ಲ. ಆದರೆ ಹಿಂದಿನಕಾಲದ ಗುರುಕುಲದ ವಿದ್ಯಾರ್ಥಿಗಳು ಜಗತ್ತಿನ ಪದಾರ್ಥಗಳ, ಒಟ್ಟು ಜಗತ್ತಿನ ಮತ್ತು ಅದಕ್ಕೆ ಕಾರಣನಾದ ಭಗವಂತನ ಕೇವಲ

ಶಾಸ್ತ್ರಜ್ಞಾನ ಮಾತ್ರವಲ್ಲದೆ ಸಂಪೂರ್ಣವಾದ ಅನುಭವ ಜ್ಞಾನವನ್ನು ಪಡೆಯಬೇಕೆಂಬ ಹೆಚ್ಚಾದ ಅರಿವನ್ನು ತೋರಿಸಿ ಅದನ್ನು ಹೊಂದಲು ಶ್ರದ್ಧೆಯಿಂದ ಪ್ರಯತ್ನ ಪಡುತ್ತಿದ್ದರು. ಒಂದು ವಿಷಯದಲ್ಲಿ ಬುದ್ಧಿಜ್ಞಾನ ಮಾತ್ರ ಯಾವಾಗಲೂ ಸಂದೇಹದಿಂದ ಕೂಡಿದ್ದಾಗಿರುತ್ತದೆ; ಆದರೆ ಅದೇ ವಿಚಾರದಲ್ಲಿ ಬುದ್ಧಿಜ್ಞಾನದೊಡನೆ ಅನುಭವ ಜ್ಞಾನವೂ ಇದ್ದ ಪಕ್ಷದಲ್ಲಿ ಸಂದೇಹಕ್ಕೆ ಅವಕಾಶವೇ ಇರುವುದಿಲ್ಲ; ತಿಳಿಯಾದ ಜ್ಞಾನವು ಬೆಳೆಯುತ್ತದೆ.

## ಐದು ಅಂತಸ್ತಿನ ಗುರುಕುಲಗಳು

ಅರ್ಥ ಪುರುಷಾರ್ಥ, ಕಾಮಪುರುಷಾರ್ಥ, ಕಾಮ್ಯಕರ್ಮ ಪುರುಷಾರ್ಥ, ಸಮಾಜ ಕಲ್ಯಾಣ ಪುರುಷಾರ್ಥ, ಮೋಕ್ಷಪುರುಷಾರ್ಥ ಎಂದು ಮಾನವನ ಪುರುಷಾರ್ಥಗಳನ್ನು ಪುರಾತನ ಕಾಲದಿಂದ ಭಾರತೀಯರು ಐದು ವಿಧವಾಗಿ ವಿಂಗಡಿಸಿ ಅಂಗೀಕರಿಸಿರುವರೆಂದು ಜ್ಞಾನದೀಪಿಕೆಯ ಆರನೆಯ ಮಾಲೆಯಲ್ಲಿ ವಿವರಿಸಿದ್ದೇವೆ. ಬ್ರಿಟಿಷರ ಕಾಲದಲ್ಲಿದ್ದ ಮತ್ತು ಈಗಿರುವ ವಿದ್ಯಾಭ್ಯಾಸ ಕ್ರಮದಲ್ಲಿ ಬಹುಪಾಲಿಗೆ ಅರ್ಥ ಪುರುಷಾರ್ಥಕ್ಕೆ ಮಾತ್ರ ಬೆಲೆಯನ್ನು ಕೊಟ್ಟಿದೆ. ಸ್ವರಾಜ್ಯ ಸ್ಥಾಪನೆಯಾದ ಮೇಲೆ ಸರ್ಕಾರದವರು ಶಿಕ್ಷಣ ಸುಧಾರಣಾ ಕಾರ್ಯಗಳನ್ನು ಕೈಗೊಂಡು ಲಲಿತಕಲಾ ಶಿಕ್ಷಣ, ಭೂದಾನ, ಶ್ರಮದಾನ, ಸರ್ವೋದಯ ಚಳುವಳಿಗಳನ್ನು ಆರಂಭಿಸಿ ಕಾಮ ಪುರುಷಾರ್ಥಕ್ಕೂ ಸಮಾಜ ಕಲ್ಯಾಣ ಪುರುಷಾರ್ಥಕ್ಕೂ ಅವಕಾಶಗಳನ್ನು ಕಲ್ಪಿಸಲು ಪ್ರಯತ್ನಿಸುತ್ತಿರುವರು; ಆದರೆ ಕಾಮ್ಯಕರ್ಮ ಪುರುಷಾರ್ಥಕ್ಕೂ ಮತ್ತು ಮೋಕ್ಷ ಪುರುಷಾರ್ಥಕ್ಕೂ ಸ್ವಲ್ಪವೂ ಗಮನವನ್ನು ಕೊಡುತ್ತಿಲ್ಲ. ಪೂರ್ವಕಾಲದ ಗುರುಕುಲಗಳಲ್ಲಿಯಾದರೋ ಗುರುಗಳು ನಾಲ್ಕು ಅಥವ ಐದು ಪುರುಷಾರ್ಥಗಳ ಮೇಳನವೇ ವ್ಯಕ್ತಿಗೆ ಪರಿಪೂರ್ಣತೆಯನ್ನು ಉಂಟುಮಾಡುತ್ತದೆಯೆಂಬುದನ್ನು ತಿಳಿದು ಎಲ್ಲಾ ಪುರುಷಾರ್ಥಗಳಿಗೂ ಬೆಲೆಯನ್ನು ಕೊಟ್ಟು ಅವುಗಳನ್ನು ವಿದ್ಯಾರ್ಥಿಯು ಹೊಂದಲು ಅನುಕೂಲವಾಗುವ ಹಾಗೆ ಶಿಕ್ಷಣ ಕ್ರಮವನ್ನು ಏರ್ಪಡಿಸಿದ್ದರು. ಆದರೆ ಇಲ್ಲಿ ಒಂದು ವಿಚಾರವನ್ನು ತಿಳಿದುಕೊಳ್ಳಬೇಕು. ವಿದ್ಯಾರ್ಥಿಗಳ ವಂಶಪಾರಂಪರ್ಯವಾಗಿ ಬಂದಿರುವ ಧ್ಯೇಯಗಳ ಪ್ರಕಾರ ಅಂದರೆ ಅವರ ಮನಸ್ಸಿನ ಅಂತಸ್ತಿನ ಪ್ರಕಾರ ಬೇರೆ ಬೇರೆ ಅಂತಸ್ತಿನ ಗುರುಕುಲಗಳಿದ್ದುವು. ಅನೇಕ ಗುರುಕುಲಗಳಲ್ಲಿ ಅರ್ಥ ಪುರುಷಾರ್ಥಕ್ಕೆ ಪ್ರಾಧಾನ್ಯವನ್ನು ಕೊಟ್ಟು ಮಿಕ್ಕ ಪುರುಷಾರ್ಥಗಳನ್ನು ಅಂಗವಾಗಿ ಮೇಳನ ಮಾಡಿದ್ದರು; ಕೆಲವು ಗುರುಕುಲಗಳಲ್ಲಿ ಕಾಮಪುರುಷಾರ್ಥಕ್ಕೆ ಪ್ರಾಧಾನ್ಯವಿದ್ದು ಮಿಕ್ಕ ಪುರುಷಾರ್ಥಗಳು ಅದಕ್ಕೆ ಅಂಗವಾಗಿದ್ದುವು; ಇನ್ನು ಕೆಲವು ಗುರುಕುಲಗಳಲ್ಲಿ ಕಾಮ್ಯಕರ್ಮ ಪುರುಷಾರ್ಥಕ್ಕೆ, ಮತ್ತೆ ಕೆಲವುಗಳಲ್ಲಿ ಸಮಾಜ ಕಲ್ಯಾಣ ಪುರುಷಾರ್ಥಕ್ಕೆ ಮತ್ತು ಕೊನೆಯದಾಗಿ ಕೆಲವುಗಳಲ್ಲಿ ಮೋಕ್ಷ ಪುರುಷಾರ್ಥಕ್ಕೆ, ಹೆಚ್ಚಾದ ಬೆಲೆಯನ್ನು ಕೊಟ್ಟು ಮಿಕ್ಕ ಪುರುಷಾರ್ಥಗಳನ್ನು ಅವಕ್ಕೆ

ಅಂಗವಾಗಿ ಆಚರಿಸುತ್ತಿದ್ದರು. ಅಂತು ಎಲ್ಲಾ ಗುರುಕುಲಗಳಲ್ಲಿಯೂ ಎಲ್ಲಾ ಪುರುಷಾರ್ಥಗಳ ಬೋಧನವಿದ್ದಾಗ್ಯೂ ಒಂದೊಂದು ಪುರುಷಾರ್ಥಕ್ಕೆ ಒಂದೊಂದರಲ್ಲಿ ಪ್ರಾಧಾನ್ಯವನ್ನು ಕೊಟ್ಟಿದ್ದರಿಂದ ಆಗಿನ ಕಾಲದ ಗುರುಕುಲಗಳನ್ನು ಆರ್ಥಿಕ ಗುರುಕುಲಗಳೆಂದೂ, ಲಲಿತಕಲಾ ಗುರುಕುಲಗಳೆಂದೂ, ಕಾಮ್ಯಕರ್ಮ ಗುರುಕುಲಗಳೆಂದೂ, ಸಮಾಜಸೇವಕರ ಗುರುಕುಲಗಳೆಂದೂ ಮತ್ತು ಮೋಕ್ಷ ಅಥವ ವೇದಾಂತ ಗುರುಕುಲಗಳೆಂದೂ ವಿಂಗಡಿಸಬಹುದಾಗಿತ್ತು.

## ಒಂದು ಉಪನಿಷದ್ವಾಕ್ಯ

ಪೂರ್ವಕಾಲದ ವೇದಾಂತ ಗುರುಕುಲದಲ್ಲಿ ಗುರುವಿನ ಮತ್ತು ಶಿಷ್ಯನ ಲಕ್ಷಣಗಳನ್ನು ಈ ಉಪನಿಷದ್ವಾಕ್ಯವು ತಿಳಿಯಪಡಿಸುತ್ತದೆ. "ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ । ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ । ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್ ಪ್ರಶಾಂತ ಚಿತ್ತಾಯ ಶಮಾನ್ವಿತಾಯ ಯೇನಾಕ್ಷರಂ ಪುರುಷಂ ವೇದ ಸತ್ಯಂ ಪ್ರೋವಾಚ ತಾಂ ತತ್ತ್ವತೋ ಬ್ರಹ್ಮವಿದ್ಯಾಂ"– ಈ ವಾಕ್ಯಗಳ ಅಭಿಪ್ರಾಯವನ್ನು ಬಲ್ಲ ಆಚಾರ್ಯರು ಹೀಗೆ ವಿವರಿಸಿದ್ದಾರೆ:— ಬ್ರಾಹ್ಮಣಃ= ವೇದ ಶಾಸ್ತ್ರವನ್ನು ಕಲಿಯುವುದರಲ್ಲಿ ಪ್ರವೃತ್ತನಾಗಿರುವವನು; ಕರ್ಮಚಿತಾನ್= ಕರ್ಮಗಳನ್ನು ಮಾಡುವುದರಿಂದ ಉಂಟಾಗುವ ಫಲವು; ಲೋಕಾನ್ = ಲೋಕಗಳೂ ಮತ್ತು ಅವುಗಳಲ್ಲಿರುವ ದೇವತೆಗಳೂ ಇವೆಲ್ಲವನ್ನೂ ಪರೀಕ್ಷಿಸಿ ಈ ಕರ್ಮಗಳಿಂದ ಶಾಶ್ವತನಾದ ಪರಮಪುರುಷನನ್ನು ಹೊಂದುವುದಕ್ಕೆ ಆಗುವುದಿಲ್ಲವೆಂಬ ಸಂಕಲ್ಪವನ್ನು ಮಾಡುವನು. ಈ ಮನೋಭಾವವನ್ನು ಪಡೆದ ವಿದ್ಯಾರ್ಥಿಯು ಪ್ರಪಂಚದಲ್ಲಿರುವ ಪದಾರ್ಥಗಳನ್ನು ಶೇಖರಿಸಿಕೊಂಡು ತನ್ನ ಇಂದ್ರಿಯ ತೃಪ್ತಿಗಾಗಿಯೇ ಉಪಯೋಗಿಸಿಕೊಳ್ಳಬೇಕೆಂಬ ಮನೋಭಾವವನ್ನು ಬಿಟ್ಟು ಬ್ರಹ್ಮಜ್ಞಾನವನ್ನು ಪಡೆಯಬೇಕೆಂಬ ವಿಶೇಷವಾದ ಆಸಕ್ತಿಯನ್ನು ಪಡೆಯುವನು. ಬ್ರಹ್ಮನನ್ನು ತಿಳಿಯುವುದಕ್ಕಾಗಿ ಈ ವಿದ್ಯಾರ್ಥಿಯು ಕೈಯಲ್ಲಿ ಅಗ್ನಿಯನ್ನು ಹಿಡಿದುಕೊಂಡು, ಅಂದರೆ ಅಗ್ನಿ ಸಾಕ್ಷಿಯಾಗಿ ಶ್ರೋತ್ರಿಯನಾದ ಸದ್ಗುರುವಿನ ಹತ್ತಿರ ಹೋಗಿ ಅವನನ್ನು ಆಶ್ರಯಿಸಬೇಕು. ಯಾವನು ವೇದವನ್ನು ಮೊದಲಿನಿಂದ ಕೊನೆಯವರೆವಿಗೂ ತಿಳಿದಿರುವನೋ ಅವನೇ ಶ್ರೋತ್ರಿಯನು. ಯಾವನು ಪರಮಾತ್ಮನ ನಿಜವಾದ ಸ್ವರೂಪವನ್ನು ಅರಿತಿರುವನೋ ಅವನೇ ಬ್ರಹ್ಮನಿಷ್ಠನು. ಯಾವಾಗ ಶಿಷ್ಯನು ಶಾಂತ ಮನಸ್ಸಿನಿಂದ ಕೂಡಿದವನಾಗಿ ಮತ್ತು ಶಮದಮಾದಿಗಳನ್ನು ಪಡೆದವನಾಗಿ ಮರ್ಯಾದೆಯಿಂದ ಗುರುವನ್ನು ಸೇರಿ ಅವನೊಡನೆ ವಾಸ ಮಾಡುತ್ತಾನೆಯೋ ಆಗ ಆ ಗುರುವು ಅಂಥಾ ಶಿಷ್ಯನಿಗೆ ಯಾವ ವಿದ್ಯೆಯಿಂದ ನಾಶವಿಲ್ಲದ ಸತ್ಯನಾದ ಪುರುಷ

ನನ್ನು ಅವನು ತಿಳಿಯುತ್ತಾನೆಯೋ ಆ ಬ್ರಹ್ಮವಿದ್ಯೆಯನ್ನು ತಾತ್ವಿಕವಾಗಿ ಅಂದರೆ ಇದ್ದ ಹಾಗೆಯೇ ಹೇಳುವನು.

## ಗುರುಕುಲದ ಧ್ಯೇಯಗಳನ್ನು ಇಂದಿನ ಶಿಕ್ಷಣ ಕ್ರಮದಲ್ಲಿ ಹೇಗೆ ತರಬಹುದು ?

ಭಾರತ ದೇಶದ ಅನೇಕ ಲಕ್ಷ ವಿದ್ಯಾರ್ಥಿಗಳಿಗೆ ಅನ್ವಯಿಸುವ ಈಗಿನ ವಿದ್ಯಾಭ್ಯಾಸ ಕ್ರಮವು ಉತ್ತಮವಾಗಿ ನಿಜವಾಗಿ ಫಲಕಾರಿಯಾಗಬೇಕಾದರೆ ಕೆಳಗೆ ಸೂಚಿಸಿರುವ ಸಲಹೆಗಳನ್ನು ವಿದ್ಯಾರ್ಥಿಗಳೂ, ಶಾಲೆಯ ಅಧ್ಯಾಪಕರೂ, ಮುಖ್ಯೋಪಾಧ್ಯಾಯರೂ, ವಿದ್ಯಾ ಇಲಾಖೆಯ ಅಧಿಕಾರಿಗಳೂ, ತಂದೆತಾಯಿಗಳೂ, ಸರ್ಕಾರದವರೂ ಮತ್ತು ಪ್ರಜೆಗಳ ಮುಖಂಡರೂ ಕೈಗೊಳ್ಳಲು ಪ್ರಯತ್ನಿಸಬೇಕು. (೧) ಉಪಾಧ್ಯಾಯನು ಕೂಲಿಗಿಂತ ಮೇಲು ಎಂಬ ಭಾವನೆಯು ಸಮಾಜದವರಲ್ಲೆಲ್ಲಾ ಬೆಳೆದು ತಂದೆ ತಾಯಿಗಳೂ ಮತ್ತು ಸರ್ಕಾರದ ಅಧಿಕಾರಿಗಳೂ ಮುಖ್ಯೋಪಾಧ್ಯಾಯರಿಗೂ ಸಹಾಯಕ ಉಪಾಧ್ಯಾಯರಿಗೂ ಹೆಚ್ಚಾದ ಗೌರವವನ್ನು ಕೊಡಲೇಬೇಕು. (೨) ಮುಖ್ಯೋಪಾಧ್ಯಾಯನು ಅಂದರೆ ಶಾಲೆಯ ಪ್ರಧಾನ ಗುರುವು "ವರ್ಕ್‌ಷಾಪ್ ಮೆಥಡ್" (Workshop Method) ಎಂಬ ಶಿಕ್ಷಣ ಕಾರ್ಯಕ್ರಮದ ಪ್ರಕಾರ ಸಹಾಯಕ ಉಪಾಧ್ಯಾಯರ ಸಹಾನುಭೂತಿಯನ್ನು ಪಡೆದು ವಿದ್ಯಾರ್ಥಿಗಳಿಗೆ ಉತ್ತಮವಾದ ವಿದ್ಯೆಯನ್ನು ಕಲಿಸುವ ಸ್ವಾತಂತ್ರ್ಯವನ್ನು ಕೈಗೊಂಡು, ಆ ಜವಾಬ್ದಾರಿಯನ್ನು ಹೊರಬೇಕು. (೩) ಪಾಠಶಾಲೆಗಳ ಉಪಾಧ್ಯಾಯರುಗಳನ್ನು ಅವರವರ ಪಾಠಶಾಲೆಗಳಿಂದ ಅನೇಕ ವರ್ಷಗಳ ಕಾಲ ವರ್ಗ ಮಾಡಕೂಡದು; ಮುಖ್ಯೋಪಾಧ್ಯಾಯರನ್ನು ಆದಷ್ಟು ಮಟ್ಟಿಗೆ ವರ್ಗ ಮಾಡಲೇಕೂಡದು. (೪) ಪಾಠಶಾಲೆಗಳಲ್ಲಿ ಕಾರ್ಯಕ್ರಮವು ಬೆಳಿಗ್ಗೆ ಎಂಟುಘಂಟೆಗೆ ಆರಂಭವಾಗಿ ಸಾಯಂಕಾಲ ಆರು ಘಂಟೆಗೆ ಮುಗಿಯಬೇಕು; ಮಧ್ಯ ಎರಡು ಘಂಟೆ ವಿಶ್ರಾಂತಿ ಇರಬೇಕು. ಅನುಕೂಲವಿಲ್ಲದ ಬಡವರಾದ ದೂರದಿಂದ ಬರುವ ವಿದ್ಯಾರ್ಥಿಗಳಿಗೆ ಊಟ ವಸತಿಗಳ ಏರ್ಪಾಡನ್ನು ಮಾಡಿ ಅವರು ಸದಾಕಾಲದಲ್ಲಿಯೂ ಶಾಲೆಯ ಕಟ್ಟಡವನ್ನು ಉಪಯೋಗಿಸುವ ಅವಕಾಶಗಳನ್ನು ಕಲ್ಪಿಸಬೇಕು. ಉಪಾಧ್ಯಾಯರುಗಳೂ ಕೂಡ ಶಾಲೆಯ ಹತ್ತಿರವೇ ವಾಸಮಾಡುವ ಏರ್ಪಾಡಾಗಬೇಕು. ಈ ಏರ್ಪಾಡುಗಳಿಂದ ಪೂರ್ವಕಾಲದ ಗುರುಕುಲಗಳ ಹಾಗೆ ವಿದ್ಯಾರ್ಥಿಗಳು ಉಪಾಧ್ಯಾಯರುಗಳ ಸಹವಾಸವನ್ನೂ ಸಹಾಯವನ್ನೂ ಹೆಚ್ಚಾಗಿ ಪಡೆಯುವರು; ಆಗ ಅವರಲ್ಲಿ ನಿಜವಾದ ಶಿಸ್ತು ಬೆಳೆಯುತ್ತದೆ. ಈ ಕಾರ್ಯವು ಜಯವಾಗುವುದಕ್ಕೆ ಹೆಚ್ಚು ಉಪಾಧ್ಯಾಯರನ್ನು ನೇಮಿಸಬೇಕಾಗುತ್ತದೆ. (೫) ವಿದ್ಯಾರ್ಥಿಗಳು ತಮ್ಮ ಶಾಲೆಗಳನ್ನು ಪ್ರೀತಿಸುವುದಕ್ಕಿಂತ ತಮ್ಮ ಉಪಾಧ್ಯಾಯರನ್ನು ಹೆಚ್ಚಾಗಿ ಪ್ರೀತಿಸಬೇಕು. ವೇಳಾಪಟ್ಟಿಯಲ್ಲಿ ಪಾಠಗಳಿಗೂ ಪಾಠೇತರ ಚಟುವಟಿಕೆಗಳಿಗೂ ಒಂದೇ ಬೆಲೆಯನ್ನು ಕೊಟ್ಟರೆ ಮತ್ತು

ವಿದ್ಯಾರ್ಥಿಗಳನ್ನು ಮೇಲಿನ ತರಗತಿಗಳಿಗೆ ಕಳುಹಿಸುವ ಸಂಪೂರ್ಣ ಅಧಿಕಾರವನ್ನು ಶಾಲೆಯ ಉಪಾಧ್ಯಾಯರ ಮಂತ್ರಾಲೋಚನಾ ಸಮಿತಿಗೆ ವಹಿಸಿದರೆ ಆಗ ವಿದ್ಯಾರ್ಥಿಗಳಿಗೆ ನಿಜವಾಗಿ ತಮ್ಮ ಗುರುಗಳಲ್ಲಿ ಭಕ್ತಿಯು ಬೆಳೆಯುತ್ತದೆ. (೬) ಪ್ರತಿ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಿಗೂ ಇಲಾಖೆಯ ಅಧಿಕಾರಿಗಳಿಗೂ, ಉಪಾಧ್ಯಾಯರಿಗೂ ಮುಖ್ಯೋಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಲ್ಲಿ ಒಬ್ಬೊಬ್ಬರಿಗೂ ನಿಕಟ ಸಂಬಂಧ, ಸೌಹಾರ್ದತೆ, ಆನುಕೂಲ್ಯ, ಪ್ರೀತಿ, ಐಕ್ಯಮತ್ಯ ಮತ್ತು ಪೂಜ್ಯಭಾವ ಇವುಗಳು ಬೆಳೆಯುವುದಕ್ಕೆ ಅನುಕೂಲವಾದ ಕಾರ್ಯಕ್ರಮಗಳು ಆಗಿಂದಾಗ್ಗೆ ನಿರ್ಮಾಣವಾಗಬೇಕು. (೭) ವಿದ್ಯಾರ್ಥಿಗೆ ಭಾಷೆಗಳ ಶಿಕ್ಷಣವು ಎಷ್ಟು ಅಗತ್ಯವೋ ವೃತ್ತಿ ಶಿಕ್ಷಣವೂ ಅಷ್ಟೇ ಅಗತ್ಯವೆಂದು ತಿಳಿದು ಅದನ್ನು ಅವನು ಕಡ್ಡಾಯವಾಗಿ ಪಡೆಯುವ ಅವಕಾಶಗಳನ್ನು ಕಲ್ಪಿಸಬೇಕು. (೮) ಉಪಾಧ್ಯಾಯರು ಶಾಲೆಯಲ್ಲೂ ನಿತ್ಯಜೀವನದಲ್ಲೂ ವಿದ್ಯಾರ್ಥಿಗಳ ಹಿತಾರ್ಥವಾಗಿ ಅವರ ಶಾರೀರಿಕ, ಮಾನಸಿಕ, ಸಾಮಾಜಿಕ, ಬೌದ್ಧಿಕ, ಲಲಿತಕಲೆಗಳಿಗೆ ಸಂಬಂಧಪಟ್ಟ, ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣಗಳಲ್ಲಿ ಮುಂದಾಳುಗಳಾಗಬೇಕು. (೯) ಭಾಷಾ ಮತ್ತು ವೃತ್ತಿ ಶಿಕ್ಷಣಗಳಲ್ಲದೆ ವಿಶ್ವ ಪ್ರಪಂಚ ಜ್ಞಾನವನ್ನುಂಟು ಮಾಡುವ ಶಿಕ್ಷಣ ಕ್ರಮವು ಚತುರ್ವಿಧ ಪುರುಷಾರ್ಥಗಳನ್ನು ಮೇಳನ ಮಾಡಿ ಸಾಧಿಸಿಕೊಡುವ ವಿಷಯಗಳನ್ನು ಒಳಗೊಂಡಿದ್ದು ವಿದ್ಯಾರ್ಥಿಗೆ ಜಗತ್ತಿನ, ಪ್ರಕೃತಿಯ ಮತ್ತು ಭಗವಂತನ ಪರಿಪೂರ್ಣಜ್ಞಾನವನ್ನು ಅವಶ್ಯ ಉಂಟುಮಾಡಬೇಕು. (೧೦) ವಿದ್ಯಾಭ್ಯಾಸ ಕ್ರಮವು ವಿದ್ಯಾರ್ಥಿಯ ಶರೀರದ ಶಕ್ತಿಗೂ ಮತ್ತು ಮನಸ್ಸಿನ ಅಂತಸ್ಸಿಗೂ ಅನುಗುಣವಾಗಿರಬೇಕೇ ವಿನಹ ಎಲ್ಲರಿಗೂ ಒಂದೇ ವಿಧವಾದ ಶಿಕ್ಷಣವನ್ನು ಬಲಾತ್ಕರಿಸುವುದು ಫಲಕಾರಿಯಾಗುವುದಿಲ್ಲ. ಆದುದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯ ಮಾನಸಿಕ ಯೋಗ್ಯತೆಯನ್ನು ಪರೀಕ್ಷಿಸಿ ಅವನಿಗೆ ಅನುಕೂಲವಾಗುವ ಹಾಗೆ ಶಿಕ್ಷಣವನ್ನು ಕೊಡಬೇಕು. (೧೧) ವಿದ್ಯಾರ್ಥಿಗಳ ಜ್ಞಾನವಿಕಾಸವು ಕೇವಲ ಬುದ್ಧಿಜ್ಞಾನ ಮಾತ್ರವಾಗಿರದೆ ತೆಳುವಾದ ಅನುಭವಜ್ಞಾನದಿಂದ ಕೂಡಿದ್ದಾಗಿರಬೇಕಾದುದರಿಂದ ಮಹಾತ್ಮಾ ಗಾಂಧೀಜೀಯವರು ಉಪದೇಶಿಸಿರುವ "ಮೂಲ ಶಿಕ್ಷಣ ಪದ್ಧತಿ" (Basic Education) ಯ ಧ್ಯೇಯಗಳನ್ನೆಲ್ಲಾ ಶಾಲೆಗಳ ಕಾರ್ಯಕ್ರಮಗಳಲ್ಲಿ ಆಚರಣೆಗೆ ತರಬೇಕು. ಮತ್ತು (೧೨) ಕೊನೆಯದಾಗಿ ಈಗಿನ ಹೊಸ ಚಳುವಳಿಯ ಪ್ರಕಾರ ಪ್ರತಿಯೊಂದು ಶಾಲೆಗೂ ಏಕಾಂತವಾದ ಮತ್ತು ಸುಂದರವಾದ ಪ್ರದೇಶದಲ್ಲಿ ಜಮೀನುಗಳನ್ನು ಕೊಟ್ಟರೆ ಅಲ್ಲಿ ಶಾಲೆಯ-ಶ್ರೀ ನವಭಾರತ ಆಶ್ರಮವನ್ನು ಸ್ಥಾಪಿಸಬಹುದು. ಈ ಆಶ್ರಮದಲ್ಲಿ ವಿದ್ಯಾರ್ಥಿಗಳು ಆಡಿಗಡಿಗೆ ಸೇರಿ ಶ್ರಮದಾನ, ಸಮಾಜಸೇವೆ, ಭಗವಂತನ ಕೀರ್ತನ ಭಜನ ಸ್ತೋತ್ರಗಾನದ ಧ್ಯಾನಾದಿಗಳು, ಪ್ರಸ್ಥಾನತ್ರಯಿಯ ಮಹಾತ್ಮರ ಮತ್ತು ಪ್ರಪಂಚದ ಇತರ ಶ್ರೇಷ್ಠ ಮತಗಳ ಸಂದೇಶಗಳನ್ನು ತಿಳಿಯುವುದು ಇವೇ ಮೊದಲಾದ ಆಧ್ಯಾತ್ಮಿಕ ಮತ್ತು ನೈತಿಕ ಅಭ್ಯಾಸಗಳನ್ನು ಮಾಡಬೇಕು. ಒಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಬ್ರಹ್ಮಚರ್ಯ ಅಭ್ಯಾಸಗಳನ್ನು ಬಳಕೆಗೆ ತಂದು ಅವರಲ್ಲಿ ಪರಾರ್ಥಭಾವನೆಗಳನ್ನು ವೃದ್ಧಿಪಡಿಸಬೇಕು.

## ಶ್ರೀ ನವಭಾರತ ಆಶ್ರಮ
### ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ
## (ಮಾಲೆ ಏಳು)

## ಪ್ರಾಚೀನಗುರುಕುಲ ಧ್ಯೇಯಗಳು; ಅವನ್ನು ಇಂದಿನ ಶಿಕ್ಷಣಕ್ರಮದಲ್ಲಿ ಹೇಗೆ ತರುವುದು?

### ಗುರುಸೇವೆ ಮುಖ್ಯ

ಪುರಾತನ ಕಾಲದಲ್ಲಿ ಭಾರತದ ವಿದ್ಯಾಭ್ಯಾಸಕ್ರಮವು ಹೇಗಿತ್ತು? ಗುರುಗಳು ರಾಜರುಗಳ ಸಹಾಯದಿಂದ ಗುರುಕುಲಗಳನ್ನು ತಾವು ವಾಸಮಾಡುವ ಆಶ್ರಮಗಳಲ್ಲಿಯೇ ಆರಂಭಿಸುತ್ತಿದ್ದರು. ಆಗ ವಿದ್ಯಾರ್ಥಿಯು ಬಹುಮಟ್ಟಿಗೆ ಒಬ್ಬ ಪ್ರಧಾನ ಗುರುವಿನ ಆಶ್ರಯದಲ್ಲಿಯೇ ತನ್ನ ಸಂಪೂರ್ಣ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದನು. ಅವನಿಗೆ ಮೊದಲು ಉಪನಯನವಾಗಬೇಕು; ಅಂದರೆ ಅವನು ಗುರುವಿನ ಹತ್ತಿರ ಸೇರುವ ಯೋಗ್ಯತೆಯನ್ನು ಪಡೆಯಬೇಕು. ವಿದ್ಯಾರ್ಥಿಗಳು ಗುರುವಿನೊಡನೆಯೇ ಸದಾಕಾಲದಲ್ಲಿಯೂ ಇರಬೇಕಾದುದರಿಂದ ಅವನು ವಾಸ ಮಾಡುವ ಸ್ಥಳದಲ್ಲೇ ಇರಬೇಕಾಗಿತ್ತು; ಆದುದರಿಂದಲೇ ಈ ವಿಧವಾದ ಸಂಸ್ಥೆಗೆ ಗುರುಕುಲವೆಂದು ಹೆಸರಿತ್ತು. ಗುರುಕುಲಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಅಧಿಕವಾಗಿದ್ದರೆ ಪ್ರಧಾನ ಗುರುವು ಹಿಂದೆ ತನ್ನಲ್ಲಿ ವಿದ್ಯೆಯನ್ನು ಕಲಿತು ತನ್ನಲ್ಲಿ ಹೆಚ್ಚಾದ ಪ್ರೀತಿಯನ್ನೂ ಗೌರವವನ್ನೂ ತೋರಿಸುತ್ತಿದ್ದ ಶಿಷ್ಯರುಗಳನ್ನೇ ಸಹಾಯಕ ಗುರುಗಳಾಗಿ ನಿಯಮಿಸುತ್ತಿದ್ದನು. ಆದುದರಿಂದ ಸಹಾಯಕ ಗುರುಗಳು ಪ್ರಧಾನ ಗುರುವಿನಲ್ಲಿ ಭಕ್ತಿಯನ್ನಿಟ್ಟು ಅವನು ನಿಯಮಿಸಿದ ಕಾರ್ಯಗಳನ್ನು ಭಗವಂತನ ಸೇವೆ ಎಂದು ಭಾವಿಸಿ ಆಸಕ್ತಿಯಿಂದ ನಡೆಸುತ್ತಿದ್ದರು. ಮುಖ್ಯವಾಗಿ ಗುರುಗಳೂ ವಿದ್ಯಾರ್ಥಿಗಳೂ ಒಟ್ಟಾಗಿ ವಾಸಮಾಡುತ್ತಿದ್ದುದರಿಂದ ವಿದ್ಯಾರ್ಥಿಗಳಿಗೆ ಎಲ್ಲಾ ಗುರುಗಳಲ್ಲಿ, ಮುಖ್ಯವಾಗಿ ಪ್ರಧಾನ ಗುರುವಿನಲ್ಲಿ ಶ್ರದ್ಧೆ ವಿನಯ ಭಕ್ತಿಗಳಿದ್ದವು ಮತ್ತು ಅವರು ಪ್ರತಿ ದಿನವೂ ಇಪ್ಪತ್ತನಾಲ್ಕು ಘಂಟೆಗಳ ಕಾಲವೂ ಎಲ್ಲಾ ವಿಧಗಳಲ್ಲಿಯೂ ಉತ್ತಮ ಶಿಕ್ಷಣವನ್ನು ಪಡೆಯುತ್ತಿದ್ದರು. ಒಟ್ಟಿನಲ್ಲಿ ಆ ಕಾಲದಲ್ಲಿ ವಿದ್ಯಾರ್ಥಿಗಳಿಗೂ ತಂದೆತಾಯಿಗಳಿಗೂ ಪಾಲಕಗಳ ಮೇಲಿನ ಪ್ರೀತಿಗಿಂತ ಗುರುಗಳ ಮೇಲೆ ಅಧಿಕವಾದ ಭಕ್ತಿ ಮತ್ತು ಮರ್ಯಾದೆ ಇತ್ತು. ಪ್ರಧಾನ ಗುರುವೇ ಅಥವ ಆಚಾರ್ಯನೇ ಶಿಷ್ಯರುಗಳಿಗೆ ಉತ್ತಮವಾದ ಮತ್ತು

ಸಂಪೂರ್ಣವಾದ ವಿದ್ಯೆಯನ್ನು ಕಲಿಸುವ ಹೊಣೆಯನ್ನು ಹೊತ್ತಿದ್ದನು; ಶಿಷ್ಯರೂ ಕೂಡ ತಮ್ಮ ಗುರುಗಳಿಂದ ಉತ್ತಮ ಶಿಕ್ಷಣವನ್ನು ಪಡೆದು ಪರಿಪೂರ್ಣಾವಸ್ಥೆಯನ್ನು ಮುಟ್ಟಬೇಕೆಂಬ ಆತುರವನ್ನು ಪಡೆದಿದ್ದರು. ಆದುದರಿಂದ ಅವರು ಬೆಳಗಿನಜಾವವೇ ಎದ್ದು ರಾತ್ರಿ ಮಲಗುವವರೆಗೂ ಗುರುಗಳ ಸಹವಾಸವನ್ನು ಪಡೆದು ಗುರುಗಳ ಉಪದೇಶದ ಪ್ರಕಾರ ಬ್ರಹ್ಮಚರ್ಯ ವ್ರತವನ್ನು ಕೈಗೊಂಡು ಕಾಮ ಕ್ರೋಧ ಲೋಭ ಮೋಹ ಮದಮಾತ್ಸರ್ಯವೆಂಬ ಅರಿಷಡ್ವರ್ಗಗಳನ್ನು ಜಯಿಸಲು ಪ್ರಯತ್ನಿಸುತ್ತಾ ತಮ್ಮ ಗುರುಗಳಲ್ಲಿರುವ ಉತ್ತಮವಾದ ಸತ್ಯಗುಣಗಳನ್ನು ದಿನಚರಿಯಲ್ಲಿ ಅಭ್ಯಾಸ ಮಾಡುತ್ತಿದ್ದರು. ಪೂರ್ವಕಾಲದ ಗುರುಕುಲದಲ್ಲಿ ಪ್ರಧಾನ ಗುರುವಿಗೂ ಸಹಾಯಕ ಗುರುಗಳಿಗೂ ವಿದ್ಯಾರ್ಥಿಗಳಿಗೂ ಶಿಕ್ಷಣ ಕ್ರಮದಲ್ಲಿ ಒಂದೇ ಧ್ಯೇಯವಿದ್ದುದಲ್ಲದೆ, ಅವರಲ್ಲಿ ಒಬ್ಬೊಬ್ಬರಿಗೆ ನಿಕಟ ಸಂಬಂಧವೂ ಅನುಕೂಲ ಭಾವನೆಗಳೂ ಪ್ರೀತಿಯೂ ಐಕಮತ್ಯವೂ ಪೂಜ್ಯ ಮನೋಭಾವನೆಯೂ ಇದ್ದವು.

## ವೃತ್ತಿ ಶಿಕ್ಷಣ

ಬ್ರಿಟಿಷರಿಂದ ಸ್ಥಾಪಿಸಲ್ಪಟ್ಟಿರುವ ಶಿಕ್ಷಣ ಕ್ರಮದಿಂದ ಕಳೆದ ನೂರು ವರುಷಗಳಿಂದಲೂ ವಿದ್ಯಾರ್ಥಿಗಳು ಪ್ರಾಥಮಿಕ, ಮಾಧ್ಯಮಿಕ, ಪ್ರೌಢ, ಕಾಲೇಜು ವಿದ್ಯಾಸಂಸ್ಥೆಗಳಲ್ಲಿ ಹೆಚ್ಚಾಗಿ ಬೌದ್ಧಿಕ ಶಿಕ್ಷಣವನ್ನು ಪಡೆದು, ಆಯಾ ಅಂತಸ್ತಿನ ಪರೀಕ್ಷೆಗಳಲ್ಲಿ ತೇರ್ಗಡೆಯನ್ನು ಹೊಂದಿ ದೊಡ್ಡವರಾದ ಮೇಲೆ ತಮ್ಮ ತಮ್ಮ ಬುದ್ಧಿಶಕ್ತಿಯ ಯೋಗ್ಯತೆಗೆ ಅನುಗುಣವಾಗಿ ಸರ್ಕಾರದಲ್ಲೂ ಮತ್ತು ಖಾಸಗಿ ಸಂಸ್ಥೆಗಳಲ್ಲೂ ನೌಕರಿಯನ್ನು ಪಡೆಯುತ್ತಿರುವರು ಅಥವ ವಕೀಲಿ, ಡಾಕ್ಟರ್, ಇಂಜನೀಯರ್ ಮೊದಲಾದ ಉದ್ಯೋಗಗಳಲ್ಲಿ ಹಣ ಸಂಪಾದಿಸುತ್ತಿರುವರು. ಆದರೆ ಬಹು ಮಂದಿ ಪ್ರೌಢಶಾಲೆಗಳಲ್ಲಿ ಶಿಕ್ಷಣವನ್ನು ಮುಗಿಸಿದವರು ಮತ್ತು ಅನೇಕ ಪದವೀಧರರು ತಮ್ಮ ಜೀವನವನ್ನು ಸುಖವಾಗಿ ನಡೆಸುವುದಕ್ಕೆ ಅನುಕೂಲವಾದ ಉದ್ಯೋಗಗಳನ್ನು ಪಡೆಯಲಾರದೆ ಪೇಚಾಡುತ್ತಿರುವರು. ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ವಿದ್ಯಾರ್ಥಿಯು ಮುಂದೆ ಸ್ವಾವಲಂಬನದಿಂದ ತನ್ನ ಕುಟುಂಬದವರ ಜೀವನವನ್ನು ಉತ್ತಮವಾಗಿ ನಡೆಸಲು ಸಹಾಯ ಮಾಡುವ ವ್ಯವಸಾಯ, ಕೈಗಾರಿಕೆ, ವ್ಯಾಪಾರಾದಿ ಶಿಕ್ಷಣಗಳ ಏರ್ಪಾಡುಗಳು ಇಲ್ಲದಿರುವುದೇ ಈಗಿನ ನಿರುದ್ಯೋಗದ ಸಮಸ್ಯೆಗೆ ಕಾರಣವಾಗಿದೆ. ಆದರೆ ಪೂರ್ವಕಾಲದ ಶಿಕ್ಷಣ ಕ್ರಮದಲ್ಲಿ ಈ ದುರವಸ್ಥೆಗೆ ಸ್ವಲ್ಪವೂ ಅವಕಾಶವಿರಲಿಲ್ಲ; ಏಕೆಂದರೆ ವಿದ್ಯಾರ್ಥಿಯು ತನ್ನ ಚಿಕ್ಕವಯಸ್ಸಿನಿಂದಲೂ ಮನೆಯಲ್ಲೂ ಗುರುಕುಲದಲ್ಲೂ ತಾನು ಹುಟ್ಟಿ ಬೆಳೆದಿರುವ ವಂಶದಲ್ಲಿ ಪೂರ್ವಕಾಲದಿಂದಲೂ ನಡೆದು ಬರುತ್ತಿರುವ ಕಸಬುಗಳನ್ನು ಮಾತಾಪಿತೃಗಳಿಂದಲೂ ಗುರುಗಳಿಂದಲೂ ಕಲಿಯುತ್ತಿದ್ದನು. ಪ್ರತಿಯೊಬ್ಬನೂ ಮುಂದೆ ತನ್ನ ಸಂಸಾರ ಜೀವನವನ್ನು

ಕಷ್ಟವಿಲ್ಲದೆ ತೃಪ್ತಿಯಿಂದ ನಡೆಸಲು ಅನುಕೂಲವಾದ ವೃತ್ತಿ ಶಿಕ್ಷಣವನ್ನು ಮೊದಲು ಪಡೆಯಲೇಬೇಕು ಎಂಬುದೇ ಭಾರತೀಯ ಗುರುಕುಲ ಶಿಕ್ಷಣದ ಮೊದಲನೆಯ ಧ್ಯೇಯ.

## ಪರಿಪೂರ್ಣ ಜ್ಞಾನ

ನಮ್ಮ ಪ್ರೌಢ ಪಾಠಶಾಲೆಗಳಲ್ಲಿ ಈಗ ವಿದ್ಯಾರ್ಥಿಯು ಕೆಲವು ಪಠ್ಯಪುಸ್ತಕಗಳನ್ನು ಮಾತ್ರ ವ್ಯಾಸಂಗ ಮಾಡಿ ವಿದ್ಯೆಯನ್ನು ಕಲಿಯುವನು. ಮಾತೃಭಾಷೆಯಾದ ಕನ್ನಡ ರಾಷ್ಟ್ರಭಾಷೆಯಾದ ಹಿಂದಿ ಮತ್ತು ಅಂತರರಾಷ್ಟ್ರೀಯ ಭಾಷೆಯಾದ ಇಂಗ್ಲೀಷು ಇವುಗಳನ್ನು ಕಲಿಯುವನು; ಸ್ವಲ್ಪ ಸಂಧಿ ಮಾತ್ರ ದೇವಭಾಷೆಯಾದ ಸಂಸ್ಕೃತದ ಪರಿಚಯ ಮಾಡಿಕೊಳ್ಳುವನು. ಇದರ ಮೇಲೆ ತನ್ನ ಜ್ಞಾನವಿಕಾಸಕ್ಕಾಗಿ ಅಂಕಗಣಿತ, ಬೀಜಗಣಿತ, ರೇಖಾಗಣಿತ, ಚರಿತ್ರೆ, ಭೂಗೋಳಶಾಸ್ತ್ರ, ಪೌರನೀತಿ, ಭೌತವಿಜ್ಞಾನ, ರಸಾಯನವಿಜ್ಞಾನ, ಜೀವವಿಜ್ಞಾನ, ಸಸ್ಯವಿಜ್ಞಾನ, ಪ್ರಾಣಿವಿಜ್ಞಾನ ಇವುಗಳ ವಿಚಾರವಾಗಿ ಉಪಾಧ್ಯಾಯರ ಹತ್ತಿರ ಪಾಠ ಹೇಳಿಸಿಕೊಳ್ಳುವನು. ಪ್ರೌಢಶಾಲೆಯ ಕೊನೆಯ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದ ಮೇಲೆ ವಿದ್ಯಾರ್ಥಿಯು ಕಾಲೇಜಿಗೆ ಸೇರಿ ಮೇಲಿನ ಭಾಷೆಗಳಲ್ಲಿ ಇನ್ನೂ ವಿಶೇಷವಾದ ಪ್ರತಿಭೆಯನ್ನು ಪಡೆಯುವನು. ಆದರೆ ಮಿಕ್ಕ ಶಾಸ್ತ್ರಗಳಲ್ಲಿ ಕೆಲವನ್ನು ಮಾತ್ರ ಆರಿಸಿಕೊಂಡು ಅವುಗಳಲ್ಲಿ ಪ್ರೌಢ ವ್ಯಾಸಂಗ ಮಾಡಿ ಪಾಂಡಿತ್ಯವನ್ನು ಪಡೆಯುವನು. ಒಟ್ಟಿನಲ್ಲಿ, ಈಗಿನ ವಿದ್ಯಾಭ್ಯಾಸ ಕ್ರಮದ ಪ್ರಕಾರ ಪ್ರತಿಯೊಬ್ಬ ವಿದ್ಯಾರ್ಥಿಯೂ ಭಾಷಾಜ್ಞಾನವನ್ನು ಪಡೆದು ಯಾವುದಾದರೂ ಒಂದೆರಡು ಶಾಸ್ತ್ರಗಳಲ್ಲಿ ಮಾತ್ರ ಪ್ರವೀಣನಾಗುವನು. ಅಂದರೇನು, ಜಗತ್ತಿನ ಕೆಲವು ಅಂಶಗಳಿಗೆ ಅಥವ ಭಾಗಗಳಿಗೆ ಸಂಬಂಧಪಟ್ಟ ಪರಿವರ್ತನೆಗಳನ್ನೂ, ಚಲನೆಗಳನ್ನೂ, ಕಾರ್ಯಕಾರಣ ರೂಪವಾದ ಕಟ್ಟಳೆಗಳನ್ನೂ ಮತ್ತು ಈ ಕಟ್ಟಳೆಗಳನ್ನು ಮಾನವನು ಉಪಯೋಗಿಸುವ ವಿಧಾನಗಳನ್ನೂ ಮಾತ್ರ ತಿಳಿಯುವನು. ಇದರಿಂದ ಅವನಿಗೆ ಜಗತ್ತಿನ ಅಲ್ಪಸ್ವಲ್ಪ ತಿಳುವಳಿಕೆಯುಂಟಾಗುತ್ತದೆ; ಅಷ್ಟೆ. ಅವನಲ್ಲಿ ಅಡಗಿರುವ ಎಲ್ಲಾ ಅನುದ್ಭೂತ ಶಕ್ತಿಗಳ ಆವಿರ್ಭಾವವುಂಟಾಗುವುದಿಲ್ಲ ಮತ್ತು ಆ ಕಾರಣದಿಂದ ಜಗತ್ತಿನ ಪರಿಪೂರ್ಣ ಜ್ಞಾನವುಂಟಾಗುವುದಿಲ್ಲ.

ಈಗಿನ ವಿದ್ಯಾರ್ಥಿಗಳು ಭೂಗೋಳಶಾಸ್ತ್ರ, ಚರಿತ್ರೆ ಮುಂತಾದ ಒಂದೆರಡು ವಿಷಯಗಳನ್ನು ತಿಳಿದುಕೊಂಡು ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದರೆ ತೃಪ್ತರಾಗುತ್ತಾರೆ; ಆದರೆ ಹಿಂದಿನ ಕಾಲದ ಗುರುಕುಲದ ಪ್ರೌಢದರ್ಜೆಯ ವಿದ್ಯಾರ್ಥಿಗಳು ಒಟ್ಟು ಜಗತ್ತಿನಲ್ಲಿರುವ ವ್ಯಕ್ತಿಗಳ ಮತ್ತು ಪದಾರ್ಥಗಳ ಸ್ವರೂಪಗುಣ ವಿಭವಗಳನ್ನು ತಿಳಿಯಬೇಕೆಂದೂ ಮತ್ತು ಜಗತ್ತಿನ ಸೃಷ್ಟಿ ಸ್ಥಿತಿಲಯಗಳಿಗೆ ಕಾರಣನಾದ ಭಗವಂತನ ಅರಿವನ್ನು ಪಡೆಯಬೇಕೆಂದೂ ವಿಶೇಷವಾದ ಆಸೆಯನ್ನೂ ಉತ್ಸಾಹ

ಶಾಸ್ತ್ರಜ್ಞಾನ ಮಾತ್ರವಲ್ಲದೆ ಸಂಪೂರ್ಣವಾದ ಅನುಭವ ಜ್ಞಾನವನ್ನು ಪಡೆಯಬೇಕೆಂಬ ಹೆಚ್ಚಾದ ಅರಿವನ್ನು ತೋರಿಸಿ ಅದನ್ನು ಹೊಂದಲು ಶ್ರದ್ಧೆಯಿಂದ ಪ್ರಯತ್ನ ಪಡುತ್ತಿದ್ದರು. ಒಂದು ವಿಷಯದಲ್ಲಿ ಬುದ್ಧಿಜ್ಞಾನ ಮಾತ್ರ ಯಾವಾಗಲೂ ಸಂದೇಹದಿಂದ ಕೂಡಿದ್ದಾಗಿರುತ್ತದೆ; ಆದರೆ ಅದೇ ವಿಚಾರದಲ್ಲಿ ಬುದ್ಧಿಜ್ಞಾನದೊಡನೆ ಅನುಭವ ಜ್ಞಾನವೂ ಇದ್ದ ಪಕ್ಷದಲ್ಲಿ ಸಂದೇಹಕ್ಕೆ ಅವಕಾಶವೇ ಇರುವುದಿಲ್ಲ; ತಿಳಿಯಾದ ಜ್ಞಾನವು ಬೆಳೆಯುತ್ತದೆ.

## ಐದು ಅಂತಸ್ತಿನ ಗುರುಕುಲಗಳು

ಅರ್ಥ ಪುರುಷಾರ್ಥ, ಕಾಮಪುರುಷಾರ್ಥ, ಕಾಮ್ಯಕರ್ಮ ಪುರುಷಾರ್ಥ, ಸಮಾಜ ಕಲ್ಯಾಣ ಪುರುಷಾರ್ಥ, ಮೋಕ್ಷಪುರುಷಾರ್ಥ ಎಂದು ಮಾನವನ ಪುರುಷಾರ್ಥಗಳನ್ನು ಪುರಾತನ ಕಾಲದಿಂದ ಭಾರತೀಯರು ಐದು ವಿಧವಾಗಿ ವಿಂಗಡಿಸಿ ಅಂಗೀಕರಿಸಿರುವರೆಂದು ಜ್ಞಾನದೀಪಿಕೆಯ ಆರನೆಯ ಮಾಲೆಯಲ್ಲಿ ವಿವರಿಸಿದ್ದೇವೆ. ಬ್ರಿಟಿಷರ ಕಾಲದಲ್ಲಿದ್ದ ಮತ್ತು ಈಗಿರುವ ವಿದ್ಯಾಭ್ಯಾಸ ಕ್ರಮದಲ್ಲಿ ಬಹುಮಟ್ಟಿಗೆ ಅರ್ಥ ಪುರುಷಾರ್ಥಕ್ಕೆ ಮಾತ್ರ ಬೆಲೆಯನ್ನು ಕೊಟ್ಟಿದೆ. ಸ್ವರಾಜ್ಯ ಸ್ಥಾಪನೆಯಾದ ಮೇಲೆ ಸರ್ಕಾರದವರು ಶಿಕ್ಷಣ ಸುಧಾರಣಾ ಕಾರ್ಯಗಳನ್ನು ಕೈಗೊಂಡು ಲಲಿತಕಲಾ ಶಿಕ್ಷಣ, ಭೂದಾನ, ಶ್ರಮದಾನ, ಸರ್ವೋದಯ ಚಳುವಳಿಗಳನ್ನು ಆರಂಭಿಸಿ ಕಾಮ ಪುರುಷಾರ್ಥಕ್ಕೂ ಸಮಾಜ ಕಲ್ಯಾಣ ಪುರುಷಾರ್ಥಕ್ಕೂ ಅವಕಾಶಗಳನ್ನು ಕಲ್ಪಿಸಲು ಪ್ರಯತ್ನಿಸುತ್ತಿರುವರು; ಆದರೆ ಕಾಮ್ಯಕರ್ಮ ಪುರುಷಾರ್ಥಕ್ಕೂ ಮತ್ತು ಮೋಕ್ಷ ಪುರುಷಾರ್ಥಕ್ಕೂ ಸ್ವಲ್ಪವೂ ಗಮನವನ್ನು ಕೊಡುತ್ತಿಲ್ಲ. ಪೂರ್ವಕಾಲದ ಗುರುಕುಲಗಳಲ್ಲಿಯಾದರೋ ಗುರುಗಳು ನಾಲ್ಕು ಅಥವ ಐದು ಪುರುಷಾರ್ಥಗಳ ಮೇಳನವೇ ವ್ಯಕ್ತಿಗೆ ಪರಿಪೂರ್ಣತೆಯನ್ನು ಉಂಟುಮಾಡುತ್ತದೆಯೆಂಬುದನ್ನು ತಿಳಿದು ಎಲ್ಲಾ ಪುರುಷಾರ್ಥಗಳಿಗೂ ಬೆಲೆಯನ್ನು ಕೊಟ್ಟು ಅವುಗಳನ್ನು ವಿದ್ಯಾರ್ಥಿಯು ಹೊಂದಲು ಅನುಕೂಲವಾಗುವ ಹಾಗೆ ಶಿಕ್ಷಣ ಕ್ರಮವನ್ನು ಏರ್ಪಡಿಸಿದ್ದರು. ಆದರೆ ಇಲ್ಲಿ ಒಂದು ವಿಚಾರವನ್ನು ತಿಳಿದುಕೊಳ್ಳಬೇಕು. ವಿದ್ಯಾರ್ಥಿಗಳ ವಂಶಪಾರಂಪರ್ಯವಾಗಿ ಬಂದಿರುವ ಧ್ಯೇಯಗಳ ಪ್ರಕಾರ ಅಂದರೆ ಅವರ ಮನಸ್ಸಿನ ಅಂತಸ್ತಿನ ಪ್ರಕಾರ ಬೇರೆ ಬೇರೆ ಅಂತಸ್ತಿನ ಗುರುಕುಲಗಳಿದ್ದವು. ಅನೇಕ ಗುರುಕುಲಗಳಲ್ಲಿ ಅರ್ಥ ಪುರುಷಾರ್ಥಕ್ಕೆ ಪ್ರಾಧಾನ್ಯವನ್ನು ಕೊಟ್ಟು ಮಿಕ್ಕ ಪುರುಷಾರ್ಥಗಳನ್ನು ಅಂಗವಾಗಿ ಮೇಳನ ಮಾಡಿದ್ದರು; ಕೆಲವು ಗುರುಕುಲಗಳಲ್ಲಿ ಕಾಮಪುರುಷಾರ್ಥಕ್ಕೆ ಪ್ರಾಧಾನ್ಯವಿದ್ದು ಮಿಕ್ಕ ಪುರುಷಾರ್ಥಗಳು ಅದಕ್ಕೆ ಅಂಗವಾಗಿದ್ದುವು; ಇನ್ನು ಕೆಲವು ಗುರುಕುಲಗಳಲ್ಲಿ ಕಾಮ್ಯಕರ್ಮ ಪುರುಷಾರ್ಥಕ್ಕೆ, ಮತ್ತೆ ಕೆಲವುಗಳಲ್ಲಿ ಸಮಾಜ ಕಲ್ಯಾಣ ಪುರುಷಾರ್ಥಕ್ಕೆ ಮತ್ತು ಕೊನೆಯದಾಗಿ ಕೆಲವುಗಳಲ್ಲಿ ಮೋಕ್ಷ ಪುರುಷಾರ್ಥಕ್ಕೆ ಹೆಚ್ಚಾದ ಬೆಲೆಯನ್ನು ಕೊಟ್ಟು ಮಿಕ್ಕ ಪುರುಷಾರ್ಥಗಳನ್ನು ಅದಕ್ಕೆ

ಅಂಗವಾಗಿ ಆಚರಿಸುತ್ತಿದ್ದರು. ಅಂತು ಎಲ್ಲಾ ಗುರುಕುಲಗಳಲ್ಲಿಯೂ ಎಲ್ಲಾ ಪುರುಷಾರ್ಥಗಳ ಬೋಧನವಿದ್ದಾಗ್ಯೂ ಒಂದೊಂದು ಪುರುಷಾರ್ಥಕ್ಕೆ ಒಂದೊಂದರಲ್ಲಿ ಪ್ರಾಧಾನ್ಯವನ್ನು ಕೊಟ್ಟದ್ದರಿಂದ ಆಗಿನ ಕಾಲದ ಗುರುಕುಲಗಳನ್ನು ಅರ್ಥಕ ಗುರುಕುಲಗಳೆಂದೂ, ಲಲಿತಕಲಾ ಗುರುಕುಲಗಳೆಂದೂ, ಕಾಮ್ಯಕರ್ಮ ಗುರುಕುಲಗಳೆಂದೂ, ಸಮಾಜಸೇವಕರ ಗುರುಕುಲಗಳೆಂದೂ ಮತ್ತು ಮೋಕ್ಷ ಅಥವ ವೇದಾಂತ ಗುರುಕುಲಗಳೆಂದೂ ವಿಂಗಡಿಸಬಹುದಾಗಿತ್ತು.

## ಒಂದು ಉಪನಿಷದ್ವಾಕ್ಯ

ಪೂರ್ವಕಾಲದ ವೇದಾಂತ ಗುರುಕುಲದಲ್ಲಿ ಗುರುವಿನ ಮತ್ತು ಶಿಷ್ಯನ ಲಕ್ಷಣಗಳನ್ನು ಈ ಉಪನಿಷದ್ವಾಕ್ಯವು ತಿಳಿಯಪಡಿಸುತ್ತದೆ. "ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ । ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ ; ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್ ಪ್ರಶಾಂತ ಚಿತ್ತಾಯ ಶಮಾನ್ವಿತಾಯ ಯೇನಾಕ್ಷರಂ ಪುರುಷಂ ವೇದ ಸತ್ಯಂ ಪ್ರೋವಾಚ ತಾಂ ತತ್ತ್ವತೋ ಬ್ರಹ್ಮ ವಿದ್ಯಾಂ"—ಈ ವಾಕ್ಯಗಳ ಅಭಿಪ್ರಾಯವನ್ನು ಒಬ್ಬ ಆಚಾರ್ಯರು ಹೀಗೆ ವಿವರಿಸಿದ್ದಾರೆ:— ಬ್ರಾಹ್ಮಣಃ— ವೇದ ಶಾಸ್ತ್ರವನ್ನು ಕಲಿಯುವುದರಲ್ಲಿ ಪ್ರವೃತ್ತನಾಗಿರುವವನು ; ಕರ್ಮಚಿತಾನ್— ಕರ್ಮಗಳನ್ನು ಮಾಡುವುದರಿಂದ ಉಂಟಾಗುವ ಫಲವು ; ಲೋಕಾನ್ — ಲೋಕಗಳೂ ಮತ್ತು ಅವುಗಳಲ್ಲಿರುವ ದೇವತೆಗಳೂ ಇವೆಲ್ಲವನ್ನೂ ಪರೀಕ್ಷಿಸಿ ಈ ಕರ್ಮಗಳಿಂದ ಶಾಶ್ವತನಾದ ಪರಮಪುರುಷನನ್ನು ಹೊಂದುವುದಕ್ಕೆ ಆಗುವುದಿಲ್ಲವೆಂಬ ಸಂಕಲ್ಪವನ್ನು ಮಾಡುವನು. ಈ ಮನೋಭಾವವನ್ನು ಪಡೆದ ವಿದ್ಯಾರ್ಥಿಯು ಪ್ರಪಂಚದಲ್ಲಿರುವ ಪದಾರ್ಥಗಳನ್ನು ಶೇಖರಿಸಿಕೊಂಡು ತನ್ನ ಇಂದ್ರಿಯ ತೃಪ್ತಿಗಾಗಿಯೇ ಉಪಯೋಗಿಸಿಕೊಳ್ಳಬೇಕೆಂಬ ದುರಾಶೆಯನ್ನು ಬಿಟ್ಟು ಬ್ರಹ್ಮಜ್ಞಾನವನ್ನು ಪಡೆಯಬೇಕೆಂಬ ವಿಶೇಷವಾದ ಆಸಕ್ತಿಯನ್ನು ಪಡೆಯುವನು. ಬ್ರಹ್ಮನನ್ನು ತಿಳಿಯುವುದಕ್ಕಾಗಿ ಈ ವಿದ್ಯಾರ್ಥಿಯು ಕೈಯಲ್ಲಿ ಅಗ್ನಿಯನ್ನು ಹಿಡಿದುಕೊಂಡು, ಅಂದರೆ ಅಗ್ನಿ ಸಾಕ್ಷಿಯಾಗಿ ಶ್ರೋತ್ರಿಯನಾದ ಸದ್ಗುರುವಿನ ಹತ್ತಿರ ಹೋಗಿ ಅವನನ್ನು ಆಶ್ರಯಿಸಬೇಕು. ಯಾವನು ವೇದವನ್ನು ಮೊದಲಿನಿಂದ ಕೊನೆಯವರೆಗೂ ತಿಳಿದಿರುವನೋ ಅವನೇ ಶ್ರೋತ್ರಿಯನು. ಯಾವನು ಪರಮಾತ್ಮನ ನಿಜವಾದ ಸ್ವರೂಪವನ್ನು ಅರಿತವನೋ ಅವನೇ ಬ್ರಹ್ಮನಿಷ್ಠನು. ಯಾವಾಗ ಶಿಷ್ಯನು ಶಾಂತ ಮನಸ್ಸಿನಿಂದ ಕೂಡಿದವನಾಗಿ ಮತ್ತು ಶಮದಮಾದಿಗಳನ್ನು ಪಡೆದವನಾಗಿ ಮರ್ಯಾದೆಯಿಂದ ಗುರುವನ್ನು ಸೇರಿ ಅವನೊಡನೆ ವಾಸ ಮಾಡುತ್ತಾನೆಯೋ ಆಗ ಆ ಗುರುವು ಅಂಥಾ ಶಿಷ್ಯನಿಗೆ ಯಾವ ವಿದ್ಯೆಯಿಂದ ನಾಶವಿಲ್ಲದ ಸತ್ಯನಾದ ಪುರುಷ

ನನ್ನು ಅವನು ತಿಳಿಯುತ್ತಾನೆಯೋ ಆ ಬ್ರಹ್ಮವಿದ್ಯೆಯನ್ನು ತಾತ್ವಿಕನಾಗಿ ಅಂದರೆ ಇದ್ದ ಹಾಗೆಯೇ ಹೇಳುವನು.

## ಗುರುಕುಲದ ಧ್ಯೇಯಗಳನ್ನು ಇಂದಿನ ಶಿಕ್ಷಣ ಕ್ರಮದಲ್ಲಿ ಹೇಗೆ ತರಬಹುದು ?

ಭಾರತ ದೇಶದ ಅನೇಕ ಲಕ್ಷ ವಿದ್ಯಾರ್ಥಿಗಳಿಗೆ ಅನ್ವಯಿಸುವ ಈಗಿನ ವಿದ್ಯಾಭ್ಯಾಸ ಕ್ರಮವು ಉತ್ತಮವಾಗಿ ನಿಜವಾಗಿ ಫಲಕಾರಿಯಾಗಬೇಕಾದರೆ ಕೆಳಗೆ ಸೂಚಿಸಿರುವ ಸಲಹೆಗಳನ್ನು ವಿದ್ಯಾರ್ಥಿಗಳೂ, ಶಾಲೆಯ ಅಧ್ಯಾಪಕರೂ, ಮುಖ್ಯೋಪಾಧ್ಯಾಯರೂ, ವಿದ್ಯಾ ಇಲಾಖೆಯ ಅಧಿಕಾರಿಗಳೂ, ತಂದೆತಾಯಿಗಳೂ, ಸರ್ಕಾರದವರೂ ಮತ್ತು ಪ್ರಜೆಗಳ ಮುಖಂಡರೂ ಕೈಗೊಳ್ಳಲು ಪ್ರಯತ್ನಿಸಬೇಕು. (೧) ಉಪಾಧ್ಯಾಯನು ಶಾಲೆಗಿಂತ ಮೇಲು ಎಂಬ ಭಾವನೆಯು ಸಮಾಜದವರಲ್ಲೆಲ್ಲಾ ಬೆಳೆಯ ತಂದೆ ತಾಯಿಗಳೂ ಮತ್ತು ಸರ್ಕಾರದ ಅಧಿಕಾರಿಗಳೂ ಮುಖ್ಯೋಪಾಧ್ಯಾಯರಿಗೂ ಸಹಾಯಕ ಉಪಾಧ್ಯಾಯರಿಗೂ ಹೆಚ್ಚಾದ ಗೌರವವನ್ನು ಕೊಡಲೇಬೇಕು. (೨) ಮುಖ್ಯೋಪಾಧ್ಯಾಯನು ಅಂದರೆ ಶಾಲೆಯ ಪ್ರಧಾನ ಗುರುವು "ವರ್ಕ್‌ಷಾಪ್ ಮೆಥಡ್" (Workshop Method) ಎಂಬ ಶಿಕ್ಷಣ ಕಾರ್ಯಕ್ರಮದ ಪ್ರಕಾರ ಸಹಾಯಕ ಉಪಾಧ್ಯಾಯರ ಸಹಾನುಭೂತಿಯನ್ನು ಪಡೆದು ವಿದ್ಯಾರ್ಥಿಗಳಿಗೆ ಉತ್ತಮವಾದ ವಿದ್ಯೆಯನ್ನು ಕಲಿಸುವ ಸ್ವಾತಂತ್ರ್ಯವನ್ನು ಕೈಗೊಂಡು, ಆ ಜವಾಬ್ದಾರಿಯನ್ನು ಹೊರಬೇಕು. (೩) ಪಾಠಶಾಲೆಗಳ ಉಪಾಧ್ಯಾಯರುಗಳನ್ನು ಅವರವರ ಪಾಠಶಾಲೆಗಳಿಂದ ಅನೇಕ ವರ್ಷಗಳ ಕಾಲ ವರ್ಗ ಮಾಡಕೂಡದು; ಮುಖ್ಯೋಪಾಧ್ಯಾಯರನ್ನು ಆದಷ್ಟು ಮಟ್ಟಿಗೆ ವರ್ಗ ಮಾಡಲೇಕೂಡದು. (೪) ಪಾಠಶಾಲೆಗಳಲ್ಲಿ ಕಾರ್ಯಕ್ರಮವು ಬೆಳಿಗ್ಗೆ ಎಂಟುಘಂಟೆಗೆ ಆರಂಭವಾಗಿ ಸಾಯಂಕಾಲ ಆರು ಘಂಟೆಗೆ ಮುಗಿಯಬೇಕು; ಮಧ್ಯ ಎರಡು ಘಂಟೆ ವಿಶ್ರಾಂತಿ ಇರಬೇಕು. ಅನುಕೂಲವಿಲ್ಲದ ಬಡವರಾದ ದೂರದಿಂದ ಬರುವ ವಿದ್ಯಾರ್ಥಿಗಳಿಗೆ ಊಟ ವಸತಿಗಳ ಏರ್ಪಾಡನ್ನು ಮಾಡಿ ಅವರು ಸದಾಕಾಲದಲ್ಲಿಯೂ ಶಾಲೆಯ ಕಟ್ಟಡವನ್ನು ಉಪಯೋಗಿಸುವ ಅವಕಾಶಗಳನ್ನು ಕಲ್ಪಿಸಬೇಕು. ಉಪಾಧ್ಯಾಯರುಗಳೂ ಕೂಡ ಶಾಲೆಯ ಹತ್ತಿರವೇ ವಾಸಮಾಡುವ ಏರ್ಪಾಡಾಗಬೇಕು. ಈ ಏರ್ಪಾಡುಗಳಿಂದ ಪೂರ್ವ ಕಾಲದ ಗುರುಕುಲಗಳ ಹಾಗೆ ವಿದ್ಯಾರ್ಥಿಗಳು ಉಪಾಧ್ಯಾಯರುಗಳ ಸಹವಾಸವನ್ನೂ ಸಹಾಯವನ್ನೂ ಹೆಚ್ಚಾಗಿ ಪಡೆಯುವರು; ಆಗ ಅವರಲ್ಲಿ ನಿಜವಾದ ಶಿಸ್ತು ಬೆಳೆಯುತ್ತದೆ. ಈ ಕಾರ್ಯವು ಜಯವಾಗುವುದಕ್ಕೆ ಹೆಚ್ಚು ಉಪಾಧ್ಯಾಯರನ್ನು ನೇಮಿಸಬೇಕಾಗುತ್ತದೆ. (೫) ವಿದ್ಯಾರ್ಥಿಗಳು ತಮ್ಮ ಶಾಲೆಗಳನ್ನು ಪ್ರೀತಿಸುವುದಕ್ಕಿಂತ ತಮ್ಮ ಉಪಾಧ್ಯಾಯರನ್ನು ಹೆಚ್ಚಾಗಿ ಪ್ರೀತಿಸಬೇಕು. ವೇಳಾಪಟ್ಟಿಯಲ್ಲಿ ಪಾಠಗಳಿಗೂ ಪಾಠೇತರ ಚಟುವಟಿಕೆಗಳಿಗೂ ಒಂದೇ ಬೆಲೆಯನ್ನು ಕೊಟ್ಟರೆ ಮತ್ತು

ವಿದ್ಯಾರ್ಥಿಗಳನ್ನು ಮೇಲಿನ ತರಗತಿಗಳಿಗೆ ಕಳುಹಿಸುವ ಸಂಪೂರ್ಣ ಅಧಿಕಾರವನ್ನು ಶಾಲೆಯ ಉಪಾಧ್ಯಾಯರ ಮಂತ್ರಾಲೋಚನಾ ಸಮಿತಿಗೆ ವಹಿಸಿದರೆ ಆಗ ವಿದ್ಯಾರ್ಥಿಗಳಿಗೆ ನಿಜವಾಗಿ ತಮ್ಮ ಗುರುಗಳಲ್ಲಿ ಭಕ್ತಿಯು ಬೆಳೆಯುತ್ತದೆ. (೬) ಪ್ರತಿ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಿಗೂ ಇಲಾಖೆಯ ಅಧಿಕಾರಿಗಳಿಗೂ, ಉಪಾಧ್ಯಾಯರಿಗೂ ಮುಖ್ಯೋಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಲ್ಲಿ ಒಬ್ಬೊಬ್ಬರಿಗೂ ನಿಕಟ ಸಂಬಂಧ, ಸೌಹಾರ್ದತೆ, ಆನುಕೂಲ್ಯ, ಪ್ರೀತಿ, ವಿಶ್ವಮೈತ್ರಿ ಮತ್ತು ಪೂಜ್ಯಭಾವ ಇವುಗಳು ಬೆಳೆಯುವುದಕ್ಕೆ ಅನುಕೂಲವಾದ ಕಾರ್ಯಕ್ರಮಗಳು ಆಗಿಂದಾಗ್ಗೆ ಏರ್ಪಾಡಾಗಬೇಕು. (೭) ವಿದ್ಯಾರ್ಥಿಗೆ ಭಾಷೆಗಳ ಶಿಕ್ಷಣವು ಎಷ್ಟು ಅಗತ್ಯವೋ ವೃತ್ತಿ ಶಿಕ್ಷಣವೂ ಅಷ್ಟೇ ಅಗತ್ಯವೆಂದು ತಿಳಿದು ಅದನ್ನು ಅವನು ಕಡ್ಡಾಯವಾಗಿ ಪಡೆಯುವ ಅವಕಾಶಗಳನ್ನು ಕಲ್ಪಿಸಬೇಕು. (೮) ಉಪಾಧ್ಯಾಯರು ಶಾಲೆಯಲ್ಲೂ ನಿತ್ಯಜೀವನದಲ್ಲೂ ವಿದ್ಯಾರ್ಥಿಗಳ ಹಿರಿಯಣ್ಣಂದಿರಾಗಿ ಅವರ ಶಾರೀರಿಕ, ಮಾನಸಿಕ, ಸಾಮಾಜಿಕ, ಬೌದ್ಧಿಕ, ಲಲಿತಕಲೆಗಳಿಗೆ ಸಂಬಂಧಪಟ್ಟ, ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣಗಳಲ್ಲಿ ಮುಂದಾಳುಗಳಾಗಬೇಕು. (೯) ಭಾಷಾ ಮತ್ತು ವೃತ್ತಿ ಶಿಕ್ಷಣಗಳಲ್ಲದೆ ಮಿಶ್ರ ಪ್ರಪಂಚ ಜ್ಞಾನವನ್ನುಂಟು ಮಾಡುವ ಶಿಕ್ಷಣ ಕ್ರಮವು ಚತುರ್ವಿಧ ಪುರುಷಾರ್ಥಗಳನ್ನು ಮೇಳನ ಮಾಡಿ ಸಾಧಿಸಿಕೊಡುವ ವಿಷಯಗಳನ್ನು ಒಳಗೊಂಡಿದ್ದು ವಿದ್ಯಾರ್ಥಿಗೆ ಜಗತ್ತಿನ, ವ್ಯಕ್ತಿಯ ಮತ್ತು ಭಗವಂತನ ಪರಿಪೂರ್ಣಜ್ಞಾನವನ್ನು ಅವಶ್ಯ ಉಂಟುಮಾಡಬೇಕು. (೧೦) ವಿದ್ಯಾಭ್ಯಾಸ ಕ್ರಮವು ವಿದ್ಯಾರ್ಥಿಯ ಶರೀರದ ಶಕ್ತಿಗೂ ಮತ್ತು ಮನಸ್ಸಿನ ಅಂತಸ್ಸಿಗೂ ಅನುಗುಣವಾಗಿರಬೇಕೇ ವಿನಹ ಎಲ್ಲರಿಗೂ ಒಂದೇ ವಿಧವಾದ ಶಿಕ್ಷಣವನ್ನು ಬಲಾತ್ಕರಿಸುವುದು ಫಲಕಾರಿಯಾಗುವುದಿಲ್ಲ. ಆದುದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯ ಮಾನಸಿಕ ಯೋಗ್ಯತೆಯನ್ನು ಪರೀಕ್ಷಿಸಿ ಅವನಿಗೆ ಅನುಕೂಲವಾಗುವ ಹಾಗೆ ಶಿಕ್ಷಣವನ್ನು ಕೊಡಬೇಕು. (೧೧) ವಿದ್ಯಾರ್ಥಿಗಳ ಜ್ಞಾನವಿಕಾಸವು ಕೇವಲ ಬುದ್ಧಿಜ್ಞಾನ ಮಾತ್ರವಾಗಿರದೆ ಕೆಲಸದ ಅನುಭವಜ್ಞಾನದಿಂದ ಕೂಡಿದ್ದಾಗಿರಬೇಕಾದುದರಿಂದ ಮಹಾತ್ಮಾ ಗಾಂಧೀಜೀಯವರು ಉಪದೇಶಿಸಿರುವ "ಮೂಲ ಶಿಕ್ಷಣ ಪದ್ಧತಿ" (Basic Education) ಯ ಧ್ಯೇಯಗಳನ್ನೆಲ್ಲಾ ಶಾಲೆಗಳ ಕಾರ್ಯಕ್ರಮಗಳಲ್ಲಿ ಆಚರಣೆಗೆ ತರಬೇಕು. ಮತ್ತು (೧೨) ಕೊನೆಯದಾಗಿ ಈಗಿನ ಹೊಸ ಬಳುವಳಿಯ ಪ್ರಕಾರ ಪ್ರತಿಯೊಂದು ಶಾಲೆಗೂ ಏಕಾಂತವಾದ ಮತ್ತು ಸುಂದರವಾದ ಪ್ರದೇಶದಲ್ಲಿ ಜಮೀನುಗಳನ್ನು ಕೊಟ್ಟರೆ ಅಲ್ಲಿ ಶಾಲೆಯು ಶ್ರೀ ನವಭಾರತ ಆಶ್ರಮವನ್ನು ಸ್ಥಾಪಿಸಬಹುದು. ಈ ಆಶ್ರಮದಲ್ಲಿ ವಿದ್ಯಾರ್ಥಿಗಳು ಆಗಾಗ್ಗೆ ಸೇರಿ ಶ್ರಮದಾನ, ಸಮಾಜಸೇವೆ, ಭಗವಂತನ ಕೀರ್ತನ ಭಜನ ಸ್ತೋತ್ರಪಠನ ಧ್ಯಾನಾದಿಗಳು, ಪ್ರಸ್ಥಾನತ್ರಯದ ಮಹಾತ್ಮೆ ಮತ್ತು ಪ್ರಪಂಚದ ಇತರ ಶ್ರೇಷ್ಠ ಮತಗಳ ಸಂದೇಶಗಳನ್ನು ತಿಳಿಯುವುದು ಇವೇ ಮೊದಲಾದ ಆಧ್ಯಾತ್ಮಿಕ ಮತ್ತು ನೈತಿಕ ಅಭ್ಯಾಸಗಳನ್ನು ಮಾಡಬೇಕು. ಒಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಬ್ರಹ್ಮಚರ್ಯ ಅಭ್ಯಾಸಗಳನ್ನು ಬಳಕೆಗೆ ತಂದು ಅವರಲ್ಲಿ ಪರಾರ್ಥಭಾವನೆಗಳನ್ನು ವೃದ್ಧಿಪಡಿಸಬೇಕು.

ಶ್ರೀ ನವಭಾರತ ಆಶ್ರಮ
ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

## (ನೂರ ಎಂಟು)

## ಸ್ವತಂತ್ರ ಭಾರತದಲ್ಲಿ ಬ್ರಹ್ಮಚರ್ಯ ಶಿಕ್ಷಣ ಅಗತ್ಯ

### ನವಭಾರತದ ಅಭ್ಯುದಯ

ಪ್ರಧಾನ ಮಂತ್ರಿ ನೆಹ್ರೂರವರು ಈ ತಿಂಗಳಲ್ಲಿ ಮದರಾಸ್, ತಿರುಚಿನಾಪಳ್ಳಿ, ಸೇಲಂ, ವೆಲ್ಲೂರು ಮತ್ತು ಬೆಂಗಳೂರು ಮಹಾಜನಗಳಿಗೆ ಈ ಕೆಳಗೆ ವಿವರಿಸುವ ಉತ್ತಮ ಸಂದೇಶಗಳನ್ನಿತ್ತರು. ಭಾರತವು ಸುಮಾರು ಒಂದು ಸಾವಿರ ವರುಷಗಳಿಂದ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲು ಕಾರಣವೇನು? ಗುಪ್ತ ಚಕ್ರಾಧಿಪತಿಗಳ ಕಾಲವಾದಮೇಲೆ ನಮ್ಮ ಜನರು ತಮ್ಮ ತಮ್ಮ ಪ್ರಾಂತ್ಯ ಜಾತಿ ಮತಗಳಲ್ಲಿ ದುರಭಿಮಾನವನ್ನು ಬೆಳೆಸಿ ಪ್ರತ್ಯೇಕ ಭಾವನೆಗಳಿಂದ ಹೋರಾಡಿ ಭಾರತೀಯ ಜನಾಂಗವನ್ನು ನೂರಾರು ಸ್ವತಂತ್ರ ಗುಂಪುಗಳಾಗಿ ವಿಭಾಗಿಸಿದರು. ಪರದೇಶದವರು ಭಾರತದಮೇಲೆ ದಂಡಯಾತ್ರೆ ಮಾಡಿದಾಗ ಕೆಲವು ಗುಂಪಿನವರು ಇತರೆ ಗುಂಪಿನವರಿಗೆ ವಿರೋಧವಾಗಿ ಪರರಾಜರಿಗೆ ಸಹಾಯ ಮಾಡಿದುದರಿಂದ ಎಲ್ಲಾ ಗುಂಪಿನವರೂ ಸ್ವಾತಂತ್ರ್ಯವನ್ನು ಕಳೆದುಕೊಂಡರು. ಇಷ್ಟಾದರೂ ಹಳ್ಳಿಗಳುಮಾತ್ರ ಬಹಳಕಾಲ ಉತ್ತಮ ಸ್ಥಿತಿಯಲ್ಲಿದ್ದುವು. ಆದರೆ ಬ್ರಿಟಿಷರ ಆಳ್ವಿಕೆಯಲ್ಲಿ ಅಧಿಕಾರಿಗಳೂ ಬಂಡವಾಳಗಾರರೂ ಹಳ್ಳಿಯವರನ್ನು ನಿಕೃಷ್ಟವಾಗಿ ಕಂಡು ಬಡವರಾದ ಅವರಲ್ಲಿದ್ದ ಅಲ್ಪ ಹಣವನ್ನೂ ಶರೀರ ಬಲವನ್ನೂ ಸುಲಿಗೆ ಮಾಡಿದುದರಿಂದ ಭಾರತದ ಹಳ್ಳಿಗಳೆಲ್ಲವೂ ಈಗ ಬಹಳ ಹೀನ ಸ್ಥಿತಿಯಲ್ಲಿವೆ. ಮಹಾತ್ಮ ಗಾಂಧಿಯವರು ಈಗಿನ ಲಕ್ಷಾಂತರ ಹಳ್ಳಿಗಳಲ್ಲಿ ಬಡತನ, ರೋಗ, ಅನಾರೋಗ್ಯ, ಆಹಾರಾಭಾವ, ಮೌಢ್ಯ, ಅಂಜುಬುರುಕತನ, ಪರಾಧೀನ ಮನೋಭಾವ ಇವೇ ಮೊದಲಾದ ದೋಷಗಳು ಇರುವುದನ್ನು ಕಂಡು ಹಳ್ಳಿಗಳ ಉದ್ಧಾರಕ್ಕೆ ಧೈರ್ಯದಿಂದ ತಮ್ಮ ಅಹಿಂಸಾತ್ಮಕ ಸ್ವರಾಜ್ಯ ಚಳುವಳಿಯಲ್ಲಿ ಪ್ರಥಮ ಸ್ಥಾನವನ್ನು ಕೊಟ್ಟರು. ಈ ಮಹಾತ್ಮರ ನೇತೃತ್ವದಲ್ಲಿ ವಿದ್ಯಾವಂತರೂ ಮತ್ತು ಲಕ್ಷಾಂತರ ಪ್ರಜೆಗಳೂ ಐಕಮತ್ಯದಿಂದ ಉತ್ತಮವಾದ ಶಿಸ್ತನ್ನು ಆಚರಿಸುತ್ತಾ ತಮ್ಮ ಹೃದಯಗಳಲ್ಲಿ ಪರಿಪೂರ್ಣತ್ವ, ದೇಶಪ್ರೇಮ, ಸ್ವಾತಂತ್ರ್ಯ ಎಂಬಿವೇ ಮೊದಲಾದ ಉತ್ತಮ ಧ್ಯೇಯಗಳನ್ನು ಬೆಳೆಸಿ, ಅಹಿಂಸಾತ್ಮಕ ಸ್ವಾತಂತ್ರ್ಯ ಚಳು-

ವೇಳೆಯನ್ನು ಮೂವತ್ತು ವರುಷಗಳ ಕಾಲ ಧೈರ್ಯದಿಂದಲೂ ತ್ಯಾಗದಿಂದಲೂ ಮುಂದುವರಿಸಿ ಭಾರತದಲ್ಲಿ ಸ್ವರಾಜ್ಯವನ್ನು ಸ್ಥಾಪಿಸಿದರು.

ಸ್ವತಂತ್ರ ಭಾರತದಲ್ಲಿ ಈಗ ಕಂಡುಬರುವ ಗುಣಗಳಾವುವು ಮತ್ತು ದೋಷಗಳಾವುವು? ಪ್ರಥಮ ಪಾಂಚವಾರ್ಷಿಕ ಯೋಜನೆಯಲ್ಲಿ ಅನೇಕ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಕಾರ್ಯಗಳು ನಡೆದಿವೆ ಮತ್ತು ಎರಡನೇ ಪಾಂಚವಾರ್ಷಿಕ ಯೋಜನೆಯ ಪ್ರಕಾರ ಇನ್ನೂ ಮಹತ್ತರವಾದ ಅನೇಕ ಅಭಿವೃದ್ಧಿ ಕಾರ್ಯಗಳು ಮುಂದೆ ನಡೆಯುವುವು. ಆದರೆ ಬೇರೆ ಬೇರೆ ಪ್ರಾಂತ್ಯಗಳಲ್ಲಿರುವ ಕೆಲವು ರಾಜಕೀಯ ಪಂಗಡಗಳಿಗೆ ಸೇರಿದ ಮುಖಂಡರೂ, ಜನರೂ ಮತ್ತು ವಿದ್ಯಾರ್ಥಿಗಳೂ ಅಧಿಕಾರಲಾಲಸೆ ಮತ್ತು ಸ್ವಾರ್ಥತೆಯ ಮನೋಭಾವಗಳನ್ನು ಪಡೆದು ಕೇಂದ್ರ ಸರ್ಕಾರದ ನೀತಿಗಳನ್ನೂ ದೇಶಾಭ್ಯುದಯ ಕಾರ್ಯಗಳನ್ನೂ ವಿರೋಧಿಸುವುದಕ್ಕಾಗಿ ಶಿಸ್ತನ್ನು ಪರಿಪಾಲಿಸದ ಹರತಾಳಗಳನ್ನೂ ಉಪವಾಸಗಳನ್ನೂ ಕೈಗೊಂಡು ಅಲ್ಲಲ್ಲಿ ಗಲಾಟೆಗಳನ್ನು ನಡೆಸುತ್ತಿರುವುದು ದುಃಖಕರವಾದ ವಿಷಯ. ಅಹಿಂಸಾತ್ಮಕ ಮಾರ್ಗದಲ್ಲಿ ನಮ್ಮ ದೇಶಕ್ಕೆ ಕ್ಷೇಮವನ್ನುಂಟುಮಾಡಬೇಕಾದರೆ ಜನರೆಲ್ಲರೂ ಒಗ್ಗಟ್ಟಾಗಿ ಶಿಸ್ತನ್ನು ಪರಿಪಾಲಿಸಬೇಕು; ಶಿಸ್ತಿಲ್ಲದಿದ್ದರೆ ದೇಶದ ಸ್ವಾತಂತ್ರ್ಯವು ಉಳಿಯುವುದಿಲ್ಲ ಮತ್ತು ದೇಶಾಭ್ಯುದಯ ಕಾರ್ಯಗಳು ಫಲಕಾರಿಯಾಗುವುದಿಲ್ಲ. ಶರೀರಕ್ಕೂ ಮನಸ್ಸಿಗೂ ಶಿಸ್ತಿನ ಶಿಕ್ಷಣವನ್ನು ನಮ್ಮ ಜನರು ಪಡೆಯದಿದ್ದರೆ ಅವರು ಐಕಮತ್ಯವಿಲ್ಲದ ಗುಂಪುಗಳಾಗಿ ಒಡೆದು ಹೋರಾಡುವರು; ಅದರಿಂದ ಭಾರತೀಯ ಜನಾಂಗವು ಪ್ರಪಂಚದ ಜನಾಂಗಗಳಲ್ಲಿ ಬಲಹೀನವಾಗಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತದೆ ಅಥವ ಅವಕ್ಕೆ ಗೌರವವೇ ಇರುವುದಿಲ್ಲ.

ನವಭಾರತದ ಗುರಿಯೇನು ಮತ್ತು ಅದನ್ನು ಸಾಧಿಸಲು ಉಪಾಯಗಳಾವುವು? ಸಮಾಜವಾದದ ಅಸ್ತಿಭಾರದಮೇಲೆ ಹೊಸ ಸಮಾಜ ಸಂಸ್ಥೆಗಳನ್ನು ಭಾರತದಲ್ಲಿ ಸ್ಥಾಪಿಸಿ ಈಗ ಬಳಕೆಗೆ ತಂದಿರುವ ಪ್ರಜಾಪ್ರಭುತ್ವವನ್ನು ವೃದ್ಧಿಪಡಿಸುವುದೇ ನಮ್ಮ ಪವಿತ್ರವಾದ ಧ್ಯೇಯ. ಈ ಉತ್ತಮ ಧ್ಯೇಯವನ್ನು ಸಾಧಿಸುವುದಕ್ಕೆ ಕೆಳಗೆ ವಿವರಿಸಿರುವ ಮಾರ್ಗಗಳನ್ನು ಸರ್ಕಾರದ ಅಧಿಕಾರಿಗಳೂ, ಮುಖಂಡರೂ, ಪ್ರಜೆಗಳೂ, ವಿದ್ಯಾರ್ಥಿಗಳೂ ಕೈಗೊಳ್ಳಬೇಕು. (೧) ಉತ್ಸಾಹತುಂಬಿ ದೃಢಕಾಯರಾಗಿರುವ ಯುವಕರನ್ನು ಸೈನ್ಯ, ನೌಕೆ ಮತ್ತು ವಿಮಾನ ಬಲಗಳಿಗೆ ಸೇರಿಸಿ ಅವರಲ್ಲಿ ಉತ್ತಮವಾದ ಶಿಸ್ತನ್ನು ಬೆಳೆಸಬೇಕು; ವಿದ್ಯಾರ್ಥಿಗಳೆಲ್ಲರೂ ಪರಿಪೂರ್ಣವಾದ ಶಿಸ್ತನ್ನು ಶಾಲೆಗಳಲ್ಲಿಯೂ ನಿತ್ಯಜೀವನದಲ್ಲಿಯೂ ಮತ್ತು ಸಮಾಜ ಕಾರ್ಯಗಳಲ್ಲಿಯೂ ಅಭ್ಯಸಿಸಬೇಕು. (೨) ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ಬಹಳ ಜವಾಬ್ದಾರಿ ಕೆಲಸ; ಅದಕ್ಕಾಗಿ ನಾವು ಸದಾ ಜಾಗರೂಕರಾಗಿ, ನಮ್ಮ ನಮ್ಮ ಜಾತಿ ಮತ ಕೋಮುಗಳ ಪ್ರತ್ಯೇಕ ಭಾವನೆಯನ್ನು ತೊರೆದು ಒಟ್ಟು ಭಾರತೀಯ ಸಮಾ

ಜದ ಮೇಲೆ ನಿರ್ಮಲವಾದ ಪ್ರೇಮವನ್ನು ಬೆಳೆಸಬೇಕು ಮತ್ತು ನಮ್ಮ ಪ್ರಾಂತ್ಯದ ಮೇಲಿರುವ ಅಭಿಮಾನವು ಒಟ್ಟು ಭಾರತದ ಮೇಲಿನ ಪ್ರೇಮಕ್ಕೆ ಅಂಗವಾಗಿರಬೇಕು. (೩) ಪುರಾತನಕಾಲದಿಂದ ಬೆಳೆದು ಬಂದಿರುವ ಆರ್ಯ–ದ್ರಾವಿಡ ನಾಗರೀಕತೆಯ ಉತ್ತಮ ಧ್ಯೇಯಗಳನ್ನೂ ಮತ್ತು ಈಗಿನ ಪಶ್ಚಿಮದೇಶಗಳ ನಾಗರೀಕತೆಯ ಉತ್ತಮ ಧ್ಯೇಯಗಳನ್ನೂ ಮೇಳನಮಾಡಿ ಅವುಗಳನ್ನು ಹಳ್ಳಿಯ ಉದ್ಧಾರ, ಬಡತನ ನಿವಾರಣೆ, ಉದ್ಯೋಗಗಳ ಕಲ್ಪನೆ, ಜ್ಞಾನಪ್ರಸಾರಕಾರ್ಯ ಇವೇ ಮೊದಲಾದ ದೇಶಾಭ್ಯುದಯ ಕಾರ್ಯಗಳಿಗೆ ಆಧಾರವಾಗಿಟ್ಟುಕೊಂಡು ಜನರೆಲ್ಲರೂ ಸ್ವಾರ್ಥಭಾವನೆಯನ್ನು ತೊರದೂಡಿ ಪರಾರ್ಥಭಾವನೆಯಿಂದ ಕೂಡಿದವರಾಗಿ ಸದಾ ದುಡಿಯಬೇಕು; ಆಗ ಪ್ರಪಂಚದ ಜನಾಂಗಗಳೆಲ್ಲಾ ನಮ್ಮ ಜನಾಂಗಕ್ಕೆ ಗೌರವವನ್ನು ಕೊಡುವುವು. (೪) ಕಳೆದ ಐದು ವರುಷಗಳಿಂದಲೂ ಸ್ವತಂತ್ರ ಭಾರತವು ವಿಶ್ವದಲ್ಲಿ ಯುದ್ಧಗಳನ್ನು ತಪ್ಪಿಸಿ ಶಾಂತಿಯನ್ನು ಬೆಳೆಸಲು ಸರ್ವಪ್ರಯತ್ನಗಳನ್ನು ಮಾಡಿದೆ. ಈ ಮಹಾ ಕಾರ್ಯವನ್ನು ಮುಂದೆಯೂ ಜಯಪ್ರದವಾಗಿ ನಡೆಸಬೇಕು. (೫) ಬೇರೆ ಬೇರೆ ಅಭಿಪ್ರಾಯಗಳಿಂದ ಕೂಡಿರುವ ನಮ್ಮ ಗುಂಪುಗಳು ಒಗ್ಗಟ್ಟಾಗಿ ಒಂದೇ ಜನಾಂಗವನ್ನು ಕಟ್ಟಿ ಶಾಂತಿಯಿಂದ ಬಾಳಬೇಕಾಗಿರುವುದರಿಂದ ಪ್ರತಿಯೊಂದು ಗುಂಪಿನವರೂ ಇತರ ಗುಂಪಿನವರ ಅಭಿಪ್ರಾಯಗಳ ವಿಚಾರದಲ್ಲಿ ಸಹಿಷ್ಣುತೆಯಿಂದ ವರ್ತಿಸುವುದೂ ಅಲ್ಲದೆ ಅವುಗಳಿಗೆ ಗೌರವವನ್ನೂ ಕೊಡಬೇಕು.

ಇಷ್ಟೇ ಅಲ್ಲ; ಒಟ್ಟು ಭಾರತೀಯ ಜನಾಂಗದ ಬೆಳವಣಿಗೆಗೆ ಧಕ್ಕೆತರುವ ಅಶಿಸ್ತಿನ ವರ್ತನೆಗಳನ್ನೂ ಮತ್ತು ಚಳುವಳಿಗಳೆಲ್ಲವನ್ನೂ ನಿರ್ಮೂಲ ಮಾಡಬೇಕು; ಆರ್ಥಿಕ ಮತ್ತು ಸಾಮಾಜಿಕ ಅಭ್ಯುದಯಗಳಿಗೆ ಅಡ್ಡಿಯಾಗಿರುವ ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ತೊಡೆದುಹಾಕಬೇಕು. ಅಂದರೆ, ನಮ್ಮ ಆರ್ಥಿಕ ಮತ್ತು ಸಾಮಾಜಿಕ ವಿಚಾರಗಳಲ್ಲಿ ಒಂದು ಕ್ರಾಂತಿಯೇ ಆಗಿ ಜನರ ಜೀವನದ ಮಟ್ಟವು ಮೇಲಾಗಬೇಕು; ಹೆಂಗಸರೆಲ್ಲರೂಕೂಡ ತಮ್ಮ ತಮ್ಮ ಮನೆಯ ಕಾರ್ಯಗಳನ್ನು ಮಾಡುವುದು ಮಾತ್ರವೇ ಅಲ್ಲದೆ ದೇಶದ ಅಭ್ಯುದಯ ಕಾರ್ಯಗಳಲ್ಲಿ ಸದಾ ದುಡಿಯಬೇಕು.

(೬) ಎರಡನೇ ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ನಡೆಸಬೇಕಾದರೆ ಶಿಸ್ತು, ಏಕಮತ್ಯ, ಭೂದಾನ, ಸಂಪತ್ತಿದಾನ, ಶ್ರಮದಾನ, ವಿದ್ಯಾದಾನ ಇವೇ ಮೊದಲಾದ ಕಾರ್ಯಗಳಲ್ಲಿ ಜನರಿಗೆ ಶ್ರದ್ಧೆ ಉತ್ಸಾಹಗಳಿರಬೇಕು. ಭಾಷಾ ಸಮಸ್ಯೆ ಮತ್ತು ಪ್ರಾಂತ್ಯ ವಿಭಾಗ ಸಮಸ್ಯೆಗಳಲ್ಲಿ ಜನರಲ್ಲಿ ಸ್ವಾರ್ಥತೆಯೂ ಉದ್ರೇಕವೂ ಇರಕೂಡದು. ಇವೆಲ್ಲವೂ ಕೈಗೂಡುವುದಕ್ಕಾಗಿ ಭಾರತೀಯರೆಲ್ಲರೂ ಅಹಿಂಸಾತ್ಮಕವಾದ ಧರ್ಮ ಮಾರ್ಗವನ್ನು ಅವಲಂಬಿಸಬೇಕು; ಸ್ವಾರ್ಥತೆಯಿಂದ ಕೂಡಿದ ಹಿಂಸಾತ್ಮಕ ಅಧರ್ಮ ಕಾರ್ಯಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಕೇವಲ ಉಪನ್ಯಾಸಗಳನ್ನು ಕೇಳುವುದು, ಸಭೆಗಳಲ್ಲಿ ತೀರ್ಮಾನಗಳನ್ನು ಮಾಡುವುದು ಮತ್ತು

ಶಾಸನಗಳನ್ನು ತಯಾರಿಸುವುದು—ಇವುಗಳಿಂದ ಪವಿತ್ರ ದೇಶಕ್ಕೆ ಕ್ಷೇಮವುಂಟಾಗುವುದಿಲ್ಲ; ಪಕ್ಷಗಳಿಗೆ ಅತೀತರಾದವರೆಲ್ಲರೂ ತಮ್ಮ ತಮ್ಮ ಕರ್ತವ್ಯಗಳನ್ನೇ ಇಷ್ಟ ಉತ್ಸಾಹದಿಂದ ಸದಾ ನಡೆಸುತ್ತಲೇ ಇರಬೇಕು.

## ಬ್ರಹ್ಮಚರ್ಯ ಶಿಕ್ಷಣದ ಆವಶ್ಯಕತೆ

ಪಂಡಿತ ಜವಹರಲಾಲರು ಉಪದೇಶ ಮಾಡಿದ ಮೇಲಿನ ಪವಿತ್ರ ಧ್ಯೇಯಗಳನ್ನು ನಮ್ಮ ಜನರು ಆಚರಣೆಯಲ್ಲಿ ತರಬೇಕಾದರೆ ಎಲ್ಲರೂ ಬ್ರಹ್ಮಚರ್ಯ ಶಿಕ್ಷಣವನ್ನು ಪಡೆಯಬೇಕು. ಬ್ರಹ್ಮಚರ್ಯ ಶಿಕ್ಷಣವಿಲ್ಲದ ಮನುಷ್ಯನು ಇಂದ್ರಿಯಲೋಲುಪ್ತನಾಗಿದ್ದು, ಅಂದರೆ ಇಂದ್ರಿಯಗಳನ್ನು ತೃಪ್ತಿಪಡಿಸುವುದರಲ್ಲಿಯೇ ಆಸಕ್ತನಾಗಿದ್ದು ಪಶುತ್ವದಿಂದ ಪಾರಾಗುವುದೇ ಇಲ್ಲ; ಹೀಗೆ ಕೀಳು ಜೀವನವನ್ನು ನಡೆಸುವುದಲ್ಲದೆ ಸಮಾಜಕ್ಕೂ ಹಾನಿಯನ್ನುಂಟುಮಾಡುತ್ತಾನೆಯಲ್ಲವೆ? ಪ್ರತಿಯೊಬ್ಬ ಮನುಷ್ಯನಲ್ಲಿಯೂ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ ಮತ್ತು ಆತ್ಮಜ್ಞಾನವೆಂಬ ಶಕ್ತಿಗಳು ಒಂದಕ್ಕೊಂದು ಎಡೆಬಿಡದೆ ಸೇರಿಕೊಂಡಿರುವುವು. ಆದರೆ ಭಿನ್ನ ವ್ಯಕ್ತಿಗಳಲ್ಲಿ ಅಥವ ಒಬ್ಬ ಮನುಷ್ಯನ ಬೇರೆ ಬೇರೆ ಅವಸ್ಥೆಗಳಲ್ಲಿ ಅವುಗಳಲ್ಲಿ ಯಾವುದಾದರೂ ಒಂದು ಪ್ರಬಲವಾಗಿ ಮಿಕ್ಕವುಗಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುತ್ತದೆ. ಈ ಕಾರಣದಿಂದಲೇ ಪ್ರಾಚೀನಕಾಲದ ಋಷಿಗಳು ಮನುಷ್ಯರ ಬೇರೆ ಬೇರೆ ಸ್ವಭಾವಗಳನ್ನು ಅಥವ ಒಬ್ಬ ಮನುಷ್ಯನ ಬೇರೆ ಬೇರೆ ಅವಸ್ಥೆಗಳನ್ನು ಮೃಗಸ್ಥಿತಿ, ಮನುಷ್ಯಸ್ಥಿತಿ, ಪವಿತ್ರಸ್ಥಿತಿ ಮತ್ತು ಬ್ರಾಹ್ಮೀಸ್ಥಿತಿ ಎಂದು ವಿಭಾಗಿಸಿರುವರು. ಮೃಗಸ್ಥಿತಿಯಲ್ಲಿ ತಮೋಗುಣವೂ, ಮನುಷ್ಯಸ್ಥಿತಿಯಲ್ಲಿ ರಜೋಗುಣವೂ, ಪವಿತ್ರ ಸ್ಥಿತಿಯಲ್ಲಿ ಸತ್ವಗುಣವೂ ಮತ್ತು ಬ್ರಾಹ್ಮೀಸ್ಥಿತಿಯಲ್ಲಿ ಶುದ್ಧಸತ್ವ ಅಥವ ತ್ರಿಗುಣಾತೀತ ಸ್ವಭಾವವೂ ಹೆಚ್ಚಾಗಿ ಕಂಡುಬರುವುದು. ಮೃಗ ಸ್ಥಿತಿಯಲ್ಲಿ ಶರೀರೇಂದ್ರಿಯಗಳು ಮನುಷ್ಯನಲ್ಲಿ ಪ್ರಬಲವಾಗಿ ಅವನ ಮನಸ್ಸು, ಬುದ್ಧಿ, ಆತ್ಮಜ್ಞಾನಗಳು ಇಂದ್ರಿಯಗಳ ಅಧೀನದಲ್ಲಿರುತ್ತವೆ. ಮನುಷ್ಯ ಸ್ಥಿತಿಯಲ್ಲಿ ಮನಸ್ಸು ಪ್ರಬಲವಾಗಿ ಇಂದ್ರಿಯಗಳು, ಬುದ್ಧಿ ಮತ್ತು ಆತ್ಮಜ್ಞಾನಗಳು ಅದರ ಅಧೀನದಲ್ಲಿರುತ್ತವೆ. ಪವಿತ್ರ ಸ್ಥಿತಿಯಲ್ಲಿ ಬುದ್ಧಿಯು ಪ್ರಬಲವಾಗಿ ಶರೀರೇಂದ್ರಿಯಗಳು, ಮನಸ್ಸು, ಆತ್ಮಜ್ಞಾನವು ಬುದ್ಧಿಯ ಅಧೀನದಲ್ಲಿರುತ್ತವೆ. ಕೊನೆಯದಾಗಿ ಬ್ರಾಹ್ಮೀಸ್ಥಿತಿಯಲ್ಲಿ ಆತ್ಮಜ್ಞಾನವು ಪ್ರಧಾನವಾಗಿ ಶರೀರೇಂದ್ರಿಯಗಳು, ಮನಸ್ಸು, ಬುದ್ಧಿಯೂ ಆತ್ಮಜ್ಞಾನದ ಅಧೀನದಲ್ಲಿರುತ್ತವೆ. ಬ್ರಹ್ಮಚರ್ಯ ಶಿಕ್ಷಣದಿಂದ ಮನುಷ್ಯನು ಮೃಗಸ್ಥಿತಿಯಿಂದ ಮನುಷ್ಯ ಸ್ಥಿತಿಗೂ, ಮನುಷ್ಯಸ್ಥಿತಿಯಿಂದ ಪವಿತ್ರಸ್ಥಿತಿಗೂ, ಪವಿತ್ರಸ್ಥಿತಿಯಿಂದ ಬ್ರಾಹ್ಮೀ ಸ್ಥಿತಿಗೂ ಏರಿ, ಕ್ರಮೇಣ ಮೇಲು ಮೇಲು ಸ್ಥಿತಿಗಳನ್ನು ಪಡೆಯುವನು. ಇದರಿಂದ ಪ್ರಾಚೀನಕಾಲದ ಗುರುಕುಲಗಳಲ್ಲಿ ಬ್ರಹ್ಮಚರ್ಯ ಶಿಕ್ಷಣಕ್ಕೆ ಬೆಲೆ ಕೊಟ್ಟಷ್ಟು ಪ್ರಪಂಚದ ಇನ್ನು ಯಾವ ಇತರ ದೇಶದ ಶಿಕ್ಷಣವೂ ಬೆಲೆಯನ್ನು ಕೊಟ್ಟಿಲ್ಲ.

# ಬ್ರಹ್ಮಚರ್ಯವೆಂದರೇನು ?

ನಮ್ಮ ಪ್ರಾಚೀನರು "ಬ್ರಹ್ಮಚರ್ಯ" ಎಂಬ ಪದವನ್ನು ಅನೇಕ ಸಂದರ್ಭಗಳಲ್ಲಿ ಉಪಯೋಗಿಸುತ್ತಿದ್ದರು. "ಬ್ರಹ್ಮಚರ್ಯ" ವೆಂದರೆ ಬ್ರಹ್ಮಚರ್ಯಾಶ್ರಮವೆಂಬುದು ಸಾಮಾನ್ಯ ಅಭಿಪ್ರಾಯ; ಯುವಕನು ಮದುವೆ ಮಾಡಿಕೊಳ್ಳುವವರೆಗೂ ಬ್ರಹ್ಮಚರ್ಯಾಶ್ರಮದಲ್ಲಿರುವನು; ಅಂದರೆ ಆ ಕೋಮಲ ವಯಸ್ಸಿನ ಬಾಲಕನು ವಿದ್ಯಾರ್ಥಿಯಾಗಿ, ಯುವಕನಾಗಿ, ಮದುವೆ ಮಾಡಿಕೊಳ್ಳುವವರೆಗೂ ಇರುವ ಅವನ ಸ್ಥಿತಿಯೇ ಬ್ರಹ್ಮಚರ್ಯಾವಸ್ಥೆ ಅಥವಾ ಬ್ರಹ್ಮಚರ್ಯಾಶ್ರಮ. ವಿದ್ಯಾರ್ಥಿಯು ತನ್ನ ಮನಸ್ಸಿನಲ್ಲಿರುವ ತಮೋಗುಣದಿಂದ ಹುಟ್ಟುವ ಪಾಪಭಾವನೆಗಳನ್ನು ಹೊರಗೆಡಹಿ, ರಜೋಗುಣದಿಂದ ಉದ್ಭವಿಸುವ ಕಾಮಕ್ರೋಧಾದಿ ಅರಿಷಡ್ವರ್ಗಗಳ ಪ್ರವೃತ್ತಿಗಳನ್ನು ತಡೆಹಿಡಿಯುತ್ತಿಟ್ಟು, ಸತ್ವಗುಣಕ್ಕೆ ಸಂಬಂಧಪಟ್ಟ ಉತ್ತಮ ಭಾವನೆಗಳನ್ನು ತನ್ನ ಹೃದಯದಲ್ಲಿ ಬೆಳೆಸಿಕೊಳ್ಳುವುದೇ ಬ್ರಹ್ಮಚರ್ಯ ಎಂಬುದು ಇನ್ನೊಂದು ಅಭಿಪ್ರಾಯ. ಹೀಗೆ ಮನಸ್ಸಿನಲ್ಲಿರುವ ದೋಷಗಳನ್ನು ತೊಳೆಯುವುದಲ್ಲದೆ, ಸತ್ವಗುಣದ ಕಡೆ ಪ್ರವೃತ್ತಿಗಳನ್ನು ವೃದ್ಧಿಪಡಿಸುವುದಲ್ಲದೆ, ಐದು ಕರ್ಮೇಂದ್ರಿಯಗಳನ್ನೂ ಮತ್ತು ಐದು ಜ್ಞಾನೇಂದ್ರಿಯಗಳನ್ನೂ ಸ್ವೇಚ್ಛೆಯಾಗಿ ಪ್ರವರ್ತಿಸಲು ಬಿಡದೆ, ಅವನ್ನು ವಾಚಾ, ಮನಸಾ ತಡೆಹಿಡಿಯುತ್ತಿಟ್ಟುಕೊಳ್ಳಲು ಪ್ರಯತ್ನಿಸುವುದೇ ಬ್ರಹ್ಮಚರ್ಯ ಎಂಬುದು ಮತ್ತೊಂದು ಅಭಿಪ್ರಾಯ. ಆದರೆ ಮನಸ್ಸನ್ನು ಶುದ್ಧಿ ಮಾಡಿ ಇಂದ್ರಿಯಗಳನ್ನು ತಡೆಹಿಡಿಯುತ್ತಿಟ್ಟಿರುವುದು ಮಾತ್ರವೇ ಸಂಪೂರ್ಣ ಬ್ರಹ್ಮಚರ್ಯವಲ್ಲ; ತಡೆಹಿಡಿಯಲ್ಪಟ್ಟಿರುವ ಮನಸ್ಸನ್ನು ಮತ್ತು ಇಂದ್ರಿಯಗಳನ್ನು ವಿದ್ಯಾರ್ಥಿಯು ತನ್ನ ಗುರುಕುಲದ ಚಟುವಟಿಕೆಗಳಲ್ಲಿ ಶ್ರದ್ಧೆಯಿಂದಲೂ ಉತ್ಸಾಹದಿಂದಲೂ ಪ್ರವರ್ತಿಸುವಹಾಗೆ ಮಾಡಿ ಅವುಗಳಲ್ಲಿ ತಾನು ತನ್ಮಯನಾಗುವುದಕ್ಕೆ ಬೇಕಾದ ಇಂದ್ರಿಯ ಪ್ರವೃತ್ತಿ ಮತ್ತು ಮನಸ್ಸಿನ ಬಲವನ್ನು ಪಡೆಯುವುದೇ "ಬ್ರಹ್ಮಚರ್ಯ" ಎಂಬುದು ನಾಲ್ಕನೇ ಅಭಿಪ್ರಾಯ. ಇಷ್ಟೇ ಅಲ್ಲ; ಮನುಷ್ಯನು ಹುಟ್ಟಿದಂದಿನಿಂದ ಸಮಾಜದಲ್ಲಿ ತನ್ನ ಜೀವನಯಾತ್ರೆಯನ್ನು ಉತ್ತಮವಾಗಿ ಅಂದರೆ ಸಾತ್ವಿಕನಾಗಿ ನಡೆಸಲು ನಮ್ಮ ಪ್ರಾಚೀನರು ಅವನ ಬಾಳನ್ನು ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂಬ ನಾಲ್ಕು ಆಶ್ರಮಗಳಾಗಿ ವಿಭಾಗಿಸಿದರು. ಆದರೆ ಬ್ರಹ್ಮಚರ್ಯ ಶಿಕ್ಷಣವು ಮಿಕ್ಕ ಆಶ್ರಮಗಳಲ್ಲಿ ನಡೆಸಬೇಕಾದ ಕರ್ತವ್ಯ ಧರ್ಮಗಳನ್ನು ಚೆನ್ನಾಗಿ ನಡೆಸಲು ಅವನಿಗೆ ಯೋಗ್ಯತೆಯನ್ನು ಕೊಡತಕ್ಕದ್ದಾಗಿರಬೇಕು, ಅಂದರೇನು? ಒಂದು ಕಟ್ಟಡಕ್ಕೆ ತಳಪಾಯವು ಎಷ್ಟು ಅವಶ್ಯಕವೋ, ಬ್ರಹ್ಮಚರ್ಯ ಶಿಕ್ಷಣವು ಮನುಷ್ಯನು ಮಿಕ್ಕ ಮೂರು ಆಶ್ರಮಗಳಲ್ಲಿ ತನ್ನ ಧ್ಯೇಯಗಳನ್ನು ಸಾಧಿಸಲು ಅಷ್ಟು ಅವಶ್ಯಕ. ಹೀಗೆ ಬ್ರಹ್ಮಚರ್ಯ ಶಿಕ್ಷಣವು ಎಲ್ಲಾ ಆಶ್ರಮಧರ್ಮಗಳಿಗೂ ಅಸ್ತಿಭಾರದೋಪಾದಿಯಲ್ಲಿರಬೇಕೆಂಬುದು ಮತ್ತೊಂದು ಅಭಿಪ್ರಾಯವು

ಹೊಸೆಯುದಾಗಿ. ತನಗೂ ಜಗತ್ತಿಗೂ ಕಾರಣನಾಗಿ ಸತ್ಯಸ್ವರೂಪನಾದ ಬ್ರಹ್ಮನನ್ನು ವಿದ್ಯಾರ್ಥಿಯು ದೊಡ್ಡವನಾದಮೇಲೆ ಕ್ರಮೇಣ ಸಾಕ್ಷಾತ್ಕರಿಸುವುದಕ್ಕಾಗಿ, ಈಗ ವಿದ್ಯಾರ್ಥಿ ದೆಸೆಯಲ್ಲೇ ಕೈಗೊಳ್ಳಬೇಕಾದ ಆಧ್ಯಾತ್ಮಿಕ ಮತ್ತು ನೈತಿಕ ಅಭ್ಯಾಸಗಳೇ ಬ್ರಹ್ಮಚರ್ಯವೆಂದು ವಿವರಿಸಿರುವರು. ಬ್ರಹ್ಮಚರ್ಯ ಪದದ ಈ ವಿವಿಧ ಅರ್ಥಗಳು ಒಂದಕ್ಕೊಂದು ವಿರೋಧವಾಗಿಲ್ಲ; ಅವರೆ ಒಂದು ಇನ್ನೊಂದನ್ನು ಸಾಧಿಸಿ ಕೊಡುತ್ತದೆ.

## ಬ್ರಹ್ಮಚರ್ಯ ಶಿಕ್ಷಣದ ಅಂತಸ್ತುಗಳು

ಈಗಿನ ಶಾಲಾ ಶಿಕ್ಷಣ ಕ್ರಮದಲ್ಲಿ ಭಾಷಾಜ್ಞಾನ, ಪ್ರಪಂಚಜ್ಞಾನ ಮತ್ತು ಅಲ್ಪಸ್ವಲ್ಪ ಪೌರ ನೀತಿಗೆ ಸಂಬಂಧಪಟ್ಟ ಶಿಕ್ಷಣಗಳಿಗೆ ಮಾತ್ರ ಅವಕಾಶವಿದೆ; ಆದರೆ ಶಾಸ್ತ್ರಜ್ಞಾನ, ವೃತ್ತಿಶಿಕ್ಷಣ ಮತ್ತು ಬ್ರಹ್ಮಚರ್ಯಶಿಕ್ಷಣ ಇವುಗಳಿಗೆ ಮಾತ್ರ ಸ್ಥಾನವು ಇರುವುದಿಲ್ಲ. ಆದುದರಿಂದ ನಮ್ಮ ಮಾಧ್ಯಮಿಕಶಾಲೆಗಳಲ್ಲಿಯೂ, ಪ್ರೌಢ ಶಾಲೆಗಳಲ್ಲಿಯೂ ಮತ್ತು ಕಾಲೇಜುಗಳಲ್ಲಿಯೂ ಬ್ರಹ್ಮಚರ್ಯ ಶಿಕ್ಷಣವನ್ನು ಕೊಡಲೇ ಬೇಕು; ಆದರೆ ಈ ಕಾಲದಲ್ಲಿ ಬ್ರಹ್ಮಚರ್ಯ ಶಿಕ್ಷಣದ ಸ್ವರೂಪವಾವುದು? ಬಾಲಕನು ಪಾಠಶಾಲೆಯನ್ನು ಸೇರಿ ವಿದ್ಯಾರ್ಥಿಯಾಗಿ ತನ್ನ ವಿದ್ಯಾಭ್ಯಾಸವು ಮುಗಿಯುವವರೆಗೂ ಮದುವೆಯನ್ನು ಮಾಡಿಕೊಳ್ಳದೆ, ಗುರುವಿನಲ್ಲಿ ಭಕ್ತಿ ಇಟ್ಟು, ಯುವಕನಾದವನು ಯಾವ ವಿಧವಾದ ಅಸತ್ಯ ವರ್ತನೆ ಮತ್ತು ದುಷ್ಟಸಹವಾಸವನ್ನೂ ಮಾಡದೆ ಬ್ರಹ್ಮಚರ್ಯವ್ರತವನ್ನು ಕೈಗೊಂಡು, ತನ್ನ ಮನಸ್ಸಿನಲ್ಲಿರುವ ರಜೋತಮೋಗುಣಗಳಿಂದುಂಟಾಗುವ ದೋಷಗಳನ್ನು ತೊಳೆಯುತ್ತಾ, ಸತ್ವಗುಣ ಭಾವನೆಗಳನ್ನು ಬೆಳೆಸುತ್ತಾ, ತನ್ನ ಇಂದ್ರಿಯಗಳನ್ನು ಸ್ವೇಚ್ಛೆಯಾಗಿ ಪ್ರವರ್ತಿಸದ ಹಾಗೆ ಹತೋಟಿಯಲ್ಲಿಡುತ್ತಾ, ಪಾಠಶಾಲೆಯ ಮತ್ತು ಪಾಠೇತರ ಚಟುವಟಿಕೆಗಳಲ್ಲಿ ಸ್ವಾರ್ಥತೆಯಿಲ್ಲದೆ ತನ್ನ ಶಾಲೆಯ ಸಹಪಾಠಿಗಳೊಡನೆ ಪ್ರೀತಿಯಿಂದ ಕಲೆತು ಶ್ರದ್ಧೆಯಿಂದಲೂ ಮತ್ತು ಉತ್ಸಾಹದಿಂದಲೂ ಭಾಗವಹಿಸುತ್ತಾ ಮತ್ತು ಮುಂದೆ ತಾನು ನಡೆಸಬೇಕಾದ ಗೃಹಸ್ಥ, ವಾನಪ್ರಸ್ಥ, ಸನ್ಯಾಸಾಶ್ರಮಗಳನ್ನು ಉತ್ತಮವಾಗಿ ನಡೆಸಲು ಸಹಾಯಕವಾದ ಗುಣಗಳನ್ನು ಈಗಲೇ ಅವಲಂಬಿಸುತ್ತಾ, ಕ್ರಮೇಣ ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯಲು ಚಿಕ್ಕವಯಸ್ಸಿನಲ್ಲಿಯೇ ಮಾಡಬೇಕಾದ ಯೋಗಾಭ್ಯಾಸಗಳನ್ನು ದಿನಚರಿಯಲ್ಲಿ ನಡೆಸುತ್ತಾ ಇರುವ ಬಹುಮುಖವಾದ ಶಿಕ್ಷಣವನ್ನೇ ಬ್ರಹ್ಮಚರ್ಯ ಶಿಕ್ಷಣವೆಂದು ತಿಳಿಯಬೇಕು. ಈ ಬ್ರಹ್ಮಚರ್ಯ ಶಿಕ್ಷಣದ ಅಂತಸ್ತುಗಳಾವುವು? ಶರೀರೇಂದ್ರಿಯಗಳನ್ನು ಮನಸ್ಸಿನಿಂದ ಹತೋಟಿಯಲ್ಲಿಡುವುದು ಮೊದಲನೆಯದು; ಬುದ್ಧಿಯಿಂದ ಶರೀರೇಂದ್ರಿಯ ಮನಸ್ಸುಗಳನ್ನು ಹತೋಟಿಯಲ್ಲಿಡುವುದು ಎರಡನೆಯದು; ಮತ್ತು ಆತ್ಮಜ್ಞಾನವು ಶರೀರೇಂದ್ರಿಯ ಮನೋಬುದ್ಧಿಗಳನ್ನು ಹತೋಟಿಯಲ್ಲಿಡುವುದು ಮೂರನೆಯದು. ಬ್ರಹ್ಮಚರ್ಯ ಶಿಕ್ಷಣವಿದ್ಯಾರ್ಥಿ

ವಿದ್ಯಾರ್ಥಿಯು ತನ್ನ ಇಂದ್ರಿಯಗಳನ್ನು ಹತೋಟಿಯಲ್ಲಿಡುತ್ತಾನೆ; ತನ್ಮೂಲಕ ಮನಸ್ಸನ್ನು ಸತ್ವಗುಣದಿಂದ ಕೂಡಿದ್ದಾಗಿ ಮಾಡುತ್ತಾನೆ; ತನ್ಮೂಲಕ ಬುದ್ಧಿಯಲ್ಲಿ ವಿವೇಕ ಜ್ಞಾನವನ್ನು ಪಡೆಯುತ್ತಾನೆ; ತನ್ಮೂಲಕ ಈಶ್ವರನ ಕೃಪೆಯಿಂದ ಆತ್ಮ ಪರಮಾತ್ಮರನ್ನು ಸಾಕ್ಷಾತ್ಕರಿಸಬಲ್ಲನು. ಇಷ್ಟೇ ಅಲ್ಲ ಈ ವಿಧವಾದ ಬ್ರಹ್ಮಚರ್ಯ ಶಿಕ್ಷಣದಿಂದ ವಿದ್ಯಾರ್ಥಿಯು ದೊಡ್ಡವನಾದಮೇಲೆ ತೇಜಸ್ವಿಯಾಗಿ ಪ್ರತಿಷ್ಠೆಯನ್ನು ಗಳಿಸಿ ಲೋಕದ ಜನರನ್ನು ಆಕರ್ಷಿಸುವ ಶಕ್ತಿಯನ್ನು ಪಡೆದು ಸಮಾಜದಲ್ಲಿ ಮುಂದಾಳಾಗಿ ನಾಯಕನಾಗುವನು; ಅಹಂಕಾರವೂ ಇಲ್ಲದೆ, ದೇಶವೇ ಭಗವಂತನ ಅವತಾರ ಎಂಬ ಭಾವನೆಯಿಂದ ಯಥಾರ್ಥ ದೇಶಪ್ರೇಮವನ್ನು ಪಡೆದು, ಭಾರತಮಾತೆಯ ಸೇವೆಯನ್ನು ತಾನು ಸಾಯುವವರೆಗೂ ಮಾಡುತ್ತಲೇ ಇರುವನು. ಇಂಥಾ ಬ್ರಹ್ಮಚರ್ಯ ಶಿಕ್ಷಣವನ್ನು ಪಡೆದ ದೇಶಸೇವಕರಿಂದ ದೇಶಕ್ಕೆ ಬೇಕಾದ ಶ್ರೇಯಸ್ಸುಂಟಾಗುತ್ತದೆ. ಆದ್ದರಿಂದ ಸ್ವತಂತ್ರ ಭಾರತದಲ್ಲಿರುವ ಪ್ರತಿಯೊಬ್ಬ ಮನುಷ್ಯನೂ ಬ್ರಹ್ಮಸ್ಥಿತಿಯನ್ನು ಅವನ ಕೊನೆಯುಸಿರು ತನಕ ಸ್ಥಿತಿಯನ್ನಾದರೂ ಪಡೆಯುವಂತಾಗಲು ಸಹಾಯ ಮಾಡುವುದೇ ನಮ್ಮ ಸ್ವರಾಜ್ಯ ಸರ್ಕಾರದಿಂದ ಏರ್ಪಡಿಸಲ್ಪಡುವ ರಾಷ್ಟ್ರೀಯ ಶಿಕ್ಷಣದ ಗುರಿಯಾಗಬೇಕು.

## ಶಾಲೆಗಳಲ್ಲಿ ಬ್ರಹ್ಮಚರ್ಯ ಶಿಕ್ಷಣವನ್ನು ಕೊಡಲು ಸಲಹೆಗಳು

ವಿದ್ಯಾರ್ಥಿಯು ಇಂದ್ರಿಯಗಳನ್ನು ಹತೋಟಿಗೆ ತರುವ ಬ್ರಹ್ಮಚರ್ಯವನ್ನು ಮನಸ್ಸಿನ ಬ್ರಹ್ಮಚರ್ಯದಿಂದ ಸಾಧಿಸಬಹುದು; ಮನಸ್ಸನ್ನು ಪೂರ್ಣವಾಗಿ ಹತೋಟಿಗೆ ತರುವ ಬ್ರಹ್ಮಚರ್ಯವನ್ನು ಅರಿಷಡ್ವರ್ಗ ಜಯವೆಂಬ ಬುದ್ಧಿಯ ಬ್ರಹ್ಮಚರ್ಯದಿಂದ ಸಾಧಿಸಬಹುದು; ಆದರೆ ಬುದ್ಧಿ ಬ್ರಹ್ಮಚರ್ಯವು ಸಂಪೂರ್ಣವಾಗಬೇಕಾದರೆ ಅವನು ಆತ್ಮಜ್ಞಾನದಲ್ಲಿ ಶ್ರದ್ಧೆಯನ್ನಿಟ್ಟು ಆತ್ಮ ಶಕ್ತಿಯಿಂದ ಬುದ್ಧಿಯಲ್ಲಿ ಅಡಗಿರುವ ಅಹಂಕಾರ ಮಮಕಾರಗಳನ್ನು ನಾಶಮಾಡಬೇಕು. ಇವನಲ್ಲಿ ಇರುವ ಶತ್ರುಗಳೂ ಅಹಂಕಾರ ಮಮಕಾರಗಳೂ ನಾಶವಾದರೆ ಎಲ್ಲಾ ಕುಟುಂಬಗಳ ಮತ್ತು ದೇಶದ ಕಾರ್ಯಗಳಲ್ಲೂ ತಿಳುವು ಮತ್ತು ದಕ್ಷತೆಯು ಬಳಕೆಗೆ ಬರುವುದು; ಆಗ ಎಲ್ಲೆಲ್ಲಿಯೂ ಶಾಂತಿಯೂ ಸಮೃದ್ಧಿಯೂ ಉಂಟಾಗುತ್ತವೆ. ಆದುದರಿಂದ ವಿದ್ಯಾರ್ಥಿಗಳು ಮಾತ್ರವೇ ಅಲ್ಲದೆ ಪ್ರತಿಯೊಬ್ಬ ಭಾರತೀಯನು ಗಂಡಸೂ ಹೆಂಗಸೂ ಕಾಮ ಕ್ರೋಧಾದಿಗಳನ್ನು ಜಯಿಸುವುದಕ್ಕಾಗಿ ಬ್ರಹ್ಮಚರ್ಯ ಶಿಕ್ಷಣವನ್ನು ಪಡೆಯಬೇಕು. ವಿದ್ಯಾರ್ಥಿಗಳಲ್ಲೂ ಜನತೆಯಲ್ಲೂ ಉತ್ತಮ ಜೀವನವನ್ನುಂಟು ಮಾಡುವ ಕೆಳಗಿನ ಬ್ರಹ್ಮಚರ್ಯ ಶಿಕ್ಷಣದ ಪ್ರಯೋಗಗಳನ್ನು ನಡೆಸುವುದು ಒಳ್ಳೆಯದು. (೧) ಬಾಲಕರಿಗೆ ಮನೆಗಳಲ್ಲಿ ಸಾತ್ವಿಕ ಸಹವಾಸದ ಸದಾಚಾರಗಳನ್ನು ಪುನಃ ಬಳಕೆಗೆ ತರಬೇಕು. (೨) ಶಾಲೆಯ ಪಾಠ ಪ್ರವಚನಗಳಲ್ಲೂ ಮತ್ತು ಪಾಠೇತರ ಚಟುವಟಿಕೆಗಳಲ್ಲೂ ಬ್ರಹ್ಮಚರ್ಯ ಅಭ್ಯಾಸಗಳ ಪ್ರಾಮುಖ್ಯತೆಗಳನ್ನು ವಿದ್ಯಾರ್ಥಿಗಳ ಅನುಭವಕ್ಕೆ ತರಬೇಕು. (೩) ಬ್ರಹ್ಮಚರ್ಯವನ್ನು ಅನುಷ್ಠಿಸುತ್ತಿರುವ ಮಹನೀಯರ ಸಹವಾಸವನ್ನು

ಶ್ರೀ ನವಭಾರತ ಆಶ್ರಮ ಗೌರಿಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

(ಮಾಲೆ—ಮೂರು)

## ರಾಷ್ಟ್ರೀಯ ಹಿಂದೂಮತವೆಂದರೇನು? ಅದು ಆಧುನಿಕ ಭಾರತಕ್ಕೂ ಲೋಕಕ್ಕೂ ಹೇಗೆ ಕಲ್ಯಾಣವನ್ನುಂಟುಮಾಡಿದೆ?

### ರಾಷ್ಟ್ರೀಯ ಹಿಂದೂ ಮತವೆಂದರೇನು?

ಭಾರತದಲ್ಲಿ ವ್ಯಕ್ತಿಯ ಮತ್ತು ಸಮಾಜದ ಐಹಿಕ ಕಲ್ಯಾಣವನ್ನೂ ಆಮುಷ್ಮಿಕ ಶ್ರೇಯಸ್ಸನ್ನೂ ಉಂಟುಮಾಡುತ್ತಿರುವ ಧರ್ಮವೇ "ಸನಾತನ ಧರ್ಮ." ಭಗವಂತನೇ ಸನಾತನನು; ಆತನನ್ನು ಹೊಂದಲು ಅನುಕೂಲವಾದ ಧರ್ಮವೂ ಸನಾತನ ಧರ್ಮವೇ ಆಗಿದೆ. ಈ ಉತ್ತಮ ಮತ್ತು ಪವಿತ್ರ ಧರ್ಮಗಳಿಂದ ಸತ್ಯ ಜ್ಞಾನವು ಕ್ರಮೇಣ ಉಂಟಾಗುವುದರಿಂದ ಈ ಧರ್ಮವನ್ನು "ಆಸ್ತಿಕ್ಯ ಧರ್ಮ" ಎಂದೂ ಕರೆದಿದ್ದಾರೆ. ಯಾರು ಮೃಗಸ್ಥಿತಿಯನ್ನು ತ್ಯಜಿಸಿ, ಉತ್ತಮ ಮನುಷ್ಯರಾಗಿ, ಕ್ರಮೇಣ ಮನುಷ್ಯಸ್ಥಿತಿಯ ಎಲ್ಲೆಯನ್ನು ದಾಟಿ ದೈವಿಕ ಅಥವ ಮಹಾತ್ಮರ ಸ್ಥಿತಿಯನ್ನು ಹೊಂದಲು ಧರ್ಮ, ಮೋಕ್ಷ ಪುರುಷಾರ್ಥಗಳಲ್ಲಿ ನಿರತರಾಗಿರುವವರೋ ಅವರೇ ಆರ್ಯರು; ಅವರು ಅವಲಂಬಿಸಿರುವ ಧರ್ಮಾಚರಣೆಯೇ "ಆರ್ಯ ಧರ್ಮ." ಈ ಶ್ರೇಯಸ್ಸಾಧನ ಧರ್ಮಗಳನ್ನು ವೇದ ಶಾಸ್ತ್ರಗಳಿಂದಲೇ ತಿಳಿಯಬೇಕಾಗಿರುವುದರಿಂದ ಇವುಗಳೇ "ವೈದಿಕ ಧರ್ಮ" ಎಂದು ಹೇಳಬೇಕಾಗಿವೆ. ಈ ಸನಾತನ ಧರ್ಮ, ಆಸ್ತಿಕ ಧರ್ಮ, ಆರ್ಯ ಧರ್ಮ, ಮತ್ತು ವೈದಿಕ ಧರ್ಮವನ್ನೇ ಈಗ ಎಲ್ಲರೂ ವಿಶಾಲ ದೃಷ್ಟಿಯಲ್ಲಿ "ಭಾರತೀಯ ಸಂಸ್ಕೃತಿ" ಎಂದೂ ಮತ್ತು ಸಂಕುಚಿತ ದೃಷ್ಟಿಯಲ್ಲಿ "ಹಿಂದೂ ಮತ" ವೆಂದೂ ಕರೆಯುತ್ತಿರುವರು. ಈ ಸನಾತನ ಧರ್ಮವನ್ನು ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರವೆಂಬ ಪ್ರಸ್ಥಾನತ್ರಯದಿಂದಲೂ, ದರ್ಶನಗಳಿಂದಲೂ, ಭಕ್ತರ ಗಾನಗಳಿಂದಲೂ ತಿಳಿಯಬೇಕಾಗಿದೆ. ಆದುದರಿಂದ ಪೂರ್ವಕಾಲದಲ್ಲಿ ಶ್ರೀ ಶಂಕರಾಚಾರ್ಯರು, ಶ್ರೀ ರಾಮಾನುಜಾಚಾರ್ಯರು, ಶ್ರೀ ಮಧ್ವಾಚಾರ್ಯರು ಇವರೇ ಮೊದಲಾದ ಅನೇಕ ಆಚಾರ್ಯರುಗಳು ಈ ಪ್ರಸ್ಥಾನತ್ರಯಗಳಿಗೆ ಬೇರೆ ಬೇರೆ ವ್ಯಾಖ್ಯಾನಗಳನ್ನು ಬರೆದು ಲೋಕಕ್ಕೆ ಉಪಕಾರವನ್ನು ಮಾಡಿರುವರು.

ಕ್ರಿ. ಶ. ಹತ್ತೊಂಬತ್ತನೇ ಶತಮಾನದ ಆದಿಯಿಂದ ಇಲ್ಲಿಯವರೆಗೆ ಹಿಂದೂ ಮತದ ಪ್ರಚಾರದಲ್ಲಿ ಒಂದು ಹೊಸ ಚಳುವಳಿಯು ನಡೆಯುತ್ತಲೇ ಇರುವುದು. ಈ ಚಳುವಳಿಯನ್ನು ಶ್ರೀ ರಾಜಾರಾಮ ಮೋಹನರಾಯರು ಆರಂಭಿಸಿದರು ; ಆಮೇಲೆ ಕ್ರಮವಾಗಿ ಅದನ್ನು ಮಹರ್ಷಿ ದೇವೇಂದ್ರನಾಥ ಠಾಕೂರರು, ಶ್ರೀ ಕೇಶವ ಚಂದ್ರ ಸೇನರು, ನ್ಯಾಯಾಧಿಪತಿ ಶ್ರೀ ರಾನಡೆಯವರು, ಸ್ವಾಮಿ ದಯಾನಂದ ಸರಸ್ವತಿಯವರು, ಶ್ರೀಮತಿ ಅನಿಬೆಸಾಂಟರು, ಶ್ರೀ ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಶ್ರೀ ಅರವಿಂದ ಬಾಬೂರವರು, ಶ್ರೀ ರವೀಂದ್ರನಾಥ ಠಾಕೂರರು ಪರಿಷ್ಕರಿಸಿದರು. ಕೊನೆಯಲ್ಲಿ ಮಹಾತ್ಮ ಗಾಂಧೀಯವರು, ಈ ಆಧ್ಯಾತ್ಮ ಚಳುವಳಿಗೆ ಪರಮಾಚಾರ್ಯರಾಗಿದ್ದು ಮುಖ್ಯವಾಗಿ ಭಾರತದ ಎರಡನೆಯದಾಗಿ ಪ್ರಪಂಚದ ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ, ನೈತಿಕ ಮತ್ತು ಶಿಕ್ಷಣ ಕ್ರಮದ ಸಮಸ್ಯೆಗಳನ್ನು ಪರಿಹರಿಸಲು ಅಮೋಘವಾದ ಉಪಾಯಗಳನ್ನು ಅವರ ಭಾಷಣಗಳಲ್ಲೂ, ಲೇಖನಗಳಲ್ಲೂ ತಿಳಿಯಪಡಿಸಿ, ಆಚರಿಸಿ ತೋರಿಸಿರುವರು. ಇವರ ಕೆಲವು ಅಭಿಪ್ರಾಯಗಳನ್ನೇ ಶ್ರೀ ಎಸ್. ರಾಧಾಕೃಷ್ಣನ್‌ರವರೂ ಮತ್ತು ಪಂಡಿತ ಜವಹರಲಾಲ್ ನೆಹ್ರೂರವರೂ ಈಗ ಪ್ರಪಂಚದ ನಾಗರೀಕ ಜನಾಂಗಗಳ ಜನರಿಗೆಲ್ಲಾ ವಿವರವಾಗಿ ಉಪದೇಶ ಮಾಡುತ್ತಿರುವರು. ಈ ಮಹಾತ್ಮರು ತಾವು ಹುಟ್ಟಿಬೆಳೆದ ಕಾಲದಲ್ಲಿ ಆಚರಣೆಯಲ್ಲಿದ್ದ ಕೋಮುವಾರು ಹಿಂದೂ ಮತದ ಭಾವನೆಗಳಿಂದ ಮತ್ತು ಪದ್ಧತಿಗಳಿಂದ ಮಾತ್ರ ತೃಪ್ತರಾಗಲಿಲ್ಲ. ಇವರು ಪೂರ್ವಕಾಲದಿಂದಲೂ ಪ್ರಚಾರದಲ್ಲಿರುವ ಭಾರತೀಯ ಸಂಸ್ಕೃತಿಯ ಉತ್ಕೃಷ್ಟ ಗ್ರಂಥಗಳನ್ನು ತಾವೇ ವ್ಯಾಸಂಗಮಾಡಿ, ಅವುಗಳಲ್ಲಿರುವ ಸಾಧನೆಗಳನ್ನು ಅಭ್ಯಾಸ ಮಾಡಿ, ಆಧ್ಯಾತ್ಮ ಅನುಭವಗಳನ್ನು ಪಡೆದು, ಅವನ್ನು ಆಧುನಿಕ ಪಶ್ಚಿಮ ದೇಶಗಳ ನಾಗರೀಕತೆಗೆ ಹೋಲಿಸಿ, ನಮ್ಮ ದೇಶದ ಹಳೆಯ ಕಾಲದ ಅಭಿಪ್ರಾಯಗಳಿಗೆ ಪುನರ್ಜನ್ಮವನ್ನುಂಟುಮಾಡಿ, ಅವುಗಳ ಪ್ರಚಾರದಿಂದ ಭಾರತೀಯರಲ್ಲಿ ವಿವೇಕವನ್ನೂ ಉತ್ಸಾಹವನ್ನೂ ಐಕಮತ್ಯವನ್ನೂ ಬೆಳಸಿ, ಭಾರತವು ಸ್ವಾತಂತ್ರ್ಯವನ್ನು ಪಡೆಯುವ ಮಾರ್ಗವನ್ನು ತೋರಿಸಿಕೊಟ್ಟರು. ಇಷ್ಟೇ ಅಲ್ಲ, ಈ ಮಹನೀಯರು ಹಿಂದೂಮತದ ಎಲ್ಲಾ ಪವಿತ್ರ ಗ್ರಂಥಗಳನ್ನೂ, ಎಲ್ಲಾ ಶಾಖೆಯವರ ವ್ಯಾಖ್ಯಾನಗಳನ್ನೂ ತಿಳಿದು ಅವುಗಳಲ್ಲಿರುವ ಅಭಿಪ್ರಾಯಗಳನ್ನು ಪಶ್ಚಿಮ ದೇಶದ ವಿಜ್ಞಾನ ಶಾಸ್ತ್ರಜ್ಞರ ಮತ್ತು ತತ್ತ್ವ ಶಾಸ್ತ್ರಜ್ಞರ ತೀರ್ಮಾನಗಳೊಡನೆಯೂ ಮತ್ತು ಸ್ವಂತ ಯೋಗಾಭ್ಯಾಸದಿಂದುಂಟಾದ ಅನುಭವಗಳೊಡನೆಯೂ ಹೋಲಿಸಿ ಭಾರತೀಯರೆಲ್ಲರಿಗೂ ಮತ್ತು ಇತರ ಜನಾಂಗಗಳ ಜನರಿಗೂ ಹಿಂದೂ ಮತದ ಸಾರವಾದ ತತ್ವಹಿತ ಪುರುಷಾರ್ಥಗಳನ್ನು ಉಪದೇಶ ಮಾಡಿದರು. ಹೀಗೆ ಇವರುಗಳಿಂದ ನಾನಾ ಪ್ರಕಾರವಾಗಿ ಬೋಧಿಸಲ್ಪಟ್ಟ ಪೂರ್ವಕಾಲದ ಋಷಿಗಳ, ಆಚಾರ್ಯರುಗಳ, ಭಕ್ತರುಗಳ, ಮಹಾತ್ಮರ ದಿವ್ಯ ಸಂದೇಶಗಳ ಪ್ರವಾಹವೇ "ರಾಷ್ಟ್ರೀಯ ಹಿಂದೂ ಮತ" ಎಂದು ಕರೆಯಲ್ಪಡುತ್ತದೆ. ಈ ಉಜ್ವಲ ಆಧುನಿಕ ರಾಷ್ಟ್ರೀಯ

ಹಿಂದೂ ಮತವು ಮುಖ್ಯವಾಗಿ ಭಾರತ ದೇಶದ ಎಲ್ಲಾ ಕೋಮಿನವರ ಸ್ತ್ರೀ, ಪುರುಷರ ಶ್ರೇಯಸ್ಸನ್ನೂ ಮತ್ತು ಎರಡನೆಯದಾಗಿ ಪ್ರಪಂಚದ ಎಲ್ಲಾ ಜನಾಂಗದವರ ಕಲ್ಯಾಣವನ್ನೂ ಸಾಧಿಸಲು ನೇರವಾಗಿ ಪ್ರಯತ್ನ ಮಾಡಿದೆ ಮತ್ತು ಈಗಲೂ ಮಾಡುತ್ತಿದೆ.

## ಭಾರತೀಯ ಸಂಸ್ಕೃತಿಗೆ ಗೌರವವನ್ನು ತಂದಿದೆ.

ಕ್ರಿ. ಶ. ಹದಿನೇಳು ಹದಿನೆಂಟನೇ ಶತಮಾನಗಳಲ್ಲಿ ಭಾರತ ದೇಶದ ಬಹು ಭಾಗಗಳನ್ನು ಜಯಿಸಿ ಆಳಿದ ಪೋರ್ಚುಗೀಸರು, ಡಚ್ಚರು, ಫ್ರೆಂಚರು ಮತ್ತು ಇಂಗ್ಲೀಷಿನವರು ಭಾರತೀಯರು ಅನಾಗರೀಕರೆಂದು ತಮ್ಮ ದೇಶಗಳಲ್ಲೆಲ್ಲಾ ಬಹು ಪ್ರಚಾರ ಮಾಡಿದರು; ಏಕೆಂದರೆ ಆ ಕಾಲದಲ್ಲಿ ಹಿಂದೂಗಳು ಸ್ವಕೀಯ ಜಾತಿ ಕೋಮುಗಳಲ್ಲಿ ಮಾತ್ರ ಅಭಿಮಾನ, ಇತರ ಜಾತಿ ಕೋಮುಗಳಲ್ಲಿ ಮಾತ್ಸರ್ಯ ಮತ್ತು ದ್ವೇಷ, ನಿಕೃಷ್ಟವಾದ ರೀತಿಯಲ್ಲಿ ವಿಸ್ತೃತ ಸ್ಪೃಶ್ಯ, ಕ್ರೂರ ಸತಿ ಸಂಪ್ರದಾಯ, ಮೂಢ ನಂಬಿಕೆಯಿಂದ ಕೂಡಿದ ದುರಾಚಾರಗಳು, ಕಾಲ್ಪನಿಕ ವ್ಯಕ್ತಿಗಳ ಪೂಜಾದಿಗಳು, ಕಟ್ಟುಕಥೆಗಳಲ್ಲಿ ನಂಬಿಕೆ ಮತ್ತು ಆಸಕ್ತಿ — ಇವೇ ಮೊದಲಾದ ಅನೇಕ ಕಾರ್ಯಕ್ರಮಗಳಲ್ಲಿ ನಿರತರಾಗಿದ್ದರು. ಆದರೆ ರಾಷ್ಟ್ರೀಯ ಹಿಂದೂಮತದ ಆಚಾರ್ಯರುಗಳು ಈಗ ಭಾರತೀಯ ಸಂಸ್ಕೃತಿಗೂ, ಹಿಂದೂ ಮತಕ್ಕೂ ಪ್ರಪಂಚದ ನಾಗರೀಕ ದೇಶಗಳಲ್ಲೆಲ್ಲಾ ವಿಶೇಷವಾದ ಗೌರವವನ್ನುಂಟುಮಾಡಿರುವರು. ಕಾರಣವೇನು ? ಇವರುಗಳು ಬೋಧಿಸಿರುವ ರಾಷ್ಟ್ರೀಯ ಹಿಂದೂ ಮತದ ತತ್ವಸಹಿತ ಪುರುಷಾರ್ಥಗಳ ಆಧಾರದ ಮೇಲೆ ಯುರೋಪಿಯನ್ನರೂ ಅಮೇರಿಕನ್ನರೂ ಈಗ ತಮ್ಮ ನಾಗರೀಕತೆಯನ್ನೇ ಪರಿಷ್ಕರಿಸಲು ಆಸಕ್ತರಾಗಿರುವರು. ಆದುದರಿಂದ ಇಲ್ಲಿಯವರೆಗೆ ಅವಮಾನದಿಂದ ತಲೆ ಬಾಗಿಸಿದ್ದ ಭಾರತೀಯರು ಈಗ ಅತ್ಯ ಗೌರವದಿಂದ ಪ್ರಪಂಚದ ಎಲ್ಲಾ ದೇಶಗಳಲ್ಲೂ ಉತ್ತಮ ಭಾಷಣಗಳನ್ನು ಮಾಡುತ್ತಾ ಹೆಚ್ಚಾದ ಗೌರವಗಳನ್ನು ಪಡೆಯುತ್ತಿರುವರು.

ಮತ್ತೊಂದು ವಿಚಾರ : ನಮ್ಮ ದೇಶದಲ್ಲಿ ಕೋಮುವಾರು ಭಾವನೆಯುಳ್ಳ ಕೂಡಿಷ್ಟ ಮತ ಪ್ರಚಾರಕರು ತಮ್ಮ ಕೋಮಿಗೆ ಸಂಬಂಧಪಟ್ಟ ತತ್ವಗಳಿಗೂ, ಪೌರಾಣಿಕ ಕಥೆಗಳಿಗೂ, ಮೂಢ ನಂಬಿಕೆಗಳಿಗೂ ಒಂದೇ ಬೆಲೆಯನ್ನು ಕೊಟ್ಟು, ಯೋಗ ಸಾಧನೆಗಳನ್ನೂ, ಯಜ್ಞ ಯಾಗಾದಿ ಕರ್ಮಗಳನ್ನೂ, ಆಗಮಕ್ಕೆ ಸಂಬಂಧಪಟ್ಟ ಪೂಜೆಗಳನ್ನೂ, ಒಂದೇ ಸಮನಾಗಿ ಆಚರಿಸಬೇಕೆಂದು ಬೋಧಿಸುತ್ತಿದ್ದರು. ಬ್ರಿಟಿಷರಿಂದ ಸ್ಥಾಪಿಸಲ್ಪಟ್ಟ ಪ್ರೌಢಶಾಲೆಗಳಲ್ಲೂ, ಕಾಲೇಜುಗಳಲ್ಲೂ, ವಿದ್ಯಾಭ್ಯಾಸವನ್ನು ಮುಗಿಸುತ್ತಿದ್ದ ಭಾರತೀಯ ವಿದ್ಯಾರ್ಥಿಗಳು ಈ ಅಭಿಪ್ರಾಯಗಳನ್ನು ಒಪ್ಪಲಿಲ್ಲ. ಆದುದರಿಂದ ವಿದ್ಯಾವಂತರಾದ ಹಿಂದೂಗಳು ತಮ್ಮ ಮತದಲ್ಲಿ ಶ್ರದ್ಧೆಯನ್ನು ಕಳೆದುಕೊಂಡು ನಾಸ್ತಿಕರಾಗಿ ಐರೋಪ್ಯ ಸ್ವೇಚ್ಛಾ ನಿರತ ನಾಗರೀಕತೆಯಲ್ಲೇ ಅಭಿಮಾನವನ್ನು ಬೆಳೆಸಿ ಐಹಿಕ ಪುರುಷಾರ್ಥ ಸಾಧನೆಗಳಲ್ಲಿ ಮಾತ್ರ ನಿರತರಾದರು. ಈ ಸಂದರ್ಭದಲ್ಲಿ ರಾಷ್ಟ್ರೀಯ

ಹಿಂದೂ ಮತ ಪ್ರಚಾರಕರು ತಮ್ಮ ವಿದ್ಯಾರ್ಥಿಗಳು ಕಲಿತಿದ್ದ ಇಂಗ್ಲೀಷ್ ಭಾಷೆಯಲ್ಲೇ ಅವರಿಗೆ ರಾಷ್ಟ್ರೀಯ ಹಿಂದೂ ಮತದ ಸಾರವಾದ ತತ್ವಹಿತ ಪುರುಷಾರ್ಥಗಳನ್ನು ತಿಳಿಯಪಡಿಸಿ ಅವರಲ್ಲಿ ವಿವೇಕ ಜ್ಞಾನವನ್ನುಂಟುಮಾಡಿದರು. ಎಲ್ಲಾ ಶ್ರೇಷ್ಠ ಮತಗಳಲ್ಲಿರುವ ಹಾಗೆಯೇ ಹಿಂದೂ ಮತದಲ್ಲಿಯೂ ಕೂಡ ಎರಡು ಭಾಗಗಳವೆ ಎಂದು ತಿಳಿಯಪಡಿಸಿದರು. ಅವು ಯಾವುವೆಂದರೆ :—೧) ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರ, ದರ್ಶನಗಳು ಮತ್ತು ಭಕ್ತರ ಗಾನಗಳು ಇವುಗಳಲ್ಲಿ ಬೋಧಿಸಿರುವ ಮುಖ್ಯವಾದ ಶಾಶ್ವತವಾದ ತತ್ವಹಿತ ಪುರುಷಾರ್ಥಗಳು ಮತ್ತು ೨) ಕಾಲ ಕಾಲಕ್ಕೆ ಬದಲಾಯಿಸುತ್ತಿರುವ ವರ್ಣಾಶ್ರಮ ಧರ್ಮ, ನೈಮಿತ್ತಿಕ ಕರ್ಮಗಳು, ಕೋಮುಗಳ ಆಚಾರಗಳು, ಪವಾಡಗಳ ಆಧಾರದ ಮೇಲೆ ನಿಂತಿರುವ ಮೂಢ ನಂಬಿಕೆಗಳು, ಪೌರಾಣಿಕ ಕಥೆಗಳು, ಮತ್ತು ಕಾಲ್ಪನಿಕ ವ್ಯಕ್ತಿಗಳ ಪೂಜೆಗಳು. ಆದರೆ ಹಿಂದೂ ಮತದ ಶಾಶ್ವತವಾದ ಅಮೋಘವಾದ ಮೊದಲನೆಯ ಮೂಲ ತತ್ವಹಿತ ಪುರುಷಾರ್ಥಗಳು ಇತರ ಮತಗಳ ತತ್ವಹಿತ ಪುರುಷಾರ್ಥಗಳಿಗಿಂತ ಉತ್ಕೃಷ್ಟವಾಗಿವೆ ಎಂಬ ವಿಷಯವನ್ನು ಸಾಧಿಸಿ ಭಾರತೀಯರೆಲ್ಲರಿಗೂ ಅವುಗಳನ್ನು ಹೃದಯಂಗಮವಾಗಿ ಬೋಧಿಸಿದವರು. ಇದರ ಪರಿಣಾಮವೇನು? ನಮ್ಮ ವಿದ್ಯಾವಂತರೂ, ಪದವೀಧರರೂ, ಈಗ ನಮ್ಮ ಸನಾತನ ಧರ್ಮಕ್ಕೂ ಒಟ್ಟು ಭಾರತೀಯ ಸಂಸ್ಕೃತಿಗೂ, ಪಶ್ಚಿಮದೇಶಗಳ ನಾಗರೀಕತೆಗಿಂತ ಹೆಚ್ಚು ಗೌರವವನ್ನು ಕೊಡುತ್ತಾ ಶ್ರದ್ಧೆಯಿಂದ ಅವುಗಳ ಪ್ರಚಾರ ಕಾರ್ಯದಲ್ಲಿ ನಿರತರಾಗಿರುವರು.

## ಹಿಂದೂಮತದ ಮೇಲೆ ಮಾಡಿರುವ ಆಕ್ಷೇಪಣೆಗಳು ನಿಜವಲ್ಲ.

ಪಶ್ಚಿಮ ದೇಶಗಳ ತಜ್ಞರು ಹಿಂದೂಮತದ ಮೇಲೆ ತಂದಿರುವ ಆಕ್ಷೇಪಣೆಗಳಾವುವು? ಜೀವನವು ದುಃಖಮಯವೆಂದು ವಾದಿಸಿ ಹಿಂದೂ ಮತವು ನಿರಾಶಾವಾದವನ್ನು (Pessimism) ತನ್ನ ಜನರ ಮುಂದಿಟ್ಟಿದೆ ಎಂಬುದು ಮೊದಲನೆಯದು. ಸುಖ ದುಃಖಗಳು ಅದೃಷ್ಟದಿಂದ ಅಂದರೆ ಕರ್ಮದಿಂದುಂಟಾಗುವುದರಿಂದ ಮಾನವನು ತನ್ನ ಶ್ರೇಯಸ್ಸಿಗೆ ಸ್ವಪ್ರಯತ್ನಗಳನ್ನು ಕೈಗೊಳ್ಳದೆ ದೇವತಾ ಪೂಜೆಗಳಿಂದ ಮಾತ್ರ ಅವರ ಪ್ರಸಾದವನ್ನು ಪಡೆಯಬೇಕು ಎಂದು ಹಿಂದೂ ಮತ ಹೇಳುತ್ತದೆ ಎಂಬುದು ಎರಡನೆಯದು. ಪೂರ್ವಕಾಲದ ಸ್ಮೃತ್ಯಾಚಾರಗಳನ್ನೇ ಈಗಲೂ ಅನುಷ್ಠಿಸಬೇಕೆಂದು ವೈದಿಕ ಮತವು ಒತ್ತಾಯಪಡಿಸುವುದರಿಂದ ಹಿಂದೂ ಮತವು ಈಗಿನಕಾಲದಲ್ಲಿ ಬಳಕೆಗೆ ತರಬೇಕಾದ ಸಮಾಜ ಸುಧಾರಣೆಗಳಿಗೆ ಅಡ್ಡಿಮಾಡುತ್ತಿದೆ ಎಂಬುದು ಮೂರನೆಯದು. ಹಿಂದೂ ಜ್ಞಾನಿಗಳು ಮೋಕ್ಷವನ್ನು ಪಡೆಯುವುದಕ್ಕಾಗಿ ವ್ಯಕ್ತಿಯ ಬಾಳಿಗೂ ಮತ್ತು ಸಮಾಜ ಜೀವನಕ್ಕೂ ಬೆಲೆಯನ್ನು ಕೊಡದೆ ಪಾರಲೌಕಿಕ ಸುಖದ

ಧ್ಯೇಯವನ್ನು ಮಾತ್ರ ಪಡೆದು ಏಕಾಂತ ಪ್ರದೇಶದಲ್ಲಿ ತಪಸ್ಸನ್ನು ಮಾಡಬೇಕೆಂದು ಆಶಿಸುತ್ತಾರೆ; ಆದುದರಿಂದ ಹಿಂದೂಮತದಲ್ಲಿ ಸಮಾಜಕ್ಕೆ ಕಲ್ಯಾಣವನ್ನುಂಟು ಮಾಡುವ ಸೇವಾಕಾರ್ಯಗಳಿಗೆ ಅವಕಾಶವೇ ಇಲ್ಲವೆಂಬುದು ನಾಲ್ಕನೆಯ ಆಕ್ಷೇಪಣೆ. ಆದರೆ ರಾಷ್ಟ್ರೀಯ ಹಿಂದೂಮತದ ತಜ್ಞರು ಈ ಆಕ್ಷೇಪಣೆಗಳೆಲ್ಲವೂ ತಪ್ಪು ಅಭಿಪ್ರಾಯಗಳಿಂದ ಕೂಡಿವೆ ಎಂಬುದನ್ನು ಅವರ ಭಾಷಣಗಳಲ್ಲೂ ಗ್ರಂಥಗಳಲ್ಲೂ ವಿಶದವಾಗಿ ವಿವರಿಸಿರುವರು.

ಸಮಾಜದಲ್ಲಿರುವವರೆಲ್ಲರೂ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳನ್ನೂ ಹೊಂದಲು ಪ್ರಯತ್ನಿಸಬೇಕು. ಆದರೆ ಧರ್ಮ ಮತ್ತು ಮೋಕ್ಷ ಪುರುಷಾರ್ಥಗಳು ಪ್ರಧಾನವಾಗಿದ್ದು ಅರ್ಥ ಮತ್ತು ಕಾಮ ಪುರುಷಾರ್ಥಗಳು ಅವಕ್ಕೆ ಅಂಗವಾಗಿರಬೇಕು ಎಂದು ಸನಾತನ ಧರ್ಮವು ಬೋಧಿಸುತ್ತದೆ. ಹೀಗಿರುವಾಗ ಹಿಂದೂಗಳನ್ನು ನಿರಾಶಾವಾದಿಗಳು ಎಂದು ಹೇಳುವುದು ನ್ಯಾಯವಲ್ಲ. ಯಾವ ಪ್ರಯೋಜನವನ್ನು ಪಡೆಯಬೇಕಾದರೂ ಅಧಿಷ್ಠಾನ(ವಸ್ತು), ಕರಣ(ಶರೀರ), ಚೇಷ್ಟಾ (ಪ್ರಾಣೇಂದ್ರಿಯ ಮನ ಬುದ್ಧಿ ವ್ಯಾಪಾರಗಳು), ಕರ್ತಾ (ಜೀವಾತ್ಮ) ಮತ್ತು ದೈವ (ಅಂತರ್ಯಾಮಿಯಾದ ದೈವ) ಎಂಬ ಐದು ಅಂಶಗಳು ಸೇರಬೇಕು ಎಂದು ಭಗವದ್ಗೀತೆಯ ಹದಿನೆಂಟನೇ ಅಧ್ಯಾಯದ ಹದಿನಾಲ್ಕನೇ ಶ್ಲೋಕದಲ್ಲಿ ಹೇಳಿದೆ. ಎಂದರೆ, ಮನುಷ್ಯನು ತನ್ನ ಶರೀರೇಂದ್ರಿಯ ಮನ ಪ್ರಾಣ ಬುದ್ಧಿಗಳ ಮೂಲಕ ಒಂದು ವಸ್ತುವಿನ ಮೇಲೆ ಕಾರ್ಯಮಾಡಬೇಕು; ಆ ಕಾರ್ಯವು ಜಯಪ್ರದವಾಗಬೇಕಾದರೆ ಅದಕ್ಕೆ ದೈವಸಹಾಯವೂ ಸೇರಬೇಕು ಎಂದು ಹೇಳಿದಹಾಗಾಯಿತು. ಆದುದರಿಂದ ಮಾನವನು ಈ ಜನ್ಮದಲ್ಲಿ ಅನುಕೂಲ್ಯಗಳನ್ನೂ ಮುಂದಿನ ಜನ್ಮದಲ್ಲಿ ಶ್ರೇಯಸ್ಸನ್ನೂ ಪಡೆಯಲು ಸ್ವಪ್ರಯತ್ನಗಳನ್ನು ಮಾಡಲೇಬೇಕು ಮತ್ತು ಅವುಗಳೊಡನೆ ದೈವದ ಪ್ರಸಾದವನ್ನು ಪಡೆಯಲು ಪ್ರಾರ್ಥನೆಯನ್ನೂ ಮಾಡಬೇಕೆಂದು ಬೋಧಿಸುತ್ತದೆಯೇ ವಿನಃ ಜೀವನವು ದುಃಖಮಯ, ಸ್ವಪ್ರಯತ್ನಗಳು ಬೇಡ, ದೈವದ ಪ್ರಸಾದಕ್ಕೆ ಮಾತ್ರ ಕಾಯುತ್ತಿರಬೇಕು ಎಂದು ಬೋಧಿಸುವುದಿಲ್ಲ.

ಹಿಂದೂ ಧರ್ಮಕ್ಕೆ ಆತ್ಮಸ್ವರೂಪವಾದ ಮೂಲ ತತ್ವಹಿತ ಪುರುಷಾರ್ಥಗಳು ಎಲ್ಲಾ ಕಾಲಗಳಲ್ಲಿಯೂ ಒಂದೇ ಆಗಿವೆ; ಆದರೆ ಅವುಗಳನ್ನು ಸಾಧಿಸಲು ಸಹಾಯ ಮಾಡುವ ಅದಕ್ಕೆ ಶರೀರವಾದ ವರ್ಣಾಶ್ರಮ ಧರ್ಮ, ಯಜ್ಞ ಯಾಗಾದಿ ನಿತ್ಯ ನೈಮಿತ್ತಿಕ ಕರ್ಮಗಳು ಮತ್ತು ಪೂಜಾದಿಗಳು ಕಾಲಕಾಲಕ್ಕೆ ಬದಲಾಯಿಸುತ್ತಾ ಕೋಮು ಕೋಮುಗಳಿಗೆ ಬೇರೆಯಾಗಿವೆ. ಆದುದರಿಂದ ಹಿಂದೂ ಮತದ ಶರೀರ ಧರ್ಮಗಳನ್ನು ಅದರ ಮೂಲ ತತ್ವಹಿತ ಪುರುಷಾರ್ಥಗಳಿಗನುಗುಣವಾಗಿ ಆಯಾ ಕಾಲಗಳಲ್ಲಿ ಬದಲಾವಣೆ ಮಾಡುತ್ತಾ ಸಮಾಜ ಸುಧಾರಣಾ ಕಾರ್ಯಗಳನ್ನು ಕೈಗೊಳ್ಳಲೇ ಬೇಕೆಂದು ರಾಷ್ಟ್ರೀಯ ಹಿಂದೂ ಮತದ ಆಚಾರ್ಯರುಗಳು ಬೋಧಿಸಿರುವುದು ಮಾತ್ರವಲ್ಲದೆ ಅವರು ಈ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿರುವರು.

ಈ ಮೋಹನರಾಯರು ಕ್ರೂರವಾದ ಸತಿ ಪದ್ಧತಿಯನ್ನು ತಪ್ಪಿಸಿದರು ; ಬಾಲ್ಯ ವಿವಾಹವನ್ನು ನಿಲ್ಲಿಸಿದರು ; ಹೆಂಗಸರಿಗೆ ವಿದ್ಯಾಭ್ಯಾಸವನ್ನು ಕೊಡುವ ಪದ್ಧತಿಯನ್ನು ಜಾರಿಗೆ ತಂದರು ; ಸಮುದ್ರಯಾನ, ವಿಧವಾ ವಿವಾಹ, ಏಕಪತ್ನೀವ್ರತ ಇವುಗಳಿಗೆ ವಿರೋಧವಾದ ಕಟ್ಟಳೆಗಳನ್ನು ಎದುರಿಸಿದರು ಮತ್ತು ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಲು ಸರ್ವ ಪ್ರಯತ್ನಗಳನ್ನೂ ಕೈಗೊಂಡಿರುವರು. ಇನ್ನೇನು, ಒಂದು ಜಾತಿಯವರಲ್ಲಿಯೇ ಸಹ ಪಙ್ಕ್ತಿ ಭೋಜನ, ಪ್ರತ್ಯೇಕ ಭಾವನೆಗಳು, ಮದುವೆಯ ಕ್ರಮಗಳು ಮತ್ತು ಇತರ ಜಾತಿಯವರಲ್ಲಿ ದ್ವೇಷಾಸೂಯೆಗಳು ಇವೆಲ್ಲಾ ಭಾರತೀಯ ಜನಾಂಗದ ಒಗ್ಗಟ್ಟಿಗೂ, ಸ್ವಾತಂತ್ರ್ಯಕ್ಕೂ, ಅಭಿವೃದ್ಧಿಗೂ ಧಕ್ಕೆ ತರುವುದೆಂದು ಒತ್ತಿ ಒತ್ತಿ ಹೇಳುವರು. ಈ ಪ್ರಕಾರದಲ್ಲಿ ರಾಷ್ಟ್ರೀಯ ಹಿಂದೂ ಮಹತ್ವ ಸಮಾಜದಲ್ಲಿ ಸುಧಾರಣೆಗಳನ್ನು ಆಚರಣೆಯಲ್ಲಿ ತರುತ್ತಲೇ ಇರುವುದು.

ಉಪನಿಷತ್ತುಗಳು, ಭಗವದ್ಗೀತೆ ಮತ್ತು ದರ್ಶನಗಳು ಮಾನವನು ಲೋಕದಲ್ಲಿ ನೊಂದು ಸರ್ವ ಮುಕ್ತಿ ಸ್ವಾರ್ಥಪರತೆಯನ್ನು ಕಡಿಮೆ ಮಾಡಲು ವೈರಾಗ್ಯವನ್ನು ಸ್ವೀಕರಿಸಿ, ಜಗತ್ತಿನ ಕಲ್ಯಾಣಕ್ಕೆ ಸದಾ ದುಡಿಯುತ್ತಾ, ಪ್ರಸ್ತುತ ಇದೇ ಜೀವನದಲ್ಲಿಯೇ ಜೀವನ್ಮುಕ್ತಿಯನ್ನು ಹೊಂದಿ, ಪರಮಾನಂದವನ್ನು ತಾವೂ ಅನುಭವಿಸಿ ಇತರರೂ ಅನುಭವಿಸಲು ಸಹಾಯ ಮಾಡಬೇಕು ಎಂದು ಅನೇಕ ಕಡೆ ಉಪದೇಶ ಮಾಡಿವೆ. ಬಾಲಗಂಗಾಧರ ತಿಲಕರು ಭಗವದ್ಗೀತಾ ಶ್ಲೋಕಗಳಿಗೆ "ಕರ್ಮಯೋಗ" ವಾಗಿ ವ್ಯಾಖ್ಯಾನ ಬರೆದಿದ್ದಾರೆ. ಮಹಾತ್ಮಾ ಗಾಂಧೀಯವರು ಭಾರತೀಯರಿಗೆ ಸಾಮಾಜ ಕಾರ್ಯಗಳಲ್ಲಿ ಕರ್ಮಯೋಗವನ್ನು ಹೇಗೆ ನಡೆಸಬೇಕೆಂಬುದನ್ನು ಕಾರ್ಯತಃ ತೋರಿಸಿ ಅವರನ್ನು ಅದೇ ರೀತಿಯಲ್ಲಿ ನಡೆಯುವ ಹಾಗೆ ಪ್ರೇರೇಪಿಸಿ ಅಹಿಂಸಾ ಮಾರ್ಗದಲ್ಲಿ ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟು ಪ್ರಜಾಪ್ರಭುತ್ವವನ್ನು ಸ್ಥಾಪಿಸಿದರು. ಹೀಗಿರುವಾಗ ಹಿಂದೂ ಮತವು ಈ ಜೀವನಕ್ಕೆ ಬೆಲೆ ಕೊಡದೆ ಸಮಾಜ ಕಲ್ಯಾಣ ಕಾರ್ಯಗಳಿಗೆ ವಿರೋಧವಾಗಿದೆ ಎಂದು ಹೇಳುವುದು ಅಸತ್ಯವಾದವೇ ಹೊರತು ನಿಜವಲ್ಲ.

### ಭಾರತ ಜನಾಂಗದಲ್ಲಿ ಒಗ್ಗಟ್ಟನ್ನುಂಟುಮಾಡಿದೆ.

ಸಾವಿರಾರು ವರುಷಗಳಿಂದಲೂ ಭಾರತದಲ್ಲಿ ಅನೇಕ ರಾಜ್ಯಗಳು ಸ್ವತಂತ್ರವಾಗಿದ್ದು ಯುದ್ಧ ಮಾಡುತ್ತಿದ್ದುವು ; ಕೆಲವು ಕಾಲಗಳಲ್ಲಿ ಸಾಮ್ರಾಟ ಮೌರ್ಯ ಚಕ್ರಾಧಿಪತ್ಯ, ಗುಪ್ತ ಚಕ್ರಾಧಿಪತ್ಯ, ಮೊಗಲ್ ಚಕ್ರಾಧಿಪತ್ಯ ಮತ್ತು ಬ್ರಿಟಿಷ್ ಚಕ್ರಾಧಿಪತ್ಯಗಳು ಸ್ಥಾಪಿತವಾದುವು. ಆದರೆ ಸೇರಿ ಪ್ರತಿಯೊಂದು ರಾಜ್ಯದಲ್ಲಿಯೂ ಜಾತಿ ಮತ ಭಾಷಾ ಭೇದಗಳು ಇದ್ದುದರಿಂದ ಸಮಾಜವು ಸಣ್ಣ ಸಣ್ಣ ಗುಂಪುಗಳಾಗಿ ಅಂತಃಕಲಹಗಳು ನಡೆಯುತ್ತಲೇ ಇದ್ದುವು. ಆದ್ದರಿಂದ ಹಿಂದೂ ಜನಾಂಗದಲ್ಲಿ ಇತರ ಜನಾಂಗಗಳ ಹಾಗೆ ಒಗ್ಗಟ್ಟಿರಲಿಲ್ಲ. ಆದರೆ ಈಗ ನೂರು ವರುಷಗಳಿಂದ ರಾಷ್ಟ್ರೀಯ

ಹಿಂದೂ ಮತದ ಆಚಾರ್ಯರು ಸನಾತನ ಧರ್ಮದ ಮೂಲ ತತ್ವ ಹಿತ ಪುರುಷಾರ್ಥ ಪ್ರಚಾರದಿಂದಲೇ ಭಾರತೀಯರೆಲ್ಲರೂ ಒಂದೇ ಜನಾಂಗಕ್ಕೆ ಸೇರಿದವರೆಂಬ ಭಾವನೆಯನ್ನು ಅವರಲ್ಲಿ ವೃದ್ಧಿ ಪಡಿಸುತ್ತಾ ಭಾರತೀಯ ಜನಾಂಗದಲ್ಲಿ ಒಗ್ಗಟ್ಟನ್ನೂ ಬಲವನ್ನೂ ಹೆಚ್ಚಿಸುತ್ತಿರುವರು. "ಏಕಂ ಸತ್ ವಿಪ್ರಾಬಹುಧಾವದಂತಿ" ಮತ್ತು "ಆಕಾಶಾತ್ ಪತಿತಂತೋಯಂಯಥಾ ಗಚ್ಛತಿ ಸಾಗರಂ | ಸರ್ವ ದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ ||" ಎಂಬಿವೇ ಮೊದಲಾದ ವಾಕ್ಯಗಳ ಅಥವ ಶ್ಲೋಕಗಳ ಅಭಿಪ್ರಾಯವನ್ನು ನಮ್ಮ ಜನರಿಗೆ ವಿಶದವಾಗಿ ತಿಳಿಯಪಡಿಸಿ, ರಾಷ್ಟ್ರೀಯ ಹಿಂದೂ ಮತವು ಎಲ್ಲಾ ಜಾತಿಯ ಜನರು ಸತ್ಯ ಸ್ವರೂಪದ ಅಂಶಗಳೆಂದೂ ಅಥವ ಭಗವಂತನ ಮಕ್ಕಳೆಂದೂ, ಎಲ್ಲಾ ಕೋಮಿನವರೂ ಒಂದೇ ಭಗವಂತನನ್ನು ಬೇರೆ ಬೇರೆ ರೂಪದಲ್ಲಿ ಪೂಜಿಸುತ್ತಿರುವರೆಂದೂ, ಎಲ್ಲಾ ರಾಜ್ಯಗಳೂ ಸನಾತನ ಧರ್ಮದ ತಳಹದಿಯ ಮೇಲೆ ಕಟ್ಟಲ್ಪಟ್ಟು ಅವನ್ನು ಜನರು ಆಚರಣೆಯಲ್ಲಿ ತರುವಹಾಗೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ ಮತ್ತು ಎಲ್ಲಾ ಭಾಷೆಗಳೂ ಸಂಸ್ಕೃತ ಭಾಷೆಯ ಆಧಾರದಿಂದಲೇ ಹುಟ್ಟಿವೆ, ಆ ಭಾಷೆಯಲ್ಲಿರುವ ವಿದ್ಯೆಗಳನ್ನು ದೇಶಭಾಷೆಗಳಲ್ಲಿ ಎಲ್ಲಾ ಜನರಿಗೂ ಪ್ರಕಾಶಪಡಿಸುತ್ತವೆಯೆಂದೂ ಬೋಧಿಸುತ್ತದೆ. ಈ ಮಹಾ ಉಪದೇಶದ ಫಲವಾಗಿ ಭಾರತ ಜನಾಂಗದ ಐಕ್ಯಮತ್ಯವೂ, ಭ್ರಾತೃಭಾವವೂ, ಸತ್ಯಾನ್ವೇಷಣೆಯೂ ಮತ್ತು ಸೇವಾ ಮನೋಭಾವವೂ ವೃದ್ಧಿಯಾಗುತ್ತಿವೆ. ಅಷ್ಟೇ ಅಲ್ಲ; ಭಾರತೀಯ ಪ್ರಜಾಪ್ರಭುತ್ವ ಸರ್ಕಾರವು ಈಗ ಜಾತ್ಯಾತೀತವಾಗಿಯೂ ಮತ್ತು ಪಕ್ಷಾತೀತವಾಗಿಯೂ ಸ್ಥಾಪಿಸಲ್ಪಟ್ಟಿದೆ.

## ಲೋಕಕ್ಕೆ ಕಲ್ಯಾಣವನ್ನುಂಟುಮಾಡಿದೆ.

ರಾಷ್ಟ್ರೀಯ ಹಿಂದೂ ಮತದ ಆಚಾರ್ಯರು ಭಾರತೀಯ ಸಂಸ್ಕೃತಿಯ ಪ್ರಚಾರಕಾರ್ಯ ಒಂದನ್ನೇ ಕೈಗೊಂಡಿಲ್ಲ; ಅವರು ಪ್ರಪಂಚದ ಶ್ರೇಷ್ಠ ಧರ್ಮಗಳ ಸಾರಾಂಶಗಳ ಪ್ರಚಾರಕಾರ್ಯವನ್ನೂ ಕೂಡ ಇದರ ಜೊತೆಯಲ್ಲಿ ನಡೆಸುತ್ತಿರುವರು. ಎಲ್ಲಾ ಮತಗಳ ಮೂಲ ತತ್ವಹಿತ ಪುರುಷಾರ್ಥಗಳಲ್ಲಿ ಸಮನ್ವಯವಿರುವುದರಿಂದ ಒಂದು ಮತದವರು ಇನ್ನೊಂದು ಮತದವರನ್ನು ಬಲಾತ್ಕಾರದಿಂದ ತಮ್ಮ ಮತಕ್ಕೆ ಸೇರಿಸುವ ಪ್ರಯತ್ನ ಮಾಡಬಾರದೆಂದೂ, ವ್ಯಕ್ತಿಯು ತನ್ನ ಮನಸ್ಸಿನ ಯೋಗ್ಯತೆಯ ಪ್ರಕಾರ ಯಾವ ಮತವನ್ನು ಬೇಕಾದರೂ ಚುನಾಯಿಸಬಹುದೆಂದೂ, ಎಲ್ಲಾ ಮತದವರೂ ಆಯಾ ಮತದ ನಿಜವಾದ ಸಾಧನೆಗಳನ್ನು ಕೈಗೊಂಡರೆ ಸತ್ಯ ಸ್ವರೂಪವನ್ನು ಸಾಕ್ಷಾತ್ಕಾರ ಮಾಡಬಹುದೆಂದೂ ಮತ್ತು ಬೌದ್ಧರೂ, ಹಿಂದೂಗಳೂ, ಕ್ರೈಸ್ತರೂ, ಮಹಮ್ಮದೀಯರೂ, ಪಾರ್ಸಿಯವರೂ ಸತ್ಯ ಸ್ವರೂಪದ ಅಂಶವೆಂದೂ ಅಥವ ಒಂದೇ ಭಗವಂತನ ಮಕ್ಕಳೆಂದೂ ರಾಷ್ಟ್ರೀಯ ಹಿಂದೂ ಮತವು ಪ್ರಪಂಚದ ದೇಶಗಳಲ್ಲೆಲ್ಲಾ ಉಪದೇಶ ಮಾಡುತ್ತಿದೆ. ಪ್ರಪಂಚದ ರಾಜ್ಯಗಳ ಮುಖಂಡರು ಹೀಗೆ ಎಲ್ಲಾ

ಮತಗಳೂ ಶ್ರೇಷ್ಠವೆಂದೂ, ಎಲ್ಲಾ ಮತದವರೂ ಭ್ರಾತೃಗಳೆಂದೂ ಮತ್ತು ಎಲ್ಲರೂ ಸತ್ಯವನ್ನು ಸಾಕ್ಷಾತ್ಕರಿಸಲು ನೀತಿಯುತ ಧರ್ಮ ಮಾರ್ಗವನ್ನು ಅವಲಂಬಿಸಿ ಸಮಾಜಕಾರ್ಯಗಳೆಲ್ಲವನ್ನೂ ಅಹಿಂಸಾತ್ಮಕ ಚಳುವಳಿಯಿಂದ ಪರಿಹರಿಸಬಹುದೆಂದೂ ತಿಳಿದರೆ ಈಗ ಪ್ರಪಂಚ ಯುದ್ಧಗಳೆಲ್ಲವೂ ಮಾಯವಾಗುತ್ತವೆ. ಪ್ರಪಂಚದ ಜನರಲ್ಲಿ ಹುಟ್ಟು ಅಥವ ಕಸುಬುಗಳಿಂದುಂಟಾಗುವ ಜಾತಿ ಮತ್ತು ಶ್ರೇಣಿಗಳನ್ನು ತಪ್ಪಿಸುವುದಕ್ಕಾಗುವುದಿಲ್ಲ; ಆದರೆ ಒಂದು ಜಾತಿಯು ಅಥವ ಶ್ರೇಣಿಯು ಮೇಲು ಇನ್ನೊಂದು ಜಾತಿಯು ಅಥವ ಶ್ರೇಣಿಯು ಕೀಳು ಎಂಬ ಅಹಂಕಾರ ಮಾತ್ಸರ್ಯ ಭಾವನೆಗಳನ್ನು ರಾಷ್ಟ್ರೀಯ ಹಿಂದೂ ಮತವು ನಿರ್ಮೂಲ ಮಾಡುತ್ತವೆ. ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಮತಗಳು ಇರಲೇ ಬೇಕಾಗುತ್ತವೆ; ಆದರೆ ಎಲ್ಲಾ ಮತಗಳೂ ಸತ್ಯದ ಸಾಕ್ಷಾತ್ಕಾರಕ್ಕೆ ದಾರಿಯನ್ನು ತೋರಿಸುವುದರಿಂದ ಅವೆಲ್ಲವೂ ಶ್ರೇಷ್ಠ ಧರ್ಮಗಳಾಗಿವೆ ಮತ್ತು ಎಲ್ಲಾ ಮತಗಳನ್ನು ನಂಬುವವರು ಅಣ್ಣತಮ್ಮಂದಿರು ಎಂದು ರಾಷ್ಟ್ರೀಯ ಹಿಂದೂ ಮತವು ಘೋಷಿಸುತ್ತದೆ. ಹಾಗೆಯೇ ಪ್ರಪಂಚದಲ್ಲಿ ಬೇರೆ ಬೇರೆ ರಾಜ್ಯಗಳು ಇದ್ದೇ ಇರುತ್ತವೆ; ಆದಾಗ್ಯೂ ಎಲ್ಲಾ ರಾಜ್ಯಗಳೂ ಪರಾರ್ಥ ಭಾವನೆಯಿಂದ ಮತ್ತು ಐಕಮತ್ಯದಿಂದ ಕೂಡಿ ಪ್ರಪಂಚದ ಯುದ್ಧಗಳನ್ನೇ ತಪ್ಪಿಸಿ ಒಂದಕ್ಕೊಂದು ಪರಸ್ಪರ ಸಹಾಯವನ್ನು ಮಾಡುತ್ತಿರಬೇಕೆಂಬುದು ರಾಷ್ಟ್ರೀಯ ಹಿಂದೂ ಮತದ ಅಭಿಪ್ರಾಯ.

ರಾಷ್ಟ್ರೀಯ ಹಿಂದೂ ಮತವು ಲೋಕದ ಜನರಿಗೆ ಇನ್ನೊಂದು ಉಪಕಾರವನ್ನು ಮಾಡಿದೆ. ಮತಗಳಿಗೂ, ತತ್ತ್ವಶಾಸ್ತ್ರಗಳಿಗೂ, ವಿಜ್ಞಾನ ಶಾಸ್ತ್ರಗಳಿಗೂ ಹೊಂದಿಕೆಯಿಲ್ಲವೆಂದೂ, ಇವು ಒಂದಕ್ಕೊಂದು ವಿರೋಧವಾಗಿವೆಯೆಂದೂ, ಮತ್ತು ಸತ್ಯಾನ್ವೇಷಣೆಯ ವಿಚಾರದಲ್ಲಿ ಈ ಮೂರು ಪಂಗಡದವರೂ ಸ್ವತಂತ್ರ ದಾರಿಗಳನ್ನೇ ಹಿಡಿಯಬೇಕಾಗಿದೆಯೆಂದೂ ಹತ್ತೊಂಭತ್ತನೇ ಶತಮಾನದ ಪಶ್ಚಿಮ ದೇಶದ ತಜ್ಞರು ವಾದಿಸಿದರು. ಆದರೆ ರಾಷ್ಟ್ರೀಯ ಹಿಂದೂ ಮತದ ತಜ್ಞರು ಈ ಭಾವನೆಯು ಸರಿಯಲ್ಲವೆಂಬುದನ್ನು ಸಿದ್ಧಾಂತಪಡಿಸಿ, ಎಲ್ಲಾ ಮತಗಳಲ್ಲಿರುವ ಅದರಲ್ಲಿಯೂ ಮುಖ್ಯವಾಗಿ ಹಿಂದೂ ಮತದಲ್ಲಿರುವ ಮೂಲ ತತ್ತ್ವಗಳು ಪುರುಷಾರ್ಥಗಳು ವಿಜ್ಞಾನ ಶಾಸ್ತ್ರಗಳಿಗೂ ತತ್ತ್ವಶಾಸ್ತ್ರಗಳಿಗೂ ಅನುಗುಣವಾಗಿವೆಯೇ ವಿನಾ ವಿರೋಧವಾಗಿಲ್ಲವೆಂಬುದನ್ನು ತಮ್ಮ ಅನೇಕ ಭಾಷಣಗಳಲ್ಲೂ ಗ್ರಂಥಗಳಲ್ಲೂ ವಿಶದವಾಗಿ ವಿವರಿಸಿರುವರು. ಇದರ ಫಲವೇನು? ಈಗಿನ ನಾಗರೀಕ ದೇಶಗಳ ಸರ್ಕಾರಗಳೆಲ್ಲಾ ಒಂದು ಪುರುಷಾರ್ಥದ ಸಾಧನೆಗೆ ಮಾತ್ರ ಬೆಲೆ ಕೊಡುತ್ತಿಲ್ಲ; ತಮ್ಮ ತಮ್ಮ ಪ್ರಜೆಗಳು ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಎಲ್ಲಾ ಪುರುಷಾರ್ಥಗಳನ್ನೂ ಹೊಂದಲು ಅನುಕೂಲ್ಯಗಳನ್ನು ಕಲ್ಪಿಸುವುದಕ್ಕಾಗಿ ವಿಜ್ಞಾನ ಶಾಸ್ತ್ರಗಳಿಗೂ, ಪಾಶ್ಚಿಮಾತ್ಯ ತತ್ತ್ವ ಶಾಸ್ತ್ರಗಳಿಗೂ, ಭಾರತೀಯ ದರ್ಶನಗಳಿಗೂ, ನೀತಿ ಶಾಸ್ತ್ರಗಳಿಗೂ, ಶ್ರೇಷ್ಠ ಧರ್ಮಗಳಿಗೂ, ಕುಶಲ ಕಲೆಗಳಿಗೂ ತಮ್ಮ ತಮ್ಮ ರಾಜ್ಯಗಳಲ್ಲಿ ಪ್ರೋತ್ಸಾಹವನ್ನು ಕೊಡುತ್ತಿರುವರು.

### ಶ್ರೀ ನವ ಭಾರತ ಆಶ್ರಮ
ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕೆ

## (ಮಾಲೆ—ಹದಿನೈದು)

### ಭಗವದ್ಗೀತಾಸಂದೇಶ-ಅಧ್ಯಾಯ-೨

ಶ್ಲೋಕಗಳು ೧೧ ರಿಂದ ೧೪

## ಮನುಷ್ಯನೇ! ನೀನು ಅಮರನು; ಧೀರನಾಗಿ ಪವಿತ್ರ ಜೀವನವನ್ನು ನಡೆಸು.

ಶ್ಲೋಕ-೧೧

**ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ।**
**ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ॥**

ಈ ಶ್ಲೋಕದಲ್ಲಿ ಮೂರುವಾಕ್ಯಗಳಿವೆ— (೧) ತ್ವಂ ಅಶೋಚ್ಯಾನ್ ಅನ್ವಶೋಚಃ— ನೀನು ದುಃಖಿಸಲನರ್ಹರನ್ನು ಕುರಿತು ದುಃಖಿಸುತ್ತೀಯೆ. (೨) ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ— ವಿವೇಕಿಗಳ ಮಾತುಗಳಂತೆ ಇರುವ ವಾಕ್ಯಗಳನ್ನು ನೀನು ಆಡುತ್ತೀಯೆ. (೩) ಪಂಡಿತಾಃ ಗತಾಸೂನ್ ಅಗತಾಸೂಂಶ್ಚ ನ ಅನುಶೋಚಂತಿ— ಪಂಡಿತರು, ಅಂದರೆ ಜ್ಞಾನಿಗಳು ಮರಣಹೊಂದಿದವರನ್ನು ಕುರಿತಾಗಲೀ ಬದುಕಿರುವವರನ್ನು ಕುರಿತಾಗಲೀ ದುಃಖಿಸಬಾರದು ಅಥವ ಪಂಡಿತರು ಶರೀರವನ್ನು ಕುರಿತಾಗಲೀ ಆತ್ಮನನ್ನು ಕುರಿತಾಗಲೀ ದುಃಖಿಸಬಾರದು.

ಪ್ರಶ್ನೆ ಒಂದು:— ಪಂಡಿತರು ಅಥವ ಜ್ಞಾನಿಗಳು ಯಾರು?

ಉತ್ತರ:— ಸಾಧಾರಣ ಮನುಷ್ಯನು ಒಟ್ಟಿನಲ್ಲಿ ತನ್ನನ್ನು ಒಬ್ಬ ವ್ಯಕ್ತಿಯನ್ನಾಗಿ ತಿಳಿಯುತ್ತಾನೆ; ಅದಕ್ಕೆ ಮೇಲೆ ಅವನು ಯಾವ ವಿಚಾರವನ್ನೂ ಮಾಡುವುದಿಲ್ಲ. ಆದರೆ ಪಂಡಿತನು ಅಥವ ಜ್ಞಾನಿಯು ತನ್ನಲ್ಲಿಯೂ ಮತ್ತು ಪ್ರತಿಯೊಬ್ಬ ಮನುಷ್ಯನಲ್ಲಿಯೂ ಕೆಳಗಿನ ಎಂಟು ಶಕ್ತಿಗಳೂ ಮಿಳಿತವಾಗಿವೆಯೆಂದು ವಿಚಾರ ಮಾಡಿ ತಿಳಿದುಕೊಂಡಿರುವನು— ಹೊರಗಿನ ಇಂದ್ರಿಯಗಳಿಂದಲೂ, ಮಾಂಸ ಮಜ್ಜ ಮೂಳೆಗಳಿಂದಲೂ, ಒಳಗಿನ ಅಂಗಗಳಿಂದಲೂ ಕೂಡಿರುವ ಶರೀರ; ಒಳಗಿನ ಜ್ಞಾನೇಂದ್ರಿಯ ಕರ್ಮೇಂದ್ರಿಯ ವ್ಯಾಪಾರಗಳು; ಒಳಗಿನ ಮನಸ್ಸಿನ ಪ್ರವೃತ್ತಿಗಳು; ಒಳಗಿನ ಬುದ್ಧಿಯ ವೃತ್ತಿಗಳು; ಕನಸು ನಿದ್ರೆ ಮೂರ್ಛೆ ಮೊದಲಾದ ಅನುಭವಗಳ ನ್ನುಂಟುಮಾಡುವ ಮತ್ತು ಶರೀರದೊಳಗಿರುವ ಅಂಗಗಳ ಕಾರ್ಯಗಳನ್ನು ನಡೆಸುವ

ಅತಿಸೂಕ್ಷ್ಮ ಅಂತಃಕರಣ; ಒಳಗಿನ ಪ್ರಪಂಚವನ್ನು ನೇರಾಗಿಯೂ ಹೊರಗಿನ ಜಗತ್ತಿನ ವ್ಯಾಪಾರಗಳನ್ನು ಮನಸ್ಸು ಇಂದ್ರಿಯಗಳ ಮೂಲಕವಾಗಿಯೂ ತಿಳಿಯುವ ಶಕ್ತಿಯನ್ನು ಪಡೆದಿರುವ ಆಶ್ಚರ್ಯಜ್ಞಾನಾನಂದ ಸ್ವರೂಪನಾದ ಸಾಕ್ಷಿ ಅಥವ ಜೀವಾತ್ಮ ಮತ್ತು ಜೀವಾತ್ಮನಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮ. ಇವುಗಳಲ್ಲಿ ಮೊದಲು ಆರು ಶಕ್ತಿಗಳನ್ನು ಒಟ್ಟಾಗಿ ಸೇರಿಸಿ "ದೇಹ"ವೆಂದೂ, ಏಳು ಎಂಟು ಶಕ್ತಿಗಳನ್ನು ಒಟ್ಟುಗೂಡಿಸಿ "ದೇಹಿ" ಅಥವ "ಆತ್ಮ" ಎಂದೂ ಕರೆದಿರುವರು. ಪಂಡಿತರು ನಿಜವಾಗಿ "ದೇಹವೇ" ಬೇರೆಯೆಂದೂ ಮತ್ತು "ಆತ್ಮನು" ಬೇರೆಯೆಂದೂ ತಿಳಿದಿರುವುದರಿಂದ ಮನುಷ್ಯನು ಸಾಯುವಾಗ ಸ್ಥೂಲ ದೇಹವು ಮಾತ್ರ ನಾಶವಾಗುತ್ತದೆಂದೂ, ಅವನು ಮೋಕ್ಷವನ್ನು ಪಡೆಯುವಾಗ ಸೂಕ್ಷ್ಮದೇಹವೂ ನಾಶವಾಗುತ್ತದೆಂದೂ ದೃಢವಾಗಿ ನಂಬಿರುವರು. ಇಷ್ಟೇ ಅಲ್ಲ; ಮನುಷ್ಯನಲ್ಲಿ ಸಾರವಾದ ಪರಮಾತ್ಮನನ್ನು ಅಂತರ್ಯಾಮಿಯಾಗಿ ಪಡೆದ ಆತ್ಮಶಕ್ತಿಯು ಮಾತ್ರ ಜೀವಿಸಿರುವಾಗಲೂ, ಸತ್ತಮೇಲೆಯೂ, ಮೋಕ್ಷವನ್ನು ಪಡೆದಾಗಲೂ ಎಲ್ಲಾ ಕಾಲದಲ್ಲಿಯೂ ನಾಶವಾಗದೆ ಶಾಶ್ವತವಾಗಿ ಅಮರವಾಗಿರುವುದೆಂದು ತೀರ್ಮಾನ ಮಾಡಿರುವರು. ಆದುದರಿಂದ ಪಂಡಿತರು ಸತ್ತುಹೋದವರ ವಿಚಾರದಲ್ಲೂ ಬದುಕಿರುವವರ ವಿಚಾರದಲ್ಲೂ ಅಥವ ನಾಶವನ್ನು ಹೊಂದುವ ಶರೀರದ ವಿಚಾರದಲ್ಲೂ ಮತ್ತು ಎಂದೆಂದಿಗೂ ಇರುವ ಆತ್ಮನ ವಿಚಾರದಲ್ಲೂ ದುಃಖಿಸುವುದಿಲ್ಲ.

**ಪ್ರಶ್ನೆ ಎರಡು**:– ಹಾಗಾದರೆ ಅರ್ಜುನನು ಪಂಡಿತನೇ ? ಅಲ್ಲವೇ ?

ಉತ್ತರ:– ಯುದ್ಧದಲ್ಲಿ ಗಂಡಸರು ಸತ್ತರೆ ಪಿತೃಲೋಕದಲ್ಲಿ ಸೂಕ್ಷ್ಮಶರೀರದಲ್ಲಿರುವ ಅವರ ಪಿತೃಗಳಿಗೆ ಶ್ರಾದ್ಧಗಳು ತಪ್ಪಿಹೋಗುತ್ತವೆ ಎಂದು ಅರ್ಜುನನು ಶ್ರೀಕೃಷ್ಣನಿಗೆ ಹೇಳುವಾಗ ಅವನು ತಾನು ಪಂಡಿತನೆಂದೂ ತೋರ್ಪಡಿಸಿಕೊಳ್ಳುತ್ತಾನೆ; ಏಕೆಂದರೆ, ಸಾಯುವ ದೇಹಗಳೇ ಬೇರೆ ಪಿತೃಲೋಕಗಳಿಗೆ ಹೋಗುವ ಜೀವಾತ್ಮರುಗಳೇ ಬೇರೆ ಎಂಬ ಪಂಡಿತನ ಅಭಿಪ್ರಾಯವನ್ನು ತಿಳಿಯಪಡಿಸುತ್ತಾನೆ. ಆದರೆ ತನ್ನ ಕರ್ತವ್ಯಕರ್ಮವಾದ ಯುದ್ಧದಲ್ಲಿ ಸಾಯುವ ಗುರುಗಳಾದ ಭೀಷ್ಮ ದ್ರೋಣಾದಿಗಳು ಮತ್ತು ಬಂಧುಸ್ನೇಹಿತರು ನಾಶವಾಗುತ್ತಾರೆಂದು ಮೋಹದಿಂದ ನಂಬಿ ಅದಕ್ಕಾಗಿ ದುಃಖಪಟ್ಟು ಯುದ್ಧಮಾಡುವುದಿಲ್ಲವೆಂದು ಹಠಹಿಡಿಯುತ್ತಾನೆ; ಆದುದರಿಂದ ಅವನು ನಿಜವಾಗಿ ಪಂಡಿತನಲ್ಲ. ಅದಕ್ಕಾಗಿಯೇ ಶ್ರೀಕೃಷ್ಣನು ಅವನಿಗೆ ಗೀತೋಪದೇಶವನ್ನು ಮಾಡುತ್ತಾನೆ. ಹೀಗೆಯೇ ನಮ್ಮ ಸಮಾಜದಲ್ಲಿ ಅನೇಕ ವಿದ್ಯಾವಂತರು ಶಾಸ್ತ್ರಜ್ಞಾನವನ್ನು ಉಪಯೋಗಿಸಿ ಪಂಡಿತರ ಹಾಗೆ ತೋರ್ಪಡಿಸಿಕೊಳ್ಳುತ್ತಾರೆ; ಆದರೆ ಬಾಳಿನಲ್ಲಿ ಸಂಕಟಗಳನ್ನು ಉಂಟುಮಾಡುವ ಸಮಸ್ಯೆಗಳುಂಟಾದಾಗ ಧೈರ್ಯವನ್ನು ಕಳೆದುಕೊಂಡು ಎಳೆಯ ಮಕ್ಕಳ ಹಾಗೆ ಅಳುತ್ತಾರೆ. ಆದುದ

ರಿಂದ ಒಬ್ಬನು ಬುದ್ಧಿಶಕ್ತಿಯಿಂದ ವಾದ ಮಾಡುವ ಶಕ್ತಿಯನ್ನು ಪಡೆದಿರುವ ಮಾತ್ರದಿಂದ ಅವನನ್ನು ಪಂಡಿತನೆಂದು ಅಥವ ಜ್ಞಾನಿಯೆಂದು ತಿಳಿಯಕೂಡದು.

**ಪ್ರಶ್ನೆ ಮೂರು:**–ಬಂಧುಗಳು ಸಾಯುವಾಗ ಮನುಷ್ಯರು ದುಃಖಿಸುವುದನ್ನು ಕಂಡಿದ್ದೇವೆ; ಆದರೆ ಯಾರಾದರೂ ಬದುಕಿರುವವರ ವಿಚಾರದಲ್ಲಿ ದುಃಖಪಡುತ್ತಾರೆಯೆ?

**ಉತ್ತರ:**–ಹೌದು; ಬದುಕಿರುವವರ ವಿಚಾರದಲ್ಲೂ ಅನೇಕ ಸಂದರ್ಭಗಳಲ್ಲಿ ದುಃಖಪಡಬೇಕಾಗುತ್ತದೆ. ನಮ್ಮ ಬಂಧು ಸ್ನೇಹಿತರಿಗೆ ಹೆಚ್ಚಾಗಿ ಕಷ್ಟಬಂದು ಅವರು ದುಃಖಪಡುವಾಗ, ನಾವು ಪ್ರೀತಿಸುವವರಿಗೆ ರೋಗಾದಿಗಳ ಬಾಧೆಯಿಂದ ಅಧಿಕವಾಗಿ ಶರೀರದಲ್ಲಿ ನೋವುಂಟಾಗುವಾಗ, ಹತ್ತಿರದ ಬಂಧುಗಳಲ್ಲಿ ಕಲಹವುಂಟಾಗಿ ವಿಶೇಷ ತೊಂದರೆಗಳುಂಟಾಗುವಾಗ ಮತ್ತು ಸಮಾಜದಲ್ಲಿ ಕರ್ತವ್ಯ ಕರ್ಮಗಳನ್ನು ನಡೆಸುವ ವೇಳೆಗಳಲ್ಲಿ ಅನೇಕ ಸಂಕಟಗಳು ಒದಗುವಾಗ ನಾವೆಲ್ಲರೂ ದುಃಖಪಡುವುದಿಲ್ಲವೆ? ಆದರೆ ಪಂಡಿತನು ಅಥವ ಜ್ಞಾನಿಯು ಇಂಥಾ ಸಂದರ್ಭಗಳಲ್ಲಿಯೂ ದುಃಖಪಡುವುದಿಲ್ಲವೆಂದು ಶ್ರೀಕೃಷ್ಣನು ತಿಳಿಯಪಡಿಸುತ್ತಾನೆ.

### ಶ್ಲೋಕ–ಹನ್ನೆರಡು

**ನತ್ವೇವಾಹಂ ಜಾತುನಾಸಂ ನತ್ವಂ ನೇಮೇ ಜನಾಧಿಪಾಃ।**
**ನಚೈವನಭವಿಷ್ಯಾಮಃ ಸರ್ವೇವಯಮತಃ ಪರಮ್॥**

ಈ ಶ್ಲೋಕದಲ್ಲಿ ನಾಲ್ಕು ವಾಕ್ಯಗಳಿವೆ—(೧) ಅಹಂ ಜಾತು ನ ಆಸಂ ಇತಿ ನ—ನಾನು ಯಾವ ಕಾಲದಲ್ಲಿಯೂ ಇರಲಿಲ್ಲವೆಂಬುದು ಇಲ್ಲ. (೨) ತ್ವಂ ಜಾತು ನ ಆಸಃ ಇತಿ ನ—ನೀನು ಯಾವ ಕಾಲದಲ್ಲಿಯೂ ಇರಲಿಲ್ಲವೆಂಬುದು ಇಲ್ಲ. (೩) ಇಮೇ ಜನಾಧಿಪಾಃ ಜಾತು ನ ಆಸನ್ ಇತಿ ನ— ಈ ರಾಜರುಗಳೂ ಕೂಡ ಯಾವ ಯಾವ ಕಾಲದಲ್ಲಿಯೂ ಇರಲಿಲ್ಲವೆಂಬುದು ಇಲ್ಲ. ಚ— ಮತ್ತು (೪) ಸರ್ವೇ ವಯಂ ಅತಃ ಪರಂ ನ ಭವಿಷ್ಯಾಮಃ ನಚ ಏವ—ನಾವುಗಳೆಲ್ಲರೂ ಇನ್ನು ಮುಂದೆ ಇರುವುದಿಲ್ಲವೆಂಬುದೂ ಇಲ್ಲವೇ ಇಲ್ಲ.

**ಪ್ರಶ್ನೆ ಒಂದು:**–ಈ ಶ್ಲೋಕದಲ್ಲಿ ಶ್ರೀಕೃಷ್ಣನು ಮಾಡಿರುವ ಉಪದೇಶವೇನು?

**ಉತ್ತರ:**–"ಅರ್ಜುನಾ! ನಾನೂ, ನೀನೂ, ಈ ರಾಜರುಗಳೆಲ್ಲರೂ ಯಾವಾಗಲೂ ಇಲ್ಲದೆ ಇರಲಿಲ್ಲ; ಮತ್ತು ಮುಂದೆ ಯಾವ ಕಾಲದಲ್ಲಿಯೂ ಇಲ್ಲದೇ ಇರುವುದೂ ಇಲ್ಲ; ಅಂದರೆ ಭೂತ ಭವಿಷ್ಯತ್ ಮತ್ತು ವರ್ತಮಾನಕಾಲಗಳಲ್ಲಿಯೂ ಅಂದರೆ ಎಲ್ಲಾ ಕಾಲಗಳಲ್ಲಿಯೂ ಶಾಶ್ವತವಾಗಿ ಇದ್ದೆವು, ಇದ್ದೇವೆ ಮತ್ತು ಇರುವೆವು.

## 4

**ಪ್ರಶ್ನೆ ಎರಡು:**–ಹಾಗಾದರೆ ಮನುಷ್ಯರಲ್ಲಿ ಎಂದೆಂದಿಗೂ ಶಾಶ್ವತವಾಗಿರುವ "ನಾನು, ನೀನು, ಈ ರಾಜರುಗಳು" ಎಂಬುದು ನಿಜವಾಗಿ ಯಾರು?

**ಉತ್ತರ:**– "ನಾನು, ನೀನು ಈ ರಾಜರುಗಳು" ಎಂದೆಂದಿಗೂ ಇದ್ದೆವು ಮತ್ತು ಇರುವೆವು ಎಂದು ಈ ಶ್ಲೋಕದಲ್ಲಿ ಹೇಳಿದೆ. ಆದುದರಿಂದ "ನಾನು–ನೀನು" ಎಂಬ ಪದಗಳು ಶರೀರಕ್ಕೆ ಸಂಬಂಧಪಡುವುದಿಲ್ಲ; ಏಕೆಂದರೆ, ಶರೀರವು ಸದಾ ಬದಲಾಯಿಸುತ್ತಲೇ ಇರುವುದು ಮತ್ತು ಅದು ನಿನ್ನೊಡನೆ ಸೇರಿರುವ ಮತ್ತು ನಿನ್ನ ಆಳ್ವಿಕೆಗೆ ಒಳಪಟ್ಟಿರುವ ಒಂದು ಅತೃಪ್ತಿಕರವಾದ ಪದಾರ್ಥ. ಈ ಪದಗಳು ನಿನ್ನ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳಿಂದ ಕೂಡಿದ ಮನಸ್ಸನ್ನು ಸೂಚಿಸುವುದಿಲ್ಲ; ಏಕೆಂದರೆ, ಇಂದ್ರಿಯ ಮತ್ತು ಮನಸ್ಸಿನ ವ್ಯಾಪಾರಗಳು ಅಡಿಗಡಿಗೆ ಬದಲಾಯಿಸುವುದು ಮಾತ್ರವಲ್ಲದೆ ಶೈಶವಾವಸ್ಥೆಯಲ್ಲಿರುವ ಮನಸ್ಸೇ ಬೇರೆ; ಬಾಲ್ಯಾವಸ್ಥೆಯಲ್ಲಿರುವ ಮನಸ್ಸೇ ಬೇರೆ; ಕೌಮಾರಾವಸ್ಥೆ, ಯೌವನಾವಸ್ಥೆ ಮತ್ತು ವಾರ್ಧಕ್ಯಾವಸ್ಥೆಗಳಲ್ಲಿರುವ ಮನಸ್ಸುಗಳೇ ಬೇರೆಯಾಗಿವೆ. ಈ ಪದಗಳು "ಬುದ್ಧಿ"ಯನ್ನೂ ಸೂಚಿಸುವುದಿಲ್ಲ; ಏಕೆಂದರೆ, ಬುದ್ಧಿಯ ವ್ಯಾಪಾರಗಳು ಸ್ವಪ್ನಕಾಲದಲ್ಲಿಯೂ ನಿದ್ರಾವಸ್ಥೆಯಲ್ಲಿಯೂ ಇರುವುದಿಲ್ಲ ಮತ್ತು ಶರೀರದೊಳಗಿನ ಅಂಗಗಳಲ್ಲಿ ನಡೆಯುವ ಸಹಜಪ್ರಿಯ ಕಾರ್ಯಗಳು ಬುದ್ಧಿಪೂರ್ವಕವಾಗಿ ನಡೆಯುವ ವ್ಯಾಪಾರಗಳಲ್ಲ. "ನಾನು–ನೀನು" ಎಂಬ ಪದಗಳು ಶರೀರವನ್ನು ಜಾಗ್ರತ, ಸ್ವಪ್ನ, ಮತ್ತು ನಿದ್ರೆಗಳ ವೇಳೆಗಳಲ್ಲೆಲ್ಲ ಜೀವಿಸಿರುವಂತೆ ಮಾಡುತ್ತಿರುವ "ಪ್ರಾಣಶಕ್ತಿಯನ್ನೂ ಸೂಚಿಸುವುದಿಲ್ಲ"; ಏಕೆಂದರೆ ಪ್ರಾಣವು ಮನುಷ್ಯನನ್ನು ಈ ಶರೀರದೊಡನೆ ಬಂಧಿಸಿರುತ್ತದೆ ಮತ್ತು ಹೆಚ್ಚಾಗಿ ಶರೀರದಲ್ಲಿ ನೋವುಂಟಾಗಿ ಸಂಕಟವಾದಾಗ ಮನುಷ್ಯನು "ಈ ಪ್ರಾಣವು ಹೋಗಲಿ, ಅದು ಹೋದರೆ ಆ ಮೇಲೆ ನಾನು ಸುಖವಾಗಿರುತ್ತೇನೆ" ಎಂದು ಹೇಳುವನು. ಈ ವಿಚಾರದಿಂದ ನಾವು ತಿಳಿಯಬೇಕಾದುದೇನು? "ನಾನು–ನೀನು" ಎಂಬ ಪದಗಳು ಇಂದ್ರಿಯಗಳ ಅನುಭವದಲ್ಲಿರುವ ಮತ್ತು ಮನಸ್ಸಿಗೆ ಗೋಚರವಾಗುವ ಯಾವ ಪದಾರ್ಥಗಳೂ ಅಲ್ಲ; ಅವು ಪ್ರತಿ ದೇಹದಲ್ಲಿರುವ ಮತ್ತು ದೇಹಕ್ಕಿಂತ ಬೇರೆಯಾಗಿರುವ ವೈಯಕ್ತಿಕ ಆತ್ಮನನ್ನು ಸೂಚಿಸುತ್ತವೆ ಅಥವ ಎಲ್ಲಾ ಜೀವಾತ್ಮರುಗಳಿಗೂ ಆಧಾರವಾಗಿ ಅಂತರಾತ್ಮನಾಗಿರುವ ಅದ್ವಿತೀಯನಾದ ಪರಬ್ರಹ್ಮನನ್ನೂ ಸೂಚಿಸುತ್ತವೆ. ಕ್ರಮಕ್ರಮವಾಗಿ ಬದಲಾಯಿಸುತ್ತಿರುವ ದೇಹಗಳಿಂದ ಯಾವಾಗಲೂ ಬಾಡದೇ ಇರುವ ವೈಯಕ್ತಿಕ ದೇಹಿಗಳನ್ನು ಈ ಪದಗಳು ತಿಳಿಯಪಡಿಸುತ್ತವೆ ಎಂಬ ಇನ್ನೊಂದು ಅಭಿಪ್ರಾಯವೂ ಉಂಟು.

## ಶ್ಲೋಕ–ಹದಿಮೂರು

**ದೇಹಿನೋಽಸ್ಮಿನ್ ಯಥಾದೇಹೇ ಕೌಮಾರಂ ಯೌವನಂ ಜರಾ।**
**ತಥಾ ದೇಹಾಂತರ ಪ್ರಾಪ್ತಿರ್ಧೀರಸ್ತತ್ರ ನಮುಹ್ಯತಿ॥**

ಈ ಶ್ಲೋಕದ ಎರಡು ವಾಕ್ಯಗಳಲ್ಲಿ ಮೂರು ಅಭಿಪ್ರಾಯಗಳು ಅಡಕವಾಗಿವೆ– (೧) ಯಥಾದೇಹಿನಃ ಅಸ್ಮಿನ್ ದೇಹೇ ಕೌಮಾರಂ ಯೌವನಂ ಜರಾಪ್ರಾಪ್ತಿ–ದೇಹವನ್ನು ಪಡೆದಿರುವವನಿಗೆ ಈ ದೇಹದಲ್ಲಿ ಬಾಲ್ಯ, ಯೌವನ ಮತ್ತು ವಾರ್ಧಕ್ಯ ಹೇಗೆ ಉಂಟಾಗುತ್ತದೆಯೋ (೨) ತಥಾ (ದೇಹಿನಃ) ದೇಹಾಂತರ ಪ್ರಾಪ್ತಿಃ–ಹಾಗೆಯೇ (ಈ ದೇಹವನ್ನು ಪಡೆದಿರುವವನಿಗೆ) ಸತ್ತಮೇಲೆ ಇನ್ನೊಂದು ದೇಹವುಂಟಾಗುವುದು (೩) ತತ್ರಧೀರಃ ನಮುಹ್ಯತಿ–ಆದುದರಿಂದ (ಸಾಯುವ ವಿಚಾರದಲ್ಲಿ) ಧೀರನಾದ ಜ್ಞಾನಿಯು ಮೋಹವನ್ನು ಹೊಂದಲಾರನು.

**ಪ್ರಶ್ನೆ ಒಂದು:**–ಮನುಷ್ಯನು ಹುಟ್ಟಿದಂದಿನಿಂದ ಸಾಯುವವರೆಗೆ ಹೊಂದುವ ಅವಸ್ಥೆಗಳಾವುವು?

**ಉತ್ತರ:**–ಸ್ತ್ರೀಯ ಗರ್ಭದಿಂದ ಮಗುವು ಹುಟ್ಟುತ್ತದೆ; ಮೂರು ನಾಲ್ಕು ವರುಷಗಳಾದಮೇಲೆ ಮಗುವು ಬಾಲಕನಾಗುತ್ತಾನೆ. ಆಮೇಲೆ ಬಾಲಕನು ಕ್ರಮೇಣ ವಯಸ್ಸಾಗುತ್ತಾ ಯುವಕನು, ಮಧ್ಯವಯಸ್ಕನು ಮತ್ತು ಮುದುಕನಾಗುತ್ತಾನೆ. ಹೀಗೆ ಮನುಷ್ಯನಲ್ಲಿ ಶೈಶವಾವಸ್ಥೆ, ಕೌಮಾರಾವಸ್ಥೆ, ಯೌವನಾವಸ್ಥೆ, ಮತ್ತು ಜರಾವಸ್ಥೆಗಳುಂಟಾಗುವುವು.

**ಪ್ರಶ್ನೆ ಎರಡು:**–ಈ ಅವಸ್ಥೆಗಳು ದೇಹಕ್ಕೆ ಉಂಟಾಗುತ್ತವೆಯೆ? ಅಥವ ಆತ್ಮನೆಂದು ಕರೆಯಲ್ಪಡುವ ದೇಹಿಗೆ ಉಂಟಾಗುತ್ತವೆಯೆ?

**ಉತ್ತರ:**–ಮನುಷ್ಯನಲ್ಲಿ "ದೇಹಿ" ಎಂದೂ "ದೇಹ" ಎಂದೂ ಎರಡು ಶಕ್ತಿಗಳು ಮಿಳಿತವಾಗಿವೆಯೆಂದು ಈ ಶ್ಲೋಕದಲ್ಲಿ ಹೇಳಿದೆ. ಅವುಗಳಲ್ಲಿ "ದೇಹಿ" ಯಾದವನು ಹುಟ್ಟಿದಂದಿನಿಂದ ಸಾಯುವವರೆಗೂ ಒಬ್ಬನೇ ಎಂದೂ, ಅವನೊಡನೆ ಕೂಡಿರುವ "ದೇಹ" ಮಾತ್ರ ಯಾವಾಗಲೂ ಬದಲಾವಣೆಗಳನ್ನು ಪಡೆಯುತ್ತಾ ಬಾಲ್ಯ, ಕೌಮಾರ, ಯೌವನ, ಮಧ್ಯವಯಸ್ಸು ಮತ್ತು ವಾರ್ಧಕ್ಯಾವಸ್ಥೆಗಳನ್ನು ಪಡೆಯುವುದೆಂಬುದನ್ನೂ ತಿಳಿಯಪಡಿಸಿದೆ. ಪ್ರತಿಯೊಬ್ಬ ಮನುಷ್ಯನ ದೇಹದಲ್ಲಿಯೂ ಈ ಅವಸ್ಥೆಗಳುಂಟಾಗುತ್ತಿರುವುದನ್ನು ನಾವೂ ಕಂಡು ಅನುಭವಿಸುತ್ತಿದೇವಲ್ಲವೆ?

**ಪ್ರಶ್ನೆ ಮೂರು:**–ಹಾಗಾದರೆ ಒಬ್ಬ ಮನುಷ್ಯನು ಕಾಲವಾದರೆ ಅವನು ಸಂಪೂರ್ಣವಾಗಿ ನಾಶವಾಗುವುದಲ್ಲದೆ ನಾಶವಾಗುತ್ತಾನೆಯೆ? ಅಥವ ಹೊಸ ದೇಹವನ್ನು ಪಡೆದು ಪುನಃ ಹೊಸ ಅನುಭವಗಳನ್ನು ಪಡೆಯುತ್ತಾನೆಯೆ?

ಉತ್ತರ:—ನಮ್ಮ ಜೀವಿತ ಕಾಲದಲ್ಲೇ ಒಬ್ಬನೇ ದೇಹಿಯು ಕೌಮಾರ, ಯೌವನ, ಜರಾವಸ್ಥೆಗಳಲ್ಲಿ ಬೇರೆಬೇರೆ ದೇಹಗಳನ್ನು ಪಡೆಯುತ್ತಾನೆಂಬುದು ನಮ್ಮ ಅನುಭವದಲ್ಲಿರುವುದು. ಪ್ರತಿದಿನವೂ ಮಲ ಮೂತ್ರಾದಿಗಳ ವಿಸರ್ಜನೆಯಿಂದ ಕ್ರಮೇಣ ಹಳೆಯ ಶರೀರವು ನಾಶವಾಗುತ್ತದೆಂದೂ, ವಿಧವಿಧವಾದ ಆಹಾರ ಸೇವನೆಯಿಂದ ಹೊಸ ಶರೀರವು ಬೆಳೆಯುತ್ತದೆಂದೂ ಮನುಷ್ಯ ಶರೀರಶಾಸ್ತ್ರವು ತಿಳಿಯಪಡಿಸುತ್ತದೆ. ಮನಸ್ಸಿನ ಪ್ರವೃತ್ತಿಗಳೂ ಬುದ್ಧಿಯ ವೃತ್ತಿಗಳೂ ಪ್ರತಿಕ್ಷಣವೂ ಪ್ರವಾಹದ ಹಾಗೆ ಬದಲಾಯಿಸುತ್ತಿವೆಯೆಂದು ಮನಶ್ಶಾಸ್ತ್ರವು ಬೋಧಿಸುತ್ತದೆ. ಹೀಗೆ ಹುಟ್ಟಿದಂದಿನಿಂದ ಸಾಯುವವರೆಗೆ ಪ್ರವಾಹರೂಪವಾಗಿ ಬದಲಾಯಿಸುತ್ತಿರುವ ಬಾಲ್ಯ, ಕೌಮಾರ, ಯೌವನ, ವಾರ್ಧಕ್ಯಾವಸ್ಥೆಗಳಿಂದ ಕೂಡಿರುವ ದೇಹಗಳು "ದೇಹಿ"ಯನ್ನು ಎಡಬಿಡದೆ ಸಂಬಂಧಿಸಿ ಅವನೊಡನೆ ಸಂಯೋಗವನ್ನು ಪಡೆದಿರುವುದರಿಂದ ಮನುಷ್ಯನು ಸತ್ತಮೇಲೆಯೂ, ಅಂದರೆ ಈ ಸ್ಥೂಲದೇಹವು ವಿಯೋಗವಾದ ಮೇಲೆಯೂ ಮತ್ತೊಂದು ಸೂಕ್ಷ್ಮವಾದ ದೇಹದ (ಅಥವ ಒಂದಾದಮೇಲೆ ಇನ್ನೊಂದು ದೇಹದ) ಸಂಯೋಗವು ಖಂಡಿತವಾಗಿಯೂ ಉಂಟಾಗುತ್ತದೆ ಎಂಬುದೇ ಈ ಶ್ಲೋಕದ ತಾತ್ಪರ್ಯ,

ಪ್ರಶ್ನೆ ನಾಲ್ಕು.—ಧೀರನು ಯಾರು? ಏಕೆ ಅವನು ಧೀರನು?

ಉತ್ತರ.—ಪಂಡಿತನು, ವಿವೇಕಿಯು ಅಥವ ಜ್ಞಾನಿಯು ಧೀರನು; ಏಕೆಂದರೆ, ಅವನು ದೇಹವು ಬೇರೆ ದೇಹಿಯು ಬೇರೆ ಎಂದೂ, ದೇಹವು ಅನೇಕ ಅವಸ್ಥೆಗಳನ್ನು ಪಡೆದು ನಾಶವಾಗುತ್ತ ಹುಟ್ಟುತ್ತಾ ಇರುವುದೆಂದೂ, ದೇಹಿಯು ಮಾತ್ರ ಎಂದೆಂದಿಗೂ ನಾಶವಾಗದೆ ಒಬ್ಬನೇ ಆಗಿರುವನೆಂದೂ ತಿಳಿದು ಸಾಧಾರಣ ಜನರ ಹಾಗೆ ಸಾವಿಗೆ ಅಂಜದೆ, ಸತ್ತರೆ ಹೊಸ ದೇಹವು ಬರುವುದೆಂದು ನಂಬಿ, ಸಾವಿನಿಂದ ತನಗೆ ಇನ್ನೂ ಉತ್ತಮವಾದ ಹೊಸ ಜೀವನವುಂಟಾಗುತ್ತದೆಂಬ ಶಾಂತಿಯನ್ನು ಪಡೆದು, ಜೀವನದಲ್ಲಿ ಧೈರ್ಯದಿಂದ ಧೀರನಾಗಿ ಸಂತೋಷದಿಂದ ತನ್ನ ಕರ್ತವ್ಯ ಕರ್ಮಗಳನ್ನು ನಡೆಸುವನು.

ಪ್ರಶ್ನೆ ಐದು.—ಈ ಧೀರನು ಯಾವ ವಿಚಾರದಲ್ಲಿ ಮೋಹವನ್ನು ಪಡೆಯುವುದಿಲ್ಲ?

ಉತ್ತರ.—ಒಬ್ಬನು ತನ್ನ ಶರೀರದಲ್ಲಿ ಅಭಿಮಾನವನ್ನಿಟ್ಟು ತಾನು ಶರೀರವೆಂದು ತಿಳಿದರೆ ಅವನು ಸಾಯುವನು; ಏಕೆಂದರೆ ಶರೀರವು ಸದಾ ಬದಲಾಯಿಸುತ್ತಾ ಕೊನೆಯಲ್ಲಿ ನಾಶವಾಗುವುದು. ಆದುದರಿಂದ ಧೀರನು ತನ್ನನ್ನು ಶರೀರವನ್ನಾಗಿ ಭಾವಿಸುವುದಿಲ್ಲ. ಒಬ್ಬನು ಇಂದ್ರಿಯ ಸುಖಗಳಲ್ಲಿ ಮಗ್ನನಾಗಿ ಇಂದ್ರಿಯಗಳ ಸಂತೋಷವೇ ಜೀವನವೆಂದು ತಿಳಿದರೆ ಅವನು ಸಾಯುವನು; ಏಕೆಂದರೆ ಇಂದ್ರಿಯ ವಿಷಯಗಳ ಸಂಗದಿಂದುಂಟಾಗುವ ಸುಖಗಳೂ ಕ್ಷಣಿಕ. ಆದುದ

ರಿಂದ ಧೀರನು ತಾನು ಇಂದ್ರಿಯಗಳಲ್ಲವೆಂದು ತಿಳಿಯುವನು. ಒಬ್ಬನು ಮನಸ್ಸಿನ ಪ್ರವೃತ್ತಿಗಳನ್ನು ಪ್ರೀತಿಸಿ ತಾನು ಮನಸ್ಸೆಂದು ತಿಳಿದರೆ ಅವನು ಸಾಯುವನು; ಏಕೆಂದರೆ ಮನಸ್ಸಿನ ಪ್ರವೃತ್ತಿಗಳು ಏಳದೇಳವಾದವು ಮತ್ತು ಬಂದು ಹೋಗುತ್ತಲೇ ಇರುವುವು. ಆದುದರಿಂದ ಧೀರನು ತಾನು ಮನಸ್ಸಲ್ಲ ಆದರೆ ಮನಸ್ಸನ್ನು ಉಪಯೋಗಿಸುವ ಮನಸ್ಸಿಗಿಂತ ಮೇಲಾದವನು ಎಂದು ನಂಬುವನು. ಒಬ್ಬನು ಬುದ್ಧಿಯ ವೃತ್ತಿಗಳಲ್ಲೇ ನಿರತನಾಗಿ ತಾನು ಬುದ್ಧಿಯೆಂದು ತಿಳಿದರೆ ಅವನು ಸಾಯುವನು; ಏಕೆಂದರೆ ಬುದ್ಧಿಯು ನಿಶ್ಚಯಶೀಲತೆಯಲ್ಲೂ ಮತ್ತು ಪೂರ್ಣತೆಯುಂಟಾಗುವಕಾಲದಲ್ಲೂ ಇರುವುದಿಲ್ಲ ಮತ್ತು ಸ್ವಭಾವತಃವಾಗಿ ಬದಲಾಯಿಸುತ್ತಿರುವುದು. ಆದುದರಿಂದ ಧೀರನು ತಾನು ಬುದ್ಧಿಯಲ್ಲ ಆದರೆ ಬುದ್ಧಿಯನ್ನು ಉಪಯೋಗಿಸುವ ಬುದ್ಧಿಗಿಂತ ಮೇಲಾದವನು ಎಂದು ತಿಳಿಯುವನು. ಆದುದರಿಂದ ಧೀರನು ಈ ವಿಧವಾದ ಮೋಹಗಳನ್ನು ಪಡೆಯದೆ ತಾನು ನಿಜವಾಗಿ ಪರಮಾತ್ಮನನ್ನು ಅಂತರ್ಯಾಮಿಯಾಗಿ ಪಡೆದಿರುವ ಚಿದಾನಂದ ಸ್ವರೂಪನಾದ ಶಾಶ್ವತನಾದ ಆತ್ಮನೆಂದೂ, ದೇಹೇಂದ್ರಿಯ ಪ್ರಾಣಬುದ್ಧಿಗಳಿಗೆ ಯಜಮಾನನಾಗಿ ಅವುಗಳನ್ನು ತನ್ನ ಸುಖದುಃಖಾದಿಗಳಿಗೆ ಉಪಯೋಗಿಸುತ್ತಾ ಇರುವ ಸಾಕ್ಷಿಸ್ವರೂಪನೆಂದೂ, ಹುಟ್ಟು ಸಾವುಗಳ ಅನುಭವಗಳನ್ನು ಪಡೆಯದ ಅಮರನೆಂದೂ ಅವನು ದೃಢವಾಗಿ ನಂಬಿರುವನು. ಹೇಗೆ ಬಾಲ್ಯಾವಸ್ಥೆಯಿಂದ ಕೌಮಾರಾವಸ್ಥೆಯುಂಟಾದರೆ ಬಾಲಕನು ತಾನು ಸತ್ತೆನೆಂದು ತಿಳಿಯುವುದಿಲ್ಲವೋ ಹಾಗೆಯೇ ಶರೀರವಿಯೋಗವಾದ ಮಾತ್ರಕ್ಕೆ ತಾನು ನಾಶವಾಗುತ್ತೇನೆಂಬ ಮೋಹವನ್ನು ಧೀರನು ಎಂದಿಗೂ ಪಡೆಯುವುದಿಲ್ಲ.

ಶ್ಲೋಕ—ಹದಿನಾಲ್ಕು

**ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣ ಸುಖದುಃಖದಾಃ ।**
**ಆಗಮಾಪಾಯಿನೋಽನಿತ್ಯಾಸ್ತಾಂ ಸ್ತಿತಿ(ಽ)ಕ್ಷಸ್ವ ಭಾರತ ॥**

ಈ ಶ್ಲೋಕದಲ್ಲಿ ಮೂರು ವಾಕ್ಯಗಳಿವೆ—(೧) ಕೌಂತೇಯ, ಮಾತ್ರಾಸ್ಪರ್ಶಾಸ್ತು, ಶೀತೋಷ್ಣ ಸುಖದುಃಖದಾಃ—ಕುಂತಿ ಪುತ್ರನೇ, ಮಾತ್ರೆಗಳು ಸ್ಪರ್ಶಿಸುವುದರಿಂದಲೇ ಶೀತೋಷ್ಣ ಸುಖದುಃಖಾದಿಗಳು ಉಂಟಾಗುತ್ತವೆ. (೨) ಮಾತ್ರಾಃ ಆಗಮ ಅಪಾಯಿನಃ ಅನಿತ್ಯಾಃ — ಮಾತ್ರೆಗಳು ಅಡಿಗಡಿಗೆ ಬರುತ್ತಾ ಹೋಗುತ್ತಾ ಇರುವವುಗಳಾಗಿ ಸ್ವಲ್ಪಕಾಲಮಾತ್ರ ಇರುತ್ತವೆ. (೩) ಭಾರತ! ತಾನ್ (ಶೀತೋಷ್ಣ ಸುಖದುಃಖಾನ್) ತಿತಿಕ್ಷಸ್ವ—ಭಾರತನೇ! ಆ (ಶೀತೋಷ್ಣ ಸುಖದುಃಖದ) ಅನುಭವಗಳನ್ನು ಸಹಿಸಿಕೊಳ್ಳುವ ಶಕ್ತಿಯನ್ನು ವೃದ್ಧಿಪಡಿಸಿಕೋ,

**ಪ್ರಶ್ನೆ** ಒಂದು:—ಮಾತ್ರೆಗಳೆಂದರೇನು ?

**ಉತ್ತರ:**—ಸಾಂಖ್ಯ ಶಾಸ್ತ್ರದಪ್ರಕಾರ ಮತ್ತು ಆಧುನಿಕ ವಿಜ್ಞಾನಶಾಸ್ತ್ರದ ಪ್ರಕಾರ ನಮ್ಮ ಹೊರಗಿರುವ ಪ್ರಪಂಚದ ಪದಾರ್ಥಗಳಿಂದ ಶಬ್ದಸ್ಪರ್ಶಾದಿಗುಣಗಳು

ಅಘನ ಸ್ಪಂದನಗಳು ಎಲ್ಲಾ ಕಡೆಗಳಲ್ಲಿಯೂ ಹೊರಡುತ್ತವೆ. ನಾಡಿಕೆಯಲ್ಲಿ ಶಬ್ದ, ಸ್ಪರ್ಶ, ರೂಪ, ರಸ, ಗಂಧಗುಣಗಳು ಇವೆಯಲ್ಲವೆ? ಆದರೆ ಈ ಪದಾರ್ಥಗಳೂ ಮತ್ತು ಅವುಗಳಲ್ಲಿರುವ ಶಬ್ದಸ್ಪರ್ಶಾದಿಗುಣಗಳೂ ಪಂಚತನ್ಮಾತ್ರೆಗಳಿಂದುಂಟಾಗುತ್ತವೆ. ಆದುದರಿಂದ ಈ ಜಗತ್ತಿನ ಪದಾರ್ಥಗಳನ್ನೂ ಮತ್ತು ಅವುಗಳಲ್ಲಿರುವ ಗುಣಗಳನ್ನು ಒಟ್ಟುಸೇರಿಸಿ "ಮಾತ್ರೆ"ಗಳೆಂದು ಕರೆದಿದ್ದಾರೆ.

**ಪ್ರಶ್ನೆ ಎರಡು:**—ಮನುಷ್ಯನಿಗೆ ಶೀತೋಷ್ಣ ಸುಖದುಃಖಗಳು ಹೇಗೆ ಉಂಟಾಗುತ್ತವೆ?

**ಉತ್ತರ:**—ಈ ಮಾತ್ರೆಗಳು ದೇಹದ ದೇಹೇಂದ್ರಿಯ ಮನಃಪ್ರಾಣ ಬುದ್ಧಿಗಳೊಡನೆ ಸಂಯೋಗವನ್ನು ಪಡೆದರೆ ಆಗ ದೇಹಿಗೆ ಶೀತ, ಉಷ್ಣ, ಸುಖದುಃಖ ಮೊದಲಾದ ಅನುಭವಗಳು ಉಂಟಾಗುತ್ತವೆ. ಅಂದರೇನು? ದೇಹೇಂದ್ರಿಯಾದಿಗಳ ಮತ್ತು ಮಾತ್ರೆಗಳ ಸಂಬಂಧವಿಲ್ಲದಿದ್ದರೆ ಈ ಶೀತೋಷ್ಣ ಸುಖದುಃಖಾನುಭವಗಳು ಯಾವುವೂ ದೇಹಿಗೆ ಉಂಟಾಗುವುದಿಲ್ಲ. ಇದಕ್ಕೆ ಉದಾಹರಣೆ, ನಿದ್ರೆಮಾಡುವಾಗ ಅಂದರೆ ದೇಹಿಯು ಸುಷುಪ್ತ್ಯವಸ್ಥೆಯಲ್ಲಿ ಅವನಿಗೆ ದೇಹೇಂದ್ರಿಯಾದಿಗಳ ಮತ್ತು ಮಾತ್ರೆಗಳ ಸಂಸ್ಪರ್ಶವಿಲ್ಲ. ಆದುದರಿಂದಲೇ ಆ ಕಾಲದಲ್ಲಿ ದೇಹಿಗೆ ಶೀತೋಷ್ಣ ಸುಖದುಃಖಾದಿಗಳ ಅನುಭವವಿರುವುದಿಲ್ಲ.

**ಪ್ರಶ್ನೆ ಮೂರು:**—ಶೀತೋಷ್ಣ ಸುಖದುಃಖಾದಿಗಳನ್ನು ಧೀರನಾದ ಜ್ಞಾನಿಯು ಯಾವ ಭಾವನೆಯಿಂದ ಅನುಭವಿಸುವನು?

**ಉತ್ತರ:**—ಹೊರಗಿನ ಪದಾರ್ಥಗಳು ಮತ್ತು ಅವುಗಳಲ್ಲಿರುವ ಗುಣಗಳು ಪರಿಣಾಮವನ್ನು ಹೊಂದುತ್ತಲೇ ಇರುವುದರಿಂದಲೂ ಮತ್ತು ಮನುಷ್ಯರ ದೇಹೇಂದ್ರಿಯಾದಿಗಳೂ ಕೂಡಾ ಬೇರೆಬೇರೆ ಅವಸ್ಥೆಗಳನ್ನು ಪಡೆಯುತ್ತಿರುವುದರಿಂದಲೂ ದೇಹಿಗೆ ಈ ಮಾತ್ರೆಗಳ ಸ್ಪರ್ಶಗಳೂ ಮತ್ತು ಅವುಗಳಿಂದುಂಟಾಗುವ ಶೀತೋಷ್ಣ ಸುಖದುಃಖಾದಿಗಳು ಸ್ವಲ್ಪಕಾಲ ಮಾತ್ರ ಇರುತ್ತವೆ. ಆದರೆ ನಾವು ಇಷ್ಟಪಡಲಿ ಇಷ್ಟಪಡದಿರಲಿ ಅನಿವಾರ್ಯವಾಗಿ ಸ್ವಲ್ಪಕಾಲ ಅಡಿಗಡಿಗೆ ಬಂದು ಹೋಗುತ್ತಲೇ ಇವೆ; ಆದುದರಿಂದ ಧೀರನಾದ ಜ್ಞಾನಿಯು "ಇವು ನಿಜವಾದ ದೇಹಿಯಾದ ನನಗೆ ಸೇರಿದ್ದಲ್ಲ; ಬಲವಂತದಿಂದ ನನ್ನನ್ನು ನಿರ್ಬಂಧಿಸಿವೆ" ಎಂಬ ಭಾವನೆಯಿಂದ ಇವನ್ನು ಶಾಂತಿಯಿಂದ ಸಹಿಸಬೇಕೇ ವಿನಃ, ಸುಖವು ಯಾವಾಗಲೂ ಇರಬೇಕೆಂದು ಆಸೆಪಡುವುದೂ ಮತ್ತು ದುಃಖವು ಯಾವಾಗಲೂ ಬರಕೂಡದೆಂದು ದ್ವೇಷಿಸುವುದೂ ಪ್ರಕೃತಿಕಟ್ಟಳೆಗಳಿಗೆ ವಿರೋಧವಾಗುವುದು. ಜ್ಞಾನಿಯು ವಿವೇಕದಿಂದಲೂ ಶೀತೋಷ್ಣ ಸುಖದುಃಖಾದಿಗಳನ್ನು ಅವು ತನಗೆ ಸೇರಿದ್ದಲ್ಲವೆಂದೂ, ಆಗಂತುಕಗಳೆಂದೂ ತಿಳಿದು ಶಾಂತಿಯಿಂದ ಸಹಿಸಿಕೊಂಡು ತನ್ನ ಕರ್ತವ್ಯಕರ್ಮಗಳನ್ನು ಉತ್ಸಾಹದಿಂದಲೂ ಸಂತೋಷದಿಂದಲೂ ನಡೆಸುತ್ತಾನೆ.

# ಪುಷ್ಪ ಎರಡು—ವೇದಗಳು ಮತ್ತು ಭಕ್ತರ ಭಗವದನುಭವ

## ವಿಷಯ ಕ್ರಮ


| | | ಪುಟ |
|---|---|---|
| | **ಮಾಲೆ ಐದು—ವೇದಗಳ ವಿಚಾರ—ಸಂಹಿತೆಗಳು ಮತ್ತು ಬ್ರಾಹ್ಮಣಗಳು** | |
| 40 | ವೇದಗಳ ವಿಚಾರದಲ್ಲಿ ನಮ್ಮ ದೇಶದ ಪ್ರಾಚ್ಯಾಚಾರ್ಯರಿಗೂ ಪಶ್ಚಿಮ ದೇಶಗಳ ತಜ್ಞರಿಗೂ ಇರುವ ಅಭಿಪ್ರಾಯ ಭೇದಗಳು. | 1-2 |
| 41 | ವೇದಗಳು ಹೇಗೆ "ಶ್ರುತಿಗಳು"? | 2.3 |
| 42 | ವೇದಗಳು ಹೇಗೆ "ಅನಾದಿ"? | 3.4 |
| 43 | ವೇದಗಳ ಸಾಮಾನ್ಯ ಭಾಗಗಳು. | 4.5 |
| 44 | ಸಂಹಿತೆಗಳ ವಿಚಾರ. | 5.6 |
| 45 | ದೇವತೆಗಳು ಯಾರು? | 6.7 |
| 46 | ಬ್ರಾಹ್ಮಣಗಳ ವಿಚಾರ. | 8 |
| | **ಮಾಲೆ ಹದಿನಾರು—ವೇದಗಳ ವಿಚಾರ-ಆರಣ್ಯಕಗಳು ಮತ್ತು ಉಪನಿಷತ್ತುಗಳು.** | |
| 47 | ಆರಣ್ಯಕಗಳನ್ನೂ ಉಪನಿಷತ್ತುಗಳನ್ನೂ ಉಪದೇಶ ಮಾಡುತ್ತಿದ್ದ ಆಶ್ರಮಗಳ ಸನ್ನಿವೇಶಗಳು. | 1.2 |
| 48 | ಎಷ್ಟು ಉಪನಿಷತ್ತುಗಳಿವೆ? ಇವುಗಳನ್ನು ಯಾರು ಶ್ರವಣ ಮಾಡಿದರು? | 2.3 |
| 49 | ದ್ವಾದಶ ಉಪನಿಷತ್ತುಗಳ ಒಂದೊಂದರಲ್ಲಿಯೂ ಬೋಧಿಸಿರುವ ಮುಖ್ಯ ಉಪದೇಶಗಳಾವುವು? | 3-4-5 |
| 50 | ಉಪನಿಷತ್ತುಗಳಲ್ಲಿರುವ ಭಿನ್ನಾಭಿಪ್ರಾಯಗಳನ್ನು ಸಮನ್ವಯ ಮಾಡಿರುವ ಪ್ರಕಾರಗಳು. | 5-6 |
| 51 | ಉಪನಿಷತ್ತುಗಳಲ್ಲಿರುವ ಸಾರ್ವಲೌಕಿಕ ತತ್ವಹಿತ ಪುರುಷಾರ್ಥಗಳು. | 6-7-8 |
| | **ಮಾಲೆ ಒಂಬತ್ತು—ಭಗವಂತನ ಸ್ವರೂಪ, ರೂಪ ಗುಣಗಳು.** | |
| 52 | "ತಿರುವಾಯ್ಮೊಳಿ" ಎಂಬ ಗ್ರಂಥವು ಹೇಗೆ ಉಂಟಾಯಿತು? | 1.2 |
| 53 | ಭಗವಂತನು ಯಾರು? | 2-3 |
| 54 | ಭಗವಂತನು ಪ್ರತ್ಯಕ್ಷ ಅನುಮಾನ ಪ್ರಮಾಣಗಳಿಗೆ ಗೋಚರನಾಗುವುದಿಲ್ಲ. | 3-4 |
| 55 | ಭಗವಂತನ ನಿಜಸ್ವರೂಪ "ನೇತಿ-ನೇತಿ." | 4 |
| 56 | ಭಗವಂತನ "ಸತ್ಯಂ ಜ್ಞಾನಂ ಆನಂದಂ-ಅನಂತಂ" ಸ್ವರೂಪವೆಂದರೆ ಅರ್ಥವೇನು? | 5 |
| 57 | ಒಬ್ಬನೇ ಆದ ಭಗವಂತನು ಅನಂತ ರೂಪಗಳನ್ನು ಹೇಗೆ ಪಡೆಯುವನು? | 6.7 |
| 58 | ಭಗವಂತನ ವಿಶ್ವರೂಪದ ವರ್ಣನೆ. | 7-8 |
| 59 | ಭಗವಂತನ ಗುಣಗಳು. | 8 |

ಪುಟ


ಮಾಲೆ ಹತ್ತು—ಜಗತ್ತಿಗೂ ಭಗವಂತನಿಗೂ ಇರುವ ಸಂಬಂಧ.

60 ಜಗತ್ತಿನ ಸ್ವರೂಪ. 1-2
61 ಬ್ರಹ್ಮನಿಗೂ ಜಗತ್ತಿಗೂ ಇರುವ ಸಂಬಂಧ—
ಶಾಂತಿ ಮಂತ್ರದ ಅರ್ಥ. 3-4
62 ಪ್ರತಿಯೊಂದು ವಸ್ತುವೂ ಹೇಗೆ ಬ್ರಹ್ಮವು? 4-5
63 ಪ್ರಳಯ ಕಾಲದ ಜಗತ್ತಿನ ಸ್ವರೂಪ. 5
64 ಪ್ರಳಯ ಕಾಲದ ಬ್ರಹ್ಮನಿಂದ ಸ್ಥೂಲ ಸೃಷ್ಟಿಯಾಗುವ ಕ್ರಮ. 5-6
65 ಭಗವಂತನು ಪರಿಣಾಮಗಳನ್ನು ಪಡೆಯುವನೆ? 6-7
66 "ನಾನೂ, ನೀನೂ, ಜಗತ್ತೂ" ಭಗವಂತನಿಗೆ ಹೇಗೆ ಶರೀರವು? 7-8

ಮಾಲೆ ಹನ್ನೊಂದು—ಭಗವದ್ಭಕ್ತನು ಜಗತ್ತನ್ನು ಭಗವಂತನನ್ನು ಹೇಗೆ ಅನುಭವಿಸುವನು? (ಭಾಗ ಒಂದು.)

67 ಭಗವದ್ಭಕ್ತರು ಯಾರು? ಅವರ ಲಕ್ಷಣಗಳು ಮತ್ತು ಧ್ಯೇಯ. 1-2-3
68 ಭಗವದ್ಭಕ್ತರ ಭಕ್ತಿಯ ಅಂತಸ್ತುಗಳು-ಭಕ್ತಿ;
ಪರಭಕ್ತಿ; ಪರಮಭಕ್ತಿ. 3-4
69 ಮೂರು ಅಂತಸ್ತಿನ ಭಕ್ತರ ಆಧ್ಯಾತ್ಮಿಕ ಅಭ್ಯಾಸಗಳ ಪ್ರಕಾರಗಳು. 5
70 ಭಗವದ್ಭಕ್ತನು ಒಟ್ಟು ಜಗತ್ತನ್ನು, ಅಚೇತನ ಪದಾರ್ಥಗಳನ್ನು,
ಸಸ್ಯಗಳನ್ನು, ಪ್ರಾಣಿಗಳನ್ನು ಹೇಗೆ ಅನುಭವಿಸುವನು ಮತ್ತು
ಉಪಯೋಗಿಸುವನು? 6-7
71 ಭಗವದ್ಭಕ್ತನು ದೇವತಾದಿಗಳನ್ನು ಹೇಗೆ ಭಾವಿಸುವನು? 8

ಮಾಲೆ ಹನ್ನೆರಡು—ಭಗವದ್ಭಕ್ತನು ಜಗತ್ತನ್ನು ಭಗವಂತನನ್ನು ಹೇಗೆ ಅನುಭವಿಸುವನು? (ಭಾಗ ಎರಡು.)

72 ಭಗವದ್ಭಕ್ತನು ತನ್ನ ಶರೀರವನ್ನು ಅಂತಃಕರಣವನ್ನು
ಹೇಗೆ ಭಾವಿಸಿ ಉಪಯೋಗಿಸುವನು? 1-2-3
73 ಭಗವದ್ಭಕ್ತನು ತನ್ನ ಕುಟುಂಬವನ್ನು, ಜನಾಂಗವನ್ನು ಮತ್ತು
ಮನುಷ್ಯ ಸಮಾಜವನ್ನು ಹೇಗೆ ಭಾವಿಸಿ ಉಪಯೋಗಿಸುವನು? 3-4-5
74 ಭಗವದ್ಭಕ್ತನು ತನ್ನ ವೈಯಕ್ತಿಕ ಆತ್ಮನನ್ನು ಹೇಗೆ ಭಾವಿಸಿ
ಮನನ ಮಾಡುತ್ತಾನೆ? 5-6
75 ಭಗವದ್ಭಕ್ತನು ಭಗವಂತನನ್ನು ಹೇಗೆ ಭಾವಿಸಿ ವಿವಿಧ
ಭಕ್ತಿಯೋಗ ಪ್ರಕಾರಗಳಿಂದ ಅನುಭವಿಸುವನು? 6-7-8

ಶ್ರೀ ನವಭಾರತ ಆಶ್ರಮ
ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

## (ಮಾಲೆ—ಆರು)

## ವೇದಗಳ ವಿಚಾರ ಸಂಹಿತೆಗಳು—ಮತ್ತು ಬ್ರಾಹ್ಮಣಗಳು.

ವೇದಗಳ ವಿಚಾರವನ್ನು ಸ್ಥೂಲವಾಗಿಯೂ ಸಂಗ್ರಹವಾಗಿಯೂ ತಿಳಿಯಲು ಪ್ರಯತ್ನಿಸುವಾಗ ಒಂದು ಜಟಿಲವಾದ ಸಮಸ್ಯೆಯನ್ನು ನಾವು ಎದುರಿಸಬೇಕಾಗುತ್ತದೆ. ಪಶ್ಚಿಮ ದೇಶಗಳ ತಜ್ಞರು ವೇದಗಳ ವಿಚಾರವಾಗಿ ತೀರ್ಮಾನಿಸಿರುವ ಅಭಿಪ್ರಾಯಗಳಿಗೂ ಪೂರ್ವಕಾಲದಿಂದ ಸಾಂಪ್ರದಾಯಿಕವಾಗಿ ನಡೆದುಬಂದಿರುವ ನಮ್ಮ ಪೂರ್ವಾಚಾರ್ಯರುಗಳ ಉಪದೇಶಗಳಿಗೂ ಬಹಳ ವ್ಯತ್ಯಾಸಗಳಿವೆ. ಗದ್ಯ ಪದ್ಯಗಳ ರೂಪಗಳಲ್ಲಿರುವ ವೇದವಾಕ್ಯಗಳು ಬೇರೆ ಬೇರೆ ಕಾಲಗಳಲ್ಲಿ ಜೀವಿಸಿದ್ದ ಕವಿಗಳಿಂದ ರಚನೆ ಮಾಡಲ್ಪಟ್ಟವೆಂದೂ, ಅನಾಗರೀಕರಾದ ಜನರು ನಾಗರೀಕತೆಯನ್ನು ಪಡೆಯುತ್ತಿದ್ದ ಆರಂಭ ಕಾಲದಲ್ಲಿ ಪ್ರಕೃತಿ ಶಕ್ತಿಗಳನ್ನೇ ದೇವತೆಗಳೆಂದು ನಂಬಿ ಕಾವ್ಯ ಶೈಲಿಯಲ್ಲಿ ಅವರನ್ನು ಋಗ್ವೇದದ ಮಂತ್ರಗಳ ಮೂಲಕ ಸ್ತೋತ್ರ ಮಾಡುತ್ತಿದ್ದರೆಂದೂ, ಸ್ವಲ್ಪ ಕಾಲದ ಮೇಲೆ ಪುರೋಹಿತರುಗಳು ಈ ಮಂತ್ರಗಳನ್ನೇ ಯಜ್ಞಯಾಗಾದಿ ಪೂಜೆಗಳಿಗೆ ಉಪಯೋಗಿಸುವ ಗ್ರಂಥಗಳನ್ನಾಗಿ ಬರೆದರೆಂದೂ, ಮತ್ತು ಆರ್ಯರ ನಾಗರೀಕತೆಯು ಬೆಳೆದ ಮೇಲೆ ತಾತ್ವಿಕ ಅಭಿಪ್ರಾಯಗಳಿಂದ ಕೂಡಿದ ಉಪನಿಷದ್ವಾಕ್ಯಗಳು ಯೋಗಿಗಳಿಂದ ರಚನೆ ಮಾಡಲ್ಪಟ್ಟವೆಂದೂ ಮತ್ತು ಒಟ್ಟಿನಲ್ಲಿ ವೇದಗಳು ಬೇರೆ ಬೇರೆ ಕಾಲಗಳ ಜನರ ಗುಂಪುಗಳ ಅಭಿಪ್ರಾಯಗಳನ್ನು ಒಳಗೊಂಡಿರುವುದರಿಂದ ವೇದ ಮಂತ್ರಗಳಲ್ಲಿರುವ ವಿಷಯಗಳು ಒಂದಕ್ಕೊಂದು ವಿರೋಧವಾಗಿವೆಯೆಂದೂ ಪಶ್ಚಿಮ ದೇಶದ ತಜ್ಞರು ತೀರ್ಮಾನಿಸಿರುವರು. ಅವರು ವೇದಗಳ ಮೇಲೆ ಆರೋಪಿಸಿರುವ ಕೆಲವು ದೋಷಗಳಿಗೆ ಆಧಾರಗಳಿಲ್ಲವಾದುದರಿಂದ ಈ ಲೇಖನದಲ್ಲಿ ಅವನ್ನು ವಿವರಿಸುವುದಿಲ್ಲ. ಆದರೆ ಭಾರತದ ಪೂರ್ವಾಚಾರ್ಯರು ವೇದಗಳೆಲ್ಲವೂ ಅಪೌರುಷೇಯವೆಂದೂ, ಶ್ರುತಿಗಳೆಂದೂ, ಅನಾದಿಯೆಂದೂ, ಭಗವಂತನಿಂದಲೇ ಲೋಕದಲ್ಲಿ ಪ್ರಚಾರವಾದುವುಗಳೆಂದೂ, ಋಷಿಗಳು ತಮ್ಮ ತಪಸ್ಸಿನ ಪ್ರಭಾವದಿಂದ ಅರಿತ ದಿವ್ಯ ಶಬ್ದರಾಶಿಯೆಂದೂ, ಮಾನವರ ಐಹಿಕ ಮತ್ತು

ಆನುಷ್ಠಿತ ಶ್ರೇಯಸ್ಸಿಗೆ ಅಲೌಕಿಕ ಉಪಾಯಗಳನ್ನು ತಿಳಿಸುತ್ತವೆಂದೂ, ಉಚ್ಚರಿಸಿದ ಮಾತ್ರದಿಂದಲೇ ನಮ್ಮ ಪಾಪಗಳನ್ನು ನಿರ್ಮೂಲ ಮಾಡುವ ಶಕ್ತಿಯುಳ್ಳ ಕೂಡಿದ ಪವಿತ್ರ ಮತ್ತು ದಿವ್ಯ ವಾಣಿಯೆಂದೂ, ಜಗತ್ತಿಗೆ ಕಾರಣವಾದ ಸತ್ಯ ಸ್ವರೂಪವನ್ನೂ ಮತ್ತು ಅದರ ಸೃಷ್ಟಿ ಸ್ಥಿತಿ ಲಯಾದಿಗಳನ್ನೂ ತಿಳಿಯಪಡಿಸುವ ಉತ್ತಮ ಪವಿತ್ರ ಗ್ರಂಥವೆಂದೂ, ಮಾನವನು ಚತುರ್ವಿಧ ಪುರುಷಾರ್ಥಗಳನ್ನೂ ಹೊಂದಲು ಸಹಾಯ ಮಾಡುವ ಧರ್ಮಗ್ರಂಥವೆಂದೂ, ಅವು ಭಾರತೀಯ ಇತರ ಶಾಸ್ತ್ರಗಳಿಗೆಲ್ಲಾ ಆಧಾರವಾಗಿವೆಯೆಂದೂ, ಅವುಗಳ ವಾಕ್ಯಗಳಲ್ಲೂ ಅಭಿಪ್ರಾಯಗಳಲ್ಲೂ ಐಕ್ಯತೆ ಇದೆಯೆಂದೂ ಮತ್ತು ನಮಗೆ ಗೋಚರವಾಗದಿರುವ ಪ್ರತ್ಯಕ್ಷರಾದ ದೇವತೆಗಳಿಂದಲೂ ಪೂಜಿಸಲ್ಪಡುವ ದಿವ್ಯ ಜ್ಞಾನರಾಶಿಯೆಂದೂ ಉಪದೇಶ ಮಾಡಿರುವರು. ಹೀಗೆ ಸಾಂಪ್ರದಾಯಿಕವಾಗಿ ನಮಗೆ ಉಪದೇಶವಾಗಿರುವ ಅಭಿಪ್ರಾಯಗಳನ್ನು ಸಕಾರಣವಾಗಿ ತಿಳಿಯಲು ಪ್ರಯತ್ನಿಸೋಣ.

## ವೇದಗಳು ಹೇಗೆ ಶ್ರುತಿಗಳು ?

ವೇದಗಳೆಂದರೇನು? ವೇದವೆಂದರೆ ತಿಳುವಳಿಕೆ ಎಂಬುದು ಸಾಮಾನ್ಯವಾದ ಅರ್ಥ. ಆದರೆ ವೇದಗಳೆಂದರೆ ವೇದ ಮಂತ್ರಗಳನ್ನು ಅಚ್ಚು ಹಾಕಿಸಿರುವ ಗ್ರಂಥವೆಂಬುದು ಮೊದಲನೆಯ ಅಭಿಪ್ರಾಯ; ಶ್ರವಣಭಕ್ತಿಯನ್ನುಂಟುಮಾಡುವ ದೇವಗಾನದಲ್ಲಿ ಅಥವ ಸುಸ್ವರದಲ್ಲಿ ಶ್ರೋತ್ರಿಯರಿಂದ ಉಚ್ಚರಿಸಲ್ಪಡುತ್ತಿರುವ ವೇದ ಮಂತ್ರಗಳ ಶಬ್ದರಾಶಿ ಎಂಬುದು ಎರಡನೆಯ ಅಭಿಪ್ರಾಯ; ಅದರ ವಾಕ್ಯಗಳಲ್ಲಿ ಬೋಧಿಸಿರುವ ಸೂಕ್ಷ್ಮವಾದ ಮತ್ತು ಶಾಶ್ವತವಾದ ಆಧ್ಯಾತ್ಮಿಕ ಶಕ್ತಿಗಳ ಮತ್ತು ಧರ್ಮಗಳ ಸಂಗ್ರಹ ಎಂಬುದು ಮೂರನೆಯ ಅಭಿಪ್ರಾಯ ಮತ್ತು ಶಾಶ್ವತವಾದ ಭಗವಂತನ ಅನಂತ ಜ್ಞಾನದ ಹೊರಗಿನ ವ್ಯಕ್ತಿಗಳು ಎಂಬುದು ನಾಲ್ಕನೆಯ ಅಭಿಪ್ರಾಯ. ಒಟ್ಟಿನಲ್ಲಿ ನೋಡಿದರೆ ಈ ಅಭಿಪ್ರಾಯಗಳೆಲ್ಲವೂ ನಿಜ. ವೇದಗಳು ಆಧ್ಯಾತ್ಮ ಶಕ್ತಿಗಳ ಮತ್ತು ಧರ್ಮಗಳ ಸಾರಗಳನ್ನು ಒಳಗೊಂಡಿರುವ ಭಗವಂತನ ಜ್ಞಾನವೂ ಹೌದು ಮತ್ತು ಋಷಿಗಳಿಂದ ಕೇಳಲ್ಪಟ್ಟು ಅಥವ ಸಾಕ್ಷಾತ್ಕರಿಸಲ್ಪಟ್ಟ ದಿವ್ಯ ಶಬ್ದರಾಶಿಯೂ ಹೌದು. ಆದುದರಿಂದಲೇ ಪರಂಪರಾನುಕ್ರಮವಾಗಿ ಕ್ರಮವಾದ ಸ್ವರದಿಂದ ಕಲಿಯಲ್ಪಟ್ಟ ವೇದವನ್ನು "ಶ್ರುತಂ—ಕೇಳಲ್ಪಟ್ಟದ್ದು" ಎಂದರೆ "ಶ್ರುತಿಗಳು" ಎಂದು ಬಹಳ ಹಿಂದಿನ ಕಾಲದಿಂದಲೂ ಕರೆಯುತ್ತಿರುವರು. ಹೀಗೆ ಋಷಿಗಳಿಂದಲೂ ಮತ್ತು ಅವರ ವಂಶಸ್ಥರಿಂದಲೂ ಆದಿಯಿಂದ ಇಲ್ಲಿಯವರೆಗೆ ಆನಂದದಿಂದ ಕೇಳಲ್ಪಟ್ಟ ಶ್ರುತಿಗಳನ್ನು ಅಚ್ಚು ಹಾಕಿಸಿದ ಒಂದು ಗ್ರಂಥವೇ ವೇದವೆಂದು ಯಾರಾದರೂ ಭಾವಿಸಿದರೆ, ಮಹಾರಾಜನ ಒಂದು ಪ್ರತಿಮೆಯನ್ನು ನೋಡಿ ಆ ಪ್ರತಿಮೆಯನ್ನೇ ಮಹಾರಾಜನೆಂದು ತಿಳಿದ ಹಾಗಾಗುತ್ತದೆ. ಯಜ್ಞ ಯಾಗಾದಿ ವೈದಿಕ ಕರ್ಮಗಳಲ್ಲಿ ಕ್ರಮವಾಗಿ ದೇವಗಾನರೂಪವಾಗಿ ಉಚ್ಚರಿಸಲ್ಪಡುತ್ತಿರುವ ವೇದ ಮಂತ್ರಗಳ ಫಲಕವನ್ನು ಅಚ್ಚುಹಾಕಿಸಿರುವ ವೇದದ ಪುಸ್ತಕವನ್ನಾಗಲೀ ಅಥವ ಅದರ ತರ್ಜುಮೆ

ಯನ್ನಾಗಲೀ ಓದುವುದರ ಫಲಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಯಜ್ಞಾದಿಗಳಲ್ಲಿ ವಿಧಿಗಳಿಗನುಗುಣವಾಗಿ ಕ್ರಮವಾಗಿ ಮಂತ್ರಗಳನ್ನು ಪಾರಾಯಣ ಮಾಡುವುದರಿಂದ "ಅಪೂರ್ವ" ವೆಂಬ ದಿವ್ಯ ಶಕ್ತಿಯುಂಟಾಗಿ ಅದು ಮುಂದೆ ಮಾನವನಿಗೆ ಅದೃಷ್ಟವಾದ ಉತ್ತಮ ಫಲಗಳನ್ನು ಕೊಡುತ್ತದೆ ಎಂದು ಮೀಮಾಂಸ ದಾರ್ಶನಿಕರು ಸಾಧಿಸಿರುವರು.

## ವೇದಗಳು ಹೇಗೆ ಅನಾದಿ ?

ಪಶ್ಚಿಮ ದೇಶಗಳ ವಿದ್ಯಾವಂತರು ವೇದಗಳ ಭಾಷೆ, ಶೈಲಿ ಮತ್ತು ಅವುಗಳ ಬೇರೆ ಬೇರೆ ವಾಕ್ಯಗಳಲ್ಲಿರುವ ಅಭಿಪ್ರಾಯಗಳ ವಿಮರ್ಶೆಗಳಿಂದ ವೇದಗಳ ಭಾಗಗಳು ಉಂಟಾದ ಕಾಲಗಳನ್ನು ತೀರ್ಮಾನ ಮಾಡಲು ಪ್ರಯತ್ನ ಪಟ್ಟಿರುವರು. ಆದರೆ ಈ ವಿಚಾರದಲ್ಲಿ ವಿಶೇಷವಾಗಿ ಭಿನ್ನಾಭಿಪ್ರಾಯಗಳಿರುವುದರಿಂದ ವೇದಗಳು ಹುಟ್ಟಿದ ಕಾಲವು ಯಾವುದೆಂಬುದು ಸ್ಪಷ್ಟವಾಗಿ ಗೊತ್ತಾಗಿಲ್ಲ; ಆದುದರಿಂದ ವೇದಗಳನ್ನು ಅನಾದಿ ಎಂದು ಹೇಳಬಹುದು ಎಂಬುದು ಕೆಲವರ ಅಭಿಪ್ರಾಯ. ಆದಿಯಿಂದ ಹಿಡಿದು ಇಲ್ಲಿಯವರೆಗೆ ನಮಗೆ ಸಿಕ್ಕಿರುವ ಭಾರತೀಯ ಸಂಸ್ಕೃತಿಯ ಗ್ರಂಥಗಳೆಲ್ಲಾ ವೇದಗಳು ಅನಾದಿಯೆಂದು ಹೇಳಿವೆ; ಆದುದರಿಂದ ವೇದಗಳು ಒಬ್ಬ ವ್ಯಕ್ತಿಗೆ ಸಂಬಂಧಪಟ್ಟದ್ದಲ್ಲ ಮತ್ತು ಒಟ್ಟು ಭಾರತೀಯ ಜನಾಂಗಕ್ಕೆ ಬಹುಕಾಲದಿಂದ ಆಸ್ತಿಯಾಗಿ ಬಂದಿರುವ ಸಾರ್ವಜನಿಕ ಪವಿತ್ರ ಗ್ರಂಥವಾಗಿವೆ ಎಂಬುದು ಇನ್ನು ಕೆಲವರ ಅಭಿಪ್ರಾಯ. ವೈಜ್ಞಾನಿಕ ಶಾಸ್ತ್ರಜ್ಞರು ಕಂಡುಹಿಡಿದ ಪ್ರಕೃತಿಯಲ್ಲಿರುವ ನಿಯತವಾದ ಕಟ್ಟಳೆಗಳು ಹೇಗೆ ಶಾಶ್ವತವೋ ಅಥವ ಅನಾದಿಯೋ ಹಾಗೆಯೇ, ವೇದಗಳಲ್ಲಿ ಪ್ರತಿಪಾದಿಸಿರುವ ಆಧ್ಯಾತ್ಮಿಕ ಮತ್ತು ನೈತಿಕ ಬಲದಿಂದ ಕೂಡಿದ ಕಟ್ಟಳೆಗಳೂ ಶಾಶ್ವತ ಅಥವ ಅನಾದಿ ಎಂಬುದು ಮತ್ತೆ ಕೆಲವರ ಅಭಿಪ್ರಾಯ. ಉದಾಹರಣೆಗೆ, ಗುರುತ್ವಾಕರ್ಷಣವನ್ನು (Gravitation) ನ್ಯೂಟನ್ ಎಂಬ ಮಹನೀಯನು ಕಂಡುಹಿಡಿದನೇ ಹೊರತು ಆ ಶಕ್ತಿಯನ್ನೇ ಉಂಟುಮಾಡಲಿಲ್ಲ; ಆ ಶಕ್ತಿಯು ಶಾಶ್ವತವಾಗಿ ಅಂದರೆ ಅನಾದಿಯಾಗಿಯೇ ಇದೆ. ಹಾಗೆಯೇ ವೇದಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ಸೂಕ್ಷ್ಮ ಆಧ್ಯಾತ್ಮಿಕ ಮತ್ತು ನೈತಿಕ ಕಟ್ಟಳೆಗಳು ಪುರಾತನ ಭಾರತೀಯ ಋಷಿಗಳಿಂದ ಕಂಡುಹಿಡಿಯಲ್ಪಟ್ಟು ಮಾನವರಿಗೆ ಉಪದೇಶಮಾಡಲ್ಪಟ್ಟಿವೆ; ಆದರೆ ಆ ಕಟ್ಟಳೆಗಳನ್ನು ಋಷಿಗಳು ಸೃಷ್ಟಿಸಲಿಲ್ಲ; ಅವು ಶಾಶ್ವತ ಅಥವ ಅನಾದಿಯಾಗಿವೆ. ಆದುದರಿಂದ ವೇದಗಳು ಅನಾದಿ. ವೇದಗಳ ಶಬ್ದರಾಶಿಯೂ ಅನಾದಿ ಎಂಬುದು ಬಹುಮಂದಿ ಭಾರತೀಯರ ಅಭಿಪ್ರಾಯ; ಭಗವಂತನು ಜಗತ್ತನ್ನು ಹೇಗೆ ಸೃಷ್ಟಿ ಮಾಡಿದನೋ ಹಾಗೆಯೇ ವೇದ ಮಂತ್ರಗಳ ಮತ್ತು ವಾಕ್ಯಗಳ ಶಬ್ದ ರಾಶಿಯನ್ನು ಸೃಷ್ಟಿ ಮಾಡಿದನು. ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳು ಹೇಗೆ ಚಕ್ರಾಕಾರವಾಗಿ ನಡೆಯುತ್ತಿವೆಯೋ ಹಾಗೆಯೇ ಅದೇ ಕ್ರಮದಲ್ಲಿ ವೇದಗಳ ಸೃಷ್ಟಿ ಸ್ಥಿತಿ ಲಯಗಳು ಚಕ್ರಾಕಾರವಾಗಿ ನಡೆಯುತ್ತಲೇ ಇವೆ. ಸಮಾನಾಂತರ ರೇಖೆಗಳು ಇರುವ ಹಾಗೆ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳೂ ವೇದ ಶಬ್ದಗಳ ಸೃಷ್ಟಿ ಸ್ಥಿತಿ

ವಿಷಯಗಳೂ ಸಮಾನಾಂತರವಾಗಿ ನಡೆಯುತ್ತಲೇ ಇವೆ ಎಂಬುದು ಇವರ ಮತ. ವೇದಗಳೆಂಬ ಈ ದಿವ್ಯ ಶಬ್ದರಾಶಿಯನ್ನು ತಮ್ಮ ಸಮಾಧಿ ಜ್ಞಾನದ ವೇಳೆಯಲ್ಲಿ ಋಷಿಗಳು ತಮ್ಮ ಅಂತರದ ದಿವ್ಯ ಕಿವಿಗಳಲ್ಲಿ ಕೇಳಿ ತಮ್ಮ ಶಿಷ್ಯರಿಗೆ ಪರಂಪರೆಯಾಗಿ ತಿಳಿಸಿದರೇ ವಿನಾ ಅವರು ಈ ಮಂತ್ರಗಳನ್ನು ವಾಕ್ಯಗಳನ್ನು ರಚನೆ ಮಾಡಲಿಲ್ಲ. ಈ ವಿಷಯವಾಗಿ ಇನ್ನೊಂದು ರಹಸ್ಯವಾದ ಅಭಿಪ್ರಾಯವಿದೆ. ಜಗತ್ಕಾರಣನಾದ ಭಗವಂತನ ಜ್ಞಾನವೇ ವೇದಗಳು ; ಆ ಅನಂತಜ್ಞಾನದ ಹೊರಗಿನ ಶರೀರವೇ ಶ್ರುತಿಯೆಂದು ಕರೆಯಲ್ಪಡುವ ದಿವ್ಯ ಶಬ್ದರಾಶಿ. "ಯೋ ವೇದೇಭ್ಯಃ ಅಖಿಲಂ ಜಗತ್ ನಿರ್ಮಮೇ" ಎಂದು ಹೇಳಿದೆ. ಇದರ ಅಭಿಪ್ರಾಯವೇನು ? ಭಗವಂತನು ವೇದ ಜ್ಞಾನದ ಆಧಾರದಿಂದ ಜಗತ್ತನ್ನು ಸೃಷ್ಟಿಸುತ್ತಲೇ ಇರುವನು ; ಅಂದರೇನು, ಸೃಷ್ಟಿಗಿಂತ ಮುಂಚೆಯೇ ವೇದಗಳು ಇದ್ದುವು. ಆದುದರಿಂದ ವೇದವು ಅನಾದಿ. ಹೀಗೆ ವೇದಗಳಲ್ಲಿ ಕಂಡುಬರುವ ಆಧ್ಯಾತ್ಮಿಕ ವಸ್ತುಸ್ಥಿತಿ ಕಟ್ಟಳೆಗಳು ಅನಾದಿಯಾದುದರಿಂದಲೂ, ವೇದಗಳ ದಿವ್ಯ ಶಬ್ದರಾಶಿಯೂ ಅನಾದಿಯಾದುದರಿಂದಲೂ ಮತ್ತು ಭಗವಂತನ ಜ್ಞಾನವಾದ ವೇದವು ಭಗವಂತನ ಹಾಗೆಯೇ ಅನಾದಿಯಾದುದರಿಂದಲೂ ನಮ್ಮ ಪೂರ್ವಿಕರು ವೇದಗಳನ್ನು "ಅಪೌರುಷೇಯ" ವೆಂದು ಕರೆದಿರುವರು. ಅಂದರೆ ಯಾವನೊಬ್ಬ ಮಾನವ ಅಥವ ದೇವತಾ ಶಕ್ತಿಯಿಂದ ರಚನೆ ಮಾಡಲ್ಪಟ್ಟವುಗಳಲ್ಲ ಎಂದು ತಿಳಿಯಬೇಕಾಗುತ್ತದೆ.

## ವೇದಗಳ ಸಾಮಾನ್ಯ ಭಾಗಗಳು

ಎಲ್ಲಾ ವೇದಗಳೂ ಸೇರಿದರೆ ಅವುಗಳ ಪ್ರಮಾಣವು ಹಿರಿದು ; ಆದಾಗ್ಯೂ ಅನೇಕ ವೇದವಾಕ್ಯಗಳು ಈಗ ಪ್ರಚಾರದಲ್ಲಿಲ್ಲವೆಂದು ವಿಷ್ಣುಪುರಾಣದಲ್ಲಿ ಹೇಳಿದೆ. ಬಹುಶಃ ವೇದಗಳನ್ನು ಕಂಠಪಾಠ ಮಾಡಿ ಪಾರಾಯಣ ಮಾಡುತ್ತಿದ್ದ ಕೆಲವು ಶ್ರೋತ್ರಿಯ ವಂಶಗಳು ನಾಶವಾದ್ದರಿಂದ ಆಯಾ ಕುಟುಂಬಗಳಲ್ಲಿ ಬಳಕೆಯಲ್ಲಿದ್ದ ವೇದಸೂಕ್ತಗಳು ಈಗ ಪ್ರಚಾರದಲ್ಲಿಲ್ಲವೆಂದು ಶ್ರೀ ಸ್ವಾಮಿವಿವೇಕಾನಂದರು ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಅಂತು ಋಷಿ ದ್ವೈಪಾಯನರು ತಮ್ಮ ಕಾಲದಲ್ಲಿ ಬಳಕೆಯಲ್ಲಿದ್ದ ವೇದವಾಕ್ಯಗಳನ್ನೆಲ್ಲಾ ಒಟ್ಟುಗೂಡಿಸಿ ಅವನ್ನು ಋಗ್ವೇದವೆಂದೂ, ಯಜುರ್ವೇದವೆಂದೂ, ಸಾಮವೇದವೆಂದೂ, ಮತ್ತು ಅಥರ್ವಣವೇದವೆಂದೂ, ನಾಲ್ಕು ಭಾಗ ಮಾಡಿದ್ದಾರೆ ; ಯಜುರ್ವೇದದಲ್ಲಿ ಪುನಃ ಶುಕ್ಲಯಜುರ್ವೇದ (ತೈತ್ತಿರೀಯ ಸಂಹಿತೆ) ಮತ್ತು ಕೃಷ್ಣಯಜುರ್ವೇದ (ವಾಜಸನೇಯಸಂಹಿತೆ) ಎಂದು ಎರಡು ಭಾಗವಿದೆ. ಆಯಾ ವೇದಗಳಲ್ಲಿರುವ ವಾಕ್ಯಗಳನ್ನೂ ಅಭಿಪ್ರಾಯಗಳನ್ನೂ ಅನುಸರಿಸಿ ಪ್ರತಿಯೊಂದು ವೇದವನ್ನೂ ಸಂಹಿತೆಗಳೆಂದೂ ಬ್ರಾಹ್ಮಣಗಳೆಂದೂ ಎರಡು ವಿಭಾಗ ಮಾಡಿದರು. ಬ್ರಾಹ್ಮಣಗಳಲ್ಲಿ ಅನೇಕ ಅಧ್ಯಾಯಗಳನ್ನು ಕಾಡಿನಲ್ಲಿ ಉಪಾಸನೆ ಮಾಡಬೇಕಾದ "ಆರಣ್ಯಕ"ಗಳೆಂದು ಕರೆದರು. ಈ ಆರಣ್ಯಕಗಳಲ್ಲಿರುವ ಬ್ರಹ್ಮಜ್ಞಾನವನ್ನು ತಿಳಿಸಿಕೊಡುವ ಮುಖ್ಯ ಭಾಗಗಳೇ "ಉಪನಿಷತ್ತು"ಗಳು-

ಆದುದರಿಂದ ಪ್ರತಿಯೊಂದು ವೇದವನ್ನೂ ಸಂಹಿತೆಗಳು, ಬ್ರಾಹ್ಮಣಗಳು, ಆರಣ್ಯಕಗಳು ಮತ್ತು ಉಪನಿಷತ್ತುಗಳು ಎಂದು ನಾಲ್ಕು ಭಾಗವಾಗಿ ವಿಂಗಡಿಸಬಹುದು. ಬ್ರಹ್ಮಚಾರಿಗಳು ಸಂಹಿತೆಗಳನ್ನು ಕಲಿಯುತ್ತಿದ್ದರೆಂದೂ, ಗೃಹಸ್ಥಾಶ್ರಮದಲ್ಲಿರುವವರು ಬ್ರಾಹ್ಮಣಗಳನ್ನು ವೈದಿಕ ಕರ್ಮಗಳಿಗೆ ಉಪಯೋಗಿಸುತ್ತಿದ್ದರೆಂದೂ ವಾನಪ್ರಸ್ಥಾಶ್ರಮಿಗಳು ಆರಣ್ಯಕಗಳ ಮೂಲಕ ಉಪಾಸನೆಗಳನ್ನು ಮಾಡುತ್ತಿದ್ದರೆಂದೂ ಮತ್ತು ಸನ್ಯಾಸಿಗಳು ಉಪನಿಷತ್ತುಗಳ ಶ್ರವಣ, ಮನನ, ನಿದಿಧ್ಯಾಸನಗಳ ಮೂಲಕ ತಮ್ಮ ಜ್ಞಾನ ಶಕ್ತಿಗಳನ್ನು ವೃದ್ಧಿಪಡಿಸಿಕೊಳ್ಳುತ್ತಿದ್ದರೆಂದೂ ಪ್ರತೀತಿ ಇದೆ. ನಾಲ್ಕು ವೇದಗಳಲ್ಲಿ ಋಗ್ಯಜುಸ್ಸಾಮವೇದಗಳನ್ನು ಸೇರಿಸಿ ತ್ರಿವರ್ಗವೆಂದು ಕರೆದಿರುವರು. ಸಂಹಿತೆಬ್ರಾಹ್ಮಣಗಳನ್ನು ಸೇರಿಸಿ ವೇದದ ಪೂರ್ವಭಾಗ ಅಥವ ಕರ್ಮಕಾಂಡವೆಂದೂ ಮತ್ತು ಆರಣ್ಯಕಗಳನ್ನೂ ಉಪನಿಷತ್ತುಗಳನ್ನೂ ಸೇರಿಸಿ ವೇದದ ಉತ್ತರಭಾಗ, ಜ್ಞಾನಕಾಂಡ ಅಥವ ವೇದಾಂತ ಎಂಬ ನಾಮಧೇಯಗಳನ್ನಿಟ್ಟಿರುವರು. ಇನ್ನು ಕೆಲವರು ವೇದಗಳನ್ನು ಕರ್ಮಕಾಂಡ (ಸಂಹಿತೆ ಮತ್ತು ಬ್ರಾಹ್ಮಣಗಳು), ಉಪಾಸನಾಕಾಂಡ (ಆರಣ್ಯಕಗಳು), ಮತ್ತು ಜ್ಞಾನಕಾಂಡ (ಉಪನಿಷತ್ತುಗಳು), ಎಂದು ಮೂರು ಭಾಗ ಮಾಡಿರುವರು. ಕೊನೆಯದಾಗಿ ಐಹಿಕಾಮುಷ್ಮಿಕವಾದ ಧರ್ಮಾರ್ಥ ಕಾಮ ಪುರುಷಾರ್ಥಗಳನ್ನು ಹೊಂದಲು ಅಲೌಕಿಕ ಉಪಾಯಗಳನ್ನು ತಿಳಿಸುವ ಸಂಹಿತೆ ಮತ್ತು ಬ್ರಾಹ್ಮಣಗಳನ್ನು "ಅಭ್ಯುದಯ" ವೆಂದೂ ಮತ್ತು ಶಾಶ್ವತವಾದ ಬ್ರಹ್ಮಾನಂದವನ್ನುಂಟುಮಾಡುವ ಯೋಗಸಾಧನೆಗಳಿಂದ ಕೂಡಿದ ಮತ್ತು ಮೋಕ್ಷ ಪುರುಷಾರ್ಥವನ್ನು ಸಾಧಿಸಿಕೊಡುವ ಆರಣ್ಯಕ ಮತ್ತು ಉಪನಿಷತ್ತುಗಳನ್ನು "ನಿಶ್ರೇಯಸ್ಸು" ಎಂದೂ ಕರೆದಿರುವರು. ಒಟ್ಟಿನಲ್ಲಿ ಸಂಹಿತೆಗಳು, ಬ್ರಾಹ್ಮಣಗಳು, ಆರಣ್ಯಕಗಳು ಮತ್ತು ಉಪನಿಷತ್ತುಗಳು ಒಂದಕ್ಕೊಂದು ಸೇರಿಕೊಂಡು ಮಿಶ್ರವಾಗಿಯೂ ಪ್ರತ್ಯೇಕವಾಗಿಯೂ ಇವೆ; ಆದರೆ ವೇದಗಳನ್ನು ಅಧ್ಯಯನ ಮಾಡುವವರು ಇವುಗಳನ್ನು ವಿಂಗಡಿಸಿರುತ್ತಾರೆ.

## ಸಂಹಿತೆಗಳು

ವೇದಗಳಲ್ಲಿ ಹೆಚ್ಚಾದ ಭಾಗವು ಸಂಹಿತೆಗಳೇ ಆಗಿರುವುದರಿಂದ ಇವುಗಳನ್ನು ಋಗ್ವೇದ ಸಂಹಿತೆ, ಯಜುರ್ವೇದ ಸಂಹಿತೆ, ಸಾಮವೇದ ಸಂಹಿತೆ ಮತ್ತು ಅಥರ್ವಣ ವೇದ ಸಂಹಿತೆ ಎಂದು ನಾಲ್ಕುಭಾಗ ಮಾಡಿದ್ದಾರೆ. ಈ ನಾಲ್ಕು ಸಂಹಿತೆಗಳಲ್ಲಿ ಋಗ್ವೇದ ಸಂಹಿತೆಗಳೇ ಮುಖ್ಯ; ಏಕೆಂದರೆ ಋಗ್ವೇದದಲ್ಲಿಯೇ ಬಹಳ ಹೆಚ್ಚಾಗಿ ಮಂತ್ರಗಳಿವೆ ಮತ್ತು ಋಗ್ವೇದದ ಮಂತ್ರಗಳು ಇತರ ವೇದಗಳಲ್ಲಿಯೂ ಕಂಡು ಬರುತ್ತವೆ. ಸಾಮವೇದಗಳಲ್ಲಿರುವ ಅನೇಕ ಮಂತ್ರಗಳು ಋಗ್ವೇದದಲ್ಲಿಯೇ ಇವೆ; ಆದರೆ ಆ ಋಗ್ವೇದಗಳ ಮಂತ್ರಗಳನ್ನು ಸಾಮಗಾನದಲ್ಲಿ ಪಾರಾಯಣ ಮಾಡುವ ಹಾಗೆ ಪರಿಷ್ಕಾರಮಾಡಿದೆ. ಯಜುರ್ವೇದವು ಋಗ್ವೇದದಲ್ಲಿ ಮೂರರಲ್ಲಿ ಎರಡರಷ್ಟು ಪ್ರಮಾಣವಿದೆಯೆಂದೂ, ಸಾಮವೇದವೂ ಮತ್ತು ಅಥರ್ವಣ ವೇದವೂ ಒಂದೊಂದೂ ಅರ್ಧಭಾಗ ಪ್ರಮಾಣವಿದೆಯೆಂದೂ ಕೆಲವರು ಹೇಳುವರು. ಯಜ್ಞಭಾಗವು

ಋಗ್ವೇದ ಅಥರ್ವಣ ವೇದಗಳಲ್ಲಿ ಕಮ್ಮಿಯಾಗಿದೆ ಮತ್ತು ಮಿಕ್ಕ ಎರಡು ವೇದಗಳಲ್ಲಿ ಅದು ಹೆಚ್ಚಾಗಿರುವುದು. ಅಥರ್ವಣ ವೇದವನ್ನು ಅದು ವೇದವೇ ಅಲ್ಲವೆಂದು ಹೇಳುತ್ತಾರೆ; ಏಕೆಂದರೆ ಅದರಲ್ಲಿ ಯಜ್ಞಯಾಗಾದಿಗಳು ಸ್ವಲ್ಪ ಮಟ್ಟಿಗೆ ಮಾತ್ರ ಇದ್ದು ಶತ್ರುಗಳನ್ನೂ, ರೋಗಗಳನ್ನೂ, ಭೂತಗಳಿಂದ ಉಂಟಾಗುವ ಹಿಂಸೆಗಳನ್ನೂ, ಗ್ರಹಪೀಡೆಗಳನ್ನೂ, ಯಜ್ಞಕ್ಕೆ ರಾಕ್ಷಸರು ಮತ್ತು ಪಿಶಾಚಿಗಳಿಂದ ಉಂಟಾಗುವ ಬಾಧೆಗಳನ್ನೂ ತಪ್ಪಿಸುವುದೇ ಮೊದಲಾದ ಅನೇಕ ಅಲೌಕಿಕ ಉಪಾಯಗಳು ಇವೆ. ಆದರೆ ಈ ಅಭಿಪ್ರಾಯಕ್ಕೆ ಮನ್ನಣೆ ದೊರೆತಿಲ್ಲ; ಅಥರ್ವಣ ವೇದದಲ್ಲಿಯೂ ಶ್ರೇಷ್ಠವಾದ ಅನೇಕ ಅಭಿಪ್ರಾಯಗಳಿವೆ.

ಸಂಹಿತೆಗಳು ಒಟ್ಟಿನಲ್ಲಿ ಪದ್ಯಗಳಾಗಿದ್ದು ದೇವತೆಗಳ ಸ್ತೋತ್ರರೂಪವಾಗಿವೆ; ಬ್ರಾಹ್ಮಣಗಳು ಹೆಚ್ಚಾಗಿ ಸಂಹಿತೆಗಳಲ್ಲಿರುವ ಋಕ್ಕುಗಳನ್ನು ಯಜ್ಞಯಾಗಾದಿವೈದಿಕ ಕರ್ಮಗಳಲ್ಲಿ ಉಪಯೋಗಿಸುವ ಕ್ರಮಗಳನ್ನೂ ಅದರಿಂದುಂಟಾಗುವ ಫಲಗಳನ್ನೂ ಗದ್ಯದಲ್ಲಿ ವಿವರಿಸುತ್ತವೆ. ಒಂದೊಂದು ಸಂಹಿತೆಯನ್ನೂ ಮಂಡಲಗಳೆಂದೂ, ಸೂಕ್ತಗಳೆಂದೂ, ಋಕ್ಕುಗಳು ಅಥವ ಮಂತ್ರಗಳೆಂದೂ ಒಳವಿಭಾಗ ಮಾಡಿದ್ದಾರೆ. ಉದಾಹರಣೆಗೆ ಋಗ್ವೇದದಲ್ಲಿ ಹತ್ತು ಮಂಡಲಗಳೂ, ಒಂದುಸಾವಿರದ ಇಪ್ಪತ್ತೇಳು ಸೂಕ್ತಗಳೂ ಸುಮಾರು ಹತ್ತುಸಾವಿರ ಮಂತ್ರಗಳೂ ಇವೆಯಂತೆ. ಋಗ್ವೇದದ ಪ್ರತಿಯೊಂದು ಸೂಕ್ತದಲ್ಲಿ ಒಂದು ಅಥವ ಹೆಚ್ಚು ಋಕ್ಕುಗಳು ಅಥವ ಮಂತ್ರಗಳಿವೆ; ಅಂದರೆ ಒಂದು ಸೂಕ್ತದಲ್ಲಿ ಸರಾಸರಿ ಹತ್ತು ಮಂತ್ರಗಳು ಇದ್ದಹಾಗೆ ಆಗುತ್ತವೆ. ಋಗ್ವೇದದ ಋಕ್ಕು ಅಥವ ಮಂತ್ರದಲ್ಲಿ ಸಾಧಾರಣವಾಗಿ ನಾಲ್ಕು ಪಾದಗಳಿವೆ; ಆದರೆ ಕೆಲವಲ್ಲಿ ಮೂರು ಮತ್ತು ಐದು ಪಾದಗಳೂ ಇವೆ. ಇವುಗಳಲ್ಲಿ ತ್ರಿಷ್ಟುಪ್; ಗಾಯತ್ರಿ; ಜಗತಿ ಮೊದಲಾದ ಹದಿನೈದು ಛಂದಸ್ಸುಗಳಿವೆ. ಪ್ರತಿಯೊಂದು ಮಂತ್ರವೂ ಒಂದು ಋಷಿಗೆ ಸಂಬಂಧಪಟ್ಟಿದೆ. ಉದಾಹರಣೆಗೆ ವಿಶ್ವಾಮಿತ್ರ, ಗೃತ್ಸಮದ; ವಾಮದೇವ, ಅತ್ರಿ, ಭಾರದ್ವಾಜ, ವಸಿಷ್ಠ ಮೊದಲಾದವರು ಋಗ್ವೇದದಲ್ಲಿ ಕಂಡು ಬರುವ ಋಷಿಗಳು. ಯಜುರ್ವೇದದಲ್ಲಿ ಸಂಹಿತೆಗಳಿಗಿಂತ ಬ್ರಾಹ್ಮಣಗಳೇ ಹೆಚ್ಚಾಗಿರುವುವು. ಯಜುರ್ವೇದದಲ್ಲೂ, ಸಾಮವೇದದಲ್ಲೂ, ಅಥರ್ವಣವೇದದಲ್ಲೂ ಇರುವ ಒಳವಿಭಾಗಗಳನ್ನು ನಾವು ಇಲ್ಲಿ ಸೂಚಿಸುವುದಿಲ್ಲ.

ಸಂಹಿತೆಗಳಲ್ಲಿ ಕಂಡುಬರುವ ಮುಖ್ಯವಾದ ವಿಷಯ ಅನೇಕ ದೇವತೆಗಳ ಮಂತ್ರರೂಪವಾದ ಸ್ತೋತ್ರಗಳು. ಹೀಗೆ ವೇದಗಳಲ್ಲಿ ಸ್ತೋತ್ರಮಾಡಲ್ಪಡುವ ದೇವತೆಗಳನ್ನು ದ್ಯುಲೋಕ (ಸ್ವರ್ಗಲೋಕ)ದ ದೇವತೆಗಳೆಂದೂ, ಅಂತರಿಕ್ಷ ಲೋಕದ ದೇವತೆಗಳೆಂದೂ ಮತ್ತು ಭೂಲೋಕದ ದೇವತೆಗಳೆಂದೂ ಮೂರು ಗುಂಪುಗಳಾಗಿ ವಿಭಾಗಿಸುವರು. ಉದಾಹರಣೆಗೆ ವರುಣ, ಮಿತ್ರ, ಸವಿತೃ, ಪೂಷನ್, ಅಶ್ವಿನೀ ದೇವತೆಗಳು, ಉಷಸ್, ರಾತ್ರಿ ಇವರುಗಳು ದ್ಯುಲೋಕಕ್ಕೆ ಸಂಬಂಧಪಟ್ಟವರು; ಇಂದ್ರ, ಅಪಾಂನಪಾತ್, ರುದ್ರ, ವಾಯು, ಪರ್ಜನ್ಯ ಇವರುಗಳು ಅಂತರಿಕ್ಷ

ಲೋಕಕ್ಕೆ ಸೇರಿದವರು ಮತ್ತು ಅಗ್ನಿ, ಪೃಥಿವಿ, ಸೋಮ, ಸಿಂಧು, ಬೃಹಸ್ಪತಿ, ಸರಸ್ವತಿ ಇವರು ಭೂಲೋಕದಲ್ಲಿರುವವರು. ಮೂವತ್ತು ಮೂರು ದೇವತೆಗಳನ್ನು: ಅಷ್ಟವಸುಗಳನ್ನೂ, ಏಕಾದಶರುದ್ರರನ್ನೂ, ದ್ವಾದಶಾದಿತ್ಯರನ್ನೂ ಪ್ರಜಾಪತಿ ವಷಟ್ಕಾರರನ್ನೂ ಋಗ್ವೇದದ ಮಂತ್ರಗಳಲ್ಲಿ ಸ್ತೋತ್ರ ಮಾಡಿದೆ. ಆ ಸ್ತೋತ್ರದ ವಿವರಗಳನ್ನು ಈ ಲೇಖನದಲ್ಲಿ ತಿಳಿಸುತ್ತಿಲ್ಲ.

ದೇವತೆಗಳು ಯಾರು? ಜಗತ್ತಿನಲ್ಲಿ ಜೀವವಿಲ್ಲದ ಪದಾರ್ಥಗಳೂ, ಜೀವವಿರುವ ವೃಕ್ಷಾದಿಗಳೂ, ಮನಸ್ಸು ಬೆಳೆದಿರುವ ತಿರ್ಯಕ್ಕುಗಳೂ ಮತ್ತು ಬುದ್ಧಿಜೀವಿಗಳಾದ ಮನುಷ್ಯರೂ ಹೇಗೆ ಸೃಷ್ಟಿಸಲ್ಪಟ್ಟಿರುವರೋ ಹಾಗೆಯೇ ನಮ್ಮ ಇಂದ್ರಿಯಗಳಿಗೆ ಗೋಚರವಾಗದ, ತೇಜಸ್ಸಿನ ಶರೀರಗಳಿಂದ ಕೂಡಿದ ಅತಿಮಾನುಷ ದಿವ್ಯಶಕ್ತಿಗಳನ್ನು ಪಡೆದಿರುವ ದೇವತೆಗಳೂ ಕೂಡ ಸೃಷ್ಟಿಸಲ್ಪಟ್ಟಿರುವರೆಂದು ವೇದಗಳು ತಿಳಿಯಪಡಿಸುತ್ತವೆ. ಇನ್ನೇನು, ಪುಣ್ಯ ಕರ್ಮವನ್ನು ಮಾಡಿದ ಮನುಷ್ಯರು ಸತ್ತಮೇಲೆ ಪಿತೃಲೋಕಗಳಲ್ಲಿದ್ದು, ದೇವಲೋಕಗಳಿಗೆ ಸೇರಿ ಅಲ್ಲಿ ದೇವತೆಗಳ ಸ್ಥಾನಗಳನ್ನೂ, ಅಧಿಕಾರಗಳನ್ನೂ, ಸ್ವರೂಪಗಳನ್ನೂ, ಶಕ್ತಿಗಳನ್ನೂ ಪಡೆಯುವರು ಎಂದೂ ಹೇಳಿವೆ. ದೇವತೆಗಳಿಗೆ ಮಾನವ ಗುಣವನ್ನು ಅತ್ಯಧಿಕವಾಗಿ ಪಡೆದಿರುವ ಮತ್ತು ಪ್ರಕೃತಿಯ ಬೇರೆ ಬೇರೆ ಭಾಗಗಳ ಶರೀರಗಳನ್ನಾಗಿ ಪಡೆದಿರುವ ಅದೃಶ್ಯ ದಿವ್ಯ ಜೀವಿಗಳೆಂಬುದು ಲಕ್ಷಣವನ್ನು ಹೇಳಬಹುದು. ಈ ದೇವತೆಗಳು ಪ್ರಕೃತಿಯ ಪರಿಣಾಮಗಳಲ್ಲಿ ಉಂಟಾಗುವ ವಿವಿಧ ಪ್ರತ್ಯೇಕ ಭಾಗಗಳಲ್ಲಿ ಅಂತರ್ಯಾಮಿಗಳಾಗಿದ್ದು ಅವುಗಳ ಏಕದೇಶ. ಸೃಷ್ಟಿ, ಸ್ಥಿತಿ, ಲಯಗಳನ್ನುಂಟುಮಾಡುವ ಶಕ್ತಿಯನ್ನು ಪಡೆದಿರುವರು. ಆದುದರಿಂದಲೇ ಮಂತ್ರಗಳಲ್ಲಿ ದೇವತೆಗಳನ್ನು ಸ್ತೋತ್ರ ಮಾಡುವಾಗ ಒಂದು ಕಡೆ ಅವರಲ್ಲಿ ಮಾನವ ಗುಣಗಳನ್ನು ಉತ್ಪ್ರೇಕ್ಷೆಯಾಗಿ ವರ್ಣಿಸಿದೆ; ಇನ್ನೊಂದು ಕಡೆ ಅವರ ಶರೀರಗಳಾದ ಅಂತರಿಕ್ಷ, ಸೂರ್ಯ, ಚಂದ್ರ, ನಕ್ಷತ್ರ, ಮಳೆ, ಬೆಟ್ಟ, ನದಿ, ಸಮುದ್ರ ಮೊದಲಾದ ಪ್ರಕೃತಿ ವಿಭಾಗಗಳ ಗುಣಗಳನ್ನೂ ವರ್ಣಿಸಿದೆ. ಆದರೆ ಯಾವ ಪ್ರಕೃತಿ ಶಕ್ತಿಗಳಿಗೂ ಸಂಬಂಧ ಪಡದ ದೇವತೆಗಳೂ ಇರುವರು. ಒಟ್ಟಿನಲ್ಲಿ, ದೇವತೆಗಳು ಭಗವಂತನ ಕಟ್ಟಳೆಯ ಪ್ರಕಾರ ಜಗತ್ತಿನ ಅನೇಕ ಭಾಗಗಳ ಸೃಷ್ಟಿ ಸ್ಥಿತಿ ಲಯಕಾರ್ಯಗಳಲ್ಲಿ ಅಧಿಕಾರವನ್ನೂ ಶಕ್ತಿಯನ್ನೂ ಪಡೆದಿರುವರು. ಆದುದರಿಂದಲೇ ಅವರನ್ನು ಸಂಹಿತೆಗಳಲ್ಲಿ ಕಾಂತಿಯುಳ್ಳವರು ಅಧಿಕ ತೇಜಸ್ಸಿನಿಂದ ಕೂಡಿದವರು, ಪ್ರಕೃತಿಯ ಕಟ್ಟಳೆಗಳನ್ನು ಪಾಲಿಸುವವರು, ಪ್ರಾಜ್ಞರು, ಎಲ್ಲವನ್ನೂ ತಿಳಿದಿರುವವರು, ಸ್ತೋತ್ರ ಪ್ರಿಯರು, ಸ್ತೋತ್ರ ಮಾಡಿದವರನ್ನು ಪಾಲಿಸುವವರು, ಅತಿಮಾನುಷ ಶಕ್ತಿಗಳನ್ನು ಪಡೆದಿರುವವರು, ಪೌರುಷೇಯ ದಿವ್ಯ ಗುಣಗಳನ್ನು ಪಡೆದಿರುವವರು ಎಂದು ವರ್ಣಿಸಿದೆ. ಪ್ರಾಣಿಗಳ ಮತ್ತು ಶರೀರೇಂದ್ರಿಯ ಮನಸ್ಸು ಬುದ್ಧಿ ವ್ಯಾಪಾರಗಳೂ ಅವರ ಹತೋಟಿಗೆ ಒಳಪಟ್ಟಿವೆ.

## ಬ್ರಾಹ್ಮಣಗಳು

ಅತಿಮಾನುಷ ಶಕ್ತಿಗಳಿಂದ ಕೂಡಿದ ದೇವತೆಗಳನ್ನು ಮಂತ್ರಗಳಿಂದ ಸ್ತೋತ್ರ ಮಾಡಿ ತನ್ಮೂಲಕ ಮಾನವರು ಆಯುಸ್ಸು, ಆರೋಗ್ಯ, ಐಶ್ವರ್ಯ, ಸಂತಾನ, ಅಧಿಕಾರ, ಸುಖಗಳು, ಕೀರ್ತಿ, ಶಾಂತಿ ಮೊದಲಾದುವುಗಳನ್ನು ಪಡೆಯುವ ಮಾರ್ಗಗಳನ್ನು ಬ್ರಾಹ್ಮಣಗಳು ತಿಳಿಯಪಡಿಸುತ್ತವೆ. ಇಷ್ಟೇ ಅಲ್ಲ; ಮಾನವರು ಸತ್ತ ಮೇಲೆ ಸೂಕ್ಷ್ಮ ಶರೀರಗಳಲ್ಲಿರುವ ಸ್ಥಿತಿಗಳನ್ನೂ ಅವರು ಸೇರುವ ಲೋಕಗಳನ್ನೂ, ದುಃಖಕರವಾದ ನರಕಾದಿ ಹಾನಿಗಳನ್ನು ತಪ್ಪಿಸಿಕೊಂಡು ಭೋಗಗಳನ್ನು ಉಂಟುಮಾಡುವ ಸ್ವರ್ಗಾದಿ ಲೋಕಗಳನ್ನು ಸೇರಿ ಪುನಃ ಉತ್ತಮ ವರ್ಗದ ಮನುಷ್ಯರಾಗಿ ಹುಟ್ಟುವ ಮಾರ್ಗಗಳನ್ನೂ ಬ್ರಾಹ್ಮಣಗಳು ವಿವರಿಸುತ್ತವೆ. ಹಳ್ಳಿಯ ಎಲ್ಲಾ ಜನರ ಕ್ಷೇಮಕ್ಕಾಗಿ ಸಾಮೂಹಿಕವಾಗಿ ಮಾಡಬೇಕಾದ ಯಜ್ಞ ಹೋಮಾದಿಗಳ ಕ್ರಮಗಳನ್ನೂ ವಿಧಿಗಳನ್ನೂ ಕುಟುಂಬದವರ ಕ್ಷೇಮಕ್ಕಾಗಿ ನಡೆಸಬೇಕಾದ ಅನೇಕ ವೈದಿಕ ಕರ್ಮಗಳನ್ನೂ ಮತ್ತು ಈ ಯಜ್ಞ ಯಾಗಾದಿಗಳನ್ನು ನಡೆಸುವ ಯೋಗ್ಯತೆಯನ್ನುಂಟುಮಾಡುವ ಆತ್ಮಶುದ್ಧಿ, ಸತ್ಯ, ಶ್ರದ್ಧೆ, ಶುಚಿತ್ವ, ಭ್ರಾತೃಭಾವ, ಪ್ರಾಣಿಗಳಲ್ಲಿ ದಯೆ, ತಂದೆ ತಾಯಿಗಳಲ್ಲಿ ಗೌರವ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ, ಪಂಚ ಋಣಗಳು, ದಾನ ಮಾಡುವುದು, ವ್ರತಾಚರಣೆಗಳು ಮೊದಲಾದ ಅನೇಕ ಸದಾಚಾರಗಳನ್ನೂ ಬ್ರಾಹ್ಮಣಗಳು ಬೋಧಿಸುತ್ತವೆ. ಇಷ್ಟೇ ಅಲ್ಲ; ಬ್ರಾಹ್ಮಣಗಳಲ್ಲಿ ಇತಿಹಾಸ, ಪುರಾಣ, ವಿದ್ಯ ಅಥವ ಉಪಾಸನ, ಉಪನಿಷತ್ತು, ಶ್ಲೋಕಗಳು, ಸೂತ್ರಗಳು, ವ್ಯಾಖ್ಯಾನ, ಅನುವ್ಯಾಖ್ಯಾನ ಎಂಬ ಎಂಟು ವಿಷಯಗಳಿವೆ ಎಂದು ವೇದಕ್ಕೆ ವ್ಯಾಖ್ಯಾನ ಬರೆದಿರುವ ಸಾಯಣಾಚಾರ್ಯರು ಹೇಳಿರುವರು. ಒಂದು ಯಜ್ಞವನ್ನು ನಡೆಸುವುದಕ್ಕೆ ಯಜ್ಞಕ್ಕೆ ಬೇಕಾದ ಪದಾರ್ಥಗಳಲ್ಲಿ ದೇವತೆಗಳನ್ನು ಆವಾಹನೆ ಮಾಡಿ ಅವರನ್ನು ಸಂಹಿತೆಯ ಮಂತ್ರಗಳಿಂದ ಸ್ತೋತ್ರ ಮಾಡಬೇಕು. ಸೋಮಯಾಗದಲ್ಲಿ ಯಜ್ಞದ ಯಜಮಾನನಾದ ಬ್ರಹ್ಮನು ಯಜ್ಞವೇದಿಕೆಯ ಉತ್ತರದಲ್ಲಿ ಕುಳಿತು ಅಥರ್ವಣ ವೇದವನ್ನು ಪಾರಾಯಣ ಮಾಡಬೇಕು; ಆತನ ಎಡಗಡೆ ಅಧ್ವರ್ಯುವು ಯಜುರ್ವೇದವನ್ನು ಪಾರಾಯಣ ಮಾಡುತ್ತಾ ಹವಿಸ್ಸನ್ನು ಕೊಡಬೇಕು; ಬ್ರಹ್ಮನ ಬಲಗಡೆಯಲ್ಲಿ ಉದ್ಗಾತೃವು ಸಾಮವೇದವನ್ನು ಪಾರಾಯಣ ಮಾಡಬೇಕು ಮತ್ತು ಆತನ ಎದುರಿನಲ್ಲಿ ಹೋತೃವು ಋಗ್ವೇದವನ್ನು ಪಾರಾಯಣ ಮಾಡಬೇಕು. ಒಟ್ಟಿನಲ್ಲಿ, ಸಂಹಿತೆಗಳು ಕರ್ಮಕಾಂಡದಲ್ಲಿರುವ ಮಂತ್ರಗಳನ್ನೂ ಬ್ರಾಹ್ಮಣಗಳು ಅವುಗಳನ್ನು ಯಜ್ಞಯಾಗಾದಿಗಳಲ್ಲಿ ಉಪಯೋಗಿಸುವ ವಿಧಿಗಳನ್ನೂ ಭಾಗಗಳನ್ನೂ ತಿಳಿಯಪಡಿಸುತ್ತವೆ.

VANI VILAS PRINTING PRESS, BANGALORE-2

ಶ್ರೀ ನವಭಾರತ ಆಶ್ರಮ
ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

## (ಮಾಲೆ—ಹದಿನಾರು)

## ಅರಣ್ಯಕಗಳು ಮತ್ತು ಉಪನಿಷತ್ತುಗಳು

ಕನ್ನಡ ಜ್ಞಾನದೀಪಿಕೆಯ ೧೫ನೇ ಮಾಲೆಯಲ್ಲಿ "ವೇದಗಳ ವಿಚಾರ-ಸಂಹಿತೆಗಳು ಮತ್ತು ಬ್ರಾಹ್ಮಣಗಳು" ಎಂಬ ವಿಷಯವನ್ನು ಕುರಿತು ಲೇಖನವನ್ನು ಬರೆದಿದ್ದೇನೆ. ಈ ಹದಿನಾರನೇ ಮಾಲೆಯಲ್ಲಿ ಈ ವೇದಗಳ ವಿಚಾರವನ್ನೇ ಮುಂದುವರಿಸಿ ಅರಣ್ಯಕಗಳ, ಅವುಗಳಲ್ಲಿ ಮುಖ್ಯವಾದ ಉಪನಿಷತ್ತುಗಳ ವಿಚಾರವನ್ನು ಗುರುಶಿಷ್ಯರ ಸಂವಾದ ರೂಪದಲ್ಲಿ ತಿಳಿಯಪಡಿಸುತ್ತೇನೆ.

ಶಿಷ್ಯ—ಅರಣ್ಯಕಗಳು, ಉಪನಿಷತ್ತುಗಳು ಎಂದರೇನು ?

ಗುರು—ಪ್ರತಿಯೊಂದು ವೇದವನ್ನೂ ಸಂಹಿತೆಗಳೆಂದೂ ಬ್ರಾಹ್ಮಣಗಳೆಂದೂ ಎರಡು ಭಾಗಮಾಡಿದರು. ಬ್ರಾಹ್ಮಣಗಳ ಅನೇಕ ಅಧ್ಯಾಯಗಳನ್ನು ಕಾಡಿನಲ್ಲಿ ಉಪಾಸನೆ ಮಾಡಬೇಕಾದ "ಅರಣ್ಯಕಗಳು" ಎಂದು ಕರೆದರು. ಈ ಅರಣ್ಯಕಗಳಲ್ಲಿರುವ ಬ್ರಹ್ಮಜ್ಞಾನವನ್ನು ತಿಳಿಯಪಡಿಸುವ ಮುಖ್ಯ ಭಾಗಗಳೇ "ಉಪನಿಷತ್ತುಗಳು". ಆದುದರಿಂದ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ ಎಂಬ ಪ್ರತಿಯೊಂದು ವೇದದಲ್ಲಿಯೂ ಸಂಹಿತೆಗಳು, ಬ್ರಾಹ್ಮಣಗಳು, ಅರಣ್ಯಕಗಳು ಮತ್ತು ಉಪನಿಷತ್ತುಗಳು ಎಂದು ನಾಲ್ಕು ಭಾಗಗಳಿರುವುವು. ಅರಣ್ಯಕಗಳು ಉಪಾಸನೆಗಳಿಗೆ ಯೋಗ್ಯವಾಗಿವೆ; ಉಪನಿಷತ್ತುಗಳು ಬ್ರಹ್ಮಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳ ಜ್ಞಾನವನ್ನುಂಟುಮಾಡುತ್ತವೆ. ಉಪನಿಷತ್ತುಗಳು ವೇದಗಳ ಕೊನೆಯಲ್ಲಿರುವುದರಿಂದ "ವೇದಾಂತ" ವೆಂಬ ಹೆಸರನ್ನೂ ಪಡೆದಿವೆ. ವೇದಗಳ ಕೊನೆಯ ಭಾಗವೆಂದರೆ ವೇದಗಳ ಸಾರವಾದ ಭಾಗ ಅಥವ ಮುಖ್ಯವಾದ ಭಾಗ ಎಂದು ಅರ್ಥವಾಗುತ್ತದೆ. ಅಂದರೇನು, ಉಪನಿಷತ್ತುಗಳು ವೇದಗಳಲ್ಲಿ ಕರ್ಮಭಾಗವಲ್ಲದ ಮುಖ್ಯ ಜ್ಞಾನ ಭಾಗವಾಗಿವೆ. ಉಪನಿಷತ್ತು (ಉಪ = ಹತ್ತಿರದಲ್ಲಿ; ನಿ = ಭಕ್ತಿಯಿಂದ; ನಿಷದ್ = ಕುಳಿತುಕೊಂಡು)ಎಂದರೆ ಮುಮುಕ್ಷುವಾದ ಶಿಷ್ಯನು ತನ್ನ ಗುರುವಿನ ಹತ್ತಿರ ಭಕ್ತಿಯಿಂದ ಕುಳಿತುಕೊಂಡು ದಿವ್ಯ ಜ್ಞಾನದ ಉಪದೇಶವನ್ನು ಪಡೆಯುವುದು ಎಂದು ಅರ್ಥವಾಗುತ್ತದೆ. ಅಜ್ಞಾನವನ್ನು ಧ್ವಂಸಮಾಡಿ, ಬ್ರಹ್ಮಜ್ಞಾನವನ್ನುಂಟುಮಾಡುವ ವಿದ್ಯೆಯೇ "ಉಪನಿಷತ್ತುಗಳು" ಎಂದು ಕೆಲವರ ಅಭಿಪ್ರಾಯ. ಉಪನಿಷತ್ತುಗಳನ್ನು ಸನ್ಯಾಸಿಗಳು ಮಾತ್ರ ಕಲಿಯುವ "ರಹಸ್ಯ ಶಾಸ್ತ್ರ" ಎಂದು ಹೇಳುವುದಕ್ಕಿಂತ ಎಲ್ಲ ಮಾನವರಿಗೂ ಶ್ರೇಯಸ್ಸನ್ನುಂಟುಮಾಡುವ "ಪವಿತ್ರಶಾಸ್ತ್ರ" ಎಂದು ಕರೆಯುವುದು ಉತ್ತಮ.

ಶಿಷ್ಯ—ವಿದ್ಯಾರ್ಥಿಗಳು ಅರಣ್ಯಕಗಳನ್ನೂ ಉಪನಿಷತ್ತುಗಳನ್ನೂ ಪೂರ್ವಕಾಲದಲ್ಲಿ ಕಲಿಯುತ್ತಿದ್ದ ಸನ್ನಿವೇಶಗಳಾವುವು ?

**ಗುರು**—ಋಷಿಗಳು ಉಪನಿಷತ್ತುಗಳನ್ನು ಆಶ್ರಮಗಳಲ್ಲಿಯೂ, ಗುರುಕುಲಗಳಲ್ಲಿಯೂ, ಯಜ್ಞಮಂಟಪಗಳಲ್ಲಿಯೂ, ರಾಜರ ದರ್ಬಾರುಗಳಲ್ಲಿಯೂ ಉಪದೇಶ ಮಾಡಿದರೆಂದು ಪ್ರತೀತಿ ಇದೆ. ನದಿಯ ಹತ್ತಿರದಲ್ಲಿ, ಸರೋವರದ ಪಕ್ಕದಲ್ಲಿ, ಗುಡ್ಡಗಳ ತಪ್ಪಲಲ್ಲಿ, ತೋಪುಗಳ ಮಧ್ಯದಲ್ಲಿ ಅಂದರೆ ಪಟ್ಟಣಗಳಿಂದ ದೂರವಾದ ಏಕಾಂತವಾದ ಮತ್ತು ಸುಂದರವಾದ ಪ್ರದೇಶಗಳಲ್ಲಿ ಆ ಕಾಲದಲ್ಲಿ ಆಶ್ರಮಗಳನ್ನು ಕಟ್ಟುತ್ತಿದ್ದರು. ಕಾಡಿನಲ್ಲಿ ಸಿಕ್ಕುವ ಬಿದಿರು, ಎಲೆಬಳ್ಳಿಗಳು, ಕಟ್ಟಿಗೆ, ಮಣ್ಣು ಇವುಗಳಿಂದ ಕಟ್ಟಲ್ಪಟ್ಟ ಆಶ್ರಮದ ಕಟ್ಟಡಗಳು "ಪರ್ಣಕುಟೀರ"ಗಳಾಗಿದ್ದವು. ಪ್ರತಿಯೊಂದು ಆಶ್ರಮವೂ ಗುರುಗಳ, ಅವರಸಂಸಾರಗಳ ಮತ್ತು ಶಿಷ್ಯರುಗಳ ಒಂದು ಸ್ವತಂತ್ರವಾದ ಸಜೀವವಾದ ಚಿಕ್ಕ ಸಾಮಾಜಿಕ ಕೇಂದ್ರವಾಗಿತ್ತು. ಈ ಆಶ್ರಮಗಳು ದೊಡ್ಡ ಗುರುಕುಲಗಳು ಆಗಿದ್ದುದು ಮಾತ್ರವಲ್ಲದೆ ತಪವನ್ನಾಚರಿಸುವವರ, ಯಜ್ಞಯಾಗಾದಿಗಳನ್ನು ನಡೆಸುವವರ, ಬ್ರಹ್ಮಚರ್ಯ ಮತ್ತು ತ್ಯಾಗಗಳನ್ನು ಅಭ್ಯಾಸ ಮಾಡುವವರ, ಒಟ್ಟಿನಲ್ಲಿ ಆಧ್ಯಾತ್ಮ ಅಭ್ಯಾಸಗಳನ್ನು ಅನುಷ್ಠಿಸುವ ತಪಸ್ವಿಗಳ ಅಥವ ಮುನಿಗಳ ವಾಸಸ್ಥಾನಗಳೂ ಆಗಿದ್ದುವು.

**ಶಿಷ್ಯ**—ಎಷ್ಟು ಉಪನಿಷತ್ತುಗಳಿವೆ ? ಇವನ್ನು ಕವನಮಾಡಿದ ಮಹಾಕವಿಗಳು ಯಾರು ?

**ಗುರು**—ನಾಲ್ಕು ವೇದಗಳಲ್ಲೂ ಅನೇಕ ಉಪನಿಷತ್ತುಗಳು ಇದ್ದವು ; ಆದರೆ ಈಗ ನೂರೆಂಟು ಉಪನಿಷತ್ತುಗಳ ಹೆಸರುಗಳು ಮಾತ್ರ ಗೊತ್ತಾಗಿವೆ. ಇವುಗಳಲ್ಲಿ ಹತ್ತು ಅಥವ ಹನ್ನೆರಡು ಉಪನಿಷತ್ತುಗಳು ಮಾತ್ರ ಮುಖ್ಯ ; ಏಕೆಂದರೆ ಮುಖ್ಯ ಉಪನಿಷತ್ತುಗಳಲ್ಲಿರುವ ವಿಷಯಗಳೆಲ್ಲವೂ ಬಹುಮಟ್ಟಿಗೆ ಇವುಗಳಲ್ಲೇ ಅಡಕವಾಗಿವೆ. ಆದುದರಿಂದಲೇ ನಮ್ಮ ಪೂರ್ವಾಚಾರ್ಯರುಗಳು ದ್ವಾದಶ ಉಪನಿಷತ್ತುಗಳಿಗೆ ಮಾತ್ರ ವ್ಯಾಖ್ಯಾನಗಳನ್ನು ಬರೆದಿರುವರು. ಐತರೇಯ ಉಪನಿಷತ್ ಮತ್ತು ಕೌಷೀತಕೀ ಉಪನಿಷತ್ತುಗಳು ಋಗ್ವೇದದಲ್ಲಿವೆ; ಈಶಾವಾಸ್ಯ ಉಪನಿಷತ್, ಕಠೋಪನಿಷತ್, ತೈತ್ತಿರಿಯ ಉಪನಿಷತ್, ಬೃಹದಾರಣ್ಯಕ ಉಪನಿಷತ್, ಮತ್ತು ಶ್ವೇತಾಶ್ವತರ ಉಪನಿಷತ್ ಯಜುರ್ವೇದದಲ್ಲಿವೆ; ಛಾಂದೋಗ್ಯ ಉಪನಿಷತ್ ಮತ್ತು ಕೇನ ಉಪನಿಷತ್ ಸಾಮವೇದದಲ್ಲಿವೆ; ಪ್ರಶ್ನ ಉಪನಿಷತ್, ಮುಂಡಕ ಉಪನಿಷತ್ ಮತ್ತು ಮಾಂಡೂಕ್ಯ ಉಪನಿಷತ್ ಅಥರ್ವಣವೇದದಲ್ಲಿವೆ.

ಉಪನಿಷತ್ತುಗಳನ್ನು ಸಾಂಗವಾಗಿ ವ್ಯಾಸಂಗಮಾಡಿರುವ ಮ್ಯಾಕ್ಸ್‌ಮುಲ್ಲರ್, ಡ್ಯೂಸನ್, ಸೋಪನ್‌ಹಾರ್ ಮುಂತಾದ ಪಶ್ಚಿಮದೇಶದ ವಿದ್ಯಾವಂತರು ಕ್ರಿ. ಪೂ. ೧೨೦೦ ರಿಂದ ಕ್ರಿ. ಪೂ. ೬೦೦ರೊಳಗೆ ಅನೇಕ ಕವಿಗಳು ಈ ಉಪನಿಷತ್ತುಗಳನ್ನು ಕವನ ಮಾಡಿರುವರೆಂದು ಅಭಿಪ್ರಾಯಪಟ್ಟಿರುವರು. ಆದರೆ ಕೆಳಗೆ ಸೂಚಿಸಿರುವ ಕೆಲವು ಉಪನಿಷತ್ ಕವಿಗಳ ಹೆಸರುಗಳು ಮಾತ್ರ ಗೊತ್ತಿವೆಯೇ ವಿನ ಅವರ

ಜೀವನಚರಿತ್ರೆಯು ಗೊತ್ತಿಲ್ಲವೆಂದು ಹೇಳಿರುವರು—ಪ್ರಜಾಪತಿ, ಇಂದ್ರ, ನಾರದ, ಸನತ್ಕುಮಾರ, ಮಹೀದಾಸ, ಪಿಪ್ಪಲಾದ, ರೈಕ್ವ, ಶಾಂಡಿಲ್ಯ, ಸತ್ಯಕಾಮಜಾಬಾಲ, ಜೈವಲಿ, ಉದ್ದಾಲಕ, ಅರುಣಿ, ಶ್ವೇತಕೇತು, ಭರದ್ವಾಜ, ಗಾರ್ಗ್ಯಾಯನ, ಪ್ರತರ್ದನ, ಬಲಾಕಿ, ಅಜಾತಶತ್ರು, ವರುಣ, ಯಾಜ್ಞವಲ್ಕ್ಯ, ಗಾರ್ಗಿ ಮತ್ತು ಮೈತ್ರೇಯಿ. ಅವರ ಮೇಲಿನ ಅಭಿಪ್ರಾಯಗಳನ್ನು ಭಾರತದೇಶದ ಪೂರ್ವಾಚಾರ್ಯರುಗಳು ಒಪ್ಪುವುದಿಲ್ಲ. ಉಪನಿಷತ್ತುಗಳೆಲ್ಲವೂ ಅಪೌರುಷೇಯವೆಂದೂ, ಶ್ರುತಿಗಳೆಂದೂ, ಅನಾದಿಯೆಂದೂ, ಭಗವಂತನಿಂದಲೇ ಲೋಕದಲ್ಲಿ ಪ್ರಚಾರವಾದವುಗಳೆಂದೂ, ಋಷಿಗಳು ತಮ್ಮ ತಪಸ್ಸಿನ ಪ್ರಭಾವದಿಂದ ಅರಿತ ದಿವ್ಯಶಬ್ದರಾಶಿಯೆಂದೂ, ಉಚ್ಚರಿಸಿದ ಮಾತ್ರದಿಂದಲೇ ನಮ್ಮ ಪಾಪಗಳನ್ನು ನಿರ್ಮೂಲನಮಾಡುವ ಶಕ್ತಿಯಿಂದ ಕೂಡಿದ ಪವಿತ್ರ ಮತ್ತು ದಿವ್ಯವಾಣಿಯೆಂದೂ, ಜಗತ್ತಿಗೆ ಕಾರಣವಾದ ಸತ್ಯಸ್ವರೂಪವನ್ನು ಮತ್ತು ಅದರ ಸೃಷ್ಟಿ ಸ್ಥಿತಿ ಲಯಾದಿಗಳನ್ನು ತಿಳಿಯಪಡಿಸುವ ಉತ್ತಮ ತತ್ವಗ್ರಂಥವೆಂದೂ, ಮಾನವನು ಮೋಕ್ಷಸ್ಥಾನವನ್ನು ಪಡೆಯಲು ಸಹಾಯಮಾಡುವ ಧರ್ಮಗ್ರಂಥವೆಂದೂ, ಅವು ಭಾರತೀಯ ದರ್ಶನಗಳಿಗೂ ಉಪವೇದಗಳಿಗೂ ಆಧಾರವಾಗಿವೆಯೆಂದೂ, ಅವುಗಳ ವಾಕ್ಯಗಳೆಲ್ಲವೂ ಅಭಿಪ್ರಾಯಗಳೆಲ್ಲವೂ ಐಕ್ಯತೆಯಿದೆಯೆಂದೂ ಮತ್ತು ನಮಗೆ ಗೋಚರವಾಗದಿರುವ ಪ್ರಾಜ್ಞರಾದ ದೇವತೆಗಳಿಂದಲೂ ಪೂಜಿಸಲ್ಪಡುವ ದಿವ್ಯಜ್ಞಾನರಾಶಿಯೆಂದೂ ಅವರು ಉಪದೇಶಮಾಡಿರುವರು.

ಶಿಷ್ಯ—ದ್ವಾದಶೋಪನಿಷತ್ತುಗಳಲ್ಲಿ ಉಪದೇಶ ಮಾಡಲ್ಪಟ್ಟಿರುವ ಮುಖ್ಯ ವಿಷಯಗಳಾವುವು ?

**ಗುರು**—ಜಗತ್ತಿನೊಳಗೆ ಈಶನು ವಾಸಮಾಡುತ್ತಿರುವನೆಂದೂ, ಅದಕ್ಕಾಗಿ ಮಾನವನು ವೈರಾಗ್ಯದಿಂದಲೂ, ಹಿತೋಪಕಾರಕಾರ್ಯಗಳಿಂದಲೂ ಜೀವನವನ್ನು ನಡೆಸುತ್ತಾ, ಕರ್ಮಜ್ಞಾನ, ಯಮನಿಯಮ ಸಮಾಧಿ ಅಭ್ಯಾಸಗಳಿಂದ ಕೂಡಿದ ಭಕ್ತಿ ಪ್ರಪತ್ತಿಯೋಗಗಳನ್ನು ಕೈಗೊಂಡು, ಎಲ್ಲಾ ಪದಾರ್ಥಗಳಲ್ಲೂ ಅಂತರ್ಯಾಮಿಯಾದ ಭಗವಂತನನ್ನು ಸಾಕ್ಷಾತ್ಕರಿಸಬೇಕೆಂದು ಈಶಾವಾಸ್ಯ ಉಪನಿಷತ್ತು ಉಪದೇಶ ಮಾಡುತ್ತದೆ. ಕಠೋಪನಿಷತ್ತಿನಲ್ಲಿ ಮೃತ್ಯುದೇವತೆಯಾದ ಯಮನು ಸಕಲಸಂಪತ್ತನ್ನೂ ತ್ಯಾಗಮಾಡಿದ ಮುಮುಕ್ಷುವಾದ ನಚಿಕೇತನಿಗೆ ಶ್ರೇಯಸ್ಸು, ಪ್ರೇಯಸ್ಸು, ಆತ್ಮಸುಖ, ವಿಷಯಸುಖ, ಇಂದ್ರಿಯಮನಸ್ಸುಬುದ್ಧಿ ಪ್ರಾಣಾದಿಪಂಚಕವರ್ಗಗಳಿಂದ ಬೇರೆಯಾಗಿರುವ ಆತ್ಮದ ನಿಜಸ್ವರೂಪ, ಆತ್ಮನು ನಿರ್ಲಿಪ್ತನು ಮತ್ತು ಈ ಜನ್ಮದಲ್ಲಿಯೇ ಆತ್ಮಸ್ವಾತಂತ್ರ್ಯವನ್ನು ಪಡೆಯಬೇಕು ಎಂಬ ಗಹನವಾದ ವಿಷಯಗಳ ಉಪದೇಶವನ್ನು ಮಾಡುತ್ತಾನೆ. ವರುಣನ ಮಗನಾದ ಭೃಗುವು ವೇದದ ಶಿಕ್ಷಣವನ್ನು ಪಡೆದ ಕ್ರಮವನ್ನು, ಅವನು ಬ್ರಹ್ಮಜ್ಞಾನ ಪಡೆಯಲು ಕೈಗೊಂಡ ಸಾಧನೆಗಳನ್ನು ಮತ್ತು ಬ್ರಹ್ಮಾನಂದದ ಸ್ವರೂಪವನ್ನು ತೈತ್ತಿರೀಯ ಉಪನಿಷತ್ತಿನಲ್ಲಿ ವಿಶದವಾಗಿ ತಿಳಿಯು

ಬಹುದು. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯ ಋಷಿಯು ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧನಾಗಿದ್ದ ತನ್ನ ಹೆಂಡತಿಗೆ ಶಾಶ್ವತವಾದ ಆತ್ಮಸ್ವರೂಪವನ್ನೂ, ಬ್ರಹ್ಮನು ಎಲ್ಲಾ ಜೀವಿಗಳಲ್ಲೂ ಅಂತರ್ಯಾಮಿಯಾಗಿರುವ ಸ್ವರೂಪವನ್ನೂ ಮತ್ತು ಮನುಷ್ಯರು ಅನುಭವಿಸುವ ಜಾಗ್ರತ ಸುಷುಪ್ತಿ ಸ್ವಪ್ನ ಅವಸ್ಥೆಗಳ ಸ್ವರೂಪವನ್ನೂ ಉಪದೇಶಮಾಡಿದ್ದಾರೆ. ಪ್ರಧಾನಪುರುಷ ಈಶ್ವರ ತತ್ವಗಳಸ್ವರೂಪಗಳನ್ನೂ, ಅವುಗಳ ವ್ಯತ್ಯಾಸಗಳನ್ನೂ, ಅವುಗಳ ಸಂಬಂಧಗಳನ್ನೂ ಭಗವಂತನಲ್ಲಿ ಪ್ರಪತ್ತಿ ಮಾಡುವ ಕ್ರಮವನ್ನೂ, ಈಶ್ವರನ ಕೃಪೆಯ ಸ್ವರೂಪವನ್ನೂ ಶ್ವೇತಾಶ್ವತರ ಉಪನಿಷತ್ತಿನಲ್ಲಿ ಉಪದೇಶ ಮಾಡಿದೆ. ಪ್ರಶ್ನೆ ಉಪನಿಷತ್ತಿನಲ್ಲಿ ಆರು ಶಿಷ್ಯರು ಪಿಪ್ಪಲಾದ ಮುನಿಯ ಬಳಿಗೆ ಬಂದು ಆರು ಪ್ರಶ್ನೆಗಳನ್ನು ಕೇಳಿದ ವಿಷಯವನ್ನು ವರ್ಣಿಸಿದೆ. ಪ್ರಜೆಗಳು ಎಲ್ಲಿಂದ ಬಂದರು? ಯಾವ ಶಕ್ತಿಯು ದೇಹವನ್ನು ಚೈತನ್ಯದಿಂದ ತುಂಬುವುದು? ಪ್ರಾಣವು ಎಲ್ಲಿಂದ ಬಂದು ಹೇಗೆ ಶರೀರದಲ್ಲಿ ಸೇರುವುದು? ಯಾರು ದೇಹದಲ್ಲಿ ಎಚ್ಚರವನ್ನೂ ಕನಸನ್ನೂ ಸುಷುಪ್ತಿಯನ್ನೂ ಅನುಭವಿಸುವರು? ಓಂಕಾರ ಧ್ಯಾನ ಮಾಡುವುದರ ಫಲವೇನು? ಹದಿನಾರು ಅಂಶಗಳಿಂದ ಕೂಡಿದ ಪುರುಷನು ಯಾರು? ಎಂಬ ಪ್ರಶ್ನೆಗಳನ್ನು ಶಿಷ್ಯರು ಕೇಳಿದರು. ಆ ಋಷಿಯು ಈ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರಗಳನ್ನು ಕೊಟ್ಟು ಅವರೆಲ್ಲರನ್ನೂ ಸಂತೋಷಪಡಿಸಿದನು. ಪರ ಮತ್ತು ಅಪರ ವಿದ್ಯೆಗಳ ವ್ಯತ್ಯಾಸಗಳನ್ನು ಮುಂಡಕೋಪನಿಷತ್ತು ತಿಳಿಯಪಡಿಸುವುದಲ್ಲದೆ ಒಂದೇ ಮರದ ಮೇಲೆ ಎರಡು ಪಕ್ಷಿಯ ಜೀವನವನ್ನು ಹೃದಯಂಗಮವಾಗಿ ವರ್ಣಿಸಿ, ಆ ಉದಾಹರಣೆಯ ಆಧಾರದಿಂದ ಪರಮಾತ್ಮನಿಗೂ ಜೀವಾತ್ಮನಿಗೂ ಇರುವ ವ್ಯತ್ಯಾಸಗಳನ್ನು ಉಪದೇಶ ಮಾಡಿದೆ. ಇಷ್ಟೇ ಅಲ್ಲ; ಈ ಉಪನಿಷತ್ತಿನಲ್ಲಿ ಯಜ್ಞಯಾಗಾದಿ ಕರ್ಮಗಳಿಗಿಂತ ಜ್ಞಾನವು ಶ್ರೇಷ್ಠವೆಂಬುವದನ್ನು, ಪ್ರಣವಮಂತ್ರದ ಉಪಾಸನಾಕ್ರಮವನ್ನು, ಬ್ರಹ್ಮಜ್ಞಾನಿಯ ಲಕ್ಷಣವನ್ನು, ಅವನು ಹೊಂದುವ ಉತ್ತಮ ಫಲವನ್ನೂ ತಿಳಿಯಪಡಿಸಿದೆ. ಬ್ರಹ್ಮನು ಪ್ರಣವ ಸ್ವರೂಪಿಯೆಂದೂ, ಮನುಷ್ಯನಿಗೆ ಸಾಧಾರಣವಾಗಿ ಜಾಗ್ರತ ಸ್ವಪ್ನ ಸುಷುಪ್ತಿ ಎಂಬ ಮೂರು ಅವಸ್ಥೆಗಳಿರುವುವೆಂದೂ, ಯೋಗಾಭ್ಯಾಸದಿಂದ ತುರೀಯಾವಸ್ಥೆಯುಂಟಾಗುವುದೆಂದೂ, "ಓಂ"ಕಾರದಲ್ಲಿ ಅ-ಉ-ಮ ಎಂಬ ಅಕ್ಷರಗಳು ಮೂರು ಅವಸ್ಥೆಗಳನ್ನು ಮತ್ತು ಒಟ್ಟು "ಓಂ" ಎಂಬ ಪದವು ತುರೀಯಾವಸ್ಥೆಯನ್ನು ಸೂಚಿಸುತ್ತದೆ ಎಂದೂ ಮಾಂಡೂಕ್ಯ ಉಪನಿಷತ್ತು ಉಪದೇಶ ಮಾಡುತ್ತದೆ. ಈ ಉಪನಿಷತ್ತಿನಲ್ಲಿ ತುರೀಯಾವಸ್ಥೆಯ ಲಕ್ಷಣಗಳು ವಿವರಿಸಲ್ಪಟ್ಟಿವೆ. ಐತರೇಯ ಉಪನಿಷತ್ತಿನಲ್ಲಿ ಮೊಟ್ಟಮೊದಲು ಆತ್ಮನೊಬ್ಬನೇ ಇದ್ದನೆಂದೂ ಮತ್ತು ಅವನ ದಿವ್ಯ ಸಂಕಲ್ಪದಿಂದ ವಿರಾಟ್‌ಪುರುಷ, ನಾನಾಲೋಕಗಳು, ಲೋಕಪಾಲಕರು, ಗರ್ಭಗಳು ಇವೆಲ್ಲವೂ ಉಂಟಾದುವೆಂದೂ ಉಪದೇಶಮಾಡಿದೆ. ನಾವು ಸ್ವರ್ಗನರಕ ಪರಲೋಕಾದಿಗಳ ವಿಚಾರಗಳನ್ನೂ; ಜೀವಾತ್ಮನಗೌರವ ಅವಸ್ಥೆಗತಿಗಳನ್ನೂ, ಪರಮಪದವನ್ನು ಆನಂದ ಮತ್ತು ಶ್ರೇಷ್ಠತ್ವವನ್ನೂ ಕೌಷೀತಕೀ ಉಪನಿಷತ್ತು ಉಪದೇಶ ಮಾಡುತ್ತದೆ.

ಛಾಂದೋಗ್ಯ ಉಪನಿಷತ್ತಿನಲ್ಲಿ ಅನೇಕ ವಿಷಯಗಳ ಉಪದೇಶವಿದೆ; ಅವು ಯಾವುವೆಂದರೆ— ಬ್ರಹ್ಮನು ಸತ್ಯಸ್ವರೂಪನು ಎಂದು ತಿಳಿಯಪಡಿಸುವ "ಸದ್ವಿದ್ಯೆ", ಬ್ರಹ್ಮನು ಆನಂದದ ಎಲ್ಲೆ ಎಂದು ತಿಳಿಯಪಡಿಸುವ "ಭೂಮವಿದ್ಯೆ", ಬ್ರಹ್ಮನು ಎಲ್ಲ ಜೀವಿಗಳ ಹೃದಯದಲ್ಲಿಯೂ ಅಂತರ್ಯಾಮಿಯಾಗಿರುವನು ಎಂದು ತಿಳಿಯಪಡಿಸುವ "ದಹರ ವಿದ್ಯೆ" ಮೊದಲಾದವು. ಕೊನೆಯದಾಗಿ ಕೇನ ಉಪನಿಷತ್ತಿನಲ್ಲಿ ಬ್ರಹ್ಮನ ನಿಜಸ್ವರೂಪದ ವರ್ಣನೆಯುಂಟು. ಬ್ರಹ್ಮನು ಇಂದ್ರಿಯ ಮನಸ್ಸು ಬುದ್ಧಿಗಳಿಗೆ ಅಗೋಚರನಾಗಿದ್ದು ಅವುಗಳಿಗೆ ಪ್ರೇರಕನಾಗಿ ಶಕ್ತಿಯನ್ನು ಕೊಡುತ್ತಾನೆಂದೂ ಮತ್ತು ಪರಬ್ರಹ್ಮನು ನಿಜವಾಗಿ ಜನರು ಪೂಜಿಸುವ "ಈ ದೇವರು—ಆ ದೇವರು" ಎಂಬ ಮೂರ್ತ ಅಮೂರ್ತ ವಸ್ತುಗಳಿಗಿಂತ ಆಚೆಗೆ ಇರುವನೆಂದೂ ಈ ಉಪನಿಷತ್ತು ತಿಳಿಯಪಡಿಸುತ್ತದೆ. ಎಲ್ಲ ದೇವತೆಗಳೂ ತಮ್ಮ ಶಕ್ತಿಗಳನ್ನು ಬ್ರಹ್ಮನಿಂದಲೇ ಪಡೆಯುತ್ತಾರೆಂಬುದನ್ನು ಒಂದು ಸ್ವಾರಸ್ಯವಾದ ಕಥೆಯಿಂದ ತಿಳಿಸಿ ಪರಬ್ರಹ್ಮನೇ ಎಲ್ಲ ಸಜೀವ ನಿರ್ಜೀವ ಪದಾರ್ಥಗಳಿಗಿಂತಲೂ ಶ್ರೇಷ್ಠನೆಂದು ಉಪದೇಶ ಮಾಡಿದೆ.

ಶಿಷ್ಯ——ಬೇರೆಬೇರೆ ಉಪನಿಷತ್ತುಗಳಲ್ಲಿರುವ ಅಭಿಪ್ರಾಯಗಳಲ್ಲಿ ಸಮನ್ವಯವಿದೆಯೆ?

**ಗುರು**—ಉಪನಿಷತ್ತುಗಳ ಭಾಷೆ, ಶೈಲಿ ಮತ್ತು ಅಭಿಪ್ರಾಯಗಳನ್ನು ಕೂಲಂಕಷವಾಗಿ ಪರೀಕ್ಷೆ ಮಾಡಿರುವ ಪಶ್ಚಿಮದೇಶಗಳ ವಿದ್ವಾಂಸರು ಉಪನಿಷತ್ತುಗಳನ್ನು ಬೇರೆಬೇರೆ ಕವಿಗಳು ಬೇರೆಬೇರೆ ಕಾಲದಲ್ಲಿ ರಚನೆಮಾಡಿದರೆಂದೂ, ಬೇರೆಬೇರೆ ಉಪನಿಷತ್ತುಗಳಲ್ಲಿರುವ ಅಭಿಪ್ರಾಯಗಳು ವ್ಯತ್ಯಾಸವಾಗಿವೆಯೆಂದೂ, ಅವು ಅನೇಕ ಕಡೆಗಳಲ್ಲಿ ಒಂದಕ್ಕೊಂದು ವಿರೋಧವಾಗಿವೆಯೆಂದೂ, ಒಂದೇ ಉಪನಿಷತ್ತಿನಲ್ಲಿಯೂ ಕೂಡ ಕೆಲವು ಕಡೆ ಅಭಿಪ್ರಾಯಗಳಲ್ಲಿ ಸಾಮರಸ್ಯವಿಲ್ಲವೆಂದೂ ಮತ್ತು ಒಟ್ಟಿನಲ್ಲಿ ಉಪನಿಷತ್ತುಗಳಲ್ಲಿ ಆಧ್ಯಾತ್ಮ ವಿಚಾರಗಳು ವಿವರಿಸಲ್ಪಟ್ಟಿದ್ದಾಗ್ಯೂ ಅವುಗಳಲ್ಲಿ ಕಂಡುಬರುವ ತತ್ತ್ವಹಿತಪುರುಷಾರ್ಥಗಳಲ್ಲಿ ಭಿನ್ನಾಭಿಪ್ರಾಯಗಳಿರುವುವೆಂದೂ ತೀರ್ಮಾನ ಮಾಡಿರುವರು. ಆದರೆ ಉಪನಿಷತ್ತುಗಳಿಗೆ ವ್ಯಾಖ್ಯಾನಗಳನ್ನು ಬರೆದಿರುವ ಭಾರತೀಯ ಪೂರ್ವಾಚಾರ್ಯರುಗಳು ಮೇಲಿನ ಅಭಿಪ್ರಾಯಗಳನ್ನು ಒಪ್ಪುವುದಿಲ್ಲ. ಎಲ್ಲಾ ಉಪನಿಷತ್ತುಗಳ ಎಲ್ಲಾ ವಾಕ್ಯಗಳ ಅಭಿಪ್ರಾಯಗಳನ್ನು ಒಂದು ವಿಧವಾಗಿ ಸಮನ್ವಯಮಾಡಿ ಉಪನಿಷತ್ತುಗಳಲ್ಲಿರುವ ತತ್ತ್ವಹಿತಪುರುಷಾರ್ಥಗಳನ್ನು ತಿಳಿದುಕೊಳ್ಳಬೇಕು ಎಂದು ಅವರು ಉಪದೇಶ ಮಾಡಿದ್ದಾರೆ. ಮೊದಲು ಉಪನಿಷತ್ತುಗಳಲ್ಲಿರುವ ತತ್ತ್ವವನ್ನು ಸಮನ್ವಯಮಾಡಿ ಲೋಕಕ್ಕೆ ಪ್ರಚಾರಮಾಡುವುದಕ್ಕಾಗಿಯೇ ವ್ಯಾಸರು ಬ್ರಹ್ಮಸೂತ್ರವನ್ನು ಬರೆದರು. ಆಮೇಲೆ ಶ್ರೀಕೃಷ್ಣನು ಅರ್ಜುನನಿಗೆ ಉಪನಿಷತ್ತುಗಳಲ್ಲಿರುವ ಮುಖ್ಯವಾಗಿ ಸಾಧನೆ ಮತ್ತು ಪುರುಷಾರ್ಥಗಳನ್ನೂ, ಎರಡನೆಯದಾಗಿ ತತ್ತ್ವಗಳನ್ನೂ ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿ ವಿವ

ಬೋಧಿಸಿದನು. ತರುವಾಯ ಪ್ರಸ್ಥಾನತ್ರಯಿ (ಅಂದರೆ ಉಪನಿಷತ್ತುಗಳು, ಭಗವದ್ಗೀತೆ ಬ್ರಹ್ಮಸೂತ್ರ)ಗಳಿಗೆ, ಶ್ರೀ ಶಂಕರಾಚಾರ್ಯರು ಅದ್ವೈತ ಸಿದ್ಧಾಂತದ ಪರವಾಗಿಯೂ, ಶ್ರೀ ಯಾದವನ ಭಾಷ್ಯದ ಮೊದಲಾದವರು ದ್ವೈತಾದ್ವೈತ ಸಿದ್ಧಾಂತಗಳ ಪರವಾಗಿಯೂ, ಶ್ರೀ ರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ಸಿದ್ಧಾಂತದ ಪರವಾಗಿಯೂ, ಶ್ರೀ ಆನಂದತೀರ್ಥ ಎಂಬ ಶ್ರೀಮಧ್ವಾಚಾರ್ಯರು ದ್ವೈತಸಿದ್ಧಾಂತದ ಪರವಾಗಿಯೂ ವ್ಯಾಖ್ಯಾನಗಳನ್ನು ಬರೆದಿರುವರು. ಈಚೀಚೆಗೆ ಭಾರತೀಯ ಮಹಾಪುರುಷರುಗಳಾದ ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ರವೀಂದ್ರನಾಥಠಾಕೂರ್, ಅರವಿಂದ ಘೋಷ್, ಮ. ಮೋಹನದಾಸ ಗಾಂಧಿ, ರಾಧಾಕೃಷ್ಣನ್ ಮೊದಲಾದವರು ತಮ್ಮ ತಮ್ಮ ಸ್ವ ಕೃತಿಗಳಲ್ಲಿ ಸಂದರ್ಭೋಚಿತವಾಗಿ ಸನ್ನಿವೇಶಕ್ಕೆ ಅನುಗುಣವಾಗಿ ಅನೇಕ ಉಪನಿಷದ್ವಾಕ್ಯಗಳಿಗೆ ಅರ್ಥಮಾಡಿರುವರು. ಇದರಿಂದ ಈ ಕೃತಿಗಳಲ್ಲಿ ಪಾಂಡಿತ್ಯವನ್ನು ಪಡೆಯದಿರುವ ಶಿಷ್ಯರ ಮನಸ್ಸಿನಲ್ಲಿ ಈ ಸಂದೇಹವು ಇದ್ದೀತು. ಇರುತ್ತದೆ; ಪ್ರಸ್ಥಾನ ತ್ರಯಿಯು, ಅದರಲ್ಲಿ ಮುಖ್ಯವಾಗಿ ಉಪನಿಷತ್ತುಗಳ ನಿಜವಾದ ತಾತ್ಪರ್ಯವೇನು ತತ್ವಾರ್ಥ ಗಳಾವುವು? ಅದ್ವೈತ ಸಿದ್ಧಾಂತವೆ? ವಿಶಿಷ್ಟಾದ್ವೈತ ಸಿದ್ಧಾಂತವೆ? ದ್ವೈತ ಸಿದ್ಧಾಂತವೋ ಅಥವ ಅನೇಕ ದ್ವೈತಾದ್ವೈತ ಸಿದ್ಧಾಂತಗಳಲ್ಲಿ ಯಾವುದಾದರೂ ಒಂದೇ? ಅಥವ ಇವೆಲ್ಲವೂ ಬೇರೆಬೇರೆ ರೀತಿಗಳಲ್ಲಿ ಇವೆಯೆ? ಈ ಸಂದೇಹಕ್ಕೆ ಅಥವ ಈ ಪ್ರಶ್ನೆ ಗಳಿಗೆ ಸರಿಯಾದ ಶೋಧನೆಯ ನಿರ್ಣಯಗಳನ್ನು ಹೇಳಲಾಗುವುದಿಲ್ಲ. ಹೀಗೆ ಸಂದೇಹ ಪಡುವುದಕ್ಕೆ ಬದಲು ಮುಮುಕ್ಷುವಾದ ಈ ಕಾಲದ ವಿದ್ಯಾರ್ಥಿಯು ಪ್ರಸ್ಥಾನತ್ರಯಿ ಗಳನ್ನು ಮುಖ್ಯವಾಗಿ ಉಪನಿಷತ್ತುಗಳನ್ನು ಎಲ್ಲಾ ಆಚಾರ್ಯರುಗಳ ವ್ಯಾಖ್ಯಾನಗಳ ಸಹಾಯದಿಂದ ಸಮ್ಯಗ್ಗಾಗಿ ಅರಿಯಬೇಕು. ಅವುಗಳ ವಾಕ್ಯಗಳನ್ನು ಶ್ರವಣ, ಮನನ ನಿಧಿಧ್ಯಾಸನ ಮಾಡುತ್ತಿದ್ದರೆ ಆಗ ಉಪನಿಷತ್ತಿನ ವಸ್ತು ಗೋಚರಿಸುವುದು. ಆಗಲೇ ಅವನ ಹೃದಯದಲ್ಲಿ ಅಧ್ಯಾತ್ಮ ತತ್ತ್ವಾರ್ಥ ಪ್ರಮಾಣಗಳು ಮನಸ್ಸಿನಲ್ಲಿ ಉತ್ಪನ್ನವಾದ ಸ್ವಾತಂತ್ರ್ಯವನ್ನುಂಟುಮಾಡಿ ಅವನನ್ನು ಅಧ್ಯಾತ್ಮ ಅಭ್ಯಾಸಗಳಲ್ಲಿ ಉತ್ಸಾಹದಿಂದಲೂ ಸಂತೋಷದಿಂದಲೂ ಸುಗ್ಗುವ ಹಾಗೆ ಪ್ರೇರೇಪಿಸುತ್ತವೆ.

ಶಿಷ್ಯ—ಗುರುಗಳವರೆ, ಈ ಕಾಲದಲ್ಲಿ ಎಲ್ಲರೂ ಅಭ್ಯಾಸಮಾಡುವ ಅಂಥಹ ಶ್ರವಣ ಗಳಿಗೆ ಹೆಸರು ಪಡೆದಿರುವ ಉಪನಿಷತ್ತುಗಳಲ್ಲಿರುವ ಉಪದೇಶಗಳಾವುವು?

ಗುರು—ಉಪನಿಷತ್ತುಗಳಲ್ಲಿ ಉಪದೇಶಮಾಡಿರುವ ಜ್ಞಾನವನ್ನು ಪಡೆಯುವ ಶಕ್ತಿ ಉತ್ತಮ ಶ್ರೇಯಸ್ಸನ್ನು ತಿಳಿಸುವ ಉಪನಿಷದ್ವಾಕ್ಯಗಳು ಹೃದಯಂಗಮವಾಗಿ ತಿಳಿಸುತ್ತವೆ; "ಬ್ರಹ್ಮವಿದಾಪ್ನೋತಿ ಪರಮ್" ಯಾವನು ಬ್ರಹ್ಮನನ್ನು ತಿಳಿ ಯುತ್ತಾನೆಯೋ ಅವನು ಪರಮಪದವನ್ನು ಹೊಂದುವನು. "ಬ್ರಹ್ಮವೇದ ಬ್ರಹ್ಮೈವ ಭವತಿ" ಬ್ರಹ್ಮನನ್ನು ಅರಿತವನು ಬ್ರಹ್ಮನೇ ಆಗುವನು. "ತಮೇವ ವಿದಿತ್ವಾ ಅತಿ ಮೃತ್ಯುಮೇತಿ"— ಅವನನ್ನು ತಿಳಿದವನು ಮೃತ್ಯುವನ್ನು ಮೀರುವನು ಮೃತ್ಯುವನ್ನು

ಹೇಳುತ್ತಾನೆ. "ಭಿದ್ಯತೇ ಹೃದಯ ಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ। ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ"— ಅವನು ಪರಸ್ವರೂಪವನ್ನು ಸಾಕ್ಷಾತ್ಕರಿಸಿದ ಒಡನೆಯೇ ಅವನ ಹೃದಯದಲ್ಲಿ ಬಂಧವು ಕತ್ತರಿಸಲ್ಪಡುವುದು, ಅವನ ಸಂಶಯಗಳೆಲ್ಲವೂ ಪರಿಹಾರವಾಗುವವು ಮತ್ತು ಅವನ ಕರ್ಮಗಳೆಲ್ಲವೂ ನಾಶವಾಗುವವು. ಈ ವಾಕ್ಯಗಳನ್ನೂ ಇತರ ಉಪನಿಷದ್ವಾಕ್ಯಗಳನ್ನೂ ನಾವು ಅಡಿಗಡಿಗೆ ಮನನಮಾಡುತ್ತಿದ್ದರೆ ಕೆಳಗಿನ ಅಭಿಪ್ರಾಯಗಳಲ್ಲಿ ನಮಗೆ ನಂಬಿಕೆಯು ತಾನಾಗಿಯೇ ಬೆಳೆಯುತ್ತಲೇ ಇರುವುದು:— (೧) ಜಗತ್ತಿನ ಪರಿಣಾಮಗಳ ಜ್ಞಾನದ ಸ್ವರೂಪವೇ ಬೇರೆ; ಜಗತ್ತಿಗೆ ಕಾರಣನಾದ ಅಥವ ಆಧಾರವಾದ ಬ್ರಹ್ಮಜ್ಞಾನದ ಸ್ವರೂಪವೇ ಬೇರೆ; ಆದರೆ ಪ್ರತಿಯೊಬ್ಬ ಮಾನವನೂ ಯೋಗಸಾಧನೆಗಳಿಂದ ಈಗ ಜಗತ್ತಿನ ಜ್ಞಾನವನ್ನು ಪಡೆದಿರುವ ಹಾಗೆ ಬ್ರಹ್ಮಜ್ಞಾನವನ್ನು ಪಡೆಯಬಹುದು. ಉಪನಿಷತ್ ಋಷಿಗಳು ಬ್ರಹ್ಮಜ್ಞಾನವನ್ನು ಪಡೆದಿದ್ದರು. (೨) ಪರಿಣಾಮಗಳಿಂದ ಕೂಡಿರುವ ಈ ಒಟ್ಟು ಜಗತ್ತಿನ ಸೃಷ್ಟಿ ಸ್ಥಿತಿಲಯಗಳಿಗೆ ಪರಿಣಾಮಗಳನ್ನೇ ಹೊಂದದ ಅಂದರೆ ಶಾಶ್ವತವಾದ ಬ್ರಹ್ಮವೇ ಕಾರಣವು. ಆ ಬ್ರಹ್ಮದ ಸ್ವರೂಪವನ್ನು ಶ್ರುತಿ, ಯುಕ್ತಿ ಮತ್ತು ಋಷಿಗಳ ಅನುಭವಗಳನ್ನು ಸಮನ್ವಯ ಮಾಡಿ ತಿಳಿದುಕೊಳ್ಳಬೇಕು. (೩) ಉಪನಿಷತ್ ಋಷಿಗಳು ಒಂದೇ ಬ್ರಹ್ಮವನ್ನು ಬೇರೆಬೇರೆ ಪ್ರಕಾರವಾಗಿ ಸಾಕ್ಷಾತ್ಕರಿಸಿರುವರು–ಜಗತ್ತಿಗೆ ಸಂಬಂಧಪಡದ ಬ್ರಹ್ಮಸ್ವರೂಪ; ಒಟ್ಟು ಜಗತ್ತಿನಲ್ಲಿ ಅಂತರ್ಯಾಮಿಯಾಗಿರುವ ಬ್ರಹ್ಮಸ್ವರೂಪ; ತಮ್ಮ ಆತ್ಮದಲ್ಲೇ ಅಂತರ್ಯಾಮಿಯಾಗಿರುವ ಬ್ರಹ್ಮಸ್ವರೂಪ; ಭಕ್ತರ ಆನಂದಕ್ಕಾಗಿ ಭಗವಂತನು ಸ್ವೀಕರಿಸುವ ದಿವ್ಯಮಂಗಳ ವಿಗ್ರಹಗಳ ಸ್ವರೂಪ ಮತ್ತು ಜಗತ್ತಾಗಿ ಪ್ರಕಾಶಿಸುತ್ತಿರುವ ಬ್ರಹ್ಮಸ್ವರೂಪ. ಆದುದರಿಂದ ಪ್ರಪಂಚದಲ್ಲಿ ಸೇವೆ ಮಾಡುವುದೂ ಬ್ರಹ್ಮನ ಕೈಂಕರ್ಯವೇ. (೪) ಜಗತ್ತನ್ನು ಬ್ರಹ್ಮನನ್ನು ತಿಳಿಯುವವನು ಯಾರು? ವೈಯಕ್ತಿಕ ಜೀವಾತ್ಮನು. ಈ ಜೀವಾತ್ಮನು ಶರೀರ, ಇಂದ್ರಿಯ, ಮನಸ್ಸು, ಬುದ್ಧಿ, ಪ್ರಾಣ, ಅಹಂಕಾರಗಳಲ್ಲ, ಆದರೆ ಸಚ್ಚಿದಾನಂದ ಸ್ವರೂಪನಾದ ಬ್ರಹ್ಮನನ್ನು ಅಂತರಾತ್ಮನನ್ನಾಗಿ ಅಥವ ಸತ್ಯವನ್ನಾಗಿ ಪಡೆದಿರುವ ಚಿದಾನಂದ ಸ್ವರೂಪನು. (೫) ಜೀವಾತ್ಮನು ಈಗ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದಿಲ್ಲ; ಅದಕ್ಕೆ ಬದಲಾಗಿ ಪ್ರಪಂಚದ ಅನುಭವಗಳನ್ನೂ ಸುಖದುಃಖಗಳನ್ನೂ ಪಡೆದಿರುವನು. ಇದಕ್ಕೆ ಕಾರಣ ಅವನಲ್ಲಿ ಆರೋಪಿತವಾಗಿರುವ ಅಜ್ಞಾನ ಅಥವ ಅವಿದ್ಯೆ, ಕರ್ಮ, ಲೋಕಾಂತರಗಳ ಅನುಭವ ಪುನರ್ಜನ್ಮ ಎಂಬ "ಸಂಸಾರಚಕ್ರ" (೬) ಜೀವಾತ್ಮನು ಸತ್ಯ ಸೌಂದರ್ಯ ಕಲ್ಯಾಣ ಸ್ವಭಾವಗಳಿಂದ ಕೂಡಿದ ಪರಿಪೂರ್ಣತ್ವವನ್ನು ಪಡೆಯಬೇಕಾದರೆ ಬ್ರಹ್ಮಜ್ಞಾನವನ್ನು ಪಡೆಯಬೇಕು; ಬ್ರಹ್ಮಜ್ಞಾನವನ್ನು ಪಡೆಯಬೇಕಾದರೆ ಅಹಂಕಾರ ಮಮಕಾರಗಳನ್ನು ಬಿಡುತ್ತ ರಾಜ, ಕರ್ಮ, ಭಕ್ತಿ, ಜ್ಞಾನ, ಪ್ರಪತ್ತಿಯೋಗಗಳೆಂಬ ಸಾಧನಗಳಲ್ಲಿ ಒಂದನ್ನೋ ಅನೇಕವನ್ನೋ ಕೈಗೊಳ್ಳಬೇಕು. ಉಪನಿಷತ್ತುಗಳಲ್ಲಿರುವ ಮೂ

ಮತ್ತೆರಡು ವಿದ್ಯೆಗಳಲ್ಲಿ ಒಂದನ್ನೋ ಅಧಿಕವನ್ನೋ ಉಪಾಸನೆ ಮಾಡಬೇಕು. (೭) ಮಾನವನ ಜೀವನವು ದುಃಖಮಿಶ್ರವಾದ ಅಲ್ಪಸುಖಗಳಿಂದ ಕೂಡಿದೆ, ಆದರೆ ಮನುಷ್ಯನು ಪಡೆಯಬಹುದಾದ ಬ್ರಹ್ಮಾನಂದಕ್ಕೆ ಇದನ್ನು ಹೋಲಿಸಿದರೆ ಈ ಜೀವನವನ್ನು ದುಃಖಮಯವೆಂದೇ ಹೇಳಬೇಕಾಗುತ್ತದೆ. (೮) ಯಾವ ಬ್ರಹ್ಮವು ಪರಮಸತ್ಯವೋ ಅದನ್ನು ಸಾಕ್ಷಾತ್ಕರಿಸುವುದರಿಂದ ಜೀವಾತ್ಮನಿಗೆ ಪರಸ್ಥಿತಿ, ಬ್ರಹ್ಮಸ್ಥಿತಿ, ವ್ಯಕ್ತಿತ್ವವನ್ನು ದಾಟಿದ ಸ್ಥಿತಿ, ಅಥವ ಮುಕ್ತಿ ಸ್ಥಿತಿಯುಂಟಾಗುವುದು ಎಂದು ಹೇಳಿರುವುದರಿಂದ ಜೀವಾತ್ಮನಿಗೂ ಬ್ರಹ್ಮನಿಗೂ ನಿಕಟ ಐಕ್ಯಸಂಬಂಧವಿರುವುದು ಮತ್ತು ಬ್ರಹ್ಮೋಪಾಸನೆ ಐಕ್ಯವಾಗುವುದೇ ಜೀವನ ಪರಮಧ್ಯೇಯವು. (೯) ಬ್ರಹ್ಮನಿಂದ ಜಗತ್ತಿನ ಸೃಷ್ಟಿಸ್ಥಿತಿಲಯಗಳುಂಟಾದರೂ ಬ್ರಹ್ಮನು ಪರಿಣಾಮರಹಿತನಾಗಿರುವನು ಮತ್ತು ಜಗತ್ತು ಅನಂತವಾಗಿ ಪರಿಣಾಮವನ್ನು ಹೊಂದುತ್ತಿರುವುದು; ಆದರೆ ಬ್ರಹ್ಮನ ಸತ್ಯಸ್ವರೂಪವನ್ನು ಜಗತ್ತಿನ ಸತ್ಯಸ್ವರೂಪವನ್ನು ಹೋಲಿಸಿದರೆ ಜಗತ್ತಿನ ಸತ್ಯತ್ವಕ್ಕೆ ತನ್ನದೆಂಬುದನ್ನು ಹೇಳುವುದಕ್ಕೆ ಆಗುವುದಿಲ್ಲ ಮತ್ತು (೧೦) ಸಮಾಜದಲ್ಲಿರುವವರೆಲ್ಲರೂ ಕ್ರಮೇಣ ಮೋಕ್ಷವನ್ನು ಪಡೆಯುವುದಕ್ಕಾಗಿ ಚತುರ್ವಿಧ ಪುರುಷಾರ್ಥಗಳನ್ನು ಸಮನ್ವಯಗೊಳಿಸುವ ಸನಾತನ ಧರ್ಮವು ಸಮಾಜದಲ್ಲಿ ಯಾವಾಗಲೂ ಆಚರಣೆಯಲ್ಲಿರಬೇಕು. ತಮೋಗುಣವನ್ನು ಹೊಂದಿರುವ ಮನುಷ್ಯನು ರಜೋಗುಣವನ್ನು ವೃದ್ಧಿ ಪಡಿಸಿಕೊಳ್ಳಬೇಕು. ರಜೋಗುಣವನ್ನು ಪಡೆದವನು ಸತ್ತ್ವಗುಣವನ್ನು ವೃದ್ಧಿಪಡಿಸಿಕೊಳ್ಳಬೇಕು. ಸತ್ತ್ವಗುಣವನ್ನು ಹೆಚ್ಚಾಗಿ ಪಡೆದವನು ಶುದ್ಧಸತ್ತ್ವವನ್ನು ಅಥವ "ತ್ರಿಗುಣಾತೀತ" ಅವಸ್ಥೆಯನ್ನು ಪಡೆಯಬೇಕು. ಅರ್ಥಪುರುಷಾರ್ಥಕ್ಕಿಂತ ಕಾಮಪುರುಷಾರ್ಥ ಮೇಲು, ಕಾಮಪುರುಷಾರ್ಥಕ್ಕಿಂತ ಧರ್ಮಪುರುಷಾರ್ಥ ಮೇಲು, ಧರ್ಮಪುರುಷಾರ್ಥಕ್ಕಿಂತ ಮೋಕ್ಷಪುರುಷಾರ್ಥ ಮೇಲು ಎಂಬುದನ್ನು ಎಲ್ಲರೂ ತಿಳಿದು ಭಗವಂತನ ಸೇವೆಯನ್ನು ಸದಾಕಾಲದಲ್ಲಿಯೂ ಮಾಡುತ್ತಿರಬೇಕು, ಆದಕ್ಕಾಗಿ ಅವರವರ ಶಕ್ತ್ಯನುಸಾರ, ಮೋಕ್ಷದವರೆಗಿನ ಪುರುಷಾರ್ಥಗಳನ್ನು ಹೊಂದಲು ಸ್ವಪ್ರಯತ್ನವನ್ನು ನಾನಾ ಬಗೆ ಧರ್ಮಾಚರಣೆಗಳನ್ನು ಕೈಗೊಳ್ಳುವುದೇ ವೇದದಲ್ಲಿ ಬೋಧಿಸಿರುವ ಸನಾತನಧರ್ಮವು.

ವಾಣೀವಿಲಾಸ ಮುದ್ರಣಾಲಯ, ನ್ಯೂ ಮಾರ್ಕೆಟ್ ಬೆಂಗಳೂರು-೨

# ಶ್ರೀ ನವಭಾರತ ಆಶ್ರಮ

ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

(ಮೂರು—ಹತ್ತು)

## ನವ್ಯಾಶ್ರಮದ ಸಾರ್ವಲೌಕಿಕ ಅಧ್ಯಾತ್ಮ ಉಪದೇಶ.

## ಭಾಗ ಎರಡು—ಜಗತ್ತಿಗೂ ಭಗವಂತನಿಗೂ ಇರುವ ಸಂಬಂಧ

### ಜಗತ್ತಿನ ಸ್ವರೂಪ

**ಶಿಷ್ಯ**—ಸ್ವಾಮಿ! ಭಗವಂತನು ಯಾರು ಮತ್ತು ಅವನ ಸ್ವರೂಪ ರೂಪಗುಣಗಳಾವುವು ಎಂಬ ವಿಚಾರಗಳನ್ನು ನನಗೆ ತಿಳಿಯಪಡಿಸಿದಿರಿ. ಇನ್ನು ಈ ಜಗತ್ತಿನ ನಿಜಸ್ವರೂಪವನ್ನು ತಿಳಿಯಪಡಿಸಿ.

**ಗುರು**—ನಾನೂ, ನೀನೂ, ಎಲ್ಲರೂ ಈಗ ವಾಸಮಾಡುತ್ತಿರುವ ಮತ್ತು ನಮ್ಮ ಪ್ರತ್ಯಕ್ಷಕ್ಕೆ ಗೋಚರವಾಗುವ ಪ್ರಪಂಚವನ್ನೇ "ಜಗತ್ತು" ಎಂದು ಕರೆಯುತ್ತೇವೆ. ಈಶಾವಾಸ್ಯ ಉಪನಿಷತ್ತಿನ ಮೊದಲನೆಯ ಮಂತ್ರದಲ್ಲಿ ಜಗತ್ತಿನ ಸ್ವರೂಪವನ್ನು "ಜಗತ್ಯಾಂ ಜಗತ್" ಎಂದು ವರ್ಣಿಸಿದೆ. ಅಂದರೇನು? ಪದಾರ್ಥಗಳನ್ನು ಅನುಭವಿಸುತ್ತಿರುವ ನಾವೂ ಮತ್ತು ನಮ್ಮಿಂದ ಅನುಭವಿಸಲ್ಪಡತಕ್ಕ ಎಲ್ಲಾ ಪದಾರ್ಥಗಳೂ ಒಂದೂ ಬಿಡದೆ ಎಲ್ಲವೂ ಪರಿಣಾಮವನ್ನು ಹೊಂದುತ್ತಲೇ ಇರುವುವು ಮತ್ತು ಯಾವಾಗಲೂ ಚಲನೆಯುಳ್ಳವೇ ಆಗಿರುವುವು. ಪ್ರತಿಯೊಂದು ವಸ್ತುವೂ ಕ್ಷಿಪ್ರಕಾಲ ಮಾತ್ರ ಇರುತ್ತದೆ; ಅನಂತರ ಅದರ ನಾಮರೂಪಗಳು ನಾಶವಾಗುತ್ತವೆ: ತರುವಾಯ, ಇನ್ನೊಂದು ನಾಮರೂಪವನ್ನು ಪಡೆದ ವಸ್ತುವು ಉಂಟಾಗುತ್ತದೆ. ನದಿಯಲ್ಲಿ ಹಳೆಯ ನೀರು ಹರಿಯುತ್ತಾ ಹೊಸ ನೀರು ಹೇಗೆ ಬರುತ್ತಿರುವುದೋ ಹಾಗೆಯೇ ಈ ಜಗತ್ತಿನಲ್ಲಿ ಪದಾರ್ಥಗಳ ಹಳೆಯ ನಾಮರೂಪಗಳು ಮಾಯವಾಗುತ್ತಾ ಹೊಸ ನಾಮರೂಪಗಳು ಉಂಟಾಗುತ್ತಲೇ ಇರುವುವು. ಪದಾರ್ಥಗಳ ಪ್ರವಾಹದ ಹಾಗೆ ಬದಲಾವಣೆಯಾಗುತ್ತಿರುವುದನ್ನೇ ನಾವು ಅವುಗಳ ಪರಿಣಾಮಗಳೆಂದು ತಿಳಿಯುತ್ತೇವೆ. ಇಷ್ಟೇ ಅಲ್ಲ, ಪದಾರ್ಥದಲ್ಲಿರುವ ಪ್ರತಿಯೊಂದು ಅಣುವಿ

ಗುರುವಾಗಬೇಕೆಂದು ಪ್ರಾರ್ಥಿಸುತ್ತಿದ್ದರು. ಬಹಳ ದಿವಸಗಳಾದ ಮೇಲೆ ಕಣ್ಣು ಮುಚ್ಚಿಕೊಂಡಿದ್ದ ಶಠಾರಿ ಮುನಿವರ್ಯರು ಮಧುರಕವಿಯ ಮೇಲೆ ವಿಶೇಷವಾದ ದಯೆಯನ್ನು ತೋರಿಸಿ, ಕಣ್ಣು ತೆರೆದು ಸಾತ್ವಿಕನಾದ ಇವರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು. ಈ ಗುರುವರ್ಯರನ್ನು ತಮಿಳು ದೇಶದ ಭಕ್ತರೆಲ್ಲಾ "ನಮ್ಮಾಳ್ವಾರ್" ಎಂದು ಕರೆಯುತ್ತಾರೆ. ಈ ಭಕ್ತರಿಗೆ ಭಗವಂತನು ಇವರ ಯೋಗಾಭ್ಯಾಸದ ಕಾಲದಲ್ಲಿ ತನ್ನ ದಿವ್ಯಾತ್ಮಸ್ವರೂಪವನ್ನೂ, ದಿವ್ಯಮಂಗಳವಿಗ್ರಹವನ್ನೂ, ದಿವ್ಯಗುಣಗಳನ್ನೂ, ದಿವ್ಯವಿಭವ ಐಶ್ವರ್ಯಾದಿಗಳನ್ನೂ ಪ್ರಕಾಶಪಡಿಸಿ ಪರಮಾನಂದವನ್ನುಂಟುಮಾಡಿದನೆಂದು ಪ್ರತೀತಿ. ಈ ಮಹನೀಯರೂ ಕೂಡ ಯೋಗಸಮಾಧಿಯಲ್ಲಿ ಅನುಭವಿಸಿದ ಸಾಕ್ಷಾತ್ಕಾರಗಳನ್ನು ಪರಮಕೃಪೆಯಿಂದ ಶಿಷ್ಯರಾದ ಮ ಧು ರ ಕ ವಿ ಗ ಳಿ ಗೆ ಉಪದೇಶಮಾಡಿದರು. ತಮಿಳು ಭಾಷೆಯಲ್ಲಿರುವ "ತಿರುವಾಯ್‌ಮೊಳಿ" ಎಂಬ ಸಾವಿರ ಪಾಶುರಗಳು (ಪದಗಳು) ಇವರ ದಿವ್ಯ ಅನುಭವಗಳ ವಿವರಣೆಯಾಗಿವೆ. ಈ 'ತಿರುವಾಯ್‌ಮೊಳಿ' (ಎಂದರೆ 'ಸಿರಿಬಾಯ್ನುಡಿ') ಗ್ರಂಥದ ಮೊದಲು ಮೂವತ್ತು ಪಾಶುರಗಳಲ್ಲಿ ಸಂಗ್ರಹವಾಗಿ ವಿವರಿಸಿರುವ ಅನುಭವಗಳನ್ನು ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥವಾಗಲೆಂದು ಗುರು-ಶಿಷ್ಯ ಸಂವಾದ ರೂಪದಲ್ಲಿ ಮೂರು ಲೇಖನಗಳಲ್ಲಿ ತಿಳಿಯಪಡಿಸುತ್ತೇವೆ.

## ಭಗವಂತನು ಯಾರು?

**ಶಿಷ್ಯ**—ಸ್ವಾಮಿ! ನೀವು ಅಡಿಗಡಿಗೆ ಕಣ್ಣುಮುಚ್ಚಿಕೊಂಡು ಕುಳಿತು ಏನನ್ನು ಯೋಚಿಸುತ್ತೀರಿ ಅಥವಾ ಧ್ಯಾನಮಾಡುತ್ತೀರಿ?

**ಗುರು**— ನನ್ನ ಒಳಗಿನ ಮನಸ್ಸಿನಲ್ಲಿ ತೇಜೋಮಯವಾದ ಭಗವಂತನ ದಿವ್ಯ ಮಂಗಳ ವಿಗ್ರಹ ರೂಪವನ್ನು ಧ್ಯಾನಮಾಡುತ್ತೇನೆ; ಅವನ ಪಾದಗಳಿಗೆ ನಮಸ್ಕರಿಸುತ್ತೇನೆ; ಅವನ ಮಂತ್ರಗಳ ಪ್ರದಕ್ಷಿಣೆ ಮಾಡುತ್ತೇನೆ ಮತ್ತು ಅವನ ವಿಚಾರವಾದ ಉಪನಿಷದ್ವಾಕ್ಯಗಳನ್ನು ಮನನ ಮಾಡುತ್ತೇನೆ.

**ಶಿಷ್ಯ**—ನಾವು ಏಕೆ ಕಣ್ಣುಮುಚ್ಚಿಕೊಳ್ಳಬೇಕು?

**ಗುರು**—ಕಣ್ಣು ತೆರೆದರೆ ಪ್ರಪಂಚದ ವಸ್ತುಗಳೂ, ಚಲನೆಗಳೂ, ವ್ಯಾಪಾರಗಳೂ ನನ್ನ ಅನುಭವಕ್ಕೆ ಬರುತ್ತವೆ; ನನ್ನ ಮನಸ್ಸು ಆಗ ಭಗವಂತನ ಮೇಲೆ ಪ್ರವರ್ತಿಸುವುದಿಲ್ಲ. ಆದುದರಿಂದ ಕಣ್ಣುಮುಚ್ಚಿಕೊಂಡು ಭಗವಂತನೊಬ್ಬನ ಮೇಲೆಯೇ ಮನಸ್ಸನ್ನು ನಿಲ್ಲಿಸಿ ಅವನಲ್ಲಿ ಪ್ರೀತಿ ಅಥವಾ ಭಕ್ತಿ ಇಡುತ್ತೇನೆ.

**ಶಿಷ್ಯ**—ಭಗವಂತನು ಯಾರೆಂಬುದನ್ನು ಸಾಧಾರಣವಾಗಿ ಹೇಗೆ ತಿಳಿಯಬಹುದು?

**ಗುರು**—ಕುಂಬಾರನು ಮಣ್ಣಿನಿಂದ ಮಡಿಕೆಯನ್ನು ಮಾಡುತ್ತಾನೆ; ಅದು ಚೆನ್ನಾಗಿಲ್ಲದಿದ್ದರೆ ಅದನ್ನು ಒಡೆದು ಪುನಃ ಮತ್ತು ಮಾಡುತ್ತಾನೆ. ಅಕ್ಕಸಾಲಿಗನು

ಚಿನ್ನವನ್ನು ಕರಗಿಸಿ ಒಂದು ಆಭರಣ ಮಾಡುತ್ತಾನೆ; ಅಥವಾ ಬೇಕೆಂದರೆ ಆ ಆಭರಣವನ್ನು ಕರಗಿಸಿ ಪುನಃ ಚಿನ್ನ ಮಾಡುತ್ತಾನೆ. ಹಾಗೆಯೇ ನಮ್ಮ ಅನುಭವದಲ್ಲಿರುವ ಮತ್ತು ನಾವು ವಾಸಮಾಡುವ ಈ ಒಟ್ಟು ಜಗತ್ತನ್ನು ಯಾವ ಮಹಾಸತ್ತ್ವವು ಅಥವ ಮಹಾಪುರುಷನು ತಾನೇ ಲೀಲೆಯಿಂದ ತನ್ನಿಂದಲೇ ಸೃಷ್ಟಿಸಿ, ಅದರಲ್ಲಿ ಸಂಕೋಚ ವಿಕಾಸಗಳೆಂಬ ಪರಿಣಾಮಗಳನ್ನುಂಟುಮಾಡಿ, ಅವುಗಳನ್ನೆಲ್ಲಾ ಕ್ಷೇತ್ರಕಾಲ ಕಾಲಾದಿ ಕ್ರಮೇಣ ಬಹು ಸೂಕ್ಷ್ಮರೂಪಕ್ಕೆ ತಂದು ಕೊನೆಯಲ್ಲಿ ತನ್ನಲ್ಲಿ ಲಯ ಮಾಡುತ್ತಾನೆಯೋ ಅವನೇ ಭಗವಂತನು ಅಥವಾ ಪರಮಾತ್ಮನು. ಹೀಗೆ ಜಗದುದಯ ವಿಭವ ಲಯಗಳನ್ನು ಲೀಲೆಯಿಂದ ಉಂಟುಮಾಡುವ ನಿತ್ಯವಾದ ಮತ್ತು ಶಾಶ್ವತವಾದ ಇರುವಿಕೆಯೇ ಪರಬ್ರಹ್ಮಸ್ವರೂಪನಾದ ಪರಮಾತ್ಮನು.

### ಅವನು ಪ್ರತ್ಯಕ್ಷ ಅನುಮಾನ ಪ್ರಮಾಣಗಳಿಗೆ ಗೋಚರನಾಗುವುದಿಲ್ಲ.

**ಶಿಷ್ಯ**—ಭಗವಂತನು ನಮಗೆ ಪ್ರತ್ಯಕ್ಷದಲ್ಲಿ ಕಾಣುವ ಚರಾಚರ ವಸ್ತುಗಳಲ್ಲಿ ಒಬ್ಬನೆ?

**ಗುರು**—ಪರಮಾತ್ಮನ ಸಂಪೂರ್ಣ ಸ್ವರೂಪವು ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ಯಾವುದೊಂದು ವಸ್ತುವೂ ಅಲ್ಲ. ಅಂದರೇನು; ಅವನು ಪೃಥ್ವಿ, ನದಿ, ಸರೋವರ, ಬೆಟ್ಟ, ಕಾಡು ಮತ್ತು ಸಮುದ್ರದೊಳಗಿರುವ ಅನೇಕ ಪದಾರ್ಥಗಳು, ಸಸ್ಯಗಳು, ವೃಕ್ಷಗಳು, ಕ್ರಿಮಿಕೀಟಗಳು, ಪ್ರಾಣಿಗಳು, ಮನುಷ್ಯರು ಇವರುಗಳಲ್ಲಿ ಯಾವದೊಂದೂ ಅಲ್ಲ. ಇನ್ನೇನು? ಮಹಾ ಆಕಾಶದಲ್ಲಿರುವ ಈ ಒಟ್ಟು ಭೂಮಿಯೂ ಅಲ್ಲ, ಚಂದ್ರನೂ ಅಲ್ಲ, ಸೂರ್ಯನೂ ಅಲ್ಲ ಮತ್ತು ಯಾವ ನಕ್ಷತ್ರವೂ ಅಲ್ಲ.

**ಶಿಷ್ಯ**—ಹಾಗಾದರೆ ಅವನು ನಮ್ಮ ಮನಸ್ಸಿನೊಳಗೆ ತೋರುತ್ತಿರುವ ಅನೇಕ ಚಿತ್ತವೃತ್ತಿಗಳಲ್ಲಿ ಒಂದು ಅದ್ಭುತ ಚಿತ್ತವೃತ್ತಿಯೆ?

**ಗುರು**—ನಾವು ಬೆಳಿಗ್ಗೆ ಎದ್ದು ರಾತ್ರಿ ಮಲಗುವವರೆಗೆ ನಮ್ಮ ಮನಸ್ಸಿನೊಳಗೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಭಯ, ಶೋಕ, ಧೈರ್ಯ, ಸಂತೋಷ, ಪ್ರವೃತ್ತಿ, ನಿವೃತ್ತಿ, ಆಲೋಚನೆ ಮೊದಲಾದ ಅನೇಕ ಚಿತ್ತವೃತ್ತಿಗಳು ಒಂದಾದ ಮೇಲೆ ಒಂದು ಪ್ರವಾಹರೂಪವಾಗಿ ಉಂಟಾಗುತ್ತಿರುವುವು. ಭಗವಂತನು ಇವುಗಳಲ್ಲಿ ಯಾವುದೊಂದೂ ಅಲ್ಲ. ನಾವು ನಿದ್ರೆಮಾಡುವಾಗಲೂ ಸ್ವಪ್ನಕಾಲದಲ್ಲಿಯೂ ಕೆಲವು ಚಿತ್ತವೃತ್ತಿಗಳನ್ನು ಪಡೆಯುತ್ತೇವೆ. ಭಗವಂತನು ಇವುಗಳಲ್ಲಿಯೂ ಯಾವುದೊಂದೂ ಅಲ್ಲ. ತರ್ಕಶಾಸ್ತ್ರದಲ್ಲಿ ಮನಸ್ಸಿನೊಳಗೆ ಉದ್ಭವಿಸುವ ಚಿತ್ತವೃತ್ತಿಗಳು ಅಥವಾ ಭಾವನೆಗಳನ್ನು "**ಪ್ರತ್ಯಕ್ಷ ಪದಾರ್ಥ**"ವೆಂದು ಕರೆಯುವರು. ಆದುದರಿಂದ ಭಗವಂತನು ಯಾವ ಪ್ರತ್ಯಕ್ಷ ಪದಾರ್ಥವೂ ಅಲ್ಲ ಮತ್ತು

ಬಾಹ್ಯ ಪದಾರ್ಥವೂ ಅಲ್ಲ.

**ಶಿಷ್ಯ**—ಭಗವಂತನು ಯೋಗಿಯು ಧ್ಯಾನ ಮಾಡುವಾಗ ಸಾಕ್ಷಾತ್ಕರಿಸುವ ತನ್ನ ವೈಯಕ್ತಿಕ ಆತ್ಮನೇ?

**ಗುರು**—ಯೋಗಾಭ್ಯಾಸ ಬಲದಿಂದ ಯೋಗಿಯು ತನ್ನ ಮನಸ್ಸಿನಲ್ಲಿರುವ ರಾಗಾಸಕ್ತ್ಯಾದಿ ದೋಷಗಳನ್ನೆಲ್ಲಾ ತೊಳೆಯುತ್ತಾನೆ; ಅದರ ಫಲವಾಗಿ—ಸಂಕೋಚವಾಗಿದ್ದ ಅವನ ಜ್ಞಾನವು ಪರಿಶುದ್ಧವಾಗಿ ವಿಕಾಸವಾಗುತ್ತದೆ ಮತ್ತು ನಿರ್ಮಲವಾಗುತ್ತದೆ. ಆಗ ಅವನಿಗೆ ತನ್ನ ವೈಯಕ್ತಿಕ ಆತ್ಮಸಾಕ್ಷಾತ್ಕಾರವನ್ನು ಪಡೆಯಲು ಶಕ್ತಿಯು ವೃದ್ಧಿಯಾಗುತ್ತದೆ. ಅಂದರೇನು; ತಾನು ದೇಹವಲ್ಲ, ಇಂದ್ರಿಯಗಳಲ್ಲ, ಮನಸ್ಸಲ್ಲ, ಬುದ್ಧಿಯಲ್ಲ ಎಂಬ ದೃಢವಾದ ತಿಳುವಳಿಕೆಯನ್ನು ಪಡೆದು, ಆ ಕಾಲದಲ್ಲಿ ತನ್ನ ನಿಜಸ್ವರೂಪವು ಜ್ಞಾನಾನಂದ ಸ್ವರೂಪವೆಂಬ ಅನುಭವವನ್ನು ಪಡೆಯುತ್ತಾನೆ. ಹೀಗೆ ಪವಿತ್ರವಾದ ಮತ್ತು ವಿಶಾಲವಾದ ಜ್ಞಾನದ ಸಹಾಯದಿಂದ ತನ್ನಲ್ಲಿ ವೈಯಕ್ತಿಕ ಆತ್ಮಸಾಕ್ಷಾತ್ಕಾರವನ್ನು ಪಡೆದ ಯೋಗಿಯು ಭಗವಂತನ ನಿಜಸ್ವರೂಪವನ್ನು ಅಳತೆ ಮಾಡಲು ಶಕ್ತನಲ್ಲ. ಅಂದರೇನು; ಭಗವಂತನು ಯಾವನೊಬ್ಬ ವೈಯಕ್ತಿಕ ಶುದ್ಧವಾದ ಆತ್ಮನೂ ಅಲ್ಲ; ಆದುದರಿಂದ ಯೋಗಿಗೂ "**ಅಪ್ರಮೇಯನು**" ಎಂದು ಹೇಳಿದೆ.

## ಭಗವಂತನ ನಿಜಸ್ವರೂಪ

**ಶಿಷ್ಯ**—ಭಗವಂತನು ಆಂತರ ಪದಾರ್ಥವಲ್ಲ, ಬಾಹ್ಯಪದಾರ್ಥವಲ್ಲ ಮತ್ತು ಜೀವಾತ್ಮನಲ್ಲ ಎಂದು ತಿಳಿಯಪಡಿಸಿದಿರಿ. ಹಾಗಾದರೆ ಭಗವಂತನ ನಿಜಸ್ವರೂಪವೇನು?

**ಗುರು**—ಪ್ರಪಂಚದಲ್ಲಿರುವ ಕೋಟ್ಯಾಂತರ ಜನರು ಭಗವಂತನ ಯಾವ ವಿಧವಾದ ಸಾಕ್ಷಾತ್ಕಾರವನ್ನೂ ಪಡೆದಿಲ್ಲ. ಆದುದರಿಂದ ಅವರಿಗೆ ಅವನ ನಿಜಸ್ವರೂಪವೇನೆಂಬುದನ್ನು ತಿಳಿಯಪಡಿಸುವುದಕ್ಕೇ ಆಗುವುದಿಲ್ಲ. ಏಕೆಂದರೆ ಅವರು ತಮ್ಮ ಅನುಭವಕ್ಕೆ ಗೋಚರವಾಗುವ ಒಳಗಿನ ಅಥವ ಹೊರಗಿನ ಅಂದರೆ ಪ್ರತ್ಯಕ್ ಅಥವ ಪರಾಕ್ ಪದಾರ್ಥವನ್ನು ತಿಳಿಯಬಲ್ಲರೇ ಹೊರತು ಇವೆರಡೂ ಅಲ್ಲದ ಭಗವಂತನ ಸ್ವರೂಪವನ್ನು ಅರಿಯಲಾರರು. ಈ ಕಾರಣದಿಂದಲೇ ಉಪನಿಷತ್ತಿನಲ್ಲಿ ಋಷಿಗಳು ಬ್ರಹ್ಮನ ಸ್ವರೂಪವನ್ನು "**ನೇತಿ–ನೇತಿ**" ಎಂದು ಅಡಿಗಡಿಗೆ ಉಪದೇಶ ಮಾಡಿರುವರು. ಶಿಷ್ಯನು ಯಾವ ಒಂದು ವಸ್ತುವನ್ನು ತೋರಿಸಿ "ಇದು ಬ್ರಹ್ಮವೇ" ಎಂದು ಕೇಳಿದರೆ ಗುರುವು "ನೇತಿ ಇದು ಬ್ರಹ್ಮವಲ್ಲ" ಎಂದು ಉತ್ತರ ಕೊಡುತ್ತಿದ್ದನು. "ಬ್ರಹ್ಮನು ಅಥವಾ ಭಗವಂತನು ಇದಲ್ಲ; ಇದಕ್ಕಿಂತ ಮೇಲಾದವನು—ವಿಜಾತೀಯ ಸ್ವರೂಪನು" ಎಂಬ ಅಭಿಪ್ರಾಯವನ್ನು "**ನೇತಿ**" ಎನ್ನುವ ಪದವು ತಿಳಿಯಪಡಿಸುತ್ತದೆ ಎಂದು ಕೆಲವು ವಿದ್ವಾಂಸರು ಅರ್ಥಮಾಡಿರುವರು.

**ಶಿಷ್ಯ**—ಬ್ರಹ್ಮನ ನಿಜಸ್ವರೂಪವೇನು ಎಂಬ ಪ್ರಶ್ನೆಗೆ ತಾವು ಕೊಟ್ಟ " ನೇತಿ–ನೇತಿ " ಎಂಬ ಉತ್ತರವು ನನ್ನ ಮನಸ್ಸಿನಲ್ಲಿ ಬ್ರಹ್ಮನ ವಿಚಾರದಲ್ಲಿ ಸಂದೇಹ ರಹಿತವಾದ ಜ್ಞಾನವನ್ನುಂಟುಮಾಡಿಲ್ಲ. ಆದುದರಿಂದ ತಾವು ಬ್ರಹ್ಮನ ನಿಜ ಸ್ವರೂಪವನ್ನು ಕೆಲವು ಲಕ್ಷಣಗಳಿಂದ ತಿಳಿಯಪಡಿಸಲೇಬೇಕು.

**ಗುರು**—ಕೆಲವು ಉಪನಿಷತ್ತುಗಳು ಬ್ರಹ್ಮನನ್ನು " **ಸತ್ಯಂ ಜ್ಞಾನಂ ಆನಂದಂ ಬ್ರಹ್ಮ** " ಎಂದೂ ಇನ್ನು ಕೆಲವು ಅವನನ್ನು " **ಸತ್ಯಂ ಜ್ಞಾನಂ ಅನಂತಂ ಬ್ರಹ್ಮ** " ಎಂದೂ, ವಿವರಿಸಿರುವುವು. ಬ್ರಹ್ಮನು ' ಸತ್ ಸ್ವರೂಪನು ' ಎಂದರೆ ತನಗೆ ಯಾವ ಕಾರಣವೂ ಇಲ್ಲದೆ ಅವನೇ ಜಗತ್ತಿಗೆಲ್ಲಾ ಕೊನೆಯ ಕಾರಣನಾಗಿದ್ದಾನೆ ಎಂಬುದಾಗಿ ತಿಳಿಯಬೇಕು. ಆದರೆ ಮನುಷ್ಯರಾದ ನಮಗೆ ಕಾಣುವ ಯಾವ ಪದಾರ್ಥಕ್ಕೂ ಕಾರಣವು ಇದ್ದೇ ಇರುವುದರಿಂದ ನಮಗೆ ' ಸತ್ ' ಜ್ಞಾನವು ಉಂಟಾಗಿಲ್ಲ. ಬ್ರಹ್ಮನು ' ಚಿತ್ ' ಸ್ವರೂಪನು ಎಂದರೆ ಅವನು ಅಖಂಡ ಜ್ಞಾನಸ್ವರೂಪನು ಎಂದು ಅರ್ಥ. ಆದರೆ ನಮಗೆ ಜ್ಞಾನಾಂಶದಿಂದುಂಟಾಗುವ ಪದಾರ್ಥಗಳ ತಿಳುವಳಿಕೆ ಮಾತ್ರ ಇದೆಯೇ ವಿನಹ ಅಖಂಡ ಅಥವ ವಿಭು ಜ್ಞಾನಸ್ವರೂಪದ ಅನುಭವವಿಲ್ಲ. ಬ್ರಹ್ಮನು ' ಆನಂದ ' ಸ್ವರೂಪನು ಎಂದರೆ ತನ್ನ ಜ್ಞಾನ ಸ್ವರೂಪವಾದ ಇರುವಿಕೆಯಲ್ಲೇ ಎಲ್ಲೆ ಮಿಲ್ಲದ ಸ್ವಾಭಾವಿಕವಾದ ಕೇವಲ ಆನಂದದಿಂದ ಕೂಡಿರುವವನು ಎಂದರ್ಥ. ಆದರೆ ಮಾನವರಾದ ನಮಗೆ ಉಂಟಾಗುವ ಸಂತೋಷಗಳೆಲ್ಲವೂ ಅಲ್ಪವಾಗಿಯೂ ದುಃಖ ಮಿಶ್ರವಾಗಿಯೂ ಇರುವುವು. ಆದಕ್ಕಾಗಿಯೇ ಮನುಷ್ಯರು ಅ ನು ಭ ವಿ ಸು ವ ವಿಕಾರದಿಂದ ಕೂಡಿದ ಸತ್ಯದ, ಜ್ಞಾನದ ಮತ್ತು ಆನಂದದ ಅನುಭವಕ್ಕೂ ಬ್ರಹ್ಮನ ಶಾಶ್ವತವಾದ ಸಚ್ಚಿದಾನಂದ ಸ್ವರೂಪಕ್ಕೂ ಇರುವ ಮಹತ್ತರವಾದ ವ್ಯತ್ಯಾಸವನ್ನು ತೋರಿಸುವುದಕ್ಕೆ 'ಅನಂತಂ' ಎಂಬ ಪದವನ್ನು ಸೇರಿಸಿದ್ದಾರೆ. ಅಂದರೇನು; ಬ್ರಹ್ಮನ ಸತ್ತು ಅನಂತವು, ಅವನ ಜ್ಞಾನವೂ ಅನಂತವು ಮತ್ತು ಅವನ ಆನಂದವೂ ಅನಂತವು ಎಂದು ತಿಳಿಯಬೇಕು. "ಅನಂತವು" ಎಂದರೆ ಕೊನೆಯಿಲ್ಲದ್ದು ಅಥವಾ ಅಳತೆ ಮಾಡಲು ಅಸಾಧ್ಯವಾದದ್ದು ಅಥವ ದೇಶ ಕಾಲ ಅವಸ್ಥೆಗಳಿಗೆ ಒಳಪಡದ್ದು ಎಂದು ದೊಡ್ಡವರು ಅರ್ಥಮಾಡಿದ್ದಾರೆ. ಒಟ್ಟಿನಲ್ಲಿ ತಾತ್ಪರ್ಯವೇನೆಂದರೆ ಬ್ರಹ್ಮನು ಪ್ರಪಂಚದಲ್ಲಿರುವ ವಸ್ತುಸಮೂಹಗಳಿಗೆಲ್ಲಾ ಸತ್ಯವಾದ ಅನಂತವಾದ ಆಧಾರನು; ಪ್ರಪಂಚದಲ್ಲಿರುವ ಜೀವಿಗಳ ತಿಳುವಳಿಕೆಗಳಿಗೆ ಆಶ್ರಯನಾದ ಅಖಂಡ ಜ್ಞಾನ ಸ್ವರೂಪನು ಮತ್ತು ಇವರುಗಳು ಪಡೆದಿರುವ ಅಲ್ಪ ಸಂತೋಷಗಳಿಗೆಲ್ಲಾ ಕಾರಣನಾದ ಪರಿಪೂರ್ಣವಾದ ನಿರ್ಮಲವಾದ ಆನಂದ ಸ್ವರೂಪನು. ಅಂದರೆ ಇವನ ಸತ್ಯಕ್ಕೆ ಮೇಲಾದ ಸತ್ಯವಿಲ್ಲ. ಇವನ ಜ್ಞಾನಕ್ಕೆ ಮೇಲಾದ ಜ್ಞಾನವಿಲ್ಲ. ಇವನ ಆನಂದಕ್ಕೆ ಮೇಲಾದ ಆನಂದವಿಲ್ಲ. ಇವೆಲ್ಲಾ ಅನಂತಗಳಾಗಿ ಅಂದರೆ ದೇಶ, ಕಾಲ, ಅವಸ್ಥೆಗಳಿಂದ ಅಳತೆ ಮಾಡಲ್ಪಡದವುಗಳಾಗಿ

ಇವೆ ಎಂದು ಉಪನಿಷತ್ತುಗಳು ಘೋಷಿಸುತ್ತವೆ. ಆದುದರಿಂದ ಪ್ರತ್ಯಕ್ಷಕ್ಕೆ ಗೋಚರವಾಗುವ ಸತ್ಯ, ಜ್ಞಾನ, ಆನಂದ ವಿಕಾರಗಳೆಲ್ಲಾ ಭಗವಂತನಿಂದಲೇ ಉಂಟಾಗಿ ಅವನ ನಿಯಮಕ್ಕೆ ಒಳಪಟ್ಟಿವೆ.

## ಒಬ್ಬನೇ ಆದ ಭಗವಂತನು ಅನಂತ ರೂಪಗಳನ್ನು ಪಡೆಯುವನು

**ಶಿಷ್ಯ**—ಇಂಥಾ ಸಚ್ಚಿದಾನಂದ ಸ್ವರೂಪನಾದ ಭಗವಂತನು ಒಬ್ಬನೆ ಅಥವಾ ಅನೇಕ ಭಗವಂತರು ಇರುವರೆ?

**ಗುರು**—ಭಗವಂತನು ಒಬ್ಬನೆ; ಇಬ್ಬರು ಅಥವ ಇನ್ನೂ ಅಧಿಕ ಭಗವಂತರು ಇರುವುದಿಲ್ಲ. ಅವನಿಗೆ ಸಮಾನರಾದ ಮನುಷ್ಯರಾಗಲೀ ಅಥವ ನಮ್ಮ ಅನುಭವಕ್ಕೆ ಗೋಚರವಾಗದ ದೇವತೆಗಳಾಗಲೀ ಯಾರೂ ಇಲ್ಲ; ಅವನಿಗಿಂತ ಮೇಲಾದ ಪುರುಷನು ಯಾವನೊಬ್ಬನೂ ಇಲ್ಲ. ಅನಂತವಾದ ಹಿಂದಿನ ಕಾಲದಲ್ಲೂ ಈಗಿನ ಕಾಲದಲ್ಲೂ ಮತ್ತು ಅನಂತವಾಗಿ ಮುಂದೆ ಬರುವ ಕಾಲದಲ್ಲೂ ಭಗವಂತನಿಗೆ ಸಮಾನನಾದವನು ಯಾರೂ ಇಲ್ಲ.

**ಶಿಷ್ಯ**—ಭಗವಂತನು ಒಬ್ಬನೇ ಆದರೆ ಅವನ ಭಕ್ತರು ಏಕೆ ಅವನನ್ನು ವೈಯಕ್ತಿಕವಾಗಿಯೂ ಪ್ರತ್ಯೇಕವಾಗಿಯೂ ಬೇರೆ ಬೇರೆ ರೂಪಗಳಲ್ಲಿ ಅನುಭವಿಸಿ ವರ್ಣಿಸಿರುವರು?

**ಗುರು**—ಭಕ್ತರ ವಿಚಾರದಲ್ಲಿ ಮಹಾಕರುಣಾಶಾಲಿಯಾದ ಇಂಥ ಭಗವಂತನು ಅವರವರ ಮನಸ್ಸಿನ ಸ್ವರೂಪ ಶಕ್ತಿಗಳಿಗನುಸಾರವಾಗಿ ಅವನನ್ನು ಸಾಕ್ಷಾತ್ಕರಿಸಿ ಆನಂದಪಡಲು ತಾನಾಗಿಯೇ ಸ್ವತಂತ್ರವಾಗಿ ಅಚಿಂತ್ಯವಾದ, ದಿವ್ಯವಾದ, ಅದ್ಭುತವಾದ, ನಿತ್ಯವಾದ, ಅವಧಿಯಿಲ್ಲದ, ನಿರತಿಶಯವಾದ, ಉಜ್ವಲವಾದ, ಸೌಂದರ್ಯವಾದ, ಸುಗಂಧದಿಂದ ಕೂಡಿದ, ಸೌಕುಮಾರ್ಯವಾದ, ಲಾವಣ್ಯದಿಂದ ಕೂಡಿದ ಅನಂತ ಗುಣನಿಧಿ ದಿವ್ಯರೂಪಗಳನ್ನು ಅಂದರೆ ಸಹಸ್ರಾರು ದಿವ್ಯ ಮಂಗಳ ವಿಗ್ರಹಗಳನ್ನು ಪಡೆಯುತ್ತಲೇ ಇರುವನು. ಆದುದರಿಂದಲೇ ಸ್ವಾಮಿಯಾದ ಭಗವಂತನನ್ನು ಸಹಸ್ರನಾಮಗಳಿಂದ ಋಷಿಗಳು ಸ್ತೋತ್ರ ಮಾಡಿರುವರು. ಒಬ್ಬನೇ ಭಗವಂತನು ತನ್ನ ಇಚ್ಛೆಗನುಸಾರವಾಗಿ ವಿಧವಿಧವಾದ ಅನೇಕ ರೂಪಗಳನ್ನು ತೆಗೆದುಕೊಳ್ಳುತ್ತಿರುವುದನ್ನೂ ಮತ್ತು ಪ್ರತಿಯೊಂದು ರೂಪವೂ ಎಲ್ಲೆಯಿಲ್ಲದ ಸೌಂದರ್ಯವನ್ನು ಪಡೆದಿರುವುದರಿಂದ ಅದು ಭಕ್ತರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸುತ್ತದೆ ಎಂಬುದನ್ನೂ ನೀನು ಮರೆಯಕೂಡದು. ನಮ್ಮ ಪೂರ್ವಾಚಾರ್ಯರುಗಳು ಈ ದಿವ್ಯ ಮಂಗಳ ವಿಗ್ರಹವನ್ನು ಪರಸ್ವರೂಪ, ವ್ಯೂಹಸ್ವರೂಪ, ಅಂತರ್ಯಾಮಿಸ್ವರೂಪ, ವಿಭವ ಸ್ವರೂಪ ಮತ್ತು ಅರ್ಚಾಸ್ವರೂಪ ಎಂದು ಐದು ವರ್ಗಗಳಾಗಿ ವಿಂಗಡಿಸಿರುವರು. ಈ ರೂಪಗಳಲ್ಲಿ ಚತುರ್ಭುಜನಾದ ಪರವಾಸುದೇವನು ಪರಮಪದದಲ್ಲಿ ನಿತ್ಯರಿಗೂ ಮುಕ್ತ

ಹಾಗೂ ಸ್ವಾಮಿಯಾಗಿದ್ದು ಅವರಿಂದ ಸೇವೆಗಳನ್ನು ಕೈಗೊಂಡು ಅವರಿಗೆ ಸದಾ ನಿರವಧಿಕ ಆನಂದವನ್ನುಂಟುಮಾಡುತ್ತಿರುವನು ಮತ್ತು ಜಗತ್ತಿನಲ್ಲಿರುವ ಎಲ್ಲಾ ಜೀವಿಗಳಿಗೆ ಅವರವರ ಕರ್ಮಾನುಸಾರ ಫಲಗಳನ್ನು ಕೊಡುವುದಲ್ಲದೆ ತನ್ನಲ್ಲಿ ಅನನ್ಯ ಭಕ್ತಿಯನ್ನು ಮಾಡುವವರಿಗೆ ಮೋಕ್ಷವನ್ನು ದಯಪಾಲಿಸುವನು. ಜಗತ್ ಸೃಷ್ಟಿ ಸ್ಥಿತಿ ಲಯ ಕಾರ್ಯಗಳನ್ನು ನಡೆಸುವುದಕ್ಕಾಗಿಯೂ, ತನನ್ನು ಧ್ಯಾನಮಾಡುವ ದೇವತೆಗಳಿಗೂ ಮುನಿಗಳಿಗೂ ಯೋಗಿಗಳಿಗೂ ಆನಂದವನ್ನುಂಟುಮಾಡುವುದಕ್ಕಾಗಿಯೂ ಬ್ರಹ್ಮ, ವಿಷ್ಣು, ಮಹೇಶ್ವರ, ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣಾದಿ ಅನೇಕ ವ್ಯೂಹರೂಪಗಳನ್ನು ಧರಿಸುವನು. ಸರ್ವದೇಶ ಸರ್ವಕಾಲ ಸರ್ವಾವಸ್ಥೆಯಲ್ಲೂ ಇರುವ ಸರ್ವ ಚೇತನಾಚೇತನವರ್ಗದಲ್ಲಿ ಅದೇ ಭಗವಂತನು ವ್ಯಾಪಿಸಿದ್ದು ಚೇತನರ ಮನೋವ್ಯಾಪಾರಗಳನ್ನು ಪ್ರೇರಿಸುತ್ತಾ ಅಂತರ್ಯಾಮಿಯಾಗಿರುವನು. ವಿವಿಧ ಜಾತಿಯಿಂದ ಕೂಡಿದ ಭೇದಾಭೇದ ಹೊಂದಿರುವ ಮನುಷ್ಯರು ತಮ್ಮ ಸಮಾಜದಲ್ಲಿಯೇ ಒಬ್ಬನಾಗಿರುವ ಭಗವಂತನನ್ನು ಅನುಭವಿಸಲೆಂದೂ ಮತ್ತು ಸಮಾಜದಲ್ಲಿ ಅಧರ್ಮವನ್ನು ನಿರ್ಮೂಲಮಾಡಿ ಧರ್ಮವನ್ನು ಸ್ಥಾಪಿಸುವುದಕ್ಕಾಗಿಯೂ ಪರಮಾತ್ಮನು ರಾಮಕೃಷ್ಣಾದಿ ವಿಭವಾವತಾರಗಳನ್ನು ಧರಿಸುವನು. ಇಷ್ಟೇ ಅಲ್ಲ; ಭೂಮಿಯ ಮೇಲಿರುವ ಸಕಲ ಜನರೂ ತನ್ನನ್ನು ತಮ್ಮ ಚರ್ಮಚಕ್ಷುಸ್ಸಿನಿಂದಲೇ ಸಾಕ್ಷಾತ್ಕರಿಸಿ ತಮ್ಮ ಮನಸ್ಸಿಗೆ ಕೋರಿದ ಸೇವೆಗಳನ್ನು ಮಾಡಿ, ಅವರವರ ಇಷ್ಟಾರ್ಥಗಳನ್ನು ಪಡೆದು ಕೃತಾರ್ಥರಾಗಲು, ಈಶ್ವರನು ಸರ್ವಸುಲಭನಾಗಿ ಅವರವರಿಗೆ ಮಾತ್ರ ಅನ್ವಯಿಸುವ ಲಕ್ಷಾಂತರ ಅರ್ಚಾವತಾರಗಳನ್ನು ಕೈಗೊಳ್ಳುವನು.

**ಶಿಷ್ಯ**— ಹಾಗಾದರೆ ಭಗವಂತನ ವಿಶ್ವರೂಪದ ಸ್ವರೂಪವೇನು? ಅದೂ ಕೂಡ ಪರ ವ್ಯೂಹ ಅಂತರ್ಯಾಮಿ ವಿಭವ ಅರ್ಚಾಸ್ವರೂಪಗಳಲ್ಲಿಯೇ ಅಡಕವಾಗಿದೆಯೆ?

**ಗುರು**— ಭಗವದ್ಗೀತೆಯ ಹನ್ನೊಂದನೆಯ ಅಧ್ಯಾಯದಲ್ಲಿರುವ ವಿಶ್ವರೂಪದ ವರ್ಣನೆಗಿಂತ ವಿವರವಾಗಿ ವಿಶ್ವರೂಪವನ್ನು ವರ್ಣಿಸಲು ಅಸಾಧ್ಯ. ಆದುದರಿಂದ ಗೀತೆಯಲ್ಲಿರುವ ಕೆಲವು ಶ್ಲೋಕಗಳ ಅಭಿಪ್ರಾಯಗಳನ್ನು ಮಾತ್ರ ನಿನಗೆ ತಿಳಿಸುತ್ತೇನೆ. "ಶ್ರೀ ಕೃಷ್ಣನು ಅರ್ಜುನನಿಗೆ ಕೃಪೆಯಿಂದ ದಿವ್ಯಚಕ್ಷುಸ್ಸನ್ನು ಕೊಟ್ಟು ತನ್ನ ವಿಶ್ವರೂಪದ ಸಾಕ್ಷಾತ್ಕಾರವನ್ನುಂಟುಮಾಡಿದನು. ಆಗ ಅರ್ಜುನನು ಅನೇಕ ಮುಖ ಕಣ್ಣುಗಳುಳ್ಳ, ಅತ್ಯಂತಾಶ್ಚರ್ಯವಾದ ನೋಟವುಳ್ಳ, ದಿವ್ಯವಾದ ಮೇಲಕ್ಕೆ ಎತ್ತಲ್ಪಟ್ಟಿರುವ ಆಯುಧಗಳುಳ್ಳ, ಅನೇಕ ಶ್ರೇಷ್ಠವಾದ ಆಭರಣಗಳುಳ್ಳ, ದಿವ್ಯವಾದ ಮಾಲಿಕೆ ವಸ್ತ್ರಗಳನ್ನು ಧರಿಸಿರುವ, ಒಳ್ಳೇಗಂಧವನ್ನು ಹಚ್ಚಿಕೊಂಡಿರುವ, ಆಶ್ಚರ್ಯಕರವಾದ, ಪ್ರಕಾಶಮಾನವಾದ, ಅಳತೆಯಿಲ್ಲದಿರುವ, ಎಲ್ಲಾ ಕಡೆಗೂ ಮುಖವುಳ್ಳ ಭಗವಂತನ ನಿರತಿಶಯವಾದ ಅಸಾಧಾರಣವಾದ ವಿಶ್ವರೂಪವುಳ್ಳ ಶರೀರವನ್ನು ಸಾಕ್ಷಾತ್ಕರಿಸಿದನು. ಸಾವಿರಾರು ಸೂರ್ಯರ ಕಾಂತಿಯು ಏಕಕಾಲದಲ್ಲಿ ಆಕಾಶದಲ್ಲಿ ಹುಟ್ಟಿದರೆ ಆ ಕಾಂತಿಯು ಆ ಮಹಾ ಶರೀರದ ಕಾಂತಿಗೆ ಸಮಾನವಾದೀತು. ದೇವಾದಿದೇವನ ಆ ದೊಡ್ಡ ಶರೀರದಲ್ಲಿ ಏಕದೇಶದಲ್ಲಿ ನಾನಾ ಬಗೆಯಾಗಿ ಭೇದವನ್ನು ಹೊಂದಿರುವ ಎಲ್ಲಾ

ಪ್ರಪಂಚವನ್ನೂ ಅರ್ಜುನನು ಕಂಡನು. ಆಗ ಅರ್ಜುನನಿಗೆ ಪರಮಾಶ್ಚರ್ಯವುಂಟಾಗಿ ಶರೀರದಲ್ಲೆಲ್ಲಾ ರೋಮಾಂಚವುಂಟಾಯಿತು. ಅವನು ಗದ್ಗದ ಸ್ವರದಿಂದ ಶಾಂತಿಯಿಂದ ಕೂಡಿದ ಭಗವಂತನನ್ನು ಕುರಿತು ತಲೆ ಬಗ್ಗಿಸಿ, ನಮಸ್ಕರಿಸಿ, ಕೈ ಮುಗಿದು ಹೀಗೆ ಹೇಳಿದನು. 'ಸ್ವಾಮಿಯೇ! ನಿನ್ನ ಶರೀರದಲ್ಲಿ ಎಲ್ಲಾ ದೇವತೆಗಳನ್ನೂ, ಬ್ರಹ್ಮರುದ್ರಾದಿಗಳನ್ನೂ, ಋಷಿಗಳನ್ನೂ, ಎಲ್ಲಾ ಪ್ರಾಣಿ ಸಮೂಹಗಳನ್ನೂ ನೋಡುತ್ತಿದ್ದೇನೆ. ಪ್ರಪಂಚಕ್ಕೆಲ್ಲಾ ಒಡೆಯನೇ! ಪ್ರಪಂಚವನ್ನೆಲ್ಲಾ ಶರೀರವಾಗಿ ಉಳ್ಳವನೇ! ಅನೇಕ ಭುಜ ಮುಖ ಕಣ್ಣು ಹೊಟ್ಟೆಗಳುಳ್ಳ, ಅಳತೆಯಿಲ್ಲದಷ್ಟು ಶರೀರಗಳುಳ್ಳ, ನಿನ್ನನ್ನು ಎಲ್ಲಾ ಕಡೆಗಳಲ್ಲೂ ನೋಡುತ್ತೇನೆ. ನಿನ್ನ ಸ್ವರೂಪದ ಆರಂಭವನ್ನೂ ಮಧ್ಯವನ್ನೂ ಕೊನೆಯನ್ನೂ ನಾನು ಕಾಣುವುದಿಲ್ಲ. ಎಲ್ಲಾ ಕಡೆಯಲ್ಲಿಯೂ ಪ್ರಭೆಯುಳ್ಳ, ತೇಜಸ್ಸಿನ ಸಮೂಹದಿಂದ ಕೂಡಿರುವ, ಉರಿವ ಬೆಂಕಿಸೂರ್ಯರ ಹಾಗೆ ಕಿರಣಗಳುಳ್ಳ, ಅಳತೆ ಮಾಡಲಸಾಧ್ಯವಾದ ನಿನ್ನನ್ನು ಕಿರೀಟ ಉಳ್ಳವನಾಗಿಯೂ, ಗದೆಯುಳ್ಳವನಾಗಿಯೂ, ಚಕ್ರವುಳ್ಳವನಾಗಿಯೂ ನೋಡುತ್ತಿದ್ದೇನೆ. ವೇದಗಳಲ್ಲಿ ವರ್ಣಿಸಿರುವ ಅಕ್ಷರನು ನೀನೇ; ಜಗತ್ತಿಗೆ ಉತ್ತಮವಾದ ಆಧಾರನು ನೀನೇ; ನಾಶವಿಲ್ಲದ ನಿತ್ಯವಾದ ಧರ್ಮವನ್ನು ಕಾಪಾಡತಕ್ಕವನೂ ನೀನೇ; ನಿತ್ಯಸ್ವರೂಪನೂ ನೀನೇ ಎಂಬುದನ್ನು ಈಗ ನಾನು ತಿಳಿದುಕೊಂಡೆನು'.

## ಭಗವಂತನ ಗುಣಗಳು

**ಶಿಷ್ಯ**— ಇಲ್ಲಿಯವರೆಗೆ ಭಗವಂತನ ಸ್ವರೂಪ ರೂಪಗಳನ್ನು ತಿಳಿಯಪಡಿಸಿದಿರಿ. ಇನ್ನು ಆ ಮಹಾತ್ಮನ ಗುಣಗಳನ್ನು ವಿವರಿಸಿ.

**ಗುರು**— ಭಗವಂತನ ಕಲ್ಯಾಣಗುಣಗಳು ಲೆಕ್ಕಮಾಡಲಾಗದಷ್ಟು ಅನಂತವಾಗಿವೆಯೆಂದು ವೇದಗಳು ತಿಳಿಯಪಡಿಸುತ್ತವೆ. ಅವುಗಳನ್ನೆಲ್ಲಾ ಸಮೂದಿಸಿ ವರ್ಣಿಸಲು ಈಗ ಸಾಧ್ಯವಲ್ಲದಿದ್ದರೂ ಕೆಲವನ್ನು ಮಾತ್ರ ನಿನಗೆ ತಿಳಿಯಪಡಿಸುತ್ತೇನೆ. ಭಗವಂತನು ಭಕ್ತರಿಗೆ ಸುಲಭನಾಗಿಯೂ ಇತರರಿಗೆ ದುರ್ಲಭನಾಗಿಯೂ ಇರುವನು. ಅವನು ಅನಂತ ಮಹಿಮೆಯಿಂದ ಕೂಡಿದವನಾದಾಗ್ಯೂ ತನ್ನ ಭಕ್ತರಲ್ಲಿ ವಿಶೇಷ ದಯೆಯನ್ನು ತೋರಿಸಿ ಅವರ ಜ್ಞಾನಾನುದಯ, ಅನ್ಯಥಾಜ್ಞಾನ, ವಿಪರೀತಜ್ಞಾನ ಎಂಬ ಮೂರು ವಿಧವಾದ ಅಜ್ಞಾನಗಳನ್ನು ನಾಶಮಾಡಿ ಅವರ ಹೃದಯದಲ್ಲಿ ನಿರ್ಮಲವಾದ ಜ್ಞಾನಭಕ್ತಿಗಳನ್ನು ತನ್ನ ಕೃಪಾಕಟಾಕ್ಷದಿಂದ ಉಂಟುಮಾಡುವನು. ತೇಜಸ್ಸಿನಿಂದ ಕೂಡಿದ ಅವನ ಪಾದಗಳನ್ನು ಸ್ಮರಿಸಿದವರ ದುಃಖಗಳನ್ನು ತನ್ನ ಕಟ್ಟಳೆಗಳಿಗನುಸಾರವಾಗಿ ಕ್ರಮೇಣ ಹೋಗಲಾಡಿಸುವನು. ಧರ್ಮಾರ್ಥಕಾಮಪುರುಷಾರ್ಥಗಳನ್ನು ಹೊಂದಲು ದೇವತೆಗಳನ್ನು ಯಜ್ಞಯಾಗಾದಿ ಕರ್ಮಗಳ ಮೂಲಕ ಪೂಜಿಸುವವರಿಗೆ ಆಯಾ ದೇವತೆಗಳಲ್ಲಿ ಅಂತರ್ಯಾಮಿಯಾಗಿದ್ದು ಅವರ ಪ್ರಾರ್ಥನೆಗಳನ್ನು ಸಲ್ಲಿಸುವನು. ದೇವತೆಗಳಿಗೂ, ಮಾನವರಿಗೂ, ಪ್ರಾಣಿಗಳಿಗೂ ಅವರವರ ಅಂತಸ್ತಿನ ಪ್ರಕಾರ ಜ್ಞಾನ ಇಚ್ಛೆ ಕ್ರಿಯಾಶಕ್ತಿಗಳನ್ನು ದಯಪಾಲಿಸುವನು.

ಶ್ರೀ ನವಭಾರತ ಆಶ್ರಮ
ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

## (ಮಾಲೆ—ಹದಿನಾರು)

## ಆರಣ್ಯಕಗಳು ಮತ್ತು ಉಪನಿಷತ್ತುಗಳು

ಕನ್ನಡ ಜ್ಞಾನದೀಪಿಕೆಯ ಹದನೇ ಮಾಲೆಯಲ್ಲಿ "ವೇದಗಳ ವಿಚಾರ—ಸಂಹಿತೆಗಳು ಮತ್ತು ಬ್ರಾಹ್ಮಣಗಳು" ಎಂಬ ವಿಷಯವನ್ನು ಕುರಿತು ಲೇಖನವನ್ನು ಬರೆದಿದ್ದೇನೆ. ಈ ಹದಿನಾರನೇ ಮಾಲೆಯಲ್ಲಿ ಆ ವೇದಗಳ ವಿಚಾರವನ್ನೇ ಮುಂದುವರಿಸಿ ಆರಣ್ಯಕಗಳ, ಅವುಗಳಲ್ಲಿ ಮುಖ್ಯವಾದ ಉಪನಿಷತ್ತುಗಳ ವಿಚಾರವನ್ನು ಗುರುಶಿಷ್ಯರ ಸಂವಾದ ರೂಪದಲ್ಲಿ ತಿಳಿಯಪಡಿಸುತ್ತೇನೆ.

ಶಿಷ್ಯ—ಆರಣ್ಯಕಗಳು, ಉಪನಿಷತ್ತುಗಳು ಎಂದರೇನು ?

ಗುರು—ಪ್ರತಿಯೊಂದು ವೇದವನ್ನೂ ಸಂಹಿತೆಗಳೆಂದೂ ಬ್ರಾಹ್ಮಣಗಳೆಂದೂ ಎರಡು ಭಾಗಮಾಡಿದರು. ಬ್ರಾಹ್ಮಣಗಳ ಅನೇಕ ಅಧ್ಯಾಯಗಳನ್ನು ಕಾಡಿನಲ್ಲಿ ಉಪಾಸನೆ ಮಾಡಬೇಕಾದ "ಆರಣ್ಯಕಗಳು" ಎಂದು ಕರೆದರು. ಈ ಆರಣ್ಯಕಗಳಲ್ಲಿರುವ ಬ್ರಹ್ಮಜ್ಞಾನವನ್ನು ತಿಳಿಯಪಡಿಸುವ ಮುಖ್ಯ ಭಾಗಗಳೇ "ಉಪನಿಷತ್ತುಗಳು". ಆದುದರಿಂದ ಋಗ್ವೇದ, ಯಜುರ್ವೇದ, ಸಾಮವೇದ, ಮತ್ತು ಅಥರ್ವಣ ವೇದ ಎಂಬ ಪ್ರತಿಯೊಂದು ವೇದದಲ್ಲಿಯೂ ಸಂಹಿತೆಗಳು, ಬ್ರಾಹ್ಮಣಗಳು, ಆರಣ್ಯಕಗಳು ಮತ್ತು ಉಪನಿಷತ್ತುಗಳು ಎಂದು ನಾಲ್ಕು ಭಾಗಗಳಿರುವುವು. ಆರಣ್ಯಕಗಳು ಉಪಾಸನೆಗಳಿಗೆ ಯೋಗ್ಯವಾಗಿವೆ; ಉಪನಿಷತ್ತುಗಳು ಬ್ರಹ್ಮಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳ ಜ್ಞಾನವನ್ನುಂಟುಮಾಡುತ್ತವೆ. ಉಪನಿಷತ್ತುಗಳು ವೇದಗಳ ಕೊನೆಯಲ್ಲಿರುವುದರಿಂದ "ವೇದಾಂತ" ವೆಂಬ ಹೆಸರನ್ನು ಪಡೆದಿವೆ. ವೇದಗಳ ಕೊನೆಯ ಭಾಗವೆಂದರೆ ವೇದಗಳ ಸಾರವಾದ ಭಾಗ ಅಥವ ಮುಖ್ಯವಾದ ಭಾಗ ಎಂದು ಅರ್ಥವಾಗುತ್ತದೆ. ಅಂದರೇನು, ಉಪನಿಷತ್ತುಗಳು ವೇದಗಳಲ್ಲಿ ಕರ್ಮ ಭಾಗವಲ್ಲದ ಮಿಕ್ಕ ಜ್ಞಾನ ಭಾಗವಾಗಿವೆ. ಉಪನಿಷತ್ತು (ಉಪ = ಹತ್ತಿರದಲ್ಲಿ; ನಿ = ಭಕ್ತಿಯಿಂದ; ಸದ್ = ಕುಳಿತುಕೊಂಡು) ಎಂದರೆ ಮುಮುಕ್ಷುವಾದ ಶಿಷ್ಯನು ತನ್ನ ಗುರುವಿನ ಹತ್ತಿರ ಭಕ್ತಿಯಿಂದ ಕುಳಿತುಕೊಂಡು ದಿವ್ಯ ಜ್ಞಾನದ ಉಪದೇಶವನ್ನು ಪಡೆಯುವುದು ಎಂದು ಅರ್ಥವಾಗುತ್ತದೆ. ಅಜ್ಞಾನವನ್ನು ಧ್ವಂಸಮಾಡಿ, ಬ್ರಹ್ಮಜ್ಞಾನವನ್ನುಂಟುಮಾಡುವ ವಿದ್ಯೆಯೇ "ಉಪನಿಷತ್ತುಗಳು" ಎಂದು ಕೆಲವರ ಅಭಿಪ್ರಾಯ. ಉಪನಿಷತ್ತುಗಳನ್ನು ಸನ್ಯಾಸಿಗಳು ಮಾತ್ರ ಕಲಿಯುವ "ರಹಸ್ಯ ಶಾಸ್ತ್ರ" ಎಂದು ಹೇಳುವುದಕ್ಕಿಂತ ಎಲ್ಲ ಮಾನವರಿಗೂ ಶ್ರೇಯಸ್ಸನ್ನುಂಟುಮಾಡುವ "ಪವಿತ್ರಶಾಸ್ತ್ರ" ಎಂದು ಕರೆಯುವುದು ಉತ್ತಮ.

ಶಿಷ್ಯ—ವಿದ್ಯಾರ್ಥಿಗಳು ಆರಣ್ಯಕಗಳನ್ನೂ ಉಪನಿಷತ್ತುಗಳನ್ನೂ ಪೂರ್ವ ಕಾಲದಲ್ಲಿ ಕಲಿಯುತ್ತಿದ್ದ ಸನ್ನಿವೇಶಗಳಾವುವು ?

**ಗುರು** — ಋಷಿಗಳು ಉಪನಿಷತ್ತುಗಳನ್ನು ಆಶ್ರಮಗಳಲ್ಲಿಯೂ, ಗುರುಕುಲಗಳಲ್ಲಿಯೂ, ಯಜ್ಞಮಂಟಪಗಳಲ್ಲಿಯೂ, ರಾಜರ ದರ್ಬಾರುಗಳಲ್ಲಿಯೂ ಉಪದೇಶ ಮಾಡಿದರೆಂದು ಪ್ರತೀತಿ ಇದೆ. ನದಿಯ ಹತ್ತಿರದಲ್ಲಿ, ಸರೋವರದ ಪಕ್ಕದಲ್ಲಿ, ಗುಡ್ಡಗಳ ತಪ್ಪಲಲ್ಲಿ, ತೋಪುಗಳ ಮಧ್ಯದಲ್ಲಿ ಅಂದರೆ ಪಟ್ಟಣಗಳಿಂದ ದೂರವಾದ ಏಕಾಂತವಾದ ಮತ್ತು ಸುಂದರವಾದ ಪ್ರದೇಶಗಳಲ್ಲಿ ಆ ಕಾಲದಲ್ಲಿ ಆಶ್ರಮಗಳನ್ನು ಕಟ್ಟುತ್ತಿದ್ದರು. ಕಾಡಿನಲ್ಲಿ ಸಿಕ್ಕುವ ಬಿದಿರು, ಎಲೆಬಳ್ಳಿಗಳು, ಕಟ್ಟಿಗೆ, ಮಣ್ಣು ಇವುಗಳಿಂದ ಕಟ್ಟಲ್ಪಟ್ಟ ಆಶ್ರಮದ ಕಟ್ಟಡಗಳು "ಪರ್ಣಕುಟೀರ"ಗಳಾಗಿದ್ದವು. ಪ್ರತಿಯೊಂದು ಆಶ್ರಮವೂ ಗುರುಗಳ, ಅವರ ಸಂಸಾರಗಳ ಮತ್ತು ಶಿಷ್ಯರುಗಳ ಒಂದು ಸ್ವತಂತ್ರವಾದ ಸಜೀವವಾದ ಚಿಕ್ಕಸಾಮಾಜಿಕ ಕೇಂದ್ರವಾಗಿತ್ತು. ಈ ಆಶ್ರಮಗಳು ದೊಡ್ಡ ಗುರುಕುಲಗಳು ಆಗಿದ್ದುದು ಮಾತ್ರವಲ್ಲದೆ ತಪವನ್ನಾಚರಿಸುವವರ, ಯಜ್ಞಯಾಗಾದಿಗಳನ್ನು ನಡೆಸುವವರ, ಬ್ರಹ್ಮಚರ್ಯ ಮತ್ತು ತ್ಯಾಗಗಳನ್ನು ಅಭ್ಯಾಸ ಮಾಡುವವರ, ಒಟ್ಟಿನಲ್ಲಿ ಆಧ್ಯಾತ್ಮ ಅಭ್ಯಾಸಗಳನ್ನು ಅನುಷ್ಠಿಸುವ ತಪಸ್ವಿಗಳ ಅಥವ ಮುನಿಗಳ ವಾಸಸ್ಥಾನಗಳೂ ಆಗಿದ್ದುವು.

**ಶಿಷ್ಯ** — ಎಷ್ಟು ಉಪನಿಷತ್ತುಗಳಿವೆ? ಇವನ್ನು ರಚನೆಮಾಡಿದ ಮಹಾಕವಿಗಳು ಯಾರು?

**ಗುರು** — ನಾಲ್ಕು ವೇದಗಳಲ್ಲೂ ಅನೇಕ ಉಪನಿಷತ್ತುಗಳು ಇದ್ದವು; ಆದರೆ ಈಗ ನೂರೆಂಟು ಉಪನಿಷತ್ತುಗಳ ಹೆಸರುಗಳು ಮಾತ್ರ ಗೊತ್ತಾಗಿವೆ. ಇವುಗಳಲ್ಲಿ ಹತ್ತು ಅಥವ ಹನ್ನೆರಡು ಉಪನಿಷತ್ತುಗಳು ಮಾತ್ರ ಮುಖ್ಯ; ಏಕೆಂದರೆ ಎಲ್ಲಾ ಉಪನಿಷತ್ತುಗಳಲ್ಲಿರುವ ವಿಷಯಗಳೆಲ್ಲವೂ ಬಹುಮಟ್ಟಿಗೆ ಇವುಗಳಲ್ಲೇ ಅಡಕವಾಗಿವೆ. ಆದುದರಿಂದಲೇ ನಮ್ಮ ಪೂರ್ವಾಚಾರ್ಯರುಗಳು ದ್ವಾದಶ ಉಪನಿಷತ್ತುಗಳಿಗೆ ಮಾತ್ರ ವ್ಯಾಖ್ಯಾನಗಳನ್ನು ಬರೆದಿರುವರು. ಐತರೇಯ ಉಪನಿಷತ್ ಮತ್ತು ಕೌಷೀತಕೀ ಉಪನಿಷತ್ತುಗಳು ಋಗ್ವೇದದಲ್ಲಿವೆ; ಈಶಾವಾಸ್ಯ ಉಪನಿಷತ್, ಕಠೋಪನಿಷತ್, ತೈತ್ತಿರೀಯ ಉಪನಿಷತ್, ಬೃಹದಾರಣ್ಯಕ ಉಪನಿಷತ್ ಮತ್ತು ಶ್ವೇತಾಶ್ವತರ ಉಪನಿಷತ್ ಯಜುರ್ವೇದದಲ್ಲಿವೆ; ಛಾಂದೋಗ್ಯ ಉಪನಿಷತ್ ಮತ್ತು ಕೇನ ಉಪನಿಷತ್ ಸಾಮವೇದದಲ್ಲಿವೆ; ಪ್ರಶ್ನ ಉಪನಿಷತ್, ಮುಂಡಕ ಉಪನಿಷತ್ ಮತ್ತು ಮಾಂಡೂಕ್ಯ ಉಪನಿಷತ್ ಅಥರ್ವಣವೇದದಲ್ಲಿವೆ.

ಉಪನಿಷತ್ತುಗಳನ್ನು ಸಾಂಗವಾಗಿ ವ್ಯಾಸಂಗಮಾಡಿರುವ ಮ್ಯಾಕ್ಸ್‌ಮುಲ್ಲರ್, ಡ್ಯೂಸನ್, ಸೋಪನ್‌ಹಾರ್ ಮುಂತಾದ ಪಶ್ಚಿಮದೇಶದ ವಿದ್ವಾಂಸರು ಕ್ರಿ. ಪೂ. [illegible]೦೦ ರಿಂದ ಕ್ರಿ. ಪೂ. ೬೦೦ರೊಳಗೆ ಅನೇಕ ಕವಿಗಳು ಈ ಉಪನಿಷತ್ತುಗಳನ್ನು ರಚನೆ ಮಾಡಿರುವರೆಂದು ಅಭಿಪ್ರಾಯಪಟ್ಟಿರುವರು. ಆದರೆ ಕೆಳಗೆ ನಮೂದಿಸಿರುವ ಕೆಲವು ಉಪನಿಷತ್ ಕವಿಗಳ ಹೆಸರುಗಳು ಮಾತ್ರ ಗೊತ್ತಿವೆಯೇ ವಿನ ಅವರ

ಜೀವನಚರಿತ್ರೆಯು ಗೊತ್ತಿಲ್ಲವೆಂದು ಹೇಳಿರುವರು—ಪ್ರಜಾಪತಿ, ಇಂದ್ರ, ನಾರದ, ಸನತ್ಕುಮಾರ, ಮಹಿದಾಸ, ಐತರೇಯ, ರೈಕ್ವ, ಶಾಂಡಿಲ್ಯ, ಸತ್ಯಕಾಮಜಾಬಾಲ, ಜೈವಲಿ, ಉದ್ದಾಲಕ, ಅರುಣಿ, ಶ್ವೇತಕೇತು, ಭರದ್ವಾಜ, ಗಾರ್ಗ್ಯಾಯಣ, ಪ್ರತರ್ದನ, ಬಾಲಾಕಿ, ಅಜಾತಶತ್ರು, ವರುಣ, ಯಾಜ್ಞವಲ್ಕ್ಯ, ಗಾರ್ಗಿ ಮತ್ತು ಮೈತ್ರೇಯಿ. ಆದರೆ ಮೇಲಿನ ಅಭಿಪ್ರಾಯಗಳನ್ನು ಭಾರತದೇಶದ ಪೂರ್ವಾಚಾರ್ಯರುಗಳು ಒಪ್ಪುವುದಿಲ್ಲ. ಉಪನಿಷತ್ತುಗಳೆಲ್ಲವೂ ಅಪೌರುಷೇಯವೇದ, ಶ್ರುತಿಗಳೆಂದೂ, ಅನಾದಿಯೆಂದೂ, ಭಗವಂತನಿಂದಲೇ ಲೋಕದಲ್ಲಿ ಪ್ರಭಾವವಾದವುಗಳೆಂದೂ, ಋಷಿಗಳು ತಮ್ಮ ತಪಸ್ಸಿನ ಪ್ರಭಾವದಿಂದ ಅತೀತ ದಿವ್ಯಶಬ್ದರಾಶಿಯೆಂದೂ, ಉಚ್ಚರಿಸಿದ ಮಾತ್ರದಿಂದಲೇ ನಮ್ಮ ಪಾಪಗಳನ್ನು ನಿರ್ಮೂಲಮಾಡುವ ಶಕ್ತಿಯಿಂದ ಕೂಡಿದ ಪವಿತ್ರ ಮತ್ತು ದಿವ್ಯವಾಣಿಯೆಂದೂ, ಜಗತ್ತಿಗೆ ಕಾರಣವಾದ ಸತ್ಯಸ್ವರೂಪವನ್ನು ಮತ್ತು ಅದರ ಸೃಷ್ಟಿ ಸ್ಥಿತಿ ಲಯಾದಿಗಳನ್ನು ತಿಳಿಯಪಡಿಸುವ ಉತ್ತಮ ತತ್ವಗ್ರಂಥವೆಂದೂ, ಮಾನವನು ಮೋಕ್ಷಪುರುಷಾರ್ಥವನ್ನು ಹೊಂದಲು ಸಹಾಯಮಾಡುವ ಧರ್ಮಗ್ರಂಥವೆಂದೂ, ಅವು ಭಾರತೀಯ ದರ್ಶನಗಳಿಗೂ ಉಪವೇದಗಳಿಗೂ ಆಧಾರವಾಗಿವೆಯೆಂದೂ, ಅವುಗಳ ವಾಕ್ಯಗಳಲ್ಲೂ ಅಭಿಪ್ರಾಯಗಳಲ್ಲೂ ಐಕ್ಯತೆಇದೆಯೆಂದೂ ಮತ್ತು ನಮಗೆ ಗೋಚರವಾಗದಿರುವ ಶ್ರೇಷ್ಠವಾದ ದೇವತೆಗಳಿಂದಲೂ ಪೂಜಿಸಲ್ಪಡುವ ದಿವ್ಯಜ್ಞಾನರಾಶಿಯೆಂದೂ ಅವರು ಉಪದೇಶಮಾಡಿರುವರು.

**ಶಿಷ್ಯ**—ದ್ವಾದಶೋಪನಿಷತ್ತುಗಳಲ್ಲಿ ಉಪದೇಶ ಮಾಡಲ್ಪಟ್ಟಿರುವ ಮುಖ್ಯ ವಿಷಯಗಳಾವುವು ?

**ಗುರು**—ಜಗತ್ತಿನೊಳಗೆ ಈಶನು ವಾಸಮಾಡುತ್ತಿರುವನೆಂದೂ, ಅದಕ್ಕಾಗಿ ಮಾನವನು ವೈರಾಗ್ಯದಿಂದಲೂ, ಪರೋಪಕಾರಕಾರ್ಯಗಳಿಂದಲೂ ಜೀವನವನ್ನು ನಡೆಸುತ್ತಾ, ಕರ್ಮಜ್ಞಾನ, ಯಮನಿಯಮ ಸಮಾಧಿ ಅಭ್ಯಾಸಗಳಿಂದ ಕೂಡಿದ ಭಕ್ತಿ ಪ್ರಪತ್ತಿಯೋಗಗಳನ್ನು ಕೈಗೊಂಡು, ಎಲ್ಲಾ ಪದಾರ್ಥಗಳಲ್ಲೂ ಅಂತರ್ಯಾಮಿಯಾದ ಭಗವಂತನನ್ನು ಸಾಕ್ಷಾತ್ಕರಿಸಬೇಕೆಂದು ಈಶಾವಾಸ್ಯ ಉಪನಿಷತ್ತು ಉಪದೇಶ ಮಾಡುತ್ತದೆ. ಕಠೋಪನಿಷತ್ತಿನಲ್ಲಿ ಮೃತ್ಯುದೇವತೆಯಾದ ಯಮನು ಸಕಲಸಂಪತ್ತನ್ನು ತ್ಯಾಗಮಾಡಿದ ಮುಮುಕ್ಷುವಾದ ನಚಿಕೇತನಿಗೆ ಶ್ರೇಯಸ್ಸು, ಪ್ರೇಯಸ್ಸು, ಆತ್ಮಸುಖ, ವಿಷಯಸುಖ, ಇಂದ್ರಿಯಮನಬುದ್ಧಿ ಪ್ರಾಣಾಹಂಕಾರಗಳಿಂದ ಬೇರೆಯಾಗಿರುವ ಆತ್ಮದ ನಿಜಸ್ವರೂಪ, ಆತ್ಮನು ನಿರ್ಲಿಪ್ತನು ಮತ್ತು ಈ ಜನ್ಮದಲ್ಲಿಯೇ ಆತ್ಮಸ್ವಾತಂತ್ರ್ಯವನ್ನು ಪಡೆಯಬೇಕು ಎಂಬ ಗಹನವಾದ ವಿಷಯಗಳ ಉಪದೇಶವನ್ನು ಮಾಡುತ್ತಾನೆ. ವರುಣನ ಮಗನಾದ ಭೃಗುವು ವೇದದ ಶಿಕ್ಷಣವನ್ನು ಪಡೆದ ಕ್ರಮವನ್ನು, ಅವನು ಬ್ರಹ್ಮಜ್ಞಾನ ಪಡೆಯಲು ಕೈಗೊಂಡ ಸಾಧನೆಗಳನ್ನು ಮತ್ತು ಬ್ರಹ್ಮಾನಂದದ ಸ್ವರೂಪವನ್ನು ತೈತ್ತಿರೀಯ ಉಪನಿಷತ್ತಿನಲ್ಲಿ ವಿವರವಾಗಿ ತಿಳಿಯು

ಬಹುದು. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಯಾಜ್ಞವಲ್ಕ್ಯ ಋಷಿಯು ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧನಾಗಿದ್ದ ತನ್ನ ಹೆಂಡತಿಗೆ ಶಾಶ್ವತವಾದ ಆತ್ಮಸ್ವರೂಪವನ್ನೂ, ಬ್ರಹ್ಮನು ಎಲ್ಲಾ ಜೀವಿಗಳಲ್ಲೂ ಅಂತರ್ಯಾಮಿಯಾಗಿರುವ ಸ್ವರೂಪವನ್ನೂ ಮತ್ತು ಮನುಷ್ಯರು ಅನುಭವಿಸುವ ಜಾಗ್ರತ ಸುಷುಪ್ತ ಸ್ವಪ್ನ ಅವಸ್ಥೆಗಳ ಸ್ವರೂಪವನ್ನೂ ಉಪದೇಶಮಾಡಿದ್ದಾರೆ. ಪ್ರಧಾನಪುರುಷ ಈಶ್ವರ ತತ್ವಗಳಸ್ವರೂಪಗಳನ್ನೂ, ಅವುಗಳ ವ್ಯತ್ಯಾಸಗಳನ್ನೂ, ಅವುಗಳ ಸಂಬಂಧಗಳನ್ನೂ ಭಗವಂತನಲ್ಲಿ ಪ್ರಪತ್ತಿ ಮಾಡುವ ಕ್ರಮವನ್ನೂ, ರಕ್ಷಣೆ ಕೃಪೆಯ ಸ್ವರೂಪವನ್ನೂ ಶ್ವೇತಸ್ವತಾರ ಉಪನಿಷತ್ತಿನಲ್ಲಿ ಉಪದೇಶ ಮಾಡಿದೆ. ಪ್ರಶ್ನೆ ಉಪನಿಷತ್ತಿನಲ್ಲಿ ಆರು ಶಿಷ್ಯರು ಪಿಪ್ಪಲಾದ ಮುನಿಯ ಬಳಿಗೆ ಬಂದು ಆರು ಪ್ರಶ್ನೆಗಳನ್ನು ಕೇಳಿದ ವಿಷಯವನ್ನು ವರ್ಣಿಸಿದೆ. ಪ್ರಜೆಗಳು ಎಲ್ಲಿಂದ ಬಂದವು? ಯಾವ ಶಕ್ತಿಯು ದೇಹವನ್ನು ಚೈತನ್ಯದಿಂದ ತುಂಬುವುದು? ಪ್ರಾಣವು ಎಲ್ಲಿಂದ ಬಂದು ಹೇಗೆ ಶರೀರದಲ್ಲಿ ಸೇರುವುದು? ಯಾರು ದೇಹದಲ್ಲಿ ಎಚ್ಚರವನ್ನೂ ಕನಸನ್ನೂ ಸುಷುಪ್ತಿಯನ್ನೂ ಅನುಭವಿಸುವರು? ಓಂಕಾರ ಧ್ಯಾನ ಮಾಡುವುದರ ಫಲವೇನು? ಹದಿನಾರು ಅಂಶಗಳಿಂದ ಕೂಡಿದ ಪುರುಷನು ಯಾರು? ಎಂಬ ಪ್ರಶ್ನೆಗಳನ್ನು ಶಿಷ್ಯರು ಕೇಳಿದರು. ಆ ಋಷಿಯು ಈ ಪ್ರಶ್ನೆಗಳಿಗೆ ಸಮಾಧಾನಕರವಾದ ಉತ್ತರಗಳನ್ನು ಕೊಟ್ಟು ಅವರೆಲ್ಲರನ್ನೂ ಸಂತೋಷಪಡಿಸಿದನು. ಪರ ಮತ್ತು ಅಪರ ವಿದ್ಯೆಗಳ ವ್ಯತ್ಯಾಸಗಳನ್ನು ಮುಂಡಕೋಪನಿಷತ್ತು ತಿಳಿಯಪಡಿಸುವುದಲ್ಲದೆ ಒಂದೇ ಮರದ ಮೇಲೆ ಎರಡು ಪಕ್ಷಿಯ ಜೀವನವನ್ನು ಸ್ಪಷ್ಟಯುಂಗವಾಗಿ ವರ್ಣಿಸಿ, ಆ ಉದಾಹರಣೆಯ ಆಧಾರದಿಂದ ಪರಮಾತ್ಮನಿಗೂ ಜೀವಾತ್ಮನಿಗೂ ಇರುವ ವ್ಯತ್ಯಾಸಗಳನ್ನು ಉಪದೇಶ ಮಾಡಿದೆ. ಇಷ್ಟೇ ಅಲ್ಲ! ಈ ಉಪನಿಷತ್ತಿನಲ್ಲಿ ಯಜ್ಞಯಾಗಾದಿ ಕರ್ಮಗಳಿಗಿಂತ ಜ್ಞಾನವು ಶ್ರೇಷ್ಠವೆಂಬುವನ್ನೂ, ಪ್ರಣವಮಂತ್ರದ ಉಪಾಸನಾಕ್ರಮವನ್ನೂ, ಬ್ರಹ್ಮಜ್ಞಾನಿಯ ಲಕ್ಷಣವನ್ನೂ, ಅವನು ಹೊಂದುವ ಉತ್ತಮ ಫಲವನ್ನೂ ತಿಳಿಯಪಡಿಸಿದೆ. ಬ್ರಹ್ಮನು ಪ್ರಣವ ಸ್ವರೂಪಿಯೆಂದೂ, ಮನುಷ್ಯನಿಗೆ ಸಾಧಾರಣವಾಗಿ ಜಾಗ್ರತ ಸ್ವಪ್ನ ಸುಷುಪ್ತಿ ಎಂಬ ಮೂರು ಅವಸ್ಥೆಗಳಿರುವುವೆಂದೂ, ಯೋಗಾಭ್ಯಾಸದಿಂದ ತುರೀಯಾವಸ್ಥೆಯುಂಟಾಗುವುದೆಂದೂ, "ಓಂ"ಕಾರದಲ್ಲಿ ಅ—ಉ—ಮ ಎಂಬ ಅಕ್ಷರಗಳು ಮೂರು ಅವಸ್ಥೆಗಳನ್ನು ಮತ್ತು ಒಟ್ಟು "ಓಂ" ಎಂಬುದವು ತುರೀಯಾವಸ್ಥೆಯನ್ನು ಸೂಚಿಸುತ್ತದೆಯೆಂದೂ ಮಾಂಡೂಕ್ಯ ಉಪನಿಷತ್ತು ಉಪದೇಶ ಮಾಡುತ್ತದೆ. ಈ ಉಪನಿಷತ್ತಿನಲ್ಲಿ ತುರೀಯಾವಸ್ಥೆಯ ಲಕ್ಷಣಗಳು ವಿವರಿಸಲ್ಪಟ್ಟಿವೆ. ಐತರೇಯ ಉಪನಿಷತ್ತಿನಲ್ಲಿ ಮೊಟ್ಟಮೊದಲು ಆತ್ಮನೊಬ್ಬನೇ ಇದ್ದನೆಂದೂ ಮತ್ತು ಅವನ ದಿವ್ಯ ಸಂಕಲ್ಪದಿಂದ ವಿರಾಟ್‌ಪುರುಷ, ನಾನಾಲೋಕಗಳು, ಲೋಕಪಾಲಕರು, ಗರ್ಭಗಳು ಇವೆಲ್ಲವೂ ಉಂಟಾದುವೆಂದೂ ಉಪದೇಶಮಾಡಿದೆ. ಸಾವು ಸ್ವರ್ಗನರಕ ಪರಲೋಕಾದಿಗಳ ವಿಚಾರಗಳನ್ನೂ, ಜೀವಾತ್ಮನಗೌರವ ಅವಸ್ಥಾಗತಿಗಳನ್ನೂ, ಪರಮಪದಪ್ರಾಪ್ತಿ ಆನಂದ ಮತ್ತು ಶ್ರೇಷ್ಠತ್ವವನ್ನೂ ಕೌಶೀತಕೀ ಉಪನಿಷತ್ತು ಉಪದೇಶ ಮಾಡುತ್ತದೆ.

ಛಾಂದೋಗ್ಯ ಉಪನಿಷತ್ತಿನಲ್ಲಿ ಅನೇಕ ವಿಷಯಗಳ ಉಪದೇಶವಿದೆ; ಅವು ಯಾವುವೆಂದರೆ— ಬ್ರಹ್ಮನು ಸತ್ಯಸ್ವರೂಪನು ಎಂದು ತಿಳಿಯಪಡಿಸುವ "ಸದ್ವಿದ್ಯೆ", ಬ್ರಹ್ಮನು ಆನಂದದ ಎಲ್ಲೆ ಎಂದು ತಿಳಿಯಪಡಿಸುವ "ಭೂಮವಿದ್ಯೆ", ಬ್ರಹ್ಮನು ಎಲ್ಲ ಜೀವಿಗಳ ಹೃದಯದಲ್ಲಿಯೂ ಅಂತರ್ಯಾಮಿಯಾಗಿರುವವನು ಎಂದು ತಿಳಿಯಪಡಿಸುವ "ದಹರವಿದ್ಯೆ" ಮೊದಲಾದವು. ಕೊನೆಯದಾಗಿ ಕೇನ ಉಪನಿಷತ್ತಿನಲ್ಲಿ ಬ್ರಹ್ಮನ ನಿಜಸ್ವರೂಪದ ವರ್ಣನೆಯುಂಟು. ಬ್ರಹ್ಮನು ಇಂದ್ರಿಯ ಮನಸ್ಸು ಬುದ್ಧಿಗಳಿಗೆ ಅಗೋಚರನಾಗಿದ್ದು ಅವುಗಳಿಗೆ ಪ್ರೇರಕನಾಗಿ ಶಕ್ತಿಯನ್ನು ಕೊಡುತ್ತಾನೆಂದೂ ಮತ್ತು ಪರಬ್ರಹ್ಮನು ನಿಜವಾಗಿ ಜನರು ಪೂಜಿಸುವ "ಈ ದೇವರು—ಆ ದೇವರು" ಎಂಬ ಮೂರ್ತ ಅಮೂರ್ತ ವಸ್ತುಗಳಿಗಿಂತ ಆಚೆಗೆ ಇರುವನೆಂದೂ ಈ ಉಪನಿಷತ್ತು ತಿಳಿಯಪಡಿಸುತ್ತದೆ. ಎಲ್ಲ ದೇವತೆಗಳೂ ತಮ್ಮ ಶಕ್ತಿಗಳನ್ನು ಬ್ರಹ್ಮನಿಂದಲೇ ಪಡೆಯುತ್ತಾರೆಂಬುದನ್ನು ಒಂದು ಸ್ವಾರಸ್ಯವಾದ ಕಥೆಯಿಂದ ತಿಳಿಸಿ ಪರಬ್ರಹ್ಮನೇ ಎಲ್ಲ ಸಜೀವ ನಿರ್ಜೀವ ಪದಾರ್ಥಗಳಿಗಿಂತಲೂ ಶ್ರೇಷ್ಠನೆಂದು ಉಪದೇಶ ಮಾಡಿದೆ.

**ಶಿಷ್ಯ**— ಬೇರೆಬೇರೆ ಉಪನಿಷತ್ತುಗಳಲ್ಲಿರುವ ಅಭಿಪ್ರಾಯಗಳಲ್ಲಿ ಸಮನ್ವಯವಿದೆಯೆ?

**ಗುರು**— ಉಪನಿಷತ್ತುಗಳ ಭಾಷೆ, ಶೈಲಿ ಮತ್ತು ಅಭಿಪ್ರಾಯಗಳನ್ನು ಕೂಲಂಕಷವಾಗಿ ಪರೀಕ್ಷೆ ಮಾಡಿರುವ ಪಾಶ್ಚಾತ್ಯದೇಶಗಳ ವಿದ್ವಾಂಸರು ಉಪನಿಷತ್ತುಗಳನ್ನು ಬೇರೆಬೇರೆ ಕವಿಗಳು ಬೇರೆಬೇರೆ ಕಾಲದಲ್ಲಿ ಕವನಮಾಡಿದರೆಂದೂ, ಬೇರೆ ಬೇರೆ ಉಪನಿಷತ್ತುಗಳಲ್ಲಿರುವ ಅಭಿಪ್ರಾಯಗಳು ವ್ಯತ್ಯಾಸವಾಗಿವೆಯೆಂದೂ, ಅವು ಅನೇಕ ಕಡೆಗಳಲ್ಲಿ ಒಂದಕ್ಕೊಂದು ವಿರೋಧವಾಗಿವೆಯೆಂದೂ, ಒಂದೇ ಉಪನಿಷತ್ತಿನಲ್ಲಿಯೂ ಕೂಡ ಕೆಲವು ಕಡೆ ಅಭಿಪ್ರಾಯಗಳಲ್ಲಿ ಸಾಮರಸ್ಯವಿಲ್ಲವೆಂದೂ ಮತ್ತು ಒಟ್ಟಿನಲ್ಲಿ ಉಪನಿಷತ್ತುಗಳಲ್ಲಿ ಅವ್ಯಕ್ತ ವಿಚಾರಗಳು ನಿರೂಪಿಸಲ್ಪಟ್ಟಿದ್ದಾಗ್ಯೂ ಅವುಗಳಲ್ಲಿ ಕಂಡುಬರುವ ತತ್ತ್ವಹಿತಪುರುಷಾರ್ಥಗಳಲ್ಲಿ ಭಿನ್ನಭಿನ್ನಾಭಿಪ್ರಾಯಗಳಿರುವುವೆಂದೂ ತೀರ್ಮಾನ ಮಾಡಿರುವರು. ಆದರೆ ಉಪನಿಷತ್ತುಗಳಿಗೆ ವ್ಯಾಖ್ಯಾನಗಳನ್ನು ಬರೆದಿರುವ ಭಾರತೀಯ ಪೂರ್ವಾಚಾರ್ಯರುಗಳು ಮೇಲಿನ ಅಭಿಪ್ರಾಯಗಳನ್ನು ಒಪ್ಪುವುದಿಲ್ಲ. ಎಲ್ಲಾ ಉಪನಿಷತ್ತುಗಳ ಎಲ್ಲಾ ವಾಕ್ಯಗಳ ಅಭಿಪ್ರಾಯಗಳನ್ನು ಒಂದು ವಿಧವಾಗಿ ಸಮನ್ವಯಮಾಡಿ ಉಪನಿಷತ್ತುಗಳಲ್ಲಿರುವ ತತ್ತ್ವಹಿತಪುರುಷಾರ್ಥಗಳನ್ನು ತಿಳಿದುಕೊಳ್ಳಬೇಕು ಎಂದು ಅವರು ಉಪದೇಶ ಮಾಡಿದ್ದಾರೆ. ಮೊದಲು ಉಪನಿಷತ್ತುಗಳಲ್ಲಿರುವ ತತ್ತ್ವವನ್ನು ಸಮನ್ವಯಮಾಡಿ ಲೋಕಕ್ಕೆ ಪ್ರಚಾರಮಾಡುವುದಕ್ಕಾಗಿಯೇ ವ್ಯಾಸರು ಬ್ರಹ್ಮಸೂತ್ರವನ್ನು ಬರೆದರು. ಆಮೇಲೆ ಶ್ರೀ ಕೃಷ್ಣನು ಅರ್ಜುನನಿಗೆ ಉಪನಿಷತ್ತುಗಳಲ್ಲಿರುವ ಮುಖ್ಯವಾಗಿ ಸಾಧನೆ ಮತ್ತು ಪುರುಷಾರ್ಥಗಳನ್ನು, ಎರಡನೆಯದಾಗಿ ತತ್ತ್ವಗಳನ್ನೂ ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳಲ್ಲಿ ವಿವ

ರಿಸಿದನು. ತರುವಾಯ ಪ್ರಸ್ಥಾನತ್ರಯ (ಅಂದರೆ ಉಪನಿಷತ್ತುಗಳು, ಭಗವದ್ಗೀತೆ ಬ್ರಹ್ಮಸೂತ್ರ)ಗಳಿಗೆ, ಶ್ರೀ ಶಂಕರಾಚಾರ್ಯರು ಅದ್ವೈತ ಸಿದ್ಧಾಂತದ ಪರವಾಗಿಯೂ, ಶ್ರೀ ಯಾದವ ಭಾಸ್ಕರ - ನಿಂಬಾರ್ಕಾದಿಗಳು ದ್ವೈತಾದ್ವೈತ ಸಿದ್ಧಾಂತಗಳ ಪರವಾಗಿಯೂ, ಶ್ರೀ ರಾಮಾನುಜಾಚಾರ್ಯರು ವಿಶಿಷ್ಟಾದ್ವೈತ ಸಿದ್ಧಾಂತದ ಪರವಾಗಿಯೂ, ಶ್ರೀ ಆನಂದತೀರ್ಥ ಎಂಬ ಶ್ರೀಮಧ್ವಾಚಾರ್ಯರು ದ್ವೈತಸಿದ್ಧಾಂತದ ಪರವಾಗಿಯೂ ವ್ಯಾಖ್ಯಾನಗಳನ್ನು ಬರೆದರು. ಈಚೆಗೆ ಭಾರತೀಯ ಮಹಾತ್ಮರುಗಳಾದ ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ, ರವೀಂದ್ರನಾಥಠಾಕೂರ್, ಅರವಿಂದ ಘೋಷ್, ಮಹಾತ್ಮಾಗಾಂಧಿ. ರಾಧಾಕೃಷ್ಣನ್ ಮೊದಲಾದವರು ತಮ್ಮ ತಮ್ಮ ದ್ವೈತಾದ್ವೈತಗಳಲ್ಲಿ ಒಂದು ಸಿದ್ಧಾಂತಕ್ಕೆ ಅನುಗುಣವಾಗಿ ಅನೇಕ ಉಪನಿಷದ್ವಾಕ್ಯಗಳಿಗೆ ಅರ್ಥಮಾಡಿರುವರು. ಇದರಿಂದ ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಪಡೆಯದಿರುವ ತಮ್ಮಂಥವರ ಮನಸ್ಸಿನಲ್ಲಿ ಈ ಸಂದೇಹವು ಇದ್ದೇ ಇರುತ್ತದೆ. ಪ್ರಸ್ಥಾನತ್ರಯದ, ಅದರಲ್ಲಿ ಮುಖ್ಯವಾಗಿ ಉಪನಿಷತ್ತುಗಳ ಸಂಬಂಧ ತತ್ತ್ವ ಹಿತ ಪುರುಷಾರ್ಥಗಳಾವುವು? ಅದ್ವೈತ ಸಿದ್ಧಾಂತವೆ? ವಿಶಿಷ್ಟಾದ್ವೈತ ಸಿದ್ಧಾಂತವೆ? ದ್ವೈತ ಸಿದ್ಧಾಂತವೋ? ಅಥವ ಅನೇಕ ದ್ವೈತಾದ್ವೈತ ಸಿದ್ಧಾಂತಗಳಲ್ಲಿ ಯಾವುದಾದರೂ ಒಂದೇ? ಅಥವ ಇವೆಲ್ಲವೂ ಬೇರೆಬೇರೆ ಕಡೆಗಳಲ್ಲಿ ಇವೆಯೆ? ಈ ಸಂದೇಹಕ್ಕೆ ಅಥವ ಈ ಪ್ರಶ್ನೆಗಳಿಗೆ ಯಾರೂ ತೀರ್ಮಾನವಾದ ಸಮಾಧಾನಗಳನ್ನು ಹೇಳಲಾಗುವುದಿಲ್ಲ. ಹೀಗೆ ಸಂದೇಹಪಡುವುದಕ್ಕೆ ಬದಲು ಮುಮುಕ್ಷುಗಳಾದ ಈ ಕಾಲದ ವಿದ್ಯಾವಂತರು ಪ್ರಸ್ಥಾನತ್ರಯಗಳನ್ನು ಮುಖ್ಯವಾಗಿ ಉಪನಿಷತ್ತುಗಳನ್ನು ಎಲ್ಲಾ ಆಚಾರ್ಯರುಗಳ ವ್ಯಾಖ್ಯಾನಗಳ ಸಹಾಯದಿಂದ ವ್ಯಾಸರ ಸೂತ್ರಗಳಿಗೆ ಅನ್ವಯಗಳ ವಾಕ್ಯಗಳನ್ನು ಶ್ರವಣ, ಮನನ ನಿದಿಧ್ಯಾಸನ ಮಾಡುತ್ತಿದ್ದರೆ ಆಗ ಉಪನಿಷತ್ತಿನ ಆ ವಾಕ್ಯಗಳೇ ಅವನ ಹೃದಯದಲ್ಲಿ ಅಧ್ಯಾತ್ಮ ತತ್ತ್ವಹಿತಪುರುಷಾರ್ಥಗಳ ವಿಚಾರದಲ್ಲಿ ಉತ್ತಮವಾದ ಸ್ಥಾನವನ್ನು ಕೊಡುವುದಲ್ಲದೆ ಅವನನ್ನು ಅಧ್ಯಾತ್ಮ ಅಭ್ಯಾಸಗಳಲ್ಲಿ ಉತ್ಸಾಹದಿಂದಲೂ ಸಂತೋಷದಿಂದಲೂ ಸಾಗುವ ಹಾಗೆ ಪ್ರೇರಿಸುತ್ತವೆ.

ಶಿಷ್ಯ – ಹಾಗಾದರೆ, ಈ ಕಾಲದಲ್ಲಿ ಎಲ್ಲರೂ ಒಪ್ಪಬಹುದಾದ ಅಂದರೆ ವಾದಗಳಿಗೆ ಹೊಕ್ಕದ ನಿಲ್ಲುವ ಉಪನಿಷತ್ತುಗಳಲ್ಲಿರುವ ಉಪದೇಶಗಳಾವುವು?

ಗುರು – ಉಪನಿಷತ್ತುಗಳಲ್ಲಿ ಉಪದೇಶಮಾಡಿರುವ ಸಾಧನೆಯು ಹೀಗೆಯೇ ಇರುತ್ತದೆ. ಧ್ಯೇಯವನ್ನು ಕೆಳಗಿನ ಉಪನಿಷದ್ವಾಕ್ಯಗಳು ಹೃದಯಂಗಮವಾಗಿ ತಿಳಿಸಿ ಕೊಡುತ್ತವೆ. "ಬ್ರಹ್ಮವಿದಾಪ್ನೋತಿ ಪರಮ್" ಯಾವನು ಬ್ರಹ್ಮನನ್ನು ತಿಳಿಯುತ್ತಾನೆಯೋ ಅವನು ಪರಮಾತ್ಮನನ್ನು ಹೊಂದುವನು. "ಬ್ರಹ್ಮವೇದ ಬ್ರಹ್ಮೈವ ಭವತಿ" ಬ್ರಹ್ಮನನ್ನು ಅರಿತವನು ಬ್ರಹ್ಮನೇ ಆಗುವನು. "ತಮೇವ ವಿದಿತ್ವಾ ಅತಿ ಮೃತ್ಯುಮೇತಿ"— ಅವನನ್ನು ತಿಳಿದವನಾಗಿಯೇ ಮನುಷ್ಯನು ಮೃತ್ಯುವನ್ನು

ದಾಕುತ್ತಾನೆ. "ಭಿದ್ಯತೇಹೃದಯ ಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ | ಕ್ಷೀಯಂತೇ ಚಾಸ್ಯಕರ್ಮಾಣಿ ತಸ್ಮಿನ್‌ದೃಷ್ಟೇ ಪರಾವರೇ"= ಅವನು ಪರಸ್ವರೂಪವನ್ನು ಸಾಕ್ಷಾತ್ಕರಿಸಿದ ಒಡನೆಯೇ ಅವನ ಹೃದಯದಲ್ಲಿ ಬಂಧವು ಕತ್ತರಿಸಲ್ಪಡುವುದು, ಅವನ ಸಂಶಯಗಳೆಲ್ಲವೂ ಪರಿಹಾರವಾಗುವುವು ಮತ್ತು ಅವನ ಕರ್ಮಗಳೆಲ್ಲವೂ ನಾಶವಾಗುವುವು. ಈ ವಾಕ್ಯಗಳನ್ನೂ ಇತರ ಉಪನಿಷದ್ವಾಕ್ಯಗಳನ್ನೂ ನಾವು ಅಡಿಗಡಿಗೆ ಮನನಮಾಡುತ್ತಿದ್ದರೆ ಕೆಳಗಿನ ಅಭಿಪ್ರಾಯಗಳಲ್ಲಿ ನಮಗೆ ನಂಬಿಕೆಯು ತಾನಾಗಿಯೇ ಬೆಳೆಯುತ್ತಲೇ ಇರುವುದು:- (೧) ಜಗತ್ತಿನ ಪರಿಣಾಮಗಳ ಜ್ಞಾನದ ಸ್ವರೂಪವೇ ಬೇರೆ, ಜಗತ್ತಿಗೆ ಕಾರಣನಾದ ಅಥವ ಆಧಾರನಾದ ಬ್ರಹ್ಮಜ್ಞಾನದ ಸ್ವರೂಪವೇ ಬೇರೆ; ಆದರೆ ಪ್ರತಿಯೊಬ್ಬ ಮಾನವನು ಯೋಗಸಾಧನೆಗಳಿಂದ ಈಗ ಜಗತ್ತಿನ ಜ್ಞಾನವನ್ನು ಪಡೆದಿರುವ ಹಾಗೆ ಬ್ರಹ್ಮಜ್ಞಾನವನ್ನು ಪಡೆಯಬಹುದು. ಉಪನಿಷತ್ ಋಷಿಗಳು ಬ್ರಹ್ಮಜ್ಞಾನವನ್ನು ಪಡೆದಿದ್ದರು. (೨) ಪರಿಣಾಮಗಳಿಂದ ಕೂಡಿರುವ ಈ ಒಟ್ಟು ಜಗತ್ತಿನ ಸೃಷ್ಟಿ ಸ್ಥಿತಿಲಯಗಳಿಗೆ ಪರಿಣಾಮಗಳನ್ನೇ ಹೊಂದದ ಅಂದರೆ ಶಾಶ್ವತನಾದ ಬ್ರಹ್ಮವೇ ಕಾರಣವು. ಆ ಬ್ರಹ್ಮದ ಸ್ವರೂಪವನ್ನು ಶ್ರುತಿ, ಯುಕ್ತಿ ಮತ್ತು ಋಷಿಗಳ ಅನುಭವಗಳನ್ನು ಸಮನ್ವಯ ಮಾಡಿ ತಿಳಿದುಕೊಳ್ಳಬೇಕು. (೩) ಉಪನಿಷತ್ ಋಷಿಗಳು ಒಂದೇ ಬ್ರಹ್ಮನನ್ನು ಬೇರೆಬೇರೆ ಪ್ರಕಾರವಾಗಿ ಸಾಕ್ಷಾತ್ಕರಿಸಿರುವರು-ಜಗತ್ತಿಗೆ ಸಂಬಂಧಪಡದ ಬ್ರಹ್ಮಸ್ವರೂಪ; ಒಟ್ಟು ಜಗತ್ತಿನಲ್ಲಿ ಅಂತರ್ಯಾಮಿಯಾಗಿರುವ ಬ್ರಹ್ಮಸ್ವರೂಪ; ತಮ್ಮ ಆತ್ಮದಲ್ಲೇ ಅಂತರ್ಯಾಮಿಯಾಗಿರುವ ಬ್ರಹ್ಮಸ್ವರೂಪ; ಭಕ್ತರ ಆನಂದಕ್ಕಾಗಿ ಭಗವಂತನು ಸ್ವೀಕರಿಸುವ ದಿವ್ಯಮಂಗಳ ವಿಗ್ರಹಗಳ ಸ್ವರೂಪ ಮತ್ತು ಜಗತ್ತಾಗಿ ಪ್ರಕಾಶಿಸುತ್ತಿರುವ ಬ್ರಹ್ಮಸ್ವರೂಪ. ಆದುದರಿಂದ ಪ್ರಪಂಚದಲ್ಲಿ ಸೇವೆ ಮಾಡುವುದೂ ಬ್ರಹ್ಮನ ಕೈಂಕರ್ಯವೇ. (೪) ಜಗತ್ತನ್ನು ಬ್ರಹ್ಮನನ್ನು ತಿಳಿಯುವವನು ಯಾರು? ವೈಯಕ್ತಿಕ ಜೀವಾತ್ಮನು. ಈ ಜೀವಾತ್ಮನು ಶರೀರ, ಇಂದ್ರಿಯ, ಮನಸ್ಸು, ಬುದ್ಧಿ, ಪ್ರಾಣ, ಅಹಂಕಾರಗಳಲ್ಲ, ಆದರೆ ಸಚ್ಚಿದಾನಂದ ಸ್ವರೂಪನಾದ ಬ್ರಹ್ಮನನ್ನು ಅಂತರಾತ್ಮನನ್ನಾಗಿ ಅಥವ ಸತ್ಯವನ್ನಾಗಿ ಪಡೆದಿರುವ ಚಿದಾನಂದ ಸ್ವರೂಪನು. (೫) ಜೀವಾತ್ಮನು ಈಗ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದಿಲ್ಲ; ಅದಕ್ಕೆ ಬದಲಾಗಿ ಪ್ರಪಂಚದ ಅನುಭವಗಳನ್ನೂ ಸುಖದುಃಖಗಳನ್ನೂ ಪಡೆದಿರುವನು. ಇದಕ್ಕೆ ಕಾರಣ ಅವನಲ್ಲಿ ಆರೋಪಿತವಾಗಿರುವ ಅಜ್ಞಾನ ಅಥವ ಅವಿದ್ಯೆ. ಕರ್ಮ, ಲೋಕಾಂತರಗಳ ಅನುಭವ ಪುನರ್ಜನ್ಮ ಎಂಬ "ಸಂಸಾರಚಕ್ರ" (೬) ಜೀವಾತ್ಮನು ಸತ್ಯ ಸೌಂದರ್ಯಕಲ್ಯಾಣ ಸ್ವಭಾವಗಳಿಂದ ಕೂಡಿದ ಪರಮಾತ್ಮನನ್ನು ಪಡೆಯಬೇಕಾದರೆ ಬ್ರಹ್ಮಜ್ಞಾನವನ್ನು ಪಡೆಯಬೇಕು; ಬ್ರಹ್ಮಜ್ಞಾನವನ್ನು ಪಡೆಯಬೇಕಾದರೆ ಅಹಂಕಾರ ಮಮಕಾರಗಳನ್ನು ಬಿಡುತ್ತ ರಾಜ, ಕರ್ಮ, ಭಕ್ತಿ, ಜ್ಞಾನ, ಪ್ರಪತ್ತಿಯೋಗಗಳೆಂಬ ಸಾಧನಗಳಲ್ಲಿ ಒಂದನ್ನೋ ಅನೇಕವನ್ನೋ ಕೈಗೊಳ್ಳಬೇಕು. ಉಪನಿಷತ್ತುಗಳಲ್ಲಿರುವ ಮೂ

ವಕ್ತ್ರಂಡು ವಿದ್ಯೆಗಳಲ್ಲಿ ಒಂದನ್ನೋ ಅಧಿಕವನ್ನೋ ಉಪಾಸನೆ ಮಾಡಬೇಕು. (೭) ಮಾನವನ ಜೀವನವು ದುಃಖಮಿಶ್ರವಾದ ಅಲ್ಪಸುಖಗಳಿಂದ ಕೂಡಿದೆ. ಆದರೆ ಮನುಷ್ಯನು ಪಡೆಯಬಹುದಾದ ಬ್ರಹ್ಮಾನಂದಕ್ಕೆ ಇದನ್ನು ಹೋಲಿಸಿದರೆ ಈ ಜೀವನವನ್ನು ದುಃಖಮಯವೆಂದೇ ಹೇಳಬೇಕಾಗುತ್ತದೆ. (೮) ಯಾವ ಬ್ರಹ್ಮವು ಪರಮಸತ್ಯವೋ ಅದನ್ನು ಸಾಕ್ಷಾತ್ಕರಿಸುವುದರಿಂದ ಜೀವಾತ್ಮನಿಗೆ ಪರಸ್ಥಿತಿ, ಬ್ರಹ್ಮಸ್ಥಿತಿ, ಮೃತ್ಯುವನ್ನು ದಾಟಿದ ಸ್ಥಿತಿ, ಅಥವ ಮುಕ್ತಿ ಸ್ಥಿತಿಯುಂಟಾಗುವುದು ಎಂದು ಹೇಳುವುದರಿಂದ ಜೀವಾತ್ಮನಿಗೂ ಬ್ರಹ್ಮನಿಗೂ ನಿಕಟ ಐಕ್ಯಸಂಬಂಧವಿರುವುದು ಮತ್ತು ಬ್ರಹ್ಮನೊಡನೆ ಐಕ್ಯವಾಗುವುದೇ ಅವನ ಪರಮಧ್ಯೇಯ. (೯) ಬ್ರಹ್ಮನಿಂದ ಜಗತ್ತಿನ ಸೃಷ್ಟಿಸ್ಥಿತಿಲಯಗಳುಂಟಾದರೂ ಬ್ರಹ್ಮನು ಪರಿಪೂರ್ಣನಾಗಿರುವನು ಮತ್ತು ಜಗತ್ತು ಅನಂತವಾಗಿ ಪರಿಣಾಮವನ್ನು ಹೊಂದುತ್ತಿರುವುದು; ಆದರೆ ಬ್ರಹ್ಮನ ಸತ್ಯಸ್ವರೂಪವನ್ನು ಜಗತ್ತಿನ ಸತ್ಯಸ್ವರೂಪವನ್ನು ಹೋಲಿಸಿದರೆ ಜಗತ್ತಿನ ಸತ್ಯತ್ವಕ್ಕೆ ಅಷ್ಟು ಬೆಲೆಯನ್ನು ಕೊಡುವುದಕ್ಕೆ ಆಗುವುದಿಲ್ಲ ಮತ್ತು (೧೦) ಸಮಾಜದಲ್ಲಿರುವವರೆಲ್ಲರೂ ಕ್ರಮೇಣ ಮೋಕ್ಷವನ್ನು ಪಡೆಯುವುದಕ್ಕಾಗಿ ಚತುರ್ವಿಧ ಪುರುಷಾರ್ಥಗಳನ್ನು ಮನುಷ್ಯರು ಸಾಧಿಸುವ ಸನಾತನ ಧರ್ಮವು ಸಮಾಜದಲ್ಲಿ ಯಾವಾಗಲೂ ಆಚರಣೆಯಲ್ಲಿರಬೇಕು. ತಮೋಗುಣವನ್ನು ಪಡೆದಿರುವ ಮನುಷ್ಯನು ರಜೋಗುಣವನ್ನು ವೃದ್ಧಿಪಡಿಸಿಕೊಳ್ಳಬೇಕು. ರಜೋಗುಣವನ್ನು ಪಡೆದವನು ಸತ್ತ್ವಗುಣವನ್ನು ವೃದ್ಧಿಪಡಿಸಿಕೊಳ್ಳಬೇಕು. ಸತ್ತ್ವಗುಣವನ್ನು ಹೆಚ್ಚಾಗಿ ಪಡೆದವನು ಶುದ್ಧಸತ್ತ್ವವನ್ನು ಅಥವ "ತ್ರಿಗುಣಾತೀತ" ಅವಸ್ಥೆಯನ್ನು ಪಡೆಯಬೇಕು. ಅರ್ಥಪುರುಷಾರ್ಥಕ್ಕಿಂತ ಕಾಮಪುರುಷಾರ್ಥ ಮೇಲು. ಕಾಮಪುರುಷಾರ್ಥಕ್ಕಿಂತ ಧರ್ಮಪುರುಷಾರ್ಥ ಮೇಲು, ಧರ್ಮಪುರುಷಾರ್ಥಕ್ಕಿಂತ ಮೋಕ್ಷಪುರುಷಾರ್ಥ ಮೇಲು ಎಂಬುದನ್ನು ಎಲ್ಲರೂ ತಿಳಿದು ಭಗವಂತನ ಕೃಪೆಯನ್ನು ಸಂಪಾದಿಸಲಿಚ್ಛಿಸಿ ಎದುರುನೋಡುತ್ತಾ, ಅದಕ್ಕಾಗಿ ಅವನನ್ನು ಪ್ರಾರ್ಥಿಸುತ್ತಾ, ಮೇಲು ಮೇಲಿನ ಪುರುಷಾರ್ಥಗಳನ್ನು ಹೊಂದಲು ಪ್ರಯತ್ನಿಸುತ್ತ ಸಾಮಾಜಿಕ ಧರ್ಮಾಚರಣೆಗಳನ್ನು ಕೈಗೊಳ್ಳುವುದೇ ವೇದದಲ್ಲಿ ಬೋಧಿಸಿರುವ ಸನಾತನಧರ್ಮವು.

[illegible] ಮುದ್ರಣಾಲಯ, ನ್ಯೂ ಮಾರ್ಕೆಟ್ ಬೆಂಗಳೂರು-೩

# ಶ್ರೀ ನವಭಾರತ ಆಶ್ರಮ

## ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

## (ಮಾಲೆ—ಒಂಬತ್ತು)

## ನಮ್ಮಾಳ್ವಾರ್ರವರ ಸಾರ್ವಲೌಕಿಕ ಅಧ್ಯಾತ್ಮ ಉಪದೇಶ.

## ಭಾಗ ಒಂದು—ಭಗವಂತನ ಸ್ವರೂಪರೂಪಗುಣಗಳು.

ಮದ್ರಾಸ್ ಪ್ರಾಂತ್ಯದಲ್ಲಿ ತಿನ್ನೆವೇಲಿ ಎಂಬ ಜಿಲ್ಲೆ ಇದೆ; ಅದರೊಳಗೆ ತಾಮ್ರಪರ್ಣಿ ನದೀ ತೀರದಲ್ಲಿ ತಿರುಕ್ಕುರುಹೂರು ಅಥವಾ ಆಳ್ವಾರ್ ತಿರುನಗರಿ ಎಂಬ ದಿವ್ಯಕ್ಷೇತ್ರವಿದೆ. ಈ ಊರಿನಲ್ಲಿ ಸಾವಿರ ವರ್ಷಗಳ ಹಿಂದೆ ಶೂದ್ರ ಜಾತಿಗೆ ಸೇರಿದ "ಕಾರಿಯಾರ್" ಎಂಬ ಮಹನೀಯರು ಇದ್ದರು; ಅವರಿಗೆ ಮಕ್ಕಳಿರಲಿಲ್ಲ. ಆಗ ಅವರು ತಿರುಕ್ಕುರುಙ್ಗುಡಿ ಕ್ಷೇತ್ರದ ದೇವಾಲಯದಲ್ಲಿರುವ ಅರ್ಚಾ ವಿಗ್ರಹವನ್ನು ಪ್ರಾರ್ಥಿಸಲು ಅವರಿಗೆ "ಶಠಾರಿ" ಎಂಬ ಪುತ್ರನು ಹುಟ್ಟಿದನು. ಶಿಶುವು ಹುಟ್ಟಿದಾರಭ್ಯ ಕಣ್ಣು ಮುಚ್ಚಿಕೊಂಡೇ ಸ್ತನ್ಯಪಾನವೂ ಇಲ್ಲದೆ ಇತ್ತಂತೆ. ಹಾಗೆ ಇದ್ದರೂ ಶರೀರ ಪುಷ್ಟಿಯೊಡನೆ ದಿವ್ಯತೇಜಃಪುಂಜವಾಗಿ ಪ್ರಕಾಶಿಸುತ್ತಾ ಮೌನದಿಂದ ಯೋಗಾಭ್ಯಾಸದಲ್ಲಿ ಇದ್ದ ಹಾಗೆ ಇತ್ತಂತೆ. ಈ ಮಗುವಿಗೆ ಪುನಃ "ಮಾರನ್" ಎಂಬ ಹೆಸರನ್ನು ಕೊಟ್ಟು ದೇವಸ್ಥಾನದಲ್ಲೇ ಹುಣಸೇಮರದ ಕೆಳಗೆ ಬಿಟ್ಟರಂತೆ. ಹದಿನಾರು ವರ್ಷಗಳ ಕಾಲ ಈ ಬಾಲಕನು ಆಹಾರವಿಲ್ಲದಿದ್ದಾಗ್ಯೂ, ದಿನೇ ದಿನೇ ಪ್ರವರ್ಧಮಾನನಾಗುತ್ತಿದ್ದನಂತೆ. ಯಾವಾಗಲೂ ಪದ್ಮಾಸನದಲ್ಲಿ ಕುಳಿತು ಮೌನವಾಗಿ ಯೋಗಧ್ಯಾನದಲ್ಲಿ ಕಣ್ಣುಮುಚ್ಚಿಕೊಂಡಿದ್ದನೆಂದು ಪ್ರತೀತಿ. ಮೌನಿಯಾದ ಬಾಲಕನನ್ನು ನೋಡಿ ಮಾತಾಪಿತೃಗಳು ಬಹು ಚಿಂತಾಕ್ರಾಂತರಾಗಿದ್ದಾಗ್ಯೂ ಊರಿನವರೆಲ್ಲರೂ ಈ ಆಶ್ಚರ್ಯವನ್ನು ನೋಡಿ ವಿಸ್ಮಿತರಾಗಿದ್ದರು. ಹೀಗಿರಲು ಒಂದು ದಿವಸ ಮಧುರಕವಿ ಎಂಬ ಮಹಾನುಭಾವರು ಈ ಊರಿಗೆ ಬಂದರು. ಇವರು ಕೆಲವು ವರ್ಷಗಳಿಂದ ಭಾರತ ದೇಶದಲ್ಲೆಲ್ಲಾ ತಮಗೆ ಉಪದೇಶ ಮಾಡುವ ಒಬ್ಬ ಗುರುವನ್ನು ಹುಡುಕುತ್ತಿದ್ದರು. ಈ ಊರಿನ ದೇವಾಲಯದಲ್ಲಿ ಹುಣಸೇಮರದ ಕೆಳಗೆ ಯೋಗಧ್ಯಾನದಲ್ಲಿ ಕುಳಿತಿದ್ದ ಬಾಲಕನನ್ನು ನೋಡಿ ಆಶ್ಚರ್ಯಪಟ್ಟರು. ಅವನನು ಪ್ರತಿನಿತ್ಯವೂ ಪ್ರದಕ್ಷಿಣೆ ಮಾಡಿ, ನಮಸ್ಕರಿಸಿ, ಉಪಚಾರಗಳನ್ನು ಕೈಗೊಂಡು ತನಗೆ

ಗುರುವಾಗಬೇಕೆಂದು ಪ್ರಾರ್ಥಿಸುತ್ತಿದ್ದರು. ಬಹಳ ದಿವಸಗಳಾದ ಮೇಲೆ ಕಣ್ಣು ಮುಚ್ಚಿಕೊಂಡಿದ್ದ ಶಠಾರಿ ಮುನಿವರ್ಯರು ಮಧುರಕವಿಯ ಮೇಲೆ ವಿಶೇಷವಾದ ದಯೆಯನ್ನು ತೋರಿಸಿ, ಕಣ್ಣು ತೆರೆದು ಮಾತನಾಡಿ ಅವರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು. ಈ ಗುರುವರ್ಯರನ್ನು ತಮಿಳು ದೇಶದ ಭಕ್ತರೆಲ್ಲಾ "**ನಮ್ಮಾಳ್ವಾರ್**" ಎಂದು ಕರೆಯುತ್ತಾರೆ. ಈ ಭಕ್ತರಿಗೆ ಭಗವಂತನು ಅವರ ಯೋಗಾಭ್ಯಾಸದ ಕಾಲದಲ್ಲಿ ತನ್ನ ದಿವ್ಯಾತ್ಮಸ್ವರೂಪವನ್ನೂ, ದಿವ್ಯಮಂಗಳವಿಗ್ರಹವನ್ನೂ, ದಿವ್ಯಗುಣಗಳನ್ನೂ, ದಿವ್ಯವಿಭವ ಐಶ್ವರ್ಯಾದಿಗಳನ್ನೂ ಪ್ರಕಾಶಪಡಿಸಿ ಪರಮಾನಂದವನ್ನುಂಟುಮಾಡಿದನೆಂದು ಪ್ರತೀತಿ. ಈ ಮಹನೀಯರೂ ಕೂಡ ಯೋಗಸಮಾಧಿಯಲ್ಲಿ ಅನುಭವಿಸಿದ ಸಾಕ್ಷಾತ್ಕಾರಗಳನ್ನು ಪರಮಕೃಪೆಯಿಂದ ಶಿಷ್ಯರಾದ ಮಧುರಕವಿಗಳಿಗೆ ಉಪದೇಶಮಾಡಿದರು. ತಮಿಳು ಭಾಷೆಯಲ್ಲಿರುವ "**ತಿರುವಾಯ್‌ಮೊಳಿ**" ಎಂಬ ಸಾವಿರ ಪಾಶುರಗಳು (ಪದಗಳು) ಇವರ ದಿವ್ಯ ಅನುಭವಗಳ ವಿವರಣೆಯಾಗಿವೆ. ಈ 'ತಿರುವಾಯ್‌ಮೊಳಿ' (ಎಂದರೆ 'ಸಿರಿಬಾಯ್ನುಡಿ') ಗ್ರಂಥದ ಮೊದಲು ಮೂವತ್ತು ಪಾಶುರಗಳಲ್ಲಿ ಸಂಗ್ರಹವಾಗಿ ವಿವರಿಸಿರುವ ಅನುಭವಗಳನ್ನು ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥವಾಗಲೆಂದು ಗುರು—ಶಿಷ್ಯ ಸಂವಾದ ರೂಪದಲ್ಲಿ ಮೂರು ಲೇಖನಗಳಲ್ಲಿ ತಿಳಿಯಪಡಿಸುತ್ತೇನೆ.

## ಭಗವಂತನು ಯಾರು?

**ಶಿಷ್ಯ**—ಸ್ವಾಮಿ! ನೀವು ಅಡಿಗಡಿಗೆ ಕಣ್ಣು ಮುಚ್ಚಿಕೊಂಡು ಕುಳಿತು ಏನನ್ನು ಯೋಚಿಸುತ್ತೀರಿ ಅಥವಾ ಧ್ಯಾನಮಾಡುತ್ತೀರಿ?

**ಗುರು**— ನನ್ನ ಒಳಗಿನ ಮನಸ್ಸಿನಲ್ಲಿ ತೇಜೋಮಯವಾದ ಭಗವಂತನ ದಿವ್ಯ ಮಂಗಳ ವಿಗ್ರಹ ರೂಪವನ್ನು ಧ್ಯಾನಮಾಡುತ್ತೇನೆ; ಅವನ ಪಾದಗಳಿಗೆ ನಮಸ್ಕರಿಸುತ್ತೇನೆ; ಅವನ ಮಂತ್ರಗಳ ಪುನಶ್ಚರಣೆ ಮಾಡುತ್ತೇನೆ ಮತ್ತು ಅವನ ವಿಚಾರವಾದ ಉಪನಿಷದ್ವಾಕ್ಯಗಳನ್ನು ಮನನ ಮಾಡುತ್ತೇನೆ.

**ಶಿಷ್ಯ**—ತಾವು ಏಕೆ ಕಣ್ಣು ಮುಚ್ಚಿಕೊಳ್ಳಬೇಕು?

**ಗುರು**—ಕಣ್ಣು ತೆರೆದರೆ ಪ್ರಪಂಚದ ವಸ್ತುಗಳೂ, ಚಲನೆಗಳೂ, ವ್ಯಾಪಾರಗಳೂ ನನ್ನ ಅನುಭವಕ್ಕೆ ಬರುತ್ತವೆ; ನನ್ನ ಮನಸ್ಸು ಆಗ ಭಗವಂತನ ಮೇಲೆ ಪ್ರವರ್ತಿಸುವುದಿಲ್ಲ. ಆದುದರಿಂದ ಕಣ್ಣು ಮುಚ್ಚಿಕೊಂಡು ಭಗವಂತನೊಬ್ಬನ ಮೇಲೆಯೇ ಮನಸ್ಸನ್ನು ನಿಲ್ಲಿಸಿ ಅವನಲ್ಲಿ ಪ್ರೀತಿ ಅಥವಾ ಭಕ್ತಿ ಇಡುತ್ತೇನೆ.

**ಶಿಷ್ಯ**—ಭಗವಂತನು ಯಾರೆಂಬುದನ್ನು ಸಾಧಾರಣವಾಗಿ ಹೇಗೆ ತಿಳಿಯಬಹುದು?

**ಗುರು**—ಕುಂಬಾರನು ಮಣ್ಣಿನಿಂದ ಮಡಿಕೆಯನ್ನು ಮಾಡುತ್ತಾನೆ; ಅದು ಚೆನ್ನಾಗಿಲ್ಲದಿದ್ದರೆ ಅದನ್ನು ಒಡೆದು ಪುನಃ ಮಣ್ಣು ಮಾಡುತ್ತಾನೆ. ಅಕ್ಕಸಾಲಿಗನು

ಚಿನ್ನವನ್ನು ಕರಗಿಸಿ ಒಂದು ಆಭರಣ ಮಾಡುತ್ತಾನೆ; ಅದು ಬೇಡವೆಂದರೆ ಆ ಆಭರಣವನ್ನು ಕರಗಿಸಿ ಪುನಃ ಚಿನ್ನ ಮಾಡುತ್ತಾನೆ. ಹಾಗೆಯೇ ನಮ್ಮ ಅನುಭವದಲ್ಲಿರುವ ಮತ್ತು ನಾವು ವಾಸಮಾಡುವ ಈ ಒಟ್ಟು ಜಗತ್ತನ್ನು ಯಾವ ಮಹಾಶಕ್ತನು ಆದಿಮ ಮಹಾಪುರುಷನು ತಾನೇ ಲೀಲೆಯಿಂದ ತನ್ನಿಂದಲೇ ಸೃಷ್ಟಿಸಿ, ಅದರಲ್ಲಿ ಸಂಕೋಚ ವಿಕಾಸಗಳೆಂಬ ಪರಿಣಾಮಗಳನ್ನುಂಟುಮಾಡಿ, ಅವುಗಳನ್ನೆಲ್ಲಾ ಕ್ರಿಸ್ತಕಾಲ ಕಾಲಾದಿ ಕ್ರಮೇಣ ಬಹು ಸೂಕ್ಷ್ಮರೂಪಕ್ಕೆ ತಂದು ಕೊನೆಯಲ್ಲಿ ತನ್ನಲ್ಲಿ ಲಯ ಮಾಡುತ್ತಾನೆಯೋ ಅವನೇ ಭಗವಂತನು ಅಥವಾ ಪರಮಾತ್ಮನು. ಹೀಗೆ ಜಗದುದಯ ವಿಭವ ಲಯಗಳನ್ನು ಲೀಲೆಯಿಂದ ಉಂಟುಮಾಡುವ ಸತ್ಯವಾದ ಮತ್ತು ಶಾಶ್ವತವಾದ ಇರುವಿಕೆಯೇ ಪರಬ್ರಹ್ಮ ಸ್ವರೂಪನಾದ ಪರಮಾತ್ಮನು.

## ಅವನು ಪ್ರತ್ಯಕ್ಷ ಅನುಮಾನ ಪ್ರಮಾಣಗಳಿಗೆ ಗೋಚರನಾಗುವುದಿಲ್ಲ.

ಶಿಷ್ಯ—ಭಗವಂತನೆನ್ನುವವನು ಪ್ರತ್ಯಕ್ಷದಲ್ಲಿ ಕಾಣುವ ಚರಾಚರ ವಸ್ತುಗಳಲ್ಲಿ ಒಬ್ಬನೆ?

ಗುರು—ಪರಮಾತ್ಮನ ಸಂಪೂರ್ಣ ಸ್ವರೂಪವು ನಮ್ಮ ಇಂದ್ರಿಯಗಳಿಗೆ ಗೋಚರವಾಗುವ ಯಾವುದೊಂದು ವಸ್ತುವೂ ಅಲ್ಲ. ಅಂದರೇನು: ಅವನು ವೈದನೆ ನದಿ, ಸರೋವರ, ಬೆಟ್ಟ, ಕಾಡು ಮತ್ತು ಸಮುದ್ರದೊಳಗಿರುವ ಅನೇಕ ಪದಾರ್ಥಗಳು, ಸಸ್ಯಗಳು, ವೃಕ್ಷಗಳು, ಕ್ರಿಮಿಕೀಟಗಳು, ಪ್ರಾಣಿಗಳು, ಮನುಷ್ಯರು ಇವರುಗಳಲ್ಲಿ ಯಾವದೊಂದೂ ಅಲ್ಲ. ಇನ್ನೇನು? ಮಹಾ ಆಕಾಶದಲ್ಲಿರುವ ಈ ಒಟ್ಟು ಭೂಮಿಯೂ ಅಲ್ಲ, ಚಂದ್ರನೂ ಅಲ್ಲ, ಸೂರ್ಯನೂ ಅಲ್ಲ ಮತ್ತು ಯಾವ ನಕ್ಷತ್ರವೂ ಅಲ್ಲ.

ಶಿಷ್ಯ—ಹಾಗಾದರೆ ಅವನು ನಮ್ಮ ಮನಸ್ಸಿನೊಳಗೆ ತೋರುತ್ತಿರುವ ಅನೇಕ ಚಿತ್ತವೃತ್ತಿಗಳಲ್ಲಿ ಒಂದು ಅದ್ಭುತ ಚಿತ್ತವೃತ್ತಿಯೆ?

ಗುರು—ನಾವು ಬೆಳಿಗ್ಗೆ ಎದ್ದು ರಾತ್ರಿ ಮಲಗುವವರೆಗೆ ನಮ್ಮ ಮನಸ್ಸಿನೊಳಗೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ್ಯ, ಭಯ, ಶೋಕ, ಧೈರ್ಯ, ಸಂತೋಷ, ಪ್ರವೃತ್ತಿ, ನಿವೃತ್ತಿ, ಆಲೋಚನೆ ಮೊದಲಾದ ಅನೇಕ ಚಿತ್ತವೃತ್ತಿಗಳು ಒಂದಾದ ಮೇಲೆ ಒಂದು ಪ್ರವಾಹರೂಪವಾಗಿ ಉಂಟಾಗುತ್ತಿರುತ್ತವೆ. ಭಗವಂತನು ಇವುಗಳಲ್ಲಿ ಯಾವುದೊಂದೂ ಅಲ್ಲ. ನಾವು ನಿದ್ರೆಮಾಡುವಾಗಲೂ ಸ್ವಪ್ನ ಕಾಲದಲ್ಲಿಯೂ ಕೆಲವು ಚಿತ್ತವೃತ್ತಿಗಳನ್ನು ನೋಡುತ್ತೇವೆ; ಭಗವಂತನು ಇವುಗಳಲ್ಲಿಯೂ ಯಾವುದೊಂದೂ ಅಲ್ಲ. ತರ್ಕಶಾಸ್ತ್ರದಲ್ಲಿ ಮನಸ್ಸಿನೊಳಗೆ ಉದ್ಭವಿಸುವ ಚಿತ್ತವೃತ್ತಿಗಳು ಅಥವಾ ಭಾವನೆಗಳನ್ನು "**ಪ್ರತ್ಯಕ್ಷ ಪದಾರ್ಥ**" ವೆಂದು ಕರೆಯುವರು. ಆದುದರಿಂದ ಭಗವಂತನು ಯಾವ ಪ್ರತ್ಯಕ್ಷ ಪದಾರ್ಥವೂ ಅಲ್ಲ ಮತ್ತು

ಬಾಹ್ಯ ಪದಾರ್ಥವೂ ಅಲ್ಲ.

**ಶಿಷ್ಯ**—ಭಗವಂತನು ಯೋಗಿಯು ಧ್ಯಾನ ಮಾಡುವಾಗ ಸಾಕ್ಷಾತ್ಕರಿಸುವ ತನ್ನ ವೈಯಕ್ತಿಕ ಆತ್ಮನೇ?

**ಗುರು**—ಯೋಗಾಭ್ಯಾಸ ಬಲದಿಂದ ಯೋಗಿಯು ತನ್ನ ಮನಸ್ಸಿನಲ್ಲಿರುವ ಅಭಿಷ್ವಂಗಾದಿ ದೋಷಗಳನ್ನೆಲ್ಲಾ ತೊಳೆಯುತ್ತಾನೆ; ಅದರ ಫಲವಾಗಿ—ಸಂಕೋಚ ವಾಗಿದ್ದ ಅವನ ಜ್ಞಾನವು ಪರಿಶುದ್ಧವಾಗಿ ವಿಕಾಸವಾಗುತ್ತದೆ ಮತ್ತು ನಿರ್ಮಲ ವಾಗುತ್ತದೆ. ಆಗ ಅವನಿಗೆ ತನ್ನ ವೈಯಕ್ತಿಕ ಆತ್ಮಸಾಕ್ಷಾತ್ಕಾರವನ್ನು ಪಡೆಯಲು ಶಕ್ತಿಯು ವೃದ್ಧಿಯಾಗುತ್ತದೆ. ಅಂದರೇನು; ತಾನು ದೇಹವಲ್ಲ, ಇಂದ್ರಿಯಗಳಲ್ಲ, ಮನಸ್ಸಲ್ಲ, ಬುದ್ಧಿಯಲ್ಲ ಎಂಬ ಪೃಥಕ್ಕಾದ ತಿಳುವಳಿಕೆಯನ್ನು ಪಡೆದು, ಆ ಕಾಲದಲ್ಲಿ ತನ್ನ ನಿಜಸ್ವರೂಪವು ಜ್ಞಾನಾನಂದ ಸ್ವರೂಪವೆಂಬ ಅನುಭವವನ್ನು ಪಡೆಯುತ್ತಾನೆ. ಹೀಗೆ ಪವಿತ್ರವಾದ ಮತ್ತು ವಿಶಾಲವಾದ ಜ್ಞಾನದ ಸಹಾಯದಿಂದ ತನ್ನಲ್ಲಿ ವೈಯಕ್ತಿಕ ಆತ್ಮಸಾಕ್ಷಾತ್ಕಾರವನ್ನು ಪಡೆದ ಯೋಗಿಯು ಭಗವಂತನ ನಿಜಸ್ವರೂಪವನ್ನು ಅಳತೆ ಮಾಡಲು ಶಕ್ತನಲ್ಲ. ಅಂದರೇನು; ಭಗವಂತನು ಯಾವನೊಬ್ಬ ವೈಯಕ್ತಿಕ ಶುದ್ಧ ವಾದ ಆತ್ಮನೂ ಅಲ್ಲ; ಆದುದರಿಂದ ಯೋಗಿಗೂ "**ಅಪ್ರಮೇಯನು**" ಎಂದು ಹೇಳಿದೆ.

## ಭಗವಂತನ ನಿಜಸ್ವರೂಪ

**ಶಿಷ್ಯ**—ಭಗವಂತನು ಅಂತರ ಪದಾರ್ಥವಲ್ಲ, ಬಾಹ್ಯಪದಾರ್ಥವಲ್ಲ ಮತ್ತು ಜೀವಾತ್ಮನಲ್ಲ ಎಂದು ತಿಳಿಯಪಡಿಸಿದಿರಿ. ಹಾಗಾದರೆ ಭಗವಂತನ ನಿಜಸ್ವರೂಪ ವೇನು?

**ಗುರು**—ಪ್ರಪಂಚದಲ್ಲಿರುವ ಕೋಟ್ಯಾಂತರ ಜನರು ಭಗವಂತನ ಯಾವ ವಿಧ ವಾದ ಸಾಕ್ಷಾತ್ಕಾರವನ್ನೂ ಪಡೆದಿಲ್ಲ; ಆದುದರಿಂದ ಅವರಿಗೆ ಅವನ ನಿಜಸ್ವರೂಪವೇ ನೆಂಬುದನ್ನು ತಿಳಿಯಪಡಿಸುವುದಕ್ಕೇ ಆಗುವುದಿಲ್ಲ. ಏಕೆಂದರೆ ಅವರು ತಮ್ಮ ಅನುಭವಕ್ಕೆ ಗೋಚರವಾಗುವ ಒಳಗಿನ ಅಥವ ಹೊರಗಿನ ಅಂದರೆ ಪ್ರತ್ಯಕ್ ಅಥವ ಪರಾಕ್ ಪದಾರ್ಥವನ್ನು ತಿಳಿಯಬಲ್ಲರೇ ಹೊರತು ಇವೆರಡೂ ಅಲ್ಲದ ಭಗವಂತನ ಸ್ವರೂಪವನ್ನು ಅರಿಯಲಾರರು. ಈ ಕಾರಣದಿಂದಲೇ ಉಪನಿಷತ್ತಿನಲ್ಲಿ ಋಷಿಗಳು ಬ್ರಹ್ಮನ ಸ್ವರೂಪವನ್ನು "ನೇತಿ—ನೇತಿ" ಎಂದು ಅಡಿಗಡಿಗೆ ಉಪದೇಶ ಮಾಡಿ ರುವರು. ಶಿಷ್ಯನು ಯಾವ ಒಂದು ವಸ್ತುವನ್ನು ತೋರಿಸಿ "ಇದು ಬ್ರಹ್ಮವೇ" ಎಂದು ಕೇಳಿದರೆ ಗುರುವು "ನೇತಿ ಇದು ಬ್ರಹ್ಮವಲ್ಲ" ಎಂದು ಉತ್ತರ ಕೊಡುತ್ತಿದ್ದನು. "ಬ್ರಹ್ಮನು ಅಥವಾ ಭಗವಂತನು ಇದಲ್ಲ; ಇದಕ್ಕಿಂತ ಮೇಲಾದವನು—ವಿಜಾತೀಯ ಸ್ವರೂಪನು." ಎಂಬ ಅಭಿಪ್ರಾಯವನ್ನು "ನೇತಿ" ಎನ್ನುವ ಪದವು ತಿಳಿಯಪಡಿ ಸುತ್ತದೆ ಎಂದು ಕೆಲವು ವಿದ್ವಾಂಸರು ಅರ್ಥಮಾಡಿರುವರು.

**ಶಿಷ್ಯ**—ಬ್ರಹ್ಮನ ನಿಜಸ್ವರೂಪವೇನು ಎಂಬ ಪ್ರಶ್ನೆಗೆ ತಾವು ಕೊಟ್ಟ " ನೇತಿ–ನೇತಿ " ಎಂಬ ಉತ್ತರವು ನನ್ನ ಮನಸ್ಸಿನಲ್ಲಿ ಬ್ರಹ್ಮನ ವಿಚಾರದಲ್ಲಿ ಸಂದೇಹ ರಹಿತವಾದ ಜ್ಞಾನವನ್ನುಂಟುಮಾಡಿಲ್ಲ. ಆದುದರಿಂದ ತಾವು ಬ್ರಹ್ಮನ ನಿಜ ಸ್ವರೂಪವನ್ನು ಕೆಲವು ಲಕ್ಷಣಗಳಿಂದ ತಿಳಿಯಪಡಿಸಲೇಬೇಕು.

**ಗುರು**—ಕೆಲವು ಉಪನಿಷತ್ತುಗಳು ಬ್ರಹ್ಮನನ್ನು " **ಸತ್ಯಂ ಜ್ಞಾನಂ ಆನಂದಂ ಬ್ರಹ್ಮ** " ಎಂದೂ ಇನ್ನು ಕೆಲವು ಅವನನ್ನು " **ಸತ್ಯಂ ಜ್ಞಾನಂ ಅನಂತಂ ಬ್ರಹ್ಮ** " ಎಂದೂ, ವಿವರಿಸಿರುವುವು. ಬ್ರಹ್ಮನು ' ಸತ್‌ಸ್ವರೂಪನು ' ಎಂದರೆ ತನಗೆ ಯಾವ ಕಾರಣವೂ ಇಲ್ಲದೆ ಅವನೇ ಜಗತ್ತಿಗೆಲ್ಲಾ ಕೊನೆಯ ಕಾರಣ ನಾಗಿದ್ದಾನೆ ಎಂಬುದಾಗಿ ತಿಳಿಯಬೇಕು. ಆದರೆ ಮನುಷ್ಯರಾದ ನಮಗೆ ಕಾಣುವ ಯಾವ ಪದಾರ್ಥಕ್ಕೂ ಕಾರಣವು ಇದ್ದೇ ಇರುವುದರಿಂದ ನಮಗೆ ' ಸತ್ ' ಜ್ಞಾನವು ಉಂಟಾಗಿಲ್ಲ. ಬ್ರಹ್ಮನು ' ಚಿತ್ ' ಸ್ವರೂಪನು ಎಂದರೆ ಅವನು ಅಖಂಡ ಜ್ಞಾನಸ್ವರೂಪನು ಎಂದು ಅರ್ಥ. ಆದರೆ ನಮಗೆ ಜ್ಞಾನಾಂಶದಿಂದುಂಟಾಗುವ ಪದಾರ್ಥ. ಗಳ ತಿಳುವಳಿಕೆ ಮಾತ್ರ ಇದೆಯೇ ವಿನಹ ಅಖಂಡ ಅಥವ ವಿಭು ಜ್ಞಾನಸ್ವರೂಪದ ಅನುಭವವಿಲ್ಲ. ಬ್ರಹ್ಮನು ' ಆನಂದ ' ಸ್ವರೂಪನು ಎಂದರೆ ತನ್ನ ಜ್ಞಾನ ಸ್ವರೂಪವಾದ ಇರುವಿಕೆಯಲ್ಲೇ ಎಲ್ಲೆಯಿಲ್ಲದ ಸ್ವಾಭಾವಿಕವಾದ ಕೇವಲ ಆನಂದದಿಂದ ಕೂಡಿರುವವನು ಎಂದರ್ಥ. ಆದರೆ ಮಾನವರಾದ ನಮಗೆ ಉಂಟಾಗುವ ಸಂತೋಷ. ಗಳೆಲ್ಲವೂ ಅಲ್ಪವಾಗಿಯೂ ದುಃಖ ಮಿಶ್ರವಾಗಿಯೂ ಇರುವುವು. ಆದಕ್ಕಾಗಿಯೇ ಮನುಷ್ಯರು ಅ ನು ಭ ವಿ ಸು ವ ವಿಕಾರದಿಂದ ಕೂಡಿದ ಸತ್ಯದ, ಜ್ಞಾನದ ಮತ್ತು ಆನಂದದ ಅನುಭವಕ್ಕೂ ಬ್ರಹ್ಮನ ಶಾಶ್ವತವಾದ ಸಚ್ಚಿದಾನಂದ ಸ್ವರೂಪಕ್ಕೂ ಇರುವ ಮಹತ್ತರವಾದ ವ್ಯತ್ಯಾಸವನ್ನು ತೋರಿಸುವುದಕ್ಕೆ 'ಅನಂತಂ' ಎಂಬ ಪದ ವನ್ನು ಸೇರಿಸಿದ್ದಾರೆ. ಅಂದರೇನು; ಬ್ರಹ್ಮನ ಸತ್ತು ಅನಂತವು. ಅವನ ಜ್ಞಾನವೂ ಅನಂತವು ಮತ್ತು ಅವನ ಆನಂದವೂ ಅನಂತವು ಎಂದು ತಿಳಿಯಬೇಕು. "ಅನಂತವು" ಎಂದರೆ ಕೊನೆಯಿಲ್ಲದ್ದು ಅಥವಾ ಅಳತೆ ಮಾಡಲು ಅಸಾಧ್ಯವಾದದ್ದು ಅಥವ ದೇಶ ಕಾಲ ಅವಸ್ಥೆಗಳಿಗೆ ಒಳಪಟ್ಟದ್ದು ಎಂದು ದೊಡ್ಡವರು ಅರ್ಥಮಾಡಿದ್ದಾರೆ. ಒಟ್ಟಿನಲ್ಲಿ ತಾತ್ಪರ್ಯವೇನೆಂದರೆ ಬ್ರಹ್ಮನು ಪ್ರಪಂಚದಲ್ಲಿರುವ ವಸ್ತುಸಮೂಹಗಳಿ ಗೆಲ್ಲಾ ಸತ್ಯವಾದ ಅನಂತವಾದ ಆಧಾರನು; ಪ್ರಪಂಚದಲ್ಲಿರುವ ಜೀವಿಗಳ ತಿಳುವಳಿಕೆ ಗಳಿಗೆ ಆಶ್ರಯನಾದ ಅಖಂಡ ಜ್ಞಾನ ಸ್ವರೂಪನು ಮತ್ತು ಇವರುಗಳು ಪಡೆದಿರುವ ಅಲ್ಪ ಸಂತೋಷಗಳಿಗೆಲ್ಲಾ ಕಾರಣನಾದ ಪರಿಪೂರ್ಣವಾದ ನಿರ್ಮಲವಾದ ಆನಂದ ಸ್ವರೂಪನು. ಅಂದರೆ ಇವನ ಸತ್ಯಕ್ಕೆ ಮೇಲಾದ ಸತ್ಯವಿಲ್ಲ. ಇವನ ಜ್ಞಾನಕ್ಕೆ ಮೇಲಾದ ಜ್ಞಾನವಿಲ್ಲ. ಇವನ ಆನಂದಕ್ಕೆ ಮೇಲಾದ ಆನಂದವಿಲ್ಲ. ಇವೆಲ್ಲಾ ಅನಂತಗಳಾಗಿ ಅಂದರೆ ದೇಶ, ಕಾಲ, ಅವಸ್ಥೆಗಳಿಂದ ಅಳತೆ ಮಾಡಲ್ಪಡದವುಗಳಾಗಿ

ಇದೆ ಎಂದು ಉಪನಿಷತ್ತುಗಳು ಘೋಷಿಸುತ್ತವೆ. ಆದುದರಿಂದ ಪ್ರತ್ಯಕ್ಷಕ್ಕೆ ಗೋಚರವಾಗುವ ಸತ್ಯ, ಜ್ಞಾನ, ಆನಂದ ವಿಕಾಸಗಳೆಲ್ಲಾ ಭಗವಂತನಿಂದಲೇ ಉಂಟಾಗಿ ಅವನ ನಿಯಮಕ್ಕೆ ಒಳಪಟ್ಟಿವೆ.

## ಒಬ್ಬನೇ ಆದ ಭಗವಂತನು ಅನಂತ ರೂಪಗಳನ್ನು ಪಡೆಯುವನು

ಶಿಷ್ಯ—ಇಂಥಾ ಸಚ್ಚಿದಾನಂದ ಸ್ವರೂಪನಾದ ಭಗವಂತನು ಒಬ್ಬನೆ ಅಥವಾ ಅನೇಕ ಭಗವಂತರು ಇರುವರೆ?

**ಗುರು**—ಭಗವಂತನು ಒಬ್ಬನೆ; ಇಬ್ಬರು ಅಥವ ಇನ್ನೂ ಅಧಿಕ ಭಗವಂತರು ಇರುವುದಿಲ್ಲ. ಅವನಿಗೆ ಸಮಾನರಾದ ಮನುಷ್ಯರಾಗಲೀ ಅಥವ ನಮ್ಮ ಅನುಭವಕ್ಕೆ ಗೋಚರವಾಗದ ದೇವತೆಗಳಾಗಲೀ ಯಾರೂ ಇಲ್ಲ; ಅವನಿಗಿಂತ ಮೇಲಾದ ಪುರುಷನು ಯಾವನೊಬ್ಬನೂ ಇಲ್ಲ. ಅನಂತವಾದ ಹಿಂದಿನ ಕಾಲದಲ್ಲೂ, ಈಗಿನ ಕಾಲದಲ್ಲೂ ಮತ್ತು ಅನಂತವಾಗಿ ಮುಂದೆ ಬರುವ ಕಾಲದಲ್ಲೂ ಭಗವಂತನಿಗೆ ಸಮಾನನಾದವನು ಯಾರೂ ಇಲ್ಲ.

ಶಿಷ್ಯ—ಭಗವಂತನು ಒಬ್ಬನೇ ಆದರೆ ಅವನ ಭಕ್ತರು ಏಕೆ ಅವನನ್ನು ವೈಯಕ್ತಿಕವಾಗಿಯೂ ಪ್ರತ್ಯೇಕವಾಗಿಯೂ ಬೇರೆ ಬೇರೆ ರೂಪಗಳಲ್ಲಿ ಅನುಭವಿಸಿ ವರ್ಣಿಸುವರು?

**ಗುರು**—ಭಕ್ತರ ವಿಚಾರದಲ್ಲಿ ಮಹಾಕರುಣಾಶಾಲಿಯಾದ್ದರಿಂದ ಭಗವಂತನು ಅವರವರ ಮನಸ್ಸಿನ ಸ್ವರೂಪ ಶಕ್ತಿಗಳಿಗನುಸಾರವಾಗಿ ಅವನನ್ನು ಸಾಕ್ಷಾತ್ಕರಿಸಿ ಅನುಭವಿಸಲು ತಾನಾಗಿಯೇ ಸ್ವತಂತ್ರವಾಗಿ ಅಚಿಂತ್ಯವಾದ, ದಿವ್ಯವಾದ, ಅದ್ಭುತವಾದ, ನಿತ್ಯವಾದ, ಅವಧಿಯಿಲ್ಲದ, ನಿರತಿಶಯವಾದ, ಉಜ್ವಲವಾದ, ಸೌಂದರ್ಯವಾದ, ಸುಗಂಧದಿಂದ ಕೂಡಿದ, ಸೌಕುಮಾರ್ಯವಾದ, ಲಾವಣ್ಯದಿಂದ ಕೂಡಿದ ಅನಂತ ಗುಣನಿಧಿ ದಿವ್ಯರೂಪಗಳನ್ನು ಅಂದರೆ ಸಹಸ್ರಾರು ದಿವ್ಯ ಮಂಗಳ ವಿಗ್ರಹಗಳನ್ನು ಪಡೆಯುತ್ತಲೇ ಇರುವನು. ಆದುದರಿಂದಲೇ ಸ್ವಾಮಿಯಾದ ಭಗವಂತನನ್ನು ಸಹಸ್ರನಾಮಗಳಿಂದ ಋಷಿಗಳು ಸ್ತೋತ್ರ ಮಾಡಿರುವರು. ಒಬ್ಬನೇ ಭಗವಂತನು ತನ್ನ ಇಚ್ಛೆಗೆ ಅನುಸಾರವಾಗಿ ವಿವಿಧವಾದ ಅನೇಕ ರೂಪಗಳನ್ನು ತೆಗೆದುಕೊಳ್ಳುತ್ತನೆಂಬುದನ್ನೂ ಮತ್ತು ಪ್ರತಿಯೊಂದು ರೂಪವೂ ಎಲ್ಲೆಯಿಲ್ಲದ ಸೌಂದರ್ಯವನ್ನು ಪಡೆದಿರುವುದರಿಂದ ಅದು ಭಕ್ತರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸುತ್ತದೆ ಎಂಬುದನ್ನೂ ನೀನು ಮರೆಯಕೂಡದು. ನಮ್ಮ ಪೂರ್ವಾಚಾರ್ಯರುಗಳು ಈ ದಿವ್ಯ ಮಂಗಳ ವಿಗ್ರಹವನ್ನು ಪರಸ್ವರೂಪ, ವ್ಯೂಹಸ್ವರೂಪ, ಅಂತರ್ಯಾಮಿಸ್ವರೂಪ, ವಿಭವ ಸ್ವರೂಪ ಮತ್ತು ಅರ್ಚಾಸ್ವರೂಪ ಎಂದು ಐದು ವರ್ಗಗಳಾಗಿ ವಿಂಗಡಿಸಿರುವರು. ಈ ರೂಪಗಳಲ್ಲಿ ಮೊದಲನೆಯದಾದ ಪರವಾಸುದೇವನು ಪರಮಪದದಲ್ಲಿ ನಿತ್ಯರಿಗೂ ಮುಕ್ತ,

ರಿಗೂ ಸ್ವಾಮಿಯಾಗಿದ್ದು ಅವರಿಂದ ಸೇವೆಗಳನ್ನು ಕೈಗೊಂಡು ಅವರಿಗೆ ಸದಾ ನಿರವಧಿಕ ಆನಂದವನ್ನುಂಟುಮಾಡುತ್ತಿರುವನು ಮತ್ತು ಜಗತ್ತಿನಲ್ಲಿರುವ ಎಲ್ಲಾ ಜೀವಿಗಳಿಗೆ ಅವರವರ ಕರ್ಮಾನುಸಾರ ಫಲಗಳನ್ನೂ ಕೊಡುವುದಲ್ಲದೆ ತನ್ನಲ್ಲಿ ಅನನ್ಯ ಭಕ್ತಿಯನ್ನು ಮಾಡುವವರಿಗೆ ಮೋಕ್ಷವನ್ನು ದಯಪಾಲಿಸುವನು. ಜಗತ್ ಸೃಷ್ಟಿ ಸ್ಥಿತಿ ಲಯ ಕಾರ್ಯಗಳನ್ನು ನಡೆಸುವುದಕ್ಕಾಗಿಯೂ, ಅವನನ್ನು ಧ್ಯಾನಮಾಡುವ ದೇವತೆಗಳಿಗೂ ಮುನಿಗಳಿಗೂ ಯೋಗಿಗಳಿಗೂ ಆನಂದವನ್ನುಂಟುಮಾಡುವುದಕ್ಕಾಗಿಯೂ ಬ್ರಹ್ಮ, ವಿಷ್ಣು, ಮಹೇಶ್ವರ, ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣಾದಿ ಅನೇಕ ವ್ಯೂಹ ರೂಪಗಳನ್ನು ಪಡೆಯುವನು. ಸರ್ವದೇಶ ಸರ್ವಕಾಲ ಸರ್ವಾವಸ್ಥೆಯಲ್ಲೂ ಇರುವ ಸರ್ವ ಚೇತನ ಅಚೇತನ ವರ್ಗದಲ್ಲಿ ಇದೇ ಭಗವಂತನು ವ್ಯಾಪಿಸಿದ್ದು ಚೇತನರ ಮನೋವ್ಯಾಪಾರಗಳನ್ನು ಪ್ರೇರೇಪಿಸುತ್ತಾ ಅಂತರ್ಯಾಮಿಯಾಗಿರುವನು. ವಿವಿಧ ಜಾತಿಯಿಂದ ಕೂಡಿದ ಬೇರೆ ಬೇರೆ ವಯಸ್ಸಿನ ಮನುಷ್ಯರು ತಮ್ಮ ಸಮಾಜದಲ್ಲಿಯೇ ಒಬ್ಬನಾಗಿರುವ ಭಗವಂತನನ್ನು ಅನುಭವಿಸಲೆಂದೂ ಮತ್ತು ಸಮಾಜದಲ್ಲಿ ಅಧರ್ಮವನ್ನು ನಿರ್ಮೂಲಮಾಡಿ ಧರ್ಮವನ್ನು ಸ್ಥಾಪಿಸುವದಕ್ಕಾಗಿಯೂ ಪರಮಾತ್ಮನು ರಾಮಕೃಷ್ಣಾದಿ ವಿಭವಾವತಾರಗಳನ್ನು ಪಡೆಯುವನು. ಇಷ್ಟೇ ಅಲ್ಲ; ಭೂಮಿಯ ಮೇಲಿರುವ ಸಕಲ ಜನರೂ ತನ್ನನ್ನು ತಮ್ಮ ಚರ್ಮಚಕ್ಷುಸ್ಸಿನಿಂದಲೇ ಸಾಕ್ಷಾತ್ಕರಿಸಿ ತಮ್ಮ ಮನಸ್ಸಿಗೆ ತೋರಿದ ಸೇವೆಗಳನ್ನು ಮಾಡಿ, ಅವರವರ ಇಷ್ಟಾರ್ಥಗಳನ್ನು ಪಡೆದು ಕೃತಾರ್ಥರಾಗಲು, ಈಶ್ವರನು ಸರ್ವಸುಲಭನಾಗಿ ಅವರವರಿಗೆ ಮಾತ್ರ ಅನ್ವಯಿಸುವ ಲಕ್ಷಾಂತರ ಅರ್ಚಾವತಾರಗಳನ್ನು ಕೈಗೊಳ್ಳುವನು.

**ಶಿಷ್ಯ**—ಹಾಗಾದರೆ ಭಗವಂತನ ವಿಶ್ವರೂಪದ ಸ್ವರೂಪವೇನು? ಅದೂ ಕೂಡ ಪರ ವ್ಯೂಹ ಅಂತರ್ಯಾಮಿ ವಿಭವ ಅರ್ಚಾಸ್ವರೂಪಗಳಲ್ಲಿಯೇ ಅಡಕವಾಗಿದೆಯೆ?

**ಗುರು**—ಭಗವದ್ಗೀತೆಯ ಹನ್ನೊಂದನೆಯ ಅಧ್ಯಾಯದಲ್ಲಿರುವ ವಿಶ್ವರೂಪದ ವರ್ಣನೆಗಿಂತ ವಿವರವಾಗಿ ವಿಶ್ವರೂಪವನ್ನು ವರ್ಣಿಸಲು ಅಸಾಧ್ಯ. ಆದುದರಿಂದ ಗೀತೆಯಲ್ಲಿರುವ ಕೆಲವು ಶ್ಲೋಕಗಳ ಅಭಿಪ್ರಾಯಗಳನ್ನು ಮಾತ್ರ ನಿನಗೆ ತಿಳಿಸುತ್ತೇನೆ. "ಶ್ರೀಕೃಷ್ಣನು ಅರ್ಜುನನಿಗೆ ಕೃಪೆಯಿಂದ ದಿವ್ಯಚಕ್ಷುಸ್ಸನ್ನು ಕೊಟ್ಟು ತನ್ನ ವಿಶ್ವರೂಪದ ಸಾಕ್ಷಾತ್ಕಾರವನ್ನುಂಟುಮಾಡಿದನು. ಆಗ ಅರ್ಜುನನು ಅನೇಕ ಮುಖ ನೇತ್ರಗಳುಳ್ಳ ಅನಂತಾಶ್ಚರ್ಯವಾದ ನೋಟವುಳ್ಳ, ದಿವ್ಯವಾದ ಮೇಲಕ್ಕೆ ಎತ್ತಲ್ಪಟ್ಟಿರುವ ಆಯುಧಗಳುಳ್ಳ, ಅನೇಕ ಶ್ರೇಷ್ಠವಾದ ಆಭರಣಗಳುಳ್ಳ, ದಿವ್ಯವಾದ ಮಾಲಿಕೆ ವಸ್ತ್ರಗಳನ್ನು ಧರಿಸಿರುವ, ಒಳ್ಳೆ ಗಂಧವನ್ನು ಹಚ್ಚಿಕೊಂಡಿರುವ, ಆಶ್ಚರ್ಯಕರವಾದ, ಪ್ರಕಾಶಮಾನವಾದ, ಅಳತೆಯಿಲ್ಲದಿರುವ, ಎಲ್ಲಾ ಕಡೆಗೂ ಮುಖವುಳ್ಳ ಭಗವಂತನ ನಿರತಿಶಯವಾದ ಅಸಾಧಾರಣವಾದ ವಿಶ್ವರೂಪವುಳ್ಳ ಶರೀರವನ್ನು ಸಾಕ್ಷಾತ್ಕರಿಸಿದನು. ಸಾವಿರಾರು ಸೂರ್ಯರ ಕಾಂತಿಯು ಏಕಕಾಲದಲ್ಲಿ ಆಕಾಶದಲ್ಲಿ ಹುಟ್ಟಿದ್ದರೆ ಆ ಕಾಂತಿಯು ಆ ಮಹಾ ಶರೀರದ ಕಾಂತಿಗೆ ಸಮಾನವಾದೀತು. ದೇವಾದಿದೇವನ ಆ ದೊಡ್ಡ ಶರೀರದಲ್ಲಿ ಏಕದೇಶದಲ್ಲಿ ನಾನಾ ಬಗೆಯಾಗಿ ಭೇದವನ್ನು ಹೊಂದಿರುವ ಎಲ್ಲಾ

ಪ್ರಪಂಚವನ್ನೂ ಅರ್ಜುನನು ಕಂಡನು. ಆಗ ಅರ್ಜುನನಿಗೆ ಪರಮಾಶ್ಚರ್ಯವುಂಟಾಗಿ ಶರೀರದಲ್ಲೆಲ್ಲಾ ರೋಮಾಂಚವುಂಟಾಯಿತು. ಅವನು ಗದ್ಗದ ಸ್ವರದಿಂದ ಕಾಂತಿಯಿಂದ ಕೂಡಿದ ಭಗವಂತನನ್ನು ಕುರಿತು ತಲೆ ಬಗ್ಗಿಸಿ, ನಮಸ್ಕರಿಸಿ, ಕೈ ಮುಗಿದು ಹೀಗೆ ಹೇಳಿದನು. 'ಸ್ವಾಮಿಯೇ! ನಿನ್ನ ಶರೀರದಲ್ಲಿ ಎಲ್ಲಾ ದೇವತೆಗಳನ್ನೂ, ಬ್ರಹ್ಮರುದ್ರಾದಿಗಳನ್ನೂ, ಋಷಿಗಳನ್ನೂ, ಎಲ್ಲಾ ಪ್ರಾಣಿ ಸಮೂಹಗಳನ್ನೂ ನೋಡುತ್ತಿದ್ದೇನೆ. ಪ್ರಪಂಚಕ್ಕೆಲ್ಲಾ ಒಡೆಯನೇ! ಪ್ರಪಂಚವನ್ನೆಲ್ಲಾ ಶರೀರವಾಗಿ ಉಳ್ಳವನೇ! ಅನೇಕ ಭುಜ ಮುಖ ಕಣ್ಣು ಹೊಟ್ಟೆಗಳುಳ್ಳ, ಅಳತೆಯಿಲ್ಲದಷ್ಟು ಶರೀರಗಳುಳ್ಳ, ನಿನ್ನನ್ನು ಎಲ್ಲಾ ಕಡೆಗಳಲ್ಲೂ ನೋಡುತ್ತೇನೆ. ನಿನ್ನ ಸ್ವರೂಪದ ಆರಂಭವನ್ನೂ ಮಧ್ಯವನ್ನೂ ಕೊನೆಯನ್ನೂ ನಾನು ಕಾಣುವುದಿಲ್ಲ. ಎಲ್ಲಾ ಕಡೆಯಲ್ಲಿಯೂ ಪ್ರಭೆಯುಳ್ಳ, ತೇಜಸ್ಸಿನ ಸಮೂಹದಿಂದ ಕೂಡಿರುವ, ಉರಿವ ಬೆಂಕಿಸೂರ್ಯರ ಹಾಗೆ ಕಿರಣಗಳುಳ್ಳ, ಅಳತೆ ಮಾಡಲಸಾಧ್ಯನಾದ ನಿನ್ನನ್ನು ಕಿರೀಟ ಉಳ್ಳವನಾಗಿಯೂ, ಗದೆಯುಳ್ಳವನಾಗಿಯೂ, ಚಕ್ರವುಳ್ಳವನಾಗಿಯೂ ನೋಡುತ್ತಿದ್ದೇನೆ. ವೇದಗಳಲ್ಲಿ ವರ್ಣಿಸಿರುವ ಅಕ್ಷರನು ನೀನೇ; ಜಗತ್ತಿಗೆ ಉತ್ತಮವಾದ ಆಧಾರನು ನೀನೇ; ನಾಶವಿಲ್ಲದ ನಿತ್ಯವಾದ ಧರ್ಮವನ್ನು ಕಾಪಾಡತಕ್ಕವನೂ ನೀನೇ; ನಿತ್ಯಪುರುಷನೂ ನೀನೇ ಎಂಬುದನ್ನು ಈಗ ನಾನು ತಿಳಿದುಕೊಂಡೆನು'.

## ಭಗವಂತನ ಗುಣಗಳು

**ಶಿಷ್ಯ**—ಇಲ್ಲಿಯವರೆಗೆ ಭಗವಂತನ ಸ್ವರೂಪ ರೂಪಗಳನ್ನು ತಿಳಿಯಪಡಿಸಿದಿರಿ. ಇನ್ನು ಆ ಮಹಾತ್ಮನ ಗುಣಗಳನ್ನು ವಿವರಿಸಿ.

**ಗುರು**—ಭಗವಂತನ ಕಲ್ಯಾಣಗುಣಗಳು ಲೆಕ್ಕ ಮಾಡಲಾಗದಷ್ಟು ಅನಂತವಾಗಿವೆಯೆಂದು ವೇದಗಳು ತಿಳಿಯಪಡಿಸುತ್ತವೆ. ಅವುಗಳನ್ನೆಲ್ಲಾ ನಮೂದಿಸಿ ವರ್ಣಿಸಲು ಈಗ ಸಾಧ್ಯವಲ್ಲದಿದ್ದರೂ ಕೆಲವನ್ನು ಮಾತ್ರ ನಿನಗೆ ತಿಳಿಯಪಡಿಸುತ್ತೇನೆ. ಭಗವಂತನು ಭಕ್ತರಿಗೆ ಸುಲಭನಾಗಿಯೂ ಇತರರಿಗೆ ದುರ್ಲಭನಾಗಿಯೂ ಇರುವನು. ಅವನು ಅನಂತ ಮಹಿಮೆಯಿಂದ ಕೂಡಿದವನಾದಾಗ್ಯೂ ತನ್ನ ಭಕ್ತರಲ್ಲಿ ವಿಶೇಷ ದಯೆಯನ್ನು ತೋರಿಸಿ ಅವರ ಜ್ಞಾನಾನುದಯ, ಅನ್ಯಥಾಜ್ಞಾನ, ವಿಪರೀತಜ್ಞಾನ ಎಂಬ ಮೂರು ವಿಧವಾದ ಅಜ್ಞಾನಗಳನ್ನು ನಾಶಮಾಡಿ ಅವರ ಹೃದಯದಲ್ಲಿ ನಿರ್ಮಲವಾದ ಜ್ಞಾನಭಕ್ತಿಗಳನ್ನು ತನ್ನ ಕೃಪಾಕಟಾಕ್ಷದಿಂದ ಉಂಟುಮಾಡುವನು. ತೇಜಸ್ಸಿನಿಂದ ಕೂಡಿದ ಅವನ ನಾಮಗಳನ್ನು ಸ್ಮರಿಸಿದವರ ದುಃಖಗಳನ್ನು ತನ್ನ ಕಟ್ಟಳೆಗಳನುಸಾರವಾಗಿ ಕ್ರಮೇಣ ಹೋಗಲಾಡಿಸುವನು. ಧರ್ಮಾರ್ಥಕಾಮಪುರುಷಾರ್ಥಗಳನ್ನು ಹೊಂದಲು ದೇವತೆಗಳನ್ನು ಯಜ್ಞಯಾಗಾದಿ ಕರ್ಮಗಳ ಮೂಲಕ ಪೂಜಿಸುವವರಿಗೆ ಆಯಾ ದೇವತೆಗಳಲ್ಲಿ ಅಂತರ್ಯಾಮಿಯಾಗಿದ್ದು ಅವರ ಪ್ರಾರ್ಥನೆಗಳನ್ನು ಸಲ್ಲಿಸುವನು. ದೇವತೆಗಳಿಗೂ, ಮಾನವರಿಗೂ, ಪ್ರಾಣಿಗಳಿಗೂ ಅವರವರ ಅಂತಸ್ತಿನ ಪ್ರಕಾರ ಜ್ಞಾನ ಇಚ್ಛೆ ಕ್ರಿಯಾಶಕ್ತಿಗಳನ್ನು ದಯಪಾಲಿಸುವನು.

ವಾಣೀವಿಲಾಸ ಪ್ರೆಸ್, ಬೆಂಗಳೂರು-3

# ಶ್ರೀ ನವಭಾರತ ಆಶ್ರಮ

## ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

## (ನೂರ—ಹತ್ತು)

## ನಮ್ಮಾಳ್ವಾರ್ರವರ ಸಾರ್ವಲೌಕಿಕ ಅಧ್ಯಾತ್ಮ ಉಪದೇಶ.

## ಭಾಗ ಎರಡು—ಜಗತ್ತಿಗೂ ಭಗವಂತನಿಗೂ ಇರುವ ಸಂಬಂಧ

### ಜಗತ್ತಿನ ಸ್ವರೂಪ

**ಶಿಷ್ಯ**—ಸ್ವಾಮಿ! ಭಗವಂತನು ಯಾರು ಮತ್ತು ಅವನ ಸ್ವರೂಪ ರೂಪಗುಣಗಳಾವುವು ಎಂಬ ವಿಚಾರಗಳನ್ನು ನನಗೆ ತಿಳಿಯಪಡಿಸಿದಿರಿ. ಇನ್ನು ಈ ಜಗತ್ತಿನ ನಿಜಸ್ವರೂಪವನ್ನು ತಿಳಿಯಪಡಿಸಿ.

**ಗುರು**—ನಾನೂ, ನೀನೂ, ಎಲ್ಲರೂ ಈಗ ವಾಸಮಾಡುತ್ತಿರುವ ಮತ್ತು ನಮ್ಮ ಪ್ರತ್ಯಕ್ಷಕ್ಕೆ ಗೋಚರವಾಗುವ ಪ್ರಪಂಚವನ್ನೇ "**ಜಗತ್ತು**" ಎಂದು ಕರೆಯುತ್ತೇನೆ. ಈಶಾವಾಸ್ಯ ಉಪನಿಷತ್ತಿನ ಮೊದಲನೆಯ ಮಂತ್ರದಲ್ಲಿ ಜಗತ್ತಿನ ಸ್ವರೂಪವನ್ನು "**ಜಗತ್ಯಾಂ ಜಗತ್**" ಎಂದು ವರ್ಣಿಸಿದೆ. ಅಂದರೇನು? ಪದಾರ್ಥಗಳನ್ನು ಅನುಭವಿಸುತ್ತಿರುವ ನಾವೂ ಮತ್ತು ನಮ್ಮಿಂದ ಅನುಭವಿಸಲ್ಪಡತಕ್ಕ ಎಲ್ಲಾ ಪದಾರ್ಥಗಳೂ ಒಂದೂ ಬಿಡದೆ ಎಲ್ಲವೂ ಪರಿಣಾಮವನ್ನು ಹೊಂದುತ್ತಲೇ ಇರುವುವು ಮತ್ತು ಯಾವಾಗಲೂ ಚಲನೆಯಿಂದಲೇ ಕೂಡಿರುವುವು. ಪ್ರತಿಯೊಂದು ವಸ್ತುವೂ ಸ್ವಲ್ಪ ಕಾಲ ಮಾತ್ರ ಇರುತ್ತದೆ; ಆಮೇಲೆ ಅದರ ನಾಮರೂಪಗಳು ನಾಶವಾಗುತ್ತವೆ; ತರುವಾಯ, ಇನ್ನೊಂದು ನಾಮರೂಪವನ್ನು ಪಡೆದ ವಸ್ತುವು ಉಂಟಾಗುತ್ತದೆ. ನದಿಯಲ್ಲಿ ಹಳೆಯ ನೀರು ಹರಿಯುತ್ತಾ ಹೋಗಿ ಹೊಸ ನೀರು ಹೇಗೆ ಬರುತ್ತಿರುವುದೋ ಹಾಗೆಯೇ ಈ ಜಗತ್ತಿನಲ್ಲಿ ಪದಾರ್ಥಗಳ ಹಳೆಯ ನಾಮರೂಪಗಳು ಮಾಯವಾಗುತ್ತಾ ಹೊಸ ನಾಮರೂಪಗಳು ಉಂಟಾಗುತ್ತಲೇ ಇರುವುವು. ಪದಾರ್ಥಗಳು ಪ್ರಾಚೀನ ಕಾಲದಿಂದ ಬದಲಾವಣೆಯಾಗುತ್ತಿರುವುದನ್ನೇ ನಾವು ಅವುಗಳ ಪರಿಣಾಮಗಳೆಂದು ತಿಳಿಯುತ್ತೇವೆ. ಇಷ್ಟೇ ಅಲ್ಲ; ಪದಾರ್ಥದಲ್ಲಿರುವ ಪ್ರತಿಯೊಂದು ಅಣುವೂ

ನಕ್ಷತ್ರಗಳ, ಪದಾರ್ಥಗಳಲ್ಲಿಯೂ, ಪಶುಪಕ್ಷಿಗಳ ಸ್ವರೂಪವಾದ ಭೂಮಿಯಲ್ಲಿಯೂ, ಚಂದ್ರಗ್ರಹಗಳಲ್ಲಿಯೂ, ಸೂರ್ಯನಕ್ಷತ್ರಗಳಲ್ಲಿಯೂ ಎಲ್ಲೆಲ್ಲಿಯೂ ಸದಾ ಕಾಲದಲ್ಲೂ ಅದ್ಭುತ ಶಕ್ತಿಗಳನ್ನುಂಟುಮಾಡುತ್ತಿರುವ ಅನಂತ ಚಲನೆಗಳು ನಡೆಯುತ್ತಲೇ ಇರುತ್ತವೆ! ಅವುಗಳಿಂದ ಜಗತ್ತು ಚಲನೆಗಳಿಂದ ಕೂಡಿದ ಪರಿಣಾಮಗಳನ್ನು ಹೊಂದುತ್ತಲೇ ಇರುವುದೆಂದು ನೀನು ಮೊದಲು ತಿಳಿದುಕೊಳ್ಳಬೇಕು. ಈ ವಿಧವಾದ ಬದಲಾವಣೆಗಳುಂಟಾಗುವುದಕ್ಕೆ ಮುಂಚೆ ಜಗತ್ತು ಶಾಂತಾವಸ್ಥೆಯಲ್ಲಿರುವುದು; ಅದನ್ನೇ ಅದರ ಸೂಕ್ಷ್ಮಾವಸ್ಥೆ ಅಥವ "ಪ್ರಳಯಾವಸ್ಥೆ" ಎಂದು ವೇದದಲ್ಲಿ ಕರೆದಿದೆ. ಈ ಪ್ರಳಯಾವಸ್ಥೆಯಿಂದ ಸೃಷ್ಟಿ ಆರಂಭವಾದರೆ ಜಗತ್ತಿನಲ್ಲಿ ಪರಿಣಾಮಗಳೂ ಚಲನೆಗಳೂ ಉಂಟಾಗುತ್ತಲೇ ಇರುವುವು. ಈ ಪರಿಣಾಮಗಳುಂಟಾಗುತ್ತಿರುವ ಸ್ಥಿತಿಯನ್ನೇ ಜಗತ್ತಿನ ಕಾರ್ಯಾವಸ್ಥೆಯೆಂದೂ, ಸ್ಥೂಲಾವಸ್ಥೆಯೆಂದೂ ಅಥವ "ಸೃಷ್ಟ್ಯವಸ್ಥೆ" ಯೆಂದು ಋಷಿಗಳು ಕರೆಯುವರು. ಕಾಲಕ್ರಮೇಣ ಸ್ಥೂಲವಾದ ಜಗತ್ತು ಕ್ರಮ ಸೂಕ್ಷ್ಮ ಪರಿಣಾಮಗಳನ್ನು ಪಡೆದು ಕೊನೆಯಲ್ಲಿ ಪುನಃ ಪ್ರಳಯಾವಸ್ಥೆಯನ್ನು ಪಡೆಯುವುದು. ನೀನು ಈ ಅಂಶವನ್ನು ಸ್ಪಷ್ಟವಾಗಿ ಆನಂದದಿಂದ ನೋಡಬೇಕು. ಜಗತ್ತಿನ ಪ್ರಳಯಾವಸ್ಥೆಯಿಂದ ಸೃಷ್ಟ್ಯವಸ್ಥೆಯುಂಟಾಗುತ್ತದೆ; ಸೃಷ್ಟ್ಯವಸ್ಥೆಯಿಂದ ಪುನಃ ಪ್ರಳಯಾವಸ್ಥೆಯುಂಟಾಗುತ್ತದೆ; ಪುನಃ ಪುನಃ ಸೃಷ್ಟಿಪ್ರಳಯಗಳು ಹೀಗೆ "ಚಕ್ರಾಕಾರ" ವಾಗಿ ಜಗತ್ತಿನಲ್ಲಿ ಉಂಟಾಗುತ್ತಲೇ ಇರುವುವು. ಹಾಗೆಯೇ ಈ ಅದ್ಭುತ ಜಗತ್ತಿನ ಅಂಶಗಳಾದ ಶರೀರದಿಂದ ಕೂಡಿದ ಪ್ರಾಣಿಗಳೂ ಕೂಡ ಪ್ರಳಯಾವಸ್ಥೆಯನ್ನೂ, ಸೃಷ್ಟ್ಯವಸ್ಥೆಯನ್ನೂ, ಪುನಃ ಪ್ರಳಯವನ್ನೂ, ಪುನಃ ಸೃಷ್ಟಿಯನ್ನೂ ಅನಂತವಾಗಿ ಪಡೆಯುತ್ತಾ "ಚಕ್ರಾಕಾರ" ದ ಬದಲಾವಣೆಗಳನ್ನು ಅನುಭವಿಸುತ್ತಿರುವುದನ್ನು ನೀನು ಮರೆಯಕೂಡದು. ಈ ಚಕ್ರಾಕಾರ ಬದಲಾವಣೆಯನ್ನು ಒಂದು ಸುಲಭವಾದ ಉದಾಹರಣೆಯಿಂದ ತಿಳಿಯಬಹುದು. ಬೀಜದಿಂದ ವೃಕ್ಷವಾಗುತ್ತದೆ; ವೃಕ್ಷದಿಂದ ಬೀಜ ಉಂಟಾಗುತ್ತದೆ; ಪುನಃ ಬೀಜದಿಂದ ವೃಕ್ಷವುಂಟಾಗುತ್ತದೆ. ವೃಕ್ಷದಿಂದ ಬೀಜ, ಬೀಜದಿಂದ ವೃಕ್ಷ ಹೀಗೆಯೇ ಚಕ್ರಾಕಾರವಾದ ಬದಲಾವಣೆಯಾಗುವುದು. ಈ ಚಕ್ರಾಕಾರವಾದ ಬದಲಾವಣೆಗಳಿಗೆ ಆದಿಯೂ ಇಲ್ಲ; ಕೊನೆಯೂ ಇಲ್ಲ; ಇವು ಅನಾದಿಕಾಲದಿಂದಲೂ ನಡೆಯುತ್ತಲೇ ಇರುವುವು. ಆದುದರಿಂದ ಒಟ್ಟು, ಜಗತ್ತಿನ ಸೃಷ್ಟಿಗೂ ಮತ್ತು ಪ್ರಳಯಕ್ಕೂ ಆದಿಯೂ ಇಲ್ಲ. ಅಂತ್ಯವೂ ಇಲ್ಲ ಎಂಬುದೇ ವೇದ ಘೋಷಣೆಯ ಸಾರವಾದ ಮುಖ್ಯ ಸಂಕೇತದ ಅಭಿಪ್ರಾಯ. ಜಗತ್ತಿನ ಸೃಷ್ಟಿ ಲಯಗಳು ಅನಂತವಾಗಿ ನಡೆಯುತ್ತಲೇ ಇರುವುವು! ಅದರೊಳಗೆ ಪ್ರತಿಯೊಂದು ಪದಾರ್ಥದ ಸೃಷ್ಟಿ ಸ್ಥಿತಿ ಲಯಗಳೂ ಉಂಟಾಗುತ್ತಲೇ ಇರುವುವು! ಹಾಗೆಯೇ ಶರೀರದಿಂದ ಕೂಡಿದ ಪಶು, ಪಕ್ಷಿ, ಎಲ್ಲ ಮನುಷ್ಯರ ಮತ್ತು ಪ್ರಾಣಿಗಳ ಸೃಷ್ಟಿ ಸ್ಥಿತಿ ಲಯಗಳು ಕೊನೆ ಮೊದಲಿಲ್ಲದೆ ನಡೆಯುತ್ತಿರುವುವಲ್ಲವೆ!

## ಬ್ರಹ್ಮನೂ ಜಗತ್ತೂ

**ಶಿಷ್ಯ**—ಜಗತ್ತು ಯಾವಾಗಲೂ ಚಲನೆಯಿಂದ ಕೂಡಿದ ಪರಿಣಾಮಗಳನ್ನು ಹೊಂದುತ್ತಲೇ ಇರುವುದೆಂದು ತಿಳಿಸಿದಿರಿ. ಆದರೆ ಈ ಜಗತ್ತಿಗೆ ಕಾರಣವಾದ ಅಥವ ಆಧಾರವಾದ ಪರಿಣಾಮವನ್ನು ಹೊಂದದ ಅಥವ ಶಾಶ್ವತವಾದ "**ಮೂಲ ಇರುವಿಕೆ**" ಯೇ ಇಲ್ಲವೆ?

**ಗುರು**— ಉಪನಿಷತ್ತುಗಳಲ್ಲಿ "**ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ ॥ ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥ ಓಂ ಶಾಂತಿಃ ಶಾಂತಿಃ ಶಾಂತಿಃ**" ಎಂಬ ಶಾಂತಿ ಮಂತ್ರವಿದೆ. ಈ ಶಾಂತಿ ಮಂತ್ರದ ಅರ್ಥವನ್ನು ನೀವು ತಿಳಿದು ಅವರ ಅಭಿಪ್ರಾಯಗಳನ್ನು ಮನನ ಮಾಡಿದರೆ ನಿಮ್ಮ ಸಂದೇಹವು ಪರಿಹಾರವಾಗುತ್ತದೆ.

**ಶಿಷ್ಯ**—ಹಾಗಾದರೆ ದಯವಿಟ್ಟು ಈ ಶಾಂತಿಮಂತ್ರದ ಪ್ರತಿ ಪದಾರ್ಥವನ್ನೂ ಮತ್ತು ಅಭಿಪ್ರಾಯಗಳನ್ನೂ ತಿಳಿಸಿ.

**ಗುರು**—ಅದಃ—ಅದು ಎಂದರೆ ಬ್ರಹ್ಮ, ಪರಾತ್ಪರವಸ್ತು ಅಥವ ಭಗವಂತನು; ಪೂರ್ಣಂ—ಸರ್ವ ಸಂಪೂರ್ಣವು; ಇದಂ—ಇದು ಅಂದರೆ ವ್ಯಕ್ತವಿಶ್ವವು; ಪೂರ್ಣಂ—ಸರ್ವ ಸಂಪೂರ್ಣವು; ಪೂರ್ಣಾತ್—ಪೂರ್ಣವಾದ ಬ್ರಹ್ಮದಿಂದ ಅಥವ ಪರಾತ್ಪರ ವಸ್ತುವಿನಿಂದ; ಪೂರ್ಣಂ—ಪೂರ್ಣವಾದ ವ್ಯಕ್ತವಿಶ್ವವು; ಉದಚ್ಯತೇ—ಉದಯಿಸುತ್ತದೆ; ಪೂರ್ಣಸ್ಯ—ಪೂರ್ಣವಾದ ಬ್ರಹ್ಮನಿಂದ; ಪೂರ್ಣಂ—ಪೂರ್ಣವಾದ ಪ್ರತ್ಯಕ್ಷ ವಿಶ್ವವನ್ನು; ಆದಾಯ—ತೆಗೆದುಕೊಂಡರೂ ಅಥವ ಕಳೆದರೂ; ಪೂರ್ಣಮೇವ—ಬ್ರಹ್ಮನು ಪೂರ್ಣನಾಗಿಯೇ; ಅವಶಿಷ್ಯತೇ—ಅಳಿಯದೇ ಉಳಿಯುತ್ತಾನೆ; ಓಂ ಶಾಂತಿಃ ಶಾಂತಿಃ ಶಾಂತಿಃ—ಭಗವಂತನೇ, ಆಧ್ಯಾತ್ಮಿಕ, ಆದಿಭೌತಿಕ ಮತ್ತು ಆದಿದೈವಿಕ ದುಃಖಗಳನ್ನು ನಿವಾರಣೆ ಮಾಡಿ ನಮ್ಮಲ್ಲಿ ಶಾಂತಿಯನ್ನುಂಟುಮಾಡು. ಸರ್ವಸಂಪೂರ್ಣನಾದ ಅಂದರೆ ಅನಂತನಾದ ಬ್ರಹ್ಮನಿಂದ ಅಥವ ಭಗವಂತನಿಂದ ಈ ಸಂಪೂರ್ಣವಾದ ಅಥವ ಅನಂತವಾದ ಜಗತ್ತು ಉದ್ಭವಿಸುತ್ತದೆ. ಅನಂತವಾದ ಜಗತ್ತು ಅನಂತವಾದ ಪರಮಾತ್ಮನಿಂದ ಉಂಟಾಯಿತು ಎಂದು ಹೇಳಿದರೆ ಭಗವಂತನ ಪರಿಪೂರ್ಣತ್ವಕ್ಕೆ ಅಥವ ಅನಂತತ್ವಕ್ಕೆ ಕುಂದಕ ಬರುವುದಿಲ್ಲವೆ? "ಕುಂದಕ ಬರುವುದಿಲ್ಲ; ಜಗತ್ತು ತನ್ನಿಂದ ಹುಟ್ಟಿದ ದರಿಂದ ಭಗವಂತನು ಅಸಂಪೂರ್ಣನಾಗುವುದಿಲ್ಲ. ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳು ತನ್ನಲ್ಲಿ ಉಂಟಾದಾಗ್ಯೂ ಬ್ರಹ್ಮನ ಪರಿಪೂರ್ಣತ್ವವು ಕಮ್ಮಿಯಾಗುವುದಿಲ್ಲ." ಎಂಬುದೇ ಋಷಿಗಳ ಉತ್ತರ. ಇದೇನು ಆಶ್ಚರ್ಯ! ನಾವು ನೂರು ಸೇರು ಅಕ್ಕಿಯಲ್ಲಿ ಇಪ್ಪತ್ತೈದು ಸೇರು ಅಕ್ಕಿಯನ್ನು ತೆಗೆದುಬಿಟ್ಟರೆ ಮಿಕ್ಕಿರುವುದು ಎಪ್ಪತ್ತೈದು ಸೇರು ಅಕ್ಕಿ ಮಾತ್ರವಲ್ಲವೆ? ಎಂದು ಕೇಳಬೇಕಾಗುತ್ತದೆ. ಹಾಗೆಯೇ ಬ್ರಹ್ಮನಿಂದ ಜಗತ್ತನ್ನು ಕಳೆದರೆ ಬ್ರಹ್ಮನ ಪರಿಮಾಣವು ಕಮ್ಮಿಯಾಗಲೇಬೇಕಲ್ಲವೆ? "ಬ್ರಹ್ಮನ

ಅನಂತತ್ವಕ್ಕೆ ಕಡಿಮೆಯಾಗುವುದಿಲ್ಲ" ಎಂಬುದೇ ಪ್ರಶ್ನೆಗೆ ಉತ್ತರ; ಏಕೆಂದರೆ ಈ ನೋಡಿದ ನಿಯಮವು ಜಗತ್ತಿನೊಳಗಿರುವ ವಸ್ತುಗಳಿಗೆ ಮಾತ್ರ ಅನ್ವಯಿಸುತ್ತದೆ. ಪ್ರತ್ಯಕ್ಷ. ಜಗತ್ತು ಬೇರೆ ಬೇರೆ ವಿಧವಾದ ವಸ್ತುಗಳಿಂದ ಕೂಡಿದೆ. ಈ ನಿಯಮವು ಇವುಗಳಿಗೆ ಅನ್ವಯಿಸುವುದಿಲ್ಲವೆಂಬುದೇ ಋಷಿಗಳ ಅನುಭವ. ಅನಂತ ಸಂಖ್ಯೆಯಿಂದ ಅನಂತ ಸಂಖ್ಯೆಯನ್ನು ಕಳೆದರೆ ಅನಂತ ಸಂಖ್ಯೆಯೇ ಉಳಿಯುವುದೆಂದು ಹೈಸ್ಕೂಲ್ ಗಣಿತ ಶಾಸ್ತ್ರದ ವಿದ್ಯಾರ್ಥಿಗಳಿಗೆ ತಿಳಿದಿರುವುದು. ನಿರವಯವವಾದ ಬಯಲಿನಲ್ಲಿ, ಅಂದರೆ ಅನಂತ ಆಕಾಶದಲ್ಲಿ ಅನಂತ ಶಬ್ದಗಳು ಉತ್ಪನ್ನವಾದಾಗ್ಯೂ ಆ ಬಯಲಿನ ವಿಸ್ತಾರಕ್ಕಾಗಲಿ ಅನಂತತ್ವಕ್ಕಾಗಲಿ ಕಡಿಮೆಯಾಗುವ ಹಾಗೆ ಕಾಣುವುದಿಲ್ಲ. ಹಾಗೆಯೇ ಅನಂತ, ಅಥವ ಪರಿಪೂರ್ಣ ಪರಮಾತ್ಮನಿಂದ ಅನೇಕ ವಿಶ್ವಗಳು ಹುಟ್ಟಿದರೂ, ಬೆಳೆದರೂ, ಅವನಲ್ಲಿ ಲಯವಾದರೂ ಆ ಪರಮಾತ್ಮನ ಪರಿಪೂರ್ಣತ್ವಕ್ಕೆ ಅಥವ ಅನಂತತ್ವಕ್ಕೆ ಯಾವ ಕೊರತೆಯೂ ಬರುವುದಿಲ್ಲವೆಂಬುದನ್ನು ಭಾರತೀಯ ಋಷಿಗಳು ಸಾಕ್ಷಾತ್ಕರಿಸಿದ್ದಾರೆ.

ಶಿಷ್ಯ—ಪರಿಪೂರ್ಣವಾದ ಬ್ರಹ್ಮನಿಂದ ಪರಿಪೂರ್ಣವಾದ ಜಗತ್ತು ಹುಟ್ಟಿದ ಮೇಲೆ ಜಗತ್ತಿಗೂ ಭಗವಂತನಿಗೂ ಅಥವ ಬ್ರಹ್ಮನಿಗೂ ಸಂಬಂಧವೇ ಇಲ್ಲವೆ?

**ಗುರು**—ನೀನು ಈಶಾವಾಸ್ಯ ಉಪನಿಷತ್ತಿನ ಮೊದಲನೆ ಮಂತ್ರದ ಮೊದಲನೆಯ ವಾಕ್ಯದ ಅಭಿಪ್ರಾಯವನ್ನು ತಿಳಿದರೆ ಈ ಸಂದೇಹವು ಪರಿಹಾರವಾಗುತ್ತದೆ. "**ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್**" ಈ ಒಟ್ಟು ಜಗತ್ತು ಯಾವುದೋ ಒಂದು ಕಾಲದಲ್ಲಿ ಆರಂಭವಾಗಿ, ಸೂಕ್ಷ್ಮವಾಗಿ ಬೆಳೆಯುತ್ತ, ಸ್ಥೂಲರೂಪದಲ್ಲಿಯೂ ಬೆಳವಣಿಗೆಯನ್ನು ಪಡೆದು, ಪುನಃ ಸಂಕ್ಷಿಪ್ತವಾಗಿ ಲಯ ಹೊಂದುತ್ತ ಕೊನೆಗೆ ಮುಂದೆ ಯಾವುದೋ ಒಂದು ಕಾಲದಲ್ಲಿ ಲಯವಾಗುತ್ತದೆ. ಇಂಥಾ ಜಗತ್ತಿನಲ್ಲಿ ಅನೇಕ ಸಹಸ್ರ ವರ್ಷಗಳಿಂದ ಕೋಟಿ ಕೋಟಿ ಪದಾರ್ಥಗಳು ಸ್ವಲ್ಪ ಅವಕಾಶವನ್ನೂ ಬಿಡದೆ ಎಲ್ಲಾ ಕಡೆಯಲ್ಲೂ ಅನೇಕ ಕೋಟಿ ನಾಮಗಳ ರೂಪಗಳಿಂದ ಇಲ್ಲಿಯ ವರೆಗೆ ಸ್ವತಂತ್ರ ರೂಪವಾಗಿ ಬಂದು ಹೋಗುತ್ತಿವೆ. ಆದರೆ ಇಂಥಾ ಪ್ರತಿಯೊಂದು ವಸ್ತುವಿನಲ್ಲೂ ಮತ್ತು ಎಲ್ಲಾ ಕಾಲದಲ್ಲೂ ಇದ್ದು ಮತ್ತು ಜಗತ್ತಿನ ಎಲ್ಲಾ ಸ್ಥಳಗಳಲ್ಲಿಯೂ ಇರುವ ಒಟ್ಟು ಜಗತ್ತಿನಲ್ಲಿಯೂ ಪರಮಾತ್ಮನಾದ ಈಶನು ವಾಸಮಾಡುತ್ತಿರುವನೆಂಬುದನ್ನು ನಮ್ಮ ಋಷಿಗಳು ಸಾಕ್ಷಾತ್ಕರಿಸಿ ಉಪದೇಶ ಮಾಡಿದ್ದಾರೆ.

ಶಿಷ್ಯ—ನೀವು ಉಪದೇಶ ಮಾಡುವ ವಿಚಾರವು ನನಗೆ ಆಶ್ಚರ್ಯವನ್ನುಂಟು ಮಾಡಿದೆ. ನಾವು ಅನುಭವಿಸುವ ಮತ್ತು ಪ್ರತ್ಯಕ್ಷಿಸುವ ಪ್ರತಿಯೊಂದು ಪದಾರ್ಥದಲ್ಲಿ—ಉದಾಹರಣೆಗಾಗಿ ಒಂದು ಘಟದಲ್ಲಿ ಜಗತ್ತಿನ ಅಂಶವೂ ಮತ್ತು ಭಗವಂತನೂ ಮೇಳನವಾಗಿ ಸಂಯೋಗ ಹೊಂದಿರುವುದು ಎಂದು ಹೇಳಿದರೆ ಆಭಾಸವಾಗುವುದಿಲ್ಲವೆ? ಹಾಗಾದರೆ ಪ್ರತಿಯೊಂದು ವಸ್ತುವೂ ಬ್ರಹ್ಮನೇ ಆಗುವುದಿಲ್ಲವೆ?

ಗುರು—ಹೌದು; ಪ್ರತಿಯೊಂದು ವಸ್ತುವೂ ನಿಜವಾಗಿ ಬ್ರಹ್ಮನೇ ಆಗಿರುವ ನೆಂಬುದೇ ವೇದಾಂತದ ಸಾರವಾದ ಅಭಿಪ್ರಾಯ. ಭಕ್ತರು ಬ್ರಹ್ಮನನ್ನು ಅಂದರೆ ಭಗವಂತನನ್ನು ಮೂರು ಪ್ರಕಾರವಾಗಿ ಅನುಭವಿಸುವರು. ಜಗತ್ತಿಗೆ ಸಂಬಂಧ ಪಡದ ಬ್ರಹ್ಮನ ಅನುಭವ ಮೊದಲನೆಯದು; ಜಗತ್ತಿನ ಪದಾರ್ಥಗಳಲ್ಲೆಲ್ಲಾ ಅಂತರ್ಯಾಮಿಯಾಗಿರುವ ಬ್ರಹ್ಮನ ಅನುಭವ ಎರಡನೆಯದು; ಭಗವಂತನಿಂದಲೇ ಉಂಟಾಗಿ, ಭಗವಂತನನ್ನೇ ಅಂತರ್ಯಾಮಿಯಾಗಿ ಪಡೆದು, ಭಗವಂತನ ಶರೀರವಾಗಿ ಈಗ ಪ್ರತ್ಯಕ್ಷವಾಗುತ್ತಿರುವ ಈ ಒಟ್ಟು ಪದಾರ್ಥವನ್ನೇ ವಿಶಿಷ್ಟ ಬ್ರಹ್ಮನಾಗಿ ಸಾಕ್ಷಾತ್ಕರಿಸುವ ಬ್ರಹ್ಮನ ಅನುಭವ ಮೂರನೆಯದು. ಆದುದರಿಂದ ನೀನು ಕೇಳಿದ ಹಾಗೆ ಪ್ರತಿಯೊಂದು ಜೀವಿಯೂ ಪ್ರತಿಯೊಂದು ಪದಾರ್ಥವೂ ಮತ್ತು ಒಟ್ಟು ಜಗತ್ತೂ ನಿಜವಾಗಿ ವಿಶಿಷ್ಟ ಬ್ರಹ್ಮನಾಗಿದೆ. ಈ ಅಭಿಪ್ರಾಯವನ್ನೇ ವಿಶಿಷ್ಟಾದ್ವೈತ ತತ್ತ್ವವೆಂದು ಕರೆಯುವರು. ಆದರೆ ಜಗತ್ತು ಮತ್ತು ಅದರ ಪದಾರ್ಥಗಳೂ "ನೇತಿ-ನೇತಿ" ಎಂದು ಹೇಳುವ ಜಗತ್ತಿಗೆ ಸಂಬಂಧ ಪಡದ "ಬ್ರಹ್ಮ"ವಲ್ಲ ಮತ್ತು "ಅಂತರ್ಯಾಮಿಯಾದ ಬ್ರಹ್ಮನು ಮಾತ್ರ ಅಲ್ಲ".

## ಪ್ರಳಯ ಕಾಲದ ಜಗತ್ತಿನ ಸ್ವರೂಪ

**ಶಿಷ್ಯ**—ಪ್ರಳಯ ಕಾಲದಲ್ಲಿ ಜಗತ್ತಿನ ಸ್ವರೂಪವೇನು?

**ಗುರು**—ಆ ಕಾಲದಲ್ಲಿ ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ, ಮಹತ್ತು ಮೊದಲಾದ ಯಾವ ಸೂಕ್ಷ್ಮ ವಸ್ತುಗಳೂ ಮತ್ತು ಅವುಗಳ ಸಂಯೋಗದಿಂದುಂಟಾಗುವ ಯಾವ ಸ್ಥೂಲ ಪದಾರ್ಥಗಳೂ ಇರುವುದಿಲ್ಲ. ಎಲ್ಲವೂ ಅತಿಸೂಕ್ಷ್ಮರೂಪವನ್ನು ಪಡೆದು ನಾಮರೂಪಗಳಿಲ್ಲದೆ ಭಗವಂತನಲ್ಲಿ ಲೀನವಾಗಿರುತ್ತವೆ. ಆದುದರಿಂದ ಆ ಕಾಲದಲ್ಲಿ ಭಗವಂತನು ಒಬ್ಬನೇ ತಾನೇ ಇದ್ದು ಯೋಗಧ್ಯಾನದಲ್ಲಿರುವನು. ಈ ಪ್ರಳಯಕಾಲದ ಭಗವಂತನ ಸ್ವರೂಪವನ್ನು ಮಹಾಶಕ್ತಿಸಂಪನ್ನರಾದ ದೇವತೆಗಳು ಕೂಡ ಅರಿಯಲಾರರು. ಏಕೆಂದರೆ ಆಗ ದೇವತೆಗಳು ಕೂಡ ಅತಿಸೂಕ್ಷ್ಮ ಅವಸ್ಥೆಯನ್ನು ಪಡೆದು ಜ್ಞಾನಶೂನ್ಯರಾಗಿ ಪ್ರಕೃತಿಯಲ್ಲಿ ಲಯವಾಗಿರುವರು. ಈ ಕಾಲದಲ್ಲಿ ಪ್ರಕೃತಿ ಪುರುಷರು ಯಾವ ಆಕಾರವನ್ನೂ ಹೆಸರನ್ನೂ ಪಡೆಯದೇ ಇರುವುದರಿಂದ ಈಶ್ವರನಿಗಿಂತ ಬೇರೆಯಾಗಿರುವ ಹಾಗೆ ಕಾಣುವುದಿಲ್ಲ; ಭಗವಂತನೊಬ್ಬನೇ ಇರುವ ಹಾಗೆ ತೋರುತ್ತಾನೆ; ಆದುದರಿಂದ ಪ್ರಕೃತಿ ಪುರುಷರು ಇಲ್ಲವೇ ಇಲ್ಲ ಎಂದು ಹೇಳಬಹುದಾದ ಸ್ಥಿತಿಯಲ್ಲಿದ್ದಾರೆ.

**ಶಿಷ್ಯ**—ಹಾಗಾದರೆ ಸೂಕ್ಷ್ಮವಾದ ಚಿದಚಿತ್ತಿನಿಂದ ಕೂಡಿದ ಪ್ರಳಯಕಾಲದ ಭಗವಂತನಿಂದ ಹೇಗೆ ಸ್ಥೂಲ ವಿಚಿತ್ರಸೃಷ್ಟಿಯಾಗುತ್ತದೆ?

**ಗುರು**—ಪ್ರಳಯಕಾಲದಲ್ಲಿ ಪ್ರಕೃತಿಪುರುಷರು ಅತ್ಯಂತ ಸೂಕ್ಷ್ಮಾವಸ್ಥೆಯನ್ನು ಪಡೆದು ಒಂದರೊಡನೊಂದು ವ್ಯತ್ಯಾಸವಿಲ್ಲದೆ ಯಾವನಾಮರೂಪವನ್ನು ಪಡೆಯದೆ

ಭಗವಂತನಲ್ಲಿ ಲಯವಾಗಿರುವರು. ಹೀಗೆ ಸೂಕ್ಷ್ಮಚಿದಚಿತ್ತುಗಳಿಂದ ಕೂಡಿದ ಭಗವಂತನೇ "ಸೂಕ್ಷ್ಮವಿಶಿಷ್ಟ ಭಗವಂತನು" ಅಚಿತ್ತಿನಂತೆ ಜ್ಞಾನಶೂನ್ಯರಾಗಿ ಬಿದ್ದಿರುವ ಪುರುಷರೂ ಕೂಡ ತಮ್ಮ ನಿಜಸ್ವರೂಪಸಾಕ್ಷಾತ್ಕಾರವೆಂಬ ಮೋಕ್ಷವನ್ನು ಪಡೆಯಲಿ ಎಂಬ ಉದ್ದೇಶದಿಂದ **ಸೂಕ್ಷ್ಮವಿಶಿಷ್ಟ ಭಗವಂತನು** ಪರಮ ಕರುಣೆಯುಳ್ಳವ ಜಗತ್ ಸೃಷ್ಟಿಯಾಗಬೇಕೆಂದು ಸಂಕಲ್ಪಿಸುವನು. ಅಂದರೆ ತನ್ನಲ್ಲಿ ಐಕ್ಯನಾಗಿರುವ ಸೂಕ್ಷ್ಮಪ್ರಕೃತಿ ಪುರುಷರು ಕ್ರಮೇಣ ಸ್ಥೂಲಪ್ರಕೃತಿ ಪುರುಷರಾಗಿ ಪರಿಣಾಮವನ್ನು ಹೊಂದಬೇಕೆಂದು ಇಚ್ಛೆಯುಳ್ಳವನಾಗುವನು. ಒಡನೆಯೇ ಸೃಷ್ಟಿಗೆ ಆರಂಭವಾಗುತ್ತದೆ. ಆಗ ಪ್ರಳಯಕಾಲದ **"ಸೂಕ್ಷ್ಮ ವಿಶಿಷ್ಟ ಭಗವಂತನೇ"** ಸೃಷ್ಟಿಕಾಲದ **"ಸ್ಥೂಲವಿಶಿಷ್ಟ ಭಗವಂತನಾಗಿ"** ಜಗತ್ತಾಗಿಯೂ, ಅದರೊಳಗಿರುವ ವಿವಿಧ ಪದಾರ್ಥಗಳಾಗಿಯೂ, ಶಕ್ತಿಗಳಾಗಿಯೂ, ಚಲನಗಳಾಗಿಯೂ ಮತ್ತು ಗುಣಗಳಾಗಿಯೂ ಆಗುವನು. ಆ ವಿಶಿಷ್ಟ ಬ್ರಹ್ಮನೇ ನಾನು ನೀನು ಅವನು ಇವನು ಯಾವನು ಎಂಬ ಪುರುಷ ವ್ಯಕ್ತಿಗಳಾಗಿಯೂ, ಅವಳು ಇವಳು ಯಾವಳು ಇನ್ನೊಬ್ಬಳು ಎಂಬ ಸ್ತ್ರೀ ವ್ಯಕ್ತಿಗಳಾಗಿಯೂ, ತಾವು ಅವರು ಇವರು ಯಾರೊಬ್ಬರು ಎಂಬ ಮನುಷ್ಯರ ಗುಂಪುಗಳಾಗಿಯೂ, ಅದು ಇದು ಯಾವುದು ಇನ್ನೊಂದು ಎಂಬ ಎಲ್ಲಾ ಅಚೇತನ ಪದಾರ್ಥಗಳಾಗಿಯೂ. ಈ ವಸ್ತುಗಳು, ಆ ವಸ್ತುಗಳು, ನಾಶಹೊಂದುವ ವಸ್ತುಗಳು, ಕೆಟ್ಟ ವಸ್ತುಗಳು, ಒಳ್ಳೆಯ ವಸ್ತುಗಳು. ಹಿಂದೆ ಇದ್ದ ವಸ್ತುಗಳು, ಈಗ ಇರುವ ವಸ್ತುಗಳು, ಮುಂದೆ ಉಂಟಾಗುವ ವಸ್ತುಗಳು ಎಂದು ಹೇಳಿಸಿಕೊಳ್ಳುವ ವಸ್ತುಗಳಾಗಿಯೂ ಇರುವನು. ಇಷ್ಟೇ ಅಲ್ಲ; ಪ್ರಳಯಕಾಲದ ಒಂದೇ ಸ್ವಭಾವದಿಂದ ಕೂಡಿದ ಸೂಕ್ಷ್ಮ ವಿಶಿಷ್ಟ ಭಗವಂತನೇ ಸೃಷ್ಟಿಕಾಲದಲ್ಲಿ ನಿಂತಿರುವ ಅಥವ ನಿಲ್ಲದಿರುವ, ಕುಳಿತಿರುವ ಅಥವ ಕುಳಿತಿಲ್ಲದಿರುವ, ಸಂಚರಿಸುತ್ತಿರುವ ಅಥವ ಸಂಚರಿಸದೆ ಇರುವ ಎಂದರೆ ವಿವಿಧ ಅಸಂಖ್ಯಾತ ಪ್ರವೃತ್ತಿ ನಿವೃತ್ತಿಗಳಿಂದ ಕೂಡಿರುವ ಚೇತನಾಚೇತನಾತ್ಮಕ ಸಮಸ್ತ ವಸ್ತುಗಳಾಗಿರುವನು. ಇನ್ನೇನು? ಪ್ರಳಯಕಾಲದ ಸೂಕ್ಷ್ಮ ವಿಶಿಷ್ಟಭಗವಂತನೇ ಆಕಾಶದಲ್ಲಿರುವ ಸೂಕ್ಷ್ಮ ಶಬ್ದವಾಗುತ್ತಾನೆ; ಅಗ್ನಿಯ ದಾಹಕಶಕ್ತಿಯಾಗುತ್ತಾನೆ; ವಾಯುವಿನಲ್ಲಿರುವ ಬಲವಾಗುತ್ತಾನೆ; ನೀರಿನಲ್ಲಿರುವ ಶೈತ್ಯ ಗುಣವಾಗುತ್ತಾನೆ ಮತ್ತು ಭೂಮಿಯಲ್ಲಿರುವ ಧಾರಕ ಶಕ್ತಿಯಾಗುತ್ತಾನೆ. ಹೀಗೆ ಸೃಷ್ಟಿಯಲ್ಲಿ ಪರಿಣಾಮವನ್ನು ಹೊಂದಿರುವ ಅನಂತ ಪದಾರ್ಥಗಳು, ಶಕ್ತಿಗಳು, ಗುಣಗಳು ಎಲ್ಲವೂ ಸ್ಥೂಲವಿಶಿಷ್ಟಬ್ರಹ್ಮನ ಪ್ರಕಾರವೆಂದು ತಿಳಿಯಬೇಕು.

### ಭಗವಂತನು ಪರಿಣಾಮಗಳನ್ನು ಪಡೆಯುವನೆ ?

**ಶಿಷ್ಯ**—ಪ್ರಳಯ ಕಾಲದಲ್ಲಿರುವ ಜಗತ್ತನ್ನು ಸೂಕ್ಷ್ಮ ವಿಶಿಷ್ಟ ಬ್ರಹ್ಮನೆಂದೂ, ಸೃಷ್ಟಿಕಾಲದಲ್ಲಿರುವ ಜಗತ್ತನ್ನು ಮತ್ತು ಅದರ ಪದಾರ್ಥಗಳನ್ನೂ ಸ್ಥೂಲವಿಶಿಷ್ಟ ಬ್ರಹ್ಮನ ಪ್ರಕಾರಗಳೆಂದು ಹೇಳಿದಿರಿ. ಹಾಗಾದರೆ ಜಗತ್ತು ಪರಿಣಾಮಗಳನ್ನು ಹೊಂದು

ತ್ರಿಯುಷ್ಟದಿಂದ ಭಗವಂತನು ವಿಶಾಲ ಜಗತ್ತಿನ ಪರಿಣಾಮಗಳನ್ನು ಪಡೆಯುತ್ತಾನೆಯೆ?

ಗುರು- ಸೃಷ್ಟಿಕಾಲದಲ್ಲಿ ಕಂಡುಬರುವ ಪ್ರತಿಯೊಂದು ವಸ್ತುವೂ ಸ್ಥೂಲ ವಿಶಿಷ್ಟ ಬ್ರಹ್ಮನಾದಾಗ್ಯೂ ಆ ವಸ್ತುವಿನಲ್ಲಿ ಹೊರಗಿನ ಮತ್ತು ಒಳಗಿನ ಎರಡು ಭಾಗ ಗಳಿವೆ. ಒಳಗಿನ ಭಾಗವು ಒಬ್ಬನೇ ಇರುವ ಈಶ್ವರನು; ಹೊರಗಿನ ಭಾಗವೇ ಪ್ರಕೃತಿಪುರುಷರ ಸಂಯೋಗದಿಂದುಂಟಾದ ಪರಿಣಾಮರೂಪವನ್ನು ಹೊಂದಿರುವ ಪ್ರತ್ಯಕ್ಷಕ್ಕೆ ಗೋಚರವಾಗುವ ಜಗತ್ತಿನ ಭಾಗವು. ಇದೇ ಅಂತರವು. ಅಂದರೆ ಪ್ರತಿಯೊಂದು ವಸ್ತುವಿನಲ್ಲೂ ಪ್ರಕೃತಿ, ಪುರುಷ ಮತ್ತು ಈಶ್ವರ ಎಂಬ ಮೂರು ತತ್ತ್ವಗಳೂ ಒಂದು ಗೂಡಿ ಅವಿನಾಭಾವದಿಂದ ಇರುವ ಎಡೆಬಿಡದೆ ಸ್ಥಿತಿ. ಆದರೆ ಈ ಮೂರರಲ್ಲಿ ಈಶ್ವರನು ಮಾತ್ರ ಕೇವಲ ಸತ್ಯಸ್ವರೂಪನಾಗಿ ಜ್ಞಾನಸ್ವರೂಪನಾಗಿರುವುದರಿಂದ ಸೃಷ್ಟಿಕಾಲದಲ್ಲೂ ವಿಕಾರವನ್ನು ಹೊಂದದೆ ಒಬ್ಬನೇ ಇರುತ್ತಾನೆ. ಮಿಶ್ರ- ಪ್ರಕೃತಿ ಪುರುಷರಿಂದ ಕೂಡಿದ ಜಗತ್ತು ಪ್ರಳಯಕಾಲದಲ್ಲಿ ಸೂಕ್ಷ್ಮವಾಗಿದ್ದು ಸೃಷ್ಟಿಕಾಲದಲ್ಲಿ ಸ್ಥೂಲ ಪರಿಣಾಮಗಳನ್ನು ಹೊಂದುತ್ತದೆ. ಆದುದರಿಂದ ಜಗತ್ತಿನಲ್ಲಿ ಮತ್ತು ಅದರೊಳ ಗಿರುವ ಪದಾರ್ಥಗಳಲ್ಲಿ ಪ್ರಕೃತಿ ಪುರುಷರ ಅಂಶಗಳನ್ನು ನಮ್ಮ ಮನಸ್ಸಿನಲ್ಲಿ ಪ್ರತ್ಯೇ ಕಿಸಿದರೆ ಮಿಕ್ಕ ತತ್ತ್ವಾಂಶವೇ ಭಗವಂತನು. ಆದುದರಿಂದ ಪ್ರತ್ಯಕ್ಷ ಜಗತ್ತಿನಲ್ಲಿರುವ ಅಚೇತನ ಪದಾರ್ಥಗಳೂ, ಜೀವದಿಂದ ಕೂಡಿರುವ ವ್ಯಕ್ತಿಗಳೂ, ಶಕ್ತಿಗಳೂ, ಗುಣ ಗಳೂ ಎಲ್ಲವೂ ಈಶ್ವರನ ಆಧಾರದಿಂದ ನಿಂತಿವೆ. ಅವನ ನಿಯಮಕ್ಕೆ ಅಧೀನ ವಾಗಿವೆ ಮತ್ತು ಅವನ ಭೋಗಕ್ಕೆ ಒಳಪಟ್ಟಿವೆ.

ಶಿಷ್ಯ--- ಹಾಗಾದರೆ ಸೃಷ್ಟಿಕಾಲದಲ್ಲಿ ಪದಾರ್ಥಗಳ ಪರಮ ಸತ್ಯವಾದ ಅದೃಶ್ಯ ಈಶ್ವರನಿಗೂ ಹೊರಗಿನ ಅಂಶವಾದ ಪ್ರಕೃತಿ ಪುರುಷರ ಸಂಯೋಗದಿಂದುಂಟಾದ ಪ್ರತ್ಯಕ್ಷ ಜಗತ್ತಿಗೂ ಸಂಬಂಧವೇನು?

ಗುರು—ಒಬ್ಬ ಮನುಷ್ಯನ ಉದಾಹರಣೆಯನ್ನು ತೆಗೆದುಕೊಳ್ಳೋಣ. ಅವನು ಆತ್ಮ ಮತ್ತು ಶರೀರ ಎರಡೂ ಸೇರಿ ಮನುಷ್ಯನಾಗಿದ್ದಾನೆ. ಅವನ ಶರೀರವು ಹುಟ್ಟಿದಂದಿನಿಂದ ನಾನಾ ವಿಧವಾದ ಪರಿಣಾಮವನ್ನು ಹೊಂದುತ್ತಲೇ ಇದೆ. ಆದರೆ ಅದರ ಬೇರೆ ಬೇರೆ ಕಾಲದ ಎಲ್ಲ ಸ್ಥಿತಿಗಳಲ್ಲಿಯೂ ಅದನ್ನು ಧರಿಸಿರುವ, ನಿಯಮಿಸುವ ಮತ್ತು ಸುಖದುಃಖಗಳ ಭೋಗವನ್ನು ಅನುಭವಿಸುವ ಆತ್ಮನು ಒಬ್ಬನೇ ಆಗಿ ಅವ್ಯಕ್ತನಾಗಿ ಅಂತರ್ಯಾಮಿಯಾಗಿದ್ದಾನಲ್ಲವೆ? ಹಾಗೆಯೇ ಎಲ್ಲಾ ಜಡಚೇತನ ಪದಾರ್ಥ ಗಳನ್ನೂ ಒಳಗೊಂಡಿರುವ ಪರಿಣಾಮವನ್ನು ಹೊಂದುತ್ತಿರುವ ಒಟ್ಟು ಪ್ರತ್ಯಕ್ಷಜಗತ್ತು ಭಗವಂತನ ಶರೀರವಾಗಿದೆ. ಅಂದರೇನು? ಒಟ್ಟು ಪ್ರತ್ಯಕ್ಷ ಜಗತ್ತಿಗೂ ಅದರಲ್ಲಿರುವ ಪ್ರತಿಯೊಂದು ಚೇತನ ಮತ್ತು ಅಚೇತನ ಪದಾರ್ಥಕ್ಕೂ ಈಶ್ವರನು ಅಂತರಾತ್ಮ ನಾಗಿದ್ದಾನೆ. ಈ ಆಶ್ಚರ್ಯವನ್ನು ಸಾಕ್ಷಿಯಾಗಿ ನಿಂತು ಶಾಂತವಾಗಿ ಅನುಭವಿಸು! ವಿಶಿಷ್ಟಬ್ರಹ್ಮನು ಪೃಥಕ್ವಾದ ಆಕಾಶ, ಅಗ್ನಿ, ವಾಯು, ಜಲ, ಭೂಮಿ ಇವುಗಳೇ ಮೊದಲಾದ ಕೋಟಿ ಕೋಟಿ ವಸ್ತುಗಳಾಗಿ ತಾನೇ ನಿಂತು, ಪುನಃ ಈಶ್ವರನಾಗಿ

ಆಗಸವಸ್ತುಗಳೊಳಗೆ ಮನುಷ್ಯಶರೀರದಲ್ಲಿ ಆತ್ಮನು ಮರೆಸಿಕೊಂಡಿರುವಂತೆ ಎಲ್ಲಾ ಕಡೆಗಳಲ್ಲಿಯೂ ನಮ್ಮ ಪ್ರತ್ಯಕ್ಷಕ್ಕೆ ಗೋಚರವಾಗದೆ ವ್ಯಾಪಿಸಿಕೊಂಡಿರುವನು! ಇಷ್ಟೇ ಅಲ್ಲ; ತಾನೇ ವಸ್ತುಗಳಾದಾಗ್ಯೂ ಮತ್ತು ವಸ್ತುಗಳಲ್ಲಿ ಅಂತರ್ಯಾಮಿಯಾದಾಗ್ಯೂ ತನ್ನ ಪರಿಪೂರ್ಣ ಪ್ರತ್ಯಕ್ಷಸ್ವರೂಪದಲ್ಲಿ ಅಗ್ಗಳಿಯದ್ದು, ಕುಂದದ ಮಹಾ ಮಹಿಮೆಯುಳ್ಳವನಾಗಿಯೇ ಇರುವನು! ಸರ್ವತ್ರ ವ್ಯಾಪಿಸಿರುವ ಸಮುದ್ರದಲ್ಲಿರುವ ಸೂಕ್ಷ್ಮವಾದ ಜಲಪರಮಾಣುಗಳಲ್ಲೆಲ್ಲಾ ಅಸಂಕುಚಿತವಾಗಿ ಅಂತರ್ಯಾಮಿಯಾಗಿರುವನು! ಸಹಸ್ರಾರು ನಕ್ಷತ್ರಗಳೆಂಬ ಲೋಕಗಳನ್ನು ಒಳಗೊಂಡಿರುವ ಎಲ್ಲಾ ಬ್ರಹ್ಮಾಂಡಗಳಲ್ಲೂ ಭೂಮಿಯನ್ನೂ ಆಕಾಶವನ್ನೂ ಒಂದನ್ನೂ ಬಿಡದೆ ಅತಿ ಸೂಕ್ಷ್ಮವಾದ ಅಸ್ಪಷ್ಟವಾದ ಸ್ಥಳಗಳಲ್ಲೂ, ಅಚೇತನ ಪದಾರ್ಥಗಳಲ್ಲೂ ಮತ್ತು ಆಯಾ ಸ್ಥಳಗಳಲ್ಲಿರುವ ಪ್ರಕಾಶವಾದ ಅಥವ ಅಪ್ರಕಾಶವಾದ ಆತ್ಮವಸ್ತುಗಳಲ್ಲಿಯೂ ಗುಪ್ತನಾಗಿದ್ದುಕೊಂಡು ಎಲ್ಲೆಲ್ಲಿಯೂ ವ್ಯಾಪಿಸಿರುವನು! ಪ್ರಳಯ ಕಾಲದಲ್ಲೂ ಇವೆಲ್ಲವೂ ಸೂಕ್ಷ್ಮತ್ವವನ್ನು ಪಡೆದಿದ್ದಾಗ್ಯೂ ಅವುಗಳಲ್ಲೂ ಅಂತರಾತ್ಮನಾಗಿರುವನು.

ಶಿಷ್ಯ—ನನಗೂ ಭಗವಂತನಿಗೂ ಇರುವ ಸಂಬಂಧವೇನು?

ಗುರು—ಭಗವಂತನು ಜಗತ್ತಿನಲ್ಲಿರುವ ಎಲ್ಲಾ ಪದಾರ್ಥಗಳಿಗೂ, ವ್ಯಕ್ತಿಗಳಿಗೂ ಒಟ್ಟು ಜಗತ್ತಿಗೂ ಅಂತರಾತ್ಮನಾಗಿದ್ದಾನೆಂದು ತಿಳಿಯಪಡಿಸಿದೆನು. ಆದುದರಿಂದ ಅವನು ನನಗೂ ಅಂತರಾತ್ಮನು. ನಿನಗೂ ಅಂತರಾತ್ಮನು. ಜಗತ್ತೆಲ್ಲಾ ಅವನ ಶರೀರವಾಗಿರುವಾಗ ನಾನೂ ನೀನೂ ಕೂಡ ಅವನ ಶರೀರದ ಭಾಗವಲ್ಲವೆ?

ಶಿಷ್ಯ—ಅಂಥಾ ಮಹಾಪುರುಷನಾದ ಭಗವಂತನ ಸ್ವರೂಪ ರೂಪಗುಣ ವಿಭವ ಐಶ್ವರ್ಯಾದಿಗಳನ್ನು ಜ್ಞಾನಿಗಳಲ್ಲದ ಸಾಧಾರಣ ಮನುಷ್ಯರಾದ ನಾವು ಯಾವುದರ ಆಧಾರದಿಂದ ತಿಳಿಯಬಹುದು?

ಗುರು—ನಾಲ್ಕು ವೇದಗಳು, ಅವುಗಳಲ್ಲಿರುವ ಉಪನಿಷತ್ತುಗಳು ಮತ್ತು ಈ ವೇದಗಳಿಂದ ಹುಟ್ಟಿರುವ ಶಾಸ್ತ್ರಗಳಾದ ಸ್ಮೃತಿ ಇತಿಹಾಸ ಪುರಾಣ, ಆಗಮ, ದರ್ಶನಗಳು ಇವುಗಳಲ್ಲಿರುವ ತತ್ತ್ವ ಹಿತ ಪುರುಷಾರ್ಥಗಳಿಗೆ ಸಂಬಂಧಪಟ್ಟ ಎಲ್ಲಾ ವಾಕ್ಯಗಳಿಗೂ ಸಮನ್ವಯದ ಟೀಕೆಯನ್ನು ಕೊಟ್ಟು ಅವುಗಳ ಅರ್ಥಗಳನ್ನು ಗುರುಗಳಿಂದ ಕೇಳಿ, ವಿಷಯಗಳನ್ನು ಮನನ ಮಾಡಿ ಈ ಆಧ್ಯಾತ್ಮಿಕ ಮತ್ತು ನೈತಿಕ ವಿಚಾರಗಳನ್ನು ತಿಳಿದುಕೊಳ್ಳಬೇಕು. ಮುಖ್ಯವಾಗಿ, ಭಗವಂತನನ್ನು ಸಾಕ್ಷಾತ್ಕರಿಸಿದ ಭಕ್ತರುಗಳ ಉಪದೇಶಗಳಿಂದಲೂ ನಮಗೂ ಭಗವಂತನಿಗೆ ಸಂಬಂಧಪಟ್ಟ ಸರ್ವ ವಿಷಯಗಳ ತಿಳುವಳಿಕೆ ಪ್ರಾಪ್ತವಾಗುತ್ತದೆ.

ಜ್ಞಾನವಿಕಾಸ ಪ್ರೆಸ್, ಬೆಂಗಳೂರು-೨

# ಶ್ರೀ ನವಭಾರತ ಆಶ್ರಮ

ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕೆ

## (ಮಾಲೆ—ಹನ್ನೊಂದು)

## ಭಗವದ್ಭಕ್ತನು ಜಗತ್ತನ್ನೂ ಭಗವಂತನನ್ನೂ ಹೇಗೆ ಅನುಭವಿಸುವನು?

### ಭಾಗ—೧

ಕನ್ನಡಿಗರ ಜ್ಞಾನದೀಪಿಕೆಯ ಒಂಭತ್ತನೇ ಮಾಲೆಯಲ್ಲಿ "ಭಗವಂತನ ಸ್ವರೂಪ ರೂಪ ಗುಣಗಳನ್ನೂ" ಮತ್ತು ಹತ್ತನೇ ಮಾಲೆಯಲ್ಲಿ "ಭಗವಂತನಿಗೂ ಜಗತ್ತಿಗೂ ಇರುವ ಸಂಬಂಧವನ್ನೂ" ಗುರುಶಿಷ್ಯ ಸಂವಾದರೂಪದಲ್ಲಿ ವಿಶದವಾಗಿ ವಿವರಿಸಿದ್ದೇವೆ. ಈ ಮಾಲೆಯಲ್ಲಿ ಭಗವದ್ಭಕ್ತನ ಸಾತ್ವಿಕ ದಿನಚರ್ಯೆಯನ್ನು ವಿವರಿಸುತ್ತೇವೆ.

### ಭಗವದ್ಭಕ್ತರು ಯಾರು?

**ಶಿಷ್ಯ:**—ಆಸ್ತಿಕರು ಯಾರು ನಾಸ್ತಿಕರು ಯಾರು?

**ಗುರು:**—ಕಾರ್ಯಕಾರಣ ಪರಂಪರೆಗಳಿಂದ ಮತ್ತು ಅನಂತ ಚಲನೆಗಳಿಂದ ಕೂಡಿದ ಈ ಜಗತ್ತಿಗೆ ಆಧಾರವಾಗಿ ಬದಲಾವಣೆಗಳನ್ನು ಹೊಂದದ ಶಾಶ್ವತವಾದ ಪಾರಮಾರ್ಥಿಕ ಸತ್ಯವೇ ಇಲ್ಲವೆಂದು ವಾದಿಸುವವರು ನಾಸ್ತಿಕರು. "ಜಗತ್ತು ಪರಬ್ರಹ್ಮವನ್ನು ಆಶ್ರಯಸ್ಥಾನವಾಗಿ ಹೊಂದಿಲ್ಲವೆಂದೂ, ಬ್ರಹ್ಮದಲ್ಲಿ ನೆಲೆಯಾಗಿ ನಿಂತಿಲ್ಲವೆಂದೂ, ಸರ್ವೇಶ್ವರನಿಂದ ನಿಯಮಿಸಲ್ಪಟ್ಟಿಲ್ಲವೆಂದೂ, ಪದಾರ್ಥಗಳ ಸಂಯೋಗದಿಂದ ಹುಟ್ಟಿ ಬೆಳೆಯುತ್ತಿರುವುದೆಂದೂ ಮತ್ತು ಕಾಮವನ್ನು ಆಧಾರವಾಗಿ ಉಳ್ಳದ್ದೆಂದೂ ನಾಸ್ತಿಕರು ಹೇಳುವರು" (ಗೀತಾ ೧೬—೮) ಆದರೆ ಸಚ್ಚಿದಾನಂದ ಸ್ವರೂಪವಾದ ಪಾರಮಾರ್ಥಿಕ ಸತ್ಯದಿಂದ, ಬ್ರಹ್ಮದಿಂದ, ಅಥವ ಭಗವಂತನಿಂದ ಈ ಜಗತ್ತಿನ ಸೃಷ್ಟಿಸ್ಥಿತಿಲಯಗಳು ನಡೆಯುತ್ತಲೇ ಇವೆ ಎಂದು ತೀರ್ಮಾನ ಮಾಡಿ ದೃಢವಾಗಿ ನಂಬುವವರೇ ಆಸ್ತಿಕರು.

**ಶಿಷ್ಯ:**—ಆಸ್ತಿಕರಲ್ಲಿ ಭಗವದ್ಭಕ್ತರು ಯಾರು?

**ಗುರು:**—ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾಗಿರುವ ಸತ್ಯಸ್ವರೂ

ಶವನ್ನು ಜಗತ್ತಿಗೆ ಸಂಬಂಧ ಪಡದ **ನಿರ್ಗುಣ** ಬ್ರಹ್ಮನನ್ನಾಗಿ ಭಾವಿಸಬಹುದು. ಅಥವ ಎಲ್ಲಾ ಕಾಲದಲ್ಲೂ ಜಗತ್ತಿನಲ್ಲಿ ಮತ್ತು ಪದಾರ್ಥಗಳಲ್ಲಿ ಅಂತರ್ಯಾಮಿಯಾಗಿದ್ದು ಅನೇಕ ದಿವ್ಯ ಮಂಗಳ ವಿಗ್ರಹಗಳನ್ನು ಪಡೆದಿರುವ **ಸಗುಣ** ಬ್ರಹ್ಮನನ್ನಾಗಿ ಭಾವಿಸಬಹುದು. ನಿರ್ಗುಣ ಬ್ರಹ್ಮನ ಸಾಕ್ಷಾತ್ಕಾರದಲ್ಲಿ ಮಗ್ನರಾಗಿರುವವರೇ ಜ್ಞಾನಿಗಳು; ಸಗುಣ ಬ್ರಹ್ಮನನ್ನು ಪ್ರೀತಿಸಿ ಅವನ ದಿವ್ಯ ಮಂಗಳ ವಿಗ್ರಹಗಳ ಸಾಕ್ಷಾತ್ಕಾರದಲ್ಲಿ ಆಸಕ್ತರಾಗಿರುವವರೇ ಭಗವದ್ಭಕ್ತರು. ಭಕ್ತರು ತಮೋಗುಣದಿಂದ ಕೂಡಿದ ಮೃಗ ಜೀವನವನ್ನು ತ್ಯಜಿಸಿ, ರಾಜಸಿಕ ಮನುಷ್ಯ ಭಾವವನ್ನು ಮೀರಿ, ಉತ್ತಮವಾದ ಸಾತ್ವಿಕ ದಿವ್ಯ ಚರ್ಯೆಯನ್ನು ಅವಲಂಬಿಸುವರು ಮತ್ತು ಧರ್ಮಾರ್ಥಕಾಮ ಪುರುಷಾರ್ಥಗಳನ್ನು ಪಡೆಯುವುದಕ್ಕೂ ಕೂಡ ಬಹುಮಂದಿ ಪೂಜಿಸುವ ಅನ್ಯದೇವತೆಗಳ ಪ್ರಾರ್ಥನೆಗಳನ್ನು ಬಿಟ್ಟು ಅದ್ವಿತೀಯನಾದ ಭಗವಂತನಲ್ಲೇ ಪ್ರಪತ್ತಿ ಮಾಡುವರು.

ಶಿಷ್ಯ:—"ನಾನು ಯಾರು" ಎಂಬ ವಿಚಾರದಲ್ಲಿ ಭಗವದ್ಭಕ್ತನ ತೀರ್ಮಾನವೇನು?

**ಗುರು:**—ಪ್ರತಿಯೊಬ್ಬ ಮನುಷ್ಯನಲ್ಲಿಯೂ ಶರೀರ, ಜಗತ್ತಿನೊಡನೆ ಶರೀರ ಸಂಬಂಧ, ಇಂದ್ರಿಯ ಮನ ಬುದ್ಧಿಗಳಿಂದ ಕೂಡಿದ ಅಂತಃಕರಣ, ಜ್ಞಾನವನ್ನು ಪಡೆದಿರುವ ವೈಯಕ್ತಿಕ ಆತ್ಮ ಮತ್ತು ಅಂತರ್ಯಾಮಿಯಾಗಿರುವ ಪರಮಾತ್ಮ ಎಂಬ ಐದು ಶಕ್ತಿಗಳು ಮಿಳಿತವಾಗಿವೆ. ಆದರೆ ಬೇರೆ ಬೇರೆ ಮನುಷ್ಯರು ಅಹಂಕಾರ ಅಥವ "ನಾನು" ಎಂಬ ಅನುಭವವನ್ನು ಮೇಲಿನ ಒಂದೊಂದು ಶಕ್ತಿಯಲ್ಲಿ ಮಾತ್ರ ಏಕೀಭವಿಸಿಕೊಳ್ಳುವರು. ಕೆಲವರು ಶರೀರವನ್ನೇ "ನಾನು" ಎಂದು ಭಾವಿಸುವರು; ಇನ್ನು ಕೆಲವರು ಸಮಾಜದಲ್ಲಿ ತಮ್ಮ ವ್ಯಕ್ತಿತ್ವವನ್ನೇ "ನಾನು" ಎಂದು ವಾದಿಸುವರು; ಮತ್ತೆ ಕೆಲವರು ತಮ್ಮ ಅಂತಃಕರಣವನ್ನು "ನಾನು" ಎಂದು ತಿಳಿಯುವರು; ಬಹು ಮಂದಿ ಭಕ್ತರು ಧರ್ಮಭೂತ ಜ್ಞಾನವನ್ನು ಪಡೆದಿರುವ ವೈಯಕ್ತಿಕ ಆತ್ಮನೇ "ನಾನು" ಎಂಬುವ ಅನುಭವಕ್ಕೆ ಆಧಾರವು ಎಂದು ನಂಬಿರುವರು; ಸ್ವಲ್ಪ ಮಂದಿ ಪ್ರಪನ್ನರು ಮಾತ್ರ ಜೀವಾತ್ಮನಿಗೂ ಜಗತ್ತಿಗೂ ಅಂತರಾತ್ಮನಾದ ಪರಮಾತ್ಮನಲ್ಲಿ ತಮ್ಮ ಜ್ಞಾನವನ್ನು ಐಕ್ಯಮಾಡಿ "ನಾನು" ಎಂಬ ಅನುಭವವು ನಿಜವಾಗಿ ಆ ಪರಮಾತ್ಮನಿಗೆ ಅನ್ವಯಿಸತಕ್ಕದ್ದು ಎಂದು ತೀರ್ಮಾನಿಸಿ ತಮ್ಮ ಶರೀರ, ಅಂತಃಕರಣ, ಸಮಾಜ ಮತ್ತು ಜೀವಾತ್ಮರುಗಳಲ್ಲಿ ಅಹಂಕಾರ ಮಮಕಾರಗಳನ್ನು ತ್ಯಜಿಸುವರು.

ಶಿಷ್ಯ:—ಭಗವದ್ಭಕ್ತನ ಮುಖ್ಯ ಧ್ಯೇಯವೇನು?

ಗುರು:—ಭಕ್ತನಿಗೆ ಭಗವಂತನಿಂದ ಪ್ರತ್ಯೇಕಿಸಲ್ಪಟ್ಟ ಕೇವಲ ಜಗತ್ತಿನ ಅನುಭವವು ಮತ್ತು ವಿಷಯಸುಖಗಳು ಮಾತ್ರ ಬೇಕಾಗಿಲ್ಲ. ಅವನು ಜಗತ್ತಿಗೆ ಸಂಬಂಧ

ಪಡೆದ ಜಗತ್ಕಾರಣನಾದ ಕೇವಲ ಅಖಂಡ ಜ್ಞಾನದ ಅಂದರೆ ನಿರ್ಗುಣ ಬ್ರಹ್ಮದ ಅನುಭವದಲ್ಲಿ ಮಾತ್ರ ತೃಪ್ತನಾಗುವುದಿಲ್ಲ. ಆದರೆ ಚಿದಚಿದ್ವಸ್ತುಗಳನ್ನು ಶರೀರವಾಗಿ ಪಡೆದಿರುವ, ಜಗತ್ತಿನ ಸೃಷ್ಟಿ ಸ್ಥಿತಿಲಯ ಕಾರ್ಯಗಳಲ್ಲಿ ಅನಂತ ಕಲ್ಯಾಣ ಗುಣಗಳನ್ನು ತೋರಿಸುತ್ತಿರುವ, ಭಕ್ತರಿಗೆ ಆನಂದವನ್ನುಂಟುಮಾಡಲು ಅನೇಕ ದಿವ್ಯ ಮಂಗಳ ವಿಗ್ರಹಗಳನ್ನು ಸ್ವೀಕರಿಸಿರುವ ಮತ್ತು ತನ್ನನ್ನು ಪ್ರಾರ್ಥಿಸುವ ಮಾನವರ ಸಂಕಟಗಳನ್ನು ಪರಿಹರಿಸುವ ಸಗುಣ ಬ್ರಹ್ಮನನ್ನು ಸಾಕ್ಷಾತ್ಕರಿಸಲು ಭಕ್ತನು ಆಸಕ್ತನಾಗಿರುವನು.

ಶಿಷ್ಯ:—ಭಗವದ್ಭಕ್ತರ ಭಕ್ತಿಯಲ್ಲಿರುವ ಅಂತಸ್ತುಗಳನ್ನು ವಿವರಿಸಿ ?

**ಗುರು:**...ಹಿರಿಯರು ಭಕ್ತಿಯನ್ನು ಮೂರು ಅಂತಸ್ತುಗಳಾಗಿ ವಿಂಗಡಿಸಿರುವರು-ಭಕ್ತಿ, ಪರಭಕ್ತಿ ಮತ್ತು ಪರಮಭಕ್ತಿ ಎಂದು. ಬಹುಮಂದಿ ಭಕ್ತರು "ಪರಮಾತ್ಮನು, ನಿಜವಾಗಿ ಗುಣ ವಿಗ್ರಹಗಳೊಡನೆ ಕೂಡಿರುವ ಅದ್ವಿತೀಯ ಮಹಾಪುರುಷನು; ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳನ್ನು ಪುನಃ ಪುನಃ ನಡೆಸುತ್ತಾ ನಮಗೆಲ್ಲಾ ಸ್ವಾಮಿಯಾಗಿರುವನು; ಸಕಲ ಮನುಷ್ಯರಿಗೂ ಧರ್ಮಾರ್ಥ ಕಾಮ ಪುರುಷಾರ್ಥಗಳನ್ನು ದಯಪಾಲಿಸುವವನು ಅವನೇ; ಆದಕಾರಣ ನಾವು ಅವನನ್ನು ಗೌರವದಿಂದ ಕೂಡಿದ ಪ್ರೀತಿಯಿಂದ ಆಶ್ರಯಿಸುತ್ತಲೇ ಇರಬೇಕು. ಅಂದರೆ ಗೃಹ ದೇವಾಲಯಗಳಲ್ಲಿ ಪೂಜೆಗಳನ್ನು ಕೈಗೊಳ್ಳಬೇಕು" ಎಂಬ ಭಾವನೆಯನ್ನು ಪಡೆದಿರುವರು. ಈ ಭಾವನೆಯನ್ನೇ 'ಭಕ್ತಿ' ಎಂದು ತಿಳಿಯಬೇಕು. ಇಲ್ಲಿ ಭಕ್ತನಿಗೆ ಬೇಕಾಗಿರುವುದು ಜಗತ್ತಿಗೆ ಸಂಬಂಧಪಟ್ಟ ಚತುರ್ವಿಧ ಪುರುಷಾರ್ಥಗಳು; ಅವನ್ನು ಅನುಗ್ರಹಿಸುವವನು ಅದ್ವಿತೀಯ ಮಹಾಪುರುಷನಾದ ಭಗವಂತನು; ಈ ಪುರುಷಾರ್ಥಗಳನ್ನು ಹೊಂದುವುದಕ್ಕಾಗಿ ಮಾನವರು ಶಾಸ್ತ್ರಗಳಲ್ಲಿ ವಿಧಿಸಿರುವ ಭಗವಂತನ ಆಜ್ಞೆಗಳನ್ನು ಅಂದರೆ ಧರ್ಮಗಳನ್ನು ಸಮಾಜದಲ್ಲಿ ಪರಿಪಾಲಿಸುತ್ತಾ ಆ ಪರಮಾತ್ಮನನ್ನು ಕೀರ್ತನ, ಮನನ, ಸ್ತೋತ್ರ, ಭಜನ ಉಪಾಸನಾದಿಗಳಿಂದ ಆಶ್ರಯಿಸುತ್ತಲೇ ಇರಬೇಕು.

"ಪರಭಕ್ತಿ" ಎಂದರೇನು? "ಜಗತ್ತಿಗೆ ಸಂಬಂಧಪಟ್ಟ ಧರ್ಮಾರ್ಥ ಕಾಮ ಪುರುಷಾರ್ಥಗಳು ಅಲ್ಪವೂ ಅಸ್ಥಿರವೂ ದುಃಖ ಮಿಶ್ರವೂ ಆಗಿರುವುದರಿಂದ ಅವನ್ನು ಪಡೆಯುವ ಮಾತ್ರದಿಂದಲೇ ನನಗೆ ತೃಪ್ತಿಯುಂಟಾಗುವುದಿಲ್ಲ; ನನಗೆ ಬೇಕಾಗಿರುವುದು ಭಗವಂತನ ಸ್ವರೂಪರೂಪ ಗುಣ ವಿಭೂತಿಗಳಿಂದ ಕೂಡಿದ ಅವನ ದಿವ್ಯ ಮಂಗಳ ವಿಗ್ರಹಗಳ ಶಾಶ್ವತಾನಂದವನ್ನುಂಟುಮಾಡುವ ಅನುಭವ ಅಥವ ಸಾಕ್ಷಾತ್ಕಾರ; ಆದಕಾರಣ ನಾನು ಕರ್ಮಜ್ಞಾನಯೋಗಗಳ ಆಧಾರದಿಂದ ಕೂಡಿದ ಭಕ್ತಿಯೋಗದ ಅಭ್ಯಾಸಗಳನ್ನು ಕೈಗೊಳ್ಳುತ್ತೇನೆ." ಎಂಬೀ ಭಾವನೆಯನ್ನು ಭಕ್ತನು

ಪಡೆದರೆ ಅದು ಪರಭಕ್ತಿ ಎನ್ನಿಸಿಕೊಳ್ಳುತ್ತದೆ. ಪರಭಕ್ತಿಯನ್ನು ಪಡೆದ ಮಾನವನು ಅರ್ಥ, ಕಾಮ, ಧರ್ಮ ಮತ್ತು ಆತ್ಮಾನಂದ ಎಂಬ ಪುರುಷಾರ್ಥಗಳನ್ನು ಹೊಂದುವ ವಿಚಾರದಲ್ಲಿ ಅಧಿಕವಾದ ಆಸೆಗಳನ್ನು ತೋರಿಸುವುದಿಲ್ಲ; ಆದರೆ ಭಗವಂತನ ಅನೇಕ ದಿವ್ಯ ಮಂಗಳ ವಿಗ್ರಹಗಳಲ್ಲಿ ಕೆಲವನ್ನಾದರೂ ಸಾಕ್ಷಾತ್ಕರಿಸಲೇಬೇಕೆಂದು ಸದಾ ಆತುರದಿಂದ ಕೂಡಿರುವನು. ಈ ಉತ್ತಮ ಫಲವನ್ನು ಪಡೆಯುವ ಉದ್ದೇಶಕ್ಕಾಗಿ ಭಗವದ್ಗೀತೆಯ ಎರಡನೇ ಷಟ್ಕದಲ್ಲಿ ವರ್ಣಿಸಿರುವ ಭಕ್ತಿಯೋಗದ ಅಭ್ಯಾಸಗಳಲ್ಲಿ ನಿರತನಾಗುವನು. ಮತ್ತು ಪರಮಾತ್ಮ ಸಾಕ್ಷಾತ್ಕಾರವನ್ನು ಪಡೆಯುವವರೆಗೂ ವಿರಹತಾಪದಿಂದ ಅತೃಪ್ತಿಯಿಂದ ಕೂಡಿರುವನು.

"ಪರಮಭಕ್ತಿ"ಯೆಂದರೇನು? "ಭಗವಂತನು ಜಗತ್ತಿಗೆಲ್ಲಾ ಅಂತರಾತ್ಮನು ಮತ್ತು ಜಗತ್ತೆಲ್ಲಾ ಅವನ ಶರೀರವು; ಹಾಗೆಯೇ ಆತ್ಮ ಸ್ವರೂಪನಾದ ನನಗೂ ಕೂಡ ಪರಮಾತ್ಮನು ಅಂತರಾತ್ಮನು ಮತ್ತು ನಾನೂ ಅವನ ಶರೀರವು. ಅಂದರೇನು, ಪರಮಾತ್ಮನು ನಿಜವಾಗಿ ಜಗತ್ತಿನ ಮತ್ತು ನನ್ನ ಧಾರಕನು, ಪೋಷಕನು, ನಿಯಾಮಕನು ಮತ್ತು ಭೋಕ್ತೃವು; ಅವನೇ ನನ್ನ ಅಂತ್ಯದ ಆತ್ಮನು ಮತ್ತು ಸ್ವಾಮಿಯು. ಆದುದರಿಂದ ಅವನೇ ನನ್ನ ಯೋಗ ಕ್ಷೇಮಗಳನ್ನು ಸಂಪೂರ್ಣವಾಗಿ ನೋಡಿಕೊಳ್ಳುವವನು; ಆದರೆ ನಾನು ನನ್ನ ಅಹಂಕಾರ ಮಮಕಾರ ಭಾವನೆಗಳನ್ನು ಪಡೆದಿರುವುದರಿಂದ ಅವನ ದಯೆಯ ಪ್ರಸರಣಕ್ಕೆ ಅಡ್ಡಿಯಾಗಿರುವೆನು. ನಾನು ಅಹಂಕಾರ ಮಮಕಾರಗಳನ್ನು ಬೇರಿನೊಡನೆ ಕಿತ್ತೊಗೆದರೆ, ಭಗವಂತನೇ ತನ್ನ ದಿವ್ಯ ಸಂಕಲ್ಪದ ಪ್ರಕಾರ ನನಗೆ ಸಕಲ ಪುರುಷಾರ್ಥಗಳನ್ನೂ ಒಂದಕ್ಕೊಂದು ವಿರೋಧವಿಲ್ಲದ ಹಾಗೆ ಅನುಗ್ರಹಿಸುವನು. ಜಗತ್ತೂ ಮತ್ತು ನಾನೂ ನನ್ನ ಭೋಗಕ್ಕಾಗಿ ಇರುವುದಿಲ್ಲ; ಪರಮಾತ್ಮನ ಭೋಗಕ್ಕಾಗಿಯೇ ನಾನು ಮತ್ತು ಜಗತ್ತೂ ಇರುವುದು. ಆದುದರಿಂದ ಸರ್ವಕಾಲದಲ್ಲಿಯೂ ನಾನು ನನಗೂ ಪರಮಾತ್ಮನಿಗೂ ಇರುವ ಸಂಬಂಧವನ್ನು ಅನುಸಂಧಾನಮಾಡುತ್ತಾ ಶಕ್ತ್ಯನುಸಾರ ಅವನ ಕೈಂಕರ್ಯವನ್ನು ಸರ್ವ ವಿಧದಲ್ಲಿಯೂ ನಡೆಸುತ್ತಿರುವುದೇ ನನ್ನ ಸ್ವರೂಪ ಮತ್ತು ಆನಂದ" ಎಂಬ ಭಾವನೆಯನ್ನು ಭಕ್ತನು ಪಡೆದರೆ ಅದು "ಪರಮಭಕ್ತಿ" ಎನ್ನಿಸಿಕೊಳ್ಳುತ್ತದೆ. ಪರಮಭಕ್ತಿಯನ್ನು ಪಡೆದ ಮಾನವನು ಜಗತ್ತಿಗೆ ಸಂಬಂಧಪಟ್ಟ ಚತುರ್ವಿಧ ಪುರುಷಾರ್ಥಗಳಲ್ಲಿ ಹೆಚ್ಚಾದ ಆಸೆಯನ್ನು ತೋರಿಸುವುದಿಲ್ಲ ಮತ್ತು ಕರ್ಮ ಜ್ಞಾನಭಕ್ತಿ ಯೋಗಗಳನ್ನು ಸಾಧನವಾಗಿ ಮಾಡುವುದರಿಂದ ಈಶ್ವರ ಸಾಕ್ಷಾತ್ಕಾರವನ್ನು ಪಡೆಯುವನೆಂಬ ಅಹಂಕಾರವನ್ನೂ ಪಡೆದಿಲ್ಲ. ಯಾವಾಗಲೂ ತನಗೂ ಭಗವಂತನಿಗೂ ಇರುವ ಸಂಬಂಧ ಜ್ಞಾನದ ಶ್ರವಣ ಮನನ ಧ್ಯಾನಗಳಲ್ಲೂ ಮತ್ತು ಸರ್ವ ವಿಧಗಳಾದ ಭಗವಂತನ ಕೈಂಕರ್ಯಗಳಲ್ಲೂ ಆನಂದದಿಂದ ಕಾಲ ಕಳೆಯುವನು.

**ಶಿಷ್ಯ:**—ಈ ಮೂರು ವಿಧವಾದ ಭಕ್ತರುಗಳ ಆಧ್ಯಾತ್ಮಿಕ ಅಭ್ಯಾಸಗಳಲ್ಲಿರುವ ವ್ಯತ್ಯಾಸಗಳನ್ನು ಬಿಡಿಸಿಟ್ಟು ತಿಳಿಸಿ.

**ಗುರು:**—ಸಾಧಾರಣ ಭಕ್ತಿಯನ್ನು ಪಡೆದಿರುವವರನ್ನು ಉಪಾಸಕರೆಂದೂ, ಪರಭಕ್ತಿಯನ್ನು ಪಡೆದಿರುವವರನ್ನು ಭಕ್ತಿಯೋಗ ನಿಷ್ಠರೆಂದೂ ಮತ್ತು ಪರಮ ಭಕ್ತಿಯನ್ನು ಪಡೆದವರನ್ನು ಪ್ರಪನ್ನರೆಂದೂ ಕರೆಯುವ ವಾಡಿಕೆಯುಂಟು. ಉಪಾಸಕರು ಧರ್ಮಾರ್ಥ ಕಾಮ ಪುರುಷಾರ್ಥಗಳನ್ನು ಹೊಂದಲು ಶ್ರದ್ಧೆಯಿಂದ ಮತ್ತು ಭಯದಿಂದ ವರ್ಣಾಶ್ರಮ ಧರ್ಮಗಳನ್ನೂ, ನಿತ್ಯನೈಮಿತ್ತಿಕಾದಿ ಕರ್ಮಗಳನ್ನೂ ಮತ್ತು ಭಗವಂತನ ಪೂಜಾದಿಗಳನ್ನೂ ಅವನಲ್ಲಿ ಭಕ್ತಿಯಿಂದ ಶಕ್ತಿಮೀರಿ ನಡೆಸುತ್ತಿರುವರು. ಭಕ್ತಿಯೋಗನಿಷ್ಠರು ಪರಮಾತ್ಮನ ದಿವ್ಯ ಮಂಗಳ ವಿಗ್ರಹಾದಿಗಳ ಸಾಕ್ಷಾತ್ಕಾರವನ್ನು ಪಡೆಯಬೇಕೆಂಬ ಉತ್ಕಟೇಚ್ಛೆಯಿಂದ ವರ್ಣಾಶ್ರಮ ಧರ್ಮಗಳನ್ನೂ ನಿತ್ಯನೈಮಿತ್ತಿಕ ಕರ್ಮಗಳನ್ನೂ ಫಲಸಂಗಕರ್ತೃತ್ವ ರಹಿತವಾದ ಕರ್ಮಯೋಗವಾಗಿ ಮಾಡುತ್ತಾ ಜ್ಞಾನಯೋಗ ಮತ್ತು ಭಕ್ತಿಯೋಗ ಆಧ್ಯಾತ್ಮ ಅಭ್ಯಾಸಗಳನ್ನು ಸಾಧನ ರೂಪವಾಗಿ ಸಾಹಸದಿಂದ ನಡೆಸುವರು ಮತ್ತು ಅವರು ಅಪೇಕ್ಷಿಸುವ ಫಲವು ಕೈಗೂಡುವವರೆಗೂ ಅತೃಪ್ತಿಯನ್ನು ಪಡೆದಿರುವರು. ಆದರೆ ಪ್ರಪನ್ನರು ಯೋಗಾಭ್ಯಾಸಗಳಿಂದ ಮಾತ್ರ ಪರಮಾತ್ಮ ಸಾಕ್ಷಾತ್ಕಾರವು ಸಾಧ್ಯವಲ್ಲವೆಂಬುದನ್ನೂ ತಿಳಿದು, ಅದು ಈಶ್ವರನ ಕೃಪೆಯಿಂದಲೇ ಉಂಟಾಗುವುದೆಂದು ದೃಢವಾಗಿ ನಂಬಿ, ಭಕ್ತಿಯೋಗ ಅಭ್ಯಾಸದಲ್ಲಿ ಸಾಧನತ್ವ ಭಾವವನ್ನು ತ್ಯಜಿಸಿ, ಕರ್ಮಯೋಗವನ್ನು ಭಗವತ್ಕೈಂಕರ್ಯರೂಪವಾಗಿಯೂ, ಜ್ಞಾನ ಯೋಗವನ್ನು ಭಗವನ್ಮಹಾತ್ಮ್ಯ ಶ್ರವಣ ಮನನ ಧ್ಯಾನಾದಿರೂಪವಾಗಿಯೂ ಮತ್ತು ಭಕ್ತಿಯೋಗವನ್ನು ಭಗವಂತನಲ್ಲೇ ಉತ್ಕಟ ಪ್ರೀತಿರೂಪವಾಗಿಯೂ, ಎಲ್ಲ ಯೋಗಗಳನ್ನೂ ಆತ್ಮ ಸ್ವರೂಪದ ಸ್ವಾಭಾವಿಕವಾದ ಮತ್ತು ಆನಂದವನ್ನುಂಟು ಮಾಡುವ ಪ್ರವೃತ್ತಿಗಳನ್ನಾಗಿಯೂ ಭಾವಿಸಿ ಅವುಗಳನ್ನು ನಿತ್ಯ ಜೀವನದಲ್ಲಿ ನಡೆಸುತ್ತಿರುವರು.

## ಭಗವದ್ಭಕ್ತರ ಜಗತ್ತಿನ ಅನುಭವ

**ಶಿಷ್ಯ:**--ಪರಮ ಭಕ್ತಿಯನ್ನು ಪಡೆದಿರುವ ಭಗವದ್ಭಕ್ತನು ಒಟ್ಟು ಜಗತ್ತನ್ನು ಹೇಗೆ ಭಾವಿಸುವನು?

**ಗುರು:**—ಪ್ರಳಯಕಾಲದ ಸೂಕ್ಷ್ಮಚಿದಚಿದ್ವಿಶಿಷ್ಟ ಬ್ರಹ್ಮನೇ ಸೃಷ್ಟಿ ಕಾಲದ ಸ್ಥೂಲಚಿದಚಿದ್ವಿಶಿಷ್ಟ ಬ್ರಹ್ಮನಾಗುವುದರಿಂದ ಜಗತ್ತೆಲ್ಲವನ್ನೂ ಮತ್ತು ಅದರಲ್ಲಿರುವ ಚೇತನಾಚೇತನ ಪದಾರ್ಥಗಳನ್ನೂ ಅವನು ವಿಶಿಷ್ಟಬ್ರಹ್ಮನನ್ನಾಗಿಯೇ ಭಾವಿಸುವನು. ಈ ಜಗತ್ತಿನೊಳಗೆ ಭಗವಂತನು ಅಂತರ್ಯಾಮಿಯಾಗಿರುವುದನ್ನೂ ಸ್ಮರಿಸುತ್ತಲೇ ಇರುವನು. ಪರಮಾತ್ಮನು ಸಂಗರಹಿತನಾಗಿ ಜೀವಿಗಳು ಚತುರ್ವಿಧ

ಪುರುಷಾರ್ಥಗಳನ್ನು ಅನುಭವಿಸಲೆಂದು ತಾನೇ ಸಂಪೂರ್ಣ ಜಗತ್ತಾಗಿ ನಿಂತಿರುವ ನೆಂಬುದನ್ನು ಸ್ಮರಿಸುತ್ತಾ ಭಗವದ್ಭಕ್ತನೂ ಕೂಡ ಸಂಗರಹಿತನಾಗಿ ಜಗತ್ತೆಂಬ ಸಮಸ್ತಗುಣ ಸಮುದಾಯದಲ್ಲಿ ತಾನೂ ಅಂತರ್ಭವಿಸಿ ತನ್ನನ್ನೂ ತನಗೆ ಸೇರಿದ ಸ್ವತ್ತನ್ನೂ ಇತರರ ಅನುಭವಕ್ಕಾಗಿ ಮೀಸಲಾಗಿಡುವನು. ಜಗತ್ತಿನ ಸರ್ವತ್ರ ದ್ರವ್ಯವಾದ ಸಂಪತ್ತನ್ನು ಸರ್ವೇಶ್ವರನಿಗೆ ಸೇರಿದ್ದಾಗಿ ಪೂರ್ಣವಾಗಿ ಪರಿಶೀಲಿಸಿ, ಅದು ಸರ್ವೇಶ್ವರನಿಗೆ ಶೇಷಭೂತವಾದುದು ಎಂಬುದನ್ನು ಮನನಮಾಡಿ, ಅದರೊಳಗೆ ತಾನೂ ಸೇರಿರುವುದರಿಂದ ತಾನೂ ಕೂಡ ಭಗವಂತನಿಗೆ ಶೇಷಭೂತನು ಎಂಬುದನ್ನು ಇವನು ಸದಾಕಾಲದಲ್ಲೂ ಸ್ಮರಿಸುತ್ತಿರುವನು. ಜಗತ್ತೆಲ್ಲವೂ ಭಗವಂತನ ಐಶ್ವರ್ಯವೆಂದು ತಿಳಿದು ಜಗತ್ತಿನ ಭಾಗವಾದ ತಾನೂ ಕೂಡ ಭಗವಂತನ ಐಶ್ವರ್ಯವೆಂಬುದನ್ನು ನಂಬುವನು ಮತ್ತು ಜಗತ್ತು ಪರಮಾತ್ಮನ ಭೋಗಕ್ಕೆ ಒಳಪಟ್ಟಿರುವುದರಿಂದ ತಾನೂ ಕೂಡ ಅವನ ಭೋಗಕ್ಕೆ ಒಳಪಟ್ಟಿರುವುದನ್ನು ಮನನ ಮಾಡುತ್ತಲೇ ಇರುವನು. ಹೀಗೆ ಮನನ ಮಾಡುತ್ತಾ ಭಗವದ್ಭಕ್ತನು ಜಗತ್ತಿಗೆ ಸಂಬಂಧಪಟ್ಟ ಯಾವ ಸ್ವತಂತ್ರ ಪುರುಷಾರ್ಥವನ್ನೂ ಕೈಗೊಳ್ಳನು. ತನ್ನ ಯೋಗಕ್ಷೇಮವನ್ನು ಭಗವಂತನು ನೋಡಿಕೊಳ್ಳುವನು ಎಂದು ನಂಬಿ, ತಾನು ಮಾತ್ರ ಸದಾ ಕಾಲದಲ್ಲೂ ಪ್ರಣವವನ್ನು ಅರ್ಥ ಸಹಿತ ಅನುಸಂಧಾನಮಾಡುತ್ತಾ (ಅಂದರೆ ತನಗೂ ಜಗತ್ತಿಗೂ ಭಗವಂತನಿಗೂ ಇರುವ ಸಂಬಂಧವನ್ನು ಸ್ಮರಿಸುತ್ತಾ) ಶಾಸ್ತ್ರದಲ್ಲಿ ವಿಧಿಸಿರುವ ಲೋಕ ಕಲ್ಯಾಣ ಕಾರ್ಯಗಳಲ್ಲಿ ನಿರತನಾಗುವನು.

ಶಿಷ್ಯ!—ಪರಮ ಭಕ್ತಿಯನ್ನು ಪಡೆದಿರುವ ಭಗವದ್ಭಕ್ತನು ಅಚೇತನ ಪದಾರ್ಥಗಳನ್ನು, ಸಸ್ಯಗಳನ್ನೂ ಮತ್ತು ಮನುಷ್ಯೇತರ ಪ್ರಾಣಿಗಳನ್ನೂ ಹೇಗೆ ಭಾವಿಸುವನು ಮತ್ತು ಉಪಯೋಗಿಸುವನು?

ಗುರು:—ಮನುಷ್ಯನು ಜೀವಿಸುವುದಕ್ಕೆ ಅವಶ್ಯಕವಾದ ಧಾರಕ ವಸ್ತುಗಳು, ಸಮಾಜದಲ್ಲಿ ಅವನು ಕರ್ತವ್ಯ ಕರ್ಮಗಳನ್ನು ನಡೆಸಲು ಶಕ್ತಿಯನ್ನು ಕೊಡುವ ಪೋಷಕ ವಸ್ತುಗಳು, ಇಂದ್ರಿಯಗಳಿಗೆ ಸುಖಗಳನ್ನುಂಟುಮಾಡುವ ಭೋಗ್ಯ ವಸ್ತುಗಳು ಮತ್ತು ಲಲಿತ ಕಲೆಗಳಿಂದ ಕಾಮ ಪುರುಷಾರ್ಥವನ್ನು ಬಹು ಪ್ರಕಾರವಾಗಿ ಅನುಭವಿಸಲು ಸಹಾಯಮಾಡುವ ವಿಲಾಸ ವಸ್ತುಗಳು ಎಂದು ನಾಲ್ಕು ವಿಭಾಗ ಮಾಡಬಹುದು. ಭಗವದ್ಭಕ್ತನು ಧಾರಕ ಮತ್ತು ಪೋಷಕ ವಸ್ತುಗಳನ್ನು ಮಾತ್ರ ಉಪಯೋಗಿಸುವನು. ಏಕೆಂದರೆ ಐಶ್ವರ್ಯವಂತನು ಭೋಗ್ಯ ಮತ್ತು ವಿಲಾಸ ವಸ್ತುಗಳನ್ನು ಉಪಯೋಗಿಸಿದರೆ ಹಳ್ಳಿಯಲ್ಲಿರುವ ಅನೇಕರಿಗೆ ಧಾರಕ ಮತ್ತು ಪೋಷಕ ವಸ್ತುಗಳನ್ನು ಉಪಯೋಗಿಸುವ ಅನುಕೂಲ್ಯಗಳೂ ಕೂಡ ಇರುವುದಿಲ್ಲವೆಂಬುದನ್ನು ಮತ್ತು ಭೋಗ್ಯ ವಿಲಾಸ ವಸ್ತುಗಳ ಅನುಭವಗಳು ತನ್ನ ಆತ್ಮಾನುಭವ ಮತ್ತು

ಪರಮಾತ್ಮಾನುಭವಗಳು ವೃದ್ಧಿಗೆ ಅನೇಕ ವೇಳೆ ಅಡ್ಡಿಯಾಗುವುದನ್ನೂ ಅವನು ತಿಳಿದಿರುವನು. ಆದರೆ ಸನಾತ ಜನರಿಗೋಸ್ಕರವೂ ಸನಾತ ಜದ್ದಿರುವವರೆಲ್ಲರ ಉಪಯೋಗಕ್ಕಾಗಿ ಸಾರ್ವತ್ರಿಕ ಭೋಗ್ಯವಿಲಾಸ ವಸ್ತುಗಳನ್ನು ಏರ್ಪಡಿಸಿದರೆ, ಭಕ್ತನು ತಾನೂ ಕೂಡ ಎಲ್ಲರೊಡನೆ ಕಲೆತು ತನ್ನ ಭಾಗಕ್ಕೆ ಸೇರುವ ಭೋಗ್ಯವಿಲಾಸ ವಸ್ತುಗಳನ್ನು ಈಶ್ವರ ಪ್ರಸಾದವೆಂಬ ಭಾವನೆಯಿಂದ ಅನುಭವಿಸುವನು. ಉದಾಹರಣೆಗಾಗಿ, ಭಗವದ್ಭಕ್ತನು ದೇವಾಲಯದಲ್ಲಿ ಎಲ್ಲರಿಗೂ ಹಂಚುವ ಆಹಾರಗಳನ್ನೂ ಮತ್ತು ಇತರ ಭೋಗ್ಯ ವಸ್ತುಗಳನ್ನೂ ಎಲ್ಲರೊಡನೆ ಅನುಭವಿಸುವನು. ನದಿ ಬೆಟ್ಟ ಸಮುದ್ರ ಸೂರ್ಯ ಚಂದ್ರ ನಕ್ಷತ್ರ ಮೇಘ ಇವುಗಳ ಸೌಂದರ್ಯಗಳನ್ನು ಎಲ್ಲರೂ ಅನುಭವಿಸುವ ಹಾಗೆ ತಾನೂ ಅನುಭವಿಸುವನು ಮತ್ತು ಅವುಗಳ ಸೌಂದರ್ಯದ ಅನುಭವದಲ್ಲಿ ಪರಮಾತ್ಮನ ಸೌಂದರ್ಯವನ್ನು ಸಾಕ್ಷಾತ್ಕರಿಸಲು ಪ್ರಯತ್ನ ಪಡುವನು. ಅವನು ಬುದ್ಧಿ ಮನ ಇಂದ್ರಿಯಗಳನ್ನು ಜಯಿಸಿ ಬ್ರಹ್ಮಚರ್ಯ ವ್ರತವನ್ನು ಕೈಗೊಂಡಿರುವುದರಿಂದ ಮತ್ತು ಭಗವಂತನ ಸ್ಮರಣೆಯಲ್ಲೇ ಅವನಿಗೆ ಸಾತ್ತ್ವಿಕಾನಂದ ಉಂಟಾಗುವುದರಿಂದ ಭಕ್ತನಿಗೆ ಬಡತನದಿಂದ ಕಷ್ಟವಾಗುವುದಿಲ್ಲ ಮತ್ತು ಅವನು ಎಲ್ಲಾ ಅವಸ್ಥೆಗಳಲ್ಲೂ ತೃಪ್ತನಾಗಿರುವನು. ಬಡತನ ಸಾವು ನೋವು ಹಿಂಸೆಗಳು ಉಂಟಾದ ವೇಳೆಗಳಲ್ಲೆಲ್ಲಾ ಭಗವಂತನಿಗೂ ತನಗೂ ನಿಜವಾಗಿ ಇರುವ ಸಂಬಂಧ ಜ್ಞಾನವನ್ನು ಸ್ಮರಿಸುತ್ತಾ ತನ್ನ ಶ್ರೇಯಸ್ಸಿಗಾಗಿ ಇವುಗಳು ಉಂಟಾಗಿವೆಯೆಂದು ದೃಢವಾಗಿ ನಂಬಿ ಅವುಗಳನ್ನು ಶಾಂತಿಯಿಂದ ಸ್ವೀಕರಿಸುವನು. ಭಗವದ್ಭಕ್ತನು ಅಹಿಂಸಾವ್ರತವನ್ನು ಕೈಗೊಂಡಿರುವುದರಿಂದ ಪ್ರಾಣಿಗಳಿಗೆ ಹಿಂಸೆ ಮಾಡುವುದಿಲ್ಲ; ಅವುಗಳೆಲ್ಲ ತನ್ನ ಹಾಗೆ ಪರಮಾತ್ಮನ ಶರೀರದ ಭಾಗಗಳು ಮತ್ತು ಪರಮಾತ್ಮನನ್ನೇ ಅಂತರ್ಯಾಮಿಯಾಗಿ ಪಡೆದಿರುವುವು ಎಂಬುದಾಗಿ ಮನನ ಮಾಡುವನು. ಸಸ್ಯಗಳನ್ನು ಕೊಂದು ತಿನ್ನುವುದನ್ನು ಅವನು ಇಷ್ಟಪಡುವುದಿಲ್ಲ; ಆದುದರಿಂದ ಜೀವಿಸಿರುವ ಸಸ್ಯಗಳಲ್ಲಿ ಉತ್ಪತ್ತಿಯಾಗುವ ಧಾನ್ಯಗಳನ್ನೂ ಹಣ್ಣುಗಳನ್ನೂ ಹಾಲು ಮೊಸರು ಮುಂತಾದ ಪದಾರ್ಥಗಳನ್ನೂ ಊಟ ಮಾಡಿ ಜೀವಿಸುವನು. ಅವನು ಮಾಂಸಾಹಾರವನ್ನು ಆದಷ್ಟು ತ್ಯಜಿಸುವನು. ಏಕೆಂದರೆ ಅದಕ್ಕಾಗಿ ಪ್ರಾಣಿಗಳನ್ನು ಕೊಲ್ಲಬೇಕಾಗುತ್ತದೆ ಮತ್ತು ಮಾಂಸಾಹಾರವು ತಮೋಗುಣವನ್ನು ವೃದ್ಧಿಪಡಿಸುತ್ತದೆ. ಅಚೇತನ ಪದಾರ್ಥಗಳಲ್ಲಿ ಮತ್ತು ಪ್ರಾಣಿಗಳಲ್ಲಿ ಭಗವಂತನು ಅಂತರಾತ್ಮನಾಗಿರುವನೆಂದೂ ಮತ್ತು ಅವುಗಳು ವಿಶಿಷ್ಟ ಬ್ರಹ್ಮಸ್ವರೂಪಗಳೆಂದೂ ತಿಳಿದು ಭಕ್ತನು ಅವುಗಳಲ್ಲಿ ಭ್ರಾತೃಭಾವವನ್ನು ಬೆಳೆಸಿ ಅವುಗಳಿಗೆ ಸಹಾಯ ಮಾಡುವುದು ಮಾತ್ರವಲ್ಲದೆ ಕೆಲವು ವೇಳೆ ಅವುಗಳನ್ನು ಪೂಜಿಸುವನು.

ಶಿಷ್ಯ:—ಪರಮ ಭಕ್ತಿಯನ್ನು ಪಡೆದಿರುವ ಭಗವದ್ಭಕ್ತನು ದೇವತಾದಿ ಅದೃಶ್ಯ ಶಕ್ತಿಗಳನ್ನು ಹೇಗೆ ಭಾವಿಸುತ್ತಾನೆ.?

ಗುರು:—ದೇವತೆಗಳನ್ನು ನಾವು ನೋಡಿಲ್ಲ; ಆದರೆ ಯಜ್ಞಯಾಗಾದಿ ಕರ್ಮಗಳ ಮತ್ತು ನಿತ್ಯ ನೈಮಿತ್ತಿಕ ಕರ್ಮಗಳ ಮೂಲಕ ಅವರನ್ನು ಪೂಜಿಸುವ ಹಾಗೆ ವೇದಗಳು ವಿಧಿಸಿವೆ. ಆದುದರಿಂದ ಮನುಷ್ಯರು ತಮ್ಮ ಇಷ್ಟಾರ್ಥಗಳನ್ನು ಪಡೆಯುವುದಕ್ಕಾಗಿ ತಮ್ಮ ತಮ್ಮ ಮನಸ್ಸಿನಲ್ಲಿ ಪ್ರಧಾನವಾಗಿರುವ ತಮಸ್ಸು ರಜಸ್ಸು ಮತ್ತು ಸತ್ವಗುಣಗಳಿಗೆ ಅನುಗುಣವಾಗಿ ಆಯಾ ದೇವತೆಗಳಲ್ಲಿ ಶ್ರದ್ಧೆಯನ್ನು ಪಡೆದು ಅವರನ್ನು ಪೂಜಿಸುವರು. ಆದರೆ ಭಗವದ್ಭಕ್ತನು ಮಾತ್ರ ಆ ದೇವತೆಗಳನ್ನು ಪೂಜಿಸುವುದಿಲ್ಲ; ಅವರಲ್ಲಿ ಅಂತರಾತ್ಮನಾಗಿರುವ ಭಗವಂತನನ್ನು ಪೂಜಿಸುವನು. ಭಗವಂತನು ದೇವತೆಗಳಿಗೂ ಅಂತರಾತ್ಮನಾಗಿರುವುದರಿಂದ ಮತ್ತು ದೇವತೆಗಳೂ ಅವನ ಶರೀರದಲ್ಲಿರುವುದರಿಂದ, ಆಯಾ ದೇವತೆಗಳಿಗೆ ಫಲಗಳನ್ನು ಕೊಡುವ ಶಕ್ತಿಗಳನ್ನು ಭಗವಂತನೇ ಅನುಗ್ರಹಿಸುವನೆಂದು ಭಕ್ತನು ನಂಬುವನು. ಅಂಡಗಳನ್ನು ಸೃಷ್ಟಿ ಮಾಡುವ ಚತುರ್ಮುಖ ಬ್ರಹ್ಮನಿಗೂ, ಲೋಕದ ಕಟ್ಟಳೆಗಳನ್ನು ನಡೆಸುವ ವಿಷ್ಣುವಿಗೂ, ಅವುಗಳನ್ನು ಸಂಹಾರ ಮಾಡುವ ರುದ್ರನಿಗೂ ಮತ್ತು ವಿವಿಧ ವಿಶೇಷ ಶಕ್ತಿಗಳಿಂದ ಕೂಡಿರುವ ದೇವತೆಗಳಿಗೂ ಜ್ಞಾನಶಕ್ತ್ಯಾದಿಗಳನ್ನು ಭಗವಂತನೇ ಅವರಲ್ಲಿ ಅಂತರ್ಯಾಮಿಯಾಗಿದ್ದು ಕೊಡುವನೆಂದು ಶಾಸ್ತ್ರವು ಬೋಧಿಸುತ್ತದೆ. ಆದುದರಿಂದಲೇ ಪರಮಾತ್ಮನನ್ನು ದೇವಾದಿ ದೇವನೆಂದು ಭಗವದ್ಭಕ್ತನು ಸ್ತೋತ್ರ ಮಾಡುವನು.

(ಹನ್ನೆರಡನೇ ಮಾಲಿಕೆಯಲ್ಲಿ ಮುಂದುವರಿಯುವುದು)

# ಶ್ರೀ ನವಭಾರತ ಆಶ್ರಮ

ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

## (ಮಾಲೆ—ಹನ್ನೆರಡು)

## ಭಗವದ್ಭಕ್ತನು ಜಗತ್ತನ್ನೂ ಭಗವಂತನನ್ನೂ ಹೇಗೆ ಅನುಭವಿಸುವನು?

ಭಾಗ—೨

### ಭಗವದ್ಭಕ್ತನ ವ್ಯಕ್ತಿತ್ವ:

**ಶಿಷ್ಯ:**—ಪರಮ ಭಕ್ತಿಯನ್ನು ಪಡೆದಿರುವ ಭಗವದ್ಭಕ್ತನು ತನ್ನ ಶರೀರವನ್ನು ಹೇಗೆ ಭಾವಿಸಿ ಉಪಯೋಗಿಸುವನು?

**ಗುರು:**—ಆತ್ಮನಿಗೆ ನಿಜ ಸ್ವರೂಪದಲ್ಲಿ ಸ್ವಾಭಾವಿಕವಾದ ಶರೀರವು ಶುದ್ಧ ಸತ್ವ ಶರೀರವೆಂದೂ ಮತ್ತು ಈಗ ಸಂಸಾರ ದೆಸೆಯಲ್ಲಿ ಪಾಪವಾಸನಾತ್ಮಕ ಕರ್ಮದಿಂದ ಅದು ಮರೆಸಿಹೋಗಿ ಪಾರ್ಥಿವ ಶರೀರವು ಉಂಟಾಗಿದೆಯೆಂದೂ ಭಗವದ್ಭಕ್ತನು ಪೃಥಕ್ವಾದ ವಿವರ್ಣನವನ್ನು ಪಡೆದಿರುವನು. ಈ ಪಾರ್ಥಿವ ಶರೀರವು ಗರ್ಭ, ಜನ್ಮ, ಶೈಶವ, ಬಾಲ್ಯ, ಮಧ್ಯವಯಸ್ಸು, ವಾರ್ಧಕ್ಯ, ಮೃತ್ಯು ಎಂಬ ಅವಸ್ಥೆಗಳನ್ನು ಚಕ್ರಾಕಾರವಾಗಿ ಪಡೆಯುತ್ತಾ ಸದಾ ಕಾಲದಲ್ಲೂ ಬದಲಾವಣೆಗಳನ್ನು ಹೊಂದುತ್ತಿರುವುದರಿಂದ ಅದು ಮಿಂಚಿನ ಹಾಗೆ ಸ್ವಲ್ಪಕಾಲವಿದ್ದು ನಾಶವಾಗುತ್ತದೆಂಬುದನ್ನು ಮರೆಯದ ಹಾಗೆ ಮನನ ಮಾಡುತ್ತಿರುವನು. ಆದುದರಿಂದ ತನಗೆ ಶಾಶ್ವತವಾಗಿ ಭಗವತ್ಸಾಕ್ಷಾತ್ಕಾರದ ಮುಕ್ತೈಶ್ವರ್ಯದ ಆನಂದವನ್ನುಂಟುಮಾಡುವ ಶುದ್ಧಸತ್ವಶರೀರವು ಎಂದಿಗೆ ಆವಿರ್ಭಾವವಾಗುವುದು ಎಂದು ಎದುರುನೋಡುತ್ತಿರುವನು. ಆದರೆ ತಾನು ಜೀವಿಸಿರುವವರೆಗೂ ಸ್ವಾರ್ಥ, ಇಂದ್ರಿಯ ಸುಖ, ಅಧಿಕಾರ ಐಶ್ವರ್ಯಾದಿಗಳನ್ನು ಪಡೆಯಬೇಕೆಂಬ ಆಶೆಗಳನ್ನು ತಡೆದು, ವೈರಾಗ್ಯವನ್ನು ಸ್ವೀಕರಿಸಿ, ಬ್ರಹ್ಮಚರ್ಯವನ್ನು ಅಭ್ಯಾಸಮಾಡಿ ಈ ಪಾರ್ಥಿವ ಶರೀರದಿಂದಲೇ ಭಗವತ್ಕೈಂಕರ್ಯವನ್ನು ನಡೆಸುವುದಕ್ಕಾಗಿ ನಿತ್ಯಕರ್ಮ, ನೈಮಿತ್ತಿಕ ಕರ್ಮ, ವರ್ಣಾಶ್ರಮ ಧರ್ಮ ಮತ್ತು ಸಮಾಜ ಸೇವೆಗಳನ್ನು ಶಕ್ತ್ಯನುಸಾರ ಪರಾರ್ಥಭಾವನೆಯಿಂದಲೂ ಸಂತೋಷದಿಂದಲೂ ಕೈಗೊಳ್ಳುವನು. ಈ ಪಾರ್ಥಿವ ಶರೀರವು ಆರೋಗ್ಯವಾಗಿದ್ದು ಉತ್ತಮ

ವಾಗಿ ನೂರು ವರುಷ ಭಗವತ್ಕೈಂಕರ್ಯ ಮಾಡುವುದಕ್ಕಾಗಿ ಅವನು ಸಾತ್ವಿಕ ಆಹಾರಗಳನ್ನು ಭುಜಿಸಿ ತನ್ನ ದಿನಚರ್ಯೆಯಲ್ಲಿ ಆರೋಗ್ಯದ ನಿಯಮಗಳಿಗೆ ಗಮನ ಕೊಡುವನು. ಇಷ್ಟಾದಾಗ್ಯೂ, ಈ ಶರೀರವು ಯಾವ ನಿಮಿಷದಲ್ಲಿಯಾದರೂ ವಿಯೋಗವಾಗಬಹುದು ಎಂಬುದನ್ನು ಅರಿತು, ಅವನು ಸಾವಿಗೆ ಅಂಜುವುದಿಲ್ಲ ಮತ್ತು ದುಃಖಪಡುವುದಿಲ್ಲವೇಕೆಂದರೆ ಧರ್ಮವನ್ನು ಆಚರಿಸುತ್ತಿರುವ ತನಗೆ ಮೃತ್ಯುವಿನಿಂದ ಈ ಶರೀರಕ್ಕಿಂತ ಉತ್ತಮವಾದ ಹೊಸ ಶರೀರವು ಬೆಳೆಯುವುದೆಂದು ಅವನು ದೃಢವಾಗಿ ನಂಬಿರುವನು. ರೋಗಾದಿಗಳಿಂದ ಮತ್ತು ಇತರ ಕಾರಣಗಳಿಂದ ನೋವುಗಳುಂಟಾದಾಗ "ಶಬ್ದಾದಿ ವಿಷಯ ಸಂಬಂಧಗಳು ಅಥವ ಇಂದ್ರಿಯಗಳು ಮತ್ತು ವಿಷಯಗಳು ಎಲ್ಲವೂ ಶೀತದಂತೆ ಉಷ್ಣದಂತೆ ದುಃಖವನ್ನೂ ಸುಖವನ್ನೂ ಕೊಡತಕ್ಕವುಗಳು; ಇದಲ್ಲದೆ ಈ ವಿಷಯೇಂದ್ರಿಯಗಳ ಸಂಬಂಧಗಳು ಹುಟ್ಟಿ ಹೋಗತಕ್ಕವುಗಳು; ಆದ್ದರಿಂದ ನೆಲೆಯಾಗಿರತಕ್ಕವುಗಳಲ್ಲ. "ಭಾರತಕುಲದಲ್ಲಿ ಹುಟ್ಟಿದ ಅರ್ಜುನನೇ, ವಿಷಯೇಂದ್ರಿಯ ಸಂಬಂಧದಿಂದಾಗುವ ಸುಖದುಃಖಗಳನ್ನು ಸಹಿಸಿಕೋ" (ಗೀತಾ ೨-೧೪) ಎಂಬ ಗೀತಾ ಶ್ಲೋಕದ ಉಪದೇಶವನ್ನು ಮನನ ಮಾಡುತ್ತಾ ಮತ್ತು ತನ್ನ ಆತ್ಮಗುಣಗಳನ್ನು ಅನುಸಂಧಾನಮಾಡುತ್ತಾ ಭಕ್ತನು ಶರೀರದ ನೋವುಗಳನ್ನು ಸಹಿಸುವನು. ಇಷ್ಟೇ ಅಲ್ಲ; ಭಗವಂತನ ದಯೆಯಿಂದ ನೋವುಗಳು ಕಡಿಮೆಯಾಗುವುದಲ್ಲದೆ, ಅವನ್ನು ಸಹಿಸುವ ಶಕ್ತಿಯು ವೃದ್ಧಿಯಾಗುವುದು ಎಂದು ದೃಢ ಸಂಕಲ್ಪಮಾಡಿ ನೋವಾಗುವ ವೇಳೆಗಳಲ್ಲೆಲ್ಲಾ ಭಗವಂತನಿಗೂ ತನಗೂ ಇರುವ ಸಂಬಂಧ ಜ್ಞಾನದ ಆನಂದವನ್ನುಂಟುಮಾಡುವ ಪ್ರಣವ ಧ್ಯಾನವನ್ನು ಮಾಡುತ್ತಲೇ ಇರುವನು.

**ಶಿಷ್ಯ**:—ಪರಮ ಭಕ್ತಿಯನ್ನು ಪಡೆದಿರುವ ಭಗವದ್ಭಕ್ತನು ತನ್ನ ಅಂತಃಕರಣವನ್ನು ಯಾವ ರೀತಿಯಲ್ಲಿ ಕಾಣುವನು ಮತ್ತು ಉಪಯೋಗಿಸುವನು?

**ಗುರು**:—ಇಂದ್ರಿಯಗಳು, ಮನಸ್ಸು, ಬುದ್ಧಿ ಮತ್ತು ಅಹಂಕಾರ ಇವುಗಳ ಸಂಯೋಗವೇ ಸೂಕ್ಷ್ಮವಾದ ಅಂತಃಕರಣವು; ಇದನ್ನು ಸಾಧಾರಣವಾಗಿ ಮನಸ್ಸು ಎಂದು ಕರೆಯುವ ವಾಡಿಕೆಯುಂಟು. "ಮನಯೇವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" ಎಂಬ ವಾಕ್ಯದ ಅಭಿಪ್ರಾಯದ ಪ್ರಕಾರ ತನಗೆ ಅಂತಃಕರಣವು ಸಂಸಾರಬಂಧಕ್ಕೂ ಮತ್ತು ಸಂಸಾರದಿಂದ ಮೋಕ್ಷಕ್ಕೂ ಕಾರಣವಾಗಿದೆಯೆಂದೂ ಮತ್ತು ಅದು ಕರ್ಮವಶದಿಂದುಂಟಾಗಿ ಜನ್ಮ ಜನ್ಮದಲ್ಲಿಯೂ ತನ್ನೊಡನೆ ಸಂಬಂಧವನ್ನು ಪಡೆದಿರುವ ಉಪಕರಣವೆಂದೂ ಭಕ್ತನು ಭಾವಿಸುವನು. "ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ" ಎಂಬ ವಾಕ್ಯದಲ್ಲಿರುವ ಅಭಿಪ್ರಾಯದ ಪ್ರಕಾರ ಆತ್ಮನಿಗೆ ಅಂತಃಕರಣವೇ ಬಂಧುವು ಮತ್ತು ಅದೇ ಅಂತಃಕರಣವು ಶತ್ರುವಾಗುತ್ತದೆ ಎಂಬುದನ್ನು ಅರಿತಿರುವನು. ಯಾವಾಗ ಅಂತಃಕರಣವು ತಾಮಸಿಕ ರಾಜಸಿಕ

ಭಾವನೆಗಳನ್ನು ಪಡೆದು ಪ್ರಮಾದ, ಆಲಸ್ಯ, ನಿದ್ರೆ, ಮೋಹ, ರಾಗ, ತೃಷ್ಣಾಸಂಗ, ಕರ್ಮಸಂಗ ಮೊದಲಾದ ದೋಷಗಳಿಂದ ಕೂಡಿರುವುದೋ ಆಗ ಅದು ಆತ್ಮನಿಗೆ ಶತ್ರುವಾಗುತ್ತದೆ. ಯಾವಾಗ ಅದೇ ಅಂತಃಕರಣವು ಸಾತ್ವಿಕ ಭಾವನೆಗಳನ್ನು ಪಡೆದು ಭಗವಂತನ ದಿವ್ಯಮಂಗಳ ವಿಗ್ರಹಗಳನ್ನು ಸಾಕ್ಷಾತ್ಕರಿಸಲು ಮತ್ತು ಭಗವದಾನಂದವನ್ನುಂಟುಮಾಡಲು ಸಹಾಯಮಾಡುವುದೋ ಆಗ ಅದು ಆತ್ಮನಿಗೆ ಬಂಧುವಾಗುತ್ತದೆ. ಆದುದರಿಂದ ಭಗವದ್ಭಕ್ತನು ತನ್ನ ಮನಸ್ಸು, ವಾಕ್ಕು ಮತ್ತು ಪ್ರವೃತ್ತಿಗಳ ಸ್ವಭಾವಗಳನ್ನು ಪರೀಕ್ಷಿಸಿ, ಅವುಗಳಲ್ಲಿರುವ ಮಾಲಿನ್ಯಗಳನ್ನು ತೊಳೆಯುವುದಕ್ಕಾಗಿ ನಿರ್ಮಲವಾದ, ಪ್ರಕಾಶಕವಾದ, ದುಃಖ ರಹಿತವಾದ ಮತ್ತು ಜ್ಞಾನ ಸ್ವರೂಪವಾದ ಸಾತ್ವಿಕ ಭಾವನೆಗಳನ್ನು ತನ್ನ ಅಂತಃಕರಣದಲ್ಲಿ ವೃದ್ಧಿಪಡಿಸುವನು ಮತ್ತು ತನ್ನ ದಿನಚರ್ಯೆಯಲ್ಲಿ ಮಾನಸವಾಕ್ ಪ್ರವೃತ್ತಿಗಳನ್ನು ಸಾತ್ವಿಕವಾಗಿ ಉಪಯೋಗಿಸುವನು. ಅಂದರೆ ತನ್ನಲ್ಲಿ ವಾಸಮಾಡುತ್ತಿದ್ದ ಅಹಂಕಾರ ಮಮಕಾರ ಭಾವನೆಗಳನ್ನು ಕಿತ್ತೊಗೆದು ಭಗವಂತನಲ್ಲಿ ಭಕ್ತಿಯಿಂದ ಕೂಡಿದ ಪರಾರ್ಥಭಾವನೆಗಳಲ್ಲೂ ಪ್ರವೃತ್ತಿಗಳಲ್ಲೂ ನಿರತನಾಗುವನು. ಯಾವ ಅಂತಃಕರಣವು ತಮೋರಜೋಗುಣಗಳಿಂದ ಕೂಡಿದ್ದಾಗ ನಮ್ಮನ್ನು ಸಂಸಾರ ಚಕ್ರದಲ್ಲಿ ನರಳುವ ಹಾಗೆ ಬಂಧಿಸುತ್ತದೆಯೋ ಅದೇ ಅಂತಃಕರಣವು ವೈರಾಗ್ಯ ಮತ್ತು ಬ್ರಹ್ಮಚರ್ಯದ ಆಧಾರದ ಮೇಲೆ ಪರಾರ್ಥಸಾತ್ವಿಕ ಮನೋವ್ಯಾಪಾರಗಳಿಂದ ಕೂಡಿದ್ದಾಗಿ ಪರಿವರ್ತನೆಯಾದರೆ ಅದು ದಿವ್ಯವಾಗುತ್ತದೆ ಮತ್ತು ಭಗವಂತನ ಪವಿತ್ರ ದೇವಾಲಯವಾಗುತ್ತದೆ

ಶಿಷ್ಯ:—ಪರಮ ಭಕ್ತಿಯನ್ನು ಪಡೆದಿರುವ ಭಾಗವದ್ಭಕ್ತನು ತನ್ನ ಕುಟುಂಬದವರನ್ನು ಹೇಗೆ ಭಾವಿಸುತ್ತಾನೆ, ಅನುಭವಿಸುತ್ತಾನೆ ಮತ್ತು ಉಪಯೋಗಿಸುತ್ತಾನೆ?

ಗುರು:---ಪ್ರಾಕೃತ ಶರೀರ ಸಂಬಂಧವು ಆತ್ಮನಿಗೆ ಹೇಗೆ ಕರ್ಮದಿಂದ ಉಂಟಾಗುತ್ತದೆಯೋ ಹಾಗೆಯೇ ಕರ್ಮ ಸಂಬಂಧದಿಂದಲೇ ಮನುಷ್ಯನಿಗೆ ಕುಟುಂಬದವರ ಸಂಬಂಧವೂ ಉಂಟಾಗುತ್ತದೆಂದು ಭಗವದ್ಭಕ್ತನು ಮೊದಲು ತಿಳಿಯುವನು. ನಮ್ಮ ಮನಸ್ಸಿನಲ್ಲಿ ರಜೋಗುಣಗಳೂ ಮತ್ತು ತಮೋಗುಣಗಳೂ ಪ್ರಾಬಲ್ಯವನ್ನು ಪಡೆದಿದ್ದಾಗ ನಾವು ನಮ್ಮ ಕುಟುಂಬದವರಲ್ಲಿ ಅಹಂಕಾರ ಮಮಕಾರ ಅಭಿಮಾನಗಳನ್ನು ವೃದ್ಧಿಪಡಿಸಿ ಅವರಲ್ಲಿ ಕಾಮಕ್ರೋಧ ಲೋಭಮೋಹ ಮದಮಾತ್ಸರ್ಯ ಭಯ ಶೋಕ ಸಂತೋಷಾದಿಗಳನ್ನು ತೋರಿಸುವೆವು. ಆದರೆ ಭಕ್ತನು ತನ್ನ ಮನಸ್ಸಿನಲ್ಲಿ ಶುದ್ಧ ಸತ್ವಗುಣವನ್ನು ಬೆಳೆಸಿರುವುದರಿಂದ ಭಗವಂತನೇ ತನ್ನ ಕುಟುಂಬದವರ ಯೋಗಕ್ಷೇಮಗಳನ್ನು ನಿಜವಾಗಿ ನೋಡಿಕೊಳ್ಳುವನೆಂದು ದೃಢವಾಗಿ ನಂಬುವನು ಮತ್ತು ಕುಟುಂಬದವರಿಂದ ತನಗೆ ಶಾಶ್ವತವಾದ ಯಾವ ಪ್ರಯೋಜನವೂ ನಿಜವಾಗಿ ಲಭಿಸುವುದಿಲ್ಲವೆಂಬುದನ್ನು ತಿಳಿಯುವನು. ಆದುದರಿಂದಲೇ ಈತನು ಭಗವಂತನನ್ನೇ ತನ್ನ ಮತ್ತು ಕುಟುಂಬದವರ ತಾಯಿ, ತಂದೆ, ಮಕ್ಕಳು, ಬಂಧುಗಳು ಸ್ನೇಹಿ

ಕರು ಎಂದು ಸಮ್ಮಾನಿಸುತ್ತಿರುವನು. ಭಕ್ತನು ಹೇಗೆ ತನ್ನನ್ನು ಆತ್ಮನೆಂದೂ ಮತ್ತು ಅಂತಃಕರಣ ಶರೀರಗಳು ಅವರ ಉಪಕರಣಗಳೆಂದೂ ಭಾವಿಸುವನೋ ಹಾಗೆಯೇ ಅವನು ತನ್ನ ಹೆಂಡತಿ ಮಕ್ಕಳು ಹತ್ತಿರದ ಬಂಧುಗಳು ಸ್ನೇಹಿತರು ನಿಜವಾಗಿ ಆತ್ಮ ಸ್ವರೂಪರೆಂದೂ ಮತ್ತು ಅವರ ಅಂತಃಕರಣ ದೇಹಗಳು ಅವರ ಆತ್ಮಗಳ ಉಪಕರಣಗಳೆಂದೂ ಭಾವಿಸುವನು. ಈ ಕಾರಣದಿಂದ ಅವನು ಅವರ ಶರೀರ ಮನಸ್ಸುಗಳಿಗೆ ಸೌಖ್ಯವನ್ನುಂಟುಮಾಡುವುದು ಮಾತ್ರವಲ್ಲದೆ ಮುಖ್ಯವಾಗಿ ಅವರ ಆತ್ಮದ ಶ್ರೇಯಸ್ಸಿಗಾಗಿ ತನ್ನ ಕೈಲಾದಷ್ಟು ಸಹಾಯ ಮಾಡುವನು. ಅಲ್ಲದೆ, ಅವರೆಲ್ಲರಲ್ಲಿಯೂ ಭಗವಂತನು ಅಂತರಾತ್ಮನಾಗಿರುವನೆಂದೂ ಮತ್ತು ಅವರೆಲ್ಲರೂ ವಿಶಿಷ್ಟ ಪ್ರಕೃತಿ ಸ್ವರೂಪರೆಂದೂ ತಿಳಿದು ಅವರನ್ನು ಸ್ವಾರ್ಥತೆಯಿಂದ ತನ್ನ ಸುಖಕ್ಕೆ ಮಾತ್ರ ಉಪಯೋಗಿಸಿಕೊಳ್ಳದೆ ಪರಾರ್ಥಭಾವನೆಯಿಂದ ಅವರ ಸುಖವನ್ನೂ ಶ್ರೇಯಸ್ಸನ್ನೂ ವೃದ್ಧಿಪಡಿಸುವ ಕಾರ್ಯಗಳನ್ನು ಭಗವತ್ಕೈಂಕರ್ಯ ರೂಪವಾಗಿ ಕೈಗೊಳ್ಳುವನು. ಅವರುಗಳಿಗೆ ಆಯುರಾರೋಗ್ಯ ಐಶ್ವರ್ಯ ಅಧಿಕಾರ ಕೀರ್ತಿಗಳುಂಟಾದಾಗ ಅವು ಅಂತರ್ಯಾಮಿಯಾದ ಭಗವಂತನ ಕೃಪೆಯಿಂದುಂಟಾದುವೆಂದು ನಂಬಿ ನಾರಾಯಣನನ್ನು ಸ್ಮರಿಸಿ ಅವನಿಗೆ ಕೃತಜ್ಞತೆಯನ್ನು ಅನುಸಂಧಾನ ಮಾಡುವನು. ಒಂದು ವೇಳೆ ಅವರಿಗೆ ವಿಪತ್ತುಗಳು, ಕಷ್ಟಗಳು ಮತ್ತು ರೋಗಗಳು ಸಂಭವಿಸಿದರೆ ಪರಮಾತ್ಮನಾದ ವಿಷ್ಣುವನ್ನು ಸ್ಮರಿಸಿ ಅವನು ಅವರ ಯೋಗಕ್ಷೇಮಗಳನ್ನು ಖಂಡಿತವಾಗಿಯೂ ನೋಡಿಕೊಳ್ಳುವನು ಎಂದು ಮನನ ಮಾಡುತ್ತಲೇ ಇರುವನು. ಒಟ್ಟಿನಲ್ಲಿ ಹೇಳುವುದಾದರೆ ಭಗವದ್ಭಕ್ತನು ಕುಟುಂಬದವರನ್ನು ತನ್ನ ಕುಟುಂಬವೆಂದು ಭಾವಿಸುವುದಿಲ್ಲ; ಅದು ಭಗವತ್ಕುಟುಂಬವು ಎಂಬ ದೃಢವಾದ ಭಾವನೆಯನ್ನು ಬೆಳೆಸುತ್ತಾ ಕುಟುಂಬದವರಿಗೆ ತನ್ನ ಕೈಲಾದ ಸಹಾಯವನ್ನು ಭಗವತ್ಕೈಂಕರ್ಯ ರೂಪವಾಗಿ ಮಾಡುತ್ತಲೇ ಇರುವನು. ಇಲ್ಲಿ ಒಂದು ವಿಚಾರವನ್ನು ಸ್ಮರಿಸಬಹುದು: ಭಕ್ತನು ಕುಟುಂಬವು ಭಗವಂತನ ವ್ಯಕ್ತಿ ಸ್ವರೂಪವಾದ ಸಮಾಜಕ್ಕೆ ತಳಹದಿಯು ಎಂಬುದನ್ನು ತಿಳಿದು ಕುಟುಂಬದ ಆಸ್ತಿಯ ಕೆಲವು ಭಾಗವನ್ನು ಭಗವತ್ಕೈಂಕರ್ಯ ಭಾವನೆಯಿಂದ ಸಮಾಜ ಕಲ್ಯಾಣಕ್ಕೆ ಉಪಯೋಗಿಸುವುದಲ್ಲದೆ ಕುಟುಂಬದವರೆಲ್ಲರನ್ನೂ ಸಮಾಜ ಸೇವಾ ಕಾರ್ಯಗಳಲ್ಲಿ ನಿರತರಾಗುವ ಹಾಗೆ ಪ್ರೇರೇಪಿಸುತ್ತಲೇ ಇರುವನು.

**ಶಿಷ್ಯ**:— ಪರಮಭಕ್ತಿಯನ್ನು ಪಡೆದಿರುವ ಭಗವದ್ಭಕ್ತನು ತನ್ನ ಜೀವನಾಂಗದಲ್ಲಿ ಮತ್ತು ಮನುಷ್ಯ ಸಮಾಜದಲ್ಲಿ ಹೇಗೆ ಪ್ರೀತಿಯುಳ್ಳವನಾಗಿ ಕಾರ್ಯಗಳನ್ನು ನಡೆಸುತ್ತಾನೆ ಮತ್ತು ಸಮಾಜವನ್ನು ಹೇಗೆ ಭಾವಿಸುತ್ತಾನೆ?

**ಗುರು**:— "ಭಗವದ್ಭಕ್ತನು ಸಮಾಜದಲ್ಲಿ ವರ್ಣಾಶ್ರಮ ಧರ್ಮವನ್ನು ಭಗವತ್ಕೈಂಕರ್ಯ ರೂಪವಾಗಿ ಅನುಷ್ಠಿಸಬೇಕು" ಎಂಬ ಉಪದೇಶವು ಪೂರ್ವಕಾಲದಿಂದ ನಮ್ಮಲ್ಲಿ ಬಳಕೆಯಲ್ಲಿದೆ. ಇದರ ಭಾವವನ್ನು ತಿಳಿಯಲು ಪ್ರಯತ್ನಿಸೋಣ: ಶರೀರ

ಮತ್ತು ಕುಟುಂಬ ಸಂಬಂಧಗಳು ಹೇಗೆ ಮನುಷ್ಯನಿಗೆ ಕರ್ಮದಿಂದುಂಟಾಗಿದೆಯೋ ಹಾಗೆಯೇ ಅವನಿಗೆ ತನ್ನ ಜನಾಂಗದ ಮತ್ತು ಒಟ್ಟು ಮನುಷ್ಯ ಸಮಾಜದ ಸಂಬಂಧಗಳೂ ಕೂಡ ಕರ್ಮದಿಂದಲೇ ಉಂಟಾಗುವುವು ಎಂದು ನೋಡಲು ತಿಳಿಯಬೇಕು. ಭಗವಂತನೇ ಸಮಾಜದಲ್ಲಿರುವವರೆಲ್ಲರ ಅಂತರ್ಯಾಮಿಯು, ಸಮಾಜವೇ ಭಗವಂತನ ವಿಶಾಲವಾದ ದೇವಾಲಯವು ಮತ್ತು ಸಮಾಜ ಧರ್ಮಗಳನ್ನು ಪರಿಪಾಲಿಸುವ ಸರ್ಕಾರವೇ ಭಗವಂತನ ವ್ಯಕ್ತಮೂರ್ತಿಯು ಎಂಬ ಭಾವನೆಗಳ ಆಧಾರದಿಂದ, ಭಗವದ್ಭಕ್ತನು ಭಗವತ್ಕೈಂಕರ್ಯ ಭಾವನೆಯಿಂದ ಸ್ವಾರ್ಥತೆಯನ್ನು ಬಿಟ್ಟು ಪರಾರ್ಥವಾಗಿ ತನ್ನ ಜನಾಂಗಕ್ಕೂ, ಸರ್ಕಾರಕ್ಕೂ ಮತ್ತು ಸಮಾಜಕ್ಕೂ ತನ್ನ ಶರೀರೇಂದ್ರಿಯ ಮನ ಬುದ್ಧಿಗಳಲ್ಲಿರುವ ಶಕ್ತಿಗಳನ್ನು ಉಪಯೋಗಿಸುತ್ತಾ ತನ್ನ ಭಾಗಕ್ಕೆ ಬಂದಿರುವ ಸೇವಾ ಕಾರ್ಯಗಳನ್ನು ಮಾಡುತ್ತಲೇ ಇರುವನು. ಮನುಷ್ಯ ಸಮಾಜವೂ ಮತ್ತು ಜನಾಂಗವೂ ಉತ್ತಮ ಸ್ಥಿತಿಯಲ್ಲಿದ್ದರೆ ಭಗವಂತನನ್ನು ಸ್ತೋತ್ರ ಮಾಡುತ್ತಾ ತನ್ನ ಕೃತಜ್ಞತೆಯನ್ನು ಅವನಿಗೆ ಸಮರ್ಪಿಸುವನು. ಜನಾಂಗವಾಗಲೀ ಮನುಷ್ಯ ಸಮಾಜವಾಗಲೀ ಹೀನಸ್ಥಿತಿಯಲ್ಲಿದ್ದ ವೇಳೆಗಳಲ್ಲೆಲ್ಲಾ ಭಗವಂತನನ್ನು ಧ್ಯಾನಮಾಡಿ ಸಮಾಜದಲ್ಲಿ ಅಧರ್ಮವು ನಿರ್ಮೂಲವಾಗುವುದಕ್ಕೂ ಮತ್ತು ಧರ್ಮದ ಉದ್ಧಾರಕ್ಕೂ ಪುನಃ ಭಗವಂತನ ಅವತಾರವನ್ನು ಎದುರು ನೋಡುತ್ತಿರುವನು. ಒಟ್ಟಿನಲ್ಲಿ ಹೇಳುವುದಾದರೆ, ತನ್ನಲ್ಲಿ ಪರಮ ಸತ್ಯ ಸ್ವರೂಪನಾಗಿರುವ ಭಗವಂತನೇ ಸಮಾಜದಲ್ಲಿರುವವರೆಲ್ಲರಲ್ಲಿಯೂ ಪರಮ ಸತ್ಯ ಸ್ವರೂಪನಾಗಿರುವನು ಎಂಬ ಭಾವನೆಯನ್ನು ಹೃದಯದಲ್ಲಿ ಬೆಳೆಸಿ ಭಗವದ್ಭಕ್ತನು ತನ್ನ ಯೋಗ ಕ್ಷೇಮಕ್ಕೆ ದುಡಿಯುವ ಹಾಗೆ ಸಮಾಜದ, ಸಮಾಜದವರ ಮತ್ತು ಸಮಾಜ ಸರ್ಕಾರದ ಯೋಗಕ್ಷೇಮಕ್ಕಾಗಿ ಸೇವೆ ಮಾಡುತ್ತಲೇ ಇರುವನು.

## ಭಗವದ್ಭಕ್ತನ ಆತ್ಮ ಪರಮಾತ್ಮ ಅನುಭವಗಳು

ಶಿಷ್ಯ:— ಪರಮಭಕ್ತಿಯನ್ನು ಪಡೆದ ಭಗವದ್ಭಕ್ತನು ತನ್ನ ವೈಯಕ್ತಿಕ ಆತ್ಮ ಸ್ವರೂಪವನ್ನು ಹೇಗೆ ಭಾವಿಸುತ್ತಾನೆ ಮತ್ತು ಮನನ ಮಾಡುತ್ತಾನೆ?

ಗುರು:— ತನ್ನನ್ನು ತಾನೇ ಯಾವಾಗಲೂ ತಿಳಿದುಕೊಳ್ಳುತ್ತಿರುವ ಧರ್ಮಭೂತಜ್ಞಾನದ ಸಹಾಯದಿಂದ ಜಗತ್ತೆಲ್ಲವನ್ನೂ ತಿಳಿಯುವ ಮತ್ತು ಜ್ಞಾನಾನಂದ ಸ್ವರೂಪನಾಗಿರುವ ಆತ್ಮಸ್ವರೂಪನೆಂದು ಭಗವದ್ಭಕ್ತನು ತನ್ನನ್ನು ತಿಳಿದಿರುವುದರಿಂದ, ಅವನು "ನಾನು ಶರೀರವಲ್ಲ, ಇಂದ್ರಿಯಗಳಲ್ಲ, ಮನಸ್ಸಲ್ಲ, ಬುದ್ಧಿಯಲ್ಲ, ಅಹಂಕಾರವಲ್ಲ; ಇವುಗಳೆಲ್ಲವನ್ನೂ ಉಪಯೋಗಿಸುವವನು" ಎಂದು ಮನನ ಮಾಡುತ್ತಲೇ ಇರುವನು. ಆದರೆ ಈಗ ಪಾಪ ವಾಸನಾತ್ಮಕ ಕರ್ಮದಿಂದ ತನ್ನ ಧರ್ಮ

ಭೂತಜ್ಞಾನವು ಸಂಕುಚಿತವಾಗಿ ಅಂತಃಕರಣದ ಅಥವ ಇಂದ್ರಿಯ ಮನಬುದ್ಧಿ ಅಹಂಕಾರಗಳ ಅಧೀನಕ್ಕೆ ಒಳಪಟ್ಟು ತಾನು ಜನ್ಮ ಜನ್ಮಗಳನ್ನು ಚಕ್ರಾಕಾರವಾಗಿ ಪಡೆಯುತ್ತಿರುವುದನ್ನು ಗಮನಿಸಿ ಇವುಗಳ ಸಂಬಂಧದಿಂದ ಮೋಕ್ಷ ಪಡೆಯುವುದೇ ತನ್ನ ಸಹಜ ಧರ್ಮವೆಂದು ಭಗವದ್ಭಕ್ತನು ದೃಢ ಸಂಕಲ್ಪಮಾಡುವನು. ಹೀಗೆ ಆತ್ಮಾನಂದ ಅಥವ ಕೈವಲ್ಯಮೋಕ್ಷವನ್ನು ಪಡೆಯುವುದಕ್ಕಾಗಿ ಅಷ್ಟಾಂಗಯೋಗದ ಅಭ್ಯಾಸಗಳನ್ನು ಫಲಾಪೇಕ್ಷರಹಿತವಾಗಿ ಸಂತೋಷದಿಂದ ಆದಷ್ಟು ಮಟ್ಟಿಗೆ ಮಾಡುತ್ತಾ ತನ್ನ ಆತ್ಮಸ್ವರೂಪವನ್ನು ಭಗವದ್ಗೀತೆಯು ವಿವರಿಸಿರುವ ರೀತಿಯಲ್ಲಿ ಅನುಸಂಧಾನ ಮಾಡುವನು. "ನಾನು ನಾಶವಿಲ್ಲದವನು; ನಿತ್ಯನು, ಅಪ್ರಮೇಯನು ಅಥವ ಜ್ಞಾನಕ್ಕೆ ವಿಷಯವಲ್ಲದವನು, ಹುಟ್ಟುವನಲ್ಲ, ಸಾಯುವನಲ್ಲ, ಒಂದು ಕಾಲದಲ್ಲಿದ್ದು ನಾಶವಾಗಿ ಪುನಃ ಉಂಟಾಗುವನಲ್ಲ, ನಿರವಯವನು, ಪುರಾಣನು, ಶಾಶ್ವತನು, ಕಾಣಲ್ಪಡದವನು, ಯೋಚಿಸಲ್ಪಡಲಾಗದವನು, ವಿಕಾರವನ್ನು ಹೊಂದದವನು. ಆತ್ಮನಾದ ನನ್ನನ್ನು ಆಯುಧಗಳು ಕತ್ತರಿಸಲಾರವು, ಬೆಂಕಿಯು ಸುಡಲಾರದು, ನೀರು ನೆನೆಸಲಾರದು ಮತ್ತು ಗಾಳಿಯು ಒಣಗಿಸಲಾರದು. ನಾನು ಸ್ಥಾಣುವು, ಅಚಲನು ಮತ್ತು ಸನಾತನನು." ಭಗವತ್ಕೃಪೆಯಿಂದ ಆತ್ಮಸಾಕ್ಷಾತ್ಕಾರವು ಸ್ವಲ್ಪ ಸ್ವಲ್ಪ ಬೆಳೆಯುತ್ತಿದ್ದ ಹಾಗೆಯೇ ಭಕ್ತನ ಹೃದಯದಲ್ಲಿ ಕ್ರಮೇಣ ಅದ್ಭುತವಾದ ಹೊಸ ಅನುಭವ ಉಂಟಾಗುವುದು. ಆತ್ಮನಾದ ತನ್ನಲ್ಲಿ ಪರಮಾತ್ಮನು ಅಂತರ್ಯಾಮಿಯಾಗಿರುವನೆಂದೂ, ಪ್ರಕೃತಿಯ ಮತ್ತು ದೇಹದ ಸಂಬಂಧಗಳಿಂದ ತಾನು ಸ್ವತಂತ್ರನಾದರೂ ಪರಮಾತ್ಮನಿಗೆ ಸಂಪೂರ್ಣವಾಗಿ ಪರತಂತ್ರನೆಂದೂ ಮತ್ತು ವೈಯಕ್ತಿಕ ಆತ್ಮಾನಂದಕ್ಕಿಂತ ಭಗವಂತನ ಸಾಕ್ಷಾತ್ಕಾರದ ಆನಂದವು ಉತ್ತಮವಾದುದೆಂದೂ ಆಗ ಅವನಿಗೆ ಜ್ಞಾನೋದಯವಾಗುತ್ತದೆ. ಇನ್ನೇನು, ಹೇಗೆ ಮನುಷ್ಯ ಶರೀರವು ಜೀವಾತ್ಮನಿಂದ ಧರಿಸಲ್ಪಟ್ಟು, ಅವನ ನಿಯಮಕ್ಕೆ ಒಳಪಟ್ಟು ಅವನಿಗೆ ಭೋಗವನ್ನುಂಟುಮಾಡುತ್ತದೆಯೋ ಹಾಗೆಯೇ ತನ್ನ ವೈಯಕ್ತಿಕ ಜೀವಾತ್ಮನೂ ಕೂಡ ಪರಮಾತ್ಮನ ಶರೀರವಾಗಿ, ಅವನಿಂದ ಧರಿಸಲ್ಪಟ್ಟು, ಅವನ ನಿಯಮಕ್ಕೆ ಒಳಪಟ್ಟು, ಅವನಿಗೆ ಭೋಗವನ್ನುಂಟುಮಾಡುತ್ತದೆ-ಎಂದು ಭಕ್ತನು ದೃಢವಾಗಿ ಸಂಕಲ್ಪ ಮಾಡುವನು.

ಶಿಷ್ಯ:—ಕೊನೆಯದಾಗಿ ಪರಮಭಕ್ತಿಯನ್ನು ಪಡೆದ ಭಕ್ತನು ತಾನು ಜೀವಿಸಿರುವರೆಗೂ ಭಗವಂತನನ್ನು ಹೇಗೆ ಅನುಭವಿಸುವನು ಎಂಬ ವಿಚಾರವನ್ನು ತಿಳಿಯಪಡಿಸಿ.

ಗುರು:—ಭಗವದ್ಭಕ್ತರಾದ ನಮ್ಮ ಪೂರ್ವಾಚಾರ್ಯರುಗಳು ಪರಮಾತ್ಮನ ಸ್ವರೂಪವನ್ನು ಅರ್ಚಾಸ್ವರೂಪ, ವಿಭವಸ್ವರೂಪ, ಅಂತರ್ಯಾಮಿ ಸ್ವರೂಪ, ವ್ಯೂಹಸ್ವರೂಪ ಪರಸ್ವರೂಪ, ವಿಶ್ವರೂಪ ಸ್ವರೂಪ ಮತ್ತು ಜಗತ್ತಿಗೆ ಸಂಬಂಧಪಡದ ಅವನ ಅವ್ಯಕ್ತ ಸ್ವರೂಪ ಎಂದು ಏಳು ಪ್ರಕಾರವಾಗಿ ವರ್ಣಿಸಿರುವರು. (ಪಟಾಲೆ ಹತ್ತು) ಭಗವದ್ಭಕ್ತನು ತನ್ನ ಮನಸ್ಸನ್ನು ಈ ಸ್ವರೂಪಗಳಿಗೆ ಸಂಬಂಧಪಟ್ಟ ಕರ್ಮಕ್ಕೆ ಒಳ

ಪಡೆದ ಮತ್ತು ಶುದ್ಧ ಸತ್ವದಿಂದ ಕೂಡಿದ ದಿವ್ಯ ಮಂಗಳ ವಿಗ್ರಹಗಳಲ್ಲಿ ಹೇಗೆ. ಸದಾ ಕಾಲವೆಲ್ಲಾ ನಿಲ್ಲಿಸಲು ಪ್ರಯತ್ನ ಮಾಡುವನು? ದೇವಾಲಯಗಳಲ್ಲಿರುವ ವಿಗ್ರಹಗಳನ್ನೂ, ಸಮುದ್ರ ಬೆಟ್ಟ ಸೂರ್ಯ ನದಿ ನಕ್ಷತ್ರ ಗಿಡ ಮೊದಲಾದ ಕೆಲವು ಅದ್ಭುತ ವಸ್ತುಗಳನ್ನೂ ಮತ್ತು ಮಹಾತ್ಮರಾದ ಮನುಷ್ಯರನ್ನೂ ಆಕಾರಸ್ವರೂಪವಾಗಿ ಭಾವಿಸಿ ಭಕ್ತರೊಡನೆ ಸೇರಿ ಸೇವೆ ಮಾಡುತ್ತಾ ಅವುಗಳಿಗೆ ಸಂತೋಷದಿಂದ ಪೂಜೆ ಮಾಡುವನು ಮತ್ತು ಉತ್ಸವಗಳನ್ನು ನಡೆಸುವನು. ಲೋಕದಲ್ಲಿ ಅಧರ್ಮವನ್ನು ನಿರ್ಮೂಲ ಮಾಡಿ ಧರ್ಮವನ್ನು ಸ್ಥಾಪಿಸುವುದಕ್ಕಾಗಿಯೂ ಮತ್ತು ಭಕ್ತರು ತನ್ನೊಡನೆ ಇದ್ದು ಅವರ ಇಂದ್ರಿಯಗಳಿಂದ ತನ್ನನ್ನು ಅನುಭವಿಸುವುದಕ್ಕಾಗಿಯೂ ಹಿಂದಿನ ಕಾಲದಲ್ಲಿ ಭಗವಂತನೇ ಸ್ವೀಕರಿಸಿದ ರಾಮಕೃಷ್ಣಾದಿವಿಭವ ಸ್ವರೂಪಗಳ ಉತ್ತಮ ಗುಣಗಳನ್ನೂ ಮತ್ತು ಕಾರ್ಯಗಳನ್ನೂ ಅಡಿಗಡಿಗೆ ಗುರುಗಳಿಂದಲೇ ಶ್ರವಣಮಾಡುತ್ತಾ, ಅಧ್ಯಯನ ಮಾಡುತ್ತಾ ಮತ್ತು ಮನನ ಮಾಡುತ್ತಾ ಇತರ ಭಕ್ತರೊಡನೆ ಕಲೆತು ಅವುಗಳ ಸಂಬಂಧವಾಗಿ ಕೀರ್ತನೆ ಮಾಡುವನು, ನರ್ತನ ಮಾಡುವನು, ಚಿತ್ರಗಳನ್ನು ಬರೆಯುವನು ಮತ್ತು ಕವನ ಮಾಡುವನು. ಪ್ರತಿಯೊಬ್ಬನ ಹೃದಯದಲ್ಲಿಯೂ ಅಂತರ್ಯಾಮಿಯಾಗಿರುವ ದಿವ್ಯ ಮಂಗಳ ವಿಗ್ರಹ ಸ್ವರೂಪವನ್ನು ಸಾಕ್ಷಾತ್ಕರಿಸಲು ತಪಸ್ಸು ಮಾಡುತ್ತಾ, ತನ್ನ ಹೃದಯದಲ್ಲಿ ಅಥವ ಯಾವುದಾದರು ಒಂದು ಅದ್ಭುತ ವಸ್ತುವಿನಲ್ಲಿ ಆ ಮೂರ್ತಿಯನ್ನು ಧ್ಯಾನ ಮಾಡುವನು. ಬ್ರಹ್ಮವಿಷ್ಣು ಮಹೇಶ್ವರ ಎಂಬ ತ್ರಿಮೂರ್ತಿಗಳಲ್ಲಿ ವಾಸುದೇವ ಸಂಕರ್ಷಣ ಅನಿರುದ್ಧ ಪ್ರದ್ಯುಮ್ನ ಎಂಬ ವ್ಯೂಹ ಸ್ವರೂಪಗಳಲ್ಲಿ ಒಂದನ್ನೋ ಅಥವ ಅಧಿಕವನ್ನೋ ಆರಿಸಿಕೊಂಡು ಅವುಗಳನ್ನು ಉಪಾಸನೆ ಮಾಡುವನು ಮತ್ತು ಭಜನೆಮಾಡುವನು. ಮುಕ್ತಿಯನ್ನು ಪಡೆದವರಿಗೂ, ಸಂಸಾರಕ್ಕೆ ಬಾರದ ನಿತ್ಯರಿಗೂ ಪರಮ ಪದದಲ್ಲಿ ಶಾಶ್ವತವಾದ ಆನಂದವನ್ನು ಕೊಡುತ್ತಿರುವ ಪರ ಸ್ವರೂಪವನ್ನು ಅನೇಕ ಪ್ರಕಾರವಾಗಿ ಸ್ತೋತ್ರಮಾಡಿ ತನಗೂ ಅವನಿಗೂ ಇರುವ ಸಂಬಂಧಗಳೆಲ್ಲವನ್ನೂ ಭಗವಂತನ ಗಮನಕ್ಕೆ ತರುತ್ತಲೇ ಇರುವನು. ಎಲ್ಲಾ ಕಾಲದಲ್ಲೂ, ಎಲ್ಲಾ ದೇಶದಲ್ಲೂ, ಎಲ್ಲಾ ಪದಾರ್ಥಗಳಲ್ಲೂ, ಅವುಗಳ ಎಲ್ಲಾ ಅವಸ್ಥೆಗಳಲ್ಲೂ, ಎಲ್ಲಾ ಶಕ್ತಿಗಳಲ್ಲೂ, ಎಲ್ಲಾ ಕಾರ್ಯಗಳಲ್ಲೂ ಮತ್ತು ಒಟ್ಟು ಜಗತ್ತಿನಲ್ಲೂ ಅನಂತವಾಗಿ ವ್ಯಾಪಿಸಿರುವ ಭಗವಂತನ ವಿಶ್ವರೂಪವನ್ನು ಸಹಸ್ರನಾಮಗಳ ಮೂಲಕ ಪಾರಾಯಣಮಾಡುತ್ತಲೇ ಇರುವನು. ಕೊನೆಯದಾಗಿ "ನೇತಿ-ನೇತಿ" ಎಂದು ಉಪನಿಷತ್ತುಗಳಲ್ಲಿ ವರ್ಣಿಸಲ್ಪಟ್ಟಿರುವ ಪರಮಾತ್ಮನ ಅವ್ಯಕ್ತ ಸಚ್ಚಿದಾನಂದ ಬ್ರಹ್ಮಸ್ವರೂಪವನ್ನು-"ಅಹಂಬ್ರಹ್ಮಾಸ್ಮಿ"-ಅಂದರೆ ಪರಮಾತ್ಮನೆ ನನ್ನ ಆತ್ಮನು, "ತತ್ತ್ವಮಸಿ" ಅಂದರೆ ನೀನೂ ಅವನನ್ನೇ ಅಂತರಾತ್ಮನನ್ನಾಗಿ ಪಡೆದಿದ್ದೀಯೇ ಮತ್ತು "ಸರ್ವಂ ಖಲ್ವಿದಂ ಬ್ರಹ್ಮ" ಅಂದರೆ ಒಟ್ಟು ಜಗತ್ತೂ ಬ್ರಹ್ಮನ ಆಧಾ

ರಥದ ಮೇಲೆ ನಿಂತು ವಿಶಿಷ್ಟ ಬ್ರಹ್ಮನಾಗಿರುವನು ಎಂಬೀ ಪ್ರಕಾರವಾಗಿ ಸದಾಶ್ರವಣ ಮನನ ಧ್ಯಾನಮಾಡುತ್ತಾ ಭಗವಂತನ ದಿವ್ಯ ಮಂಗಳ ವಿಗ್ರಹಗಳಿಗೂ ಮತ್ತು ಅವನ ವ್ಯಕ್ತ ಸ್ವರೂಪವಾದ ಜಗತ್ತಿನ ಕಲ್ಯಾಣಕ್ಕೂ ಕೈಂಕರ್ಯ ಮಾಡುತ್ತಲೇ ಇರುವನು.

ಇನ್ನೇನು, ಭಗವಂತನ ಕೃಪೆಯಿಂದ ಪರಮಾತ್ಮನ ಸಾಕ್ಷಾತ್ಕಾರವನ್ನು ಎದುರು ನೋಡುತ್ತಿರುವನು.

# ಪುಷ್ಪ ಮೂರು–ಪವಿತ್ರ ಗ್ರಂಥಗಳ ಮಹತ್ವ–

## ಇಸ್ಲಾಂಮತ ಮತ್ತು ಕ್ರೈಸ್ತಮತ

### ವಿಷಯ ಕ್ರಮ


ಪುಟ

ಮಾಲೆ ಹದಿಮೂರು—ಶ್ರೇಷ್ಠ ಧರ್ಮಗಳಿಗೆ ಆಧಾರವಾದ ಪವಿತ್ರ ಗ್ರಂಥಗಳ ಮಹತ್ವ (ಭಾಗ ಒಂದು.)

76 ಹಿಂದೂ, ಬೌದ್ಧ, ಕ್ರೈಸ್ತ, ಇಸ್ಲಾಂ, ಪಾರ್ಸೀ ಮತಗಳ ಪವಿತ್ರ ಗ್ರಂಥಗಳ ವಿಚಾರ. 1,2,3,5

77 ಪವಿತ್ರ ಗ್ರಂಥಗಳಿಗೆ ಏಕೆ ಜನರು ಹೆಚ್ಚು ಮರ್ಯಾದೆಯನ್ನು ತೋರಿಸುವರು ? 4-5

78 ಪವಿತ್ರ ಗ್ರಂಥಗಳಲ್ಲಿ ಬೇರೆ ಗ್ರಂಥಗಳಲ್ಲಿ ಇಲ್ಲದ ಯಾವ ವಿಶೇಷ ವಿಷಯಗಳಿವೆ. 6-7

79 ಸಮಾಜದ ಮುಖಂಡರು ಪವಿತ್ರ ಗ್ರಂಥಗಳನ್ನು ಹೇಗೆ ಕೆಲವುವೇಳೆ ಸ್ವಾರ್ಥಕ್ಕಾಗಿ ಉಪಯೋಗಿಸುತ್ತಾರೆ ?. 7-8

ಮಾಲೆ ಹದಿನಾಲ್ಕು -ಶ್ರೇಷ್ಠ ಧರ್ಮಗಳಿಗೆ ಆಧಾರವಾದ ಪವಿತ್ರ ಗ್ರಂಥಗಳ ಮಹತ್ವ–(ಭಾಗ ಎರಡು.)

80 ಪವಿತ್ರ ಗ್ರಂಥಗಳ ದುರುಪಯೋಗದಿಂದ ಸಮಾಜದಲ್ಲಿ ಕಂಡು ಬರುವ ದೋಷಗಳು. 1-2-3

81 ಎಲ್ಲಾ ಪವಿತ್ರ ಗ್ರಂಥಗಳಲ್ಲಿಯೂ ಸಾಧಾರಣವಾಗಿ ಬೋಧಿಸಿರುವ ಪವಿತ್ರ ಉಪದೇಶಗಳು. 4-5

82 ಪವಿತ್ರ ಗ್ರಂಥಗಳನ್ನು ಲೋಕಕ್ಕೆ ಪ್ರಚಾರಪಡಿಸಿದ ಅವತಾರ ಪುರುಷರ ದಿವ್ಯಜ್ಞಾನದ ಸ್ವರೂಪ ಲಕ್ಷಣಗಳು. 6-7

83 ಪವಿತ್ರ ಗ್ರಂಥಗಳ ಪ್ರಚಾರ ಮತ್ತು ವ್ಯಾಸಂಗದಿಂದ ಲೋಕದಲ್ಲಿ ನಾಗರಿಕತೆಯು ಹೇಗೆ ಮುಂದುವರಿದಿದೆ. 7-8

ಮಾಲೆ ಒಂದು—ವಿಶ್ವಶಾಂತಿಗಾಗಿ ಶ್ರೇಷ್ಠ (ಮತ) ಧರ್ಮಗಳ ಸಾರಾಂಶಗಳನ್ನು ಲೋಕದ ಜನರು ತಿಳಿದುಕೊಳ್ಳಬೇಕು.

84 ಇನ್ನೊಂದು ಪ್ರಪಂಚಯುದ್ಧವು ನಡೆಯಕೂಡದು. 1-2-3

85 ಯುದ್ಧಗಳನ್ನು ತಪ್ಪಿಸಲು ಉತ್ತಮ ಉಪಾಯ. 3-4

86 ಮತಧರ್ಮಗಳ ಪ್ರಚಾರದಿಂದ ಹಾನಿಯಾಗಲಿಲ್ಲವೆ ? 5

87 ಮತಧರ್ಮಗಳ ನವೀನ ಪ್ರಚಾರ ಕ್ರಮ. 6-7

88 ತರ್ಕಜ್ಞಾನ ಮತ್ತು ಮತಧರ್ಮ. 7-8

| | | ಪುಟ |
|---|---|---|
| | **ವಾರ ಹದಿನೇಳು—ಇಸ್ಲಾಂ ಧರ್ಮದ ತತ್ವಿಕ ಪುರುಷಾರ್ಥಗಳು (ಭಾಗ ಒಂದು.)** | |
| 89 | ಮುಸಲ್ಮಾನರು ಯಾರು? ಅವರು ನಂಬುವ "ಇಸ್ಲಾಂ ಧರ್ಮ"ವೆಂದರೇನು? | 1-2 |
| 90 | ದೈವಜ್ಞರ ಗುಣಗಳು; ಅವರಲ್ಲಿ ಮಹಮ್ಮದ್ ಪೈಗಂಬರರು ಮುಖ್ಯ ಪ್ರವಾದಿಗಳು. | 2-3 |
| 91 | "ಅಲ್-ಕೋರಾನ್" ಮತ್ತು "ಹಾದಿಸ್" ಪವಿತ್ರಗ್ರಂಥಗಳ ವಿಚಾರ ಮತ್ತು ಮಹತ್ವ. | 3-4-5 |
| 92 | ಕೋರಾನಿನಲ್ಲಿ ಭಗವಂತನ ಸ್ವರೂಪ ಗುಣಗಳನ್ನು ಹೇಗೆ ವರ್ಣಿಸಿದೆ? | 5-6 |
| 93 | ಭಗವಂತನು ಹೇಗೆ ಸ್ವರ್ಗವನ್ನು, ಭೂಮಿಯನ್ನು, ದೇವತೆಗಳನ್ನು, ಮನುಷ್ಯರನ್ನು ಸೃಷ್ಟಿಸುತ್ತಾನೆ? | 7-8 |
| | **ವಾರ ಹದಿನೆಂಟು—ಇಸ್ಲಾಂ ಧರ್ಮದ ತತ್ವಿಕ ಪುರುಷಾರ್ಥಗಳು (ಭಾಗ ಎರಡು.)** | |
| 94 | ಮನುಷ್ಯನು ಜೀವಿಸಿರುವಾಗ ಅವನ ಆತ್ಮದ ಸ್ವರೂಪವೇನು? | 1-2 |
| 95 | ಮನುಷ್ಯನು ಮರಣ ಹೊಂದಿದ ಮೇಲೆ ಅವನ ಆತ್ಮದ ಸ್ಥಿತಿಯೇನು? | 2-3 |
| 96 | "ಇಸ್ಲಾಂ ಧರ್ಮವು" ಅಂಗೀಕರಿಸಿರುವ ನೈತಿಕ ಮೂಲತತ್ವಗಳು. | 4-5 |
| 97 | ಇಸ್ಲಾಂ ಧರ್ಮದ ಸತ್ಯಧರ್ಮ ಶ್ರದ್ಧೆಯ ಶಾಸನಗಳು ಅಥವ ತತ್ವಗಳು (Articles of Faith) | 5-6 |
| 98 | ಇಸ್ಲಾಂ ಧರ್ಮದ ಪಂಚಸ್ತಂಭಗಳು ಅಥವ ಆಧಾರವಾದ ಅಭ್ಯಾಸಗಳು (Five Pillars of Islam.) | 7-8 |
| | **ವಾರ ಹತ್ತೊಂಬತ್ತು—ಕ್ರೈಸ್ತ ಧರ್ಮದ ತತ್ವಿಕ ಪುರುಷಾರ್ಥಗಳು ಭಾಗ ಒಂದು.** | |
| 99 | ಕ್ರೈಸ್ತರ ಪವಿತ್ರ ಗ್ರಂಥವಾದ "ಹೋಲಿ ಬೈಬಲ್"ನ ಒಳವಿಭಾಗಗಳು. | 1-2 |
| 100 | ಕ್ರೈಸ್ತರು ಏಕೆ "ಹೋಲಿ ಬೈಬಲ್‌ಗೆ" ಮಹತ್ತಾದ ಗೌರವವನ್ನು ಕೊಡುತ್ತಿರುವರು? | 2-3 |
| 101 | ಏಸುಕ್ರಿಸ್ತರ ಸಾಧಾರಣ ಮತ್ತು ಐತಿಹಾಸಿಕ ಜೀವನ ಚರಿತ್ರೆ; ಅವರ ಉತ್ತಮ ಗುಣಗಳು ಮತ್ತು ಅವತಾರ ರಹಸ್ಯ. | 3-4-5-6 |

ಪುಟ

102 ಕ್ರೈಸ್ತಧರ್ಮದ ಪ್ರಕಾರ ಭಗವಂತನ ಸ್ವರೂಪ ಗುಣಗಳು. 7-8

103 ದೇವದೂತರು; ಅವರಿಗೂ ಭಗವಂತನಿಗೂ ಇರುವ ಸಂಬಂಧ. 8

ನಾಲ್ ಇಪ್ಪತ್ತು—ಕ್ರೈಸ್ತಧರ್ಮದ ತತ್ವಚಿಂತ ಪುರುಷಾರ್ಥಗಳು.—ಭಾಗ ಎರಡು.

104 ಭಗವಂತನು ಭೂಮಿಯನ್ನೂ ಮನುಷ್ಯನನ್ನೂ ಏಕೆ, ಹೇಗೆ ಸೃಷ್ಟಿಸಿದನು? ಪಾಪಗಳು ಭೂಮಿಯಲ್ಲಿ ಹೇಗೆ ಹೆಚ್ಚಿದವು? 1-2

105 ಕ್ರೈಸ್ತಧರ್ಮದ ಪ್ರಕಾರ ಆತ್ಮದ ಸ್ವರೂಪವೇನು? ಮನುಷ್ಯನು ಕಾಲವಾದ ಮೇಲೆ ಆತ್ಮದ ಗತಿಯೇನು? 2-3-4

106 ಕ್ರೈಸ್ತಧರ್ಮದ ಮೂಲ ನೀತಿ ತತ್ವಗಳು.

107 ಭಗವಂತನ ಹತ್ತು ಆಜ್ಞೆಗಳು. 4-5-6

108 ಏಸುಕ್ರಿಸ್ತರು ಬೆಟ್ಟದ ಮೇಲೆ ಮತ್ತು ಇತರ ಕಡೆಗಳಲ್ಲಿ ಬೋಧಿಸಿದ ಉತ್ತಮ ನೀತಿಗಳು. 6-7-8

109 ಮನುಷ್ಯನು ಏಸುಕ್ರಿಸ್ತರಲ್ಲಿ ಏಕೆ, ಹೇಗೆ ಪ್ರಪತ್ತಿಮಾಡಬೇಕು? 8-9

110 ಭಗವಂತನನ್ನು ಪವಿತ್ರವಾದ ರೀತಿಯಲ್ಲಿ ಸ್ತೋತ್ರಮಾಡುವ ಕ್ರಮಗಳಾವವು? 9-10

# ಗೌತಮ ಬುದ್ಧನ ಉಪದೇಶವು

ಗೌತಮ ಬುದ್ಧನು ಜನತೆಗೆ ತಾವು ಹುಟ್ಟು ಸಾವುಗಳ ಚಕ್ರದಿಂದ ಬಿಡುಗಡೆಯನ್ನು ಹೊಂದುವುದಕ್ಕಾಗಿ ಅಂದರೆ ಅವರಿಗೆ ಪುನರ್ಜನ್ಮವುಂಟಾಗದೇ ಇರುವುದಕ್ಕಾಗಿ "ಆರ್ಯ ಅಷ್ಟಾಂಗ ಮಾರ್ಗ"ವನ್ನು ದಿನಚರಿಯಲ್ಲಿ ಆಚರಿಸಬೇಕೆಂದು ಉಪದೇಶ ಮಾಡಿದನು. (1) ಮಾನವ ಜೀವನವು ಹುಟ್ಟಿನಲ್ಲಿ ದುಃಖಮಯವು; ಏಕೆಂದರೆ ಆರೋಗ್ಯ, ಐಶ್ವರ್ಯ, ಅಧಿಕಾರ, ಬಂಧುಗಳ ಸಹವಾಸ, ಕೀರ್ತಿ ಇವುಗಳಿಂದಲೇ ದುಃಖಗಳು ನಿವಾರಣೆಯಾಗುವುದಿಲ್ಲ. ಐಶ್ವರ್ಯವನ್ನೂ, ಅಧಿಕಾರವನ್ನೂ, ಜನಗಳ ಬಲವನ್ನೂ ಪಡೆದ ಮಹಾರಾಜನೂ ಕೂಡ ಹುಟ್ಟು, ಶರೀರಶ್ರಮ, ರೋಗಗಳು, ಯುದ್ಧಗಳು, ಮನಸ್ಸಿನಲ್ಲಿ ಉದಯಿಸುವ [illegible]ಗಳು, ವಾರ್ಧಕ್ಯ, ಹಿಂಸೆ, ಸಾವು, ಪುನರ್ಜನ್ಮ ಎಂಬ ದುಃಖ ಪರಂಪರೆಗಳನ್ನು ಅನುಭವಿಸಲೇಬೇಕು. (2) ಪ್ರಪಂಚದಲ್ಲಿ ಪ್ರತಿಯೊಂದು ಪರಿಣಾಮಕ್ಕೂ ಕಾರಣ ಇರುವುದರಿಂದ ದುಃಖಕ್ಕೂ ಕಾರಣ ಇರಬೇಕು. ದುಃಖದ ಕಾರಣವನ್ನು ನಿರ್ಮೂಲ ಮಾಡಿದ ಮಾತ್ರದಿಂದಲೇ ದುಃಖವು ಹೋಗುತ್ತದೆಯೇ ವಿನಹ ಬೇರೆ ಮಾರ್ಗವಿಲ್ಲ. **ತೃಷ್ಣೆ—ದಾಹ—ಇಂದ್ರಿಯ ಸುಖಪಡುತ್ತಾ ಯಾವಾಗಲೂ ಜೀವಿಸಿರಬೇಕು ಎಂಬ ಆಶೆ**—ಇದೇ ದುಃಖಕ್ಕೆ ನಿಜವಾದ ಕಾರಣವು. ಆದುದರಿಂದ ತೃಷ್ಣೆ-ಆಶೆಗಳನ್ನು ಸಂಪೂರ್ಣವಾಗಿ ನಿರೋಧಿಸಬೇಕು. ಆಗ ನಿರ್ವಾಣವುಂಟಾಗುತ್ತದೆ; ಶಾಂತವಾಗುತ್ತದೆ. (3) "ಅಹಂ-ನಾನು" ಎಂಬ ಅಹಂಕಾರವೇ ಮಹಾ ಮೋಹವು; ತೃಷ್ಣೆಯನ್ನುಂಟುಮಾಡುವ ದೊಡ್ಡ ಪಿಶಾಚಿಯು; ಅದು ಇರುವವರೆಗೂ "ಮಮ-ನನ್ನದು" ಎಂಬ ಮಹಾ ಪಿಶಾಚಿಯು ಆಶೆಗಳನ್ನೂ ವೃದ್ಧಿಮಾಡುತ್ತಲೇ ಇರುವುದು. ನಿರ್ವಾಣವನ್ನು ಪಡೆಯಬೇಕಾದರೆ ಸ್ವಾರ್ಥ ಅಹಂಕಾರ ಮಮಕಾರಗಳನ್ನು ನಾಶಮಾಡಬೇಕು. (4) ಸತ್ಯವಾವುದು ಎಂಬುದನ್ನು ಚೆನ್ನಾಗಿ ವಿಚಾರ ಮಾಡಿ ತಿಳಿದು, ಸತ್ಯಾನ್ವೇಷಣೆಯನ್ನು ಅವಲಂಬಿಸಿದರೆ ಅಹಂಕಾರ ಮಮಕಾರಗಳ ನಾಶವಾಗಿ "ಜೀವಿಕೆ"ಯೆಂಬ ದೀಪವು ಆರಿಹೋಗಿ ಪುನರ್ಜನ್ಮವುಂಟಾಗುವುದಿಲ್ಲ. (5) ಸಾಧಾರಣ ಜನರೆಲ್ಲರೂ ಆಚರಿಸಬೇಕಾದ ಸತ್ಯಾನ್ವೇಷಣೆಯ ಕ್ರಮವಿದು. ಸತ್ಯವನ್ನೇ ನುಡಿಯಬೇಕು; ವ್ಯವಹಾರಗಳಲ್ಲಿ ಪ್ರಾಮಾಣಿಕರಾಗಿರಬೇಕು; ಇತರರೊಡನೆ ಮೃದುವಾದ ಮಾತುಗಳನ್ನಾಡಬೇಕು. ಎಲ್ಲಾ ಪ್ರಾಣಿಗಳಲ್ಲಿಯೂ ಪ್ರೀತಿ ಕರುಣೆ ತೋರಿಸಿ, ಜೀವನದ ಪ್ರತಿಯೊಂದು ಕೆಲಸದಲ್ಲಿಯೂ ಪರಹಿಂಸೆಯನ್ನು ಸಂಪೂರ್ಣವಾಗಿ ತ್ಯಜಿಸಿ, ಕೈಲಾದಷ್ಟು ಪರೋಪಕಾರ ಮಾಡಬೇಕು. ಧ್ಯಾನದ ಸಹಾಯದಿಂದ ಪರಿಪೂರ್ಣತೆಯನ್ನು ಪಡೆಯುವ ನಿಶ್ಚಲ ಬುದ್ಧಿಯನ್ನು ಬೆಳೆಸಿ, ಪ್ರತಿಯೊಂದು ವಿಷಯವನ್ನೂ ಚೆನ್ನಾಗಿ ವಿಚಾರಮಾಡಿ ಆ ಮೇಲೆ ಒಂದು ತೀರ್ಮಾನಕ್ಕೆ ಬರಬೇಕು. ಸ್ವಾರ್ಥವನ್ನು ಬಿಡಲು ವೈರಾಗ್ಯ ಅಭ್ಯಾಸಗಳನ್ನು ಆಚರಿಸಬೇಕು.

ಶ್ರೀ ಜನ ಭಾರತ ಆಶ್ರಮ

ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

(ನೂರ—ಹದಿಮೂರು)

## ಶ್ರೇಷ್ಠ ಧರ್ಮಗಳಿಗೆ ಆಧಾರವಾದ ಪವಿತ್ರ ಗ್ರಂಥಗಳ ಮಹತ್ವ

ಭಾಗ—೧

ಒಂದು ದೇಶಕ್ಕೆ ಸಂಬಂಧಿಸಿದ ಭೂಗೋಳ, ಚರಿತ್ರೆ, ವಿಜ್ಞಾನಶಾಸ್ತ್ರ, ಮನಶ್ಶಾಸ್ತ್ರ, ಸಮಾಜಶಾಸ್ತ್ರ, ಕಾವ್ಯನಾಟಕಾದಿಗಳು, ಕಲಾಶಾಸ್ತ್ರಗಳು, ತತ್ವಶಾಸ್ತ್ರ, ನೀತಿಶಾಸ್ತ್ರ, ಪವಿತ್ರಗ್ರಂಥಗಳು ಇವೆಲ್ಲವೂ ಆ ಜನಾಂಗದ ಸಂಸ್ಕೃತಿಯೇನೆಂಬುದನ್ನು ತಿಳಿಯಪಡಿಸುತ್ತವೆ. ಪವಿತ್ರ ಗ್ರಂಥಗಳು ಪ್ರಪಂಚದ ಸಂಸ್ಕೃತಿಯ ಒಂದು ಮುಖ್ಯ ಭಾಗವಾಗಿರುವುದರಿಂದ ಅವುಗಳ ಮಹತ್ವವನ್ನು ಗುರು–ಶಿಷ್ಯ ಸಂವಾದ ರೂಪದಲ್ಲಿ ಎರಡು ಲೇಖನಗಳಲ್ಲಿ ತಿಳಿಯಪಡಿಸುತ್ತೇವೆ.

ಶಿಷ್ಯ:—ಪ್ರಪಂಚದ ಶ್ರೇಷ್ಠಧರ್ಮಗಳ ಮುಖ್ಯ ಪವಿತ್ರ ಗ್ರಂಥಗಳಾವುವು?

ಗುರು—ವೈಜ್ಞಾನಿಕ ನಾಗರಿಕತೆಯಿಂದ ಕೂಡಿದ ಈಗಿನ ಪಶ್ಚಿಮ ದೇಶಗಳ ಸರ್ಕಾರಗಳು ಎಲ್ಲಾ ಶಾಸ್ತ್ರಗ್ರಂಥಗಳಿಗೂ ಹೆಚ್ಚುಕಡಿಮೆ ಒಂದೇ ಬೆಲೆಯನ್ನು ಕೊಡುತ್ತಿರುವುವು. ಆದರೆ ಪೂರ್ವಕಾಲದ ಮತೀಯ ನಾಗರಿಕತೆಯನ್ನೇ ಆಧಾರವಾಗಿ ಹೊಂದಿದ್ದ ದೇಶಗಳ ಸರ್ಕಾರಗಳು ಪವಿತ್ರ ಗ್ರಂಥಗಳಿಗೆ ಮಾತ್ರ ಹೆಚ್ಚಿನ ಬೆಲೆಯನ್ನುಕೊಟ್ಟು ಅವುಗಳ ಆಧಾರದ ಮೇಲೆ ಮಿಕ್ಕ ಶಾಸ್ತ್ರಗಳನ್ನು ಬರೆಯಲು ಪ್ರೋತ್ಸಾಹ ಕೊಡುತ್ತಿದ್ದವು. ಒಂದು ಜನಾಂಗದ ಪವಿತ್ರ ಗ್ರಂಥಗಳು ಆ ಜನರು ನಂಬಿ ನಡೆಯಬೇಕಾದ ಧರ್ಮ ಅಥವ ಮತವೇನು ಎಂಬುದನ್ನು ತಿಳಿಯಪಡಿಸುತ್ತವೆ. ಅನೇಕ ಜನಾಂಗಗಳ ಮತಗಳು ಬೇರೆ ಬೇರೆಯಾಗಿದ್ದಾಗ್ಯೂ, ಅವುಗಳಲ್ಲಿ ಬೌದ್ಧಮತ, ಹಿಂದೂಮತ, ಕ್ರೈಸ್ತಮತ, ಇಸ್ಲಾಂಮತ, ಮತ್ತು ಜರತುಷ್ಟ್ರನ ಮತ ಮುಖ್ಯವಾದವು. ಈ ಐದು ಮತಗಳೂ ಪವಿತ್ರ ಗ್ರಂಥಗಳ ಆಧಾರದ ಮೇಲೆ ನಿಂತಿವೆ.

ಗೌತಮ ಬುದ್ಧನು ಯಾವ ಗ್ರಂಥವನ್ನೂ ಬರೆಯಲಿಲ್ಲ; ಆದರೆ ಅವನ ಶಿಷ್ಯರು ತಮ್ಮ ಗುರುವಿನ ಉಪದೇಶಗಳನ್ನು ಅನೇಕ ಪುಸ್ತಕಗಳಲ್ಲಿ ಬರೆದಿಟ್ಟರು. ಕ್ರಮೇಣ ಅವುಗಳೆಲ್ಲವನ್ನೂ ಕ್ರೋಢೀಕರಿಸಿ ತ್ರಿಪಿಟಕಗಳು ಅಥವ ಮೂರುಬುಟ್ಟಿಗಳು ಎಂಬ ಮೂರು ಗ್ರಂಥಗಳಾಗಿ ವಿಭಾಗಿಸಿದರು. ಅವು ಯಾವುವೆಂದರೆ:-(೧) ಬುದ್ಧದೇವನ ಉಪದೇಶಗಳನ್ನೂ ಪರೋಪಕಾರಕ ಕಾರ್ಯಗಳನ್ನೂ ಒಳಗೊಂಡ ಸೂತ್ರಪಿಟಕ (೨) ಸನ್ಯಾಸಿಗಳು ಸನ್ಯಾಸಿನಿಯರು ಆದ ಬೌದ್ಧ ಭಿಕ್ಷುಗಳು ತಮ್ಮ ತಮ್ಮ ವಿಹಾರ ಅಥವ ಮಠಗಳಲ್ಲಿ ಆಚರಿಸಬೇಕಾದ ಧಾರ್ಮಿಕ ನಡತೆಗಳು ಮತ್ತು ಶಿಸ್ತುಗಳನ್ನು ಒಳಗೊಂಡ ವಿನಯಪಿಟಕ ಮತ್ತು (೩) ಅನೇಕ ತತ್ವವಿಚಾರಗಳಲ್ಲಿ ವಾದಗಳನ್ನು ವಿಶದವಾಗಿ ತಿಳಿಯಪಡಿಸುವ ಅಭಿಧಮ್ಮಪಿಟಕ. ಈ ಗ್ರಂಥ ವಿಷಯಗಳಲ್ಲಿ ಉಂಟಾದ ಸಂದೇಹಗಳನ್ನು ಆಯಾ ಕಾಲಗಳ ಬುದ್ಧ ಸಂಘಗಳು ಪರಿಹರಿಸುತ್ತಿದ್ದವು.

ಸನಾತನ ಧರ್ಮವನ್ನು ಸ್ವೀಕರಿಸಿರುವ ಹಿಂದೂಗಳು ಪುರಾತನ ಕಾಲದಿಂದಲೂ ಈಚೆಗೆ ನಮೂದಿಸಿರುವ ಅನೇಕ ಗ್ರಂಥಗಳನ್ನು ತಮ್ಮ ಪವಿತ್ರ ಗ್ರಂಥಗಳನ್ನಾಗಿ ಭಾವಿಸುವರು. (೧) ಮಂತ್ರಗಳು, ಬ್ರಾಹ್ಮಣಗಳು, ಆರಣ್ಯಕಗಳು ಮತ್ತು ಉಪನಿಷತ್ತುಗಳು ಇವುಗಳಿಂದ ಕೂಡಿದ ನಾಲ್ಕು ವೇದಗಳು. (೨) ಮುಖ್ಯವಾಗಿ ಮಂತ್ರ ಬ್ರಾಹ್ಮಣಗಳ ಅರ್ಥಗಳನ್ನು ತಿಳಿಯಲು ಸಹಾಯ ಮಾಡುವ ಆರು ವೇದಾಂಗಗಳು. (೩) ಆರಣ್ಯಕಗಳು ಮತ್ತು ಉಪನಿಷತ್ತುಗಳ ತಾತ್ಪರ್ಯಗಳನ್ನು ವಿಶದವಾಗಿ ತಿಳಿಯಪಡಿಸುವ ಭಗವದ್ಗೀತೆ ಮತ್ತು ವೇದಾಂತ ಸೂತ್ರಗಳು (೪) ವೇದಾಂತ ಸೂತ್ರಗಳನ್ನು ಕ್ರೋಢೀಕರಿಸಲು ಸಹಾಯ ಮಾಡಿರುವ ಜೈನ, ಬೌದ್ಧ, ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ ಪೂರ್ವ ಮೀಮಾಂಸದರ್ಶನಗಳು. (೫) ಈ ತತ್ವಂತ ಪುರುಷಾರ್ಥಗಳನ್ನು ಜನರಲ್ಲಿ ಅವರವರ ಮನಸ್ಸಿನ ಅಂತಸ್ತಿನ ಪ್ರಕಾರ ಬಳಕೆಗೆ ತರಲು ಬೇಕಾದ ಧರ್ಮಗಳನ್ನು ಕ್ರೋಢೀಕರಿಸಿರುವ ಸ್ಮೃತಿಗಳು ಅಥವ ಧರ್ಮ ಶಾಸ್ತ್ರಗಳು, (೬) ವೇದಗಳಲ್ಲಿರುವ ಉಪದೇಶಗಳನ್ನು ಜನಸಾಮಾನ್ಯಕ್ಕೆ ಭಗವಂತನ ಅವತಾರ ಚರಿತ್ರೆಗಳ ಮೂಲಕ ಸುಲಭವಾಗಿ ತಿಳಿಯಪಡಿಸುವ ಇತಿಹಾಸ ಪುರಾಣಗಳು. (೭) ಪ್ರಸ್ಥಾನತ್ರಯಗಳಿಗೆ ಅನೇಕ ಆಚಾರ್ಯರು ಬರೆದಿರುವ ವ್ಯಾಖ್ಯಾನಗಳು ಮತ್ತು ಉಪವ್ಯಾಖ್ಯಾನಗಳು. (೮) ಪಕ್ತಿಯಲ್ಲಿ ಅಥವ ಒಂದು ಕ್ಷೇತ್ರದಲ್ಲಿರುವ ಜನರೆಲ್ಲರೂ ಸಾಮೂಹಿಕವಾಗಿ ಭಗವಂತನನ್ನು ಪ್ರಾರ್ಥಿಸಿ ಸೇವೆಮಾಡುವ ವಿಧಾನಗಳನ್ನು ನಿರ್ಧರಿಸಿರುವ ಆಗಮ, ಶಾಸ್ತ್ರಗಳು. (೯) ಬೇರೆ ಬೇರೆ ಪ್ರಾಂತ್ಯಗಳಲ್ಲಿ ಭಗವಂತನನ್ನು ಸಾಕ್ಷಾತ್ಕರಿಸಿದ ಮಹಾತ್ಮರು ಮತ್ತು ಭಕ್ತರು ನಾನಾ ಭಾಷೆಗಳಲ್ಲಿ ತಮ್ಮ ಅನುಭವಗಳನ್ನು ತಿಳಿಯಪಡಿಸುವ ಭಕ್ತಿ ಜ್ಞಾನ ಗ್ರಂಥಗಳು ಮತ್ತು (೧೦) ಆಯುರ್ವೇದ, ಧನುರ್ವೇದ, ಗಾಂಧರ್ವವೇದ ಮೊದಲಾದ ಉಪವೇದಗಳು.

ಪ್ರಪಂಚದಲ್ಲಿ ಅನೇಕ ಕೋಟಿ ಜನರು ನಂಬುವ ಕ್ರೈಸ್ತಮತಕ್ಕೆ ಆಧಾರವಾದ ಪವಿತ್ರ ಗ್ರಂಥವೇ "ಹೋಲಿ ಬೈಬಲ್". ಯೇಸು ಕ್ರಿಸ್ತನು ತನ್ನ ಉಪದೇಶಗಳನ್ನು ಒಳಗೊಂಡ ಯಾವ ಗ್ರಂಥವನ್ನೂ ಬರೆಯಲಿಲ್ಲ. ಆದರೆ ಅವನ ಹನ್ನೆರಡು ಮುಖ್ಯ ಶಿಷ್ಯರು ಅವನ ಉಪದೇಶಗಳನ್ನೆಲ್ಲಾ ಒಳಗೊಂಡ ಗ್ರಂಥಗಳನ್ನು ಬರೆದಿರುವರು. ಕ್ರಿಸ್ತ ಮಹಾತ್ಮನು ಹುಟ್ಟುವುದಕ್ಕೆ ಮುಂಚೆ ಅವನ ವಂಶಕ್ಕೆ ಸಂಬಂಧಪಟ್ಟ ಜೂಡಾ ಮತಕ್ಕೆ ಸೇರಿದ ಭಗವಂತನಿಂದಲೇ ಪ್ರೇರೇಪಿಸಲ್ಪಟ್ಟ ಅನೇಕ ದಿವ್ಯ ಪುರುಷರ ಉತ್ತಮ ಸಂದೇಶಗಳನ್ನು ಕೆಲವು ಗ್ರಂಥಗಳಲ್ಲಿ ಹೇಳಿರುವರು. ಹೀಗೆ ಸುಮಾರು ಒಂದು ಸಾವಿರದ ಆರನೂರು ವರುಷಗಳ ಕಾಲದಲ್ಲಿ ಬರೆಯಲ್ಪಟ್ಟ ಈ ಪುಸ್ತಕಗಳೆಲ್ಲವನ್ನೂ ಒಟ್ಟಾಗಿ ಸೇರಿಸಿ "ಹೋಲಿ ಬೈಬಲ್" ಎಂದು ಕರೆದಿರುವರು. ಈ ಒಟ್ಟು ಗ್ರಂಥವನ್ನು ಹಳೆಯ ಒಡಂಬಡಿಕೆ(old Testament) ಮತ್ತು ಹೊಸ ಒಡಂಬಡಿಕೆ (New Testament) ಎಂದು ಎರಡು ಭಾಗ ಮಾಡಿರುವರು. ಹಳೆಯ ಒಡಂಬಡಿಕೆಯಲ್ಲಿ ಮೂವತ್ತೊಂಭತ್ತು ಪುಸ್ತಕಗಳಿವೆ; ಹೊಸ ಒಡಂಬಡಿಕೆಯಲ್ಲಿ ಇಪ್ಪತ್ತೇಳು ಪುಸ್ತಕಗಳಿವೆ; ಅಂದರೆ "ಹೋಲಿ ಬೈಬಲಿನಲ್ಲಿ" ಒಟ್ಟು ಅರವತ್ತು ಆರು ಪುಸ್ತಕಗಳಿವೆ. ದೊರೆಗಳು, ಚಕ್ರವರ್ತಿಗಳು, ಕವಿಗಳು, ರಾಜಕುಮಾರರು, ತಜ್ಞರು, ಸನ್ಯಾಸಿಗಳು, ಪಂಡಿತರು, ಬೆಸ್ತರು ಮೊದಲಾದ ಸುಮಾರು ನಲವತ್ತು ಗ್ರಂಥ ಕರ್ತರು ಭಗವಂತನಿಂದಲೇ ಸಂದೇಶಗಳನ್ನು ಪಡೆದು ಈ ಪುಸ್ತಕಗಳನ್ನು ಬರೆದಿರುವರು ಎಂದು ಕ್ರೈಸ್ತರು ನಂಬುತ್ತಾರೆ.

ಮಹಮ್ಮದೀಯರ ಇಸ್ಲಾಂ ಮತವನ್ನು ಅರಬ್ ದೇಶದ ಕುರೈಷ್ ಬುಡಕಟ್ಟಿಗೆ ಸೇರಿದ ಮಹಮ್ಮದ್ ಮಹಾತ್ಮನು ಕ್ರಿ. ಶ. ಆರನೇ ಶತಮಾನದಲ್ಲಿ ಸ್ಥಾಪಿಸಿದನು. ಅವನು ಸಾಕ್ಷಾತ್ ಭಗವಂತನಿಂದಲೇ ಇಪ್ಪತ್ತು ಮೂರು ವರುಷಗಳಲ್ಲಿ ಆಡಿಗಡಿಗೆ ಪಡೆದ ಸಂದೇಶಗಳ ಸಮುದಾಯವೇ ಪವಿತ್ರ ಕೋರಾನ್ ಗ್ರಂಥವು. ಇಸ್ಲಾಂ ಮತದ ತತ್ವಶಿಕ್ಷೆ ಪುರುಷಾರ್ಥಗಳಲ್ಲಿ ಯಾವ ಸಂದೇಹಗಳುಂಟಾದರೂ ಈ ಗ್ರಂಥದಲ್ಲಿರುವ ಉಪದೇಶಗಳಿಂದಲೇ ಅವೆಲ್ಲವನ್ನೂ ಪರಿಹರಿಸುತ್ತಾರೆ. ಪವಿತ್ರ ಕೋರಾನಿನಲ್ಲಿ ನೂರು ಹದಿನಾಲ್ಕು ಅಧ್ಯಾಯಗಳು ಪ್ರತಿ ಅಧ್ಯಾಯದಲ್ಲಿ ಒಳ ವಿಭಾಗಗಳು ಮತ್ತು ಒಟ್ಟು ಆರು ಸಾವಿರಕ್ಕಿಂತ ಅಧಿಕವಾಗಿ ಶ್ಲೋಕಗಳು ಇವೆ. ಲಕ್ಷಾಂತರ ಜನರು ಈ ಕೋರಾನ್ ಪವಿತ್ರ ಗ್ರಂಥದ ಶ್ಲೋಕಗಳು ಸಾಕ್ಷಾತ್ತಾಗಿ ಭಗವಂತನಿಂದಲೇ ಅವನ ವಾದಲ್ಪಟ್ಟವುಗಳೆಂದು ನಂಬಿ ಅವುಗಳಲ್ಲಿ ಭಕ್ತಿ ವಿಶ್ವಾಸದಿಂದ ಕೂಡಿದ ವಿಶೇಷ ಗೌರವವನ್ನು ಕೊಡುತ್ತಿರುವರು. ಅಬೂಬೇಕರ್ ಎಂಬ ಮಾಹೆಸ್ಸೀಯನು ಹಸ್ತಲಿಖಿತ ಮಹಮ್ಮದನ ಸಂದೇಶಗಳೆಲ್ಲವನ್ನೂ ಈಗಿನ ಕೋರಾನ್ ಪವಿತ್ರಗ್ರಂಥವಾಗಿ ಕ್ರೋಢೀಕರಿಸಿದನೆಂದು ಪ್ರತೀತಿ.

ಜೊರಾಸ್ಟ್ರರ್ ಮತವು ಹಿಂದೂ ಮತದ ಹಾಗೆ ಬಹಳ ಹಿಂದಿನ ಕಾಲದಿಂದ ಬಂದಿರುವುದು. ಒಂದಾನೊಂದು ಕಾಲದಲ್ಲಿ ಆದು ಪರ್ಷಿಯಾ ರಾಜ್ಯದ ಮತವಾಗಿತ್ತು. ಈಗ ಈ ಮತವನ್ನು ಪರ್ಷಿಯಾ ದೇಶದಲ್ಲಿ ಕೆಲವರು ಮತ್ತು ಇಂಡಿಯಾ ದೇಶದಲ್ಲಿ ಸುಮಾರು ಹತ್ತು ಲಕ್ಷ ಪಾರ್ಸಿಗಳು ಮಾತ್ರ ನಂಬಿ ಆಚರಿಸುತ್ತಾರೆ. ಈ ಮತವನ್ನು ಕವಿ, ತತ್ವಶಾಸ್ತ್ರಜ್ಞ ಮತ್ತು ಮತಪ್ರಚಾರಕನಾದ ಮಹಾತ್ಮಾ ಜಾರತುಷ್ಟ್ರನು ಸುಮಾರು ಕ್ರಿ. ಪೂ. ೧೩೦೦ ರಲ್ಲಿ ಪರ್ಷಿಯಾ ದೇಶದಲ್ಲಿ ಸ್ಥಾಪಿಸಿದನು. ಜೆಂಡ್ ಅವೆಸ್ತಾ ಎಂಬ ಗ್ರಂಥವೇ ಪಾರ್ಸಿಗಳ ಅಥವ ಜಾರತುಷ್ಟ್ರ ಮತದ ಪವಿತ್ರ ಗ್ರಂಥ; ಜೆಂಡ್ ಭಾಷೆಯು ಬಹುಮಟ್ಟಿಗೆ ವೇದದ ಸಂಸ್ಕೃತ ಭಾಷೆಯನ್ನು ಹೋಲುತ್ತದೆ. 'ಅವೆಸ್ತಾ' ಎಂಬ ಪದಕ್ಕೆ ಸಂಸ್ಕೃತದ "ವೇದ" ಅಥವ ಜ್ಞಾನ ಎಂದು ಅರ್ಥವಾಗುತ್ತದೆ; ಆದುದರಿಂದ "ಜೆಂಡ್ ಅವೆಸ್ತಾ" ಎಂದರೆ ಜೆಂಡ್ ಭಾಷೆಯಲ್ಲಿ ಅನೇಕ ಕವಿಗಳ ಕವನಗಳನ್ನು ಒಳಗೊಂಡು ಜ್ಞಾನವನ್ನುಂಟು ಮಾಡುವ ಪವಿತ್ರ ಗ್ರಂಥವು ಎಂದು ತಿಳಿಯಬೇಕು. 'ಮಜ್ದಾ' ಎಂದು ಇವರು ದೇವರನ್ನು ಕರೆಯುವರು.

**ಶಿಷ್ಯ:**— ಹಿಂದಿನ ಕಾಲದ ಜನರು ಏಕೆ ಪವಿತ್ರ ಗ್ರಂಥಗಳಿಗೆ ಮಾತ್ರ ಹೆಚ್ಚು ಬೆಲೆಯನ್ನು ಕೊಟ್ಟರು?

**ಗುರು:**— ಮೇಲೆ ವಿವರಿಸಿರುವ ಪವಿತ್ರ ಗ್ರಂಥಗಳು ಮನುಷ್ಯರಲ್ಲಿ ಸತ್ವಗುಣವನ್ನು ಪಡೆದಿರುವ ಉತ್ತಮ ವರ್ಗದ ಸಂತ ಮಹಾತ್ಮರುಗಳಿಂದ ಲೋಕದ ಜನರಿಗೆ ಉಪದೇಶ ಮಾಡಲ್ಪಟ್ಟವುಗಳು ಎಂಬುದೇ ಅವುಗಳಿಗೆ ಬಹುಮಂದಿ ಜನರು ಹೆಚ್ಚಾದ ಬೆಲೆಯನ್ನು ಕೊಡಲು ಮುಖ್ಯವಾದ ಕಾರಣವು. ಎಲ್ಲಾ ಮತದವರೂ ತಮ್ಮ ತಮ್ಮ ಮತಸ್ಥಾಪಕರು ಭಗವಂತನ ಅವತಾರವೆಂದೂ ಅಥವ ಭಗವಂತನ ಗುಣ ಶಕ್ತಿಗಳನ್ನು ಹೆಚ್ಚಾಗಿ ಪಡೆದಿರುವ ದೈವಾಂಶ ಪುರುಷರೆಂದೂ ನಂಬಿರುವರು. ಕೆಲವು ವೇಳೆ ಭಗವಂತನೇ ಅವರ ಮನಸ್ಸಿನ ಶಕ್ತಿಗಳನ್ನು ವಶಪಡಿಸಿಕೊಂಡು ಅವರ ಮೂಲಕ ತನ್ನ ಸ್ವಂತ ಸಂದೇಶಗಳನ್ನು ಲೋಕಕ್ಕೆ ಪ್ರಚಾರ ಮಾಡುತ್ತಾನೆಂದು ಅವರು ವಾದಿಸುತ್ತಾರೆ. ಹಳೆಯ ಒಡಂಬಡಿಕೆ (old Testament) ಯಲ್ಲಿರುವ ಸಂದೇಶಗಳನ್ನು ಭಗವಂತನು ಕೆಲವು ಮಹಾತ್ಮರುಗಳ ದ್ವಾರಾ ಲೋಕಕ್ಕೆ ಪ್ರಚಾರ ಮಾಡಿದನೆಂದೂ ಮತ್ತು ಹೊಸ ಒಡಂಬಡಿಕೆಯ (New Testament) ಸಂದೇಶಗಳು ಭಗವಂತನ ಮಗನಾದ ಯೇಸು ಕ್ರಿಸ್ತನಿಂದಲೇ ಉಪದೇಶ ಮಾಡಲ್ಪಟ್ಟವುಗಳೆಂದೂ ಕ್ರೈಸ್ತರು ನಂಬಿರುವುದರಿಂದ ಅವರು "ಹೋಲಿ ಬೈಬಲ್" ಪವಿತ್ರ ಗ್ರಂಥದಲ್ಲಿ ಹೆಚ್ಚಾದ ಗೌರವವನ್ನೂ ಶ್ರದ್ಧೆಯನ್ನೂ ಪಡೆದಿರುವರು. ಮಹಮ್ಮದೀಯರು ತಮ್ಮ ಇಸ್ಲಾಂ ಮತ ಸ್ಥಾಪಕರಾದ ಮಹಮ್ಮದರು ದೈವಾಂಶ ಮಹಾಪುರುಷರು ಮತ್ತು ಆ ಮಹಾನುಭಾವರು ಭಗವಂತನಿಂದಲೇ ಸಾಕ್ಷಾತ್ತಾಗಿ ಅರಿತ ಉಪದೇಶಗಳನ್ನು ಕೊರಾನ್ ಎಂಬ ಗ್ರಂಥದಲ್ಲಿ ಕ್ರೋಢೀಕರಿಸಿರುವರು ಎಂದು ನಂಬಿ ಆ ಪವಿತ್ರ

ಗ್ರಂಥದಲ್ಲಿರುವ ಉತ್ತಮ ಸಂದೇಶಗಳಿಗೆ ವಿಶೇಷವಾದ ಗೌರವವನ್ನು ಕೊಟ್ಟು ಅವನ್ನು ತಮ್ಮ ದಿನಚರಿಯಲ್ಲಿ ಶ್ರದ್ಧೆಯಿಂದ ನಡೆಸಲು ಪ್ರಯತ್ನಿಸುವರು. ಹಾಗೆಯೇ ಬೌದ್ಧರು ಗೌತಮ ಬುದ್ಧರಿಗೆ ಗಯೆಯಲ್ಲಿ ಬೋಧಿವೃಕ್ಷದ ಕೆಳಗೆ ಸತ್ಯದ ಸಾಕ್ಷಾತ್ಕಾರವಾಯಿತೆಂದೂ, ಅನಂತರ ಆ ಮಹಾಪುರುಷರು ಭಾರತ ದೇಶದಲ್ಲೆಲ್ಲಾ ಯಾತ್ರೆ ಮಾಡಿ ಜನರಿಗೆ ಸತ್ಯದ ಸಾಕ್ಷಾತ್ಕಾರಕ್ಕೆ ಬೇಕಾದ ಉಪಾಯಗಳನ್ನು ಬೋಧಿಸಿದರೆಂದೂ ನಂಬಿ ಆ ಮಹಾತ್ಮರ ಉಪದೇಶಗಳನ್ನು ಒಳಗೊಂಡಿರುವ ತ್ರಿಪಿಟಕ ಗ್ರಂಥಕ್ಕೆ ಹೆಚ್ಚಾದ ಬೆಲೆಯನ್ನು ಕೊಟ್ಟಿರುವರು. ಮಹಾತ್ಮಾ ಜರತುಷ್ಟ್ರರೂ ಕೂಡ ಸತ್ಯದ ಸಾಕ್ಷಾತ್ಕಾರವನ್ನು ಮಾಡಿ ಜೆಂಡ್ ಅವೆಸ್ತಾದಲ್ಲಿ ತಮ್ಮ ಉಪದೇಶಗಳನ್ನು ಕ್ರೋಢೀಕರಿಸಿರುವುದರಿಂದ ಪಾರ್ಸಿ ಜನರು ಆ ಪವಿತ್ರ ಗ್ರಂಥಕ್ಕೆ ಹೆಚ್ಚಾದ ಗೌರವವನ್ನು ಕೊಟ್ಟಿರುವರು. ವೇದಗಳು ಭಗವಂತನಿಂದಲೇ ಉಂಟಾಗಿರುವುದರಿಂದ ಅಪೌರುಷೇಯವೆಂದೂ, ಋಷಿಗಳು ಯೋಗ ಧ್ಯಾನಕಾಲದಲ್ಲಿ ಆ ಮಂತ್ರಗಳನ್ನೆಲ್ಲಾ ತಮ್ಮ ಒಳಗಿನ ಕಿವಿಯಲ್ಲಿ ಕೇಳಿದರೆಂದೂ, ಅನೇಕ ಮಹಾಪುರುಷರು ವೇದಗಳಲ್ಲಿ ಉಪದೇಶವಾಗಿರುವ ಮೋಕ್ಷೋಪಾಯಗಳನ್ನು ಕೈಗೊಂಡು ಅದರಲ್ಲಿರುವ ಶಕ್ತ ಹಿತ ಪುರುಷಾರ್ಥಗಳ ಅನುಭವಗಳನ್ನು ಪಡೆದರೆಂದೂ ಮತ್ತು ಈಗಲೂ ಒಬ್ಬ ಮನುಷ್ಯನು ಈ ಉಪಾಯಗಳನ್ನು ಕೈಗೊಂಡರೆ ಋಷಿಗಳು ಪಡೆದ ಸಾಕ್ಷಾತ್ಕಾರವನ್ನು ಪಡೆಯಬಹುದೆಂದೂ ಹಿಂದೂಗಳು ನಂಬಿ ಭಾರತೀಯ ಪವಿತ್ರ ಗ್ರಂಥಗಳಲ್ಲಿ ಬಹಳ ಗೌರವ, ವಿಶ್ವಾಸ, ಶ್ರದ್ಧೆ ಮತ್ತು ಭಕ್ತಿಯನ್ನು ಇಟ್ಟಿರುವರು. ಒಟ್ಟಿನಲ್ಲಿ, ಮತಸ್ಥಾಪಕರೆಲ್ಲರೂ ನಮ್ಮಂಥ ಸಾಮಾನ್ಯ ಜನರ ಹಾಗೆ ಕೇವಲ ಇಂದ್ರಿಯ, ಮನಸ್ಸು ಮತ್ತು ಬುದ್ಧಿಗಳ ಮೂಲಕ ಉಂಟಾಗುವ ಜ್ಞಾನವನ್ನು ಪಡೆದು, ಅದರ ಮೇಲೆ ಇನ್ನೂ ವಿಶೇಷವಾದ ಅತೀಂದ್ರಿಯವಾದ ಜ್ಞಾನವನ್ನು ಹೊಂದಿ ಸತ್ಯದ ಸಾಕ್ಷಾತ್ಕಾರವನ್ನು ಪಡೆದಿದ್ದರೆಂದೂ ಮತ್ತು ಭಗವಂತನೊಡನೆ ದಿವ್ಯ ಮಾನಸಿಕ ಸಂಪರ್ಕವನ್ನು ಬೆಳೆಸಿದ್ದರೆಂದೂ ಆಯಾ ಮತಕ್ಕೆ ಸೇರಿದ ಜನರು ನಂಬಿರುವುದರಿಂದ ಅವರು ಮತಸ್ಥಾಪಕರಲ್ಲಿಯೂ ಮತ್ತು ಅವರ ಮೂಲಕ ಉಂಟಾದ ಪವಿತ್ರ ಗ್ರಂಥಗಳಲ್ಲಿಯೂ ಹೆಚ್ಚಾದ ಗೌರವವನ್ನೂ ಮತ್ತು ವಿಶ್ವಾಸವನ್ನೂ ಇಟ್ಟಿರುವರು.

ಶಿಷ್ಯ:—ಸಂಸ್ಕೃತಿಗೆ ಸಂಬಂಧಪಟ್ಟ ಮುಖ್ಯಗ್ರಂಥಗಳಿಗಿಂತ ಹೆಚ್ಚಾಗಿ ಪವಿತ್ರ ಗ್ರಂಥಗಳಲ್ಲಿ ಯಾವ ಆಕರ್ಷಕ ವಿಶೇಷ ವಿಷಯಗಳಿವೆ?

ಗುರು:—ಮನುಷ್ಯನು ಪ್ರತ್ಯಕ್ಷದಲ್ಲಿ ಕಾಣುವ ಒಟ್ಟು ಪ್ರಪಂಚವನ್ನೂ, ಅದರಲ್ಲಿರುವ ಸಹಸ್ರಾರು ವಸ್ತುಗಳನ್ನೂ ಮತ್ತು ಕಾರ್ಯಕಾರಣರೂಪ ಪರಿಣಾಮಗಳಿಂದ ಕೂಡಿದ ವಿಧವಿಧವಾದ ಚಲನೆ ಮತ್ತು ವ್ಯಾಪಾರಗಳನ್ನೂ ಅನುಭವಿಸುತ್ತಾನೆ. ಆದರೆ ಇಷ್ಟುಮಾತ್ರದಿಂದಲೇ ಅವನು ತೃಪ್ತನಾಗಲಾರನು; ಅನೇಕ ಸಂದೇಹಗಳು ಅವನ ಮನಸ್ಸನ್ನು ಬಾಧಿಸುತ್ತವೆ. ಈ ಪ್ರಪಂಚವು ನಿಜವಾಗಿ ಇದೆಯೋ ಅಥವ

ಕನಸಿನ ಅನುಭವವೆ? ಇದು ಹೇಗೆ ಉಂಟಾಯಿತು ಮತ್ತು ಇದರ ಕೊನೆಯೇನು? ಯಾವ ಮಹಾ ಅವ್ಯಕ್ತ ಶಕ್ತಿಯು ಈ ಪ್ರಪಂಚವನ್ನು ಶಾಶ್ವತವಾದ ನಿಯಮಗಳಿಂದ ಕೂಡಿದ ನಿಯಮಗಳ ಪ್ರಕಾರ ಬೆಳೆಸುತ್ತದೆ ಮತ್ತು ಲಯಿಸುತ್ತದೆ? ಪ್ರಪಂಚದ ಸತ್ಯವಾದ ಈ ಮಹಾಶಕ್ತಿಯ ಸ್ವರೂಪವೇನು? ಜಗತ್ತಿನಲ್ಲಿರುವ ಪ್ರಾಣಿಗಳ ಅವರಲ್ಲಿಯೂ ಮುಖ್ಯವಾಗಿ ಮನುಷ್ಯರಾದ ನಮ್ಮ ಆದಿಮಧ್ಯಾಂತಗಳಾವುವು? ನಮಗೂ, ಜಗತ್ತಿಗೂ, ಸತ್ಯಕ್ಕೂ ಇರುವ ನಿಜವಾದ ಸಂಬಂಧವೇನು? ಅವರು ಬಯಸದಿದ್ದರೂ ಏಕೆ ಬಹುಜನರಿಗೆ ದುಃಖ ಪರಂಪರೆಗಳು ಉಂಟಾಗುತ್ತವೆ? ಈ ದುಃಖಗಳನ್ನು ತಪ್ಪಿಸಿ ಶಾಶ್ವತವಾದ ಆನಂದವನ್ನು ಪಡೆಯಲು ಏನಾದರೂ ಉಪಾಯಗಳಿವೆಯೆ? ಎಂಬಿವೇ ಮೊದಲಾದ ಆಶ್ಚರ್ಯವನ್ನುಂಟುಮಾಡುವ ಮತ್ತು ಅನಂತತ್ವ ಭಾವನೆಗಳನ್ನು ಹುಟ್ಟಿಸುವ ಪ್ರಶ್ನೆಗಳು ಪ್ರತಿಯೊಬ್ಬ ಮನುಷ್ಯನಲ್ಲಿಯೂ ಆಗಾಗ್ಗೆ ತಾವಾಗಿಯೇ ಉದ್ಭವಿಸುತ್ತಲೇ ಇವೆ. ಪವಿತ್ರ ಗ್ರಂಥಗಳಲ್ಲದ ಇತರ ಸಂಸ್ಕೃತಿ ಗ್ರಂಥಗಳು ಈ ಮೇಲಿನ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುವುದಿಲ್ಲ. ಏಕೆಂದರೆ ವಿಜ್ಞಾನಶಾಸ್ತ್ರಗಳು ಮತ್ತು ಸಮಾಜಶಾಸ್ತ್ರಗಳೂ ಪ್ರಪಂಚದ ಬೇರೆ ಬೇರೆ ಅವಸ್ಥೆಗಳ ಮತ್ತು ವ್ಯಾಪಾರಗಳನ್ನು ಮಾತ್ರ ತಿಳಿಯಪಡಿಸುವುದಕ್ಕೆ ಪ್ರಯತ್ನಿಸುತ್ತವೆ.

ಈ ವಿಚಾರಗಳನ್ನು ಕುರಿತು ಮನನಮಾಡಲು ಅನೇಕ ಆಧುನಿಕ ತತ್ವಶಾಸ್ತ್ರಗಳು ಪಶ್ಚಿಮ ದೇಶಗಳಲ್ಲಿ ಹುಟ್ಟಿವೆ. ತತ್ವಶಾಸ್ತ್ರಜ್ಞರು ಅದ್ಭುತವಾದ ಮತ್ತು ಅನಂತವಾದ ಅಖಿಲ ಜಗತ್ತೂ ಮತ್ತು ಅದರೊಳಗೆ ನಡೆಯುತ್ತಿರುವ ಚಲನೆಗಳೂ ಮತ್ತು ಪರಿಣಾಮಗಳೂ ಯಾವುದೋ ಒಂದು ಅನಂತವಾದ, ಅದ್ಭುತವಾದ, ಆಶ್ಚರ್ಯಯುತವಾದ ಸತ್ಯ ಅಥವ ಶಕ್ತಿಯಿಂದ ನಡೆಯುತ್ತಿದೆ ಎಂಬುದನ್ನು ತಮ್ಮ ಹೃದಯದಲ್ಲಿ ಮನಗಂಡು ಅದರ ಸ್ವರೂಪವನ್ನು ತಮ್ಮ ಬುದ್ಧಿಬಲದಿಂದ ತಿಳಿಯಲು ಪ್ರಯತ್ನಿಸುವರು. ಆದರೆ ಈ ವಿಚಾರವನ್ನು ಅವರು ತಮ್ಮ ಬುದ್ಧಿಯಲ್ಲಿ ಆಲೋಚಿಸಿದಷ್ಟು ಅವರಿಗೆ ವಿಧವಿಧವಾದ ಸಂದೇಹಗಳೂ ಮತ್ತು ವಿರುದ್ಧ ಅಭಿಪ್ರಾಯಗಳೂ ಹುಟ್ಟುವುವು. ಆದುದರಿಂದ ಅವರು ಕೊನೆಯಲ್ಲಿ ಸತ್ಯದ ಸ್ವರೂಪವನ್ನು ಖಚಿತವಾಗಿ ತಿಳಿಯುವುದು ಅಸಾಧ್ಯವೆಂದು ತೀರ್ಮಾನಿಸಿ ತಮ್ಮ ನಿತ್ಯ ಜೀವನದಲ್ಲಿ ಸತ್ಯದ ವಿಚಾರಕ್ಕೆ ಗಮನಕೊಡದೆ ತಮ್ಮ ಇಂದ್ರಿಯಗಳಿಗೂ ಮನಸ್ಸಿಗೂ ಬುದ್ಧಿಗೂ ಆದಷ್ಟು ಸುಖವನ್ನುಂಟುಮಾಡುವ ಪ್ರಯತ್ನಗಳಲ್ಲಿಯೇ ಆಸಕ್ತರಾಗಿರುವರು.

ಪವಿತ್ರ ಗ್ರಂಥಗಳು ಮಾತ್ರ ಮೇಲೆ ವಿವರಿಸಿರುವ ಗಹನವಾದ ಪ್ರಶ್ನೆಗಳಿಗೆ ದಿವ್ಯ ಜ್ಞಾನವನ್ನು ಪಡೆದ ಮಹಾತ್ಮರ ಮೂಲಕ ಭಗವಂತನ ಉಪದೇಶಗಳನ್ನೊಳಗೊಂಡಿರುವ ವಾಕ್ಯಗಳಲ್ಲಿ ನಿಸ್ಸಂದೇಹವಾದ ಮತ್ತು ಶಾಶ್ವತವಾದ ಉತ್ತರಗಳನ್ನು ಕೊಟ್ಟಿವೆ. ಈ ಗ್ರಂಥಗಳು ಎಲ್ಲಾ ಸಂದೇಹಗಳನ್ನು ಪರಿಹಾರ ಮಾಡುವುದಕ್ಕಾಗಿಯೇ

ಹುಟ್ಟಿವೆಯೆಂದು ಹೇಳಿದರೆ ತಪ್ಪಾಗಲಾರದು. ಬಹುಮಂದಿ ಜನರು ಹೀಗೆ ಸಂದೇಹ
ದಿಂದ ಕೂಡಿದ ಮತ್ತು ಧ್ಯೇಯರಹಿತವಾದ ನಾಸ್ತಿಕ ಭಾವನೆಗಳನ್ನು ಯಾವಾಗಲೂ
ಜೀವನದಲ್ಲಿ ಇಟ್ಟುಕೊಳ್ಳಲು ಇಷ್ಟಪಡುವುದಿಲ್ಲವಾದುದರಿಂದ ಅವರು ತಮ್ಮ ಪವಿತ್ರ
ಗ್ರಂಥಗಳಿಗೆ ಉಚ್ಚದ ಬೆಲೆಯನ್ನು ಕೊಟ್ಟೇ ಕೊಡುವರು. ಇಷ್ಟೇ ಅಲ್ಲ; ಅವರು ಅವು
ಗಳಲ್ಲಿ ಬೋಧಿಸಿರುವ ಹಾಗೆ ಈ ಮಹಾ ಅದ್ಭುತ ಅನಂತ ಶಕ್ತಿಯೇ ಭಗವಂತ
ನೆಂದೂ, ಬ್ರಹ್ಮನೆಂದೂ ಅಥವ ಪರಮಾತ್ಮನೆಂದೂ ನಂಬುವರು ಮತ್ತು ಅವನ ಸ್ವರೂಪ
ರೂಪ, ಗುಣ, ವಿಭವ, ಐಶ್ವರ್ಯಗಳನ್ನು ಸಾಕ್ಷಾತ್ಕರಿಸಲು ಪವಿತ್ರ ಗ್ರಂಥಗಳಲ್ಲಿ
ಹೇಳಿರುವ ಉಪಾಯಗಳನ್ನು ಕೈಗೊಂಡು ಅದಕ್ಕಾಗಿ ಶ್ರಮಪಡುವರು.

ಇನ್ನೊಂದು ವಿಚಾರವನ್ನೂ ಗಮನಿಸಬೇಕಾಗಿದೆ. ಪ್ರಾಣಿಗಳೆಲ್ಲವೂ ಕಷ್ಟಗ
ಳನ್ನು ತಪ್ಪಿಸಿಕೊಂಡು ಸುಖಗಳನ್ನು ವೃದ್ಧಿಪಡಿಸಿಕೊಳ್ಳಲು ಸರ್ವ ಪ್ರಯತ್ನಗಳನ್ನು
ಮಾಡುತ್ತವೆ. ಮನುಷ್ಯನೂ ಕೂಡ ತನ್ನ, ತನ್ನ ಕುಟುಂಬದವರ, ಬಂಧುಗಳ ಮತ್ತು
ಸ್ನೇಹಿತರ ದುಃಖಗಳನ್ನು ಕಡಿಮೆಮಾಡಿ ಸುಖಗಳನ್ನು ಹೆಚ್ಚಿಸುವ ಉಪಾಯ
ಗಳನ್ನು ಹುಡುಕುವನು. ಇತರ ಗ್ರಂಥಗಳು ದುಃಖ ಮಿಶ್ರವಾದ, ಸ್ವಲ್ಪ ಕಾಲ
ಮಾತ್ರ ಸುಖಾನುಭವಗಳನ್ನುಂಟುಮಾಡುವ ಮಾರ್ಗಗಳನ್ನು
ತಿಳಿಯಪಡಿಸುವುವು. ಆದರೆ ಪವಿತ್ರ ಗ್ರಂಥಗಳು ಮಾತ್ರ ಈ ಜೀವನದಲ್ಲಿ
ಮನುಷ್ಯನು ತನ್ನ ದುಃಖಗಳನ್ನು ಕಡಿಮೆಮಾಡಿ ಸುಖಗಳನ್ನು ವೃದ್ಧಿಪಡಿಸುವುದಕ್ಕೂ
ಅವನ ಕಾಲಾನಂತರ ನರಕಾದಿದುಃಖಗಳನ್ನು ತಪ್ಪಿಸಿಕೊಂಡು ಸ್ವರ್ಗಾದಿ ಸುಖ
ಗಳನ್ನು ಪಡೆಯುವುದಕ್ಕೂ ಮತ್ತು ದುಃಖ ಲೇಶವೂ ಇಲ್ಲದ ಶಾಶ್ವತವಾದ ಶಾಂತ
ಯುತವಾದ ಮೋಕ್ಷಾನಂದವನ್ನು ಅನುಭವಿಸುವುದಕ್ಕೂ ಉತ್ತಮವಾದ ಮಾರ್ಗ
ಗಳನ್ನು ತಿಳಿಯಪಡಿಸುತ್ತವೆ ಎಂಬುದಾಗಿ ವಂಶಪಾರಂಪರ್ಯವಾಗಿ ಬಂದ ಪ್ರತೀತಿ
ಇದೆ. ಅದುದರಿಂದ ಜನರು ಪವಿತ್ರ ಗ್ರಂಥಗಳ ಉಪದೇಶಗಳಿಗೆ ವಿಶೇಷ ಪ್ರಾಮು
ಖ್ಯತೆಯನ್ನು ಕೊಟ್ಟೇ ಕೊಡುವರು.

ಶಿಷ್ಯ:—ಪವಿತ್ರ ಗ್ರಂಥಗಳ ಗೌರವವನ್ನು ಅಧಿಕಪಡಿಸಲು ಸಮಾಜದಲ್ಲಿ
ಯಾವ ಪ್ರಯತ್ನಗಳು ನಡೆದಿವೆ?

**ಗುರು.**—ಪವಿತ್ರ ಗ್ರಂಥಗಳಲ್ಲಿ ಜನರಿಗೆ ವಿಶೇಷವಾದ ಆಸಕ್ತಿಯನ್ನು ವೃದ್ಧಿ
ಪಡಿಸಲು ಸಮಾಜದಲ್ಲಿ ಚರ್ಚುಗಳೂ, ಮಸೀದಿಗಳೂ, ಮಠಗಳೂ, ದೇವಾಲಯ
ಗಳೂ ಮತ್ತು ಇದೇ ರೀತಿಯ ಇತರ ಸಂಸ್ಥೆಗಳೂ ಅನೇಕವಾಗಿ ಹುಟ್ಟಿ ಬೆಳೆದಿವೆ.
ಪುರೋಹಿತರೂ, ಪೂಜಾರಿಗಳೂ, ಮುಲ್ಲಾಗಳೂ, ಪಂಡಿತರೂ, ಪಾದ್ರಿಗಳೂ,
ಸನ್ಯಾಸಿಗಳೂ, ಧರ್ಮ ಬೋಧನೆಮಾಡುವ ಉಪನ್ಯಾಸಕರೂ ಈ ಸಂಸ್ಥೆಗಳ ಮುಖ
ವಾಣಿಯಾಗಿ ತಮ್ಮತಮ್ಮ ಪವಿತ್ರ ಗ್ರಂಥಗಳು ಅದ್ಭುತ ಗ್ರಂಥಗಳೆಂದೂ, ಭಗವಂತನ
ಮಾತುಗಳೆಂದೂ ಜನರಲ್ಲಿ ನಂಬಿಕೆ ಹುಟ್ಟಿಸುವ ಪ್ರಚಾರ ಕಾರ್ಯಗಳನ್ನು ಕೈಗೊಂಡಿ

ವರು. ಇವರು ಸಾಮೂಹಿಕವಾಗಿ ಜನರನ್ನು ಸೇರಿಸಿ ಪ್ರಾರ್ಥನೆ ಪೂಜಾದಿಗಳನ್ನು ಏರ್ಪಡಿಸಿ ಆ ಸಂದರ್ಭಗಳಲ್ಲಿ ಪವಿತ್ರ ಗ್ರಂಥಗಳನ್ನೇ ಹೆಚ್ಚಾಗಿ ಉಪಯೋಗಿಸಿ ಅವುಗಳಲ್ಲಿ ಪೂಜ್ಯತಾಭಾವನೆಗಳನ್ನು ಬೆಳೆಸುವರು. ಕೆಲವು ಮಹಾರಾಜರುಗಳೂ ಕೂಡ ಪವಿತ್ರ ಗ್ರಂಥಗಳಿಗೆ ವಿಶಿಷ್ಟದ ಗೌರವವನ್ನು ಕೊಡಬೇಕೆಂದೂ ಮತ್ತು ಅವುಗಳಲ್ಲಿ ಉಪದೇಶ ಮಾಡಿರುವ ಆಚರಣೆಗಳನ್ನು ಜನರು ನಡೆಸಬೇಕೆಂದೂ ಶಾಸನಗಳನ್ನು ಜಾರಿಯಲ್ಲಿ ತಂದರು. ಈ ಕಾರಣಗಳಿಂದ ಪ್ರತಿಯೊಂದು ಮತಕ್ಕೆ ಸೇರಿದವರೂ ವಂಶಪಾರಂಪರ್ಯವಾಗಿ ಬಂದ ಪವಿತ್ರ ಗ್ರಂಥಗಳನ್ನು ಅಡಿಗಡಿಗೆ ಉಪಯೋಗಿಸುತ್ತಲೇ ಇರುವರು. ಅವುಗಳಿಂದಲೇ ತತ್ವೋಚಿತ ಪುರುಷಾರ್ಥಗಳನ್ನು ತಿಳಿಯುತ್ತಾರೆ. ಮತ್ತು ಅವುಗಳ ವಾಕ್ಯಗಳನ್ನೇ ಸ್ತೋತ್ರ, ಮಂತ್ರ, ಕೀರ್ತನೆ, ಧ್ಯಾನ, ಮನನಗಳಿಗಾಗಿ ಉಪಯೋಗಿಸುತ್ತಾರೆ. ಇಷ್ಟೇ ಅಲ್ಲ; ಪ್ರತಿಯೊಬ್ಬನು ತಾನು ಪ್ರೀತಿಸಿ ಗೌರವಿಸುವ ಗತಿಸಿದ ಅವನ ಪೂರ್ವಿಕರನ್ನು ಪೂಜಿಸುವ ಕ್ರಮಗಳನ್ನೂ, ಅವನ ಮನಸ್ಸನ್ನು ಆಕರ್ಷಿಸುವ ಮಹಾತ್ಮರಸೇವೆ ಮಾಡುವ ಕ್ರಮಗಳನ್ನೂ, ದೇವತಾದಿ ಅದೃಷ್ಟಶಕ್ತಿಗಳ ಪ್ರೀತಿಯನ್ನು ಪಡೆಯಲು ನಡೆಸಬೇಕಾದ ಯಜ್ಞಯಾಗಾದಿ ಪೂಜಾಕ್ರಮಗಳನ್ನೂ ಮತ್ತು ಎಲ್ಲರೂ ಆಶ್ಚರ್ಯದಿಂದ ನೋಡುವ ನದಿ, ಬೆಟ್ಟ, ಸಮುದ್ರ, ಚಂದ್ರ, ನಕ್ಷತ್ರ ಮೊದಲಾದ ಪ್ರಪಂಚದ ಅದ್ಭುತ ಸೃಷ್ಟಿಗಳಲ್ಲಿ ಭಗವಂತನ ಸದ್ಭಾವವನ್ನು ಅರಿತು ಅವುಗಳ ಮೂಲಕ ಪರಮಾತ್ಮನನ್ನು ಉಪಾಸನೆ ಮಾಡುವ ಪ್ರಕಾರಗಳನ್ನೂ ತನ್ನ ಮತದ ಪವಿತ್ರಗಳ ಆಧಾರದಿಂದ ತಿಳಿದು ಅವುಗಳಲ್ಲಿರುವ ಮಂತ್ರ, ಶ್ಲೋಕ ಅಥವ ವಾಕ್ಯಗಳನ್ನು ಪ್ರತಿದಿನವೂ ಈ ಕಾರ್ಯಗಳಿಗಾಗಿ ಉಪಯೋಗಿಸಲೇ ಬೇಕಾಗಿದೆ. ಹೀಗಿರುವಲ್ಲಿ ಪವಿತ್ರ ಗ್ರಂಥಗಳು ಎಲ್ಲರ ಮನಸ್ಸನ್ನು ಆಕರ್ಷಿಸುವುದರಲ್ಲಿ ಆಶ್ಚರ್ಯವೇನೂ ಕಂಡುಬರುವುದಿಲ್ಲ.

(ಮುಂದುವರಿಯುವುದು)

ಶ್ರೀ ನವಭಾರತ ಆಶ್ರಮ

ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕೆ

## (ಮಾಲೆ—ಹದಿನಾಲ್ಕು)

## ಶ್ರೇಷ್ಠ ಧರ್ಮಗಳಿಗೆ ಆಧಾರವಾದ ಪವಿತ್ರ ಗ್ರಂಥಗಳ ಮಹತ್ವ

### ಭಾಗ–೩.

ಶಿಷ್ಯ:—ಇಲ್ಲಿಯವರೆಗೆ ಪವಿತ್ರ ಗ್ರಂಥಗಳಿಗೆ ಜನರು ಬಹಳ ಹೆಚ್ಚಾದ ಬೆಲೆಯನ್ನು ಕೊಟ್ಟು ಅವನ್ನು ಪೂಜಿಸುವರು ಎಂಬ ವಿಚಾರವನ್ನು ತಿಳಿಯಪಡಿಸಿದಿರಿ. ಆದಾಗ್ಯೂ ಪವಿತ್ರ ಗ್ರಂಥಗಳನ್ನು ಸರಿಯಾಗಿ ತಿಳಿದುಕೊಳ್ಳದೆ ಇರುವುದರಿಂದ ಸಮಾಜದಲ್ಲಿ ಅನೇಕ ದೋಷಗಳು ಕಂಡುಬಂದಿವೆ ಎಂದು ಹೇಳುತ್ತೀರಿ. ಆ ದೋಷಗಳಾವುವು?

ಗುರು:—ಪವಿತ್ರ ಗ್ರಂಥಗಳ ಅಭಿಪ್ರಾಯಗಳನ್ನು ಸ್ವಾರ್ಥತೆಯಿಂದ ಸರಿಯಾಗಿ ತಿಳಿದುಕೊಳ್ಳದೆ ಇರುವುದರಿಂದ ಸಮಾಜದಲ್ಲಿ ಅನೇಕವೇಳೆ ಕೆಳಗೆ ವಿವರಿಸಿರುವ ದೋಷಗಳು ಕಂಡುಬಂದಿವೆ. (೧) ಪವಿತ್ರ ಗ್ರಂಥಗಳು ಹುಟ್ಟಿ ಅನೇಕ ವರುಷಗಳಾದ ಮೇಲೆ ಅವುಗಳ ವಿಚಾರಗಳಲ್ಲಿ ಮೂಢ ನಂಬಿಕೆಗಳು ಮತ್ತು ಪವಾಡಗಳು ವಂಶಪಾರಂಪರ್ಯವಾಗಿ ಜನರ ಮನಸ್ಸಿನಲ್ಲಿ ಬೆಳೆಯುತ್ತಲೇ ಇರುವುವು. ಆಗ ತಮ್ಮ ಪವಿತ್ರ ಗ್ರಂಥಗಳಲ್ಲಿ ಹೇಳಿರುವ ವಿಚಾರಗಳು ಪ್ರತ್ಯಕ್ಷ ಅನುಭವದ ಪ್ರಮಾಣಗಳಿಗೆ ವಿರೋಧವಾಗಿದ್ದರೂ ಜನರು ಅವುಗಳನ್ನು ನಂಬುತ್ತಲೇ ಇರುವರು; ಏಕೆಂದರೆ ಹಾಗೆ ನಂಬಿ ನಡೆಯದಿದ್ದರೆ ತಮಗೆ ಮುಂದೆ ಕೇಡಾಗುವುದೆಂದು ಭಯಪಡುವರು. (೨) ಸ್ವಾರ್ಥಭಾವನೆಯನ್ನು ಪಡೆದಿರುವ ಕೆಲವು ಮತಗಳ ಮುಖಂಡರು ಹಣ ಸಂಪಾದಿಸುವುದಕ್ಕೋಸ್ಕರ ಪವಿತ್ರ ಗ್ರಂಥಗಳ ಅರ್ಥವನ್ನು ತಾವು ಮಾತ್ರ ತಿಳಿದಿರುವೆವೆಂದು ವಾದಿಸಿ, ಜನರು ತಾವಾಗಿಯೇ ಪವಿತ್ರ ಗ್ರಂಥಗಳನ್ನು ವ್ಯಾಸಂಗ ಮಾಡಲು ಅವಕಾಶಕೊಡದೆ, ಅವರಿಗೆ ತಾವೇ ಉಪದೇಶ ಮಾಡುತ್ತಾ, ಅವರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡು, ಅವರ ಮನಸ್ಸಿನಲ್ಲಿ ತಮ್ಮ ಮತದ ಪವಿತ್ರ ಗ್ರಂಥ

ಗಳಲ್ಲಿ ಮಾತ್ರ ಅದ್ಭುತವಾದ ಪವಾಡಗಳನ್ನು ಬೆಳೆಸುತ್ತಲೇ ಇರುವರು (೩) ಒಂದು ಪವಿತ್ರ ಗ್ರಂಥಕ್ಕೆ ಕೆಲವು ವರುಷಗಳಾದ ಮೇಲೆ ಅನೇಕ ವ್ಯಾಖ್ಯಾನಗಳುಂಟಾಗುವುವು; ಇನ್ನೂ ಕೆಲವು ವರುಷಗಳಾದ ಮೇಲೆ ಈ ವ್ಯಾಖ್ಯಾನಗಳೂ ಪವಿತ್ರ ಗ್ರಂಥಗಳಾಗುವುವು. ಕ್ರಮೇಣ ಈ ವ್ಯಾಖ್ಯಾನಗಳಿಗೆ ಉಪವ್ಯಾಖ್ಯಾನಗಳು ಹುಟ್ಟುವುವು; ಕೆಲವು ವರುಷಗಳಾದ ಮೇಲೆ ಇವೂ ಪವಿತ್ರ ಗ್ರಂಥಗಳಾಗುವುವು. ಹೀಗೆ ಒಂದು ಮತದಲ್ಲಿ ಪವಿತ್ರ ಗ್ರಂಥಗಳು ಹೆಚ್ಚುತ್ತಲೇ ಹೋಗಿ ಇವರಿಂದ ಮುಖ್ಯ ವಿಚಾರಗಳಲ್ಲಿ ವಿರುದ್ಧ ಅಭಿಪ್ರಾಯಗಳು ಬೆಳೆದು ಸಂದೇಹಗಳುಂಟಾಗಿವೆ. ಈ ವ್ಯಾಖ್ಯಾನಗಳಲ್ಲಿರುವ ಭಾವಗಳಿಂದ ಜನರು ಪವಿತ್ರ ಗ್ರಂಥಗಳಲ್ಲಿರುವ ಸಾರವಾದ ತತ್ತ್ವಹಿತ ಪುರುಷಾರ್ಥಗಳಲ್ಲಿ ಶ್ರದ್ಧೆಯನ್ನಿಡದೆ ಕೆಲಸಕ್ಕೆ ಬಾರದ ಅಲ್ಪವಿಚಾರಗಳಲ್ಲಿ ಬುದ್ಧಿಯನ್ನೆಲ್ಲಾ ಉಪಯೋಗಿಸುತ್ತ, ವಿಜ್ಞಾನಶಾಸ್ತ್ರದ ಶೋಧನೆಗಳಿಗೂ, ತತ್ತ್ವಶಾಸ್ತ್ರಗಳ ನಿರ್ಣಯಗಳಿಗೂ, ಕಾವ್ಯಗಳಲ್ಲಿ ಉತ್ಪ್ರೇಕ್ಷೆಮಾಡುವ ಮಾನಸಿಕ ಭಾವನೆಗಳಿಗೂ ಮತ್ತು ದಿವ್ಯಜ್ಞಾನವನ್ನು ಪಡೆದ ಮಹಾತ್ಮರ ಸಂದೇಶಗಳಿಗೂ ಇರುವ ವ್ಯತ್ಯಾಸಗಳನ್ನು ಅರಿಯುವ ಶಕ್ತಿಯನ್ನೇ ಕಳೆದುಕೊಳ್ಳುವರು. (೪) ಬೇರೆ ಬೇರೆ ಗುಂಪಿನ ಜನರು ತಮ್ಮ ತಮ್ಮ ಪವಿತ್ರ ಗ್ರಂಥಗಳಿಗೆ ಮಾತ್ರ ಬೆಲೆಯನ್ನುಕೊಟ್ಟು ಅವುಗಳ ಮೇಲಿನ ಸ್ವಾರ್ಥ ಅಭಿಮಾನದಿಂದ ಕೂಡಿದ ಮೋಹದಿಂದ ಇತರ ಗುಂಪಿನವರ ಪವಿತ್ರ ಗ್ರಂಥಗಳನ್ನು ದ್ವೇಷಿಸುವರು. ಇದರ ಮೇಲೆ ಸ್ವಾರ್ಥಪರರು ತಮ್ಮ ಅನುಕೂಲಕ್ಕಾಗಿ ಇತರ ಮತಗಳಮೇಲೆ ಅಪಪ್ರಚಾರಮಾಡುವ ಅಭಿಪ್ರಾಯಗಳನ್ನು ಪವಿತ್ರ ಗ್ರಂಥಗಳಲ್ಲಿ ಅಲ್ಲಲ್ಲಿ ಸೇರಿಸುವರು. ಇದರ ಪರಿಣಾಮವಾಗಿ ಮನುಷ್ಯ ಸಮಾಜದಲ್ಲಿ ಅನೇಕ ತೊಂದರೆಗಳೂ ಕೇಡುಗಳೂ ಉಂಟಾಗಿವೆ. ಇತರ ಮತಸ್ಥರನ್ನು ಬಲಾತ್ಕಾರದಿಂದ ಸ್ವಮತಕ್ಕೆ ಸೇರಿಸಿಕೊಳ್ಳುವ ಕಾರ್ಯಗಳು ನಡೆದಿವೆ. ಮತ್ತು ದುಷ್ಟಯುದ್ಧಗಳಿಂದ ಲಕ್ಷಾಂತರ ಜನರು ಸತ್ತಿರುವರು. ಕ್ರಿ. ಶ. ಹದಿನೈದು ಹದಿನಾರನೆ ಶತಮಾನಗಳಲ್ಲಿ ಕ್ರಿಸ್ತಿಯನ್ ಚರ್ಚಿನವರು ದೇಶಭಕ್ತರೂ ಮೇಧಾವಿಗಳೂ ಆದ ವೈಜ್ಞಾನಿಕರನ್ನು ತತ್ತ್ವಶಾಸ್ತ್ರಜ್ಞರನ್ನು ಬಹಳವಾಗಿ ಹಿಂಸಿಸಿದುದಲ್ಲದೆ ಕೆಲವರನ್ನು ಕೊಂದರು; ಇಸ್ಲಾಂಮತದ ಪ್ರಚಾರಕ್ಕಾಗಿ ಅನೇಕ ಯುದ್ಧಗಳಾದುವು; ಭಾರತದಲ್ಲಿಯೂ ಕೂಡ ಕೆಲವು ಮತದಾಯಿಯವರಿಗೆ ಹಿಂಸೆಗಳನ್ನು ಕೊಟ್ಟಿದ್ದಾರೆ. (೫) ಪವಿತ್ರ ಗ್ರಂಥಗಳಲ್ಲಿ ಉಪದೇಶವಾಗಿರುವ ಉತ್ತಮ ಆಚರಣೆಗಳಲ್ಲಿ ಜನರಿಗೆ ಶ್ರದ್ಧೆಯೂ ಭಕ್ತಿಯೂ ಹೆಚ್ಚಲಿ ಎಂಬ ಅಭಿಪ್ರಾಯದಿಂದ ಅಲ್ಲಲ್ಲಿ ಫಲಶ್ರುತಿಗಳು ಕಂಡುಬರುತ್ತವೆ. ಆದರೆ ಸ್ವಾರ್ಥಮತೀಯ ಉಪನ್ಯಾಸಕರು ಸಾಮಾನ್ಯ ಜನರಲ್ಲಿ ಆ ಫಲಗಳನ್ನು ಹೊಂದುವ ವಿಚಾರದಲ್ಲೇ ಅಧಿಕವಾದ ಆಸೆಗಳನ್ನೂ ಮೂಢನಂಬಿಕೆಗಳನ್ನೂ ಹುಟ್ಟಿಸುತ್ತಾರೆ. ಇದರಿಂದ ಜನರು ಭಗವಂತನಲ್ಲಿ ಭಕ್ತಿಯನ್ನು ಇಡದೆ,

ಫಲಶ್ರುತಿಗಳಿಗೆ ಹೆಚ್ಚು ಗಮನಕೊಟ್ಟು, ಭಗವಂತನಿಗಿಂತಲೂ ಕೆಲವು ಶಾಸ್ತ್ರಗಳನ್ನು ಅಥವ ಮಂತ್ರಗಳನ್ನು ಉಚ್ಚರಿಸುವುದೇ ಐಹಿಕಶ್ರೇಯಸ್ಸಿಗೆ ಸಾಧನೆಗಳೆಂದು ನಂಬಿ, ಜ್ಞಾನಭಕ್ತಿ ರಹಿತವಾದ ಕೇವಲ ಬಾಹ್ಯಾಚಾರಗಳಲ್ಲೇ ಶ್ರದ್ಧೆಯನ್ನಿಡುವರು. ಅವರು ಪವಿತ್ರ ಗ್ರಂಥಗಳ ಸಾರವಾದ ಉಪದೇಶಗಳ ಅರ್ಥವನ್ನು ತಿಳಿಯಲು ಮತ್ತು ಅವುಗಳಲ್ಲಿ ವಿವರಿಸಿರುವ ಉತ್ತಮ ಯೋಗಾಭ್ಯಾಸಗಳನ್ನು ಆಚರಿಸಲು ಪ್ರಯತ್ನಪಡುವುದೇ ಇಲ್ಲ. (೬) ಭಗವಂತನು ಅದ್ವಿತೀಯ ಮಹಾಪುರುಷನು ಮತ್ತು ಅಪಾರವಾದ ಶಕ್ತಿಯುಳ್ಳವನು ಎಂಬ ಉಪದೇಶದ ಫಲವಾಗಿ ಬಹುಮಂದಿ ಸಾಧಾರಣ ಜನರು ಆ ಪರಮೇಶ್ವರನು ತಮ್ಮನ್ನು ತಮ್ಮ ಪಾಪಗಳಿಗಾಗಿ ಶಿಕ್ಷಿಸುವನು ಎಂಬ ಒಂದು ವಿಧವಾದ ಭಯವನ್ನು ಯಾವಾಗಲೂ ಹೊಂದಿರುವರು. ಆಗ ಸ್ವಾರ್ಥ ಉಪದೇಶಕರು ಅವರಲ್ಲಿ ಈ ಭಯವನ್ನು ಹೋಗಲಾಡಿಸುವ ನೆಪದಲ್ಲಿ, ಅವರಹತ್ತಿರ ಪೂಜೆ, ಮಂತ್ರಜಪ, ಹೋಮಾದಿಗಳನ್ನು ಮಾಡಿಸುತ್ತಾ ಅವರನ್ನು ತಮ್ಮ ವಶದಲ್ಲಿಟ್ಟುಕೊಳ್ಳುವರು. ಇದರಿಂದ ಜನರು "ಉದ್ಧರೇದಾತ್ಮನಾತ್ಮಾನಂ" ಅಂದರೆ ತನ್ನ ಶ್ರೇಯಸ್ಸಿಗೆ ತಾನೇ ದುಡಿಯಬೇಕೆಂಬ ಉಪದೇಶದ ಪ್ರಕಾರ ವೈರಾಗ್ಯ, ಪ್ರಾರ್ಥನೆ, ಧ್ಯಾನ, ಪರೋಪಕಾರಕಾರ್ಯಗಳಲ್ಲಿ ನಿರತರಾಗುವುದಕ್ಕೆ ಬದಲು ಕ್ರಮೇಣ ಪುರೋಹಿತರು, ಪೂಜಾರಿಗಳು, ಪಾದ್ರಿಗಳು, ಮುಲ್ಲಾಗಳು ಇವರುಗಳ ಸಹಾಯವನ್ನೇ ಎದುರು ನೋಡುತ್ತಿರುವರು. (೭) ಪವಿತ್ರ ಗ್ರಂಥಗಳಲ್ಲಿ ಅನೇಕ ಕಡೆ "ನಮ್ಮ ಸುಖದುಃಖಗಳೆಲ್ಲವೂ ಕರ್ಮಾಧೀನವು" ಮತ್ತು "ಸಕಲವೂ ಭಗವಂತನ ಇಚ್ಛೆಗೆ ಅಧೀನವಾಗಿದೆ" ಎಂದು ಹೇಳಿರುವ ಉಪದೇಶಗಳ ಅರ್ಥಗಳನ್ನು ಸರಿಯಾಗಿ ತಿಳಿದುಕೊಳ್ಳದೆ, ಜನಸಾಮಾನ್ಯರು ಅನೇಕವೇಳೆ ಕರ್ತವ್ಯಭ್ರಷ್ಟರಾಗಿ ಸೋಮಾರಿಗಳಾಗುತ್ತಾರೆ. "ಎಲ್ಲವೂ ಭಗವಂತನ ಇಚ್ಛೆಗೆ ಅಧೀನವಾದ ಮೇಲೆ ನಾವು ಮಾಡುವ ಕರ್ಮಕ್ಕೆ ಬೆಲೆಯಿಲ್ಲ" ಎಂಬ ಸಂದೇಹದಲ್ಲಿ ಮುಳುಗಿ ಶಾಸ್ತ್ರಗಳಲ್ಲಿ ಹೇಳಿರುವ ನಿತ್ಯನೈಮಿತ್ತಿಕ ಕರ್ಮಗಳನ್ನೂ, ಸಾಮಾಜಿಕ ಕರ್ತವ್ಯಗಳನ್ನೂ ಉತ್ಸಾಹದಿಂದ ನಡೆಸುವುದಿಲ್ಲ. ಈ ಕಾರಣದಿಂದ ದೇಶವೂ, ದೇಶದ ಸರ್ಕಾರವೂ, ಸಮಾಜವೂ ಹೀನಸ್ಥಿತಿಗೆ ಬರುತ್ತವೆ. (೮) ಕೆಲವು ವೇಳೆ ಮತಪ್ರಚಾರಕರು "ಪ್ರಪಂಚವೆಲ್ಲವೂ ಮಾಯೆಯು, ನಿಜವಲ್ಲ" ಎಂಬ ಪವಿತ್ರ ಗ್ರಂಥಗಳ ಉಪದೇಶವನ್ನು ಸರಿಯಾಗಿ ತಿಳಿದುಕೊಳ್ಳದೆ ಪ್ರಾಪಂಚಿಕ ವಿಷಯಗಳಲ್ಲಿ ಸುಖವೇ ದೊರೆಯುವುದಿಲ್ಲವೆಂಬ ಭಾವನೆಯನ್ನು ಹೃದಯದಲ್ಲಿ ಬೆಳೆಸಿ ನಿರಾಶಾವಾದಿಗಳಾಗುವರು. ಇವರ ವಿಪರೀತ ಉಪದೇಶಗಳಿಂದ ಸಮಾಜದಲ್ಲಿ ಬಹುಮಂದಿಯ ಶಕ್ತಿ, ಉತ್ಸಾಹ, ಸಾಹಸಗಳ ಬೆಳವಣಿಗೆಗೆ ಪ್ರತಿಬಂಧಕಗಳುಂಟಾಗಿ ಆ ಸಮಾಜವು ಅಭಿವೃದ್ಧಿಯನ್ನು ಹೊಂದುವುದೇ ಬಹಳ ಕಷ್ಟವಾಗುವುದು.

# 4

**ಶಿಷ್ಯ:**—ಇನ್ನು ಮುಂದೆ ಈ ದೋಷಗಳು ನಿವಾರಣೆಯಾಗಲು ಈಗ ನಾವು ಪವಿತ್ರ ಗ್ರಂಥಗಳಲ್ಲಿರುವ ಯಾವ ಉಪದೇಶಗಳಿಗೆ ಹೆಚ್ಚಾದ ಬೆಲೆಯನ್ನು ಕೊಡಬೇಕು?

**ಗುರು:**—"ತಮೋಗುಣವನ್ನು ಪಡೆದು ಮೃಗಸ್ಥಿತಿಯಲ್ಲಿರುವ ಮನುಷ್ಯನು ರಜೋಗುಣವನ್ನು ಬೆಳೆಸಿ ಪ್ರತಿಭೆಯಿಂದ ಕೂಡಿದ ಮನುಷ್ಯಸ್ಥಿತಿಯನ್ನು ಪಡೆಯಬೇಕು; ಆಮೇಲೆ ರಜೋಗುಣವನ್ನು ಮೀರಿ ಸತ್ವಗುಣವನ್ನು ವೃದ್ಧಿಪಡಿಸಿ ದೈವಿಕಸ್ಥಿತಿಯನ್ನು ಪಡೆಯಬೇಕು; ತರುವಾಯ ದಿವ್ಯಜ್ಞಾನ ಅಥವ ಯೋಗಜನ್ಯ ಜ್ಞಾನವನ್ನು ಬೆಳೆಸುತ್ತಾ ಅವನು ಯೋಗಿಯಾಗಿ, ಜ್ಞಾನಿಯಾಗಿ ಭಕ್ತನಾಗಿ ಆತ್ಮನನ್ನೂ, ಬ್ರಹ್ಮನನ್ನೂ, ಭಗವಂತನನ್ನೂ ನೇರಾಗಿ ಸಾಕ್ಷಾತ್ಕರಿಸಬೇಕು" ಎಂಬುದೇ ಎಲ್ಲಾ ಪವಿತ್ರ ಗ್ರಂಥಗಳ ಸಾರವಾದ ಮತ್ತು ಮುಖ್ಯವಾದ ಉಪದೇಶ. ನಾವು ಈಗ ಜಗತ್ತನ್ನು ಹೇಗೆ ಅನುಭವಿಸುತ್ತೇವೆಯೋ ಅದೇರೀತಿಯಲ್ಲಿ ನಾವು ಸತ್ಯವನ್ನೂ ಬ್ರಹ್ಮನನ್ನು ಅಥವ ಭಗವಂತನನ್ನು ಸಾಕ್ಷಾತ್ಕರಿಸಲೇಬೇಕು ಎಂಬುದೇ ನಮ್ಮ ಪರಮಗುರಿಯಾಗಿರಬೇಕು. ಇದು ಬರಿಯ ಮನಸ್ಸಿನ ಭಾವನೆಯಾಗಿದ್ದರೆ ಮಾತ್ರ ಸಾಲದು; ಅದು ನಮ್ಮ ಅನುಭವದಲ್ಲಿ ಸಾಕ್ಷಾತ್ತಾಗಿ ಗೋಚರವಾಗಬೇಕು. ತಾಯಿಯು ಮಗುವಿನ ಹತ್ತಿರ ಆಹಾರವನ್ನು ತಂದಿಡಬಹುದು; ಆದರೆ ಮಗುವು ಆ ಆಹಾರವನ್ನು ತಾನೇ ತಿಂದು ಜೀರ್ಣಿಸಿಕೊಳ್ಳಬೇಕಲ್ಲವೆ? ಹಾಗೆಯೇ ಮಹಾಚಾರ್ಯರುಗಳೂ ಪವಿತ್ರ ಗ್ರಂಥಗಳೂ ನಮಗೆ ತತ್ವಗಳನ್ನು ಉಪದೇಶಮಾಡಿ ಅವನ್ನು ನಮ್ಮ ಬುದ್ಧಿಯ ಮುಂದೆ ಇಡುತ್ತಾರೆ; ಆದರೆ ಆ ತತ್ವಗಳನ್ನು ನಾವೇ ಸಾಕ್ಷಾತ್ತಾಗಿ ಅನುಭವಿಸಿದಲ್ಲದೆ ಅವು ನಮಗೆ ಶ್ರೇಯಸ್ಸನ್ನುಂಟುಮಾಡುತ್ತವೆ. ಅನೇಕ ವರುಷಗಳಕಾಲ ದೇವರವಿಚಾರ ಮಾತನಾಡುವುದರಿಂದಲಾಗಲಿ ಅಥವ ಇತರರೊಡನೆ ದೇವರವಿಚಾರ ಚರ್ಚೆಮಾಡುವುದರಿಂದಲಾಗಲೀ ನಾವು ನಮ್ಮ ನಿಜಸ್ವರೂಪವಾದ ಆತ್ಮನನ್ನೂ ಮತ್ತು ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾಗಿರುವ ಪರಮಾತ್ಮನನ್ನು ಸಾಕ್ಷಾತ್ಕರಿಸಿ ಆನಂದ ಪಡುವುದಕ್ಕೆ ಆಗುವುದಿಲ್ಲ. ಮನುಷ್ಯನು ಒಂದು ಸುಂದರವಾದ ತೋಟವನ್ನು ನೋಡಿ ಆನಂದ ಪಡಬೇಕಾದರೆ ಆ ತೋಟದ ವಿಚಾರವಾಗಿ ಮಾತನಾಡಿದರೆ ಮತ್ತು ಅದರ ವಿಚಾರವನ್ನು ಬುದ್ಧಿಯಲ್ಲಿ ಮಾತ್ರ ತಿಳಿದುಕೊಂಡರೆ ಸಾಲದು. ಅವನೇ ಆ ತೋಟಕ್ಕೆ ಹೋಗಿ ಅದನ್ನು ಅನುಭವಿಸಿ ಆನಂದಪಡಬೇಕಲ್ಲವೆ? ಹಾಗೆಯೇ ಸಾಧಕನು ದೇವರನ್ನು ಸಾಕ್ಷಾತ್ಕರಿಸಿ ಆನಂದಪಡಬೇಕಾದರೆ, ತನ್ನ ಮಹಾಚಾರ್ಯರು ಪವಿತ್ರ ಗ್ರಂಥಗಳಲ್ಲಿ ಬೋಧಿಸಿರುವ ಸಾಧನೆಗಳನ್ನು ಕೈಗೊಂಡು ನಿತ್ಯಜೀವನದಲ್ಲಿ ಅವನ್ನು ಆಚರಿಸಬೇಕು. ಪವಿತ್ರ ಗ್ರಂಥಗಳ ವಿಚಾರವಾಗಿ

ಪಾಠ ಮಾಡುವುದು ಮತ್ತು ಉಪನ್ಯಾಸ ಮಾಡುವುದು ಇವುಗಳಿಂದ ಮಾತ್ರ ಈ ಪುರುಷಾರ್ಥವು ಕೈಗೂಡುವುದಿಲ್ಲ.

ಇನ್ನೊಂದು ವಿಚಾರವನ್ನು ನಾವು ಗಮನದಲ್ಲಿಡಬೇಕು. ಭಗವಂತನು ದೂರದಲ್ಲಿರುವ, ಕಣ್ಣಿಗೆ ಕಾಣದ, ತಿಳಿಯಲಸಾಧ್ಯವಾದ, ದಿವ್ಯವಾದ ಪರಮಪದ, ವೈಕುಂಠ ಅಥವ ಹೆವನ್ ಎಂಬ ದಿವ್ಯ ಸ್ಥಳದಲ್ಲಿದ್ದು ತನ್ನ ಅನಂತ ಶಕ್ತಿಯಿಂದ ಪ್ರಪಂಚದ ರಾಜ್ಯವನ್ನು ಆಳುವನು ಎಂಬ ಅಭಿಪ್ರಾಯವನ್ನು ಮಾತ್ರ ನಾವು ಇಟ್ಟುಕೊಂಡರೆ ಆಗ "ನಮಗೆ ಭಗವಂತನು ಸಿಕ್ಕುವುದಿಲ್ಲ"ವೆಂಬ ನಿರಾಶೆಯಿಂದ ಕೂಡಿದ ಭಾವನೆಯು ನಮ್ಮ ಹೃದಯದಲ್ಲಿ ಹುಟ್ಟುತ್ತದೆ; ಆದರಿಂದ ನಾವು ಧರ್ಮಗಳನ್ನು ನಡೆಸುವುದರಲ್ಲಿ ಶ್ರದ್ಧೆಯನ್ನು ಪಡೆಯುವುದಿಲ್ಲ ಅಥವ ಅವನ್ನು ಅಲ್ಪಸ್ವಲ್ಪ ನಡೆಸಿದರೂ ಭಯದಿಂದ ವರ್ತಿಸುತ್ತೇವೆ. ಭಗವಂತನನ್ನು ದೂರದಲ್ಲಿರುವ ಒಬ್ಬ ಚಕ್ರವರ್ತಿಯನ್ನಾಗಿ ಭಾವಿಸುವುದಕ್ಕಿಂತ, ವಿಶಾಲವಾದ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನಾಗಿರುವ ಆ ಭಗವಂತನೇ ನಿಜವಾಗಿ ಸಂಪೂರ್ಣ ಜಗತ್ತಿನಲ್ಲೂ, ಎಲ್ಲಾ ಪದಾರ್ಥಗಳಲ್ಲೂ, ಎಲ್ಲಾ ಚಲನೆಗಳಲ್ಲೂ ಎಡ ಬಿಡದೆ ಪ್ರವೇಶಮಾಡಿ ಎಲ್ಲೆಲ್ಲಿಯೂ ಅಂತರ್ಯಾಮಿಯಾಗಿದ್ದು ದಯಾವಂತನಾಗಿ ಪ್ರಪಂಚದ ಕಾರ್ಯಗಳನ್ನೂ ಕಟ್ಟಳೆಗಳನ್ನೂ ನಡೆಸುತ್ತಲೇ ಇರುವನೆಂದು ದೃಢವಾಗಿ ನಂಬುವುದರಿಂದ ನಮಗೂ ಲೋಕಕ್ಕೂ ಹೆಚ್ಚು ಶ್ರೇಯಸ್ಸುಗಳುಂಟಾಗುವುವು. ಏಕೆಂದರೆ, ಈ ಎರಡನೇ ತೀರ್ಮಾನದ ಪ್ರಕಾರ ಭಗವಂತನು ಪ್ರಪಂಚದಲ್ಲಿರುವ ಪ್ರತಿಯೊಂದು ಪದಾರ್ಥದಲ್ಲೂ (ಮುಖ್ಯವಾಗಿ ನದಿ, ಬೆಟ್ಟ, ಸಮುದ್ರ, ನಕ್ಷತ್ರ, ಚಂದ್ರ, ಸೂರ್ಯಾದಿ ಅದ್ಭುತ ಪದಾರ್ಥಗಳಲ್ಲೂ) ಅಂತರ್ಯಾಮಿಯಾಗಿರುವುದು ಮಾತ್ರವಲ್ಲದೆ, ಪ್ರತಿಯೊಬ್ಬ ಪ್ರಾಣಿಯಲ್ಲಿ, ಮುಖ್ಯವಾಗಿ ಮನುಷ್ಯನ ಹೃದಯದಲ್ಲಿ ಅಂತರ್ಯಾಮಿಯಾಗಿರುವನು ಎಂಬ ಹೊಸಭಾವನೆಯು ಎಲ್ಲರ ಹೃದಯದಲ್ಲಿಯೂ ಉದ್ಭವಿಸುತ್ತದೆ. ಆಗ ಪ್ರತಿಯೊಬ್ಬನೂ ಇತರರನ್ನು ಭಗವಂತನ ಸ್ವರೂಪಿಗಳೆಂದು ಭಾವಿಸಿ ಅವರನ್ನು ಪೂಜಿಸುವುದಕ್ಕಾಗಿ ಸ್ವಾರ್ಥತೆಯನ್ನು ಬಿಟ್ಟು ಪರೋಪಕಾರ ಕಾರ್ಯಗಳಲ್ಲಿ ನಿರತನಾಗುತ್ತಾನೆ. ಜ್ಞಾನಿಗಳು ತಮ್ಮ ಹೃದಯದಲ್ಲೇ ಭಗವಂತನನ್ನು ಸಾಕ್ಷಾತ್ಕರಿಸುವುದರಿಂದ ತಮ್ಮ ಶರೀರಗಳನ್ನೇ ದೇವರ ಗುಡಿಗಳನ್ನಾಗಿ ಭಾವಿಸುವರು. ಹಾಗೆಯೇ ಭಕ್ತರೂ ಕೂಡ ಅದ್ಭುತ ಪದಾರ್ಥಗಳಲ್ಲಿ ಅಂತರ್ಯಾಮಿಯಾಗಿರುವ ಭಗವಂತನ ದಿವ್ಯಮಂಗಳ ವಿಗ್ರಹಗಳನ್ನು ಸಾಕ್ಷಾತ್ಕರಿಸಿ ಆ ಪದಾರ್ಥಗಳೆಲ್ಲವನ್ನೂ ದೇವರ ಗುಡಿಗಳನ್ನಾಗಿ ಭಾವಿಸುವರು. ಈ ಹೊಸ ಭಾವನೆಗಳ ಪರಿಣಾಮವೇನು? ಭಗವಂತನು ನಿಜವಾಗಿ ನಿನ್ನ ನನ್ನ, ಇವನ ಅವನ, ಇವಳ ಅವಳ, ಇವರ ಅವರ ಸತ್ಯವಾದ ಅಂತರ್ಯಾಮಿಯಾಗಿರುವುದರಿಂದ ಆಗ ಎಲ್ಲರೂ ಭಗವಂತನ ವಿಶಿಷ್ಟ ಸ್ವರೂಪವಾದುದೆಂದು

ಪ್ರತಿಯೊಬ್ಬ ಪ್ರಜೆಯೂ ಮನುಷ್ಯ ಸಮಾಜದಲ್ಲಿರುವವರೆಲ್ಲರನ್ನೂ ವಿಶ್ವಾಸದಿಂದಲೂ ಗೌರವದಿಂದಲೂ ಕಂಡು ಅವರ ಕ್ಷೇಮಕ್ಕೆ ಶಕ್ತ್ಯನುಸಾರ ಸೇವೆಮಾಡುವ ಹೊಸ ಪವಿತ್ರ ಸ್ವಭಾವವನ್ನು ಪಡೆಯುವನು. ಅದರಿಂದ ಸಮಾಜದಲ್ಲಿ ಏಕಮತ್ಯವೂ ಶಾಂತಿಯೂ, ಅನುಕೂಲ್ಯಗಳೂ ಉಂಟಾಗುವುವು.

**ಶಿಷ್ಯ:**—ಇಲ್ಲಿಯವರೆಗೆ ಪವಿತ್ರ ಗ್ರಂಥಗಳ ಮಹತ್ವವನ್ನೂ ಮತ್ತು ಅವುಗಳಲ್ಲಿರುವ ಸಾರವಾದ ಭಾವನೆಗಳನ್ನೂ ತಿಳಿದೆನು. ಆದರೆ "ಮತಸ್ಥಾಪಕರು ದಿವ್ಯಜ್ಞಾನವನ್ನು ಪಡೆದಿದ್ದರು" ಎಂಬುದೇ ಪವಿತ್ರ ಗ್ರಂಥಗಳ ಮಹತ್ವಕ್ಕೆ ನಿಜವಾದ ಕಾರಣ ಅಥವ ಆಧಾರ. ಆದುದರಿಂದ ದಯವಿಟ್ಟು ಈ ದಿವ್ಯಜ್ಞಾನದ ಸ್ವರೂಪವೇನು, ಅದಕ್ಕೂ ತರ್ಕಜ್ಞಾನಕ್ಕೂ ಸಂಬಂಧವೇನು ಎಂಬ ನನ್ನ ಸಂದೇಹವನ್ನು ಪರಿಹರಿಸಿ.

**ಗುರು:**—ಪ್ರತಿ ಮನುಷ್ಯನಲ್ಲಿಯೂ ಮೂರು ಅಂತಸ್ಥಿತ ಜ್ಞಾನಶಕ್ತಿಗಳಿವೆ. ವಿಚಾರವಿಲ್ಲದೆ, ತರ್ಕಿಸದೆ ಮನಸ್ಸು ಸುತ್ತಲಿರುವ ವಿಷಯಗಳನ್ನು ಗ್ರಹಿಸುವ ಜ್ಞಾನವು, ಅಂದರೆ ಪ್ರಾಣಿಗಳಿಗೆ ಸಹಜವಾದ, ಕಲಿಯದೆ ಬಂದ ಅಂತರ್ದೃಷ್ಟಿ, ಅಂತರ್ಬೋಧೆ ಅಥವ ಒಳ ಅರಿವು (Instinct) ಮೊದಲನೆಯದು. ಒಂದು ಗೋಡೆಯಲ್ಲಿರುವ ಬಿಲದಲ್ಲಿ ಸಕ್ಕರೆಯನ್ನು ಇಟ್ಟರೆ ಇರುವೆಗಳು ಆ ಸಕ್ಕರೆಯನ್ನು ಕಂಡುಹಿಡಿಯುವ ಶಕ್ತಿಯು ಈ ಅಂತರ್ಬೋಧೆಗೆ ಉದಾಹರಣೆಯು. ಜಗತ್ತಿನ ಪದಾರ್ಥಗಳನ್ನೂ, ಶಕ್ತಿಗಳನ್ನೂ, ಚಲನೆಗಳನ್ನೂ ಜ್ಞಾನೇಂದ್ರಿಯಗಳಿಂದಲೂ ಮನಸ್ಸಿನಿಂದಲೂ ತಿಳಿದು ಪ್ರಕೃತಿಯ ಸೂಕ್ಷ್ಮ ಮತ್ತು ಸ್ಥೂಲವಾದ ಕಟ್ಟಳೆಗಳನ್ನು ಅನುಮಾನಿಸಬಲ್ಲ ತರ್ಕಸೂತ್ರಬದ್ಧವಾದ ವಿಜ್ಞಾನವು (Logical Intellect) ಎರಡನೆಯದು. ಅಂತರ್ಬೋಧೆಯಲ್ಲದ (Instinct) ಇಂದ್ರಿಯ ಮನೋಬುದ್ಧಿಗಳ ಸಹಾಯವಿಲ್ಲದೆ ಪದಾರ್ಥಗಳ ಮತ್ತು ಜೀವಿಗಳ ಸೂಕ್ಷ್ಮವಾದ ಸತ್ಯವನ್ನು ಅನುಭವಿಸಲು ಶಕ್ತಿಯನ್ನು ಕೊಡುವ ದೈವಿಕವಾದ ಮತ್ತು ಪವಿತ್ರವಾದ ದಿವ್ಯಜ್ಞಾನ, ಯೋಗಜನ್ಯ ಜ್ಞಾನ, ಸ್ವಯಂಪ್ರಕಾಶ ಜ್ಞಾನ ಅಥವ ಸಮಾಧಿ ಜ್ಞಾನ (Inspiration) ಎಂಬುದು ಮೂರನೆಯದು. ಬಹುಮಂದಿಯಾದ ನಮಗೆ ಮೊದಲ ಎರಡು ವಿಜ್ಞಾನಶಕ್ತಿಗಳ ಸ್ವರೂಪಗಳು ಅನುಭವದಲ್ಲಿರುವುವು; ಆದರೆ ಮೂರನೇಯದಾದ ದಿವ್ಯಜ್ಞಾನದ ಸ್ವರೂಪವು ಅದನ್ನು ಪಡೆದಿರುವ ಮಹಾತ್ಮರಿಗೆ ಮಾತ್ರ ಗೋಚರವಾಗುವುದು. ಆದರೆ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಈ ದಿವ್ಯಜ್ಞಾನಶಕ್ತಿಯು ಅವ್ಯಕ್ತವಾಗಿದೆ; ಯೋಗಾಭ್ಯಾಸಗಳಿಂದಲೂ ಮತ್ತು ಭಗವಂತನ ಕೃಪೆಯಿಂದಲೂ ಒಬ್ಬ ಮನುಷ್ಯನಲ್ಲಿ ಈ ಸಮಾಧಿಜ್ಞಾನವು ಅಥವ ದಿವ್ಯಜ್ಞಾನವು ಪ್ರಕಾಶವಾಗುತ್ತದೆ. ಜಡವಾದ ಮಂಜುಗಡ್ಡೆಯಿಂದ ಹೇಗೆ ಹರಿಯುವ ನೀರು ಉಂಟಾಗುತ್ತದೆಯೋ ಮತ್ತು ಹೇಗೆ

ಶ್ರೀರಿನಿಂದ ಎಲ್ಲಾ ಕಡೆಯಲ್ಲೂ ಹರಡುವ ಶಕ್ತಿಯು ಉಂಟಾಗಬಹುದೋ. ಹಾಗೆಯೇ ಪ್ರಾಣಿಗಳ ಒಳಅರಿವಿನಿಂದ (Instinct) ಬುದ್ಧಿಶಕ್ತಿಯು (Intellect) ಬೆಳೆಯುವುದು ಮತ್ತು ಬುದ್ಧಿಶಕ್ತಿಯನ್ನು ಮೀರಿದ ಹಿರಿದಾದ ದಿವ್ಯಜ್ಞಾನವು (Inspiration) ಕೆಲವು ಮಹಾತ್ಮರಲ್ಲಿ ಪ್ರಕಾಶವನ್ನು ಹೊಂದಿರುವುದು. ಹೇಗೆ ಮಾನವನ ತರ್ಕಜ್ಞಾನವು ಪ್ರಾಣಿಗಳಿಗೂ ಮನುಷ್ಯನಿಗೂ ಸಮನಾಗಿರುವ ಒಳ ಅರಿವಿಗೆ ವಿರೋಧವಾಗಿರುವುದಿಲ್ಲವೋ, ಹಾಗೆಯೇ ದಿವ್ಯಜ್ಞಾನ ಅಥವ ಯೋಗಜನ್ಯ ಜ್ಞಾನವು ಬುದ್ಧಿಜ್ಞಾನಕ್ಕೆ ಅಥವ ತರ್ಕಜ್ಞಾನಕ್ಕೆ ವಿರೋಧವಾಗಿರುವುದಿಲ್ಲ. ದಿವ್ಯ ಜ್ಞಾನವು ಇಂದ್ರಿಯಾತೀತವಾದದ್ದು, ತರ್ಕಜ್ಞಾನಕ್ಕೆ ಮೀರಿದ್ದು ಮತ್ತು ಶಬ್ದಾತೀತ ವಾದದ್ದು; ಅದು ಸತ್ಯದ ಅನುಭವವನ್ನುಂಟುಮಾಡತಕ್ಕ ಸ್ವಯಂಜ್ಯೋತಿಸ್ಸು ಮತ್ತು ಸರ್ವಭೂತಗಳಿಗೂ ಹಿತವನ್ನುಂಟುಮಾಡುವ ಪ್ರವೃತ್ತಿಯುಳ್ಳದು. ಆದರೆ ದಿವ್ಯ ಜ್ಞಾನವು ಕೆಲವು ಮತಗ್ರಂಥಗಳಲ್ಲಿ ವಿವರಿಸಿರುವ ಮೂಢನಂಬಿಕೆಗಳಲ್ಲ;

ತರ್ಕಜ್ಞಾನದಿಂದ ಮಾತ್ರ ಮನುಷ್ಯನು ಬುದ್ಧಿಯಲ್ಲಿ ಆಲೋಚನೆಮಾಡಿ ಅನುಮಾನಿಸಿ ಭಗವಂತನು ಇರುವನೆಂದು ತೀರ್ಮಾನಿಸಬಹುದು ಅಥವ ನಿರೀಶ್ವರ ವಾದವನ್ನು ಸ್ಥಾಪಿಸಿ ನಾಸ್ತಿಕನಾಗಬಹುದು. ಆದರೆ ಯೋಗಾಭ್ಯಾಸಗಳಿಂದ ಅಥವ ಭಗವಂತನ ಕೃಪೆಯಿಂದ ಮನುಷ್ಯನಲ್ಲಿ ಯೋಗಜನ್ಯಜ್ಞಾನ ಅಥವ ದಿವ್ಯಜ್ಞಾನವು ಪ್ರಕಾಶವಾದರೆ ಆಗ ಅವನು ತನ್ನ ಹೃದಯದಲ್ಲಿಯೂ ಮತ್ತು ಇತರ ಜೀವಿಗಳ, ಪದಾರ್ಥಗಳ ಹೃದಯದಲ್ಲಿಯೂ ಹೆಚ್ಚು ಹೆಚ್ಚು ಸತ್ಯದ ಅಥವ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯುತ್ತಾ ವೈರಾಗ್ಯ, ಜ್ಞಾನ, ಭಕ್ತಿಗಳಿಂದ ಕೂಡಿದವನಾಗಿ ಪರೋಪಕಾರ ಕಾರ್ಯಗಳಲ್ಲಿ ನಿರತನಾಗುವನು. ರಾತ್ರಿಯೆಲ್ಲಾ ನಿದ್ದೆಗೆಟ್ಟು, ಕತ್ತಲೆ ಯಲ್ಲಿ ಏಕಾಂಗಿಯಾಗಿ ಹೋಗುತ್ತಿದ್ದ ಬೆಟ್ಟದಮೇಲಿದ್ದ ಮನುಷ್ಯನಿಗೆ ಬೆಳಗ್ಗೆ ಸೂರ್ಯೋದಯವಾದರೆ ಹೇಗೆ ಪ್ರಕಾಶವೂ ಆನಂದವೂ ಉಂಟಾಗುತ್ತದೆಯೋ, ಅದೇ ರೀತಿಯಲ್ಲಿ ತರ್ಕಜ್ಞಾನಕ್ಕೆ ವಿರೋಧವಾದ ತೀರ್ಮಾನಗಳಿಗೆ ಬಂದು ತತ್ವದ ವಿಚಾರದಲ್ಲಿ ಸಂದೇಹಗಳಲ್ಲಿ ಮುಳುಗಿ ಹೋರಾಡುತ್ತಿರುವ ಸಾಧಕನಿಗೆ ಭಗವಂತನ ಕೃಪೆ ಯಿಂದ ದಿವ್ಯಜ್ಞಾನವು ಉದಯಿಸಿದರೆ ಆಗ ಅವನಿಗೆ ಸತ್ಯಸ್ವರೂಪದ ಪ್ರಕಾಶವೂ ಆನಂದವೂ ಕಾಣಾಗಿಯೇ ಉದ್ಭವಿಸುವುದು. ಅಂದಿನಿಂದ ಆ ಮನುಷ್ಯನ ಜೀವನದ ರೀತಿಯೇ ಬೇರೆಯಾಗಿ ಪವಿತ್ರವಾಗುವುದು.

ಶಿಷ್ಯ:—ಕೊನೆಯದಾಗಿ, ದಿವ್ಯಜ್ಞಾನದ ಆಧಾರದಿಂದ ಹುಟ್ಟಿರುವ ಪವಿತ್ರ ಗ್ರಂಥಗಳ ಪ್ರಚಾರ ಮತ್ತು ವ್ಯಾಸಂಗದಿಂದ ಲೋಕದ ಜನರಲ್ಲಿ ನಾಗರಿಕತೆಯು ಹೇಗೆ ಮುಂದುವರಿಯುತ್ತಿದೆ ಎಂಬುವನ್ನು ಸಂಗ್ರಹವಾಗಿ ವಿವರಿಸಿ.

**ಗುರು.**—"ಪ್ರಪಂಚದ ಜನರೆಲ್ಲರೂ ಒಬ್ಬನೇ ಭಗವಂತನಿಂದ ಉಂಟಾಗಿ ಅವನ ಮಕ್ಕಳಾಗಿದ್ದಾರೆ; ಮಾನವರೆಲ್ಲರೂ ಅಣ್ಣತಮ್ಮಂದಿರು; ಆದುದರಿಂದ ಎಲ್ಲಾ

ಜನಾಂಗಗಳು ಒಂದಕ್ಕೊಂದು ಹೋರಾಡುವ ಭಾವನೆಯನ್ನು ತ್ಯಜಿಸಿ ಏಕಮತ್ಯದಿಂದಲೂ ಸಹಾನುಭೂತಿಯಿಂದಲೂ ಪ್ರಪಂಚದಲ್ಲಿ ಶಾಂತಿಯನ್ನು ಬೆಳೆಸಿ ಎಲ್ಲರೂ ಸುಖಸಂಪತ್ತು ಶ್ರೇಯಸ್ಸುಗಳನ್ನು ಪಡೆದು ಬಾಳುವ ಪ್ರಯತ್ನಗಳನ್ನು ಕೈಗೊಳ್ಳಬೇಕು" ಎಂಬ ಸಾತ್ವಿಕ ಸಂದೇಶವು ಎಲ್ಲಾ ಪವಿತ್ರ ಗ್ರಂಥಗಳ ಸಾರವಾದ ಮತ್ತು ಮುಖ್ಯವಾದ ಭಾಗಗಳಲ್ಲಿ ಕಂಡುಬರುತ್ತವೆ. ಇದರಿಂದ ಮನುಷ್ಯ ಸಮಾಜದಲ್ಲಿ ಐಕ್ಯತೆಯನ್ನುಂಟುಮಾಡುವ ಮಹಾ ಪ್ರಯತ್ನಗಳು ಅಡಿಗಡಿಗೆ ನಡೆಯುತ್ತಲೇ ಇವೆ.

ಪವಿತ್ರ ಗ್ರಂಥಗಳಲ್ಲಿ ಅಡಕವಾಗಿರುವ ನೀತಿಯುತವಾದ ಕಟ್ಟಳೆಗಳು ಮಾನವನ ವೈಯಕ್ತಿಕ ಮತ್ತು ಸಾಮಾಜಿಕ ಸುಖಗಳನ್ನು ಹೆಚ್ಚಿಸುತ್ತವೆ ಮತ್ತು ಬಹುಜನರಲ್ಲಿ ಇಂದ್ರಿಯಗಳನ್ನು ಜಯಿಸುವ ಶಕ್ತಿಯನ್ನುಂಟುಮಾಡಿ ಅವರಲ್ಲಿ ಸ್ವಾರ್ಥತೆಯ ಭಾವನೆಗಳನ್ನು ಕಡಿಮೆಮಾಡುವುದು ಮಾತ್ರವಲ್ಲದೆ ಸ್ವಾರ್ಥತ್ಯಾಗ ಭಾವನೆಗಳನ್ನೂ ಬೆಳೆಸುತ್ತವೆ. ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ತತ್ವಶಾಸ್ತ್ರ ಮತ್ತು ಸಾಹಿತ್ಯಶಾಸ್ತ್ರ ಇವುಗಳಲ್ಲಿ ಕಂಡುಬರುವ ನೈತಿಕ ಕಟ್ಟಳೆಗಳು ಒಂದಕ್ಕಿಂತ ಇನ್ನೊಂದು ಉತ್ತಮವಾಗಿದ್ದರೂ, ಪವಿತ್ರ ಗ್ರಂಥಗಳಲ್ಲಿರುವ ಮೂಲಭೂತವಾದ ನೈತಿಕ ಧರ್ಮಗಳ ನಿಯಮಗಳು ಇವೆಲ್ಲಕ್ಕಿಂತ ಹೆಚ್ಚಾಗಿ ಸಮಾಜದ ಜನರಲ್ಲಿ ನೈತಿಕಬಲವನ್ನುಂಟುಮಾಡುತ್ತವೆ.

ಪವಿತ್ರ ಗ್ರಂಥಗಳಲ್ಲಿ ಅಡಕವಾಗಿರುವ ವಿವಿಧ ಅಭಿಪ್ರಾಯಗಳು ಕ್ರಮೇಣ ಪ್ರತ್ಯೇಕವಾದ ಬೇರೆ ಬೇರೆ ಶಾಸ್ತ್ರಗಳಾಗಿ ಬೆಳೆಯಲು ಕಾರಣವಾಗಿವೆ. ಉದಾಹರಣೆಗಾಗಿ ಮತಗ್ರಂಥಗಳಲ್ಲಿ ಕಂಡುಬಂದ ಕೆಲವು ತಾತ್ವಿಕ ಅಭಿಪ್ರಾಯಗಳ ಬೀಜಗಳೇ ಈಗಿನ ತತ್ವಶಾಸ್ತ್ರಗಳಾಗಿ ಬೆಳೆದಿವೆಯಲ್ಲವೆ? ಹೀಗೆಯೇ ಚಿತ್ರಕಲೆ, ಕಾವ್ಯಗಳು, ಸಂಗೀತಕಲೆ, ಶಿಲ್ಪಕಲೆ ಮುಂತಾದ ಸಾಹಿತ್ಯ ಲಲಿತಕಲೆಗಳು ಅನೇಕ ದೇಶಗಳಲ್ಲಿ ಆಯಾ ಪವಿತ್ರ ಗ್ರಂಥಗಳ ಆಧಾರದಿಂದಲೇ ಹುಟ್ಟಿಬೆಳೆದಿವೆ. ಪವಿತ್ರ ಗ್ರಂಥಗಳ ಸತ್ಯ, ಹಿತ, ಪುರುಷಾರ್ಥಗಳನ್ನು ಪ್ರಚಾರಮಾಡುವ ಕಾರ್ಯಗಳಿಂದ ಅವನ್ನು ತಿಳಿದು ನಂಬುವವರ ಮನಸ್ಸಿನಲ್ಲಿ ಸೌಂದರ್ಯಶಾಸ್ತ್ರದ ಪ್ರಯೋಗಗಳಿಂದ ಉಂಟಾಗುವ ಸಾತ್ವಿಕರಸಗಳೂ, ಆಧ್ಯಾತ್ಮಶಾಸ್ತ್ರದ ತಿಳುವಳಿಕೆಯಿಂದ ಉಂಟಾಗುವ ಆನಂದವೂ, ಸಾಮಾಜಿಕಪ್ರಾರ್ಥನೆ ಧ್ಯಾನಾದಿಗಳಿಂದ ಬೆಳೆಯುವ ಶಾಂತಿಯೂ ಮತ್ತು ಕಷ್ಟವನ್ನು ಸಹಿಸಿ ದುಃಖವನ್ನು ಕಡಿಮೆಮಾಡುವ ಆತ್ಮಶಕ್ತಿಯೂ ಉದ್ಭವಿಸುತ್ತವೆ.

ಕೊನೆಯದಾಗಿ, ಪವಿತ್ರ ಗ್ರಂಥಗಳೆಲ್ಲವನ್ನೂ ಒಟ್ಟಾಗಿ ವ್ಯಾಸಂಗಮಾಡಿದುದರಿಂದ ಪವಿತ್ರವಾದ ಸರ್ವಮತಗಳ ಸಮನ್ವಯಶಾಸ್ತ್ರವೂ (Comparitive Religion) ಮತ್ತು ಮತ ತತ್ವಶಾಸ್ತ್ರವೂ (Philosophy of Religion) ಹುಟ್ಟಿ ಇವು ಲೋಕದ ಜನರಲ್ಲಿ ವಿಶಾಲಭಾವನೆಗಳನ್ನು ಬೆಳೆಸಿ ಲೋಕಕ್ಕೆ ಕಲ್ಯಾಣವನ್ನುಂಟುಮಾಡುತ್ತಿರುವುವು.

# ಶ್ರೀ ನವಭಾರತ ಆಶ್ರಮ
# ಗೋರಿಬಿದನೂರು

[ವಿದ್ಯಾರ್ಥಿಗಳಿಗೆ ಆಧ್ಯಾತ್ಮ ಮತ್ತು ನೈತಿಕ ಶಿಕ್ಷಣ ಕ್ರಮಕ್ಕಾಗಿ ಕೆಳಗಿನ ವಿಷಯವನ್ನು ಕುರಿತು ವಿದ್ಯಾವಂತರು ದಯವಿಟ್ಟು ಉಪನ್ಯಾಸ ಮಾಡಬೇಕಾಗಿ ಪ್ರಾರ್ಥನೆ.]

## ಕನ್ನಡಿಗರ ಜ್ಞಾನದೀಪಿಕಾ—ಮಾಲೆ ಒಂದು.

**ಜುಲೈ ೧೯೫೫**

ಲೇಖಕರು:— ಶ್ರೀ ಎಂ. ಎ. ನಾರಾಯಣ ಅಯ್ಯಂಗಾರ್
ರಿಟೈರ್ಡ್ ಡೆಪ್ಯುಟಿ ಇನ್ಸ್ಪೆಕ್ಟರ್

## ವಿಶ್ವಶಾಂತಿಗಾಗಿ ಶ್ರೇಷ್ಠ (ಮತ) ಧರ್ಮಗಳ ಸಾರಾಂಶ ಗಳನ್ನು ಲೋಕದ ಜನರು ತಿಳಿದುಕೊಳ್ಳಬೇಕು.

(ಕಳೆದ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆದ ಶ್ರೇಷ್ಠ ಧರ್ಮಗಳ ಸಮ್ಮಿಲನ ಸಂಘದ ಸಮ್ಮೇಳನದಲ್ಲಿ ಭಾರತ ದೇಶದ ಉಪರಾಷ್ಟ್ರಪತಿ ಡಾಕ್ಟರ್ ಎಸ್. ರಾಧಾಕೃಷ್ಣನ್‌ರವರು ಹೇಳಿದ ಆರಂಭ ಭಾಷಣದ ಅಭಿಪ್ರಾಯಗಳ ಸ್ಫೂರ್ತಿಯಿಂದ ಈ ಲೇಖನವನ್ನು ಬರೆದಿದ್ದೇನೆ.)

### ಇನ್ನೊಂದು ಪ್ರಪಂಚ ಯುದ್ಧವು ನಡೆಯಕೂಡದು.

ಸದ್ಯದಲ್ಲಿ ಭೂಮಿಯ ಮೇಲಿರುವ ಜನರೆಲ್ಲರಿಗೂ ಶ್ರೇಯಸ್ಕರವಾದ ಸಹಕಾರವನ್ನು ವಿಸ್ತರಿಸಲು ಅನುಕೂಲಗಳಿವೆ; ಏಕೆಂದರೆ ಈಗ ಇಡೀ ಪ್ರಪಂಚ ಒಂದು ಮನೆಯಾಗಿದೆ. ರೈಲು, ಹಡಗು, ವಿಮಾನ, ಮೋಟಾರ್ ಮೊದಲಾದ ಉತ್ತಮ ವಾಹನ ಸೌಕರ್ಯಗಳು ಉಂಟಾಗಿರುವುದರಿಂದ ಒಂದು ಖಂಡದ ದೇಶಗಳ ಜನರು, ಸೈನ್ಯಗಳು ಮತ್ತು ಮುಖಂಡರು ಬೇರೆ ಖಂಡಗಳ ದೇಶಗಳಿಗೆ ಸುಲಭವಾಗಿಯೂ ಮತ್ತು ಶೀಘ್ರವಾಗಿಯೂ ಪ್ರಯಾಣ ಮಾಡಬಹುದು. ತಂತಿ, ಟೆಲಿಫೋನ್, ಸಿನೀಮಾ ಮೊದಲಾದ ವಿಜ್ಞಾನಶಾಸ್ತ್ರ ಕಲ್ಪಿತ ಉಪಕರಣಗಳಿಂದ ದೂರದಲ್ಲಿರುವ ದೇಶದ ಜನಗಳು ಎಲ್ಲಾ ದೇಶಗಳ ಸನ್ನಿವೇಶಗಳನ್ನೂ, ರಾಜಕೀಯ ಆರ್ಥಿಕ ಮತ್ತು ಸಾಂಸ್ಕೃತಿಕ ವಿಷಯಗಳನ್ನೂ, ಸುಲಭವಾಗಿ ಮತ್ತು ಶೀಘ್ರವಾಗಿ ತಿಳಿದುಕೊಳ್ಳ

ಬಹುದು. ಇಷ್ಟೇ ಅಲ್ಲ; ವೈಜ್ಞಾನಿಕರು ಈಗ ಕಂಡುಹಿಡಿದಿರುವ ಉಪಕರಣಗಳ ಸಹಾಯದಿಂದ ಒಂದು ದೇಶದಲ್ಲಿ ಬೆಳೆಯುವ ಅಥವ ತಯಾರಿಸುವ ಆಹಾರವೇ ಮೊದಲಾದ ಎಲ್ಲಾ ಪದಾರ್ಥಗಳನ್ನೂ ಅನೇಕ ದೇಶಗಳಿಗೆ ಸ್ವಲ್ಪಕಾಲದಲ್ಲಿಯೇ ಕಳುಹಿಸಬಹುದು. ಹೀಗೆ ಪ್ರಪಂಚದ ಜನಾಂಗಗಳು ಒಗ್ಗಟ್ಟಾಗಿ ಬಾಳಲು ಅನುಕೂಲ್ಯಗಳು ಬಹುವಾಗಿ ಏರ್ಪಟ್ಟಿದ್ದಾಗ್ಯೂ ಈಚೆಗೆ ಚಕ್ರಾಧಿಪತ್ಯಗಳ ಸರ್ಕಾರಗಳು ಬಲಯುತವಾಗಿ, ಯಶಸ್ವಿಯಾಗಿ ಬೆಳೆದು ಈ ಹೊಸ ಪ್ರಯೋಗಗಳಿಂದಲೇ ಎಲ್ಲಾ ದೇಶದ ಜನರಿಗೂ ಒಂದೇ ಕಾಲದಲ್ಲಿ ಅನೇಕ ಕಷ್ಟ ಪರಂಪರೆಗಳನ್ನು ಉಂಟು ಮಾಡುತ್ತವೆ. ವಿಜ್ಞಾನ ಕಲ್ಪಿತ ಉಪಕರಣಗಳನ್ನು ಉಪಕಾರಕ್ಕೆ ಪ್ರತಿಯಾಗಿ ಭಯಂಕರ ಮಾರಣ ಕಾರ್ಯದಲ್ಲಿ ಉಪಯೋಗಿಸುತ್ತವೆ. ವೈಜ್ಞಾನಿಕರು ಈಗ ಕಂಡು ಹಿಡಿದಿರುವ ಅಣು ಬಾಂಬು ಮೊದಲಾದ ಭಯಂಕರ ಆಯುಧಗಳಿಂದ ಪ್ರಪಂಚದ ಎಲ್ಲಾ ಪ್ರದೇಶಗಳ ಜನರಿಗೆ ಅಲ್ಪ ಕಾಲದಲ್ಲಿ ಹಾನಿಯನ್ನುಂಟು ಮಾಡಲು ಸಿದ್ಧವಾಗಿವೆ. ಆದುದರಿಂದ ಒಂದು ದೇಶದ ಜನರು ಬಲಶಾಲಿಗಳಾಗಿದ್ದು ಪಕ್ಕದ ದೇಶದ ಮೇಲೆ ದುರಾಶೆಯಿಂದ ಯುದ್ಧ ಮಾಡಲು ಆರಂಭಿಸಿದರೆ ಭೂಮಿಯ ಮೇಲಿರುವ ಎಲ್ಲಾ ದೇಶಗಳಲ್ಲೂ ಯುದ್ಧಗಳು ನಡೆಯುತ್ತಾ ಲಕ್ಷಾಂತರ ಜನಗಳಿಗೆ ಸಾವು, ನೋವು, ರೋಗ, ಬಡತನಗಳನ್ನುಂಟು ಮಾಡಲು ಅವಕಾಶವಿದೆ. ಉದಾಹರಣೆಗಾಗಿ, ಕ್ರಿ. ಶ. 1914 ರಿಂದ 1918ರ ವರೆಗೆ ಮೊದಲನೆಯ ಪ್ರಪಂಚ ಮಹಾ ಯುದ್ಧವು ನಡೆಯಿತು. ಈ ಯುದ್ಧದಲ್ಲಿ ಸುಮಾರು ಎಪ್ಪತ್ತು ಲಕ್ಷ ಜನರು ರಣರಂಗದಲ್ಲಿ ಸತ್ತರು; ಒಂದು ಕೋಟಿ ನಲವತ್ತು ಲಕ್ಷ ಜನರು ಗಾಯಗೊಂಡರು. ಇದಲ್ಲದೆ ಯುದ್ಧಕಾರಣದಿಂದುಂಟಾದ ಇನ್‌ಫ್ಲುಯಂಜಾ ಇತ್ಯಾದಿ ರೋಗಗಳಿಗೂ ಕ್ಷಾಮಕ್ಕೂ ಲಕ್ಷಾಂತರ ಜನರು ತುತ್ತಾದರು. ಎಲ್ಲಾ ದೇಶದ ಸರ್ಕಾರಗಳಿಗೆ ಕೋಟ್ಯಾಂತರ ರೂಪಾಯಿಗಳು ಖರ್ಚಾದವು. ಪುನಃ ಕ್ರಿ. ಶ. ೧೯೩೯ರಲ್ಲಿ ಎರಡನೇ ಪ್ರಪಂಚ ಮಹಾ ಯುದ್ಧವು ಆರಂಭವಾಗಿ ೧೯೪೫ರಲ್ಲಿ ನಿಂತಿತು. ಈ ಯುದ್ಧದಲ್ಲಿ ಅನೇಕ ದೇಶಗಳ ಸೈನಿಕರು ಸಿಪಾಯಿಗಳು ಮಾತ್ರವೇ ಸಾಯಲಿಲ್ಲ; ಅನೇಕ ಚಕ್ರಾಧಿಪತ್ಯಗಳಿಗೆ ಒಳಪಟ್ಟ ಲಕ್ಷಾಂತರ ಜನರು ಕ್ರೂರವಾದ ರೀತಿಯಲ್ಲಿ ಕಾಲವಾದರು. ಆಯಾ ಸರ್ಕಾರಗಳ ಹಣವು ಮಾತ್ರವೇ ನಷ್ಟವಾಗಲಿಲ್ಲ; ಅನೇಕ ದೇಶಗಳ ಪ್ರಜೆಗಳಿಗೆ ಸೇರಿದ ಸಹಸ್ರಾರು ಕೋಟಿ ರೂಪಾಯಿ ಬಾಳುವ ಆಸ್ತಿಗಳೆಲ್ಲವೂ ನಾಶವಾದವು. ಇದರ ಪರಿಣಾಮವಾಗಿ ಪದಾರ್ಥಗಳ ಬೆಲೆಯು ಬಹಳವಾಗಿ ಏರಿ ಸಾವು, ನೋವು, ರೋಗ, ಬಡತನಗಳು ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ಕಂಡು ಬಂದವು. ಇದರ ಮೇಲೆ ಈಗ ಮೂರನೇ ಪ್ರಪಂಚ ಮಹಾಯುದ್ಧವು ಎಲ್ಲಿ ಆರಂಭವಾಗುವುದೋ ಎಂಬ ಭೀತಿಯು ಎಲ್ಲಾ ಚಕ್ರಾಧಿಪತ್ಯಗಳ ಜನರ ಮತ್ತು ಮುಖಂಡರ ಹೃದಯದಲ್ಲಿ ತುಂಬಿದೆ.

ಕ್ರಿ. ಶ. ೧೯೧೯ರಲ್ಲಿ ಮೊದಲನೆಯ ಮಹಾ ಯುದ್ಧವು ಮುಗಿದ ಒಡನೆಯೇ ಅಮೇರಿಕಾದ ಅಧ್ಯಕ್ಷ ವುಡ್ರೋ ವಿಲ್ಸನ್ ಅಂತರರಾಷ್ಟ್ರೀಯ ಸಂಘವನ್ನು (League

of Nations) ಸ್ಥಾಪಿಸಿದನು; ಆದರೆ ಅದು ಅನೇಕ ಕಾರಣಗಳಿಂದ ತನ್ನಗೊಂಡ ಕಾರ್ಯವನ್ನು ಜಯಪ್ರದವಾಗಿ ನಡೆಸಲಿಲ್ಲ. ಪುನಃ ಕ್ರಿ. ಶ. ೧೯೩೯ರಲ್ಲಿ ಪ್ರಪಂಚದ ಭಯಂಕರವಾದ ದ್ವಿತೀಯ ಮಹಾ ಯುದ್ಧವು ಮುಕ್ತಾಯವಾದೊಡನೆಯೇ ರಷ್ಯಾದ ಸ್ಟಾಲಿನ್, ಅಮೇರಿಕಾದ ರೂಸ್‌ವೆಲ್ಟ್ ಮತ್ತು ಬ್ರಿಟನ್ನಿನ ಚರ್ಚಿಲ್ ಈ ಮೂವರೂ ಸಭೆಸೇರಿ ಎಲ್ಲಾ ಮಿತ್ರ ರಾಷ್ಟ್ರಗಳನ್ನು ಕರೆದು ಸಮ್ಮೇಳನ ನಡೆಸಿ "ರಾಷ್ಟ್ರೀಯ ಸಂಘ" ವೆಂಬ (United Nations) ಪ್ರಬಲವಾದ ಮತ್ತೊಂದು ಸಂಸ್ಥೆಯನ್ನು ಕಟ್ಟಿದರು. ಈ ಸಂಸ್ಥೆಯು ಉತ್ತಮವಾಗಿ ಕೆಲಸ ಮಾಡುತ್ತಿದೆ, ಸ್ವಲ್ಪಮಟ್ಟಿಗೆ ಯುದ್ಧವನ್ನು ನಿಲ್ಲಿಸಿದೆ ಮತ್ತು ಪ್ರಪಂಚದ ಸಮಸ್ತ ದೇಶಗಳಲ್ಲಿರುವ ಮಾನವರ ಕ್ಷೇಮಕ್ಕಾಗಿ ಬಹು ವಿಧದಲ್ಲಿ ದುಡಿಯುತ್ತಿದೆ ಎಂದು ಕೆಲವು ಮುಖಂಡರು ಅಭಿಪ್ರಾಯ ಪಡುತ್ತಾರೆ. ಆದರೆ ಈ ಸಂಸ್ಥೆಯೂ ಕೂಡ ಯುದ್ಧಗಳನ್ನು ತಪ್ಪಿಸಲಾರದು; ಏಕೆಂದರೆ ಪ್ರಪಂಚದ ಪ್ರಬಲ ರಾಷ್ಟ್ರಗಳು ಇದರ ಅಧೀನಕ್ಕೆ ಒಳಪಟ್ಟಿಲ್ಲ ಮತ್ತು ಇವು ಈ ಸಂಸ್ಥೆಯನ್ನು ತಮ್ಮ ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸುತ್ತಿವೆ ಎಂದು ಇತರ ಮುಖಂಡರು ಅಭಿಪ್ರಾಯಪಡುವರು. ಹೇಗಾದರೂ ಇರಲಿ, ಇಷ್ಟು ಮಾತ್ರ ನಿಜ. ಎಂದಿನವರೆಗೆ ಪ್ರತ್ಯೇಕ ಚಕ್ರಾಧಿಪತ್ಯಗಳ ಜನರಲ್ಲೂ ಮುಖಂಡರಲ್ಲೂ ತಮ್ಮ ತಮ್ಮ ವಿಶಾಲ ಗುಂಪುಗಳಲ್ಲಿ ಮಾತ್ರ ಅಹಂಕಾರ ಮಮಕಾರ ಭಾವನೆಗಳಿವೆಯೋ ಅಂದಿನ ವರೆಗೆ ಒಟ್ಟು ಪ್ರಪಂಚಕ್ಕೇ ಅನ್ವಯಿಸುವ ಸರ್ಕಾರದ ಕ್ರಮವು ಶೀಘ್ರದಲ್ಲಿ ಜಾರಿಗೆ ಬರುವುದಿಲ್ಲ ಮತ್ತು ಪ್ರಪಂಚದ ಘೋರವಾದ ಮಹಾ ಯುದ್ಧಗಳೂ ನಿಲ್ಲುವುದಿಲ್ಲ.

## ಯುದ್ಧಗಳನ್ನು ತಪ್ಪಿಸಲು ಉಪಾಯ

ಒಂದು ಗುಂಪಿನ ಜನರು ತಾವು ಮಾತ್ರ ಸುಖವಾಗಿರಬೇಕು; ತಮ್ಮ ಗುಂಪಿಗೆ ಸೇರದ ಇತರ ಜನರು ಹೇಗಾದರೂ ಇರಲಿ. ನಮಗೇನು ಎಂಬ ಚಿತ್ತವೃತ್ತಿಯನ್ನು ಪಡೆದಿದ್ದರೆ ಆ ಮನೋಭಾವನೆಯನ್ನು ಅಹಂಕಾರವೆಂದು ಕರೆಯುತ್ತೇವೆ. ನಾವು ನಮ್ಮ ಗುಂಪಿನ ಜನರಿಗೆ ಮಾತ್ರ ಸಹಾಯ ಮಾಡುವುದು, ಅವರಿಗೆ ಮಾತ್ರ ಅನುಕೂಲ್ಯಗಳನ್ನು ಕಲ್ಪಿಸುವದು, ನಮ್ಮ ಗುಂಪಿಗೆ ಸೇರದವರಿಗೆ ಸಹಾಯ ಮಾಡದಿರುವುದು ಮತ್ತು ನಮ್ಮ ಗುಂಪಿನವರ ಅನುಕೂಲಕ್ಕಾಗಿ ಇತರರನ್ನು ಉಪಯೋಗಿಸಿಕೊಳ್ಳುವುದು ಅಥವ ಹಿಂಸೆಯನ್ನು ಮಾಡುವುದು ಇವೇ ಮೊದಲಾದ ಕಾರ್ಯಗಳು ಮಮಕಾರ ಭಾವನೆಯನ್ನು ತೋರಿಸುತ್ತವೆ. ಈಗ ಇಪ್ಪತ್ತನೇ ಶತಮಾನದಲ್ಲಿ ಚಕ್ರಾಧಿಪತ್ಯಗಳಲ್ಲಿರುವ ಕೋಟ್ಯಾಂತರ ಜನರು ತಮ್ಮ ತಮ್ಮ ರಾಜಕೀಯ ಧ್ಯೇಯಗಳಲ್ಲೂ ಮತ ಧರ್ಮಗಳಲ್ಲೂ ತೃಪ್ತಿಯನ್ನು ಪಡೆದು ತಮ್ಮ ಚಕ್ರಾಧಿಪತ್ಯದಲ್ಲಿರುವ ಜನರಲ್ಲಿ ಮಾತ್ರ ಅಹಂಕಾರ ಮಮಕಾರಗಳನ್ನು ಪಡೆದಿರುವುದರಿಂದ ಭೀಕರ ಪ್ರಪಂಚ ಯುದ್ಧಗಳು ನಡೆಯುತ್ತಿವೆ. ಆದುದರಿಂದ ಈಗಿನ ಎಲ್ಲಾ ಚಕ್ರಾಧಿಪತ್ಯಗಳ ಸರ್ಕಾರ

ಗಳು. ಪ್ರಪಂಚದಲ್ಲಿ ಯುದ್ಧಗಳನ್ನು ತಡೆಗಟ್ಟುವುದಕ್ಕಾಗಿ ತಮ್ಮ ತಮ್ಮ ಜನರಲ್ಲೂ ಮುಖಂಡರಲ್ಲೂ ಬೇರೂರಿರುವ ಜಾತ್ಯಾಧಿಪತ್ಯದ ಅಹಂಕಾರ ಮಮಕಾರಗಳನ್ನು ನಿರ್ಮೂಲ ಮಾಡುವ ಪ್ರಯತ್ನವನ್ನು ಕೈಗೊಳ್ಳಬೇಕು ಮತ್ತು ಭೂಮಿಯ ಮೇಲಿರುವ ಒಟ್ಟು ಜನರಿಂದ ಕೂಡಿದ ಒಂದೇ ಮಾನವ ಸಮಾಜದಲ್ಲಿ ಅ ಹ ಂ ಕಾ ರ ಮಮಕಾರವನ್ನು ಬೆಳೆಸುವ ಕಾರ್ಯಗಳನ್ನೂ ನಡೆಸಬೇಕು. ಈ ಕಾರ್ಯಗಳಲ್ಲಿ ಬಹು ಮುಖ್ಯವಾದುದು " **ಪ್ರಪಂಚದ ಶ್ರೇಷ್ಠ (ಮತ) ಧರ್ಮಗಳ ಸಾರಾಂಶಗಳನ್ನು ಲೋಕದ ಜನರಿಗೆ ತಿಳಿಯಪಡಿಸುವುದು.**" ಸುಸಂಸ್ಕೃತಿಯ ಪ್ರಚಾರವೆಂಬ ಈ ಮಹಾ ಕಾರ್ಯವನ್ನು ಜಯಪ್ರದವಾಗಿ ನಡೆಸಲು ಅನೇಕ ದೇಶಗಳ ರಾಜ್ಯ ವ್ಯವಹಾರ ಚತುರರು, ಶಿಕ್ಷಣ ಶಾಸ್ತ್ರಜ್ಞರು ಮತ್ತು ಮತಧರ್ಮ ಪ್ರವರ್ತಕರು ಸರ್ವ ಪ್ರಯತ್ನಗಳನ್ನು ನಡೆಸುತ್ತಿರುವರು.

ವಿಶ್ವದಲ್ಲಿ ಶಾಂತಿಯನ್ನುಂಟುಮಾಡಬೇಕು ಎಂಬ ಮಹಾ ಉದ್ದೇಶವನ್ನು ನೆರವೇರಿಸಬೇಕಾದರೆ ಪ್ರತಿಯೊಬ್ಬ ಮಾನವನೂ ತಾನು ಹುಟ್ಟಿ ಬೆಳೆದ ಸಮಾಜದ ಮತಧರ್ಮವನ್ನು ಮಾತ್ರ ತಿಳಿದರೆ ಸಾಲದು; ಏಕೆಂದರೆ ಆಗ ಅವನಿಗೆ ತನ್ನ ಮತದಲ್ಲಿ ಮತ್ತು ತನ್ನ ಮತವನ್ನು ನಂಬುವ ಕೋಮಿನವರಲ್ಲಿ ಮಾತ್ರ ಅಹಂಕಾರ ಮಮಕಾರ ಭಾವನೆಗಳಿರುತ್ತವೆ. ಆದುದರಿಂದ ಎಲ್ಲಾ ದೇಶಗಳ ಮಾನವರು ಮತ್ತು ಅವರ ಮುಖಂಡರುಗಳು ಪ್ರಪಂಚದ ಶ್ರೇಷ್ಠ ಧರ್ಮಗಳ ಸಾರಾಂಶಗಳೆಲ್ಲವನ್ನೂ ತಿಳಿದುಕೊಳ್ಳಬೇಕು. ಆಗ ಅವರಲ್ಲಿ ತಮ್ಮಲ್ಲಿರುವ ಸಂಕುಚಿತ ಅಹಂಕಾರ ಮಮಕಾರ ಭಾವನೆಗಳು ಕ್ರಮೇಣ ಕಮ್ಮಿಯಾಗುತ್ತವೆ. ಏಕೆಂದರೆ ಶ್ರೇಷ್ಠ ಧರ್ಮಗಳ ಸಾರಾಂಶಗಳು " ಮನುಷ್ಯನು ಸಂಕುಚಿತ ಅಹಂಕಾರ ಮಮಕಾರ ಭಾವನೆಗಳನ್ನು ಸಂಪೂರ್ಣವಾಗಿ ತ್ಯಜಿಸಿ ಲೋಕದ ಜನರೆಲ್ಲರೂ ಭಗವಂತನ ಮಕ್ಕಳಾದುದರಿಂದ ಅವರೆಲ್ಲರನ್ನೂ ಪ್ರೀತಿಸಬೇಕು " ಎಂದು ಬೋಧಿಸುತ್ತವೆ. ಇದೂ ಅಲ್ಲದೆ ಯಾವಾಗ ಒಬ್ಬ ಮನುಷ್ಯನು ವಿಶ್ವಾಸದಿಂದ ಸರ್ವ ಧರ್ಮಗಳ ತತ್ವಗಳ ಸಾರಾಂಶಗಳನ್ನು ಸಮನ್ವಯಗೊಳಿಸುತ್ತಾನೆಯೋ ಆಗ ಅವನಿಗೆ ಎಲ್ಲಾ ಮತಧರ್ಮಗಳಲ್ಲಿಯೂ ಭಕ್ತಿ ಉಂಟಾಗುತ್ತದೆ ಮತ್ತು ಆ ಧರ್ಮಗಳನ್ನು ನಂಬುವ ಪ್ರಪಂಚದ ಎಲ್ಲಾ ಜನರಲ್ಲಿಯೂ ಪ್ರೀತಿಯೂ ಭ್ರಾತೃಭಾವವೂ ತಾನಾಗಿಯೇ ಬೆಳೆಯುತ್ತದೆ. ಈಗ ಜನರು ಬಾಹ್ಯತಃ ಪ್ರಪಂಚದ ಜನರ ಭ್ರಾತೃತ್ವದ ವಿಷಯವಾಗಿ ಉಪನ್ಯಾಸ ಮಾಡಿದರೂ ಅಂತ್ಯತಃ ಒಂದಾಗಿಲ್ಲ; ಅವರ ಮನಸ್ಸು ಏಕೀಕರಣವಾಗಿಲ್ಲ. ದ್ವೇಷಾಸೂಯೆಗಳೂ, ಕಾಮಕ್ರೋಧಗಳೂ, ಲೋಭಮೋಹಗಳೂ, ಮತ್ತು ಮದ ಮಾತ್ಸರ್ಯ ಗಳೂ ಲೋಕದ ಜನರನ್ನು ಶತಶಃ ಒಡೆದು ಬೇರೆ ಮಾಡಿ ಕಲಹಗಳನ್ನು ಹುಟ್ಟಿಸುತ್ತಿವೆ. ಈ ಅಹಂಕಾರ ಮಮಕಾರಯುತ ಅರಿಷಡ್ವರ್ಗಗಳನ್ನು ನಿರ್ಮೂಲ ಮಾಡುವುದಕ್ಕೆ ಪ್ರತಿಯೊಬ್ಬನೂ ತನ್ನ ಮತದ ಸಾರಾಂಶಗಳನ್ನು ಮಾತ್ರ ತಿಳಿದುಕೊಳ್ಳುವುದೂ ಅಲ್ಲದೆ ಎಲ್ಲಾ ಶ್ರೇಷ್ಠ ಧರ್ಮಗಳ ಸಾರಾಂಶಗಳನ್ನೂ ಸಮನ್ವಯವಾಗಿ ತಿಳಿದು ಅಭ್ಯಾಸ ಮಾಡಬೇಕು.

## 5.

## ಮತಧರ್ಮಗಳ ಪ್ರಚಾರದಿಂದ ಹಾನಿಯಾಗಲಿಲ್ಲವೆ?

ಈಗ ಒಂದು ಸಂದೇಹವನ್ನು ನಿವೃತ್ತಿ ಮಾಡಬೇಕಾಗಿದೆ. ಮಧ್ಯಮ ಯುಗದಲ್ಲಿ ಯುರೋಪ್ಯ ದೇಶಗಳಲ್ಲೂ ಏಷ್ಯಾ ಜನಾಂಗಗಳಲ್ಲೂ ಮತ ಧರ್ಮಗಳ ಪ್ರೇರಣೆಯಿಂದ ಅನೇಕ ಯುದ್ಧಗಳಾಗಿ ಸಾವಿರಾರು ಜನರು ಸತ್ತು ರಕ್ತಪಾತವಾಗಿಲ್ಲವೆ? ಕ್ರಿಸ್ತರಲ್ಲಿ ರೋಮನ್ ಕ್ಯಾಥಲಿಕ್ ಶಾಖೆಯವರು ಪ್ರಾಟೆಸ್ಟೆಂಟ್ ಶಾಖೆಯವರೊಡನೆ ಕಾದಾಡಲಿಲ್ಲವೆ? ಮುಸ್ಲಿಮರು ಮುಸ್ಲಿಮೇತರ ರಾಷ್ಟ್ರಗಳ ಮೇಲೆ ಧಾಳಿಯಿಟ್ಟು ಅವರನ್ನು ಜಯಿಸಲಿಲ್ಲವೆ? ಹಿಂದುಗಳು ಬೌದ್ಧರ ಪ್ರಾಬಲ್ಯಕ್ಕೆ ಅಸೂಯೆಪಟ್ಟು ಅವರನ್ನು ಭಾರತ ದೇಶದಿಂದ ಓಡಿಸಲಿಲ್ಲವೆ? ಭಾರತಕ್ಕೆ ಈಚೆಗೆ ಸ್ವಾತಂತ್ರ್ಯ ಬಂದೊಡನೆಯೆ ಉತ್ತರ ದೇಶದಲ್ಲಿ ಹಿಂದೂಮುಸ್ಲಿಮರು ಪರಸ್ಪರ ಕ್ರೌರ್ಯವನ್ನು ತೋರಿಸಿ ಸಾವಿರಾರು ಮಂದಿಯನ್ನು ಕೊಂದು ಲಕ್ಷಾಂತರ ಜನರನ್ನು ನಿರಾಶ್ರಿತರನ್ನಾಗಿ ಮಾಡಲಿಲ್ಲವೆ? ಹೀಗಿರುವಾಗ ಮತ ಧರ್ಮ ಬೋಧನೆಯಿಂದ ಮಾನವರಿಗೆ ಕೆಡುಕು ಮತ್ತು ಹಾನಿಯುಂಟಾಗುತ್ತದೆಯೇ ವಿನಃ ಎಂದಿಗೂ ಲೋಕದ ಜನರಲ್ಲಿ ಐಕ್ಯಮತ್ಯವುಂಟಾಗುವುದಿಲ್ಲವೆಂದು ಕೆಲವರು ವಾದಿಸುತ್ತಾರೆ. ಹೌದು; ಮತಧರ್ಮ ಪ್ರಚಾರ ಕಾರ್ಯವು ಬೆಂಕಿಯ ಹಾಗೆ ಸದುಪಯೋಗ ಮಾಡಿದರೆ ಕಲ್ಯಾಣವನ್ನುಂಟು ಮಾಡುತ್ತದೆ ಮತ್ತು ದುರುಪಯೋಗ ಮಾಡಿದರೆ ಇತರರಿಗೆ ಕೆಡಕನ್ನುಂಟುಮಾಡುತ್ತದೆ. ಸ್ವಾರ್ಥಪರರಾದ ರಾಜ್ಯ ತಂತ್ರಿಗಳು ತಮ್ಮ ಮತಧರ್ಮದ ಹೆಸರಿನಲ್ಲಿ ಆ ಧರ್ಮದ ನಿಜವಾದ ಪರಾರ್ಥ ತತ್ವಗಳನ್ನು ಮರೆಸಿ, ಅಪಪ್ರಚಾರ ಮಾಡಿ, ತಮ್ಮ ಜನರಲ್ಲಿ ಕಾಮಕ್ರೋಧಾದಿ ಸ್ವಾರ್ಥ ಭಾವನೆಗಳನ್ನು ಉದ್ರೇಕಮಾಡಿ, ಇತರ ಮತಧರ್ಮಗಳನ್ನು ನಂಬುವವರ ಮೇಲೆ ಯುದ್ಧಗಳನ್ನು ಕೈಗೊಂಡು ಸಾವು ನೋವು ಹಿಂಸೆಗಳನ್ನುಂಟುಮಾಡಿರುವರು. ಆದರೆ ಈ ಜಗಳಗಳಿಗೂ ಹಿಂಸೆಗಳಿಗೂ ಮತಧರ್ಮಗಳ ನಿಜವಾದ ತತ್ವಗಳು ಕಾರಣವಲ್ಲ; ಮತದ ಹೆಸರನ್ನು ಉಪಯೋಗಿಸಿ ತಮ್ಮ ಅಧಿಕಾರವನ್ನು ಚಲಾಯಿಸುವ ಸ್ವಾರ್ಥಪರರಾದ ದುರಂತ ರಾಜ್ಯತಂತ್ರಿಗಳು ಕಾರಣರು. ಆದರೆ ಜನರು ತಮ್ಮ ತಮ್ಮ ಮತ ಧರ್ಮಗಳ ನಿಜವಾದ ಸಾರಾಂಶಗಳನ್ನು ತಿಳಿದರೆ ಮತ್ತು ಅವುಗಳನ್ನು ಪ್ರಪಂಚದ ಇತರ ಶ್ರೇಷ್ಠ ಧರ್ಮಗಳ ಸಾರಾಂಶಗಳೊಡನೆ ಹೋಲಿಸಿ ಅವೆಲ್ಲವನ್ನೂ ಸಮನ್ವಯಮಾಡಿ ತಿಳಿದರೆ ಈ ಹಾನಿಗಳು ಎಂದಿಗೂ ಉಂಟಾಗುವುದಿಲ್ಲ; ಅದರಿಂದ ಲೋಕಕ್ಕೆ ಕಲ್ಯಾಣವಾಗುತ್ತದೆ. ಏಕೆಂದರೆ ಯಾರು ಯಾರು ಸರ್ವ ಶ್ರೇಷ್ಠ ಧರ್ಮಗಳ ಸಾರವನ್ನು ಅನ್ಯೋನ್ಯ ಭಾವನೆಯಿಂದ ತಿಳಿಯುತ್ತಾರೆಯೋ ಅವರು ಸರ್ವ ಧರ್ಮ ಸಹಿಷ್ಣುತೆಯ (Religious Toleration) ಮನೋಭಾವವನ್ನು ಪಡೆಯುವುದು ಮಾತ್ರವಲ್ಲದೆ, ಎಲ್ಲಾ ಮತಧರ್ಮಗಳನ್ನು ನಂಬಿರುವವರನ್ನು ಪ್ರೀತಿಸಿ ಅವರಿಗೆ ಸೇವೆಯನ್ನು ಮಾಡುವ ಉದಾತ್ತ ಧ್ಯೇಯಗಳನ್ನು ಸಾಧಿಸುತ್ತಾರೆ.

6

## ಮತಧರ್ಮಗಳ ನವೀನ ಪ್ರಚಾರ ಕ್ರಮ

ಪ್ರಪಂಚದಲ್ಲಿ ಈಗ ಐದು ಶ್ರೇಷ್ಠ ಧರ್ಮಗಳು ಪ್ರಸಿದ್ಧಿಯನ್ನು ಪಡೆದಿವೆ; ಬಹುಮಂದಿ ಈ ಧರ್ಮಗಳನ್ನು ಅವಲಂಬಿಸಿರುವರು. ಅವು ಯಾವುವೆಂದರೆ ಬೌದ್ಧ ಮತ, ಜೈನ ಮತವನ್ನು ಒಳಗೊಂಡ ಹಿಂದೂ ಮತ, ಕ್ರೈಸ್ತಮತ, ಇಸ್ಲಾಂ ಮತ ಮತ್ತು ಪಾರ್ಸಿಯವರ ಮತ. ಈ ಎಲ್ಲಾ ಧರ್ಮಗಳೂ ಸತ್ಯದ ಅಥವ ಭಗವಂತನ ನಿಜ ಸ್ವರೂಪವನ್ನೂ, ಅದನ್ನು ಅಥವ ಅವನನ್ನು ಸಾಕ್ಷಾತ್ಕರಿಸಲು ಕೈಗೊಳ್ಳಬೇಕಾದ ಉತ್ತಮವಾದ ಪವಿತ್ರವಾದ ಧರ್ಮಾಚರಣೆಗಳನ್ನೂ ತಿಳಿಯ ಪಡಿಸುವುವು. ಆದರೆ ಬೇರೆ ಬೇರೆ ಗುಂಪಿನವರು ತಮ್ಮ ದೇಶದ ಪ್ರಾಕೃತ ಸ್ವಭಾವಗಳಿಗೆ ಅನುಗುಣವಾಗಿಯೂ, ತಮ್ಮ ವಂಶೀಯರ ಹಿಂದಿನ ಸಂಪ್ರದಾಯಗಳನ್ನು ಅನುಸರಿಸಿಯೂ ಮತ್ತು ತಮ್ಮ ಸಮಾಜದಲ್ಲಿ ಹುಟ್ಟಿದ ಮಹಾತ್ಮರ ಉಪದೇಶಗಳಿಗನುಗುಣವಾಗಿಯೂ ಒಂದೇ ಸಾರಾಂಶದಿಂದ ಕೂಡಿದ ತತ್ವಾನ್ವೇಷಣೆಯನ್ನೂ, ಧರ್ಮಾಚರಣೆಯನ್ನೂ ಬೇರೆಬೇರೆ ರೂಪ ಮತ್ತು ಕ್ರಮಗಳಲ್ಲಿ ಆಚರಿಸುವರು. ಆದರೆ ಒಂದೊಂದು ಮತ ಧರ್ಮದ ಸಾರವಾದ ಭಾಗವು ಆ ಮತವನ್ನು ನಂಬುವವರ ದೇವತಾ ಪೂಜೆಗಳು ಮಾತ್ರವೇ ಅಲ್ಲ ಮತ್ತು ಅವರ ಸಾಮಾಜಿಕ ಪೂಜಾಕ್ರಮಗಳು ಮಾತ್ರವೇ ಅಲ್ಲ ಎಂಬುದನ್ನು ಸರ್ವರೂ ತಿಳಿದುಕೊಂಡರೆ, ಎಲ್ಲಾ ಧರ್ಮಗಳೂ ವ್ಯಕ್ತಿಯ ಮತ್ತು ಸಮಾಜದ ಶ್ರೇಯಸ್ಸನ್ನುಂಟುಮಾಡಿ ಒಂದಕ್ಕೊಂದು ಸ್ನೇಹಭಾವದಿಂದ ಎಲ್ಲಾ ಜನರ ಶ್ರೇಯಸ್ಸನ್ನು ಸಾಧಿಸುತ್ತವೆ. ಆಧುನಿಕ ನಾಗರಿಕ ಮಾನವನು ಸಾಂಪ್ರದಾಯಿಕ ಗೊಡ್ಡು ಧರ್ಮಾಚರಣೆಗಳಲ್ಲಿ, ನಂಬಲಸಾಧ್ಯವಾದ ಪೌರಾಣಿಕ ಕಥೆಗಳ ಉಪಮಾನಗಳಲ್ಲೂ, ಬರಿಯ ವಾಕ್ಯಾರ್ಥ ಜ್ಞಾನದಲ್ಲೂ, ಇತರ ಕೋಮಿನವರ ಮೇಲೆ ದ್ವೇಷಾಸೂಯೆಗಳನ್ನು ತೋರಿಸುವ ಮತಾಚರಣೆಗಳಲ್ಲೂ ಮತ್ತು ಮತಕ್ಕೆ ಸಂಬಂಧಪಟ್ಟ ವಿವಾದಗಳಲ್ಲೂ ಶ್ರದ್ಧೆಯನ್ನು ಹೊಂದಿಲ್ಲ. ಪ್ರಪಂಚಾನುಭವಗಳನ್ನೆಲ್ಲಾ ನಾಶಪಡಿಸುವ ಅಂತಹ ಧರ್ಮವು ಅವನಿಗೆ ಬೇಕಾಗಿಲ್ಲ. ಬ್ರಹ್ಮ ಸೂತ್ರವು ಕೂಡ ಮಾನವನು ಜಗತ್ತನ್ನು ಇದರ ಕಟ್ಟಳೆಗಳನ್ನೂ ಚೆನ್ನಾಗಿ ತಿಳಿದು ತನ್ಮೂಲಕ ಸತ್ಯಾನ್ವೇಷಣೆಯಲ್ಲಿ ಪ್ರವರ್ತಿಸಿ ಸತ್ಯದ ಸ್ವರೂಪವನ್ನು ಅರಿಯಬೇಕೆಂದು ಬೋಧಿಸುತ್ತದೆಯಲ್ಲವೆ? ಆಧುನಿಕ ಮಾನವನಿಗೆ ಈಗ ಬೇಕಾಗಿರುವುದು ವಿಜ್ಞಾನ ಶಾಸ್ತ್ರಗಳ ತೀರ್ಮಾನಗಳಿಗೂ, ತತ್ವ ಶಾಸ್ತ್ರಗಳ ಬೋಧನೆಗಳಿಗೂ, ಸಮಾಜ ಶಾಸ್ತ್ರಗಳ ನೀತಿಗಳಿಗೂ ವಿರೋಧವಲ್ಲದ ಮತ್ತು ಸಮನ್ವಯವನ್ನುಂಟುಮಾಡುವ ಶ್ರೇಷ್ಠ ಧರ್ಮಗಳ ಸಾರಾಂಶ. ನವೀನ ಮತಧರ್ಮ ಪ್ರಚಾರವು ಈಗಿನ ಪ್ರಕೃತಿ ಸನ್ನಿವೇಶಗಳಿಗನುಗುಣವಾಗಿ ಪ್ರಪಂಚದ ಮಾನವರ ಕಷ್ಟಗಳನ್ನು ಕಮ್ಮಿಮಾಡಿ ಆನಂದವನ್ನು ಹೆಚ್ಚಿಸುವ ಹೊಸ ಸಂಸ್ಥೆಗಳನ್ನು ಸಮಾಜದಲ್ಲಿ ಹುಟ್ಟಿಸುವಂಥಾದ್ದಾಗಿರಬೇಕೇ ವಿನಹ ಪುರಾತನ ಕಾಲದಲ್ಲಿದ್ದ ಸಂಸ್ಥೆಗಳನ್ನೇ ಪುನಃ ಸ್ಥಾಪಿಸಬೇಕೆಂಬ ಭಾವನೆಯಿಂದ ಕೂಡಿರಕೂಡದು. ಅದು ಬಹು ಜನರಲ್ಲಿ ಸ್ವಾರ್ಥ ಭಾವನೆಗಳನ್ನು ಕಮ್ಮಿಮಾಡಿ, ಪರಾರ್ಥ ಭಾವನೆಯನ್ನುಂಟುಮಾಡಿ, ಅವರಲ್ಲಿ ಶೀಲಗಳನ್ನು ವೃದ್ಧಿಪಡಿಸಿ ನೆರೆಹೊರೆ

ಯುವತಿಗೆಲ್ಲಾ ಸೇವೆಗಳನ್ನು ಮಾಡುವಂಥ ಮನೋಭಾವಗಳನ್ನು ಬೆಳೆಸಬೇಕು. ಅದು ಸತ್ಯಾನ್ವೇಷಣೆಗೆ ಅನುಕೂಲವಾದ ಸಾಧನಗಳಿಂದ ಕೂಡಿದ್ದಾಗಿರಬೇಕು ಮತ್ತು ಕ್ರಮೇಣ ಹೆಚ್ಚು ಹೆಚ್ಚಾಗಿ ಸತ್ಯದ ಅನುಭವವನ್ನು ಕೊಡುವಂಥಾದ್ದಾಗಿರಬೇಕು. ಪ್ರಕೃತಿಯಲ್ಲೂ, ಸ್ಥಾವರ ಜಂಗಮ ಜೀವಿಗಳಲ್ಲೂ, ಮನುಷ್ಯರಲ್ಲೂ ಸತ್ಯಸ್ವರೂಪದ ಸಾಕ್ಷಾತ್ಕಾರವನ್ನುಂಟು ಮಾಡತಕ್ಕದ್ದಾಗಿರಬೇಕು. ವಿಜ್ಞಾನಶಾಸ್ತ್ರವು ನಮ್ಮ ಹೊರಗಿನ ಪ್ರಪಂಚದ ಶಕ್ತಿಗಳನ್ನು ಕಂಡುಹಿಡಿದು ಅವುಗಳನ್ನು ಮಾನವನ ಕ್ಷೇಮಕ್ಕೆ ಉಪಯೋಗಿಸಲು ಪ್ರಯತ್ನಿಸುತ್ತದೆ; ಹಾಗೆಯೇ ಶ್ರೇಷ್ಠ ಮತ ಧರ್ಮಗಳ ಸಾರಾಂಶಗಳು ಒಳಗಿನ ಮನಶ್ಶಕ್ತಿಗಳನ್ನು ಹೆಚ್ಚು ಹೆಚ್ಚಾಗಿ ವೃದ್ಧಿ ಪಡಿಸುವ ಸಾಧನೆಗಳನ್ನು ತಿಳಿಯಪಡಿಸಿ ಅವುಗಳನ್ನು ಮಾನವನ ಕ್ಷೇಮಕ್ಕೆ ಹೇಗೆ ಉಪಯೋಗಿಸಬೇಕೆಂಬುವನ್ನು ನಿರ್ಧರಿಸುತ್ತದೆ. ಕೊನೆಯದಾಗಿ ಈ ಸತ್ಯಾನ್ವೇಷಣ ಕ್ರಮವು ಮತ್ತು ಸತ್ಯದ ಸಾಕ್ಷಾತ್ಕಾರವು ಕೆಲವು ಗುಂಪಿನ ಜನರಿಗೆ ಮಾತ್ರ ಸಾಧ್ಯ ಎಂಬ ಭಾವನೆಯಿಂದ ಕೂಡಿರದೆ ಪ್ರಪಂಚದ ಸರ್ವ ಜಾತಿಗಳ ಮಾನವರಿಗೂ ಅನ್ವಯಿಸತಕ್ಕದ್ದಾಗಿರಬೇಕು. ಶ್ರೇಷ್ಠ ಧರ್ಮಗಳ ಸಾರಾಂಶಗಳನ್ನು ತಿಳಿದವನು ತನ್ನ ಗುಂಪಿನ ಧ್ಯೇಯಗಳನ್ನು ಮಾತ್ರವಲ್ಲದೆ ಇತರರ ಉದಾತ್ತ ಧ್ಯೇಯಗಳನ್ನೂ ಅರಿತುಕೊಳ್ಳುವನು ಮತ್ತು ಅವರೊಡನೆ ಸಹಾನುಭೂತಿಯಿಂದಲೂ ಋಜುಬುದ್ಧಿಯಿಂದಲೂ ವರ್ತಿಸುತ್ತಾ ಪರಹಿಂಸಾಕಾರ್ಯಗಳನ್ನು ಸಂಪೂರ್ಣವಾಗಿ ತ್ಯಜಿಸುವನು.

## ತರ್ಕ ಜ್ಞಾನ ಮತ್ತು ಮತಧರ್ಮ

ಎಲ್ಲಾ ಶ್ರೇಷ್ಠ ಧರ್ಮಗಳ ಸಾರಾಂಶಗಳು ಒಂದೇ ಆಗಿವೆಯೆ ಅಥವ ಬೇರೆ ಬೇರೆಯಾಗಿ ವಿರೋಧಗಳಿಂದ ಕೂಡಿವೆಯೆ? ಸತ್ಯಕ್ಕೆ ಅಥವ ಭಗವಂತನಿಗೆ ಸಂಬಂಧಪಟ್ಟ ವಿವೇಕಜ್ಞಾನವು ಎಲ್ಲಾ ಶ್ರೇಷ್ಠ ಧರ್ಮಗಳಲ್ಲಿಯೂ ಅಡಗಿದೆ; ಆದರೆ ಅದು ಮುಖ್ಯವಲ್ಲದ ಅನೇಕ ಮತಾಚಾರಗಳಲ್ಲಿ ಮರೆಸಿಹೋಗಿದೆ. ತಿರುಳಿಲ್ಲದ ಬಾಹ್ಯ ಆಚಾರಗಳಲ್ಲಿ ಮೇಲೆ ಮೇಲೆ ವಿರೋಧಗಳು ತೋರುತ್ತವೆ; ಆದರೆ ಎಲ್ಲಾ ಧರ್ಮಗಳ ಸಾರಾಂಶಗಳಲ್ಲಿ ಯಾವ ವ್ಯತ್ಯಾಸಗಳು ಕಂಡುಬರುವುದಿಲ್ಲವೆಂಬುದನ್ನು ಮತ್ತು ಐಕ್ಯತೆ ಇದೆ ಎಂಬುದನ್ನು ತತ್ವಜ್ಞಾನಿಗಳು ಮನಗಂಡಿದ್ದಾರೆ. ವೇದಗಳು ಖುರಾನ್, ಬೈಬಲ್, ತ್ರಿಪಿಟಕಾ ಮತ್ತು ಜೆಂಡ್ ಅವೆಸ್ತಾ ಪವಿತ್ರ ಗ್ರಂಥಗಳು ಮಹಾತ್ಮರ ಅನುಭವಗಳನ್ನು ಮುಖ್ಯವಾಗಿ ವರ್ಣಿಸುತ್ತವೆ; ಆದರೆ ಇವುಗಳಲ್ಲಿ ಬೇರೆ ಬೇರೆ ಪ್ರಾಪಂಚಿಕ ವಿಚಾರಗಳೂ ವಿವರಿಸಲ್ಪಟ್ಟಿವೆ. ಆದುದರಿಂದ ವಿವೇಕಿಯಾದ ಮಾನವನು ಅವುಗಳ ಅರ್ಥವನ್ನು ಅಂದರೆ ಸಾರಾಂಶಗಳನ್ನು ಗ್ರಹಿಸಿ ಆಯಾ ದೇಶಗಳಿಗೆ ಮಾತ್ರ ಅನ್ವಯಿಸುವ ಅವುಗಳ ಶರೀರವಾದ ಅಥವ ಬಾಹ್ಯದ ವಿಷಯಗಳಿಗೆ ವಿಶೇಷ ಪ್ರಾಮುಖ್ಯತೆಯನ್ನು ಕೊಡಬಾರದು. ಸಾರಾಂಶಗಳನ್ನು ಮಾತ್ರ ಗ್ರಹಿಸಿ ಅಭ್ಯಾಸಕ್ಕೆ ತಂದರೆ ಎಲ್ಲಾ ಶ್ರೇಷ್ಠ ಧರ್ಮಗಳ ಮೂಲಕವಾದವು ಸತ್ಯವನ್ನು ಸಾಕ್ಷಾತ್ಕರಿಸುವ ಶಕ್ತಿಯನ್ನು ಪಡೆಯಬಹುದು. ಮತಧರ್ಮಗಳ ಸಾರಾಂಶಗಳಿಗೂ ಮಾನವನ ತರ್ಕ

ಜ್ಞಾನಕ್ಕೂ ಮೇಳನವಿದೆಯೆ ಎಂಬುದು ಮುಂದಿನ ಪ್ರಶ್ನೆ. ಪರಿಣಾಮವಾದದ ಪ್ರಕಾರ ಅನಂತ ದೇಶಕಾಲಗಳಲ್ಲಿ ನಿರ್ಜೀವ ಪದಾರ್ಥಗಳು ಸೃಷ್ಟಿಯಾಗಿ ಕ್ರಮೇಣ ಸಜೀವ ಸೃಷ್ಟಿ ಉದ್ಭವಿಸುತ್ತದೆ, ಸಜೀವ ಸೃಷ್ಟಿಯಲ್ಲಿ ಕ್ರಮೇಣ ಮನಸ್ಸುಂಟಾಗಿ ಅದು ಬೆಳೆಯುತ್ತದೆ; ಮನಸ್ಸನ್ನು ಪಡೆದಿರುವ ಜೀವಗಳಲ್ಲಿ ಕ್ರಮೇಣ ಬುದ್ಧಿಯುಂಟಾಗಿ ಅದು ಬೆಳೆಯುತ್ತದೆ. ಹಾಗೆಯೇ ಬುದ್ಧಿ ಜೀವಿಗಳಲ್ಲಿ ಕೆಲವು ಆಧ್ಯಾತ್ಮ ಸಾಧನೆಗಳಿಂದ ಯೋಗಜನ್ಯ ಜ್ಞಾನ ಅಥವ ದಿವ್ಯಜ್ಞಾನ ವುಂಟಾಗಿ ಅದು ಬೆಳೆಯುತ್ತವೆ ಎಂದು ಶ್ರೇಷ್ಠ ಧರ್ಮಗಳೆಲ್ಲವೂ ಸಾರುತ್ತವೆ. ಆದುದರಿಂದ ಬುದ್ಧಿಯ ಆಧಾರದಿಂದ ಹುಟ್ಟುವ ತರ್ಕಜ್ಞಾನಕ್ಕೂ ಯೋಗಾಭ್ಯಾಸಗಳಿಂದ ಬೆಳೆಯುವ ದಿವ್ಯಜ್ಞಾನಕ್ಕೂ ಯಾವ ವಿರೋಧವೂ ಇರುವುದಿಲ್ಲ. ಮಗುವಿನ ಶರೀರದಲ್ಲಿ ಇಂದ್ರಿಯಗಳು ಬೆಳೆಯುವ ಹಾಗೆ, ಇಂದ್ರಿಯಗಳ ಜೊತೆಯಲ್ಲಿ ಮನಸ್ಸು ಬೆಳೆಯುವ ಹಾಗೆ, ಮನಸ್ಸಿನೊಡನೆ ಕ್ರಮೇಣ ಬುದ್ಧಿಯು ಬೆಳೆಯುವ ಹಾಗೆ ಬುದ್ಧಿಯ ಚಟುವಟಿಕೆಯಿಂದ ಕೂಡಿಯೇ ದಿವ್ಯಜ್ಞಾನವು ಬೆಳೆಯುತ್ತವೆ. ದಿವ್ಯಜ್ಞಾನವು ಇಂದ್ರಿಯ ಮನಸ್ಸು ಬುದ್ಧಿಗಳ ಹಾಗೆ ಅಂತಃಕರಣದ ಒಂದು ಅಂತಸ್ತು ಅಥವ ಗುಣವೇ ಹೊರತು ಅಂತಃಕರಣಕ್ಕೆ ಸೇರದ ಬೇರೆ ಶಕ್ತಿಯಲ್ಲ. ಮನಸ್ಸಿನ ಶಕ್ತಿಯನ್ನು ಪಡೆದ ಪ್ರಾಣಿಯ ಸ್ವಭಾವವು ಹೇಗೆ ಗಿಡಗಳ ಸ್ವಭಾವಕ್ಕಿಂತ ಮೇಲಾಗಿದೆಯೋ, ಬುದ್ಧಿಯನ್ನು ಪಡೆದ ಮನುಷ್ಯ ಸ್ವಭಾವವು ಹೇಗೆ ಪ್ರಾಣಿಗಳ ಸ್ವಭಾವಕ್ಕಿಂತ ಉತ್ತಮವಾಗಿದೆಯೋ ಹಾಗೆಯೇ ದಿವ್ಯಜ್ಞಾನವನ್ನು ಪಡೆದ ಮಾನವ ಸ್ವಭಾವವು ಕೇವಲ ತರ್ಕಜ್ಞಾನವನ್ನು ಉಪಯೋಗಿಸುವ ಮಾನವ ಸ್ವಭಾವಕ್ಕಿಂತ ಅತ್ಯುತ್ತಮವಾಗಿರುವುದು. ಆದುದರಿಂದ ಮಾನವರು ತಮ್ಮ ತರ್ಕಜ್ಞಾನದಿಂದ ಅರಿಯಲಾಗದ ಸತ್ಯದ ಸ್ವರೂಪವನ್ನು ತಮ್ಮ ದಿವ್ಯಜ್ಞಾನದಿಂದ ಸಾಕ್ಷಾತ್ಕರಿಸ ಬಲ್ಲರು. ಸತ್ಯದ ಸ್ವರೂಪವನ್ನು ದಿವ್ಯಜ್ಞಾನವನ್ನು ಪಡೆದು ಅನುಭವಿಸಬೇಕೇ ವಿನಹ ಅದನ್ನು ಕೆಲವು ವಾಕ್ಯಗಳಿಂದ ಉದಹರಿಸಿ ಬುದ್ಧಿಜ್ಞಾನ ಅಥವ ತರ್ಕಜ್ಞಾನ ಮಾತ್ರದಿಂದಲೇ ಋಜುಸುವುದಕ್ಕಾಗುವುದಿಲ್ಲ. ದಿವ್ಯಜ್ಞಾನವನ್ನು ಪಡೆಯಲು ಯೋಗಸಾಧನೆಗಳನ್ನು ಕೈಗೊಳ್ಳುವ ಸಾಧಕನು ಬ್ರಹ್ಮಚರ್ಯೆಯನ್ನು ಅನುಷ್ಠಿಸಬೇಕಾದುದರಿಂದ ಸ್ವಾರ್ಥತೆಯನ್ನು ಕಡಿಮೆ ಮಾಡುತ್ತಾನೆ ಮತ್ತು ಪರಾರ್ಥ ಧ್ಯೇಯವನ್ನು ಬೆಳೆಸುತ್ತಾ, ಭಗವಂತನ ಕೈಂಕರ್ಯವೆಂಬ ಭಾವನೆಯಿಂದ ಲೋಕಕಲ್ಯಾಣಕ್ಕೆ ಸೇವೆ ಮಾಡುತ್ತಾನೆ. ಆದುದರಿಂದ ಶ್ರೇಷ್ಠ ಧರ್ಮಗಳ ಸಾರಾಂಶಗಳನ್ನು ಲೋಕದ ಜನರೆಲ್ಲರಿಗೂ ಬೋಧಿಸಬೇಕು. ಒಂದು ಮತವು ಮಿಕ್ಕ ಮತಗಳನ್ನು ಜಯಿಸಿ ಪ್ರಪಂಚದಲ್ಲೆಲ್ಲಾ ಹರಡಬೇಕೆಂಬ ಉದ್ದೇಶವು ಕೆಟ್ಟದ್ದು; ಆದರಿಂದ ಯುದ್ಧಗಳು ಹೆಚ್ಚಾಗುತ್ತವೆ. ಜನಾಂಗಗಳ ಜನರು ಎಲ್ಲಾ ಶ್ರೇಷ್ಠ ಧರ್ಮಗಳ ಸಾರಾಂಶಗಳನ್ನು ಶ್ರವಣ, ಮನನ, ನಿಧಿಧ್ಯಾಸನ ಮಾಡಬೇಕೆಂಬುದೇ ಮಹಾತ್ಮಾ ಗಾಂಧಿಯವರು ಲೋಕದ ಜನರಿಗೆ ಮಾಡಿದ ಮುಖ್ಯವಾದ ಉಪದೇಶವು; ಏಕೆಂದರೆ ಅವುಗಳನ್ನು ತಿಳಿದು ಅಭ್ಯಾಸ ಮಾಡುವ ಜನರು ಮತ್ತು ಮುಖಂಡರು ವಿಶ್ವಶಾಂತಿಗೆ ಸದಾ ದುಡಿಯುತ್ತಾ ಯುದ್ಧಗಳನ್ನು ತಪ್ಪಿಸಲು ಸರ್ವವಿಧವಾದ ಕಾರ್ಯಗಳನ್ನು ಕೈಗೊಳ್ಳುವರು.

## ಶ್ರೀ ನವಭಾರತ ಆಶ್ರಮ

ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

## (ಮಾಲೆ—ಹದಿನೇಳು)

## ಇಸ್ಲಾಂ ಧರ್ಮದ ತತ್ವ ಹಿತ ಪುರುಷಾರ್ಥಗಳು

### ಭಾಗ—೧

ಮೈಸೂರು ದೇಶದ ಅಗ್ರಿಕಲ್ಚರಲ್ ಇಲಾಖೆಯಲ್ಲಿ ಸೀನಿಯರ್ ಎಂಟೋಮಾಲಜಿಸ್ಟ್ (Senior Entomologist) ಆಗಿರುವ ಶ್ರೀ ಸೈಯದ್ ಉಸ್ಮಾನ್ ಎಂ.ಎಸ್.ಸಿ., ರವರ "The Fundamental and essential values of Islam" ಎಂಬ ಇಂಗ್ಲೀಷ್ ಲೇಖನದ ಆಧಾರದ ಮೇಲೆ.

**ಶಿಷ್ಯ:**—ಮುಸಲ್ಮಾನರು ಯಾರು? ಈಗ ಅವರು ಪ್ರಪಂಚದ ಯಾವ ಯಾವ ಭಾಗಗಳಲ್ಲಿ ವಾಸಮಾಡುತ್ತಿದ್ದಾರೆ? ಅವರ ಜನಸಂಖ್ಯೆಯೇನು?

**ಗುರು:**—ಭಗವಂತನು ದೇವದೂತ ಗೇಬ್ರಿಯಲನ ಮೂಲಕ ದೈವಜ್ಞ ಮುಹಮ್ಮದರವರಿಗೆ ಇಸ್ಲಾಂ ಧರ್ಮವನ್ನು ಉಪದೇಶ ಮಾಡಿದನು; ಈಗ ಪ್ರಪಂಚದಲ್ಲಿ ಈ ಇಸ್ಲಾಂ ಧರ್ಮವನ್ನು ಯಾವ ಜನರು ನಂಬಿ ಆಚರಿಸಲು ಪ್ರಯತ್ನಿಸುವರೋ ಅವರೇ ಮುಸಲ್ಮಾನರು. ಇಸ್ಲಾಂ ಧರ್ಮವು ಪ್ರಪಂಚದಲ್ಲಿ ಒಂದು ಬಹು ಮುಖ್ಯವಾದ ಮತವಾಗಿದೆ; ಏಕೆಂದರೆ, ಪ್ರಪಂಚದಲ್ಲಿ ಮುಸಲ್ಮಾನರು ಇಲ್ಲದ ಪ್ರದೇಶವೇ ವಿರಳ. ಪ್ರಪಂಚದಲ್ಲಿ ಈಗ ಮುಸಲ್ಮಾನರ ಪ್ರಜಾಸಂಖ್ಯೆ ಸುಮಾರು ನಲವತ್ತೈದು ಕೋಟಿಗಿಂತ ಹೆಚ್ಚಾಗಿದೆ:—ಏಷ್ಯಾ ಖಂಡ—೩೭ ಕೋಟಿ ೪೦ ಲಕ್ಷ; ಆಫ್ರಿಕಾ—೧೦ ಕೋಟಿ ೩೦ ಲಕ್ಷ; ಇಂಡೋನೇಷಿಯಾ—೭ ಕೋಟಿ ೬೦ ಲಕ್ಷ; ಯೂರೋಪ್—೫೦ ಲಕ್ಷ; ಉತ್ತರ ದಕ್ಷಿಣ ಅಮೇರಿಕಾ—೧೦ ಲಕ್ಷ; ಆಸ್ಟ್ರೇಲಿಯಾ—೧೦ ಲಕ್ಷ.

**ಶಿಷ್ಯ:**—ಈ ಮತವನ್ನು ಇಸ್ಲಾಂ ಧರ್ಮವೆಂದು ಏಕೆ ಕರೆಯುತ್ತಾರೆ? "ಇಸ್ಲಾಂ" ಎಂಬ ಪದದ ವಿವಿಧ ಅರ್ಥಗಳಾವುವು?

**ಗುರು:**—ಇಸ್ಲಾಂ ಧರ್ಮವು ಒಂದು ಶಾಂತಿ ಮತ. "ಇಸ್ಲಾಂ" ಅಂದರೆ ಮಾನವಕೋಟಿಯಲ್ಲಿ ನೆಲೆಸಿರುವ ಶಾಂತಿ ಎಂಬುದು ಸಾಮಾನ್ಯ ಅರ್ಥ. ಆದರೆ ಶಾಂತಿಯನ್ನು ಪಡೆಯುವ ದಾರಿಯನ್ನೂ ಕೂಡ "ಇಸ್ಲಾಂ" ಎಂದು ಕರೆಯುತ್ತಾರೆ. ಇಷ್ಟೇ ಅಲ್ಲ, ಮಾನವರು ಭಗವಂತನ ಇಚ್ಛೆಗೆ ಸಂಪೂರ್ಣವಾಗಿ ಶರಣಾಗತಿಯನ್ನು,

ಮಾಡಬೇಕು ಎಂಬ ಅಭಿಪ್ರಾಯವೂ ಕೂಡ "ಇಸ್ಲಾಂ" ಎಂಬ ಪದದಲ್ಲಿ ಅಡಕವಾಗಿದೆ. ಇಸ್ಲಾಂ ಧರ್ಮವನ್ನು ಸತ್ಯವಾಗಿ ಅನುಷ್ಠಿಸುವವರೆಲ್ಲರೂ ಬುದ್ಧಿಶಕ್ತಿ, ಆತ್ಮಶಕ್ತಿ ಮತ್ತು ನೈತಿಕ ಬಲವನ್ನು ಪಡೆದು ಅವನ್ನು ಸಮಾಜದ ಮತ್ತು ಲೋಕದ ಕಲ್ಯಾಣಕ್ಕೆ ಉಪಯೋಗಿಸುವುದರಿಂದ, ಈ ಮತವು ಒಂದು ಶ್ರೇಷ್ಠ ಮತವೆಂದು ಪರಿಗಣಿಸಲ್ಪಟ್ಟಿದೆ. ಈ ಮತವು ಇಡೀ ಮಾನವಕೋಟಿಗೆ ಒಂದು ದಿವ್ಯ ಸಂದೇಶ; ಏಕೆಂದರೆ, ಈ ಮತದಲ್ಲಿ ಶಿಫಾರಸುಗೊಳಿಸಿರುವ ನೀತಿಗಳನ್ನು ಜನರು ತಮ್ಮ ಸಮಾಜದಲ್ಲಿ ಆಚರಿಸುತ್ತಿದ್ದರೆ ಮನುಷ್ಯ ಮನುಷ್ಯರಲ್ಲಿ ಶಾಂತಿಯುಂಟಾಗುತ್ತದೆ ಮತ್ತು ಅನೇಕರು ಒಳ್ಳೆಯವರಾಗಿಯೂ ಶ್ರೇಷ್ಠರಾಗಿಯೂ ಆಗುತ್ತಾರೆ.

**ಶಿಷ್ಯ**:—ದೈವಜ್ಞರು ಅಥವಾ ಪ್ರವಾದಿಗಳು ಯಾರು? ಅವರಲ್ಲಿ ಮಹಮ್ಮದ್ ಪೈಗಂಬರರ ಮೊತ್ತಸ್ಥಿತಿಯೇನು?

**ಗುರು**:—ಮಾನವರು ಭಗವಂತನ ವಿಚಾರದಿಂದ ವಿಮುಖರಾಗಿ ಅಧರ್ಮ ಕಾರ್ಯಗಳನ್ನು ಅನುಷ್ಠಿಸುವಾಗ ಭಗವಂತನು ಆಯಾ ಜನಾಂಗಗಳಿಗೆ ದೈವಜ್ಞರನ್ನು ಅಥವ ಪ್ರವಾದಿಗಳನ್ನು ಕಳುಹಿಸಿ ಅವರ ಮೂಲಕ ಉತ್ತಮ ಸಂದೇಶಗಳನ್ನು ಜನರಿಗೆ ತಿಳಿಯಪಡಿಸುವನು. ದೈವಜ್ಞರು ಭಗವಂತನ ಸಂದೇಶಗಳನ್ನು ತಿಳಿದು ಅವನ್ನು ಲೋಕಕ್ಕೆ ಪ್ರಚಾರ ಮಾಡುವ ಮಹಾಪುರುಷರು; ಉದಾಹರಣೆಗಾಗಿ ಏಬ್ರಹಾಮ್, ಮೋಸಸ್, ಏಸುಕ್ರಿಸ್ತ, ಗೌತಮಬುದ್ಧ ಇವರೆಲ್ಲರೂ ದೈವಜ್ಞರು ಅಥವ ಪ್ರವಾದಿಗಳು. ದೈವಜ್ಞರು ಭಗವಂತನ ಸಂದೇಶಗಳನ್ನು ತಿಳಿದು ಜನರಿಗೆ ಉಪದೇಶ ಮಾಡುತ್ತಾರೆ ಎಂಬ ತತ್ವವನ್ನು ಕೊರಾನ್ ಪವಿತ್ರ ಗ್ರಂಥವು ಒಪ್ಪಿದೆ. "ನೀನು ಹುಟ್ಟುವುದಕ್ಕೆ ಮುಂಚೆಯೇ ನಾವು ದೈವಜ್ಞರನ್ನು ಕಳುಹಿಸಿದ್ದೇವೆ . . . . . ನಾವು ಹಿಂದಿನ ದೈವಜ್ಞರಿಗೆ ಯಾವುದನ್ನು ಉಪದೇಶ ಮಾಡಿದೆವೋ ಅದನ್ನೇ ನಿನಗೆ (ಮಹಮ್ಮದ್) ಪುನಃ ಉತ್ತಮ ರೀತಿಯಲ್ಲಿ ಉಪದೇಶ ಮಾಡುತ್ತೇವೆ." ಇಂಥಾ ದೈವಜ್ಞರು ಅಥವ ಪ್ರವಾದಿಗಳಲ್ಲಿ ಇಸ್ಲಾಂ ಧರ್ಮ ಪ್ರಚಾರಕರಾದ ಮಹಮ್ಮದ್ ದೈವಜ್ಞರು ಕೊನೆಯ ಮತ್ತು ಮುಖ್ಯ ಪ್ರವಾದಿಗಳು. ಅವರು ಭಗವಂತನ ಸಂದೇಶಗಳನ್ನು ಅತ್ಯುತ್ತಮವಾದ ಶಾಶ್ವತವಾದ ಪರಿಣಾಮಗಳನ್ನು ಉಂಟುಮಾಡುವ ರೀತಿಯಲ್ಲಿ ಬೋಧಿಸಿದರು. ಮಹಮ್ಮದ್ ಪೈಗಂಬರರು ಭಗವಂತನ ಸೇವಕರು; ಆದುದರಿಂದ ಅವನ ಒಂದು ಉಪಕರಣವಾಗಿ ಅವನ ಸಂದೇಶಗಳನ್ನು ಲೋಕಕ್ಕೆ ಪ್ರಚಾರ ಮಾಡಿದರು. ದೈವಜ್ಞರು ಸಾಧಾರಣವಾಗಿ ಸಮಾಜದ ದುಷ್ಟ ಮುಖಂಡರುಗಳಿಂದ ಅನೇಕ ಕಷ್ಟಗಳನ್ನು ಅನುಭವಿಸಿರುವ ಹಾಗೆ ದೈವಜ್ಞ ಮಹಮ್ಮದರೂ ಕೂಡ ಮೊದಲು ಅನೇಕ ಕಷ್ಟಗಳಿಗೆ ಒಳಗಾಗಿದ್ದು ಕೊನೆಯಲ್ಲಿ ಜಯವನ್ನು ಪಡೆದರು. ಲೋಕದಲ್ಲಿ ದೈವಜ್ಞರು ಮತ್ತು ಅವರ ಅನುಯಾಯಿಗಳು ತಮಗೆ ಉಂಟಾಗುವ ಹಿಂಸೆಗಳನ್ನೆಲ್ಲಾ ಶಾಂತಿಯಿಂದ

ಸಹಿಸುತ್ತಾ, ಭಗವಂತನ ಉತ್ತಮ ಸಂದೇಶಗಳನ್ನು ಜನರಿಗೆ ಬೋಧಿಸುತ್ತಲೇ ಇದ್ದು ದರಿಂದ ಕೊನೆಯಲ್ಲಿ ಅವರನ್ನು ಹಿಂಸಿಸುವವರು ಸೋಲುತ್ತಾರೆ ಮತ್ತು ಪೈಗಂಬರ ಧರ್ಮ ಸಂದೇಶಗಳೇ ಜಯವನ್ನು ಪಡೆಯುತ್ತವೆ.

ಶಿಷ್ಯ:—ಇಸ್ಲಾಂ ಧರ್ಮವನ್ನು ತಿಳಿಯಪಡಿಸುವ ಮುಖ್ಯ ಪವಿತ್ರ ಗ್ರಂಥ ಗಳಾವುವು? ಅವು ಹೇಗೆ ಪವಿತ್ರ ಗ್ರಂಥಗಳಾದುವು?

ಗುರು:—ಪ್ರತಿ ವರ್ಷವೂ ಮಹಮ್ಮದರು ತಮ್ಮ ಸಂಸಾರ ಸಮೇತರಾಗಿ ಮೆಕ್ಕಾನಗರ ಸಮೀಪದಲ್ಲಿರುವ "ಹಿರಾ" ಎಂಬ ಕಾಡಿನ ಬೆಟ್ಟದ ಗುಹೆಯಲ್ಲಿ ಒಂದು ತಿಂಗಳು ಏಕಾಂತವಾಗಿ ವಾಸಮಾಡುತ್ತಾ ಭಗವಂತನನ್ನು ಧ್ಯಾನಮಾಡುವ ಪದ್ಧತಿಯನ್ನು ಇಟ್ಟುಕೊಂಡಿದ್ದರು. ಕ್ರಿ.ಶ. ೬೧೦ ರಲ್ಲಿ ಅಂದರೆ ಮಹಮ್ಮದರ ನಲವತ್ತನೇ ವಯಸ್ಸಿನಲ್ಲಿ ಒಂದು ದಿನ ರಾತ್ರಿ ಅವರು ಧ್ಯಾನಮಾಡುತ್ತಿದ್ದಾಗ ಅವರಿಗೆ ಭಗವಂತನ ಮೊದಲನೆಯ ಸಂದೇಶದ ಅರಿವುಂಟಾಯಿತು. ಈ ಕಲ್ಪನಾ ದೃಶ್ಯದಲ್ಲಿ ದೇವದೂತ ಗೆಬ್ರೀಲನ "ಈ ವಾಕ್ಯಗಳನ್ನು ಓದು" ಎಂಬ ಶಬ್ದವು ಅವರಿಗೆ ಕೇಳಿಸಿತು. ಅದಕ್ಕೆ ಮಹಮ್ಮದರು "ನನಗೆ ಓದಲು ಬರುವುದಿಲ್ಲ" ಎಂದು ಉತ್ತರ ಕೊಟ್ಟರು. ಆವಾಗಲೂ "ಓದು" ಎಂಬ ಶಬ್ದವು ಪುನಃ ಎರಡು ಸಲ ಕೇಳಿಸಿತು. ಅದರ ಫಲಿತಾಂಶವೇನು? ಮಹಮ್ಮದರ ಹೃದಯದ ಮೇಲೆ ಆ ವಾಕ್ಯಗಳನ್ನು ಬರೆದಹಾಗೆ ಅವರ ಮನಸ್ಸಿನಲ್ಲಿ ಅವು ಪ್ರತಿಬಿಂಬಿಸಿದುವು. ಹೀಗೆ ಸುಮಾರು ಇಪ್ಪತ್ತಮೂರು ವರ್ಷಗಳ ಕಾಲದಲ್ಲಿ ಮಹಮ್ಮದರು ತಮ್ಮ ಸಮಾಧಿ ದಶೆಗಳಲ್ಲಿ ಆಗಿಂದಾಗ್ಗೆ ಸ್ವಲ್ಪಸ್ವಲ್ಪವಾಗಿ ಕೇಳಿದ ಆ ಅಮೃತ ವಾಣಿಗಳ ಸಂಗ್ರಹವೇ ಪವಿತ್ರ ಕೊರಾನ್ ಎಂಬ ಗ್ರಂಥ. ಈ ಗ್ರಂಥವನ್ನು "ಅಲ್–ಕೊರಾನ್" ಅಂದರೆ "ಓದಲ್ಪಟ್ಟದ್ದು" ಎಂದು ಕರೆದಿದೆ; ಏಕೆಂದರೆ ಓದುವುದನ್ನೇ ತಿಳಿಯದ ಮನುಷ್ಯನಿಂದ ಭಗವಂತನ ಕೃಪೆಯಿಂದ ಈ ಸಂದೇಶಗಳೆಲ್ಲಾ "ಓದಲ್ಪಟ್ಟವು". ಮಹಮ್ಮದರು ತಾವು ಕೇಳಿದ ದಿವ್ಯ ಸಂದೇಶಗಳನ್ನು ಆಗಾಗ್ಗೆ ಶಿಷ್ಯರ ಮೂಲಕ ಬರೆಸಿದರು; ಆದುದರಿಂದ ಮುಸ್ಲಿಮರು ಕೊರಾನನ್ನು ಭಗವಂತನ ವಾಕ್ಯಗಳ ಸಂಗ್ರಹವೇ ಎಂದು ನಂಬುತ್ತಾರೆ. ದೇವದೂತ ಗೆಬ್ರೀಲನ ಸಹಾಯ ದಿಂದ ಪೈಗಂಬರ ಮಹಮ್ಮದರು ಭಗವಂತನ ಸಂದೇಶಗಳನ್ನು ಪಡೆದು ಅವನ್ನು ಬರೆ ಸಿದುದರಿಂದ, ಇವುಗಳನ್ನು ಒಳಗೊಂಡ ಕೊರಾನ್ ಗ್ರಂಥವನ್ನು ಮುಸಲ್ಮಾನರು ದೈವಿಕ ಗ್ರಂಥ ಅಥವ ಪವಿತ್ರ ಗ್ರಂಥವೆಂದು ಭಾವಿಸಿ ಅದಕ್ಕೆ ಹೆಚ್ಚಾದ ಗೌರವವನ್ನು ತೋರುತ್ತಿರುವರು.

ಮಹಮ್ಮದರು ಕಾಲವಾಗುವುದಕ್ಕೆ ಮುಂಚೆಯೇ ಅನೇಕ ಮುಸ್ಲಿಮರು ಕೊರಾ ನಿನಲ್ಲಿರುವ ಸಂದೇಶಗಳನ್ನು ಕಂಠಪಾಠ ಮಾಡಿದ್ದರು ಮತ್ತು ಮಹಮ್ಮದರು ಬರೆಸಿದ ಹಸ್ತಪತ್ರಿಕೆಗಳನ್ನು ಇಟ್ಟುಕೊಂಡಿದ್ದರು. ಅಬೂಬೇಕರನು ಹೀಗೆ ಬೇರೆಬೇರೆಯಾಗಿದ್ದ

ಹಸ್ತಪತ್ರಿಕೆಗಳನ್ನು ಒಟ್ಟಾಗಿ ಜೋಡಿಸಿ ಮತ್ತು ವಿಭಾಗಿಸಿ ಈಗಿರುವ ಕೋರಾನ್ ಗ್ರಂಥವಾಗಿ ಕ್ರೋಢೀಕರಿಸಿದನು. ಆದುದರಿಂದ ಈಗಿರುವ ಕೋರಾನಿನಲ್ಲಿ ಮಹಮ್ಮದರು ಭಗವಂತನ ಆಜ್ಞೆಯ ಪ್ರಕಾರ ಅವನ ಸಂದೇಶಗಳನ್ನು ಲೋಕಕ್ಕೆ ಪ್ರಚಾರ ಮಾಡಿದ ವಾಕ್ಯಗಳೇ ಇವೆ ಎಂಬುದರಲ್ಲಿ ಸಂದೇಹವಿಲ್ಲ. ಕೋರಾನಿನಲ್ಲಿ ೭೭೯೩೪ ಪದಗಳಿವೆ; ಅಂದರೆ ೬೬೬೬ ಶ್ಲೋಕಗಳಿವೆ. ಇವನ್ನು ೧೧೪ ಸೂರಾಗಳು ಅಂದರೆ ಅಧ್ಯಾಯಗಳಾಗಿ ವಿಂಗಡಿಸಿವೆ. ಈ ಒಟ್ಟು ಸೂರಾಗಳನ್ನು ಎರಡು ಭಾಗ ಮಾಡಬಹುದು; ಕ್ರಿ.ಶ. ೬೨೨ ರಲ್ಲಿ ಮಹಮ್ಮದರು ಮೆಕ್ಕಾನಿಂದ ಹೊರಡುವುದಕ್ಕೆ ಮುಂಚೆ ತಿಳಿದ ಸಂದೇಶಗಳು ಮೊದಲನೆಯದು ಮತ್ತು ಮೆದಿನಾದಲ್ಲಿ ಮುಂದಿನ ಹತ್ತು ವರುಷಗಳಲ್ಲಿ ಮಹಮ್ಮದರು ತಿಳಿದ ಸಂದೇಶಗಳು ಎರಡನೆಯದು. ಒಟ್ಟು ಕೋರಾನಿನಲ್ಲಿ ಮನುಷ್ಯರು ಒಬ್ಬರಿಗೊಬ್ಬರು ತಮ್ಮ ನಿತ್ಯ ಜೀವನದಲ್ಲಿ ಅನ್ಯೋನ್ಯವಾಗಿ ಪವಿತ್ರ ಜೀವನವನ್ನು ನಡೆಸುವ ಕ್ರಮಗಳು ಇದ್ದಾಗ್ಯೂ ಮೆಕ್ಕಾದಿನಲ್ಲಿ ತಿಳಿದ ಸಂದೇಶಗಳಲ್ಲಿ ಹೆಚ್ಚಾಗಿ ಧರ್ಮೋಪದೇಶಗಳು, ಪೈಗಂಬರ ಗುಣಶಕ್ತಿಗಳು, ಭಗವಂತನ ಸ್ತೋತ್ರ ಕ್ರಮಗಳು, ಪಾಪಕಾರ್ಯಗಳಿಗೆ ಶಿಕ್ಷೆಗಳು ಇವೇ ಮೊದಲಾದ ವ್ಯಕ್ತಿಗೆ ಶ್ರೇಯಸ್ಸನ್ನುಂಟುಮಾಡುವ ವಿಷಯಗಳು ವಿಶೇಷವಾಗಿ ಕಂಡುಬರುತ್ತವೆ. ಮಹಮ್ಮದರು ಮೆದಿನಾದಲ್ಲಿ ಉತ್ತಮವಾದ ಧಾರ್ಮಿಕ ರಾಜ್ಯದಿಂದ ಕೂಡಿದ ಸಮಾಜವನ್ನು ಸ್ಥಾಪಿಸಿದ ತರುವಾಯ ಪಡೆದ ಸಂದೇಶಗಳಲ್ಲಿ ಸಮಾಜದ ಏಕಮತ್ಯವನ್ನು ಅಭಿವೃದ್ಧಿಯನ್ನೂ ಉಂಟುಮಾಡುವ ರಾಜನೀತಿ, ಯುದ್ಧಕ್ಕೆ ಸಂಬಂಧಪಟ್ಟ, ನೈತಿಕ, ಮತೀಯ ಕಟ್ಟಳೆಗಳ ಮತ್ತು ಶಾಸನಗಳ ಉಪದೇಶಗಳಿವೆ. ಈ ಕಾಲದ ಸೂರಾಗಳಲ್ಲಿ ಅಪರಾಧಕ್ಕೆ ಸಂಬಂಧಪಟ್ಟ ಕಾನೂನು, ಮದುವೆ ಮತ್ತು ವಿವಾಹ ವಿಚ್ಛೇದ, ಸಾಲದ ವಿಚಾರ, ಸಾಕ್ಷಿಗಳು, ಹೆಚ್ಚು ಬಡ್ಡಿ ತೆಗೆದುಕೊಳ್ಳುವುದು, ಶತ್ರುಗಳನ್ನು ಆಳುವ ಕ್ರಮ ಮತ್ತು ಅವರ ಆಸ್ತಿ, ಕ್ರಯಾದಿಗಳು, ಜಾಗರಣೆ, ಊಟದ ವಿಚಾರ, ದಾನ, ಯಾತ್ರೆ, ಪ್ರಾರ್ಥನೆ, ಪೂಜಾ ಕ್ರಮ ಇವೇ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ನಿಯಮಗಳಿವೆ.

ಪವಿತ್ರ ಕೋರಾನಿಗೆ ಎರಡನೆಯದಾಗಿರುವ ಪವಿತ್ರ ಗ್ರಂಥವನ್ನೇ "ಸುನ್ನಾ" ಅಥವ "ಹಾದಿಸ್" ಎಂದು ಕರೆಯುತ್ತಾರೆ. ಈ ಗ್ರಂಥದಲ್ಲಿಯೂ ಮುಸ್ಲಿಮರ ಶಾಸನಗಳೂ ಆಚರಣೆಗಳೂ ಇವೆ; ಇದರಿಂದ ಕೋರಾನಿನಲ್ಲಿರುವ ಇಸ್ಲಾಂ ಸಂದೇಶಗಳನ್ನು ವಿಶದವಾಗಿ ತಿಳಿಯಲು ಅನುಕೂಲವಿದೆ. ಪೈಗಂಬರ ಮಹಮ್ಮದರ ಉಪದೇಶಗಳನ್ನು ಪುನಃ ಎರಡು ಭಾಗ ಮಾಡಬಹುದು; ಅವರು ಸಮಾಧಿ ಸ್ಥಿತಿಗಳಲ್ಲಿದ್ದಾಗ ಭಗವಂತನಿಂದ ಸಾಕ್ಷಾತ್ತಾಗಿ ಪಡೆದ ಸಂದೇಶಗಳ ಸಂಗ್ರಹವೇ ಕೋರಾನ್ ಗ್ರಂಥ; ಅವರು ಸಮಾಧಿ ಪಡೆಯದ ಸಾಮಾನ್ಯ ಇತರ ಕಾಲಗಳಲ್ಲಿ ತಮ್ಮ ನಿತ್ಯ ಜೀವನದಲ್ಲಿ ಶಿಷ್ಯರಿಗೆ

ಬೋಧಿಸಿದ ಉಪದೇಶಗಳ ಸಂಗ್ರಹವೇ **ಸುನ್ನಾ** ಅಥವ **ಹಾಡಿಸ್** ಗ್ರಂಥ. ಇಷ್ಟೇ ಅಲ್ಲ; ಮುಹಮ್ಮದರ ನಿತ್ಯ ಜೀವನದ ಸದಾಚಾರಗಳನ್ನೂ ಕೂಡ ವಿವರಿಸಿದೆ. ಆ ಮಹಾತ್ಮರು ಏನು ಮಾಡಿದರು, ಹೇಗೆ ಜೀವಿಸಿದರು, ಇತರರೊಡನೆ ಹೇಗೆ ವರ್ತಿಸಿದರು ಇವೆಲ್ಲವನ್ನೂ ಈ ಹಾಡಿಸ್ ಗ್ರಂಥವು ತಿಳಿಯಪಡಿಸುತ್ತದೆ. ಆದುದರಿಂದ ಈ ಗ್ರಂಥವೂ ಕೂಡ ಉತ್ತಮ ಸಂದೇಶಗಳನ್ನು ತಿಳಿಯಪಡಿಸುವ, ಶಾಶ್ವತವಾಗಿ ಶ್ರೇಯಸ್ಸನ್ನುಂಟುಮಾಡುವ ಗ್ರಂಥವೆಂದು ತಿಳಿಯಬೇಕು.

ಶಿಷ್ಯ:—ಕೋರಾನಿನಲ್ಲಿ ಭಗವಂತನ ಸ್ವರೂಪ ಗುಣಗಳನ್ನು ಹೇಗೆ ವರ್ಣಿಸಿದೆ?

**ಗುರು**:—ಕೊರಾನಿನ ಅನೇಕ ಶ್ಲೋಕಗಳಲ್ಲಿ ಭಗವಂತನ ಸ್ವರೂಪ ಗುಣಗಳ ವರ್ಣನೆ ಇದೆ; ಇಲ್ಲಿ ಕೆಲವು ಶ್ಲೋಕಗಳ ತಾತ್ಪರ್ಯಗಳನ್ನು ಮಾತ್ರ ತಿಳಿಯಪಡಿಸುತ್ತೇವೆ. (೧) "ಲೋಕಗಳಿಗೆಲ್ಲಾ ಸ್ವಾಮಿಯಾದ, ಮಹಾ ಉಪಕಾರಿಯಾದ, ಪರಮ ದಯಾವಂತನಾದ, ಕೊನೆಯ ತೀರ್ಮಾನದ ದಿವಸದ ಯಜಮಾನನಾದ, ಒಬ್ಬನೇ ಆದ ಭಗವಂತನನ್ನು ನಾವೆಲ್ಲರೂ ಹೀಗೆ ಸ್ತೋತ್ರ ಮಾಡೋಣ, 'ಭಗವಂತನೇ! ನಿನ್ನೊಬ್ಬನನ್ನೇ ನಾವು ಪೂಜಿಸುತ್ತೇವೆ; ಸಹಾಯ ಮಾಡು ಎಂದು ನಿನ್ನೊಬ್ಬನನ್ನೇ ನಾವು ಪ್ರಾರ್ಥಿಸುತ್ತೇವೆ.'" (೨) "ಯಾರ ಘೋಷಣೆಯಲ್ಲಿ ನಾವೆಲ್ಲರೂ ಇದೇವೆಯೋ ಅವನೊಬ್ಬನೇ ಭಗವಂತನು. ಅವನು ಹುಟ್ಟಲಿಲ್ಲ ಮತ್ತು ಜನ್ಮವನ್ನು ಕೊಡುವುದಿಲ್ಲ. ಯಾವನೂ ಅವನಿಗೆ ಸಮಾನನಾದವನಿಲ್ಲ." (೩) "ನಿಮ್ಮ ಭಗವಂತನು ಒಬ್ಬನೇ; ಅವನಲ್ಲದೆ ಬೇರೆ ಯಾವ ಭಗವಂತನೂ ಇಲ್ಲ." (೪) "ಭಯಪಡಬೇಡ; ನಾನು ಯಾವಾಗಲೂ ನಿನ್ನ ಜೊತೆಯಲ್ಲಿರುವೆನು; ನಾನು ಕೇಳುತ್ತೇನೆ ಮತ್ತು ನೋಡುತ್ತೇನೆ." (೫) "ನಿಮ್ಮ ಭಗವಂತನು ಹೇಳುತ್ತಾನೆ. 'ನನ್ನನ್ನು ನಂಬಿ ಕರೆಯಿರಿ; ನಾನು ನಿಮಗೆ ಪ್ರತ್ಯುತ್ತರವನ್ನು ಕೊಡುತ್ತೇನೆ.'" (೬) "ನೀನು ಯಾವ ದಿಕ್ಕಿಗೆ ತಿರುಗಿದರೂ ಅಲ್ಲಿ ದೇವರ ಮುಖವಿದೆ." (೭) "ಭಗವಂತನಿಂದಲೇ ನಾವು ಇದ್ದೇವೆ; ಕೊನೆಯಲ್ಲಿ ಅವನನ್ನೇ ನಾವು ಸೇರುತ್ತೇವೆ." (೮) "ನಿಜವಾಗಿ ನಾವು ಮನುಷ್ಯನನ್ನು ಸೃಷ್ಟಿಸಿದ್ದೇವೆ; ಅವನ ರಕ್ತನಾಳಗಳಿಗಿಂತ ನಾವು ಅವನ ಹತ್ತಿರದಲ್ಲಿದ್ದೇವೆ." ಹೀಗೆ ಕೋರಾನಿನಲ್ಲಿ ಆರಂಭದಿಂದ ಕೊನೆಯವರೆಗೂ, ಪ್ರತಿಯೊಂದು ಪುಟದಲ್ಲಿಯೂ, ಪ್ರತಿಯೊಂದು ಶ್ಲೋಕದಲ್ಲಿಯೂ ಭಗವಂತನ ಸ್ವಭಾವದ ಮತ್ತು ಗುಣಗಳ ಉಪದೇಶವಿದೆ. ಆದುದರಿಂದಲೇ ನಾವು ಕೋರಾನನ್ನು ಓದುತ್ತಿರುವಾಗಲೆಲ್ಲಾ ನಮಗೆ ಭಗವಂತನು ಕಣ್ಣೆದುರಿಗೆ ನಿಂತಿದ್ದಾನೆಯೋ ಎಂಬ ಭಾವನೆಯು ಉಂಟಾಗುತ್ತಲೇ ಇದೆ.

ಭಗವಂತನು ಒಬ್ಬನೇ ಆದ ಸೃಷ್ಟಿಕರ್ತನು ಎಂದು ಕೋರಾನ್ ಅಡಿಗಡಿಗೆ ಉಪದೇಶ ಮಾಡುತ್ತಲೇ ಇರುವುದರಿಂದ ಇಸ್ಲಾಂ ಧರ್ಮವು "ಏಕದೇವ ವಾದ"ವೆಂದು ಪರಿಗಣಿಸಲ್ಪಟ್ಟಿದೆ. ಅವನು ಅತ್ಯಂತ ಸೀಮಿತ ವ್ಯಕ್ತಿಯು ಅಥವ ಸ್ವರೂ

ನವು; ಸೃಷ್ಟಿಕರ್ತನು, ಎಲ್ಲರಿಗೂ ಸ್ವಾಮಿಯು : ಆದುದರಿಂದ ಎಲ್ಲರೂ ಅವನನ್ನೇ ಪೂಜಿಸಬೇಕು ಮತ್ತು ಅವನಿಂದಲೇ ಎಲ್ಲಾ ಸಹಾಯಗಳನ್ನು ಪಡೆಯಬೇಕು. ಮನುಷ್ಯರಿಗೆ ಇರುವ ಹಾಗೆ ಆಶೆಗಳೂ, ದೋಷಗಳೂ, ಅಪೂರ್ಣತೆಯೂ ಭಗವಂತನಲ್ಲಿ ಇಲ್ಲದೆ ಇರುವುದರಿಂದ, ಅವನಿಗೆ ಯಾವ ವಿಧವಾದ ಮನುಷ್ಯನ ರೂಪವಾಗಲೀ, ಆಕಾರವಾಗಲೀ ಇಲ್ಲವೇ ಇಲ್ಲ ಎಂದು ಇಸ್ಲಾಂ ಧರ್ಮವು ಸಾರುತ್ತದೆ. "ಬೇರೆಯೊಬ್ಬ ಭಗವಂತನಿಲ್ಲದ ಭಗವಂತನೇ ಅವನು! ಅವನು ಅನಂತ, ಸ್ವಯಂಭು, ಎಲ್ಲವೂ ಅವನಲ್ಲಿ ಜೀವಿಸಿರುವುವು; ಅವನು ನಿದ್ರೆಮಾಡುವುದಿಲ್ಲ; ತಂದರೆ ನಿದ್ರೆಯು ಅವನನ್ನು ಆವರಿಸುವುದಿಲ್ಲ. ಸ್ವರ್ಗದಲ್ಲಿ ಮತ್ತು ಭೂಮಿಯಲ್ಲಿರುವ ವಸ್ತುಗಳೆಲ್ಲವೂ ಅವನಿಗೆ ಸೇರಿವೆ; ಅವನ ಅನುಗ್ರಹವಿಲ್ಲದೆ ಯಾರೂ ಅವನನ್ನು ಸೇರಲಾರರು, ಭೂತ ಭವಿಷ್ಯದ್ವರ್ತಮಾನ ಕಾಲಗಳಲ್ಲಿ ನಡೆಯುವುದೆಲ್ಲವೂ ಅವನಿಗೆ ಗೊತ್ತು; ಮಾನವರು ಅವನು ಕೊಡುವ ಅಲ್ಪ ಬುದ್ಧಿಶಕ್ತಿಯನ್ನು ಮಾತ್ರ ಪಡೆದಿರುವುದರಿಂದ ಅದಕ್ಕೆ ಮೇಲೆ ಯಾವುದನ್ನೂ ತಿಳಿಯಲಾರರು, ಸ್ವರ್ಗವನ್ನೂ ಭೂಮಿಯನ್ನೂ ಸೃಷ್ಟಿಸಿರುವುದರಿಂದ ಮತ್ತು ಅವುಗಳನ್ನು ಪಾಲನೆ ಮಾಡುವುದರಿಂದ ಭಗವಂತನಿಗೆ ಆಯಾಸವಾಗುವುದಿಲ್ಲ; ಅವನೇ ಅತ್ಯಂತ ಪರಮ ಶ್ರೇಷ್ಠನು ಮತ್ತು ಮಹಾ ಅದ್ಭುತವಾದ ಸತ್ವವು" ಎಂದು ಇಸ್ಲಾಂ ಧರ್ಮವು ಲೋಕದ ಜನರಿಗೆ ಉಪದೇಶ ಮಾಡುತ್ತದೆ. ಭಗವಂತನು ಮನುಷ್ಯರಿಗೆ ಮಾತ್ರವೇ ಸ್ವಾಮಿಯಲ್ಲ; ಎಲ್ಲಾ ಲೋಕಗಳಿಗೂ, ಲೋಕಗಳಲ್ಲಿರುವ ವಸ್ತುಗಳಿಗೂ ಮತ್ತು ಲೋಕಗಳ ಮಧ್ಯದಲ್ಲಿರುವ ಪದಾರ್ಥಗಳಿಗೂ ಸ್ವಾಮಿಯು. ಕೊರಾನಿನಲ್ಲಿ ವರ್ಣಿಸಿರುವ ಭಗವಂತನು ಅತ್ಯಂತ ಪರಿಪೂರ್ಣನು ಮತ್ತು ಸರ್ವೋತ್ತಮನು; ಈ ಒಬ್ಬನೇ ಆದ ಭಗವಂತನಿಗೆ ಸುಮಾರು ತೊಂಬತ್ತೊಂಬತ್ತು ಗುಣಗಳನ್ನು ವಿವರಿಸಿದೆ. ಅವುಗಳಲ್ಲಿ ಮುಖ್ಯವಾದವುಗಳು ಮಾತ್ರ ಕೆಳಗೆ ಸೂಚಿಸಲ್ಪಟ್ಟಿವೆ. ಭಗವಂತನು ಸರ್ವಶಕ್ತನು, ಸರ್ವಜ್ಞನು, ಎಲ್ಲರ ವಿಚಾರದಲ್ಲೂ ನಿಷ್ಪಕ್ಷಪಾತವಾಗಿ ನ್ಯಾಯವನ್ನು ನಡೆಸುವವನು, ಜಗತ್ತನ್ನೆಲ್ಲಾ ಪೋಷಿಸುವವನು, ಸರ್ವರಿಗೂ ಸ್ನೇಹಿತನು, ಸರ್ವರಿಗೂ ಮಾರ್ಗದರ್ಶಕನಾಗಿ ಸಹಾಯ ಮಾಡುವವನು, ಅನಂತ ಸಾಮರ್ಥ್ಯದಿಂದ ಕೂಡಿದವನು, ಎಲ್ಲವನ್ನೂ ಆವರಿಸಿಕೊಂಡಿರುವವನು, ಪರಮ ದಯಾವಂತನು, ವಿಶ್ವದ ಸೃಷ್ಟಿಕರ್ತನು, ಸ್ವರ್ಗದಲ್ಲೂ ಭೂಮಿಯಲ್ಲೂ ಶಾಶ್ವತವಾದ ಮತ್ತು ವಿಭಾಗರಹಿತವಾದ ಪರಮ ಜ್ಯೋತಿಯು, ಕರುಣಾಮಯನು, ಪ್ರೀತಿ ಮತ್ತು ಕ್ಷಮಾಗುಣಗಳನ್ನು ಪಡೆದಿರುವ ಧರ್ಮಸ್ವರೂಪನು, ಅವನಲ್ಲಿ ಯಾವ ಕುಂದಕವೂ ಇಲ್ಲ. ಅಪುಟಿ ಇಲ್ಲ, ದೋಷಗಳಿಲ್ಲ ಮತ್ತು ಅಶಕ್ತಿಗಳಿಲ್ಲ. ಅವನು ಮಹಾ ಮಹಿಮೆಯಿಂದ ಕೂಡಿದವನು, ಉದಾತ್ತ ಭಾವನೆಗಳನ್ನು ಪಡೆದಿರುವವನು, ಶಾಶ್ವತನು, ಅನಂತನು, ಮೊದಲನೆಯವನು ಮತ್ತು ಕೊನೆಯಲ್ಲಿರುವವನು, ನಾವು ಜಗತ್ತಿನ ರಹಸ್ಯವನ್ನು ಅರಿಯಲು

ಅನೇಕ ಗುಣಗಳನ್ನು ಪಡೆದಿರುವ ಭಗವಂತನನ್ನು ನಂಬಿ ಸ್ತೋತ್ರಮಾಡಿ, ಪೂಜಿಸಿ, ಅವನ ನಿಯಮಗಳಂತೆ ನಡೆಯಬೇಕಲ್ಲದೆ ಬೇರೆ ಮಾರ್ಗವೇ ಇರುವುದಿಲ್ಲ.

ಶಿಷ್ಯ:—ಭಗವಂತನು ಹೇಗೆ ಸ್ವರ್ಗವನ್ನೂ, ಭೂಮಿಯನ್ನೂ, ದೇವತೆಗಳನ್ನೂ, ಮನುಷ್ಯರನ್ನೂ ಸೃಷ್ಟಿಸಿದ್ದಾನೆ?

**ಗುರು:**—ಪವಿತ್ರ ಕೊರಾನಿನಲ್ಲಿ ಅನೇಕ ಶ್ಲೋಕಗಳು ಈ ವಿಚಾರಗಳನ್ನು ತಿಳಿಯಪಡಿಸುತ್ತವೆ; ಅವುಗಳಲ್ಲಿ ಕೆಲವು ಶ್ಲೋಕಗಳ ತಾತ್ಪರ್ಯಗಳನ್ನು ಕೆಳಗೆ ಕೊಟ್ಟಿವೆ. (೧) "ಯಾವನು ಆರು ದಿವಸಗಳಲ್ಲಿ ಸ್ವರ್ಗವನ್ನೂ, ಭೂಮಿಯನ್ನೂ ಮತ್ತು ಅವುಗಳ ಮಧ್ಯದಲ್ಲಿರುವವುಗಳನ್ನೂ ಸೃಷ್ಟಿಸಿದನೋ ಮತ್ತು ತಾನು ಸಾಯದೇ ಯಾವಾಗಲೂ ಜೀವಿಸಿರುವನೋ ಅವನಲ್ಲಿ ಯಾವಾಗಲೂ ನಂಬಿಕೆಯನ್ನಿಡು ಮತ್ತು ಅವನ ಪ್ರಶಂಸೆಯನ್ನು ಪ್ರಸಿದ್ಧಿಗೊಳಿಸು." (೨) "ಭಗವಂತನು ಸಂಕಲ್ಪಿಸುತ್ತಾನೆ; ಹಾಗೆಯೇ ಜಗತ್ತು ಸೃಷ್ಟಿಯಾಗಿ ಬೆಳೆಯುತ್ತಲೇ ಇದೆ." (೩) "ಸೃಷ್ಟಿಕರ್ತರಲ್ಲೆಲ್ಲಾ ಶ್ರೇಷ್ಠನಾದ ಭಗವಂತನನ್ನು ಎಲ್ಲರೂ ಭಜಿಸಲಿ." (೪) "ವಿವೇಕಿಗಳಾದ ಮನುಷ್ಯರು ಸ್ವರ್ಗ ಮತ್ತು ಭೂಮಿಯ ಸೃಷ್ಟಿಗಳಲ್ಲೂ ಮತ್ತು ದಿನ ರಾತ್ರಿ ಪ್ರವಾಹಗಳಲ್ಲೂ ಭಗವಂತನ ಮಹಾ ಇರುವಿಕೆಯ ಚಿಹ್ನೆಯನ್ನು ಅರಿಯಬೇಕು." (೫) "ನಾವು ಈಗ ಬಹು ಸೂಕ್ಷ್ಮವಾದ ಮಣ್ಣಿನಿಂದ ಮನುಷ್ಯನನ್ನು ಸೃಷ್ಟಿಸಿದ್ದೇವೆ; ಮೊದಲು ಅವನನ್ನು ಜೀವವಾದ ಗರ್ಭಾಣುವಾಗಿ ಇಟ್ಟೆವು; ತನ್ಮೇಲೆ ಜೀವವಾದ ಈ ಗರ್ಭಾಣುವನ್ನು ರಕ್ತದಿಂದ ಮಡ್ಡುಗಟ್ಟಿದ ಪದಾರ್ಥವಾಗಿ ಮಾಡಿದೆವು; ಆಮೇಲೆ ಈ ರಕ್ತದ ಮುದ್ದೆಯನ್ನು ಒಂದು ಮಾಂಸದ ಚೂರಾಗಿ ಮಾಡಿದೆವು; ಆಮೇಲೆ ಮಾಂಸದ ಚೂರನ್ನು ಮೂಳೆಗಳನ್ನಾಗಿ ಮಾಡಿ ಅವುಗಳನ್ನು ಪುನಃ ಮಾಂಸಗಳಿಂದ ತುಂಬಿದೆವು; ಕೊನೆಯಲ್ಲಿ ಒಂದು ಹೊಸ ರೂಪದ ಮನುಷ್ಯನನ್ನು ಉಂಟುಮಾಡಿದೆವು." (೬) "ನಿಮಗೆ ಕಾಣುವ ಮತ್ತು ಕಾಣದಿರುವ ಭೂಮಿಯಲ್ಲಿರುವ ವಸ್ತುಗಳನ್ನೂ ಮತ್ತು ಸ್ವರ್ಗದಲ್ಲಿರುವ ವಸ್ತುಗಳನ್ನೂ ಭಗವಂತನು ಹೇಗೆ ನಿಮ್ಮ ಅಧೀನಕ್ಕೆ ಒಳಪಡಿಸಿ ನಿಮಗೆಲ್ಲಾ ತನ್ನ ಪ್ರಸಾದಗಳನ್ನು ಉದಾರವಾಗಿ ದಯಪಾಲಿಸಿರುವನೆಂಬುದನ್ನು ನೋಡಿ ತಿಳಿಯಿರಿ." (೭) "ಅವನು ದಿನ ರಾತ್ರಿಗಳನ್ನೂ, ಸೂರ್ಯ ಚಂದ್ರರನ್ನೂ ನಿಮ್ಮ ಅಧೀನಕ್ಕೆ ಒಳಪಡಿಸಿರುವನು; ಅವನ ಆಜ್ಞೆಗೆ ಅನುಸಾರವಾಗಿ ನಕ್ಷತ್ರಗಳು ನಿಮ್ಮ ಅಧೀನದಲ್ಲಿವೆ, ವಿವೇಕಿಗಳಿಗೆ ಇವುಗಳೆಲ್ಲವೂ ನಿಜವಾದ ಭಗವಂತನ ಚಿಹ್ನೆಗಳಾಗುತ್ತವೆ." (೮) "ನೀವು ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಒಯ್ಯಲ್ಪಡುತ್ತಿರುವಿರಿ." ಈ ಮೇಲಿನ ಶ್ಲೋಕಗಳಿಂದ ಜಗತ್ಸೃಷ್ಟಿಯ ವಿಚಾರದಲ್ಲಿ ತಿಳಿಯಬೇಕಾದುದೇನು?

ಸ್ವರ್ಗವನ್ನೂ, ಭೂಮಿಯನ್ನೂ ಮತ್ತು ಇವುಗಳ ಮಧ್ಯದಲ್ಲಿರುವ ವಸ್ತುಗಳನ್ನೂ ಭಗವಂತನು ಆರು ದಿವಸಗಳಲ್ಲಿ ಸೃಷ್ಟಿಸಿದನು; ಆದರೆ ಇಲ್ಲಿ "ದಿವಸ"

ವೆಂಬ ಪದಕ್ಕೆ ಮನುಷ್ಯರ ದಿವಸವೆಂದು ಅರ್ಥ ಮಾಡಕೂಡದು. "ದೈವಿಕ ದಿವಸ"ವೆಂದು ಅರ್ಥಮಾಡಬೇಕು; "ಒಂದು ದೈವಿಕ ದಿನವು" ಮನುಷ್ಯರ ಸಹಸ್ರಾಂತರ ದಿವಸಗಳಾಗುತ್ತವೆ. ಈ ಜಗತ್ತು ಪರಿಣಾಮಗಳನ್ನು ಹೊಂದುತ್ತಾ ಬೆಳೆಯುತ್ತಲೇ ಇರುವುದೆಂದು ಹೇಳಿರುವುದರಿಂದ ಇಸ್ಲಾಂ ಧರ್ಮವು ವಿಕಾಸವಾದ ಅಥವ ಪರಿಣಾಮವಾದವನ್ನು ಬಲಪಡಿಸುತ್ತದೆ. ಜಗತ್ತಿನಲ್ಲಿ ರಹಸ್ಯವಾಗಿ ಪರಿಣಾಮಗಳುಂಟಾಗುತ್ತಿರುವುದೂ, ತಪ್ಪಿಲ್ಲದೆ ದಿನ ರಾತ್ರಿಗಳು ಕಳೆಯುತ್ತಾ ಕಾಲಚಕ್ರವು ತಿರುಗುತ್ತಿರುವುದೂ ಸಕಲ ಜಗತ್ತಿಗೂ ಯಜಮಾನನಾದ ಭಗವಂತನ ಮಹಾ ಇರುವಿಕೆಗೆ ಚಿಹ್ನೆಯೆಂದು ಕೊರಾನ್ ತಿಳಿಸುತ್ತದೆ. ಮನುಷ್ಯರೂ ದೇವತೆಗಳೂ ಭಗವಂತನಿಂದಲೇ ಸೃಷ್ಟಿಸಲ್ಪಟ್ಟಿರುವರು; ಆದರೆ ಇವರು ಶರೀರವಲ್ಲದ ಜ್ಞಾನಸ್ವರೂಪವಾದ ಆತ್ಮವನ್ನು ಪಡೆದಿರುವರು. ಇವರಲ್ಲಿ ದೇವದೂತರು ಭಗವಂತನಿಂದ ಚುನಾಯಿಸಲ್ಪಟ್ಟ ಸ್ವರ್ಗದ ಪ್ರತಿನಿಧಿಗಳು ಮತ್ತು ಮನುಷ್ಯರು ಅವನಿಂದಲೇ ಚುನಾಯಿಸಲ್ಪಟ್ಟ ಭೂಮಿಯ ಪ್ರತಿನಿಧಿಗಳು. ಶಿಶುವಿನ ಶರೀರವು ತಾಯಿಯ ಗರ್ಭದಿಂದ ಹೊರಗೆ ಬರುತ್ತದೆ; ಅದರಲ್ಲಿ ಮನಸ್ಸು ಬೆಳೆಯುತ್ತದೆ. ಜ್ಞಾನಸ್ವರೂಪವಾದ ಆತ್ಮ ತತ್ವವು ಎಡಬಿಡದೆ, ಪ್ರತ್ಯೇಕಿಸಲ್ಪಡದ ಹಾಗೆ ಶರೀರದಲ್ಲೂ ಮನಸ್ಸಿನಲ್ಲೂ ಸೇರಿಕೊಂಡಿದೆ. ಜಗತ್ಸೃಷ್ಟಿ ಕಾರ್ಯದಲ್ಲಿ ಭಗವಂತನು ದೇವದೂತರನ್ನು ಉಪಯೋಗಿಸಿಕೊಳ್ಳುವನು; ಆದರೆ ದೇವದೂತರಿಗೂ ಮನುಷ್ಯರಿಗೂ ನೇರವಾದ ಸಂಬಂಧವಿಲ್ಲ. ಮನುಷ್ಯನಿಗೂ ಪ್ರಕೃತಿಗೂ ನಿಕಟಸಂಬಂಧವಿದ್ದಾಗ್ಯೂ, ಅವನ ಅತ್ಯಂತ ಒಳಗಿನ ನಿಜಸ್ವರೂಪವು ರಚನಾತ್ಮಕ ಕಾರ್ಯಶಕ್ತಿಯಿಂದ ಕೂಡಿರುವುದರಿಂದ ಅವನು ಇಷ್ಟಪಟ್ಟರೆ ಮೇಲು ಮೇಲಕ್ಕೆ ಹೋಗುವ ಚೈತನ್ಯವನ್ನು ಪಡೆದಿರುವನು ಮತ್ತು ಹೆಚ್ಚು ಶ್ರೇಯಸ್ಸಿನ ಅಂತಸ್ತುಗಳನ್ನು ಹೊಂದುವ ಶಕ್ತಿಯನ್ನು ಪಡೆದಿರುವನು. ಮನುಷ್ಯನ ಉಪಯೋಗಕ್ಕಾಗಿಯೇ ಈ ಜಗತ್ತು ಸೃಷ್ಟಿಸಲ್ಪಟ್ಟಿರುವುದು; ಅವನಿಗೆ ಭಗವಂತನು ದೈಹಿಕ ಮಾನಸಿಕ ಮತ್ತು ನೈತಿಕ ಶಕ್ತಿಗಳನ್ನು ದಯಪಾಲಿಸಿರುವನು; ತನ್ಮೂಲಕ ಅವನು ಪ್ರಕೃತಿಯ ಶಕ್ತಿಗಳನ್ನು ಉಪಯೋಗಿಸಿ ತನ್ನ ಜೀವನದ ಮೇಲು ಮೇಲಿನ ಅಂತಸ್ತುಗಳನ್ನು ಪಡೆಯಬಲ್ಲನು. ಮನುಷ್ಯನು ಈ ಮಹಾ ಜಗತ್ತನ್ನು ಮತ್ತು ಅನಂತ ಕಾಲವನ್ನೂ ತನ್ನ ಸ್ವಾಧೀನಕ್ಕೆ ಒಳಪಡಿಸಿಕೊಂಡು, ಅವನ್ನು ಅನುಭವಿಸುವ ಶಕ್ತಿಯನ್ನು ವೃದ್ಧಿಪಡಿಸಿಕೊಂಡು, ಪ್ರಕೃತಿ ಶಕ್ತಿಗಳ ಕಟ್ಟಳೆಗಳನ್ನು ಅರಿತು, ಅವೆಲ್ಲವನ್ನು ಮಾನವಕೋಟಿಯ ಅನುಕೂಲ್ಯಗಳಿಗೆ ಉಪಯೋಗಿಸುವ ಉಪಾಯಗಳನ್ನು ಕಂಡುಹಿಡಿಯುವ ಸಾಮರ್ಥ್ಯವನ್ನು ಪಡೆದಿರುವನು; ಅವನು ತನ್ನ ಶ್ರೇಯಸ್ಸನ್ನು ತಾನೇ ಸಂಪಾದಿಸಿಕೊಳ್ಳಬಲ್ಲನು; ಜಗತ್ತನ್ನು ಕೂಡ ತನ್ನ ಮತ್ತು ವಿಶ್ವದ ಶ್ರೇಯಕ್ಕಾಗಿ ಉಪಯೋಗಿಸಿಕೊಳ್ಳುವ ಶಕ್ತಿ ಅವನಿಗೆ ಉಂಟು.

## ಶ್ರೀ ನವಭಾರತ ಆಶ್ರಮ

### ಗೌರೀಬಿದನೂರು.

# ಕನ್ನಡಿಗರ ಜ್ಞಾನದೀಪಿಕಾ

## (ಮಾಲೆ—ಹದಿನೆಂಟು)

## ಇಸ್ಲಾಂ ಧರ್ಮದ ತತ್ವ ಹಿತ ಪುರುಷಾರ್ಥಗಳು

### ಭಾಗ—೨

**ಶಿಷ್ಯ:**—ಮನುಷ್ಯನು ಜೀವಿಸಿರುವಾಗ ಅವನ ಆತ್ಮದ ಸ್ವರೂಪವೇನು?

**ಗುರು:**—ಕೆಳಗೆ ಕೆಲವು ಕೊರಾನ್ ಶ್ಲೋಕಗಳ ತಾತ್ಪರ್ಯಗಳನ್ನು ಸೂಚಿಸಿದೆ. (೧) "ಅವನು ನಿನ್ನನ್ನು ಆತ್ಮದ ವಿಚಾರ ಕೇಳುತ್ತಾನೆ; ಭಗವಂತನ ಸಂಕಲ್ಪದ ಪ್ರಕಾರ ಅಥವ ಆಜ್ಞೆಯ ಪ್ರಕಾರ ಆತ್ಮವು ಉದ್ಭವಿಸುತ್ತದೆ. ಆದರೆ ನಿನಗೆ ತಿಳುವಳಿಕೆಯನ್ನು ಸ್ವಲ್ಪಮಟ್ಟಿಗೆ ಮಾತ್ರ ಕೊಟ್ಟಿದೆ." (೨) "ನೀನು ಉತ್ತಮ ಕಾರ್ಯಗಳನ್ನು ಮಾಡಿದರೆ ನಿನ್ನ ಆತ್ಮಕ್ಕೆ ಶ್ರೇಯಸ್ಸನ್ನುಂಟುಮಾಡುತ್ತೀಯೆ; ಆದರೆ ನೀವು ಕೆಟ್ಟ ಕೆಲಸಗಳನ್ನು ಮಾಡಿದರೆ ನಿನ್ನ ಆತ್ಮಕ್ಕೆ ಕೇಡುಂಟಾಗುತ್ತದೆ." (೩) "ಮನುಷ್ಯನು ಎಷ್ಟೆಷ್ಟು ಪ್ರಯತ್ನಿಸುತ್ತಾನೆಯೋ ಅದಕ್ಕಿಂತ ಹೆಚ್ಚಾಗಿ ಅವನು ಪಡೆಯುವುದಿಲ್ಲ." (೪) "ನಾನು ನಿಜವಾಗಿ ನಿಮ್ಮಲ್ಲಿ ಒಬ್ಬ ಹೆಂಗಸಾಗಲೀ ಅಥವ ಗಂಡಸಾಗಲೀ ಮಾಡುವ ಕಾರ್ಯಗಳನ್ನು ವ್ಯರ್ಥಮಾಡುವುದಿಲ್ಲ." ಇವುಗಳ ಅಭಿಪ್ರಾಯಗಳನ್ನು ತಿಳಿಯೋಣ. ಮನುಷ್ಯನಲ್ಲಿರುವ ಅನೇಕ ಅಂಶಗಳಲ್ಲಿ ಅಥವ ಶಕ್ತಿಗಳಲ್ಲಿ ಜ್ಞಾನಾಂಶ ಅಥವ ಜ್ಞಾನಶಕ್ತಿಯು ಕೇಂದ್ರಸ್ಥಾನವನ್ನು ಪಡೆದಿರುವುದು; ಎಚ್ಚರವಾಗಿರುವ ವೇಳೆಗಳಲ್ಲೆಲ್ಲಾ ಅವನ ಮನಸ್ಸಿನೊಳಗೆ ಕಾರ್ಯಮಾಡುತ್ತಿರುವ ಈ ಜ್ಞಾನಾಂಶ ಅಥವ ಜ್ಞಾನಶಕ್ತಿಯನ್ನೇ ಆತ್ಮವೆಂದು ಕರೆಯುತ್ತೇನೆ. ಮನುಷ್ಯನ ಶರೀರ, ಮನಸ್ಸು ಮತ್ತು ಆತ್ಮ ಇವು ಮೂರೂ ಹುಟ್ಟಿದಂದಿನಿಂದ ಸಾಯುವವರೆಗೂ ಎಡೆಬಿಡದೆ ಅನ್ಯೋನ್ಯವಾಗಿ, ಒಂದಕ್ಕೊಂದು ಪ್ರತ್ಯೇಕಿಸಲ್ಪಡದ ಹಾಗೆ ಸೇರಿಕೊಂಡಿವೆ. ಆತ್ಮನು ಚಪಲ ಅಥವ ಸ್ವಾತಂತ್ರ್ಯಭಾವದಿಂದ ಕೂಡಿಲ್ಲ; ಅದು ಶರೀರವನ್ನು ನಿಯಂತ್ರಿಸುವ ಅಥವ ಅಸ್ವಾಧೀನಮಾಡುವ ಸಾಮರ್ಥ್ಯವನ್ನೂ, ಬಲವನ್ನೂ ಮತ್ತು ಶಕ್ತಿಯನ್ನೂ ಪಡೆದಿದೆ. ಆದರೆ ಹೊರಗಿರುವ ಪ್ರಕೃತಿಯ ವಸ್ತುಗಳೂ ಮತ್ತು ಶರೀರವೂ ಆತ್ಮನ ಮೇಲೆ ತಮ್ಮ ಪ್ರಭಾವವನ್ನು ಬೀರಿ, ಅದಕ್ಕೆ ಶಿಕ್ಷಣ ಕೊಟ್ಟು, ಅದನ್ನು ಶಿಸ್ತಿನಲ್ಲಿಡುತ್ತವೆ. ಕಾರ್ಯ ಕಾರಣ ಸಂಬಂಧದಿಂದ ಕೂಡಿರುವ ಹೊರಗಿನ

ಸನ್ನಿವೇಶಗಳು ಆತ್ಮನ ಅವಶ್ಯಕವಾದ ಉಪಕರಣ, ಸಾಧನ ಅಥವ ಉಪಾಧಿಗಳೇ ಹೊರತು ಅವು ಅದರ ಸತ್ಯ ಸ್ವರೂಪ ಸ್ವಭಾವದ ಪ್ರಕಾಶವಲ್ಲ. ವ್ಯಕ್ತಿಯು ಜೀವನದಲ್ಲಿ ಉಂಟಾಗುತ್ತಿರುವ ಹೊಸ ಹೊಸ ಅನುಭವಗಳಿಂದ, ಅವನ ಜ್ಞಾನಾಂಶ ಅಂದರೆ ಜ್ಞಾನಶಕ್ತಿಯು ವಿಕಾಸವನ್ನು ಪಡೆಯುತ್ತಲೇ ಇರುವುದು. ಪ್ರಕೃತಿಗೂ ಆತ್ಮನಿಗೂ ಇರುವ ಸಂಬಂಧವನ್ನು ಈ ರೀತಿಯಲ್ಲಿ ಅರ್ಥ ವಿವರಣೆ ಮಾಡುವುದರಿಂದ ಉಂಟಾಗುವ ತೀರ್ಮಾನವೇನು? ಆತ್ಮನು ತನ್ನ ಸುತ್ತಲೂ ಇರುವ ಸಂದರ್ಭಗಳನ್ನು ಅಥವ ಪರಿಸ್ಥಿತಿಗಳನ್ನು ತಿಳಿದುಕೊಳ್ಳುವುದು ಮಾತ್ರವಲ್ಲದೆ, ಅವುಗಳ ಮೇಲೆ ಪ್ರಾಧಾನ್ಯವನ್ನು ನಡೆಸುವ ಶಕ್ತಿಯನ್ನೂ ಪಡೆದಿರುವನು. ಇಷ್ಟೇ ಅಲ್ಲ; ಈ ಹೊಸ ಹೊಸ ಅನುಭವಗಳ ಮೂಲಕ ವ್ಯಕ್ತಿಯು ಆತ್ಮಸ್ವಾತಂತ್ರ್ಯವನ್ನು ಸಂಪಾದಿಸುತ್ತಾನೆ ಮತ್ತು ವೃದ್ಧಿಪಡಿಸುತ್ತಾನೆ. ಆತ್ಮದ ಕಾರ್ಯಶಕ್ತಿಯು ಪ್ರಕೃತಿಯ ಸನ್ನಿವೇಶಗಳ ಮೇಲೆ ತನ್ನ ಪ್ರಭಾವವನ್ನು ಬೀರಿ ಅವುಗಳನ್ನು ಮಾರ್ಪಡಿಸಬಲ್ಲುದಾಗಿರುವುದರಿಂದ ಆತ್ಮನು ಸ್ವಾತಂತ್ರ್ಯದಿಂದ ಕೂಡಿ ಸ್ವಾತಂತ್ರ್ಯ ಸ್ವರೂಪನಾಗಿ ಕರ್ತೃತ್ವವನ್ನು ಪಡೆದಿರುವನೆಂದು ತೀರ್ಮಾನವಾಗುತ್ತದೆ. ಅಂದರೇನು, ಆತ್ಮನ ಕ್ರಿಯಾಶಕ್ತಿಯು ವ್ಯಕ್ತಿಗೆ ಜ್ಞಾನಪೂರ್ವಕ ಅಥವ ವರ್ತನೆಯಲ್ಲಿ ಸ್ವಾತಂತ್ರ್ಯವನ್ನುಂಟುಮಾಡುತ್ತದೆ. ಮನುಷ್ಯನು ತನ್ನ ಕಾರ್ಯಗಳಿಂದಲೇ ಬಂಧವನ್ನು ಅಥವ ಶ್ರೇಯಸ್ಸನ್ನು ಪಡೆಯುತ್ತಾನೆ ಮತ್ತು ತನ್ನ ಕಾರ್ಯಗಳಿಂದ ಆನಂದವನ್ನು ಅಥವ ಹೀನಸ್ಥಿತಿಯನ್ನು ಪಡೆಯುತ್ತಾನೆ; ಈ ಸ್ವಾತಂತ್ರ್ಯವು ಅವನ ಸಹಜಧರ್ಮ ಅಥವ ಸ್ವಭಾವವಾಗಿದೆ. ಭಗವಂತನು ಮನುಷ್ಯನಿಗೆ ವಿಧವಿಧವಾಗಿ ಕಾರ್ಯಗಳನ್ನು ಕೈಗೊಳ್ಳುವ ಸ್ವಾತಂತ್ರ್ಯವನ್ನು ಕೊಟ್ಟಿರುವುದರಿಂದ ಅವನು ತಾನೇ ಮನುಷ್ಯನಿಗಾಗಿ ಅಭಿಮಾನದಿಂದ ಆ ಕಾರ್ಯಗಳನ್ನು ನಿರ್ಧರಿಸುವ ತೀರ್ಮಾನ ಮಾಡುವುದಿಲ್ಲ. ಆದುದರಿಂದ ಮನುಷ್ಯನ ಕಾರ್ಯಗಳೇ ಅವನ ವ್ಯಕ್ತಿತ್ವವನ್ನು ಬೆಳೆಸುತ್ತವೆ ಮತ್ತು ಕುಗ್ಗಿಸುತ್ತವೆ.

ಶಿಷ್ಯ:—ಮನುಷ್ಯನು ಮರಣವನ್ನು ಹೊಂದಿದ ಮೇಲೆ ಅವನ ಆತ್ಮದ ಸ್ಥಿತಿಯೇನು?

ಗುರು:—ಮರಣದಿಂದ ಮನುಷ್ಯನ ಜೀವನವು ಕೊನೆಗಾಣುವುದಿಲ್ಲ; ಏಕೆಂದರೆ, ಮರಣವಾದ ಮೇಲೆ ಪ್ರಪಂಚದ ಅಂತ್ಯದಲ್ಲಿ ದೇವರು ಅಂತಿಮ ನ್ಯಾಯ ವಿಚಾರಣೆಯ ದಿವಸ (Day of Judgement) ಪ್ರತಿಯೊಬ್ಬ ಮನುಷ್ಯನು ಜೀವನದಲ್ಲಿ ಮಾಡಿದ ಕಾರ್ಯಗಳನ್ನು ಪರಿಶೀಲಿಸಿ, ಪರೀಕ್ಷಿಸಿ ಅವನನ್ನು ಸ್ವರ್ಗಕ್ಕೆ ಅಥವ ನರಕಕ್ಕೆ ಕಳುಹಿಸುವನು ಎಂದು ಕೊರಾನಿನಲ್ಲಿ ಉಪದೇಶವಿದೆ. ಇಲ್ಲಿ ಸ್ವರ್ಗ ನರಕಗಳೆಂಬುವು ಪ್ರಪಂಚದಲ್ಲಿರುವ ಪ್ರದೇಶಗಳಲ್ಲ; ಅವು ಮರಣವಾದ ಮೇಲೆ ವ್ಯಕ್ತಿಗೆ ಉಂಟಾಗುವ ಅನುಭವಗಳು ಎಂದು ಕೆಲವರ ಅಭಿಪ್ರಾಯ. ಭಗವಂತನಿಂದ ಕೊರಾನಿನಲ್ಲಿ ಉಪದೇಶ ಮಾಡಲ್ಪಟ್ಟಿರುವ ಧಾರ್ಮಿಕ ತತ್ವಗಳಿಗನುಗುಣವಾಗಿ ಜೀವನವನ್ನು ಸ್ವತಂತ್ರವಾಗಿ ನಡೆಸುವ, ತನ್ಮೂಲಕ ಈ ಜೀವನವೆಲ್ಲಾ ಶಾಂತಿವಾದ

ಮೇಲೂ ಚಿಂತನಶೀಲನಾಗುವ ಬುದ್ಧಿಶಿಷ್ಟವಾದ ಹಕ್ಕನ್ನು ಮಾನವನು ಪಡೆದಿರುವನು; ಆಗ ಸಾವು ಅವನಿಗೆ ಇನ್ನೂ ಮೇಲಾದ ಮತ್ತು ಉತ್ತಮವಾದ ಜೀವನವನ್ನುಂಟು ಮಾಡಲು ದಾರಿಯಾಗುತ್ತದೆ. ಆದರೆ ಮನುಷ್ಯನು ತನ್ನ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿ ಭಗವಂತನ ಆಜ್ಞೆಗಳಿಗೆ ವಿರೋಧವಾಗಿ ಅಥವಾ ವಿಪರೀತವಾಗಿ ಅಧರ್ಮದಿಂದ ನಡೆದರೆ ಅವನು ಈ ಜೀವನದಲ್ಲೂ ಕಾಲವಾದ ಮೇಲೂ ಹೀನಸ್ಥಿತಿ ಹೊಂದಿ ಅಧೋಗತಿಗೆ ಅಂದರೆ ನೋವಿಗೆ ಗುರಿಯಾಗುವನು. ಜೀವನವು ಆತ್ಮದ ಸಾಮರ್ಥ್ಯಗಳಿಂದ ವ್ಯಕ್ತಿಗೆ ಅಭಿವೃದ್ಧಿಯನ್ನುಂಟುಮಾಡುವ ಕ್ಷೇತ್ರವಾಗಿದೆ ಮತ್ತು ಮರಣವು ಜೀವನದ ಒಟ್ಟು ಕಾರ್ಯಗಳ ಫಲವನ್ನು ತೀರ್ಮಾನಿಸುವ ನೋಡಲೆಂದೇ ನಿರ್ದಿಷ್ಟವಾಗಿದೆ. ಮನುಷ್ಯ ಜೀವಮಾನದಲ್ಲಿ ನಡೆಸಲ್ಪಟ್ಟ ಕಾರ್ಯಗಳು ವ್ಯಕ್ತಿಯಲ್ಲಿ ಆತನ ಒಟ್ಟು ಜೀವನದ ಪ್ರಕ್ರಿಯೆಯ ಪರಿಪೂರ್ಣತೆಯನ್ನುಂಟುಮಾಡಿ, ಅವನು ಪುನಃ ಅಂದರೆ ಸತ್ತಮೇಲೆಯೂ ಏಳುವ ದಿನಕ್ಕೆ ಕಾದಿರುತ್ತಾನೆ; ಆದರೆ ಜೀವನ ಪ್ರಕ್ರಿಯೆಯನ್ನು ಈ ನಾಶವಾಗುವ ಶರೀರದಿಂದ ಕೂಡಿಸುವುದಿಲ್ಲ. ಮನುಷ್ಯನ ಕಾರ್ಯಗಳು ಕೊನೆಯಲ್ಲಿ ಅವನನ್ನು ಭೌತ ಅಥವಾ ದೇಹದಿಂದ ಪೃಥಕ್ಕಾಗುವುದಕ್ಕೂ ಮತ್ತು ಮರಣಾನಂತರ ಸ್ವರ್ಗ ನರಕಗಳೆಂಬ ಅವಸ್ಥೆಗಳನ್ನು ಹೊಂದುವುದಕ್ಕೂ ಕಾರಣವಾಗುತ್ತವೆ. ಭಗವಂತನ ಕಟ್ಟಳೆಗಳಿಗೆ ಅನುಗುಣವಾದ ಸತ್ಕಾರ್ಯಗಳಿಂದಲೇ ಮಾನವನು ಮರಣವೆಂಬ ಶರೀರ ವಿಯೋಗದ ಆಕಸ್ಮಿಕವನ್ನು ಜಯಿಸಿ ಸತ್ಯದ ಸ್ವರೂಪವನ್ನು ಹೆಚ್ಚು ಹೆಚ್ಚಾಗಿ ತಿಳಿಯುತ್ತಾ ಕೊನೆಯಲ್ಲಿ ಅಮೃತತ್ವವನ್ನು ಪಡೆಯುತ್ತಾನೆ. ಮರಣವಾದ ತರುವಾಯ ಅಂತಿಮ ನ್ಯಾಯ ವಿಚಾರಣೆಯ ದಿವಸದವರೆಗೆ ಆತ್ಮವು ಸೂಕ್ಷ್ಮವಾದ ಮತ್ತು ಅನುಭವಾತೀತವಾದ ನೋಟದ ಶಕ್ತಿಯಿಂದ ಕೂಡಿರುವ ಒಂದು ವಿಧವಾದ ಅವಸ್ಥೆಯನ್ನು ಅನುಭವಿಸುತ್ತದೆ. ಆದರೆ ತನ್ನಿಂದಲೇ ಕಟ್ಟಲ್ಪಟ್ಟ ಅದೃಷ್ಟಕ್ಕೆ ಅನುಗುಣವಾಗಿ ಮಹಾ ವಿಚಾರಣೆ ದಿವಸದ ತೀರ್ಮಾನದ ಪ್ರಕಾರ ಉತ್ತಮ ಅಥವಾ ಅಧಮ ಅಂದರೆ ಸ್ವರ್ಗದ ಅಥವಾ ನರಕದ ಫಲವು ದೊರೆಯುತ್ತದೆ. ಇಲ್ಲಿ ಒಂದು ಮುಖ್ಯವಾದ ವಿಚಾರವನ್ನು ಮರೆಯಕೂಡದು. ಇಸ್ಲಾಂ ಧರ್ಮದ ಪ್ರಕಾರ ಯಾವ ಮನುಷ್ಯನಿಗೂ ಎಂದೆಂದಿಗೂ ನರಕದ ಅನುಭವವಿಲ್ಲ; ನರಕದ ಅನುಭವವನ್ನು ಕೇವಲ ಶಿಕ್ಷೆಗಾಗಿ ಕೊಡಲ್ಪಟ್ಟವುಗಳೆಂದು ತಿಳಿಯಕೂಡದು. ಶರೀರಾನುಭವಗಳು ಆತ್ಮನಲ್ಲಿರುವ ದೋಷಗಳನ್ನು ಹೋಗಲಾಡಿಸಿ ಕೊನೆಯಲ್ಲಿ ಸ್ವರ್ಗಾನುಭವಗಳನ್ನು ಉಂಟುಮಾಡುತ್ತವೆ. ಮರಣದಿಂದುಂಟಾಗುವ ಜೀವನವು ನಿಜವಾಗಿ ಒಂದು ಹೊಸ ಜೀವನವಲ್ಲ; ಅದು ಮನುಷ್ಯನು ಈ ಜೀವನದಲ್ಲಿ ನಡೆಸಿದ ಧರ್ಮಾಧರ್ಮಕಾರ್ಯಗಳಿಂದ ಉತ್ಪನ್ನವಾಗುವ ಆತ್ಮದ ಅನುಭೂತ ಶಕ್ತಿಯ ಫಲವಾದ ಬೆಳೆಯ ಜೀವನದ ಪರಿಣಾಮವು.

ಶಿಷ್ಯ:— ಇಸ್ಲಾಂ ಧರ್ಮವು ಅಂಗೀಕರಿಸಿರುವ ನೈತಿಕ ಮೂಲ ತತ್ತ್ವಗಳಾವುವು?

**ಗುರು** :—ಮನುಷ್ಯನ ನಿಜವಾದ ಸ್ವಭಾವವು ಅವನ ಹುಟ್ಟುಗುಣವು ಪಾಪ ರಹಿತವಾದದ್ದು; ಅಥವ ಒಳ್ಳೆಯ ಸ್ವಭಾವದಿಂದ ಕೂಡಿರುವುದು. ಅವನಲ್ಲಿ ಭಗವಂತನ ಗುಣಗಳನ್ನು ಅನುಸರಿಸುವ, ತನ್ಮೂಲಕ ಕ್ರಮೇಣ ಹೆಚ್ಚು ಹೆಚ್ಚು ಪ್ರಗತಿಯನ್ನು ಪಡೆಯುವ ಅನುಸ್ಯೂತ ಶಕ್ತಿಯು ಅಡಕವಾಗಿದೆ. ಇದರಿಂದ ಮಾನವನು ದೈವಿಕ ದಶೆಯನ್ನು ಪಡೆಯುವ ಶಕ್ತಿಯನ್ನು ಪಡೆದಿರುವವನು. ಹಾಗಾದರೆ ಈ ದೈವಿಕ ದಶೆಯನ್ನು ಅನುಭವಿಸಲು ಮುಖ್ಯವಾದ ಸಾಧನಗಳಾವುವು? ಮನುಷ್ಯನ ಕಾರ್ಯಗಳೇ ನಿಜವಾಗಿ ಅವನಿಗೆ ಈ ಜೀವನದಲ್ಲೂ ಮತ್ತು ಕಾಲವಾದ ಮೇಲೆಯೂ ಜಯಾಪಜಯಗಳನ್ನು ಕೊಡುವುವೆಂದೂ ಮತ್ತು ಈ ಜೀವನದಲ್ಲಿ ಆಚರಿಸುವ ಧರ್ಮಾಚರಣೆಗಳ ಪ್ರತಿಬಿಂಬವೇ ಮರಣವಾದ ಮೇಲೆ ಉದ್ಭವಿಸುವ ಜೀವನದ ಸ್ಥಿತಿಯೆಂದೂ ಹಿಂದೆಯೇ ತಿಳಿಯಪಡಿಸಿದ್ದೇನೆ. ಧರ್ಮಕಾರ್ಯಗಳಿಂದ ಇಹದಲ್ಲಿ ಜಯವನ್ನೂ ಪರದಲ್ಲಿ ಸ್ವರ್ಗಸುಖಾನುಭವವನ್ನೂ ಪಡೆಯುವನು; ಪಾಪ ಕಾರ್ಯಗಳಿಂದ ಇಹದಲ್ಲಿ ಸೋಲನ್ನೂ ಪರದಲ್ಲಿ ನರಕಯಾತನೆಯನ್ನೂ ಅನುಭವಿಸುವನು; ಆದರೇನು, ಅವನವನು ತನ್ನ ಶ್ರೇಯಸ್ಸನ್ನು ತಾನೇ ಸಾಧಿಸಿಕೊಳ್ಳಬೇಕೇ ವಿನಃ ಒಬ್ಬನ ಪಾಪವನ್ನು ಇನ್ನೊಬ್ಬನು ಹೋಗಲಾಡಿಸಲು ಆಗುವುದಿಲ್ಲ. ಆದುದರಿಂದ ಇಹಜೀವನದಲ್ಲಿ ಜಯವನ್ನು ಪಡೆದು ಕಾಲವಾದ ಮೇಲೆ ಸ್ವರ್ಗಾನುಭವವನ್ನು ಅಂದರೆ ಅಮೃತತ್ವವನ್ನು ಪಡೆಯುವ ಕಾರ್ಯಗಳನ್ನು ಮಾನವನು ಮಾಡುತ್ತಲೇ ಇರಬೇಕೆಂಬುದೇ ಇಸ್ಲಾಂ ಧರ್ಮದ ಮೊದಲನೆಯ ನೈತಿಕ ಮೂಲತತ್ವ. ಧರ್ಮಾಚರಣೆ ಇಲ್ಲದ ಬರೀ ಮೂಢ ನಂಬಿಕೆಗಳಿಗೆ ಸ್ವಲ್ಪವೂ ಬೆಲೆಯಿಲ್ಲ; ಬರೀ ನಂಬಿಕೆ ಸಾಲದು; ಅವುಗಳನ್ನು ಕಾರ್ಯರೂಪದಲ್ಲಿ ತರಲೇಬೇಕು. ಭಗವಂತನ ಕಲ್ಯಾಣಗುಣಗಳಿಗೆ ಸಂಪೂರ್ಣ ಸಾಮರಸ್ಯದಿಂದ ಕೂಡಿರುವ ಜೀವನವನ್ನು ನಡೆಸುವುದೇ ಇಸ್ಲಾಂ ಧರ್ಮದಲ್ಲಿ ಬೋಧಿಸಿರುವ ಪವಿತ್ರವಾದ ಮತ್ತು ಋಜುವಾದ ಮಾರ್ಗವು. ಆದುದರಿಂದಲೇ ಮುಹಮ್ಮದ್ ಪೈಗಂಬರರು "ಭಗವಂತನ ಗುಣಗಳನ್ನು ನೀನೂ ಅಂತರ್ಗತ ಮಾಡಿಕೊಳ್ಳುವವನಾಗು" ಎಂದು ಉಪದೇಶ ಮಾಡಿರುವರು. ಭಗವಂತನ ಗುಣಗಳಿಗೆ ವಿರೋಧವಾಗಿ ಆಚರಣೆ ಮಾಡುವುದೇ ಪಾಪವು. ಜ್ಞಾನಾರ್ಜನೆಯು ಮನುಷ್ಯನ ಕರ್ತವ್ಯವು ಮತ್ತು ಜ್ಞಾನವನ್ನು ವೃದ್ಧಿಪಡಿಸಿಕೊಳ್ಳುವುದರಿಂದಲೇ ಅವನು ಇತರ ಮೃಗಗಳಿಗಿಂತ ಉತ್ತಮನಾಗಿರುವನು. ಪ್ರಾಪಂಚಿಕ ಜೀವನವನ್ನು ನಡೆಸಲು ಸಹಾಯ ಮಾಡುವ ವಸ್ತುಗಳಿಗೆಲ್ಲಾ ಗೌರವವನ್ನು ಕೊಡಬೇಕು ಮತ್ತು ಸೋಮಾರಿತನವನ್ನು ಪಾಪವೆಂದು ತಿಳಿದು ಅದನ್ನು ನಿರ್ಮೂಲ ಮಾಡಬೇಕು. ಭಗವಂತನು ಮನುಷ್ಯರಿಗೆ ಸ್ವಾಭಾವಿಕ ಶಕ್ತಿಗಳನ್ನೂ ಮತ್ತು ಐಶ್ವರ್ಯವನ್ನೂ ಸಮಾಜದಲ್ಲಿರುವ ಇತರ ಮನುಷ್ಯರ ಉಪಯೋಗಕ್ಕಾಗಿ ನ್ಯಾಸ (Trust) ವಾಗಿ ಕೊಟ್ಟಿರುವುದರಿಂದ, ಮನುಷ್ಯನು ಇತರರಿಗಾಗಿಯೇ ಜೀವಿಸಬೇಕು ಮತ್ತು ಮನುಷ್ಯರಲ್ಲಿ ತಾರತಮ್ಯವನ್ನು ತೋರಿಸದೆ ತನಗಿಂತ ಕೆಳಸ್ಥಿತಿಯಲ್ಲಿರುವವರಿಗೆ ದಾನಮಾಡಬೇಕು; ಏಕೆಂದರೆ ಮನುಷ್ಯನು

ಎಷ್ಟೆಷ್ಟು ಧರ್ಮ ಮಾಡುತ್ತಾನೆಯೋ ಅವನು ಅಷ್ಟಷ್ಟು ಭಗವಂತನ ಸಮೀಪಕ್ಕೆ ಹೋಗುತ್ತಾನೆ. ದಾನವು ಅವಶ್ಯಕವಾದ ಕರ್ತವ್ಯವು; ಐಶ್ವರ್ಯವಂತರು ಬಡವರಿಗೆ ಹಣವನ್ನು ಹಂಚಬೇಕು. ಅವಶ್ಯವಾಗಿಯೇ ಅವರ ಆಸ್ತಿಯ ಮೇಲೆ ತೆರಿಗೆ ಹಾಕಬೇಕು. ಪ್ರತಿಯೊಬ್ಬನೂ ತನ್ನ ಸ್ವಂತ ತೀರ್ಮಾನಕ್ಕೆ ಬರಬೇಕು; ಆದುದರಿಂದ ಇತರರ ವಿವೇಕದಿಂದ ಕೂಡಿದ ತೀರ್ಮಾನಗಳಿಗೆ ಗೌರವವನ್ನು ಕೊಡಬೇಕು.

**ಶಿಷ್ಯ:**—ಇಸ್ಲಾಂ ಧರ್ಮದ **ಸಪ್ತ ಧರ್ಮಶ್ರದ್ಧೆಯ ಕಾನೂನುಗಳು ಅಥವ ತತ್ವಗಳು** (Articles of Faith) ಯಾವುವು?

**ಗುರು:**—ಮೇಲೆ ವಿವರಿಸಿರುವ ಇಸ್ಲಾಂ ಧರ್ಮದ ಮೂಲ ನೈತಿಕ ತತ್ವಗಳನ್ನು ಆಚರಿಸಿ ದೈವಿಕ ಶಕ್ತಿಯನ್ನು ಪಡೆಯುವುದಕ್ಕಾಗಿ ಪ್ರತಿಯೊಬ್ಬ ಮುಸಲ್ಮಾನನಿಗೂ ಕೆಳಗೆ ವಿವರಿಸಿರುವ ಏಳು ಧರ್ಮಶ್ರದ್ಧೆಯ ಕಾನೂನುಗಳು ವಿಧಿಸಲ್ಪಟ್ಟಿವೆ.

**(೧) ಭಗವಂತನಲ್ಲಿ ಶ್ರದ್ಧೆ ನಂಬಿಕೆ:**—ಭಗವಂತನು ಒಬ್ಬನೇ ಆಗಿರುವನು; ಆತನು ಅತ್ಯಂತ ಪರಿಪೂರ್ಣನಾದ ವ್ಯಕ್ತಿಯು ಮತ್ತು ಅವನು ಅನೇಕ ಕಲ್ಯಾಣ ಗುಣಗಳನ್ನು ಪಡೆದಿರುವನು- ಎಂದು ಕೋರಾನಿನಲ್ಲಿ ಅನೇಕ ಕಡೆಗಳಲ್ಲಿ ಉಪದೇಶ ವಿದೆ. ಈ ಅದ್ವಿತೀಯ ಭಗವಂತನೇ ಮಾನವನ ಪರಮ ಧ್ಯೇಯವು; ಅವನನ್ನು ಹೊಂದುವುದೇ ನಮ್ಮ ಕೊನೆಯ ಗುರಿಯು; ಅವನ ಆಜ್ಞೆಗಳನ್ನೇ ಮನುಷ್ಯರು ನಿಷ್ಠೆಯಿಂದಾಗಿ ಪರಿಪಾಲಿಸಬೇಕು ಮತ್ತು ಎಲ್ಲರೂ ಅವನ ಕಡೆಗೆ ತಿರುಗಬೇಕು. "ನನ್ನ ಆದರ್ಶ ಧ್ಯೇಯವು ಮತ್ತು ಅತ್ಯಂತ ವಿಶ್ವಾಸಕ್ಕೆ ಪಾತ್ರನಾದ ವ್ಯಕ್ತಿಯು ಭಗವಂತನೊಬ್ಬನೇ; ಬೇರೆ ಯಾವುದೂ ಇಲ್ಲ" ಎಂದು ಮಹಮ್ಮದರು ಘೋಷಿಸಿದರು. ಆದುದರಿಂದ ಪ್ರತಿಯೊಬ್ಬ ಮುಸಲ್ಮಾನನು ಒಬ್ಬನೇ ಆದ ಭಗವಂತನ ಹಂಸಾ ಇರುವಿಕೆಯಲ್ಲಿ ದೃಢವಾದ ನಂಬಿಕೆಯನ್ನಿಟ್ಟು ಅವನ ಪ್ರತಿನಿಧಿಯ ಹಾಗೆ ಭೂಮಿಯಲ್ಲಿ ತನ್ನ ಕರ್ತವ್ಯ ಕರ್ಮಗಳನ್ನು ನಡೆಸಬೇಕು.

**(೨) ದೇವದೂತರಲ್ಲಿ ನಂಬಿಕೆ:**—ಪೂರ್ವ ಕಾಲದಲ್ಲಿ ಅದೃಶ್ಯ ಶಕ್ತಿಗಳಾದ ದೇವತೆಗಳನ್ನು ಅನೇಕರು ಐಹಿಕ ಫಲಗಳನ್ನು ಪಡೆಯುವುದಕ್ಕಾಗಿ ಪೂಜಿಸುತ್ತಿದ್ದರು. ಇಸ್ಲಾಂ ಧರ್ಮವು ಈ ಪದ್ಧತಿಯನ್ನು ಸ್ವಲ್ಪವೂ ಅನುಮೋದಿಸುವುದಿಲ್ಲ; ಏಕೆಂದರೆ, ಅದ್ವಿತೀಯನಾದ ಭಗವಂತನೊಬ್ಬನನ್ನಲ್ಲದೆ ಮತ್ತೆ ಯಾರನ್ನೂ ಸ್ತೋತ್ರ ಮಾಡ ಕೂಡದು ಮತ್ತು ಪೂಜೆ ಮಾಡಕೂಡದು ಎಂದು ಕೋರಾನಿನಲ್ಲಿ ಉಪದೇಶಮಾಡಿದೆ. ಆದಾಗ್ಯೂ, ದೇವದೂತರು ಭಗವಂತನ ಕಾರ್ಯಭಾರರಾಗಿ ಮನುಷ್ಯರ ಕ್ಷೇಮಕ್ಕಾಗಿ ಅವನ ಅಪ್ಪಣೆಗಳನ್ನು ಪರಿಪಾಲಿಸುವರು ಎಂದೂ ಕೋರಾನ್ ತಿಳಿಯಪಡಿಸುತ್ತದೆ. ಇದರಿಂದ ಭಗವಂತನ ನ್ಯಾಯವು, ಅಧಿಕಾರ ಮತ್ತು ದಯೆ ಎಂಬ ಗುಣಗಳು ಪ್ರಕಾಶ ವಾಗುತ್ತವೆ.

**(೩-೪) ಭಗವಂತನಿಂದ ಪ್ರೇರೇಪಿಸಲ್ಪಟ್ಟ ಪ್ರವಕ್ತಾರರಲ್ಲಿಯೂ ಮತ್ತು ಭಗವಂತನ ಸಂದೇಶಗಳಾದ ಪವಿತ್ರ ಗ್ರಂಥಗಳಲ್ಲಿಯೂ ಶ್ರದ್ಧೆ:**—ಎಲ್ಲಾ

ಪ್ರವಾದಿಗಳೂ ಮತ್ತು ಎಲ್ಲಾ ಪವಿತ್ರ ಗ್ರಂಥಗಳೂ ಭಗವಂತನ ಸಂದೇಶವನ್ನು ತಂದಿರುವುದರಿಂದ ಮತ ವಿಷಯದಲ್ಲಿ ಬಲವಂತವಿರಕೂಡದು ಎಂದು ಇಸ್ಲಾಂ ಧರ್ಮವು ಉಪದೇಶ ಮಾಡುತ್ತದೆ. ಇಷ್ಟೇ ಅಲ್ಲ; ಬೇರೆ ಬೇರೆ ಕಾಲದಲ್ಲಿದ್ದ ಪ್ರವಾದಿಗಳಲ್ಲಿ ನಾವು ಗೌರವವನ್ನು ತೋರಿಸಬೇಕು ಮತ್ತು ಅವರ ಮೂಲಕ ಬಂದಂಥ ಭಗವಂತನ ಸಂದೇಶವಾದ ಎಲ್ಲಾ ಪವಿತ್ರ ಗ್ರಂಥಗಳಲ್ಲಿ ನಾವು ಶ್ರದ್ಧೆಯನ್ನಿಡಬೇಕು. ಎಲ್ಲಾ ಮತಗಳ ಧ್ಯೇಯವು ಒಂದೇ ಎಂದೂ ಮತ್ತು ನಿಜವಾದ ಮತಗಳು ವಿಶ್ವವ್ಯಾಪಕ ಅಥವ ಸಾರ್ವತ್ರಿಕ ಭಾವನೆಗಳಿಂದ ಕೂಡಿವೆಯೆಂದೂ ನಾವು ತಿಳಿದು ಅವನ್ನೆಲ್ಲಾ ಗೌರವಿಸಬೇಕು. ಇದರಿಂದ ಮತ ಧರ್ಮಗಳ ಮತ್ತು ಪೂಜೆಗಳ ಸ್ವಾತಂತ್ರ್ಯವನ್ನು ಒಪ್ಪಿದ ಹಾಗಾಯಿತು.

(೫) ಮೊದಲೇ ಗೊತ್ತಾಗಿರುವ ಪದಾರ್ಥಗಳ ಅಳತೆ (Pre-Measurement)—ಸೃಷ್ಟಿಯ ಏಕ ಪವಿತ್ರ ಧ್ಯೇಯವನ್ನು ಸಾಧಿಸುವುದಕ್ಕೂ ಮತ್ತು ಪ್ರತಿಯೊಬ್ಬನೂ ಇತರರ ಕ್ಷೇಮವನ್ನು ವೃದ್ಧಿಪಡಿಸುವುದಕ್ಕೂ, ಭಗವಂತನು ಪ್ರತಿಯೊಂದು ಪದಾರ್ಥಕ್ಕೂ ಒಂದು ಸಹಜ ಧರ್ಮ ಅಥವ ಸ್ವಭಾವವನ್ನು ದಯಪಾಲಿಸಿರುವನು. ಆದುದರಿಂದ ಪದಾರ್ಥಗಳನ್ನು ನ್ಯಾಯವಾದ ಸಂದರ್ಭಗಳಲ್ಲಿ ನ್ಯಾಯವಾದ ರೀತಿಯಲ್ಲಿ ಉಪಯೋಗಿಸಿದರೆ ಅದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ. ಹಾಗಲ್ಲದೆ ವಸ್ತುಗಳನ್ನು ಅವುಗಳ ಸಹಜ ಧರ್ಮ ಅಥವ ಸ್ವಭಾವಗಳಿಗೆ ವಿರೋಧವಾಗಿ ಉಪಯೋಗಿಸಿದರೆ ಅದರಿಂದ ಕೆಡುಕುಗಳು ಮತ್ತು ನಷ್ಟಗಳು ಉಂಟಾಗುತ್ತವೆ. ಆದುದರಿಂದ ವ್ಯಕ್ತಿ ಸ್ವಾತಂತ್ರ್ಯವನ್ನು ಪಡೆದಿರುವ ಮಾನವನು ಜವಾಬ್ದಾರಿಯಿಂದ ನಡೆಯುತ್ತ ತನ್ನ ಕಾರ್ಯಗಳಿಗೆ ಉತ್ತರವಾದಿಗಳಾಗಬೇಕು. ಇಸ್ಲಾಂ ಧರ್ಮದ ಈ "ಸಹಜ ಧರ್ಮದ ಅಳತೆ" ಎಂಬ ತತ್ವವನ್ನು ಕೆಲವರು "ಅದೃಷ್ಟವಾದ"ವೆಂದೂ, ಇನ್ನು ಕೆಲವರು "ಹಣೆಯ ಬರಹ" ವಾದವೆಂದೂ ತಪ್ಪಾಗಿ ತಿಳಿದಿರುವರು. ಮುಂದೆ ನಡೆಯುವುದನ್ನೆಲ್ಲಾ ದೇವರು ಮೊದಲೇ ಸಂಕಲ್ಪಿಸಿದ್ದಾನೆಂಬುವನ್ನು ಅಥವ ಎಲ್ಲಾ ಘಟನೆಗಳು ಒಂದು ಗೊತ್ತಾದ ರೀತಿಯಲ್ಲಿ ನಡೆಯಬೇಕೆಂಬ ವಿಧಿ ಮೊದಲೇ ಗೊತ್ತುಮಾಡಿರುವುದರಿಂದ ಮಾನವನ ಸ್ವಪ್ರಯತ್ನವು ಅನಾವಶ್ಯಕವೆನ್ನುವುದನ್ನು ಇಸ್ಲಾಂ ಧರ್ಮವು ಒಪ್ಪುವುದಿಲ್ಲ.

(೬–೭) ಮರಣಾನಂತರ ಮೋಕ್ಷ ಲಭಿಸುವ ಪರಲೋಕದ ವಿಚಾರ ಮತ್ತು ಪುನರುಜ್ಜೀವನದ ವಿಚಾರ—ಸ್ವರ್ಗ ನರಕಾನುಭವಗಳ ವಿಚಾರವನ್ನು, ಪುನರುಜ್ಜೀವನದ ವಿಚಾರವನ್ನು, ಮತ್ತು ಅಂತಿಮ ನ್ಯಾಯ ವಿಚಾರಣೆಯ ಕ್ರಮವನ್ನು ಹಿಂದೆಯೇ ವಿವರಿಸಿದ್ದೇವೆ. ಜೀವನದಲ್ಲಿ ಧರ್ಮ ಕಾರ್ಯಗಳನ್ನು ಮಾಡಿ ಜನ್ಮವನ್ನು ಸಫಲವಾಗಿಸಿದವನು ಮರಣಾನಂತರ ಶಾಂತಿ ಆನಂದ ಅನುಭವಗಳನ್ನು ಪಡೆಯುವುದೇ ಸ್ವರ್ಗವು; ಹಾಗೆಯೇ ಜೀವನದಲ್ಲಿ ಪಾಪ ಕಾರ್ಯಗಳನ್ನು ಮಾಡಿ ಜನ್ಮವನ್ನು ಪಡೆದು ಮರಣಾನಂತರ ನೋವು ದುಃಖಾನುಭವಗಳನ್ನು ಪಡೆಯುವ ಮತ್ತು

ದೋಷಗಳನ್ನು ತೊಳೆದುಕೊಂಡು ಸ್ವರ್ಗಾನುಭವವನ್ನು ಪಡೆಯುವ ಅವಸ್ಥೆಯೇ ನರಕವು.

ಶಿಷ್ಯ:— ಇಸ್ಲಾಂ ಧರ್ಮದ ಪಂಚಸ್ತಂಭಗಳು ಎನ್ನುವ ಆಧಾರಭೂತ ಅಭ್ಯಾಸಗಳು (Five Pillars of Islam) ಯಾವುವು?

ಗುರು:— ಕೆಳಗೆ ಕೊಡಲ್ಪಡುವ ಐದು ಒಳ್ಳೆಯ ಅಭ್ಯಾಸಗಳನ್ನು ದಿನಚರಿಯಲ್ಲಿ ಅಭ್ಯಾಸಮಾಡಿದರೆ ಮೇಲೆ ವಿವರಿಸಲ್ಪಟ್ಟ ಸತ್ಯ ಧರ್ಮಶ್ರದ್ಧೆಯು ಕಾರ್ಯರೂಪಗಳಲ್ಲಿ ಅಭಿವ್ಯಕ್ತವಾಗುತ್ತದೆ; ತನ್ಮೂಲಕ ಮಾನವ ಸ್ವಭಾವ ಶಕ್ತಿಗಳಲ್ಲಿ ಬೆಳವಣಿಗೆಯಾಗಿ ಕೊನೆಯಲ್ಲಿ ದೈವಿಕ ವಿಕಸನವುಂಟಾಗುತ್ತದೆ. ಆದುದರಿಂದಲೇ ಈ ಅಭ್ಯಾಸಗಳನ್ನು ಇಸ್ಲಾಂ ಧರ್ಮದ ಐದು ಸ್ತಂಭಗಳೆಂದು ಕರೆಯುವರು.

(೧) ಭಗವಂತನು ಒಬ್ಬನೇ ಎಂಬುದು ಮತ್ತು ಮಹಮ್ಮದ್ ರಸೂಲರು ಆತನ ದೈವದೂತರೆಂಬುದು (ಕಲೀಮಾ) ತಿಳಿದುಕೊಳ್ಳುವುದು:— "ದೇವರೊಬ್ಬನ ಹೊರತು ಬೇರೊಬ್ಬ ದೇವರಿಲ್ಲ ಮತ್ತು ಮಹಮ್ಮದರು ಆತನ ದೈವದೂತರು (ಪ್ರವಾದಿಗಳು)" ಎಂಬ ಕಾಲೇಮಾವನ್ನು ಪ್ರತಿಯೊಬ್ಬ ಮುಸಲ್ಮಾನನು ಹೇಳುತ್ತಲೇ ಇರಬೇಕು; ಇದರಿಂದ ಅವನ ಹೃದಯದಲ್ಲಿ ಭಗವಂತನ ಅಸ್ತಿತ್ವದಲ್ಲಿ ನಂಬಿಕೆಯು ಬೆಳೆಯುತ್ತದೆ. "ಮಹಮ್ಮದರು ಭಗವಂತನ ದೈವದೂತರು" ಎಂದು ಹೇಳುವುದರಿಂದ ಜನರು ಅವರನ್ನು ಭಗವಂತನೆಂದಾಗಲೀ ಅಥವ ಭಗವಂತನ ಅವತಾರವೆಂದಾಗಲೀ ತಿಳಿಯಕೂಡದು. ಅವರು ನಮ್ಮ ಹಾಗೆ ಸಾಮಾನ್ಯರಾದ ಮನುಷ್ಯರು; ಆದರೆ ಭಗವಂತನ ಕೃಪೆಯಿಂದ "ದೈವದೂತ"ರಾಗಿ ಭಗವಂತನ ಸಂದೇಶಗಳನ್ನು ಲೋಕಕ್ಕೆ ಉಪದೇಶ ಮಾಡಿದರು.

(೨) ದೇವರ ಪ್ರಾರ್ಥನೆ:— ಎಲ್ಲಾ ಮತ ಧರ್ಮಗಳೂ ಭಗವಂತನ ಪ್ರಾರ್ಥನೆಯಿಂದ ಉಂಟಾಗುವ ಉತ್ತಮ ಫಲಗಳನ್ನು ತಿಳಿಸಿವೆ. ಪ್ರಾರ್ಥನೆಯಲ್ಲಿ ವೈಯಕ್ತಿಕ ಪ್ರಾರ್ಥನೆ ಮತ್ತು ಸಾಮೂಹಿಕ ಪ್ರಾರ್ಥನೆ ಎಂಬ ಎರಡು ವಿಧಗಳು ಇರುವುವು. ಜಗತ್ತಿನಲ್ಲಿರುವ ಎಲ್ಲಾ ಪದಾರ್ಥಗಳಿಗೂ ಶಕ್ತಿಗಳಿಗೂ ಭಗವಂತನೇ ಆದಿಕಾರಣನೆಂಬುದನ್ನು ಸ್ಪಷ್ಟವಾಗಿ ನಂಬಿ, ಈ ನಂಬಿಕೆಯನ್ನೂ ಮತ್ತು ಜೀವನ ಕಲ್ಯಾಣಗುಣಗಳನ್ನೂ ಬುದ್ಧಿಯಲ್ಲಿಯೂ, ಮನಸ್ಸಿನಲ್ಲಿಯೂ, ವಾಕ್ಕಿನಲ್ಲಿಯೂ, ಕಾರ್ಯಗಳಲ್ಲಿಯೂ ತೋರಿಸುತ್ತಿರುವುದೇ ವೈಯಕ್ತಿಕ ಪ್ರಾರ್ಥನೆಯು. ಸಾಮೂಹಿಕ ಪ್ರಾರ್ಥನೆಯಲ್ಲಿ ಎಲ್ಲರೂ ಭಗವಂತನ ಏಕತ್ವವನ್ನು ಅಥವ ಸರ್ವಾಧಿಕಾರವನ್ನು ಸ್ಮರಿಸುವುದರಿಂದ ಮಾನವರೆಲ್ಲರೂ ಸಮತ್ವವನ್ನು ಹೊಂದಿರುವರು ಮತ್ತು ಸಹೋದರರಾಗಿರುವರು ಎಂಬ ಉದಾತ್ತ ಭಾವನೆಯು ಕಾರ್ಯರೂಪದಲ್ಲಿ ಎಲ್ಲರಲ್ಲಿಯೂ ಉಂಟಾಗುತ್ತದೆ. ಪ್ರತಿಯೊಬ್ಬ ಮುಸಲ್ಮಾನನು ಸ್ನಾನಮಾಡಿ, ಅಂಗಾಂಗಗಳನ್ನು ಶುಚಿಯಾಗಿಟ್ಟುಕೊಂಡು, ಶ್ರೋತ್ರ ಮುಂತಾದ ಅಂಗಗಳನ್ನು ಶುಚಿಮಾಡಿ, ಶಿಸ್ತಿನಿಂದ ಸಾಲಾಗಿ ದೇವಾಲಯವನ್ನು ಪ್ರವೇಶಿಸಿ, ಭಯಭಕ್ತಿಯಿಂದ ಶುದ್ಧಿಯನ್ನು ಪಡೆದು, ತಲ್ಲೀನನಾಗಿ ನಿಲ್ಲುವ ಸ್ಥಾನದಲ್ಲಿ ದೃಷ್ಟಿ ಅಥವ ನಮ್ರತೆಯಿಂದ ಕುಳಿತವನಾಗಿ ಸಾಮೂಹಿಕ

ಪ್ರಾರ್ಥನೆಯಲ್ಲಿ ಅನುಸರಿಸಬೇಕು. ಕೊರಾನಿನ ಶ್ಲೋಕಗಳನ್ನು ಕಂಠಪಾಠಮಾಡಿ ಭಕ್ತಿಯಿಂದ ಅವನ್ನು ಪಾರಾಯಣ ಮಾಡಬಲ್ಲ ಯಾವನಾದರೂ ಸಾಮೂಹಿಕ ಪ್ರಾರ್ಥನೆಯಲ್ಲಿ ಮುಖ್ಯಸ್ಥನಾಗಬಹುದು. ಪ್ರತಿಯೊಬ್ಬ ಮುಸಲ್ಮಾನನು ಮೇಲೆ ವಿವರಿಸಿರುವ ರೀತಿಯಲ್ಲಿ ಸ್ವಯಿಚ್ಛಕನಾಗಿ, ಅನುಕೂಲವಿದ್ದರೆ ಏಕಾಂತ ಪ್ರದೇಶದಲ್ಲಿ ಪ್ರತಿದಿನವೂ ಬೆಳಗಿನ ಜಾವ, ಮಧ್ಯಾಹ್ನ, ಸಾಯಂಕಾಲ, ಸೂರ್ಯಾಸ್ತಮಯ ಕಾಲ, ಮತ್ತು ರಾತ್ರಿ ಮಲಗುವುದಕ್ಕೆ ಮುಂಚೆ ಐದು ಸಲ ದೇವರ ಪ್ರಾರ್ಥನೆಯನ್ನು ಮಾಡಬೇಕು.

(೩) ಉಪವಾಸ ಮಾಡುವುದು:—ಎಲ್ಲಾ ಮತಗಳಲ್ಲಿಯೂ ಪ್ರಾರ್ಥನೆಗೆ ಬೆಲೆಯನ್ನು ಕೊಟ್ಟಿರುವ ಹಾಗೆ ಉಪವಾಸ ವ್ರತಕ್ಕೂ ಬೆಲೆಯನ್ನು ಕೊಟ್ಟಿದೆ; ಏಕೆಂದರೆ ಉಪವಾಸ ಮಾಡುವುದರಿಂದ ಶರೀರಕ್ಕೆ ಆರೋಗ್ಯವುಂಟಾಗುತ್ತದೆ, ಸ್ಮೃತಿಶಕ್ತಿ ಬಲವುಂಟಾಗುತ್ತದೆ, ಶರೀರವು ಶುಚಿಯಾಗುತ್ತದೆ, ಆತ್ಮಕ್ಕೆ ನೈರ್ಮಲ್ಯವುಂಟಾಗುತ್ತದೆ ಮತ್ತು ಇತರರಲ್ಲಿ ಭ್ರಾತೃಭಾವ ಬೆಳೆಯುತ್ತದೆ. ರಂಜಾನ್ ತಿಂಗಳಲ್ಲಿ ವೃದ್ಧರಾಗಿರದ ಮುಸಲ್ಮಾನರು ಪ್ರತಿದಿವಸವೂ ಬೆಳಗಿನ ವೇಳೆಯಲ್ಲಿ ಉಪವಾಸ ಮಾಡಬೇಕು. ಕೊರಾನಿನಲ್ಲಿ ಸಾರಾಯಿ ಕುಡಿಯುವುದನ್ನು ನಿಷೇಧಿಸಿದೆ.

(೪) ಜಕಾತ್ ಅಥವ ಬಡವರಿಗಾಗಿ ಕೊಡಬೇಕಾದ ದಾನ ಮಾಡುವುದು:— ಪ್ರತಿಯೊಬ್ಬ ಮುಸ್ಲಿಮನು ಪ್ರತಿವರುಷವೂ ಉಳಿದಿರುವ ತನ್ನ ಐಶ್ವರ್ಯ ಅಥವ ಆಸ್ತಿಯಲ್ಲಿ ಶೇಕಡ ಎರಡೂವರೆ ಭಾಗವನ್ನು ಬಡವರಿಗೆ ದಾನಮಾಡಬೇಕು ಎಂದು ವಿಧಿಸಿದೆ. ಈ ಉತ್ತಮ ಪದ್ಧತಿಯಿಂದ ಆತ್ಮಕ್ಕೆ ಶುಚಿತ್ವವುಂಟಾಗುತ್ತದೆ, ಬಡವರಿಗೆ ಸಹಾಯವಾಗುತ್ತದೆ ಮತ್ತು ವ್ಯಕ್ತಿಯು ಸಮುದಾಯಕ್ಕೆ ಕರ್ತವ್ಯವನ್ನು ನಡೆಸುತ್ತಾನೆ.

(೫) ಹಾಜ್ ಅಥವ ಮೆಕ್ಕಾಪುರಿಗೆ ಯಾತ್ರೆ:—ಶರೀರದಲ್ಲಿ ಆರೋಗ್ಯವನ್ನು ಪಡೆದಿರುವ ಮತ್ತು ಹಣದ ಅನುಕೂಲ್ಯವನ್ನು ಹೊಂದಿರುವ ಮುಸಲ್ಮಾನರು ತಾವು ಜೀವಿಸಿರುವ ಕಾಲದಲ್ಲಿ ಒಂದು ಸಲವಾದರೂ ಮೆಕ್ಕಾಪುರಿಗೆ ಯಾತ್ರೆ ಮಾಡಬೇಕು. ಹಾಜ್ ಅಂದರೆ ಮೆಕ್ಕಾನಗರದ ಯಾತ್ರೆಯು ಮುಸಲ್ಮಾನರ ಏಕತ್ವವನ್ನೂ ಭ್ರಾತೃತ್ವವನ್ನೂ ವೃದ್ಧಿಪಡಿಸುತ್ತದೆ. ಮೆಕ್ಕಾದ ಅಲ್ ಕಾಬಾ ಎಂಬ ದೇವಾಲಯದಲ್ಲಿ ಪ್ರತಿ ವರುಷವೂ ಮುಸ್ಲಿಮರ ಮಹಾ ಸಭೆಯು ನಡೆಯುತ್ತದೆ; ಆ ಸಭೆಗೆ ಪ್ರಪಂಚದ ನಾಲ್ಕು ಮೂಲೆಗಳಿಂದಲೂ ಬಣ್ಣ, ವರ್ಣ ಮತ್ತು ಅಂತಸ್ತುಗಳ ಭೇದಗಳಿಲ್ಲದಂತೆ ಎಲ್ಲಾ ಮುಸಲ್ಮಾನರು ಸಮತ್ವ ಮತ್ತು ಭ್ರಾತೃತ್ವ ಭಾವನೆಗಳಿಂದ ಕೂಡಿದವರಾಗಿ ಬರುತ್ತಾರೆ. ಆಗ ಅವರೆಲ್ಲರೂ ಒಂದೇ ಕುಟುಂಬದವರ ಹಾಗೆ ಇದ್ದು, ಎರಡು ಬಿಳೀ ಬಟ್ಟೆಯ ಒಂದೇ ಉಡುಪನ್ನು ಧರಿಸಿ, ಒಂದೇ ಸಾಲಿನಲ್ಲಿ ಬರುತ್ತಾ ಏಕ ಮನಸ್ಕರಾಗಿ ಕೆಳಗಿನ ಸ್ತೋತ್ರವನ್ನು ಹೇಳುತ್ತಿರುವರು. "ಭಗವಂತನೇ! ನಿನ್ನ ಸೇವೆಯನ್ನು ಮಾಡಲು ನಾನು ಸಿದ್ಧನಾಗಿರುವೆನು; ನಾನು ಸೇವೆಮಾಡಲು ಸಿದ್ಧನಿರುವೆನು. ನಿನಗೆ ಸಮನಾದ ಜೊತೆಗಾರರಿಲ್ಲ; ನಾನು ನಿನ್ನ ಸೇವೆಮಾಡಲು ಸಿದ್ಧನಿರುವೆನು. ಸ್ತೋತ್ರಗಳೆಲ್ಲಾ ನಿನಗೆ; ಪ್ರಸಾದಗಳೆಲ್ಲಾ ನಿನ್ನವು; ಪ್ರಪಂಚದ ರಾಜ್ಯ ನಿನ್ನದು; ನಿನ್ನ ಜೊತೆಗಾರರಿಲ್ಲ; ನಾನು ನಿನ್ನ ಸೇವೆಮಾಡಲು ಸಿದ್ಧನಾಗಿರುವೆನು."

# ಶ್ರೀ ನವ ಭಾರತ ಆಶ್ರಮ

ಗೌರಿಬಿದನೂರು

# ಕನ್ನಡಿಗರ ಜ್ಞಾನದೀಪಿಕಾ

## (ಮಾಲೆ—ಹತ್ತೊಂಭತ್ತು)

## ಕ್ರೈಸ್ತಧರ್ಮದ ತತ್ತ್ವಹಿತಪುರುಷಾರ್ಥಗಳು

### ಭಾಗ-ಒಂದು

ದಕ್ಷಿಣ ಹಿಂದೂಸ್ಥಾನದ "ಬೈಬಲ್ ಕರೆಸ್ಪಾಂಡೆನ್ಸ್ ಸ್ಕೂಲ್-ಪ್ರೊಫೆಸರ್" ರವರು ಕ್ರೈಸ್ತಮತದ ಪ್ರಚಾರವಾಗಿ ಇಂಗ್ಲೀಷಿನಲ್ಲಿ ಪ್ರಕಟಿಸಿರುವ ಇಪ್ಪತ್ತೈದು ಪಾಠಗಳನ್ನೂ ಮತ್ತು ಹದಿನಾರು ಅಧಿಕ ಲೇಖನಗಳನ್ನೂ ನಾವು ಓದಿ ತಿಳಿದು ಕೊಂಡ ಕೆಲವು ವಿಷಯಗಳನ್ನು ಗುರುಶಿಷ್ಯ ಸಂವಾದ ರೂಪದಲ್ಲಿ ವಿವರಿಸಿದ್ದೇವೆ.

**ಶಿಷ್ಯ** :—ಹೋಲಿ ಬೈಬಲ್ ಎಂಬ ಕ್ರೈಸ್ತರ ಪವಿತ್ರ ಗ್ರಂಥದ ಒಳವಿಭಾಗ ಗಳಾವುವು?

**ಗುರು** :—ಏಸು ಕ್ರಿಸ್ತರು ಹುಟ್ಟುವುದಕ್ಕೆ ಮುಂಚೆ ಸಾವಿರಾರು ವರ್ಷ ಗಳಿಂದ ಅಬ್ರಹಾಮ್, ಮೋಸೆಸ್, ಜೋಷುವ, ಸಾಲ್, ದೇವಿಡ್, ಸಾಲಮನ್, ಇಸೈಯ, ಜೆರೆಮಿಯ ಮೊದಲಾದ ಅನೇಕ ದೈವಭಕ್ತರು ತಮ್ಮ ದಿವ್ಯ ದರ್ಶನ ಗಳಲ್ಲಿ ಕಂಡು ಲೋಕಕ್ಕೆ ಪ್ರಚಾರಮಾಡಿದ ಭಗವಂತನ ಸಂದೇಶಗಳನ್ನು ಒಟ್ಟಾಗಿ ಸೇರಿಸಿ "ಹಳೆಯ ಒಡಂಬಡಿಕೆ" ಎಂದು ಕರೆದಿದೆ. ಇದು ಹೀಬ್ರೂಭಾಷೆಯಲ್ಲಿ ಹುಟ್ಟಿ ಕ್ರಮವಾಗಿ ಗ್ರೀಕಿಗೂ ಲ್ಯಾಟಿನ್ನಿಗೂ ದೇಶಭಾಷೆಗಳಿಗೂ ಪರಿವರ್ತಿತವಾ ಗಿದೆ. ಇದರಲ್ಲಿ ಮೂವತ್ತೊಂಭತ್ತು ಪುಸ್ತಕಗಳಿವೆ. ಏಸುಕ್ರಿಸ್ತರು ಭೂಮಿಯಲ್ಲಿ ಅವತಾರಮಾಡಿ ಜನರಿಗೆ ಬೋಧಿಸಿದ ಉಪದೇಶಗಳನ್ನೂ ಮತ್ತು ಅವರ ಜೀವನ ದಲ್ಲಿ ನಡೆಸಿದ ಪವಿತ್ರಕಾರ್ಯಗಳನ್ನೂ ಅವರ ದ್ವಾದಶಪ್ರವರ್ತಕರಿದ್ದರು ಸಂಗ್ರಹಿಸಿ ಬರೆದಿಟ್ಟಿರುವರು. ಈ ಭಾಗವನ್ನೇ "ಹೊಸ ಒಡಂಬಡಿಕೆ" ಎಂದು ಕರೆದಿದೆ, ಇದರಲ್ಲಿ ಇಪ್ಪತ್ತೇಳು ಪುಸ್ತಕಗಳಿವೆ. ಈ ಹೊಸ ಒಡಂಬಡಿಕೆಯು ಗ್ರೀಕ್ ಭಾಷೆ ಯಲ್ಲಿ ಹುಟ್ಟಿ, ಲ್ಯಾಟಿನಿಗೂ ದೇಶಭಾಷೆಗಳಿಗೂ ಪರಿವರ್ತಿತವಾಗಿದೆ. ಹೊಸ ಒಡಂಬಡಿಕೆಯ ಪುಸ್ತಕಗಳಾವುವು? (1) ಮತ್ತಾಯನ ಸುವಾರ್ತೆ, ಮಾರ್ಕನ ಸುವಾರ್ತೆ, ಲೂಕನ ಸುವಾರ್ತೆ, ಯೋಹಾನನ ಸುವಾರ್ತೆ ಎಂಬ ನಾಲ್ಕು ಪುಸ್ತಕಗಳು ಏಸುಕ್ರಿಸ್ತರ ಜೀವನಚರಿತ್ರೆಯನ್ನು ತಿಳಿಯಪಡಿಸುತ್ತವೆ. (2) ಏಸುವಿನ ಶಿಷ್ಯ ರಾದ ಅಪೋಸ್ತಲರ ಉತ್ತಮ ಕಾರ್ಯಗಳನ್ನು ಬರೆದಿರುವ ಪುಸ್ತಕವು ವಿವರಿಸು ತ್ತದೆ. (3) ಇಪ್ಪತ್ತೊಂದು ಪತ್ರಗಳಲ್ಲಿ ಆದಿ ಕ್ರೈಸ್ತರ ನಂಬಿಕೆಗಳನ್ನೂ ಅಧಿ

ಪ್ರಾಯಗಳನ್ನೂ ನಮೂದಿಸಿದೆ ಮತ್ತು (4) ಇಪ್ಪತ್ತೇಳನೆಯ ಪುಸ್ತಕವಲ್ಲಿ ಸಂತ ಜಾನನು ಕಂಡ ದಿವ್ಯಕನಸುಗಳ ಅಂದರೆ ಕ್ರಿಸ್ತನು ಅವನ ದ್ವಾರಾ ಲೋಕಕ್ಕೆ ತಿಳಿಯಪಡಿಸಿದ ಭವಿಷ್ಯದ್ದರ್ಶನದ ವರ್ಣನೆ ಇದೆ. ಅಂತು ಒಟ್ಟು ಹೋಲಿಬೈಬಲಿನಲ್ಲಿ ಅರವತ್ತಾರು ಪುಸ್ತಕಗಳಿವೆ.

**ಶಿಷ್ಯ** :—ಕ್ರೈಸ್ತರು ಏಕೆ "ಹೋಲಿಬೈಬಲಿಗೆ ಮಹತ್ತಾದ ಗೌರವವನ್ನು ಕೊಡುತ್ತಿರುವರು ?

**ಗುರು** :—ಭಗವಂತನ ವಿಚಾರವನ್ನೂ, ಅವನಿಗೂ ಜಗತ್ತಿಗೂ ಇರುವ ಸಂಬಂಧದ ವಿಚಾರವನ್ನೂ, ಪರಲೋಕದ ವಿಚಾರವನ್ನೂ ಪ್ರತ್ಯಕ್ಷ ಅನುಮಾನ ಪ್ರಮಾಣಗಳಿಂದ ತೀರ್ಮಾನಿಸಲಾಗುವುದಿಲ್ಲ; ಆದರೂ ಮನುಷ್ಯನು ತರ್ಕದಿಂದ ದೇವರ ಇರುವಿಕೆಯನ್ನು ಸಾಧಿಸಲು ವ್ಯರ್ಥವಾಗಿ ಪ್ರಯತ್ನಪಡುತ್ತಾನೆ. ಈ ವಿಚಾರಗಳನ್ನು ಭಗವಂತನ ಸಂದೇಶಗಳಾದ ಹೋಲಿ ಬೈಬಲಿನಿಂದ ಮಾತ್ರ ತಿಳಿಯಬೇಕಾಗುತ್ತದೆ; ಏಕೆಂದರೆ ಬೈಬಲಿನಲ್ಲಿ ಭಗವಂತನೇ ತನ್ನ ಸ್ವರೂಪ ರೂಪ ಗುಣಗಳನ್ನು ಮನುಷ್ಯರಿಗೆ ಉಪದೇಶಮಾಡುತ್ತಾನೆ. ಆದರೆ ಬೈಬಲಿನಲ್ಲಿರುವ ಸಂದೇಶಗಳು ಭಗವಂತನ ಸಂದೇಶಗಳೆಂದೇ ಹೇಗೆ ಹೇಳಬಹುದು ? ಭವಿಷ್ಯತ್ಕಾಲದಲ್ಲಿ ನಡೆಯುವ ಘಟನೆಗಳನ್ನು ಭಗವಂತನೊಬ್ಬನು ಮಾತ್ರ ತಿಳಿಯಬಲ್ಲನು ; ಮನುಷ್ಯರು ತಿಳಿಯಲಾರರು. ಆದರೆ ಹಳೆಯ ಒಡಂಬಡಿಕೆಯಲ್ಲಿ ದೈವಜ್ಞರುಗಳು ದಿವ್ಯಕನಸುಗಳನ್ನು ಕಂಡು ಮುಂದೆ ಹುಟ್ಟುವ ರಾಜರುಗಳ, ಪಟ್ಟಣಗಳ, ಮತಗಳ, ಬಂಡಕಟ್ಟುಗಳ, ಚಕ್ರಾಧಿಪತ್ಯಗಳ, ಜನಾಂಗಳ ಚಲನೆಗಳ, ಏಸುಕ್ರಿಸ್ತನ, ಪರಲೋಕದ ಚರಿತ್ರೆಗಳ ವಿಷಯಗಳನ್ನೂ ವರ್ಣಿಸಿರುವರು. ಬೈಬಲಿನಲ್ಲಿ ವರ್ಣಿಸಿರುವ ಹಾಗೆಯೇ ಆ ಘಟನೆಗಳು ನಡೆದಿವೆಯೆಂದೂ ಮತ್ತು ಮುಂದೆಯೂ ನಡೆಯುತ್ತವೆಯೆಂದೂ ಕ್ರೈಸ್ತರು ನಂಬುತ್ತಾರೆ. ಹೀಗೆ ದೈವಜ್ಞರಿಂದ ಬೋಧಿಸಲ್ಪಟ್ಟ ಭವಿಷ್ಯನುಡಿಗಳೆಲ್ಲಾ ನಿಜವಾಗಿ ಭಗವಂತನು ಲೋಕೋಪಕಾರಕ್ಕಾಗಿ ಅವರ ಮೂಲಕ ಹೇಳಿಸಿದ ನುಡಿಗಳೇ ಆಗಿರುವುದರಿಂದ ಹಳೆಯ ಒಡಂಬಡಿಕೆಯ ಉಪದೇಶಗಳು ಭಗವಂತನ ಉಪದೇಶಗಳೇ ಆಗಿವೆಯೆಂದು ತಿಳಿಯಬೇಕು. ಏಸುಕ್ರಿಸ್ತರೂ ಕೂಡ ತಾವು ಹುಟ್ಟುವುದಕ್ಕೆ ಮುಂಚೆ ಜೀವಿಸಿದ್ದ ದೈವಜ್ಞರ ದಿವ್ಯಕನಸ್ಸಿನಿಂದುಂಟಾದ ಸಂದೇಶಗಳನ್ನು ಭಗವಂತನ ದಿವ್ಯಾತ್ಮ (HolyGhost) ದಿಂದ ಪ್ರೇರಿತವಾದ ಸಂದೇಶಗಳೆಂದು ಭಾವಿಸಿ ಅವುಗಳಿಗೆ ಗೌರವವನ್ನು ಕೊಟ್ಟಿರುವರು. ಹೊಸ ಒಡಂಬಡಿಕೆಯಲ್ಲಿರುವ ವಿಷಯಗಳೆಲ್ಲವೂ ದೇವರ ಪುತ್ರರಾದ ಏಸುಕ್ರಿಸ್ತರ ಜೀವನ ಚರಿತ್ರೆಯೂ ಮತ್ತು ಉಪದೇಶಗಳೂ ಆಗಿರುವುದರಿಂದ ಅವೂ ಕೂಡ ಭಗವಂತನ ವಾಕ್ಯಗಳೇ ಆಗಿವೆ. ಆದುದರಿಂದ ಒಟ್ಟು "ಹೋಲಿ ಬೈಬಲ್" ಪವಿತ್ರ ಗ್ರಂಥವು ಭಗವಂತನ ಗ್ರಂಥವೆಂದೇ ಪರಿಗಣಿಸಲ್ಪಟ್ಟಿದೆ. ಭಗವಂತನ ಮನಸ್ಸಿನಲ್ಲಿರುವ

ಪವಿತ್ರ ಭಾವನೆಗಳು ಅವನ ದಿವ್ಯಾತ್ಮದ ಮೂಲಕ ದೈವಜ್ಞರ ಅನುಭವ ಸ್ವಪ್ನಾದಿಗಳ ದಿವ್ಯ ದರ್ಶನಗಳ ಮೂಲಕ ಅವರ ಮನಸ್ಸನ್ನು ವ್ಯಾಪಿಸುತ್ತವೆ; ಆಗ ದೈವಜ್ಞರು ಭಗವಂತನ ಸಹಾಯದಿಂದಲೇ ಈ ಭಾವನೆಗಳನ್ನು ತಮ್ಮ ಮಾತೃಭಾಷೆಯಲ್ಲಿ ಯೋಗ್ಯವಾದ ಪದಗಳನ್ನೂ ವಾಕ್ಯಗಳನ್ನೂ ಉಪಯೋಗಿಸಿ ಲೋಕಕ್ಕೆ ಪ್ರಕಾಶ ಮಾಡುತ್ತಾರೆ. ಆದುದರಿಂದ ಈ ಪವಿತ್ರ ವಾಕ್ಯಗಳ ಸಂಗ್ರಹವಾದ ಹೋಲಿ ಬೈಬಲ್ ಭಗವಂತನ ಗ್ರಂಥವಲ್ಲವೆ ? ಭಗವಂತನ ಸಂದೇಶಗಳನ್ನು ಒಳಗೊಂಡಿರುವ ಹೋಲಿ ಬೈಬಲನ್ನು ದೇವರ ಕೊಡುಗೆಯೆಂದು ಭಾವಿಸಿ ಅದನ್ನು ಕ್ರೈಸ್ತರು ಪೂಜಿಸುತ್ತಾರೆ. ಭಗವಂತನ ಹತ್ತಿರಕ್ಕೆ ಹೋಗಬೇಕಾದ ಇಚ್ಛೆಗಳು ಹೋಲಿ ಬೈಬಲಿನ ಸಾನ್ನಿಧ್ಯವನ್ನು ಪಡೆದು, ಅದನ್ನು ಓದಿ, ಅದರ ಉಪದೇಶಗಳನ್ನು ಸ್ವೀಕರಿಸಿ, ಯಾವುದೇ ಸಮಯದಲ್ಲಾದರೂ ಸತ್ಯಮಾರ್ಗದಲ್ಲಿ ನಡೆದು ತಮ್ಮ ಪಾಪಗಳನ್ನು ಕ್ರಮೇಣ ಪರಿಹಾರಮಾಡಬೇಕು. ಈ ಪವಿತ್ರ ಗ್ರಂಥದಲ್ಲಿರುವ ಉಪದೇಶಗಳು ಮತ್ತು ಸಂದೇಶ ಗಳು ಒಂದು ದೇಶವನ್ನ, ಒಂದು ಜಾತಿಯ, ಒಂದು ಭಾಷೆಯವರ ಒಂದು ಪಂಥದ, ಒಂದು ಕಾಲದ ಜನರ ಕ್ಷೇಮವನ್ನು, ಶ್ರೇಯಸ್ಸನ್ನು ಮಾತ್ರ ಉಂಟುಮಾಡುವುವು ಇಲ್ಲ ? ಅದು ಸರ್ವಕಾಲದಲ್ಲಿಯೂ ಸಾರ್ವತ್ರಿಕವಾಗಿ ಎಲ್ಲರಿಗೂ ಕ್ಷೇಮವನ್ನೂ ಶ್ರೇಯಸ್ಸನ್ನೂ ಉಂಟುಮಾಡುತ್ತದೆ.

**ಶಿಷ್ಯ :**—ಏಸೂಕ್ರಿಸ್ತರ ಸಂಕ್ಷೇಪವಾಗಿ ತಿಳಿಯಬಹುದಾದ ಜೀವನ ಚರಿತ್ರೆ ಯೇನು ?

**ಗುರು :**—ಸುಮಾರು ಒಂದುಸಾವಿರದ ಒಂಭೈನೂರ ಇಪ್ಪತ್ತು ವರುಷಗಳ ಕೆಳಗೆ ಯೇಸೂಕ್ರಿಸ್ತರು ಪ್ಯಾಲೆಸ್ಟೈನ್ ದೇಶದಲ್ಲಿ ಬೆತ್ಲೆಹೆಮ್ ಪಟ್ಟಣದಲ್ಲಿ ಹೆರೋದ್ ಎಂಬ ದೊರೆಯ ಕಾಲದಲ್ಲಿ ಜನಿಸಿದರು. ಯೆಹೂದ್ಯರ ವಂಶಕ್ಕೆ ಸೇರಿದ ಮೇರಿ ಮತ್ತು ಜೋಸೆಫ್ ಎಂಬ ಮಾತಾಪಿತೃಗಳನ್ನು ಪಡೆದಿದ್ದರು. ಇವರು ನಾಜರೆತ್ ಎಂಬ ಸ್ಥಳದಲ್ಲಿ ವಾಸಮಾಡುತ್ತಿದ್ದಾಗ ಸಂತಯೋಹಾನನು ಇವರಿಗೆ ಜ್ಞಾನ ಸ್ನಾನವನ್ನು (Baptism) ಮಾಡಿಸಿದನು. ಇವರ ಹದಿನೆಂಟನೇ ವಯಸ್ಸಿನಿಂದ ಹಿಡಿದು ಮೂವತ್ತೆರಡನೇ ವಯಸ್ಸಿನವರೆಗೆ ಅಂದರೆ ಹದಿನಾಲ್ಕು ವರುಷಗಳ ಕಾಲ ಇವರ ಜೀವನ ಚರಿತ್ರೆ ನಮಗೆ ಗೊತ್ತಿಲ್ಲ. ಆಮೇಲೆ ಇವರು ಆ ದೇಶದಲ್ಲೆಲ್ಲಾ ಹೊಸ ದೈವಿಕ ಭಾವನೆಗಳನ್ನು ಹುಟ್ಟಿಸುವ ಹಾಗೆ ಜನರಿಗೆ ಉಪದೇಶ ಮಾಡುತ್ತಾ, ಆ ಉಪದೇಶಕ್ಕೆ ಅನುಗುಣವಾಗಿ ನಡೆಯುತ್ತಾ, ಸಹಸ್ರಾರು ಮಂದಿ ಜನರನ್ನು ತಮ್ಮ ಗುಂಪಿಗೆ ಸೇರಿಸಿಕೊಂಡು ಅಲ್ಲಿ ಭಗವಂತನ ರಾಜ್ಯವನ್ನು ಸ್ಥಾಪಿಸಲು ಪ್ರಯತ್ನಪಟ್ಟರು. ಇದರಿಂದ ಯೆಹೂದ್ಯ ಪೂಜಾರಿಗಳಿಗೆ ಇವರಲ್ಲಿ ಮಾತ್ಸರ್ಯವೂ ಮತ್ತು ದ್ವೇಷವೂ ಉಂಟಾಗಿ ಅವರು ಆ ದೇಶವನ್ನು ಸ್ವಾಧೀನಪಡಿಸಿ ಕೊಂಡಿದ್ದ ರೋಮನ್ ಗವರ್ನರಿಗೆ ಏಸೂಕ್ರಿಸ್ತರು ಯೆಹೂದ್ಯರ ರಾಜನಾಗಲು

ರೋಮನ್ ಸರ್ಕಾರದ ಮೇಲೆ ಪಿತೂರಿ ನಡೆಸುತ್ತಿದ್ದಾರೆಂದು ಸುಳ್ಳು ಆಪಾದನೆಯನ್ನು ಹೊರಿಸಿದರು. ಆಗ ಪಾಂಟಿಯಸ್ ಪಿಲಾತ ಎಂಬ ರೋಮನ್ ಅಧಿಕಾರಿಯು ಯೇಸುಕ್ರಿಸ್ತನನ್ನು ಬಂಧಿಸಿ, ಅವರ ಮೇಲೆ ಧರ್ಮವಿರೋಧಿ ಮತ್ತು ರಾಜದ್ರೋಹಿ ಎಂಬ ಅಪವಾದಗಳನ್ನು ಹೊರಿಸಿ, ಕಪಟ ವಿಚಾರಣೆ ನಡೆಸಿ, ಅವರನ್ನು ಶಿಲುಬೆಗೆ ಏರಿಸಿ, ಮೈಯಲ್ಲೆಲ್ಲಾ ಮೊಳೆಗಳನ್ನು ಹೊಡೆದು ಕ್ರೂರವಾದ ರೀತಿಯಲ್ಲಿ ಕೊಂದರು. ಆದರೆ ಮೂರನೆಯ ದಿನದಂದು ಅವರ ಗೋರಿಯಲ್ಲಿ ಅವರ ಮೃತಶರೀರವಿರಲಿಲ್ಲ; ಎಲ್ಲರೂ ಆಶ್ಚರ್ಯಪಟ್ಟರು.

**ಶಿಷ್ಯ** :— ಯೇಸುಕ್ರಿಸ್ತರ ಮಹತ್ವವನ್ನು ಯಾವ ಯಾವ ರೀತಿಯಲ್ಲಿ ಹೋಲಿ ಬೈಬಲಿನಲ್ಲಿ ತಿಳಿಸಿದೆ ?

**ಗುರು** :— ಭಗವಂತನು ತ್ರಿಮೂರ್ತಿ ಸ್ವರೂಪನು (ತಂದೆಯಾದ ದೇವರು; ದೇವಪುತ್ರರಾದ ಯೇಸುಕ್ರಿಸ್ತರು ಮತ್ತು ಭಗವಂತನ ದಿವ್ಯಾತ್ಮರೆಂಬುವರು) ಎಂದು ಭಕ್ತರಿಗೆ ಬೈಬಲಿನಲ್ಲಿ ಹೇಳಿದೆ. (i) ಭೂಮಿಯ ಸೃಷ್ಟಿಯಾಗುವಾಗ ಯೇಸುಕ್ರಿಸ್ತರು ತಂದೆಯಾದ ಭಗವಂತನಿಗೆ "ನನ್ನ ಸೃಷ್ಟಿಕರ್ತನ ಪ್ರೇರಣೆಯಿಂದ ಭೂಮಿಯಲ್ಲಿ ಮಾನವರು ಪಾಪಿಷ್ಠರಾದರೆ ನಾನು ಅವತಾರ ಮಾಡಿ, ನನ್ನ ಅದ್ಭುತ ಕಾರ್ಯಗಳಿಂದ ಅವರಿಗೆ ನಾನು ದೇವರ ಮಗನೆಂದು ತಿಳಿಸಿ, ಪವಿತ್ರ ಜೀವನವನ್ನು ಉತ್ತಮವಾಗಿ ನಡೆಸಿ, ಅವರಿಗೆ ಉತ್ತಮ ಉಪದೇಶಗಳನ್ನು ಬೋಧಿಸಿ—ಅವರ ಪಾಪಗಳನ್ನು ಹೋಗಲಾಡಿಸುವೆನು ಮತ್ತು ಕೊನೆಯಲ್ಲಿ, ಅವರ ಪಾಪಗಳ ಪರಿಹಾರಕ್ಕಾಗಿ ನನ್ನ ಪ್ರಾಣವನ್ನೇ ಬಲಿ ಕೊಡುವೆನು" ಎಂದು ವಾಗ್ದಾನ ಮಾಡಿದರು. (ii) ಪೂರ್ವಕಾಲದಲ್ಲಿಯೇ ಹಲವು ಪ್ರವಾದಿಗಳು "ಮುಂದೆ ಲೋಕವನ್ನು ಉದ್ಧರಿಸುವುದಕ್ಕಾಗಿ ದೇವರ ಪುತ್ರರಾದ ಯೇಸುಕ್ರಿಸ್ತರು ಅವತಾರ ಮಾಡುವರು ಮತ್ತು ಭಗವಂತನ ರಾಜ್ಯವನ್ನು ಸ್ಥಾಪಿಸುವರು" ಎಂದು ಭವಿಷ್ಯ ನುಡಿಗಳನ್ನು ಹೇಳಿರುವುದು ಹಳೆಯ ಒಡಂಬಡಿಕೆಯಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. (iii) ಹಳೆಯಕಾಲದ ಪ್ರವಾದಿಗಳಿಗೂ ಯೇಸುಕ್ರಿಸ್ತರಿಗೂ ವ್ಯತ್ಯಾಸವೇನು? ಪ್ರವಾದಿಗಳು ಸಾಧಾರಣ ಮನುಷ್ಯರು; ಯೇಸುಕ್ರಿಸ್ತರು ದೇವರ ಪುತ್ರರು ಅಥವಾ ದೇವರ ಅವತಾರ. ಪ್ರವಾದಿಗಳಲ್ಲಿ ಆಗಾಗ್ಗೆ ಹಗಲಾಗಲಿ ಅಥವಾ ದಿವ್ಯ ಕನಸುಗಳಲ್ಲಾಗಲಿ ಮಾತ್ರ ಭಗವಂತನ ದಿವ್ಯಾತ್ಮನು ಅವರಲ್ಲಿ ಪ್ರವೇಶವಾಗುತ್ತಿತ್ತು; ಮಿಕ್ಕ ವೇಳೆಗಳಲ್ಲೆಲ್ಲಾ ಅವರು ಮನುಷ್ಯರ ಗುಣಗಳನ್ನು ಮಾತ್ರ ಪಡೆದಿದ್ದರು. ಆದರೆ ಯೇಸುಕ್ರಿಸ್ತರು ಹುಟ್ಟಿದಂದಿನಿಂದ ಸಾಯುವವರೆಗೂ ಭಗವಂತನ ಪ್ರತಿಬಿಂಬವಾಗಿ ಅವರ ಸ್ವಭಾವವನ್ನೂ ಗುಣಗಳನ್ನೂ ಪಡೆದು ಜೀವನದಲ್ಲಿ ಆಚರಿಸಿ ತೋರಿಸಿದರು. ಪ್ರವಾದಿಗಳು ಆಯಾ ಕಾಲಗಳಿಗೆ ಮಾತ್ರ ಅನ್ವಯಿಸುವ ಸಂದೇಶಗಳನ್ನು ಜನರಿಗೆ ಬೋಧಿಸಿ ಅವರಿಗೆ ಅಲ್ಪ ಸ್ವಲ್ಪ ಕ್ಷೇಮಗಳನ್ನುಂಟುಮಾಡಲು ಪ್ರಯತ್ನಿಸಿದರು; ಆದರೆ

ಏಸುಕ್ರಿಸ್ತರ ಉಪದೇಶಗಳೂ, ಕಾರ್ಯಗಳೂ ಎಲ್ಲಾ ಕಾಲದಲ್ಲಿಯೂ ಇರುವ ಸಾರ್ವಜನಿಕರಿಗೆ ಸರ್ವವಿಧ ಶ್ರೇಯಂಗಳನ್ನುಂಟುಮಾಡುತ್ತವೆ. ಭಕ್ತರಿಗೆ ತಮ್ಮನ್ನು ಮರೆಹೊಕ್ಕವರ ಪಾಪಗಳನ್ನು ಹೋಗಲಾಡಿಸುವ ಶಕ್ತಿ ಇರಲಿಲ್ಲ; ಆದರೆ ದೇವರ ಪುತ್ರರಿಗೆ ಈ ಪವಿತ್ರ ಶಕ್ತಿಯುಂಟು. (4) ಏಸುಕ್ರಿಸ್ತರು ಪರಿಶುದ್ಧ ಕನ್ಯೆಯ ಗರ್ಭದಿಂದ ಜನಿಸಿದರು. ಇವರೇ ಜಗದೋದ್ಧಾರಕರೆಂದು ತೋರಿಸುವುದಕ್ಕೆ ಇವರು ಹುಟ್ಟಿದೊಡನೆಯೇ ಆ ಸ್ಥಳದ ಆಕಾಶದಲ್ಲಿ ಒಂದು ದೊಡ್ಡ ನಕ್ಷತ್ರವು ಕಾಣಿಸಿಕೊಂಡಿತು. ಅದನ್ನು ನೋಡಿದ ಪೂರ್ವ ದೇಶದ ಏಳು ಜ್ಞಾನಿಗಳು ಬೆತ್ಲೆಹೆಮ್‌ಗೆ ಬಂದು ಕ್ರಿಸ್ತ ಪ್ರಭುವನ್ನು ಪೂಜಿಸಿದರು. ಏಸುವು ಬಾಲಕನಾದ ಮೇಲೆ ಅಲ್ಲಿ ಕಾಡಿನಲ್ಲಿ ಉಪದೇಶ ಮಾಡುತ್ತಿದ್ದ ಸಂತ ಜಾನನು ಇವರನ್ನು ದೇವಪುತ್ರರೆಂದು ಗುರುತಿಸಿ ಇವರಿಗೆ ಜ್ಞಾನ ಸ್ನಾನವನ್ನು (Baptism) ಮಾಡಿಸಿದನು. ಶೀಘ್ರದಲ್ಲೇ ಭಗವಂತನ ದಿವ್ಯಾತ್ಮವು ಒಂದು ಪಾರಿವಾಳ ಹಕ್ಕಿಯ ರೂಪದಲ್ಲಿ ತಮ್ಮನ್ನು ಪ್ರವೇಶಿಸಿದ ಹಾಗೆ—ಏಸುವು ದಿವ್ಯ ಕನಸು ಕಂಡರು. ಆಮೇಲೆ "ನೀನೇ ನನ್ನ ಪ್ರೀತಿಪಾತ್ರನಾದ ಪುತ್ರನು; ನಾನು ನಿನ್ನ ವಿಚಾರದಲ್ಲಿ ಸಂತೋಷಗೊಂಡಿದ್ದೇನೆ" ಎಂಬ ದೇವರ ದಿವ್ಯ ವಾಣಿಯು ಇವರಿಗೆ ಕೇಳಿಸಿತು. (5) ಏಸುವು ತಾನು ದೇವರ ಮಗನೆಂದು ತೋರಿಸುವುದಕ್ಕೂ ಮತ್ತು ಬಡವರಿಗೆ ಸಹಾಯ ಮಾಡುವುದಕ್ಕೂ ಅನೇಕ ಅದ್ಭುತಕಾರ್ಯಗಳನ್ನು ಅಥವ ಪವಾಡಗಳನ್ನು ನಡೆಸಿದರು. ಗಲಿಲೀ ಸರೋವರದಲ್ಲಿ ಬಿರುಗಾಳಿಯನ್ನು ನಿಲ್ಲಿಸಿದರು; ಸಮುದ್ರದ ಮೇಲೆ ನಡೆದರು; ಕುರುಡರಿಗೆ ಕಣ್ಣು ಕೊಟ್ಟರು; ತೊನ್ನು ಜಾಡ್ಯದವರನ್ನು ಮುಟ್ಟಿ, ಅವರ ರೋಗವನ್ನು ವಾಸಿಮಾಡಿದರು; ಐದು ಬ್ರೆಡ್ ಮತ್ತು ಎರಡು ಮೀನುಗಳಿಂದ ಐದು ಸಾವಿರ ಜನಕ್ಕೆ ಆಹಾರ ಕೊಟ್ಟರು; ಬಾಯಿ ಮಾತಿನಿಂದಲೇ ರೋಗಿಗಳಿಗೆ ಅನೇಕ ರೋಗಗಳನ್ನು ದೂರದಿಂದಲೇ ವಾಸಿಮಾಡಿದರು; ಪಾಪಿಗಳ ಪಾಪಗಳನ್ನು ಪರಿಹಾರ ಮಾಡಿದರು; ದುಷ್ಟ ಸೈತಾನನನ್ನು ಎದುರಿಸಿ ಅವನ ಅನುಯಾಯಿಗಳಾದ ಪಿಶಾಚಿಗಳನ್ನು ಓಡಿಸಿದರು; ಸತ್ತುಹೋದವರನ್ನು ಬದುಕಿಸಿದರು; ಮತ್ತು ಕೆಟ್ಟವರ ಹೃದಯಗಳನ್ನು ಶುದ್ಧಿಮಾಡಿ ಅವರನ್ನು ಒಳ್ಳೆಯವರನ್ನಾಗಿ ಮಾರ್ಪಡಿಸಿದರು. (6) ಏಸುವಿನ ಜೀವನದಲ್ಲಿ ಪಾಪದ ಚಿಹ್ನೆಯೇ ಇರಲಿಲ್ಲ. ಅವರು ಪರಿಪೂರ್ಣ ಪವಿತ್ರ ಜೀವನವನ್ನು ನಡೆಸಿ ಭಗವಂತನ ಗುಣಗಳನ್ನು ಮುಖ್ಯವಾಗಿ ಆತನ ಪ್ರೀತಿ ಮತ್ತು ದಯಾಗುಣಗಳನ್ನು, ಆಚರಿಸಿ ತೋರಿಸಿದರು. ಆದುದರಿಂದಲೇ ಆಗಿನ ಕಾಲದ ಸತ್ಪುರುಷರಾದ ಯೆಹೂದ್ಯರು ಭಗವಂತನಾದ ಜಿಹೋವನೇ ಮನುಷ್ಯರ ಉದ್ಧಾರಕನಾದ ಏಸುಕ್ರಿಸ್ತನಾಗಿ ಅವತರಿಸಿರುವನೆಂದು ತೀರ್ಮಾನಕ್ಕೆ ಬಂದರು. ಏಸುವಿನಲ್ಲಿ ಪವಿತ್ರತೆ, ಒಳ್ಳೆಯತನ, ಪ್ರೀತಿ, ನ್ಯಾಯ, ಸತ್ಯತೆಮೊದಲಾದ ಸದ್ಗುಣಗಳು ಪರಿಪೂರ್ಣವಾಗಿದ್ದವು.

(7) ಇವರ ಉಪದೇಶಗಳು ಅತ್ಯುತ್ತಮವಾದುವುಗಳು ; ಭಗವಂತನ ಆಜ್ಞೆಗಳಿಗೆ ಅನುಗುಣವಾದುವುಗಳು ; ಅನೇಕ ಉಪಮಾನಗಳಿಂದಲೂ ಲೋಕ ನ್ಯಾಯಗಳಿಂದಲೂ ಕೂಡಿದವುಗಳು ; ಮತ್ತು ಧರ್ಮಜ್ಞರ ಉಪದೇಶಗಳನ್ನು ಮೀರಿಸಿ ಅವನ್ನು ಪರಿಪೂರ್ಣಗೊಳಿಸತಕ್ಕವುಗಳಾಗಿದ್ದುವು. ಇವರು ತಾವು ದೇವರ ಪುತ್ರರೆಂದೇ ಲೋಕಕ್ಕೆ ತಿಳಿಸಿದರು ; ಆದ್ದರಿಂದ ಇವರ ಉಪದೇಶಗಳು ಆಜ್ಞೆಗಳಾಗಿಯೇ ಇವೆ ಮತ್ತು ಈಗಲೂ ಲೋಕದ ಜನರ ಹೃದಯಗಳನ್ನು ಪ್ರವೇಶಿಸಿ ಅವರನ್ನು ಸನ್ಮಾರ್ಗದಲ್ಲಿ ನಡೆಯುವ ಹಾಗೆ ಪ್ರೇರೇಪಿಸುತ್ತವೆ. (8) ಏಸು ಕ್ರಿಸ್ತರು ತಮ್ಮ ಕಾಲಕ್ಕೆ ಮುಂಚೆ ಹುಟ್ಟಿದ್ದ, ತಮ್ಮ ಕಾಲದ ಮತ್ತು ಮುಂದೆ ಹುಟ್ಟುವ ಮನುಷ್ಯರ ಪಾಪಗಳ ಪರಿಹಾರಕ್ಕಾಗಿ ತಮ್ಮನ್ನೇ ಬಲಿಯಾಗಿ ಕೊಡಲು ಮರಣದಂಡನೆಯನ್ನು ಸ್ವೀಕರಿಸಿ, ಶಿಲುಬೆಯನ್ನು ಏರಿ, ಸಹಿಸಲಸಾಧ್ಯವಾದ ಶರೀರದ ಹಿಂಸೆಗಳನ್ನು ಅನುಭವಿಸಿ ಕ್ರೂರವಾದ ಸಾವನ್ನು ಅನುಭವಿಸಿದರು. ಆಮೇಲೆ ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡುವ ಹಾಗೆ ಕಾಲವಾದ ಮೂರನೆಯ ದಿವಸವೇ ತಮ್ಮ ಗೋರಿಯಿಂದ ಜೀವಂತರಾಗಿ ಎದ್ದು ಆಚೆ ಹೊರಟು ತಮ್ಮ ಶಿಷ್ಯರಿಗೆಲ್ಲಾ ಕಾಣಿಸಿಕೊಂಡು ಅವರಿಗೆ ತಮ್ಮ ಪವಿತ್ರ ಉಪದೇಶಗಳನ್ನು ಪ್ರಚಾರ ಮಾಡುವ ಧೈರ್ಯವನ್ನು ದಯಪಾಲಿಸಿದರು. (9) ಕರುಣಾಮಯರಾದ ಅವರು ತಂದೆಯಾದ ಭಗವಂತನ ಪಕ್ಕದಲ್ಲಿದ್ದು ಅನಂತಾಸನದಿಂದ ತಮ್ಮನ್ನು ಮೊರೆಹೊಗುವ ಪಾಪಿಗಳನ್ನು ಕ್ಷಮಿಸುವುದಕ್ಕಾಗಿ ಅವನ ದಯೆಯನ್ನು ಬೇಡುವರು. ಇಷ್ಟೇ ಅಲ್ಲ ; ಕೊನೆಯ ವಿಚಾರಣೆ ಮತ್ತು ತೀರ್ಮಾನದ ದಿವಸ ಭಗವಂತನಿಗೆ ಸಹಾಯ ಮಾಡುತ್ತಾ, ಪಶ್ಚಾತ್ತಾಪಪಟ್ಟು ತಮ್ಮನ್ನು ನಂಬಿಕೊಳ್ಳುವ ಪಾಪಿಗಳಿಗೆ ಕ್ಷಮೆಯನ್ನು ನೀಡುವ ಹಾಗೆ ಭಗವಂತನಿಗೆ ಶಿಫಾರಸ್ಸು ಮಾಡಿ ಅವರನ್ನು ಸ್ವರ್ಗಕ್ಕೆ ಕಳುಹಿಸುವರು ಮತ್ತು (10) ಭಗವಂತನ ಇಚ್ಛೆಗನುಗುಣವಾಗಿ ಏಸುಕ್ರಿಸ್ತರು ಭೂಮಿಯಲ್ಲಿ ಪುನಃ ಎರಡನೇ ಅವತಾರ ಮಾಡುತ್ತಾರೆಂದೂ, ಸತ್ತವರನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತಾರೆಂದೂ, ತಮ್ಮನ್ನೂ ಭಗವಂತನನ್ನೂ ಆಶ್ರಯಿಸಿರುವ ಪಾಪಿಗಳನ್ನೂ ಸ್ವರ್ಗಕ್ಕೆ ಸೇರಿಸುವರೆಂದೂ, ಇತರ ಪಾತಕಿಗಳನ್ನೂ, ದುಷ್ಟ ಸೈತಾನನನ್ನೂ, ಅವನ ಅನುಯಾಯಿಗಳನ್ನೂ ನರಕಕ್ಕೆ ಕಳುಹಿಸಿ ಅಲ್ಲಿ ಭಸ್ಮ ಮಾಡಿ ನಾಶಮಾಡುವರೆಂದೂ ಮತ್ತು ಕೊನೆಯಲ್ಲಿ ಪಾಪಗಳಿಂದ ತುಂಬಿರುವ ಭೂಮಿಯನ್ನು ನಾಶಮಾಡಿ, ಅಲ್ಲೇ ಹೊಸ ಭೂಸ್ವರ್ಗವನ್ನು ಸೃಷ್ಟಿಸಿ ಬದುಕಿರುವ ಉತ್ತಮ ಮಾನವರಿಗೆಲ್ಲಾ ಅಮೃತತ್ವವನ್ನು ಕೊಟ್ಟು ಭಗವಂತನ ರಾಜ್ಯವನ್ನು ಎಂದೆಂದಿಗೂ ಸ್ಥಾಪಿಸುವರೆಂದೂ ಬೈಬಲಿನಲ್ಲಿ ಹೇಳಿದೆ.

ಶಿಷ್ಯ :—ಕ್ರೈಸ್ತಧರ್ಮದ ಪ್ರಕಾರ ಭಗವಂತನ ಸ್ವರೂಪ ರೂಪಗುಣಗಳಾವುವು ?

ಗುರು :— "ಭಗವಂತನು ಆತ್ಮಸ್ವರೂಪನು(Spirit); ಆದಾಗ್ಯೂ ಅವನು ಒಬ್ಬ ಮಹಾ ಅದ್ಭುತ ವ್ಯಕ್ತಿ ಪುರುಷನು. ಸತ್ಯವಂತನು ನಿಜವಾದ ಯಜಮಾನನೂ ನೇನು; ಅವನು ಬಯಸಿರುವ ಭಗವಂತನು ಮತ್ತು ಶಾಶ್ವತನಾದ ದೊರೆಯೂ" ಎಂದು ಉಪದೇಶಿಸಿರುವುದು. ವಿಶೇಷ ಪ್ರಕಾಶಶಾಲಿಯಾದ ಮನುಷ್ಯನೂ ಕೂಡ ಅವನ ಮಾತ್ರ ಮನಸ್ಸಿನಿಂದ ಭಗವಂತನ ನಿಜಸ್ವರೂಪವನ್ನು, ಅವನು ಎಲ್ಲಿ ಮತ್ತು ಹೇಗೆ ವಾಸಮಾಡುತ್ತಾನೆಂಬುದನ್ನೂ ಮತ್ತು ಹೇಗೆ ಅದ್ಭುತ ಕಾರ್ಯಗಳನ್ನು ನಡೆಸುತ್ತಾನೆಂಬುದನ್ನೂ ತಿಳಿಯಲಾರನು. ಭಗವಂತನಲ್ಲಿರುವ ಮುಖ್ಯ ಕಲ್ಯಾಣಗುಣಗಳಾವುವೆಂದರೆ ಅವನು ಸರ್ವಶಕ್ತನು, ವಿಸ್ತಾರ ವ್ಯಾಪ್ತಿಯುಳ್ಳವನು, ಸರ್ವಜ್ಞನು, ಪರಮ ಪವಿತ್ರನು, ಪ್ರೇಮಸ್ವರೂಪಿಯು, ದಯಾವಂತನು, ಪಾಪಗಳಿಗೆ ವಿರೋಧಿಯು, ನ್ಯಾಯವನ್ನು ನಡೆಸುವವನು, ನಿಷ್ಪಕ್ಷಪಾತಿಯು ಮತ್ತು ಕರುಣ ಸತ್ಯಸ್ವರೂಪನು ಎಂದು ಬೈಬಲಿನಲ್ಲಿ ಉಪದೇಶಿಸಿದೆ. ಯೇಸು ಕ್ರಿಸ್ತನು ತನ್ನ ಜೀವನದಲ್ಲಿ ತೋರಿಸಿದ ಸದ್ಗುಣಗಳನ್ನು ನಾವು ತಿಳಿದುಕೊಂಡರೆ ಭಗವಂತನ ಕಲ್ಯಾಣಗುಣಗಳನ್ನು ತಿಳಿದಂತಾಗುತ್ತದೆ; ಏಕೆಂದರೆ ಅವನು ಅದೃಶ್ಯ ಭಗವಂತನ ಅವತಾರವೂ, ಪ್ರತಿಬಿಂಬವೂ ಆದವ ಪುತ್ರನು. ವಿಚಿತ್ರವಾದ ಅನಂತವಾದ ಅದ್ಭುತ ಶಕ್ತಿಗಳಿಂದ ಮತ್ತು ಪದಾರ್ಥಗಳಿಂದ ಕೂಡಿದ ಈ ಜಗತ್ತನ್ನು ಸೃಷ್ಟಿಸಿ ಪಾಲಿಸುವುದು ಅವನ ಸರ್ವಶಕ್ತಿಯನ್ನು ತೋರಿಸುತ್ತದೆ. ಜಗತ್ತಿನ ಎಲ್ಲಾ ಪ್ರದೇಶಗಳಲ್ಲಿಯೂ, ಪದಾರ್ಥಗಳಲ್ಲಿಯೂ, ಶಕ್ತಿಗಳಲ್ಲಿಯೂ ಭಗವಂತನ ಅಧಿಪತ್ಯವು ಕಂಡುಬರುವುದರಿಂದ ಅವನನ್ನು ಸರ್ವವ್ಯಾಪ್ತಿಯುಳ್ಳವನೆಂದು ಒಪ್ಪಬೇಕು. ಜಗತ್ತನ್ನು ಸೃಷ್ಟಿಸಿ ಅದರಲ್ಲಿ ಮುಂದೆ ನಡೆಯಬೇಕಾದ ಘಟನೆಗಳನ್ನೆಲ್ಲಾ ಯೋಜನೆ ಮಾಡುವುದು ಮತ್ತು ಭೂತ ವರ್ತಮಾನ ಭವಿಷ್ಯ ಕಾಲಗಳಲ್ಲಿ ನಡೆಯುವುದನ್ನೆಲ್ಲಾ ತಿಳಿಯುವುದು ಭಗವಂತನ ಸರ್ವಜ್ಞತ್ವವನ್ನು ತೋರ್ಪಡಿಸುತ್ತದೆ. ಪರಿಶುದ್ಧ ಹೃದಯವನ್ನು ಪಡೆದಿರುವವರು ಭಗವಂತನನ್ನು ಕಾಣುವರು ಮತ್ತು ಪಾಪಿಗಳು ಅವನ ಹತ್ತಿರಕ್ಕೆ ಸೇರಲಾರರು ಎಂದು ಹೇಳಿರುವುದರಿಂದ ಸ್ವಾಮಿಯು ಪರಮ ಪವಿತ್ರನು ಮತ್ತು ಪಾಪವಿರೋಧಿಯು. ಮೊದಲು ಉತ್ತಮವಾದ ಭೂಮಿಯನ್ನು ಸೃಷ್ಟಿಸಿದುದೂ, ಮನುಷ್ಯರು ಪಾಪಕಾರ್ಯಗಳನ್ನು ಮಾಡಿದರೂ ಮತ್ತು ಆಜ್ಞೆಗಳನ್ನು ಉಲ್ಲಂಘಿಸಿದರೂ, ಪ್ರವಾದಿಗೆ ಉತ್ತಮ ಸಂದೇಶಗಳನ್ನು ಕಳುಹಿಸಿದುದೂ, ತನ್ನ ಪುತ್ರನಾದ ಯೇಸುವನ್ನು ಭೂಮಿಯಲ್ಲಿ ಅವತರಿಸ ಮಾಡಿಸಿ ಅವನಿಂದ ಉತ್ತಮವಾದ ಉಪದೇಶಗಳನ್ನು ಮಾಡಿಸಿ ಜನರಿಗೆ ಮರಣದಂಡನೆಯನ್ನು ತಪ್ಪಿಸಿದುದೂ, ಮರಣ ಹೊಂದಿದವರಿಗೆ ದೀರ್ಘ ನಿದ್ರೆಯನ್ನು ಕೊಡುವುದೂ, ಕೊನೆಯ ತೀರ್ಮಾನವಾದ ಮೇಲೆ ಸತ್ಪುರುಷರಿಗೆ ಸ್ವರ್ಗವನ್ನು ಕೊಡುವುದೂ, ಅನುತಾಪದಿಂದ ಮರೆಹೊಗುವ ಪಾಪಿಗಳನ್ನು ಮನ್ನಿ

ಸುವುದೂ ಮತ್ತು ಇತರ ಪಾತಕಿಗಳನ್ನು ಒಂದೇ ಸಲ ಭಸ್ಮಮಾಡಿ ಇಲ್ಲದ ಹಾಗೆ ಮಾಡುವುದೂ ಇವೆಲ್ಲವೂ ಭಗವಂತನ ಪ್ರೀತಿ ಸ್ವರೂಪವನ್ನೂ ದಯಾಗುಣವನ್ನೂ ತೋರ್ಪಡಿಸುತ್ತವೆ. ಮನುಷ್ಯನಿಗೆ ವ್ಯಕ್ತಿಸ್ವಾತಂತ್ರ್ಯವನ್ನೂ ಕ್ರಿಯಾಸ್ವಾತಂತ್ರ್ಯ ವನ್ನೂ ದಯಪಾಲಿಸಿ, ಅವನಿಗೆ ತನ್ನ ಹತ್ತು ದಿವ್ಯ ಆಜ್ಞೆಗಳನ್ನು ಬೋಧಿಸಿ, ಏಸುಕ್ರಿಸ್ತನಿಂದ ಉತ್ತಮ ನೈತಿಕ ಉಪದೇಶಗಳನ್ನು ಮಾಡಿಸಿ, ಪಾಪ ಮಾಡಿ ದವರಿಗೆ ಶಿಕ್ಷೆಯನ್ನು ಕೊಡುತ್ತಾ, ಧರ್ಮಕಾರ್ಯಗಳನ್ನು ಮಾಡುವವರಿಗೆ ಇಹ ದಲ್ಲಿಯೂ ಪರದಲ್ಲಿಯೂ ಕ್ಷೇಮವನ್ನುಂಟುಮಾಡುತ್ತಾ ಮತ್ತು ಕೆಲವು ವೇಳೆ ಸತ್ಪುರುಷರಿಗೂ ಅವರಲ್ಲಿ ಧರ್ಮ ಶ್ರದ್ಧೆಯನ್ನು ಹೆಚ್ಚಿಸಿ ಪರೀಕ್ಷಿಸುವುದಕ್ಕೆ ಕಷ್ಟ ಗಳನ್ನು ಕೊಡುತ್ತಾ ಇರುವುದರಿಂದ ಭಗವಂತನನ್ನು ನ್ಯಾಯವನ್ನು ನಡೆಸುವವನು ಮತ್ತು ನಿಷ್ಪಕ್ಷಪಾತಿಯು ಎಂದು ಹೇಳಬೇಕಾಗುತ್ತದೆ. ತಾನು ಶಾಶ್ವತವಾದ ಅರಿವಿಕೆಯಿಂದ ಕೂಡಿದ್ದು ಸತ್ಯವನ್ನು ತಿಳಿದು ಸತ್ಯವನ್ನೇ ಪ್ರಕಟಿಸುವುದರಿಂದ ಭಗವಂತನು ಸತ್ಯಸ್ವರೂಪನು. ಇನ್ನೂ ಭಗವಂತನ ಅನೇಕ ಗುಣಗಳನ್ನು ನೀನು ಹೋಲಿ ಬೈಬಲ್ ಗ್ರಂಥವನ್ನು ವ್ಯಾಸಂಗ ಮಾಡಿ ತಿಳಿದುಕೊಳ್ಳಬೇಕು.

**ಶಿಷ್ಯ** :—ದೇವದೂತರು ಯಾರು? ಇವರಿಗೂ ಭಗವಂತನಿಗೂ ಸಂಬಂಧ ವೇನು?

**ಗುರು** :—ಭಗವಂತನು ಸ್ವರ್ಗವನ್ನು ಸೃಷ್ಟಿಸಿ ಅದರಲ್ಲಿ ತನ್ನೊಡನೆ ಇದ್ದು ತನ್ನ ಅನಂತ ಜಗತ್ಕಾರ್ಯಗಳಲ್ಲಿ ಸಹಾಯ ಮಾಡುವುದಕ್ಕಾಗಿ ದಿವ್ಯಶಕ್ತಿಗಳಿಂದ ಕೂಡಿದ ಬಹು ಮಂದಿ ದೇವದೂತರನ್ನು ಸೃಷ್ಟಿಸಿದನೆಂದು ಉಪದೇಶವಿದೆ. ಈ ದೇವದೂತರು ಪ್ರತಿಯೊಬ್ಬ ಮಾನವನ ಪುಣ್ಯಪಾಪ ಕರ್ಮಗಳನ್ನು ತುಲನೆಮಾಡಿ ಭಗವಂತನ ಗಮನಕ್ಕೆ ತರುತ್ತಾರೆ ಮತ್ತು ಅವನ ಆಜ್ಞೆಯ ಪ್ರಕಾರ ಜಗತ್ಕಾರ್ಯ ಗಳನ್ನು ನಡೆಸುತ್ತಾರೆ. ಇವರ ಲ್ಯೂಸಿಫರ್ ಎಂಬ ಶಕ್ತಿವಂತನಾದ ದೇವದೂತನು ಮೊದಲು ಭಗವಂತನ ಪ್ರಥಮ ಪ್ರಿಯನಾದ ಸೇವಕನಾಗಿದ್ದು ಆಮೇಲೆ ಕಾರಣಾಂತರಗಳಿಂದ ಅವನ ದ್ವೇಷಿಯಾದನು. ಭಗವಂತನು ಅವನನ್ನು ಸ್ವರ್ಗ ದಿಂದ ಆಚೆಗೆ ತಳ್ಳಿದಾಗ ಅವನು ದುಷ್ಟ ಸೈತಾನನಾದನು (Satan). ಅನಂತರ ಅನೇಕ ದೇವದೂತರನ್ನು ತನ್ನ ಅನುಯಾಯಿಗಳನ್ನಾಗಿ ಸೇರಿಸಿಕೊಂಡು ಅವನು ಭಗವಂತನ ಆಜ್ಞೆಗಳಿಗೆ ವಿರೋಧವಾಗಿ ಪಾಪಕಾರ್ಯಗಳನ್ನು ಮಾಡುತ್ತಲೂ ಮತ್ತು ಲಕ್ಷಾಂತರ ಮನುಷ್ಯರಿಂದ ಪಾಪಗಳನ್ನು ಮಾಡಿಸುತ್ತಲೂ ಇರುವನು. ಇವನೇ ಪಾಪಗಳಿ ಗೆಲ್ಲಾ ಆದಿಕಾರಣನು ಮತ್ತು ಭಗವಂತನ ಪ್ರಥಮ ವಿರೋಧಿಯು. "ಭಗವಂತನ ಸಿಂಹಾಸನದ ಸುತ್ತಲೂ ಹತ್ತುಸಾವಿರದ ಹತ್ತು ಸಾವಿರವಷ್ಟು ಅಥವ ಸಾವಿರಗಳ ಸಾವಿರಗಳಷ್ಟು ಮಂದಿ ದೇವದೂತರನ್ನು ನೋಡಿದೆನು ಮತ್ತು ಅವರ ಶಬ್ದವನ್ನು ಕೇಳಿದೆನು" ಎಂದು ಪುಸ್ತಕನನ್ನು ಕಂಡ ಒಬ್ಬ ಪ್ರವಾದ್ಯರು ಹೇಳಿರುವನು.

# ಶ್ರೀ ನವ ಭಾರತ ಆಶ್ರಮ

ಗೌರೀಬಿದನೂರು

# ಕನ್ನಡಿಗರ ಜ್ಞಾನದೀಪಿಕಾ

## (ಮಾಲೆ— ಇಪ್ಪತ್ತು)

## ಕ್ರೈಸ್ತಧರ್ಮದ ತತ್ವಹಿತಪುರುಷಾರ್ಥಗಳು

### ಭಾಗ—ಎರಡು

**ಶಿಷ್ಯ** :—ಭಗವಂತನು ಭೂಮಿಯನ್ನು ಮನುಷ್ಯನನ್ನು ಏಕೆ ಮತ್ತು ಹೇಗೆ ಸೃಷ್ಟಿಸಿದನು ? ಮನುಷ್ಯರಲ್ಲಿ ಪಾಪಗಳು ಹೇಗೆ ಹೆಚ್ಚಿದುವು ?

**ಗುರು** :—"ಭಗವಂತನು ಆಜ್ಞೆ ಮಾಡಿದನು ; ಒಡನೆಯೆ ಜಗತ್ತಿನ ಸೃಷ್ಟಿಯಾಯಿತು" ಎಂದು ಉಪದೇಶವಿದೆ. ಅಂದರೇನು, ಯಾವ ಸೂಕ್ಷ್ಮಪದಾರ್ಥದ ಆಧಾರವೂ ಇಲ್ಲದೆ ಭಗವಂತನ ಪವಿತ್ರ ಶಕ್ತಿಯಿಂದಲೇ ದೈವಿಕ ಸ್ವರ್ಗವೂ ಪಾರ್ಥಿವ ಭೂಮಿಯೂ ಅಸ್ತಿತ್ವ ಹಾಗೆ ಸೃಷ್ಟಿಯಾಗಿ ಬೆಳೆದುವು ಎಂದು ಉಪದೇಶ ಮಾಡಿದ ಹಾಗಾಯಿತು. ಒಬ್ಬನೇ ಆಗಿರುವ ಭಗವಂತನ ಸಂಕಲ್ಪದ ಪ್ರಕಾರ ಯಾವುದೋ ಒಂದು ಕಾಲದಲ್ಲಿ ಹಿಂದೆ ಇಲ್ಲದಿದ್ದ ಭೂಮಿಯೂ ಉಂಟಾಯಿತೇ? ಹೀಗೆ ಅದು ಅನೇಕ ಭಗವಂತರುಗಳಿಂದ ಉಂಟಾಗಿ ಅನಂತರದ ಅಧೀನಕ್ಕೆ ಅಥವಾ ಅಧಿಪತ್ಯಕ್ಕೆ ಒಳಪಟ್ಟಿಲ್ಲ. ಯಾವನೂ ತನ್ನ ಮರ್ತ್ಯ ಮನಸ್ಸಿನಿಂದ ಭಗವಂತನ ನಿಜಸ್ವರೂಪವನ್ನು ಹೇಗೆ ಅರಿಯಲಾರನೋ ಹಾಗೆಯೇ ಅವನು ತನಗಿಂತ ಪ್ರತ್ಯೇಕವಾಗಿ ಹೇಗೆ ಭೂಮಿಯನ್ನು ಸೃಷ್ಟಿಸಿದನು ಮತ್ತು ಅಲ್ಲಿ ಅಧಿಪತ್ಯವನ್ನು ನಡೆಸುವನು ಎಂಬ ರಹಸ್ಯಗಳನ್ನು ಅರಿಯಲಾರನು. ಕ್ರೈಸ್ತಧರ್ಮದ ಪ್ರಕಾರ ಭಗವಂತನೇ ಭೂಮಿಯಲ್ಲ ; ಭೂಮಿಯು ಅವನಿಂದ ಹೊರಟಿಲ್ಲ ಮತ್ತು ಅವನು ಭೂಮಿಯೊಳಗಿಲ್ಲ. ಹಾಗಾದರೆ ಭೂಮಿಯನ್ನು ಅವನು ಏಕೆ ಸೃಷ್ಟಿಸಿದನು ? ಭೂಮಿಯು ಸ್ವರ್ಗದ ಹಾಗೆ ಇರಲಿ ; ಅಲ್ಲಿ ಮನುಷ್ಯರು ದೇವದೂತರ ಹಾಗೆ ಅವರಾಗಿದ್ದು ಭಗವಂತನಾದ ತನ್ನನ್ನು ಮರೆಯದೆ ಕಡೆಗೆ ನಿರ್ದೋಷರಾಗಿ ಆನಂದದಿಂದ ವಾಸಮಾಡಲಿ ಎಂಬ ಪವಿತ್ರ ಪ್ರೇಮದಿಂದಲೇ ಮೊದಲು ಸುಂದರವಾದ ಭೂಮಿಯಲ್ಲಿ ಬೆಳಕನ್ನು, ಆಕಾಶ, ನಕ್ಷತ್ರಗಳು, ಸಮುದ್ರ, ಬೆಟ್ಟಗಳು, ಕಾಡುಗಳು, ಹುಲ್ಲುಸಸ್ಯಧಾನ್ಯಗಳು, ಸಸ್ಯಾದಿಗಳು, ಮರಗಳು ಮೃಗಜಂತುಗಳು, ಪಕ್ಷಿಗಳು ಇವುಗಳನ್ನು ಸೃಷ್ಟಿಸಿ ಕೊನೆಯಲ್ಲಿ ಇವುಗಳನ್ನೆಲ್ಲಾ ಅನುಭವಿಸುವುದಕ್ಕಾಗಿ ತನ್ನ ಮಾದರಿ(Image)

ಮತ್ತೇ ಪವಿತ್ರರಾದ ಆದಿಮಾನವ ದಂಪತಿಗಳನ್ನು ಸೃಷ್ಟಿಸಿದನು. "ನೀವೂ, ನಿಮ್ಮ ವಂಶೀಕರಾದ ಸಂತತಿಯೂ ಫಲಕಾರಿಯಾಗಿ ಸಂತಾನವೃದ್ಧಿ ಮಾಡಿ ಭೂಮಿಯನ್ನು ಭರ್ತಿ ಮಾಡಿರಿ ; ನೀವೂ ಮತ್ತು ನಿಮ್ಮ ವಂಶೀಕರಾದ ಸಂತತಿಯು ಈ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡು ಸಮುದ್ರದೊಳಗಿರುವ ಮೀನುಗಳ ಮೇಲೆಯೂ, ಆಕಾಶದಲ್ಲಿರುವ ಪಕ್ಷಿಗಳ ಮೇಲೆಯೂ ಮತ್ತು ಭೂಮಿಯ ಮೇಲೆ ವಾಸಮಾಡುವ ಅಂದರೆ ಓಡಾಡುವ ಎಲ್ಲಾ ಪ್ರಾಣಿಗಳ ಮೇಲೆಯೂ ನಿಮ್ಮ ಅಧಿಕಾರವನ್ನು ಚಲಾಯಿಸಿ" ಎಂದು ಪ್ರೀತಿಯಿಂದ ಆಶೀರ್ವಾದ ಮಾಡಿದನು. ಆದರೆ ಭಗವಂತನ ಪವಿತ್ರ ಉದ್ದೇಶವು ಪರಿಪೂರ್ತಿಯಾಗಲಿಲ್ಲ ; ಏಕೆಂದರೆ ಆದಮ್ ಮತ್ತು ಈವ್ ಎಂಬ ಪ್ರಥಮ ದಂಪತಿಗಳ ಮನಸ್ಸನ್ನು ದುಷ್ಟಸೈತಾನನು(Satan) ಆಕರ್ಷಿಸಿದನು. ಮತ್ತು ಅವರನ್ನು ಭಗವಂತನ ಆಜ್ಞೆಗೆ ವಿರೋಧವಾಗಿ ಪಾಪಕಾರ್ಯವನ್ನು ಮಾಡುವ ಹಾಗೆ ಪ್ರೇರೇಪಿಸಿದನು. ಅಂದಿನಿಂದ, ಅವರು ತಮ್ಮನ್ನು ಸೃಷ್ಟಿಸಿದ ಭಗವಂತನನ್ನು ಮರೆತರು ; ಭಗವಂತನ ಆಜ್ಞೆಗಳಿಗೆ ವಿರೋಧವಾದ ಕಾರ್ಯಗಳನ್ನು ಮಾಡಿದರು ಮತ್ತು ದುಷ್ಟಸೈತಾನನಿಗೆ ಭಗವಂತನಿಗಿಂತ ಹೆಚ್ಚಾಗಿ ಗೌರವವನ್ನು ಕೊಟ್ಟರು. ಇಲ್ಲಿಂದಲೇ ಭೂಮಿಯಲ್ಲಿ ಪಾಪವು ಆರಂಭವಾಯಿತು ; ಅಲ್ಲಿಂದ ಇಲ್ಲಿಯವರೆಗೆ ಮಾನವರ ಪ್ರತ್ಯೇಕವಾಗಿ ಅನೇಕ ಸಂತತಿಕರವಾದ ಕೋಟ್ಯಾಂತರ ಮಾನವರಲ್ಲಿ ಪಾಪಕಾರ್ಯಗಳು ಅನಂತವಾಗಿ ಬೆಳೆಯುತ್ತಿವೆ. ದುಷ್ಟಸೈತಾನನು ಅನೇಕ ಅನ್ಯಾಯಗಳಿಂದ ಅವರ ಮನಸ್ಸುಗಳನ್ನು ಸಂಪೂರ್ಣವಾಗಿ ಆಕರ್ಷಿಸುವನು. ಮನುಷ್ಯರು ಪಾಪಕಾರ್ಯಗಳನ್ನು ಮಾಡುತ್ತಿರುವುದರ ಫಲವಾಗಿ ಈ ಭೂಮಿಯಲ್ಲಿ ಎಲ್ಲೆಲ್ಲಿಯೂ ಬಡತನ, ರೋಗ, ಕಲಹ, ಯುದ್ಧ, ಸಾವು, ನೋವು, ಸಂಕಟ, ಹಸಿವು ಮೊದಲಾದ ಅನೇಕ ದುಃಖಗಳನ್ನು ಮಾನವರು ಅನುಭವಿಸುತ್ತಿರುವರು. ಆದುದರಿಂದಲೇ ಪರಮಪ್ರೀತಿಯುಳ್ಳ ಮತ್ತು ವಿಶೇಷ ಜ್ಞಾನಿಯಾದ ಭಗವಂತನು ಪಶ್ಚಾತ್ತಾಪದೊಡನೆ ಸೇರಿ ಮನುಷ್ಯನು ಪಡೆದಿರುವ ಕರ್ತೃತ್ವ ಸ್ವಾತಂತ್ರ್ಯಕ್ಕೆ ವಿರೋಧವಿಲ್ಲದ ಹಾಗೆ ಪಾಪಿಗಳನ್ನು ಪಾಪಗಳನ್ನು ಭೂಮಿಯಿಂದ ತೊಲಗಿಸುವ ಪ್ರಯತ್ನಗಳನ್ನು ಮಾಡುತ್ತಿರುವನು.

ಶಿಷ್ಯ :—ಕ್ರೈಸ್ತಧರ್ಮದ ಪ್ರಕಾರ ಆತ್ಮವೆಂದರೇನು ?

ಗುರು :—"ಸೃಷ್ಟಿಕರ್ತನಾದ ಭಗವಂತನು ಭೂಮಿಯ ಧೂಳಿನಿಂದ ಮನುಷ್ಯ ಶರೀರವನ್ನು ಮಾಡಿದನು ; ಆಮೇಲೆ ಜೀವದ ಉಸಿರನ್ನು ಅವನ ಮೂಗಿನ ಹೊಳ್ಳೆಯೊಳಗೆ ಗಾಳಿಯೂದಿದನು." "ಇದೋ! ಎಲ್ಲಾ ಆತ್ಮಗಳೂ ನನ್ನವು ; ತಂದೆಯ ಆತ್ಮದ ಹಾಗೆ ಮಗನ ಆತ್ಮವೂ ನನ್ನದೇ" ಎಂದು ಋಷಿಯೊಬ್ಬರು ಹೇಳಿರುವುದರಿಂದ ಮನುಷ್ಯನೊಳಗೆ ಇರುತ್ತಿರುವ ಜ್ಞಾನಸ್ವಭಾವವಾದ ಆತ್ಮವು ದೇಹದಿಂದ ಹೊರಟುಹೋದಾಗ ಅದರ ಶರೀರವನ್ನು

ಪ್ರವೇಶಿಸುತ್ತದೆ ಮತ್ತು ಶರೀರವು ಆತ್ಮದ ಕರ್ಮಕ್ಕೆ ಸಹಾಯ ಮಾಡುವ ಉಪಕರಣ ಎಂಬ ವಾದವನ್ನು ಕ್ರೈಸ್ತಧರ್ಮದಲ್ಲಿ ಒಪ್ಪುವುದಿಲ್ಲ. ಜೀವವಿಲ್ಲದ ಮನುಷ್ಯ ಶರೀರದಲ್ಲಿ ಭಗವಂತನ ದಿವ್ಯಶಕ್ತಿಯಿಂದುಂಟಾದ ಜೀವದ ಉಸಿರು ಸೇರಿದರೆ ಆಗ ಆತ್ಮತ್ವದಿಂದ ಕೂಡಿದ ಮನುಷ್ಯನು ಉಂಟಾಗುತ್ತಾನೆ. ಈ ಜೀವದ ಉಸಿರು ಎಲ್ಲಾ ಪ್ರಾಣಿಗಳಲ್ಲಿಯೂ ಒಂದೇ ಆಗಿದೆ; ಅದು ಭಗವಂತನಿಂದ ಕೊಡಲ್ಪಟ್ಟಿದೆ ಮತ್ತು ಶಕ್ತಿಯಿಂದ ಕೂಡಿದೆ. ಆದರೆ ಇದಕ್ಕೆ ಜ್ಞಾನವಿಲ್ಲ; ಜೀವವನ್ನು ಮಾತ್ರ ಕೊಡುತ್ತದೆ. ಯೋಗ್ಯತೆಯನ್ನು ಪಡೆದಿರುವ ಮಾನವ ಶರೀರಗಳಲ್ಲಿ ಮಾತ್ರ ಜ್ಞಾನಶಕ್ತಿಯನ್ನು ಕರ್ತೃತ್ವ ಸ್ವಾತಂತ್ರ್ಯವನ್ನು ಬೆಳೆಸುತ್ತದೆ. ಮನುಷ್ಯನಿಗೆ ಶರೀರ, ಜೀವ, ಬುದ್ಧಿ, ಉದ್ವೇಗ ಭಾವ ಇವೆಲ್ಲವೂ ಒಟ್ಟಾಗಿ ಸೇರಿರುವಾಗ ಅವನು ಆತ್ಮನೆನಿಸಿಕೊಳ್ಳುತ್ತಾನೆ. ಮನುಷ್ಯನು ಜೀವಿಸಿರುವ ಆತ್ಮನೇ; ಹೊರತು ಮನುಷ್ಯನೊಳಗೆ ಆತ್ಮನಿಲ್ಲ; ಸಂಪೂರ್ಣ ವ್ಯಕ್ತಿತ್ವದ ಹೊರತು ಬೇರೆ ಆತ್ಮವಿಲ್ಲ.

**ಶಿಷ್ಯ :**—ಮನುಷ್ಯನ ಕಾಲವಾದ ಮೇಲೆ ಆತ್ಮದ ಗತಿಯೇನು ?

**ಗುರು :**—"ಆವಾಗ (ಅಂದರೆ ಮರಣವಾದಾಗ) ಧೂಳು ಮುಂಚಿನ ಹಾಗೆ ಭೂಮಿಯನ್ನು ಸೇರುತ್ತದೆ; ಜೀವದ ಉಸಿರು ಅದನ್ನು ಕೊಟ್ಟ ದೇವರನ್ನು ಸೇರುತ್ತದೆ." "ಉಸಿರು ಹೊರಟುಹೋಗುತ್ತದೆ; ಅವನು ಭೂಮಿಯನ್ನು ಸೇರುತ್ತಾನೆ; ಆ ದಿವಸವೇ ಅವನ ಆಲೋಚನೆಗಳೆಲ್ಲವೂ ನಾಶವಾಗುತ್ತವೆ." "ಜೀವಿಸಿರುವವರಿಗೆ ತಾವು ಸಾಯುತ್ತೇವೆಂದು ಗೊತ್ತಿದೆ; ಆದರೆ ಸತ್ತುಹೋದವರಿಗೆ ಏನೂ ಗೊತ್ತಿರುವುದಿಲ್ಲ." "ಶರೀರವನ್ನು ಕೊಲ್ಲುವವರಿಗೆ ವಿಶೇಷವಾಗಿ ಹೆದರಬೇಡ; ಏಕೆಂದರೆ ಅವರು ಆತ್ಮವನ್ನು ಕೊಲ್ಲಲಾರರು. ಆದರೆ ಯಾವನು (ಭಗವಂತನು) ಆತ್ಮ ಮತ್ತು ಶರೀರ ಎರಡನ್ನೂ ಕೊಲ್ಲಲು ಶಕ್ತನಾಗಿರುವನೋ ಅವನಿಗೆ ಹೆದರುವವನಾಗು." "ಭೂಮಿಯ ಧೂಳಿನಲ್ಲಿ ಮಲಗಿರುವವರಲ್ಲಿ ಅನೇಕರು ಪುನಃ ಎಚ್ಚರವನ್ನು ಪಡೆಯುವರು; ಅವರಲ್ಲಿ ಕೆಲವರು ಶಾಶ್ವತವಾದ ಜೀವನವನ್ನೂ ಇನ್ನು ಕೆಲವರು ಎಂದೆಂದಿಗೂ ಇರುವ ಅವಮಾನವನ್ನೂ ತಿರಸ್ಕಾರವನ್ನೂ ಪಡೆಯುವರು." ಎಂಬ ಉಪದೇಶಗಳಿವೆ. ಮನುಷ್ಯನು ಕಾಲವಾದ ಮೇಲೆ ಅವನ ಗತಿಯೇನು ? ಅವನ ಶರೀರವು ಧೂಳಾದ ಭೂಮಿಯನ್ನು ಸೇರುತ್ತದೆ; ಅವನ ಜೀವದ ಉಸಿರು ಭಗವಂತನನ್ನು ಸೇರುತ್ತದೆ. ಆದುದರಿಂದ ಕಾಲವಾದ ಮನುಷ್ಯರುಗಳೆಲ್ಲರೂ ಜ್ಞಾನಶೂನ್ಯವಾದ ಕನಸಿಲ್ಲದ ಗಾಢ ನಿದ್ರೆಯಲ್ಲಿ ಕೊನೆಯ ನಿರ್ಣಯದ ದಿವಸದವರೆಗೂ ಮಲಗಿರುವರು. ಅಂದರೇನು, ಮರಣವಾದ ಒಡನೆಯೇ ಒಳ್ಳೆಯವನ ಆತ್ಮವು ಸ್ವರ್ಗಕ್ಕೆ ಹೋಗಿ ಸುಖಪಡುವುದಿಲ್ಲ. ಮತ್ತು ಪಾಪಿಯ ಆತ್ಮವು ನರಕದಲ್ಲಿ ಯಾತನೆಗಳನ್ನು ಅನುಭವಿಸುವುದಿಲ್ಲ. ಕ್ರೈಸ್ತ

ಧರ್ಮವು ಜ್ಞಾನಶಕ್ತಿಯಿಂದ ಕೂಡಿದ ಶಾಶ್ವತವಾದ ಆತ್ಮವು ಮರಣವಾದ ಮೇಲೆಯೂ ಸ್ವರ್ಗನರಕ ಲೋಕಗಳಲ್ಲಿದ್ದು ಪುನಃ ಭೂಮಿಯಲ್ಲಿ ಪುನರ್ಜನ್ಮಗಳನ್ನು ಪಡೆಯುತ್ತದೆ ಎಂಬ ವಾದವನ್ನು ಒಪ್ಪುವುದಿಲ್ಲ. ಆದರೆ ಕೊನೆಯ ವಿಚಾರಣೆ ಮತ್ತು ತೀರ್ಮಾನ ಕಾಲದಲ್ಲಿ ಭಗವಂತನು ಏಸುಕ್ರಿಸ್ತರ ಮತ್ತು ಅನೇಕ ದೇವ ದೂತರ ಸಹಾಯದಿಂದ ಪ್ರತಿಯೊಬ್ಬ ಮಾನವನು ಜೀವಿಸಿದ್ದ ಕಾಲದಲ್ಲಿ ಮಾಡಿದ್ದ ಧರ್ಮಕಾರ್ಯಗಳನ್ನೂ ಪಾಪಕಾರ್ಯಗಳನ್ನೂ ವಿಮರ್ಶಿಸಿ ತುಲನೆ ಮಾಡುವನು. ಒಡನೆಯೇ, ಆದಿಕಾಲದಿಂದ ಕೊನೆಯ ಕಾಲದವರೆಗೆ ಮರಣವನ್ನು ಪಡೆದ ಎಲ್ಲ ಮನುಷ್ಯರೂ ದೀರ್ಘನಿದ್ರೆಯಿಂದ ಎದ್ದು ಪುನಃ ಜೀವಂತರಾಗಿ ತಮ್ಮ ಭವಿಷ್ಯವನ್ನು ಕಾತುರತೆಯಿಂದ ಎದುರುನೋಡುತ್ತಿರುವರು. ಸತ್ಯವಂತರೂ ಧರ್ಮಿಷ್ಠರೂ ಮತ್ತು ಅನುತಾಪದಿಂದ ಏಸುಕ್ರಿಸ್ತರ ಮೂಲಕ ಭಗವಂತನನ್ನು ಶರಣುಹೊಂದಿದ ಪಾಪಿಗಳೂ ಇವರೆಲ್ಲರೂ ಭೂಸ್ವರ್ಗವನ್ನು ಪಡೆವರು; ಅಲ್ಲಿ ಅವರು ಭಗವಂತನ ದಯೆಯಿಂದ ಅಮರತ್ವವನ್ನು ಪಡೆದು ಶಾಶ್ವತವಾಗಿ ದುಃಖವಿಲ್ಲದ ಅನೇಕ ಸಂತೋಷಗಳನ್ನು ಸ್ವಾಮಿಗೆ ವಿಧೇಯರಾಗಿ ಅವನಲ್ಲಿ ಭಕ್ತಿಯಿಂದ ಕೂಡಿದವರಾಗಿ ಅನುಭವಿಸುವರು. ತಮ್ಮ ಜೀವಿತ ಕಾಲದಲ್ಲಿ ಭಗವಂತನನ್ನೂ ಏಸುಕ್ರಿಸ್ತರನ್ನೂ ಆಶ್ರಯಿಸದ ಪಾತಕಿಗಳನ್ನು ಭೂನರಕಕ್ಕೆ ಕಳುಹಿಸಿ ಭಗವಂತನು ದಯೆಯಿಂದ ಅವರು ನೊಂದು ಪಾಪಮಾಡದ ಹಾಗೆ ಅಲ್ಲಿ ಅವರ ಶರೀರವನ್ನೂ ಆತ್ಮವನ್ನೂ ಅಥವ ಜೀವದ ಉಸಿರನ್ನೂ ಮಹಾ ಅಗ್ನಿ ಜ್ವಾಲೆಯಲ್ಲಿ ಭಸ್ಮಮಾಡಿ ನಾಶಮಾಡುವನು; ಅಂದರೇನು, ಅವರು ಹುಟ್ಟುವುದಕ್ಕೆ ಮುಂಚೆ ಇಲ್ಲದಿದ್ದ ಹಾಗೆ ಪುನಃ ಮುಂದೆಯೂ ಇಲ್ಲದ ಹಾಗೆ ಮಾಡುವನು. ಆದುದರಿಂದ ಪಾಪಿಷ್ಠರಿಗೆ ಎರಡು ಸಾವಿದೆ; ಸಾಧಾರಣ ಶರೀರದ ಸಾವು ಮೊದಲನೆಯದು ಮತ್ತು ಕೊನೆಯ ತೀರ್ಮಾನವಾದ ಮೇಲೆ ಶರೀರಾತ್ಮಗಳ ಸಂಪೂರ್ಣ ನಾಶ ಎರಡನೆಯದು. ಧರ್ಮಿಷ್ಠರಿಗೆ ಮತ್ತು ಭಗವಂತನ ದಯೆಯಿಂದ ಕ್ಷಮಿಸಲ್ಪಟ್ಟ ಪಾಪಿಗಳಿಗೆ ಮೊದಲನೆಯ ಶರೀರದ ಸಾವು ಮಾತ್ರ; ಕೊನೆಯ ತೀರ್ಮಾನವಾದ ಮೇಲೆ ಸ್ವರ್ಗದಲ್ಲಿ ಅಮರತ್ವ. ಕಾಲವಾದ ಮೇಲೆ ದೀರ್ಘ ನಿದ್ರೆಯುಂಟಾಗುವುದು ಧರ್ಮಿಷ್ಠರಿಗೂ ಪಾಪಿಗಳಿಗೂ ಸಮನಾಗಿದೆ.

**ಶಿಷ್ಯ :**—ಕ್ರೈಸ್ತಧರ್ಮವು ಅಂಗೀಕರಿಸಿರುವ ಮೂಲ ನೀತಿ ತತ್ವಗಳಾವುವು ?

**ಗುರು :**—ಮನುಷ್ಯನು ತನ್ನ ಸ್ವಭಾವ, ಶೀಲ, ನಡತೆ ಅಥವ ನೀತಿ ಬಲವನ್ನು ಉತ್ತಮವಾಗಿ ಅಭಿವೃದ್ಧಿಪಡಿಸುವುದಕ್ಕೂ ಮತ್ತು ಅವನ್ನು ಹೀನವಾಗಿ ಕೆಳದರ್ಜೆಗೆ ಇಳಿಸುವುದಕ್ಕೂ ವ್ಯಕ್ತಿಸ್ವಾತಂತ್ರ್ಯ ಅಥವ ಮನುಷ್ಯನ ಸ್ವಾತಂತ್ರ್ಯವನ್ನು ಪಡೆದಿರುವನು; ಈ ಆತ್ಮ ಸ್ವಾತಂತ್ರ್ಯವನ್ನು ಭಗವಂತನು ಅವನನ್ನು

ಸೃಷ್ಟಿಸುವಾಗಲೇ ದಯಪಾಲಿಸಿರುವನು. ಈ ಸ್ವಸ್ತಿ ಸ್ವಾತಂತ್ರ್ಯವನ್ನು ಭಗವಂತನ ಆಜ್ಞೆಗಳಿಗೆ ಅನುಗುಣವಾಗಿ ಉಪಯೋಗಿಸಿದರೆ ಅದು ಧರ್ಮಕಾರ್ಯವೆನ್ನಿಸಿಕೊಳ್ಳುತ್ತದೆ; ಹಾಗಲ್ಲದೆ ದುಷ್ಟಸೈತಾನನ ಪ್ರೇರಣೆಗನುಗುಣವಾಗಿ ಮನಸ್ಸನ್ನು ಉಪಯೋಗಿಸಿದರೆ ಅದು ಪಾಪ ಕಾರ್ಯವೆನ್ನಿಸಿಕೊಳ್ಳುತ್ತದೆ. ಭಗವಂತನು ಸೃಷ್ಟಿಸಿರುವ ಭೂಮಿಯಲ್ಲಿ ಒಂದು ನಿಯಮ ಅಥವ ಪಾರಮಾರ್ಥಿಕವಾದ ಕಟ್ಟಳೆಯಿರುವುದು; ಇದು ಅತಿ ಸಣ್ಣದಾದ ಜಂತುವಿನೊಳಗಿನ ಚಲನೆಗಳಲ್ಲಿಯೂ ಮತ್ತು ಅತಿ ಮಹತ್ತಾದ ನಕ್ಷತ್ರಾದಿಗಳ ಚಲನೆಗಳಲ್ಲಿಯೂ ಕಂಡುಬರುವುದು. ಹಾಗೆಯೇ ಮನುಷ್ಯನ ಮನಸ್ಸಿನ ವ್ಯಾಪಾರಗಳಲ್ಲಿಯೂ ಮತ್ತು ಮನುಷ್ಯ ಮನುಷ್ಯರ ಸಂಬಂಧದಲ್ಲಿಯೂ ಅದೇ ಭಗವಂತನ ಪಾರಮಾರ್ಥಿಕ ಕಟ್ಟಳೆಯು ಇದೆ! ಇದರೇಕೆ. ಈ ಪವಿತ್ರ ಕಟ್ಟಳೆಗಳನ್ನು ತಿಳಿದು ಅವರಂತೆ ನಡೆಯುವುದೇ ಧರ್ಮ; ಅದಕ್ಕೆ ವಿರೋಧವಾಗಿ ನಡೆಯುವುದೇ ಪಾಪ. ಯೇಸುಕ್ರಿಸ್ತರು ಭೂಮಿಯಲ್ಲಿ ಅವತಾರ ಮಾಡಿದಾಗ ಪವಿತ್ರತೆ, ಪ್ರೇಮ, ದಯೆ ಮೊದಲಾದ ಅನೇಕ ಭಗವಂತನ ಗುಣಗಳನ್ನು ತಮ್ಮ ಜೀವನದಲ್ಲಿ ಆಚರಿಸಿ ತೋರಿಸಿದರು. ಭಗವಂತನ ಪ್ರತಿರೂಪದಲ್ಲೇ ಸೃಷ್ಟಿಸಲ್ಪಟ್ಟಿರುವ ಮಾನವರೂ ಕೂಡ ಯೇಸುಕ್ರಿಸ್ತರ ಉತ್ತಮ ಗುಣಗಳನ್ನು ಅದಷ್ಟು ಮಟ್ಟಿಗೆ ನಿತ್ಯ ಜೀವನದಲ್ಲಿ ಅಭ್ಯಾಸಕ್ಕೆ ತರಬೇಕು. ಮನುಷ್ಯರೂ ಕೂಡ ಭಗವಂತನು ಮತ್ತು ಯೇಸುಕ್ರಿಸ್ತರೂ ತೋರಿಸುತ್ತಿರುವ ಪ್ರೇಮವನ್ನು ಅಥವ ದಯೆಯನ್ನು ಭಗವಂತನ ಮಕ್ಕಳಾದ ಮಿಕ್ಕ ಮಾನವರಲ್ಲಿ ಅಂದರೆ ಬಂಧುಗಳಲ್ಲಿ, ಸ್ನೇಹಿತರಲ್ಲಿ, ನೆರೆಹೊರೆಯವರಲ್ಲಿ, ಬಡವರಲ್ಲಿ, ರೋಗದವರಲ್ಲಿ, ಒಟ್ಟು ಯಾವ ಜಾತಿಗೆ ಸೇರಿದವರಲ್ಲಿ ತೋರಿಸಬೇಕು ಮತ್ತು ಭಗವಂತನ ಸೇವೆಯೆಂಬ ಭಾವನೆಯಿಂದ ಅವರ ಸೇವೆ ಮಾಡಬೇಕು. ಇದರ ಮೇಲೆ ದುಷ್ಟಸೈತಾನನ ಕಾಟದಿಂದ ಬಿಡುಗಡೆ ಹೊಂದಿ ಪಾಪವಾಸನೆಗಳನ್ನು ನಾಶಮಾಡುವುದಕ್ಕಾಗಿ ಯೇಸುಕ್ರಿಸ್ತರನ್ನು ನಂಬಿಯೂ ಭಗವಂತನನ್ನು ಭಕ್ತಿ ಪ್ರೇಮದಲ್ಲಿ ಉತ್ತಮವಾಗಿ ಪ್ರಾರ್ಥನೆ ಮಾಡುತ್ತಲೇ ಇರಬೇಕು.

**ಶಿಷ್ಯ :**— ಭಗವಂತನು ಉಪದೇಶ ಮಾಡಿರುವ ಹತ್ತು ಆಜ್ಞೆಗಳಾವುವು?

**ಗುರು :**— ಸಿನಾಯ್ ಬೆಟ್ಟದ ಮೇಲೆ ದೈವಜ್ಞ ಮೋಸೆಸನ ಜೊತೆಯಲ್ಲಿ ಸೇರಿದ್ದ ಅವನಿಗೆ ಭಗವಂತನೇ ಪ್ರತ್ಯಕ್ಷವಾಗಿ ಈ ಹತ್ತು ಆಜ್ಞೆಗಳನ್ನು ಬೋಧಿಸಿ ಎರಡು ಕಲ್ಲು ಹಲಗೆಗಳ ಮೇಲೆ ಬರೆದನೆಂದು ಪ್ರತೀತಿ ಇದೆ. ಕೆಳಗಿನ ಹತ್ತು ಆಜ್ಞೆಗಳು ಭಗವಂತನ ಒಂದೇ ಕಟ್ಟಳೆಯ ಹತ್ತು ಭಾಗಗಳೆಂದು ತಿಳಿಯಬೇಕು. ಆದುದರಿಂದ ಇವೆಲ್ಲವನ್ನೂ ಒಟ್ಟಾಗಿಯೇ ಆಚರಿಸಬೇಕೇ ವಿನಹ ಒಂದನ್ನು ಬಿಡಕೂಡದು. (1) ನೀನು ಭಗವಂತನಾದ ನನ್ನನ್ನು ಬಿಟ್ಟಲ್ಲದೆ ಬೇರೆ ಯಾವ ದೇವರನ್ನೂ ಇಟ್ಟುಕೊಳ್ಳಕೂಡದು. (2) ಮೇಲೆ ಇರುವ ಆಕಾಶದಲ್ಲೂ, ಕೆಳಗಿ

ರೂಪ ಭೂಮಿಯಲ್ಲಿಯೂ, ಅಥವಾ ಭೂಮಿಯ ಕೆಳಗಿರುವ ನೀರಿನಲ್ಲಿಯೂ ಇರುವ ಯಾವ ಪದಾರ್ಥದ ರೂಪಕ್ಕೆ ಅನುಗುಣವಾದ ಒಂದು ವಿಗ್ರಹ ಅಥವಾ ಮೂರ್ತಿಯನ್ನು ಕೆತ್ತಿ ಅದಕ್ಕೆ ತಲೆ ಬಗ್ಗಿಸಿ ನಮಸ್ಕಾರ ಮಾಡಬೇಡ ಮತ್ತು ಅದಕ್ಕೆ ಸೇವೆ ಮಾಡಬೇಡ. (3) ನಿನ್ನ ಸ್ವಾಮಿಯಾದ ಭಗವಂತನ ಹೆಸರನ್ನು ವ್ಯರ್ಥವಾಗಿ ಉಪಯೋಗಿಸಬೇಡ. (4) ವಾರದ ಏಳನೇ ದಿವಸವಾದ ವಿಶ್ರಾಂತಿ ದಿನವನ್ನು ಜ್ಞಾಪಕದಲ್ಲಿಟ್ಟುಕೊ; ಅದನ್ನು ಶುದ್ಧವಾಗಿಟ್ಟುಕೊ. ಆರು ದಿವಸಗಳು ನೀನು ಶ್ರಮಿಸು ಮತ್ತು ನಿನ್ನ ಕೆಲಸಗಳನ್ನು ಮಾಡು; ಆದರೆ ನಿನ್ನ ಸ್ವಾಮಿಯಾದ ಭಗವಂತನ ಏಳನೇ ದಿವಸದಲ್ಲಿ ಮಾತ್ರ ಯಾವ ಕೆಲಸವನ್ನು ಮಾಡಬೇಡ. (5) ನಿನ್ನ ತಂದೆಯನ್ನು ಮತ್ತು ನಿನ್ನ ತಾಯಿಯನ್ನು ಗೌರವಿಸು. ಅಥವಾ ಅವರಿಗೆ ಪ್ರೀತಿ ಮರ್ಯಾದೆಯನ್ನು ತೋರಿಸು. (6) ನೀನು ಕೊಲ್ಲಕೂಡದು. (7) ನೀನು ವ್ಯಭಿಚಾರ ಅಥವಾ ಹಾದರ ಮಾಡಕೂಡದು. (8) ನೀನು ಕದಿಯಕೂಡದು. (9) ನಿನ್ನ ಪಕ್ಕದ ಮನೆಯವನ ಮೇಲೆ ಸುಳ್ಳು ಸಾಕ್ಷಿ ಹೇಳುವ ಪಾತ್ರವಹಿಸಬೇಡ. (10) ನಿನ್ನ ನೆರೆಹೊರೆಯವನ ಮನೆಗೆ, ಹೆಂಡತಿಗೆ, ಗಂಡಸು ಆಳಿಗೆ, ಹೆಂಗಸು ಆಳಿಗೆ, ಎತ್ತಿಗೆ, ಕತ್ತೆಗೆ ಅಥವ ಅವನಿಗೆ ಸೇರಿದ ಯಾವ ಪದಾರ್ಥಕ್ಕೇ ಆಗಲಿ ಮೋಹಿಸಿ ಪಡಬೇಡ.

ಶಿಷ್ಯ :— ಯೇಸುಕ್ರಿಸ್ತರು ಬೆಟ್ಟದ ಮೇಲೂ ಇತರ ಕಡೆಗಳಲ್ಲೂ ಬೋಧಿಸಿದ ಉತ್ತಮ ನೀತಿಗಳಾವುವು ?

ಗುರು :— ಈ ನೀತಿಗಳು ಮನುಷ್ಯ ಸಮಾಜದಲ್ಲಿ ಐಕಮತ್ಯವನ್ನುಂಟು ಮಾಡುತ್ತವೆ, ಸಮಾಜವನ್ನು ಉತ್ಕೃಷ್ಟವಾದ ಸ್ಥಿತಿಗೆ ತರುತ್ತವೆ ಮತ್ತು ಇವುಗಳನ್ನು ಎಲ್ಲರೂ ಅನುಸರಿಸಿದರೆ ಭೂಮಿಯಲ್ಲಿ ಭಗವಂತನ ರಾಜ್ಯವೇ ಸ್ಥಾಪಿಸಲ್ಪಡುತ್ತದೆ. (1) "ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ದ್ವೇಷಿಸುವವರಿಗೆ ಉಪಕಾರ ಮಾಡಿರಿ; ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದ ಮಾಡಿರಿ; ನಿಮ್ಮನ್ನು ಬೈಯುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ನಿನ್ನ ಒಂದು ಕೆನ್ನೆಯ ಮೇಲೆ ಹೊಡೆದವನಿಗೆ ಇನ್ನೊಂದು ಕೆನ್ನೆಯನ್ನು ತೋರಿಸು; ನಿನ್ನ ಮೇಲಂಗಿಯನ್ನು ಬಲಾತ್ಕಾರದಿಂದ ತೆಗೆದುಕೊಳ್ಳುವವನಿಗೆ ಒಳಗಿನ ಅಂಗಿಯನ್ನು ನೀನಾಗಿಯೇ ಕೊಡು. ನಿನ್ನ ಸ್ವತ್ತನ್ನು ಅಪಹರಿಸಿಕೊಳ್ಳುವವನಿಗೆ ಅದನ್ನು ಹಿಂದಕ್ಕೆ ಕೊಡಬೇಕೆಂದು ಕೇಳಬೇಡ ಮತ್ತು ನಿನ್ನನ್ನು ಬೇಡುವವರೆಲ್ಲರಿಗೂ ಕೊಡು. ಜನರು ನಿಮಗೆ ಏನೇನು ಮಾಡಬೇಕೆಂದು ನೀವು ಅಪೇಕ್ಷಿಸುತ್ತೀರೋ, ಅವುಗಳನ್ನೇ ನೀವು ಅವರಿಗೆ ಮಾಡಿರಿ. ಭಗವಂತನಾದ ನಿಮ್ಮ ತಂದೆಯು ಕರುಣೆವುಳ್ಳವನಾಗಿರುವಂತೆಯೇ ನೀವೂ ಕರುಣೆವುಳ್ಳವರಾಗಿರಿ." (2) "ಬಡವರಾದ ನೀವು ಧನ್ಯರು; ದೇವರ ರಾಜ್ಯವು ನಿಮ್ಮದೇ. ಈಗ ಹಸಿದಿರುವವರಾದ ನೀವು ಧನ್ಯರು.

ನೀವು ತೃಪ್ತಿಹೊಂದುವಿರಿ. ಈಗ ಅಳುವವರಾದ ನೀವು ಧನ್ಯರು; ನೀವು ನಗುವಿರಿ. ಮನುಷ್ಯಕುಮಾರನ ನಿಮಿತ್ತವಾಗಿ ಜನರು ನಿಮಗೆ ಹಗೆಮಾಡಿ ನಿಮಗೆ ಬಹಿಷ್ಕಾರ ಹಾಕಿ ನಿಂದಿಸಿದರೆ ನೀವು ಧನ್ಯರು; ಆ ದಿನದಲ್ಲಿ ಸಂತೋಷಪಡಿರಿ, ಕುಣಿದಾಡಿರಿ, ಪರಲೋಕದಲ್ಲಿ ಬಹಳ ಫಲವು ಸಿಕ್ಕುವುದು ಎಂದು ತಿಳಿದುಕೊಳ್ಳಿರಿ. ಸಮ್ಮತಿಯಿಂದ ಕೂಡಿರುವವರು ಧನ್ಯರು; ಅವರು ಭೂಮಿಯನ್ನೇ ಬಾಧ್ಯರಾಗಿ ಪಡೆಯುವರು, ಅಹಂಕಾರವಿಲ್ಲದವರು ಧನ್ಯರು; ಅವರಿಗೆ ಸ್ವರ್ಗವು ಸಿಕ್ಕುತ್ತದೆ. ಹೃದಯ ಶುದ್ಧಿಯುಳ್ಳವರು ಧನ್ಯರು; ಅವರು ದೇವರನ್ನು ನೋಡುತ್ತಾರೆ. ಐಶ್ವರ್ಯವಂತರೇ! ಕಾಲಾನುಕಾಲದಲ್ಲಿ ನೀವು ಬಡವರಾಗುವಿರಿ! ಹೊಟ್ಟೆ ತುಂಬಿದವರೇ, ನೀವು ಹಸಿಯುವಿರಿ! ಈಗ ನಗುವವರೇ, ನೀವು ದುಃಖಪಟ್ಟು ಅಳುವಿರಿ! ಜನರೆಲ್ಲಾ ನಿಮ್ಮನ್ನು ಹೊಗಳಿದರೆ ನಿಮ್ಮ ಗತಿ ಏನು ಹೇಳಲಿ; ಅವರು ಸುಳ್ಳು ಹೇಳುತ್ತಾರೆ. ದಯೆಯನ್ನು ತೋರಿಸುವವರು ಧನ್ಯರು; ಅವರು ದಯೆಯನ್ನು ಪಡೆಯುವರು. ಕಲಹಗಳನ್ನು ತಪ್ಪಿಸಿ ಶಾಂತಿಯನ್ನುಂಟುಮಾಡುವವರು ಧನ್ಯರು; ಅವರು ದೇವರ ಪುತ್ರರೆಂದು ಕರೆಸಿಕೊಳ್ಳುತ್ತಾರೆ." (3) "ತೀರ್ಪು ಮಾಡಬೇಡಿರಿ; ಅಪರಾಧಿಯೆಂದು ನಿರ್ಣಯಿಸಬೇಡಿರಿ. ಬಿಡಿಸಿರಿ; ಆಗ ನಿಮ್ಮನ್ನು ಬಿಡಿಸುವರು. ಕೊಡಿರಿ; ಆಗ ನಿಮಗೂ ಕೊಡುವರು. ನೀವು ಅಳೆಯುವ ಅಳತೆಯಿಂದಲೇ ನಿಮ್ಮನ್ನೂ ಅಳೆಯುವರು. ನೀನು ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಮೊದಲು ತೆಗೆದುಹಾಕು; ಅನಂತರ ನಿನ್ನ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ತೆಗೆದುಹಾಕುವ ಯೋಚನೆ ಮಾಡುವವನಾಗು." (4) "ಸ್ವರ್ಗದ ರಾಜ್ಯವು ನಿಮ್ಮ ಹೃದಯದಲ್ಲಿಯೇ ಇರುವುದು; ಬೇಡಿಕೊಳ್ಳಿರಿ, ನಿಮಗೆ ದೊರೆಯುವುದು; ಹುಡುಕಿರಿ, ನಿಮಗೆ ಸಿಕ್ಕುವುದು; ತಟ್ಟಿರಿ, ನಿಮಗೆ ತೆರೆಯುವುದು. ದೀಪವನ್ನು ಮನೆಯ ದೀಪಸ್ತಂಭದ ಮೇಲೆ ಇಟ್ಟು ಮನೆಯೆಲ್ಲಾ ಬೆಳಕಾಗುವಂತೆ ಮಾಡುತ್ತೀರಲ್ಲವೆ; ಹಾಗೆಯೇ ನಿನ್ನ ದೇಹದ ಜ್ಞಾನದ ಕಣ್ಣುಗಳನ್ನು ನಿನ್ನ ದೇಹಕ್ಕೆಲ್ಲ ಬೆಳಕಾಗುವಂತೆ ಉಪಯೋಗಿಸು; ಅವನ್ನು ದೇಹಕ್ಕೆ ಕತ್ತಲೆಯನ್ನುಂಟುಮಾಡುವ ಹಾಗೆ ಉಪಯೋಗಿಸಬೇಡ. ಒಳ್ಳೆಯವನು ಹೃದಯವೆಂಬ ಬೊಕ್ಕಸದಿಂದ ಒಳ್ಳೆಯದನ್ನು ತರುತ್ತಾನೆ; ಕೆಟ್ಟವನು ಕೆಟ್ಟ ಬೊಕ್ಕಸದೊಳಗಿನಿಂದ ಕೆಟ್ಟದ್ದನ್ನು ತರುತ್ತಾನೆ; ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಹೊರಡುವುದು. ನನ್ನ (ಏಸುಕ್ರಿಸ್ತನಾದನನ್ನ) ಧರ್ಮೋಪದೇಶಗಳನ್ನು ಕೇಳಿ ಆಚರಿಸುವವರು ಭದ್ರವಾದ ಅಸ್ತಿವಾರವನ್ನು ಹಾಕಿ ಮನೆಗಳನ್ನು ಕಟ್ಟಿದವರಿಗೆ ಸಮಾನರು; ಪ್ರವಾಹಗಳು ಆ ಮನೆಗಳನ್ನು ನಾಶಮಾಡುವುದಿಲ್ಲ. ನನ್ನ ಧರ್ಮೋಪದೇಶಗಳನ್ನು ಕೇಳಿದ ಅವನ್ನು ಆಚರಿಸದಿರುವವರು ಅಸ್ತಿವಾರವಿಲ್ಲದ ಮನೆಗಳನ್ನು ಕಟ್ಟಿದವರಿಗೆ ಸಮಾನರು; ಪ್ರವಾಹಗಳಲ್ಲಿ ಆ ಮನೆಗಳು ಕೊಚ್ಚಿಹೋಗುತ್ತವೆ." (5) "ನೀವು

ದೇವರನ್ನೂ ಧನಪಿಶಾಚಿಯನ್ನೂ ಒಂದೇಸಲ ಸೇವೆಮಾಡಲಾಗುವುದಿಲ್ಲ. ಯಾವನೋ ಪರಹೆಂಗಸರನ್ನು ಕಾಮೇಚ್ಛೆಯಿಂದ ಕೆಟ್ಟಮನಸ್ಸಿನಲ್ಲಿ ನೋಡುತ್ತಾನೆಯೋ ಅವನು ವ್ಯಭಿಚಾರಮಾಡುತ್ತಾನೆ. ಶಾಂತಿಯುಳ್ಳ ಸ್ತೋತ್ರವಾದ; ಆಗ ನಿನಗೆ ಪಾಪವಾಸನೆಗಳು ಮನಸ್ಸಿನಲ್ಲಿ ಉದ್ಭವಿಸುವುದಿಲ್ಲ. ಆತ್ಮವು ಭಗವಂತನ ಕಡೆ ಎಳೆಯುತ್ತದೆ; ಶರೀರವು ಪಾಪದಕಡೆ ಎಳೆಯುತ್ತದೆ. ಇನ್ನು ಪಾಪವಮಾಡಬೇಡ; ಏಕೆಂದರೆ ಒಂದು ಪಾಪವು ಇನ್ನೊಂದು ಪಾಪವನ್ನು ಹುಟ್ಟಿಸುತ್ತದೆ. ಇದು. ಪಾಪವಮಾಡಿದರೆ ಅನೇಕ ಪಾಪಗಳು ಪರಿಹಾರವಾಗುವುವು; ಆದುದರಿಂದ ನಿನ್ನ ಬಲಗೈಯಿಗೆ ತಿಳಿಯದ ಹಾಗೆ ಎಡಗೈಯಿಂದ ದಾನಮಾಡು. ನೀವು ಎಷ್ಟು ತ್ಯಾಗಮಾಡುತ್ತೀಯೋ ಅದು ಅಷ್ಟಷ್ಟು ನಮ್ಮ ಪ್ರೀತಿಯನ್ನು ಅಳತೆಮಾಡುತ್ತದೆ. ಹಣದ ಆಸೆಯೇ ಎಲ್ಲಾ ಅನರ್ಥಗಳಿಗೂ ಕಾರಣ. ಸ್ವರ್ಗ ಸಂಪತ್ತುಗಳು ನಿನ್ನ ಹೃದಯದಲ್ಲಿಯೇ ಇವೆ; ಅಂತಃ ಸಾಕ್ಷಿಯೇ ಭಗವಂತನ ದಿವ್ಯವಾಣಿಯು." ಬೆಟ್ಟದಲ್ಲಿ ಹೇಳಿದ ಬೋಧನೆ, ಯೇಸುಕ್ರಿಸ್ತರು ಹೃದಯದ ಶುಚಿತ್ವ, ನಮ್ರತೆ, ಕ್ಷಮೆ ಅಹಿಂಸೆ, ಕೆಟ್ಟದಕ್ಕೆ ಒಳ್ಳೆಯದು ಮಾಡುವುದು, ತ್ಯಾಗ, ಭಗವಂತನಲ್ಲಿ ಅಧಿಕ ನಂಬಿಕೆ ಮತ್ತು ಪ್ರೇಮ ಈ ಸದ್ಗುಣಗಳನ್ನು ಬೋಧಿಸಿದರು.

**ಶಿಷ್ಯ:**—ಮನುಷ್ಯನು ತನ್ನ ಪಾಪಗಳ ಪರಿಹಾರಕ್ಕೂ, ಇಹಲೋಕದ ಕ್ಷೇಮಕ್ಕೂ ಮತ್ತು ಪರಲೋಕದ ಶ್ರೇಯಸ್ಸಿಗೂ ಹೇಗೆ ಯೇಸುಕ್ರಿಸ್ತರಲ್ಲಿ ಪ್ರಪತ್ತಿ ಮಾಡಬೇಕು ಮತ್ತು ಹೇಗೆ ಭಗವಂತನನ್ನು ಪ್ರಾರ್ಥಿಸಬೇಕು ?

**ಗುರು :**—ಪಾಪಿಯು ಭೂಮಿಯಲ್ಲಿ ಅವತಾರಮಾಡಿದ ಯೇಸುಕ್ರಿಸ್ತರು ಭಗವಂತನ ತ್ರಿಮೂರ್ತಿಗಳಲ್ಲಿ ಒಬ್ಬರಾದ ದೇವ ಪುತ್ರರೆಂದೂ ಮತ್ತು ಅವರು ಈಗಲೂ ನಮ್ಮಲ್ಲಿ ಪಶ್ಚಾತ್ತಾಪಪಡುತ್ತಾ ಮೊರೆಯಿಡುವ ಪಾತಕಿಗಳ ಪರವಾಗಿ ಕ್ಷಮೆಬೇಡಲು ಭಗವಂತನ ಪಕ್ಕದಲ್ಲೇ ಇರುವರೆಂದೂ ನಂಬಬೇಕು. ಇದರ ಮೇಲೆ "ಇನ್ನು ಮುಂದೆ ಇಂಥಾ ಪಾಪ ಕಾರ್ಯಗಳನ್ನು ಮಾಡುವುದಿಲ್ಲ, ಭಗವಂತನನ್ನು ಮತ್ತು ಅವನ ಹತ್ತು ಆಜ್ಞೆಗಳನ್ನೂ ಮರೆಯುವುದಿಲ್ಲ, ಭಗವಂತನಲ್ಲೂ ಯೇಸುವಿನಲ್ಲೂ ಭಕ್ತಿಯನ್ನು ಬೆಳೆಸುವೆನು ಮತ್ತು ದುಷ್ಟ ಸೈತಾನನ ಪ್ರೇರಣೆಗಳನ್ನು ಜಯಿಸುವ ಶಕ್ತಿಯನ್ನು ಪಡೆಯಲು ಭಗವಂತನನ್ನು ಪ್ರಾರ್ಥಿಸುವೆನು" ಎಂದು ಅವನು ಯೇಸುಕ್ರಿಸ್ತರಲ್ಲಿ ಪ್ರತಿಜ್ಞೆಯನ್ನು ಮಾಡಬೇಕು. ಇನ್ನೂ ಅಲ್ಲ, ಯೇಸುಕ್ರಿಸ್ತರು ಭೂಮಿಯಲ್ಲಿ ಎರಡನೇಸಲ ಅವತಾರಮಾಡುವಾಗ ಅವರು ಖಂಡಿತವಾಗಿಯೂ ಪಾಪಿಯಾದ ಮತ್ತು ಈಗ ಕ್ಷಮೆಬೇಡುತ್ತಿರುವ ತನ್ನನ್ನು ಭೂಸ್ವರ್ಗಕ್ಕೆ ಕಳುಹಿಸಿ ಅಮರತ್ವವನ್ನೂ ಆನಂದವನ್ನೂ ದಯಪಾಲಿಸುವರೆಂದು ದೃಢವಾಗಿ ನಂಬಬೇಕು. ಇನ್ನು ಬರುತ್ತಿರುವ ಕಾಲದಲ್ಲೆಲ್ಲಾ ಅವಕಾಶವಾದ ವೇಳೆಗಳಲ್ಲಿ ಶಾಂತವಾಗಿ ಭಗವಂತನ ಪ್ರಾರ್ಥನೆಯನ್ನು ಕೆಳಗೆ ತಿಳಿಸುವ ಕ್ರಮವಾದ ರೀತಿ

ಧ್ಯಾನ ಮಾಡುತ್ತಲೇ ಇರಬೇಕು. "ನಂಬಿಕೆಯಿಂದ ಮತ್ತು ಶ್ರದ್ಧೆಯಿಂದ ಕೂಡಿದ ಭಗವಂತನ ಸ್ತೋತ್ರವು ಸ್ವರ್ಗದ ಬಾಗಿಲನ್ನು ತೆರೆಯುವ ಬೀಗದ ಕೈ" ಎಂದು ಉಪದೇಶವಿದೆ. ಅನುಭವದಿಂದ ಭಗವಂತನು ನಮ್ಮ ಎಂದಿನ ಕಾರ್ಯಗಳ ಇರುವ ಜಾಗೆ ಸಾಕ್ಷಿಯಾಗಿದ್ದಾನೆಂದೂ, ಅವನು ಸರ್ವ ಶಕ್ತನಾಗಿದ್ದಾಗ್ಯೂ ನಮ್ಮನ್ನು ಪ್ರೀತಿಸುತ್ತಾನೆಂದೂ, ಅವನು ದೂರದಲ್ಲಿದ್ದರೂ ನಮ್ಮ ಪ್ರೇಮಪೂರ್ವಕವಾದ ಸ್ತೋತ್ರಗಳನ್ನು ಸಂತೋಷದಿಂದ ಕೇಳುತ್ತಾನೆಂದೂ, ನಮ್ಮ ಸ್ತೋತ್ರಗಳಿಂದ ಅವನು ನಮ್ಮ ಹೃದಯದ ಉದ್ವೇಗಗಳನ್ನು ತಿಳಿಯುತ್ತಾನೆಂದೂ, ನಮ್ಮ ಹೃದಯದಲ್ಲಿರುವ ನ್ಯಾಯವಾದ ಐಹಿಕ ಮತ್ತು ಪಾರಲೌಕಿಕ ಕೋರಿಕೆಗಳನ್ನು ದಯೆಯಿಂದ ಅವನು ಪರಿಪೂರ್ತಿಗೊಳಿಸುವನೆಂದೂ ಸ್ತೋತ್ರಮಾಡುವವನು ನಂಬಬೇಕು. ನಾವು ಸ್ತೋತ್ರಮಾಡುವಾಗ ಎಂದಿಗೂ ದೇವರಲ್ಲಿ ಸಂದೇಹವನ್ನು ಭಯವನ್ನು ಹೊಂದಿರಕೂಡದು; ಏಕೆಂದರೆ ಭಗವಂತನು ನಮ್ಮ ಸ್ನೇಹಿತರಲ್ಲೆಲ್ಲಾ ಅತ್ಯಂತ ಪರಮ ಸ್ನೇಹಿತನು. ನಾವು ಸ್ತೋತ್ರಮಾಡುವಾಗ ನಮ್ಮ ಮನಸ್ಸು ಪರಿಶುದ್ಧವಾಗಿರಬೇಕು; ಆಗ ದೇವರು ಕೆಳಕ್ಕೆ ಇಳಿಯುವುದಿಲ್ಲ, ನಮ್ಮ ಮನಸ್ಸು ಅವನ ಹತ್ತಿರಕ್ಕೆ ಹೋಗುತ್ತದೆ ಎಂದು ಭಾವಿಸಬೇಕು. ಯಾವ ಕಪಟ ಕೌಶಲಗಳೂ ಇಲ್ಲದೆ ಅಂತರಂಗದ ಹೃದಯದಲ್ಲಿ ಯಾವ ಸಂದೇಹವೂ ಇಲ್ಲದೆ ಎಲ್ಲಿಯೇ ಆದರೂ ಭಗವಂತನನ್ನು ಪ್ರತಿದಿನವೂ ಪ್ರಾರ್ಥಿಸಬೇಕು. ನಾವು ಪ್ರತಿಗಳಿಗೆ ದೇವರನ್ನು ಸ್ತೋತ್ರಮಾಡದಿದ್ದರೆ ದುಷ್ಟ ಶೈತಾನನು ನಮ್ಮ ಮನಸ್ಸನ್ನು ಪ್ರವೇಶಿಸಿ ನಮ್ಮಿಂದ ಪಾಪಕಾರ್ಯಗಳನ್ನು ಮಾಡಿಸುತ್ತಾನೆಂಬುದನ್ನು ಗಮನದಲ್ಲಿಡಬೇಕು. ಇತರರ ಬಲಾತ್ಕಾರಕ್ಕಾಗಲಿ ಅಥವ ಕೀರ್ತಿಗಾಗಲಿ ಸ್ತೋತ್ರಮಾಡಬಾರದು; ಅರ್ಥರಹಿತವಾದ ಅಥವ ಅರ್ಥವನ್ನು ತಿಳಿಯದ ಪದಗಳನ್ನು ಸ್ತೋತ್ರದಲ್ಲಿ ಉಪಯೋಗಿಸುವುದರಿಂದ ಫಲವಿಲ್ಲ. ಭಗವಂತನ ನಾಮಗಳನ್ನು ಜಾಗರೂಕತೆಯಿಂದಲೂ ಶ್ರದ್ಧೆಯಿಂದಲೂ ಮತ್ತು ಪೂಜ್ಯಭಾವದಿಂದಲೂ ಉಪಯೋಗಿಸಬೇಕು. ಒಂದು ವೇಳೆ ನಾವು ಪ್ರಾರ್ಥಿಸಿದ ಕೋರಿಕೆಯನ್ನು ಅವನು ಕೊಡದೆ ಬೇರೆ ಫಲವನ್ನು ಕೊಟ್ಟರೆ ನಮಗೆ ತಿಳಿಯದ, ಅವನಿಗೆ ತಿಳಿದಿರುವ ನಮ್ಮ ಕ್ಷೇಮಕ್ಕಾಗಿಯೇ ಅದು ಕೊಡಲ್ಪಟ್ಟಿದೆಯೆಂದು ಅದನ್ನು ಶಾಂತಿಯಿಂದ ಸ್ವೀಕರಿಸಬೇಕು. ಭಗವಂತನನ್ನು ಸಹಾಯ ಮಾಡು ಎಂದು ಪ್ರಾರ್ಥಿಸುವವನು, ತನ್ನ ಕೈಲಾದಷ್ಟು ತನ್ನನ್ನು ಬೇಡುವ ಇತರರಿಗೆ ಸಹಾಯ ಮಾಡಬೇಕು. ಭಗವಂತನನ್ನು ಕ್ಷಮಿಸು ಎಂದು ಪ್ರಾರ್ಥಿಸುವುದಕ್ಕೆ ಮುಂಚೆ ಅವನ ಮತ್ತು ಇತರರ ಜಗಳಗಳನ್ನು ಮನಸ್ಸಿನಿಂದ ತೆಗೆಯುವ ತ್ವರೆಯು ಅವನ ಹೃದಯದಲ್ಲಿರಬೇಕು. ನಮ್ಮ ಪಾಪಗಳನ್ನು ದೇವರು ಬಿಟ್ಟು ಅವರಿಗೆ ತಿಳಿಸಿ ಕ್ಷಮಿಸು ಎಂದು ಬೇಡುವುದಕ್ಕೆ ಮುಂಚೆ ನಾವು ನಮಗೆ ಅಪಕಾರವನ್ನು ಮಾಡಿರುವವರನ್ನು ಕ್ಷಮಿಸಬೇಕು. ನಮ್ಮ ಪ್ರಾರ್ಥನೆಯು ದೇವರ

ಲಿಪ್ಪನೆಂದೇ ಸ್ತೋತ್ರವನ್ನು ತಪ್ಪಿಸಬಾರದು; ಸ್ತೋತ್ರವನ್ನು ಎಂದೆಂದಿಗೂ ಮಾಡುತ್ತಲೇ ಇರಬೇಕು. ಪ್ರತಿಯೊಂದು ಸ್ತೋತ್ರದಲ್ಲಿಯೂ ನಮಗೆ ಆಗಿಂದಾಗ್ಗೆ ಬೇಕಾಗಿರುವ ಕೋರಿಕೆಗಳನ್ನು ಪ್ರಾರ್ಥಿಸುವುದರ ಜೊತೆಗೆ ಕೆಳಗಿನ ಸ್ತೋತ್ರವನ್ನು ಮನಃಪೂರ್ವಕವಾಗಿ ಸೇರಿಸಿಕೊಳ್ಳಬೇಕು: "ಭಗವಂತನೇ! ಭೂಮಿಯಲ್ಲಿ ನಿನ್ನ ರಾಜ್ಯವು ಸ್ಥಾಪಿಸಲ್ಪಡಲಿ! ನಿನ್ನ ದಿವ್ಯಸಂಕಲ್ಪವು ಎಲ್ಲೆಲ್ಲಿಯೂ ನಡೆಯಲಿ! ನನಗೆ ವಿವೇಕವನ್ನೂ ತಿಳುವಳಿಕೆಯನ್ನೂ ಕೊಡು! ನಿನ್ನ ಪವಿತ್ರ ನಾಮವು ಎಲ್ಲೆಲ್ಲಿಯೂ ಉಚ್ಚರಿಸಲ್ಪಡಲಿ." ಏಸುಕ್ರಿಸ್ತರೂ ಅತ್ಯುತ್ತಮವಾಗಿ ಸ್ತೋತ್ರ ಮಾಡುತ್ತಿದ್ದರು. ವ್ಯಕ್ತಿಯ ಹೃದಯಕ್ಕೂ ಅವನನ್ನು ಸೃಷ್ಟಿಸಿದ ಭಗವಂತನಿಗೂ ಇರುವ ಏಕಾಂತವಾದ ಸಂಬಂಧವೇ ನಿಜವಾದ ಸ್ತೋತ್ರ. ಆದುದರಿಂದ ಜಪಮಣಿ, ಸ್ತೋತ್ರಪಾಠದ ಪುಸ್ತಕ, ಸ್ತೋತ್ರದ ಚಕ್ರ, ಸ್ತೋತ್ರದ ಪದಗಳು, ಶರೀರದ ಅಂಗ ವಿನ್ಯಾಸಗಳು, ಸ್ಥಳಗಳು, ಕಾಲಗಳು, ಜನಾಂಗಗಳು, ಜಾತಿಗಳು, ಕೋಮುಗಳು, ವರ್ಣಗಳು ಇಷ್ಟು ಮುಖ್ಯವಲ್ಲ.

ಮುದ್ರಿಸಿದವರು :

ಎಂ. ರಾಮರಾವ್,

ವಾಣೀವಿಲಾಸ ಮುದ್ರಣಾಲಯ,

೬೬ ನಾರ್ತ್ ರೋಡ್ - ಬೆಂಗಳೂರು ಸಿಟಿ.